UNIVERSAL LIBRARY

OU_202076

UNIVERSAL LIBRARY

# ವೇದಾಂತದ ಜೀವಾಳ
## (ಪ್ರಸ್ಥಾನತ್ರಯದ ತಿರುಳು)

ಬರೆಹಗಾರರು:

ಭಗವದ್ಗೀತಾಸಾರವಿಚಾರ, ಆರ್ಯಧರ್ಮಪ್ರದೀಪ, ಅನುಭವಾಮೃತದ
ಸರ್ವಾರ್ಥಸಂದರ್ಶಿನಿಯೆಂಬ ಟೀಕು, ಗೀತಾರ್ಥಚಂದ್ರಿಕೆ,
ಪಂಚದಶೀತತ್ತ್ವಾರ್ಥ-ಮೊದಲಾದವುಗಳನ್ನು ಬರೆದಿರುವ

**ಹೊಸಕೆರೆ ಚಿದಂಬರಯ್ಯ**

ಭಕ್ತಬಂಧು ಕಾರ್ಯಾಲಯ, ಬಸವನಗುಡಿ, ಬೆಂಗಳೂರು ಸಿಟಿ.

---

ಪ್ರಕಟಪಡಿಸಿದವರು:

**ವಿದ್ವಾನ್ ಬಿ. ಎನ್. ಸುಬ್ರಹ್ಮಣ್ಯ ಜೋಯ್ಸರ್**

ಪ್ರೊಪ್ರೈಟರ್,

ಶ್ರೀ ವಿಜಯಲಕ್ಷ್ಮೀವಿಲಾಸಪ್ರೆಸ್, ಹಲಸೂರುಪೇಟೆ, ಬೆಂಗಳೂರು ಸಿಟಿ.

ಅಚ್ಚಾದ ಸ್ಥಳ:

**ಶ್ರೀ ವಿಜಯಲಕ್ಷ್ಮೀ ವಿಲಾಸ ಪ್ರೆಸ್,**
**ಹಲಸೂರುಪೇಟೆ, ಬೆಂಗಳೂರು ಸಿಟಿ.**

ಮೊದಲನೆಯ ಮುದ್ರಣ ೧೦೦೦ ಪ್ರತಿಗಳು

೧೯೩೪

ಇದರ ಸ್ವಾಮಿತ್ವವು ಗ್ರಂಥಕರ್ತರದು

**ಬೆಲೆ ೧-೮-೦**

ಇದರ ಪ್ರತಿಗಳು ಪ್ರಕಾಶಕರಲ್ಲಿ ದೊರೆಯುವವು

# ಮೊದಲ ಮಾತು

ವೇದಾಂತವೆಂಬುದು ಬ್ರಹ್ಮಾಂಡವನ್ನೆ ತೂಕಕ್ಕೆ ಹಾಕಿ ಅದರ ಕೊರಳಿಗೆ ಬೆಲೆಯ ಚೀಟಿಯನ್ನು ಕಟ್ಟುವ ಶಾಸ್ತ್ರ. ಬ್ರಹ್ಮಾಂಡದೊಳಗೆ ಸಿಕ್ಕು ಬಿದ್ದಿರುವ ಪ್ರತಿಯೊಬ್ಬನೂ ತಾನು ಕುಳಿತಿರುವ ಬ್ರಹ್ಮಾಂಡವೆಂಬ ಹಡಗು ಎಷ್ಟರ ಮಟ್ಟಿಗೆ ಭದ್ರವಾವದ್ದೆಂದು ತಿಳಿಯುವದಗತ್ಯವಾದ್ದರಿಂದ ವೇದಾಂತವು ಎಲ್ಲರಿಗೂ ಬೇಕಾದದ್ದು. ಇದರ ವಿಚಾರಗಳು ಯಾವದೋ ಒಂದು ಕಾಲಕ್ಕಾಗಲಿ ಯಾವದೋ ಒಂದು ಸಂದರ್ಭಕ್ಕಾಗಲಿ ಕಟ್ಟುಬಿದ್ದವುಗಳಲ್ಲ. ಇವು ಎಲ್ಲ ಕಾಲಗಳ ಮೇಲೆಯೂ ಎಲ್ಲ ದೇಶಗಳ ಮೇಲೆಯೂ ಎಲ್ಲ ಸಂದರ್ಭಗಳ ಮೇಲೆಯೂ ತಮ್ಮ ಆಳಿಕೆಯನ್ನು ನಡೆಸುತ್ತಿರುವವು.

ವೇದಾಂತವೆಂದರೆ ವೇದದ ಕೊನೆಯು, ಅಥವಾ ನಿರ್ಣಯವನ್ನು ಹೇಳುವ, ಭಾಗವಾದ ಉಪನಿಷತ್ತೆಂದರ್ಥ. ಕನ್ನಡದಲ್ಲಿ ವೇದಾಂತಗ್ರಂಥಗಳೆಂದು ಹೇಳಿಸಿಕೊಳ್ಳುವವುಗಳು ಎಷ್ಟೋ ಇವೆ. ಆದರೆ ಅವು ನೇರವಾಗಿ ಉಪನಿಷತ್ತುಗಳ ಅರ್ಥವನ್ನೆ ಹೇಳತಕ್ಕವುಗಳಾಗಿರದೆ ಅದರ ಒಂದೊಂದು ವಿಚಾರವನ್ನೆತ್ತಿಕೊಂಡು ವಿವರಿಸಿ ಬರೆದವುಗಳಾಗಿರುವವು. ವೇದಾಂತವು ಮೂರು ಕವಲಾಗಿದೆ. ಉಪನಿಷತ್ತುಗಳೂ ಅವುಗಳ ಅರ್ಥವನ್ನು ಹೊಸ ಎರಕಕ್ಕೆ ಹೊಯ್ದು ಹೇಳುವ ಭಗವದ್ಗೀತೆಯೂ ಹಿಂದಿನ ಮತ್ತು ಮುಂದಿನ ಸಂದರ್ಭಗಳ ಹೊಂದಿಕೆಯಿಂದ ಅವೆಲ್ಲವುಗಳ ಅರ್ಥವನ್ನು ಗೊತ್ತುಮಾಡುವ ಬ್ರಹ್ಮಸೂತ್ರಗಳೂ - ಈ ಮೂರೂ ಪ್ರಸ್ಥಾನತ್ರಯಗಳೆಂದು ಹೆಸರುಗೊಂಡಿರುವವು. ಸಿದ್ಧಾಂತಗಳನ್ನು ಹೇಳಿದ ಆಚಾರ್ಯರೆಲ್ಲ ಈ ಮೂರು ದಾರಿಗಳೂ ಒಂದೇ ಗುರಿಯನ್ನು ಮುಟ್ಟುವವೆಂದು ಹೊಂದಿಸಿ ತೋರಿಸುತ್ತ ಬಂದಿದ್ದಾರೆ. ಆದ್ದರಿಂದ ಈ ಮೂರೂ ಕನ್ನಡದ ಆಸ್ಥಾನಮಂಟಪಕ್ಕೆ ಇಳಿದಾಗ ಮಾತ್ರ ಕನ್ನಡಿಗರಿಗೆ ನಿಜವಾದ ವೇದಾಂತವು ಸಿಕ್ಕಿದಂತಾಗುವದು. ಈಗ ನಾನು ಅಷ್ಟು ದೊಡ್ಡ ಕೆಲಸವನ್ನು ಮಾಡದಿದ್ದರೂ ಕನ್ನಡಿಗರು ಅವುಗಳ ಸವಿಗೆ ಬಾಯಿನೀರು ಸುರಿಸುವಂತೆ ಆಗಲೆಂದು ಅವುಗಳ ತಿರುಳಿನ ಒಂದೊಂದು

ತುತ್ತನ್ನು ಈ ಗ್ರಂಥಕ್ಕೆ ತೋಡಿಟ್ಟಿದ್ದೇನೆ. ಇನ್ನು ಇದನ್ನು ಸವಿಯುವದು ಕನ್ನಡಿಗರ ಕೆಲಸ.

ಸಕ್ಕರೆಯು ಯಾವ ಮೂಲೆಯಲ್ಲಿ ನೋಡಿದರೂ ಹೇಗೆ ಸಿಹಿಯೊ ವೇದಾಂತದಲ್ಲಿ ಎಲ್ಲಿ ನೋಡಿದರೂ ರಸವತ್ತಾದ ವಿಷಯವೆ. ಆದ್ದರಿಂದ ನಾನು ತೋಡದೆ ಕೈಬಿಟ್ಟಿರುವ ಭಾಗದಲ್ಲಿನ್ನೇನೂ ಆಹಾರಪದಾರ್ಥಗಳಿರ ಲಾರವೆಂದು ಯಾರೂ ತಿಳಿಯಬಾರದು. ಹೆಚ್ಚು ಆಹಾರಪದಾರ್ಥವಿರುವ ಆಗುಳುಗಳನ್ನು, ಅವು ಕನ್ನಡಿಗರ ಎಳೇ ಹಲ್ಲಿಗೆ ನುರಿದೀತೊ ಇಲ್ಲವೊ ಎಂದು, ನಾನು ಕೈಬಿಟ್ಟಿದ್ದರೂ ಇರಬಹುದು. ಇದರ ಮೇಲೆ ಇದನ್ನು ತೋಡುವಾಗ ನಾನು ಆಳಕ್ಕೆ ಹೋಗಿ ಹೆಚ್ಚು ಕೈ ಆಡಿಸದೆ ಮೇಲೆಮೇಲೆ ಹಗುರವಾಗಿ ತೇಲಿ ಅಂಗೈಗೆ ಇಳಿದು ಬಂದವುಗಳನ್ನು ಮಾತ್ರವೆ ಇಳಿಸಿ ಕೊಂಡಿರುವದರಿಂದ ಇನ್ನೂ ಗಂಭೀರವಾದ ಅನೇಕ ವಿಷಯಗಳು ಮೂಲ ದಲ್ಲಿ ಉಳಿದುಕೊಂಡಿರುವವು.

ಒಂದೇ ವಿಷಯವು ಬೇರೆ ಬೇರೆ ಅನೇಕ ಉಪನಿಷತ್ತುಗಳಲ್ಲಿ ಬಂದಿ ರುವ ಸಂದರ್ಭದಲ್ಲಿ ಈ ಗ್ರಂಥವು ಬೆಳೆಯದಿರಲೆಂದು ಮುಖ್ಯವಾಗಿ ತೋರಿದ ಒಂದು ಕಡೆಯದನ್ನು ಮಾತ್ರ ಆರಿಸಿಕೊಂಡಿದ್ದೇನೆ. ಬೇರೆಬೇರೆ ಕಡೆಗ ಳಲ್ಲಿ ಅದೇ ವಿಷಯದ ಮೇಲಿನ ಹೆಚ್ಚು ವಿಚಾರಗಳೇನಾದರೂ ಕಂಡು ಬಂದಾಗ ಆ ಮಾತುಗಳ ಗುಂಪಿನಲ್ಲಿಯೆ ಆ ಬೇರೆ ಬೇರೆ ವಿಚಾರಗಳನ್ನು (ಅ),(ಆ)- ಮೊದಲಾದ ಅಕ್ಷರಗಳ ಗುರ್ತಿನಿಂದ ಬೇರೆಬೇರೆಯಾಗಿ ತೋರಿಸಿದ್ದೇನೆ. ಯಾವ ಯಾವ ವಿಚಾರಗಳನ್ನು ಎಲ್ಲೆಲ್ಲಿಂದ ಆರಿಸಿಕೊಂಡಿರುವೆನೆಂಬುದನ್ನು ಆ ವಿಚಾರಗಳ ಮಾತಿನ ಗುಂಪಿನ ಮುಂದೆ ಕಂಸದಲ್ಲಿ ಸಂಜ್ಞಾಕ್ಷರಗಳಿಂದ ತೋರಿಸಿ ಅವುಗಳ ಪೂರ್ಣವಾದ ಹೆಸರಿನ ಪಟ್ಟಿಯನ್ನು ಕೊಟ್ಟಿದ್ದೇನೆ. ಗ್ರಂಥಗಳ ಹೆಸರಿನಲ್ಲಿ ಅವುಗಳ ಮೇಲಿನ ಶಾಂಕರಭಾಷ್ಯವೂ ಸೇರಿರುವ ದೆಂದು ತಿಳಿಯಬೇಕು. ಮೂಲದ ಮತ್ತು ಭಾಷ್ಯದ ಅಭಿಪ್ರಾಯವನ್ನು ಬರೆಯುವಾಗ ನಾನು ಬರೀ ಭಾಷಾಂತರವನ್ನು ಮಾಡದೆ ಅಗತ್ಯವಾದ ಮಟ್ಟಿಗೆ ವಿವರಿಸಿ ಬರೆದಿರುತ್ತೇನೆ. ಮುಖ್ಯವಾಗಿ ಈ ಗ್ರಂಥದಲ್ಲಿರುವ

ವಿಚಾರದ ಸೊಗಸೆಲ್ಲ ಶ್ರೀಮಚ್ಛಂಕರಭಗವತ್ಪಾದರದು; ಭಾಷೆ ಮಾತ್ರ ನನ್ನದು. ಕೆಲವು ಕಡೆ ವಿಷಯಗಳು ಹೊಂದಿಕೆಯಾಗುವದಕ್ಕೆ ಹಾಕಿರುವ ತಾಕುಮಾತುಗಳು ಮಾತ್ರ ನನ್ನವು. ಆದ್ದರಿಂದಲೆ ಆ ಮಾತುಗಳ ಗುಂಪಿನ ಮುಂದೆ ಅವರ ಮೂಲದ ಸ್ಥಲವನ್ನು ಕಾಣಿಸಿಲ್ಲ. ಹೀಗೆ ಈ ಗ್ರಂಥದ ಮುಖ್ಯಭಾಗವೆಲ್ಲ ವೇದಪುರುಷನ ಮತ್ತು ಭಾಷ್ಯಕಾರರ ಮಾತು ಗಳನ್ನು ಹಿಡಿದು ಬರೆದ ಅನುವಾದವಾಗಿರುವದರಿಂದ ಕನ್ನಡಿಗರಿಗೆ ಬೇರೆ ಯಾವ ಗ್ರಂಥಗಳಲ್ಲಿಯೂ ಎಂದೂ ಕಾಣಬರದ ಒಳ್ಳೆ ಹೊಸಹೊಸ ವಿಚಾರ ಗಳೂ ಯುಕ್ತಿಗಳೂ ಅನುಭವದ ಮಾತುಗಳೂ ಇವರಲ್ಲಿ ತುಂಬಿ ತುಳುಕು ತ್ತಿರುವವೆಂದು ಹೊಸದಾಗಿ ಹೇಳಬೇಕಾದದ್ದೆ ಇಲ್ಲ. ಆದ್ದರಿಂದ ವೇದಾಂ ತದ ಪರಿಚಯ ಉಂಟೆಂದೆನಿಸಿಕೊಳ್ಳಬೇಕಾದ ಕನ್ನಡಿಗರು ಬೇರೆ ಗ್ರಂಥಗ ಳನ್ನು ಎಷ್ಟು ಓದಿದ್ದರೂ ಅಗತ್ಯವಾಗಿ ಈ ಗ್ರಂಥದ ಪರಿಚಯವನ್ನು ಪಡೆ ಯಲೇಬೇಕು. ಏಕೆಂದರೆ: ಇದು ಸ್ವಲ್ಪದರಲ್ಲಿ ಪೂರ್ಣಸ್ವರೂಪವನ್ನು ಕಣ್ಣಿಗೆ ಕಟ್ಟಿದ ಹಾಗೆ ಆಗುವಂತೆ ವೇದಾಂತದ ಮುಖ್ಯತತ್ತ್ವಗಳನ್ನೆಲ್ಲ ಒಳಗೊಂಡದ್ದಾಗಿಯೂ ತಂಬೂರಿಯ ನಾದಕ್ಕೆ ಜೀವಕಳೆಯನ್ನು ತುಂಬುವ ಜೀವಾಳದಂತೆ ಉಳಿದ ಎಲ್ಲ ಗ್ರಂಥಗಳಿಂದಾಗಿರುವ ತಿಳಿವಳಿಕೆಗೆ ಜೀವಕಳೆ ಯನ್ನು ತುಂಬುವ ಜೀವಾಳವಾಗಿಯೂ ಇರುವದು.

ಈ ಗ್ರಂಥದಲ್ಲಿರುವ ವೇದಾಂತವಿಚಾರಗಳ ಹೆಚ್ಚುಗಾರಿಕೆಗಳು ಜಗ ತ್ತಿನ ಎಲ್ಲರ ತಿಳಿವಳಿಕೆಗಳ ತಲೆಯನ್ನು ಮೆಟ್ಟಿಹಾರುವವುಗಳಾಗಿರುವವು. ಉದಾಹರಣೆಗೆ ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು.

(೧) ನಮ್ಮ ಸುಖಕ್ಕೆ ಹೊರಗಣ ವಿಷಯಗಳನ್ನು ಬಿಟ್ಟರೆ ಗತಿ ಇಲ್ಲ ವೆಂದು ಮಹಾಮಹಾ ಬುದ್ಧಿಶಾಲಿಗಳು ಕೂಡ ಒಡನೆ ಆಗುವ ಫಲವನ್ನು ಗುರಿಯಲ್ಲಿಟ್ಟುಕೊಂಡು ಸುಖಕ್ಕಾಗಿ ವಿಷಯಗಳನ್ನು ದೊರಕಿಸುವದಕ್ಕೇ ಮುಂದೆ ಮುಂದೆ ನುಗ್ಗುತ್ತಿರುವರಷ್ಟೆ. ಮಿಂಚು ಥಳಾರನೆ ಹೊಳೆದು ಆ ಮೇಲೆ ಕಗ್ಗತ್ತಲೆಯನ್ನುಂಟುಮಾಡುವಂತೆ ವಿಷಯಗಳು ಆ ಕ್ಷಣದ ಮಟ್ಟಿಗೆ ಸುಖವನ್ನು ತೋರಿಸಿ ಆಮೇಲೆ ತಾವು ಇಲ್ಲದಂತಾಗಿ ದುಃಖವನ್ನೆ

ಕೊಡುವವೆಂದೂ ಈ ಕ್ಷಣಕಾಲದ ಸುಖವಾದರೂ ದೇಹೇಂದ್ರಿಯಗಳ ತೇಜಸ್ಸನ್ನೆಲ್ಲ ಹಾರಿಸಿ ಮನುಷ್ಯನನ್ನು ಕಳೆಗುಂದಿಸುವದೆಂದೂ ನಮ್ಮ ವೇದಾಂತವು ದೂರದೃಷ್ಟಿಯ ಮಾತನ್ನು ನೆನಪುಗೊಟ್ಟು ವಿಷಯಸುಖದಲ್ಲಿ ಹುರುಳಿಲ್ಲವೆಂಬುದನ್ನು ಮನಗಾಣಿಸುತ್ತದೆ.

(೨) ಬುದ್ಧಿಯಲ್ಲಿ ಬೃಹಸ್ಪತಿಯನ್ನು ಒಮ್ಮೆಟ್ಟಿಸಬಲ್ಲೆವೆನ್ನುವವರು ಕೂಡ ತಮ್ಮ ಮುಂದಿರುವ ಜಗತ್ತು ನಿಜವಾಗಿರುವದೆಂದು ಭಾವಿಸುತ್ತಿರುವ ರಷ್ಟೆ. ಈ ಜಗತ್ತು ಹುಟ್ಟಿಯೇ ಇಲ್ಲವೆಂದು ನಮ್ಮ ವೇದಾಂತವು ನಾಲ್ಕು ದಾರಿಗಳು ಸೇರಿದ ಕಡೆ ಎರಡು ಕೈಗಳನ್ನು ಎತ್ತಿ ಸಾರುವದು. ಅವರು ಮನುಷ್ಯರಿಗಿರುವ ಎಚ್ಚರ, ಕನಸು, ನಿದ್ರೆ - ಎಂಬ ಮೂರವಸ್ಥೆಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಎಚ್ಚರ ಒಂದನ್ನೆ ನೋಡಿ ಹೇಳಿರುವದರಿಂದ ಹಾಗೆ ಮೋಸಹೋಗಿರುವರು ಇರುವದೆನಿಸಿಕೊಳ್ಳುವ ವಸ್ತು ಯಾವಾಗಲೂ ಇರಬೇಕು. ಎಚ್ಚರದ ಜಗತ್ತು ಕನಸಿನಲ್ಲಿಲ್ಲವೆ? ಗಾಢನಿದ್ರೆಯಲ್ಲಿಲ್ಲದೆ? ಆ ಎರಡು ಕಡೆಯಲ್ಲಿಯೂ ಇಲ್ಲದ್ದನ್ನು ಇರುವದೆಂದು ತಿಳಿಯಬಹುದೆ? ಆದ್ದರಿಂದ ಅದನ್ನು ಇರುವದೆನ್ನಬಾರದು. ತೋರುವ ಮಾತ್ರದಿಂದಲೂ ಅದಕ್ಕೆ ಇರುವಿಕೆ ಸಲ್ಲುವದಿಲ್ಲ. ಕನಸಿನಲ್ಲಿ ತೋರುವ ಜಗತ್ತು ನಿಜವಾಗಿ ರುವದೆ? ನಿದ್ರಾಶಕ್ತಿಯಿಂದ ಕನಸಿನ ಜಗತ್ತು ಎದ್ದು ಕಾಣುವಂತೆ ಪರ ಮೇಶ್ವರನ ತ್ರಿಗುಣಾತ್ಮಕವಾದ ಮಾಯಾಶಕ್ತಿಯಿಂದ ಎಚ್ಚರದ ಜಗತ್ತು ಎದ್ದು ಕಾಣುವದು.

(೩) ಜಗತ್ತಿನಲ್ಲಿ ಕುಶಲರೆನಿಸಿದವರೆಲ್ಲ ಜಗತ್ತಿನೊಳಗಣ ವಿಷಯಗಳ ವಿಚಾರದಲ್ಲ ಮುಳುಗಿ ತೇಲುತ್ತಿರುವರಷ್ಟೆ. ನೆಲಾಗುದ್ದಿ ಮೈನೋಯಿಸಿ ಕೊಳ್ಳುವ ಆ ಉದ್ಯೋಗದಿಂದ ಫಲವಿಲ್ಲವೆಂದು ನಮ್ಮ ವೇದಾಂತವು ಬರೀ ತೋರಿಕೆಯ ಜಗತ್ತಿಗೆ ಆಧಾರವಾಗಿ ನಿಜವಾಗಿರುವ ಬ್ರಹ್ಮವೆಂಬ ಚೈತನ್ಯದ ವಿಚಾರವನ್ನು ಮುಂದಿಡುತ್ತದೆ. ಅದು ತನಗಿಂತ ಬೇರೆಯಾದ ಇನ್ನೊಂದು ಬೆಳಕಿನಿಂದ ಬೆಳಗಿಸಿಕೊಳ್ಳುವದಾಗಿರದೆ ತನ್ನ ಬೆಳಕಿನಿಂದ ತಾನೂ ಬೆಳಗುತ್ತ ಎಲ್ಲ ತೋರಿಕೆಯವುಗಳನ್ನೂ ಬೆಳಗುತ್ತಿರುವದು. ಅದನ್ನು ಮರೆಮಾಡಿರುವ

ಬರೀ ತೋರಿಕೆಯವುಗಳನ್ನೆಲ್ಲ ಕಳೆದು ನೋಡಿದರೆ ಇದು ತಾನೇ ತಾನಾಗಿ ಕಾಣುವದು.

(೪) ಜಗತ್ತಿನಲ್ಲಿ ನಾವು ಮಾಡುವ ವ್ಯವಹಾರಗಳೆಲ್ಲ ತಮ್ಮ ಕಾಲ ಮೇಲೆ ತಾವು ಗಟ್ಟಿಯಾಗಿ ನಿಂತಿರುವವೆಂದು ಎಲ್ಲರೂ ನಂಬಿರುವರಷ್ಟೆ. ಅವೆಲ್ಲ ಆಕಾಶದ ಅರಮನೆಗಳೆಂದು ನಮ್ಮ ವೇದಾಂತವು ಕಣ್ಣಿಗೆ ಕಟ್ಟಿ ತೋರಿಸುವದು. ಇಂದ್ರಿಯಗಳಿಲ್ಲದೆ ಪ್ರತ್ಯಕ್ಷ ಮೊದಲಾದ ವ್ಯವಹಾರವಾಗುವದಿಲ್ಲ. ಶರೀರವಿಲ್ಲದೆ ಇಂದ್ರಿಯಗಳಿರಲಾರವು. ಆ ಶರೀರದಲ್ಲಿ ನಾನೆಂಬ ಅಭಿಮಾನವಿಲ್ಲದೆ ಯಾವನೂ ತಿಳಿಯುವವನಾಗುವದಿಲ್ಲ. ಆದ್ದರಿಂದ ಶರೀರ ಮೊದಲಾದವುಗಳನ್ನು ನಾನೆನ್ನಬೇಕು. ಅದು ತಪ್ಪುತಿಳಿವಳಿಕೆ. ಏಕೆಂದರೆ: ಕನಸಿನಲ್ಲಿ ಎಚ್ಚರದ ಶರೀರ ಮೊದಲಾದವುಗಳಿಲ್ಲದೆ ನಾನೆನ್ನುವ ವಸ್ತುವಿದ್ದೇ ಇರುವದು. ನಿದ್ರೆಯಲ್ಲಿ ಯಾವ ಶರೀರವೂ ಇಲ್ಲದೆ ನಾನೆನ್ನುವ ವಸ್ತುವಿದ್ದೇ ಇರುವದು. ಇದರಿಂದ ಆ ನಾನೆನ್ನುವ ವಸ್ತು ಶರೀರ ಮೊದಲಾದವುಗಳಿಗಿಂತ ಬೇರೆಯಾಗಿದ್ದು ಮೂರವಸ್ಥೆಗಳನ್ನೂ ನೋಡುವ ಸ್ವರೂಪದ್ದಾಗಿರುವದು. ಆದಕಾರಣ ಶರೀರವನ್ನು ನಾನೆನ್ನುತ್ತ ಮಾಡುವ ನಮ್ಮ ವ್ಯವಹಾರವೆಲ್ಲ ತಪ್ಪಾದದ್ದೆ.

(೫) ನಮ್ಮ ನಿಜಸ್ವರೂಪವು ಅವಸ್ಥಾತ್ರಯಸಾಕ್ಷಿಯಾದ್ದರಿಂದಲೆ ಅದು ಯಾವಾಗಲೂ ನಿಜವಾಗಿರುವದೆಂದು ನಮ್ಮ ವೇದಾಂತವು ಹೇಳಿದ ಮೇಲೆ ಮಾತ್ರ ನಮಗೆ ತಿಳಿಯುವದು. ಅದು ತನ್ನ ಬೆಳಕಿನಿಂದ ತಾನೂ ಬೆಳಗುತ್ತ ಉಳಿದೆಲ್ಲವನ್ನೂ ಬೆಳಗುತ್ತಿರುವದು. ಆದರೆ ಈ ಬೆಳಗುವ ಯೋಗ್ಯತೆಯನ್ನು ಕನಸು ಮನಗಾಣಿಸುವದು. ಬ್ರಹ್ಮವೂ ಇಂಥದ್ದೆ ಆದ್ದರಿಂದ ಈ ಯೋಗ್ಯತೆಯನ್ನು ಲಕ್ಷ್ಯಕ್ಕೆ ತಂದುಕೊಂಡರೆ ನಮ್ಮ ಆತ್ಮವು ಬ್ರಹ್ಮವೆಂದು ಗೊತ್ತಾಗುವದು. ನಮ್ಮ ಆತ್ಮ ಬ್ರಹ್ಮ-ಈ ಎರಡೂ ಚೇತನವಾದ್ದರಿಂದಲೂ ಎರಡೂ ಒಂದೆ. ಅವು ಬೇರೆಬೇರೆಯೆಂದರೆ ಒಂದು ಚೇತನವಾದರೆ ಇನ್ನೊಂದು ಅಚೇತನವಾಗಬೇಕಾದೀತು. ಹಾಗಿಲ್ಲ. ಹೀಗೆ ಎರಡೂ ಒಂದೇ ಎಂದು ತಿಳಿದಾಗ ಮಾತ್ರ ನಮ್ಮ ತಪ್ಪುವ್ಯವಹಾರವು ಕೊನೆಗಾಣುವದು.

(೬) ನಮ್ಮ ಆತ್ಮವೂ ಬ್ರಹ್ಮವೂ ಎಂದಿಗೂ ಒಂದೇ ಆಗಲಾರವೆಂದು ಎಲ್ಲರಿಗೂ ಸಾಮಾನ್ಯವಾಗಿ ತೋರುವದಷ್ಟೆ. ನಮ್ಮ ವೇದಾಂತವು ಬೆಟ್ಟುಬಿಟ್ಟು ತೋರಿಸುವಂತೆ ಕರ್ಮ, ಭಕ್ತಿ, ಯೋಗ, ವಿಚಾರ-ಎಂಬ ಸಾಧನಗಳನ್ನು ನೆಟ್ಟಗೆ ಕೂಡಿಸಿಕೊಂಡವರಿಗೆ ಅದು ಈಗಲೆ ಇಲ್ಲಿಯೆ ಹೊಳೆಯುವದು. ನಮ್ಮಂತೆ ಶರೀರವುಳ್ಳವರಾಗಿದ್ದರೂ ಯಾವದೊಂದು ಹೊರಗಣ ಸುಖಸಾಧನವೂ ಇಲ್ಲದೆ ತಮ್ಮ ಜ್ಞಾನದಿಂದಲೆ ಆನಂದವನ್ನು ಸವಿದು ಚಪ್ಪರಿಸುವ ಅನುಭವಿಗಳಾದ ಜೀವನ್ಮುಕ್ತರು ಈಗಲೂ ಅಲ್ಲಲ್ಲಿ ಉಂಟು.

(೭) ನಾವು ಯಾವಾಗಲೂ ಎರಡನೆಯ ವಸ್ತುಗಳ ನಡುವೆಯೆ ಜೀವಿಸುವ ಪ್ರಾಣಿಗಳೆಂದು ಎಲ್ಲರ ಅಭಿಪ್ರಾಯವಷ್ಟೆ. ಎರಡನೆಯದೇನೂ ಇಲ್ಲದ ಗಾಢನಿದ್ರೆಯಲ್ಲಿ ನಮ್ಮ ಇರುವಿಕೆಯು ನಮಗೆ ಯಾವವರ ಸೋಂಕೂ ಇಲ್ಲವೆಂಬುದನ್ನು ತೋರಿಸುವದೆಂಬ ಗುಟ್ಟು ನಮ್ಮ ವೇದಾಂತದಿಂದ ಹೊರಬಿದ್ದಿರುವದು.

(೮) ನಾವು ಕರ್ಮದ ಸುಳಿಯೊಳಗೆ ಸಿಕ್ಕಿ ಹುಟ್ಟುಸಾಯುತ್ತಿರುವವರೆನಿಸಿಕೊಂಡಿರುವೆವಷ್ಟೆ. ಕರ್ಮಗಳೆಲ್ಲ ಮನಸ್ಸು, ಇಂದ್ರಿಯ, ದೇಹ-ವೊದಲಾದವುಗಳ ಗುಂಪಿಗೆ ಸಂಬಂಧಪಟ್ಟವುಗಳಾದ್ದರಿಂದ ಅವುಗಳ ಫಲವಾದ ಹುಟ್ಟುಸಾವುಗಳು ಆ ಗುಂಪಿಗೇ ಹೊರತು ಆ ಗುಂಪಿನ ಸಾಕ್ಷಿಯಾದ ನಮಗಲ್ಲವೆಂದು ನಮ್ಮ ವೇದಾಂತವು ನಮ್ಮ ಮುಂದೆ ಅಭಯಹಸ್ತವನ್ನು ಹಿಡಿದಿರುವದು.

(೯) ವೇದಾಂತವೆಂದು ಒಬ್ಬೊಬ್ಬರು ಒಂದೊಂದು ಬಗೆಯಾಗಿ ಹೇಳುತ್ತ ಒಬ್ಬರ ಮೇಲೊಬ್ಬರು ಕೈ ಎತ್ತುವರೆಂದು ಕೆಲವರು ಆಡಿಕೊಳ್ಳುವರಷ್ಟೆ. ಅದ್ವೈತಿಗಳಾದ ನಾವು ಅಂಥವರಲ್ಲವೆಂದು ನಮ್ಮ ವೇದಾಂತವು ನಮ್ಮ ಘಟವನ್ನು ತಟ್ಟುವದು. ಬಹುಬಗೆಯಾಗಿರುವ ದ್ವೈತಗಳೆಲ್ಲ ಒಂದೇ ಬಗೆಯಾಗಿರುವ ನಮ್ಮ ಅದ್ವೈತದ ಬೇರಿನಿಂದ ಚಿಗುರಿದವುಗಳಾದ್ದರಿಂದ ನಾವು ಎಲ್ಲರಲ್ಲಿಯೂ ಸಹಾನುಭೂತಿಯುಳ್ಳವರು. ನಾವು ಯಾರನ್ನೂ ಅಲ್ಲ

ಗಳೆಯುವದಿಲ್ಲ. ಅವರು ಹೇಳುವದನ್ನೆಲ್ಲ ವ್ಯವಹಾರದೃಷ್ಟಿಯ ಮಾತೆಂದು ಒಪ್ಪುತ್ತೇವೆ. ನಮ್ಮ ಅದ್ವೈತವು ಪರಮಾರ್ಥದೃಷ್ಟಿಯ ಮಾತು.

(೧೦) ಈ ನಮ್ಮ ಅಭಿಪ್ರಾಯಗಳು ಯಾರಿಗೂ ತಾನಾಗಿ ಹೊಳೆಯುಲಾರವೆನ್ನುವಿರಷ್ಟೆ. ನಿಜ ಆದ್ದರಿಂದಲೆ ಪರಮಾತ್ಮನೆ ನಮಗೆ ಅದನ್ನು ತನ್ನ ನಿಃಶ್ವಾಸದ ರೂಪವಾದ ಈವೇದಾಂತದ ಮೂಲಕ ತಿಳಿಸಬೇಕಾಯಿತು. ಬೇರೆಬೇರೆ ಧರ್ಮಗ್ರಂಥಗಳು ಬೇರೆಬೇರೆ ಬಗೆಯಾಗಿ ಹೇಳುತ್ತಿರುವಾಗ ಶ್ರುತಿಯನ್ನೊಪ್ಪುವದು ಹೇಗೆಂದರೆ: ಶ್ರುತಿಯು ತನ್ನ ಅಭಿಪ್ರಾಯಗಳನ್ನು ಬೇಕಾದಷ್ಟು ಯುಕ್ತಿಗಳಿಂದ ಕೂಡ ಹೊಂದಿಸಿ ತೋರಿಸಿರುವದು. ಆ ಯುಕ್ತಿಗಳು ಇನ್ನೊಬ್ಬ ಬಲವಾದ ಯುಕ್ತಿಗಾರನ ಮುಂದೆ ತಲೆಯನ್ನು ಬಗ್ಗಿಸಬಹುದಾದೀತೆಂದರೆ ಅಂಥ ಸಂಭವವಿಲ್ಲ. ಶ್ರುತಿಯು ತನ್ನ ಅಭಿಪ್ರಾಯಗಳಿಗೆ ನಮ್ಮ ಅನುಭವದ ಬೆಂಬಲವನ್ನೂ ತೋರಿಸಿರುವದು. ಅನುಭವದ ಮುಂದೆ ಮಾತಿಲ್ಲ.

ಹೀಗೆ ಇಲ್ಲಿರುವ ವಿಷಯಗಳು ಅನೇಕ ಕಡೆಗಳಿಂದ ಆರಿಸಿ ಕೂಡಿಸಿದವುಗಳಾದ್ದರಿಂದ ಇದು ಅನೇಕ ಹೂಗಳ ರಸದಿಂದಾದ ಜೇನತುಪ್ಪವನ್ನು ಹೋಲುವದೆಂದು ನನ್ನ ಅಭಿಪ್ರಾಯ. ಆದರೆ ಹೆತ್ತವರಿಗೆ ಹೆಗ್ಗಣವೂ ಮುದ್ದಾದಂತೆ ಆದರೆ ಸಾಲದು; ಕನ್ನಡಿಗರ ಕಣ್ಣಿಗೆ ಬೀಳದೆ ಸಂಸ್ಕೃತಗ್ರಂಥದಲ್ಲಿಯೇ ಉಳಿದುಕೊಂಡಿದ್ದ ವೇದಾಂತದ ಶಾಸ್ತ್ರೀಯಸ್ವರೂಪಕ್ಕೆ ಕನ್ನಡದ ವಚನಕಾವ್ಯದ ಬಣ್ಣವನ್ನು ಕೊಟ್ಟು ಬಳಕೆಯ ಮಾತುಗಳಲ್ಲಿಯೇ ಸರಳವಾದ ರೀತಿಯಲ್ಲಿ ತಿಳಿಯ ಹೇಳುವ ಹೆಚ್ಚುಗಾರಿಕೆಯುಳ್ಳ ಇದನ್ನು ವಾಚಕರು ಸವಿದು ಚಪ್ಪರಿಸಿದ ಧ್ವನಿಯು ನನ್ನ ಕಿವಿಗೆ ಬಿದ್ದರೆ ಆಗ ನನ್ನ ಶ್ರಮ ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಇನ್ನೊಬ್ಬರ ಅಭಿಪ್ರಾಯದ ಬೆರಕೆ ಇಲ್ಲದೆ ಶ್ರೀಶಂಕರಭಾಷ್ಯವನ್ನು ಮಾತ್ರ ಹಿಡಿದು ನೇರವಾಗಿ ಶ್ರುತಿಸ್ಮೃತಿಸೂತ್ರ(ಪ್ರಸ್ಥಾನತ್ರಯ)ಗಳಿಂದಲೆ ಆರಿಸಿದ ಸಂಗತಿಗಳ ಹೊಂದಿಕೆ

ಯಿಂದ ವೇದಾಂತದ ಮೂಲಸ್ವರೂಪದ ಮುದ್ದನ್ನು ಕನ್ನಡಿಗರ ಮುಖದ ಮುಂದಿಡುವದಕ್ಕೆ ಇದೇ ಮೊದಲು. ಈ ಸಣ್ಣ ಗ್ರಂಥವನ್ನೋದಿದರೆ ಓದಿ ಮುಗಿಸಲಾರದಷ್ಟಿರುವ ಎಲ್ಲ ವೇದಾಂತಗ್ರಂಥಗಳೂ ಅವನಿಗೆ ಪ್ರಸನ್ನವಾಗುವವೆಂದು ನಾನು ನಿರೀಕ್ಷಿಸುತ್ತೇನೆ. ಅಪಾರವಾದ ಗ್ರಂಥರಾಶಿಯಿಂದ ಉಂಟಾಗುವ ಲಾಭವು ಆರಿಸಿದ ಕೆಲವು ಮಾತುಗಳಿಂದ ಹೇಗೆ ಉಂಟಾದೀತೆಂದು ಸಂಶಯ ಉಂಟಾಗಬಹುದು. ಕಣ್ಣುಕತೆಯನ್ನು ಮೀರಿ ಹರಿಯುತ್ತಿರುವ ಗಂಗಾನದಿಯ ಸ್ನಾನಪಾನಗಳಿಂದಾಗುವ ಲಾಭವೆಲ್ಲ ಒಬ್ಬ ಯಾತ್ರಿಕನು ಕಾವಡಿಯಲ್ಲಿ ಹೊತ್ತುತಂದ ಬಿಂದಿಗೆಯ ತೀರ್ಥದಿಂದ ಆಗುವಂತೆ ಈ ಗ್ರಂಥವು ವಾಚಕರನ್ನು ಧನ್ಯರನ್ನಾಗಿ ಮಾಡದೆ ಇರಲಾರದು.

ಓದಿದರೆ ಇದು ಅವರನ್ನು ಕೃತಾರ್ಥರನ್ನಾಗಿ ಮಾಡಿಯೇ ಮಾಡುವದು. ಆದ್ದರಿಂದ ಕನ್ನಡಿಗರು ಇತ್ತಕಡೆಗೆ ಮನಸ್ಸು ಹಾಕಬೇಕು. ವೇದಾಂತವಿಚಾರವೆಂದೊಡನೆ ಸಾಮಾನ್ಯವಾಗಿ ಜನರು ಮುಖವನ್ನು ಸುಕ್ಕಿಸಿಕೊಳ್ಳುತ್ತಾರೆ. ಒಳಹೊಕ್ಕು ನೋಡಿದರೆ ಇದು ಎಷ್ಟು ನಾಚಿಕೆಗೇಡೆಂದು ತಿಳಿಯುತ್ತದೆ ಗ್ರಹಗತಿಗಳನ್ನು ನೋಡಿ ಮುಂದಾಗುವದನ್ನು ಹೇಳುವವರ ಮಾತಿಗೂ ಬುಡಬುಡಿಕೆಯವರ ಮತ್ತು ಕಣೀಹೇಳುವವರ ಮಾತಿಗೂ ಅವರು ತನ್ನ ಭವಿಷ್ಯವನ್ನು ಹೇಳುವರೆಂದು ಮನುಷ್ಯನು ಬಾಯಿಬಾಯಿಬಿಟ್ಟುಕೊಂಡು ಮುಖವನ್ನು ಅರಳಿಸಿಕೊಂಡು ಕಿವಿಗೊಡುತ್ತಾನಷ್ಟೆ. ಅವರ ಮಾತುಗಳಿಗೆ ತಲೆಯಾಗಲಿ ಕಾಲಾಗಲಿ ಏನೂ ಇರುವದಿಲ್ಲ. ಇದರ ಮೇಲೆ ಅವರು ಹೇಳುವದೆಲ್ಲ ನಮ್ಮ ಮೂರುದಿನದ ಬಾಳಿನದಾದ ಶರೀರಕ್ಕೆ ಸಂಬಂಧಪಟ್ಟ ಮಾತು. ಶರೀರವು ಸುಳ್ಳಾದ ಆತ್ಮ. ಹೀಗಿರುವಾಗ ನಿಜವಾದ ಆತ್ಮನ ವಿಷಯವನ್ನು ಹೇಳುವದಕ್ಕೆಂದು ಬ್ರಹ್ಮನ ಮುಖದಿಂದ ಬಂದ ವೇದಾಂತವನ್ನು ಜ್ಯೋತಿಷ್ಕರೇ ಮೊದಲಾದವರ ಮಾತಿಗಿಂತ ಕಡೆಗಂಡು ಮುಖವನ್ನು ಸುಕ್ಕಿಸಿಕೊಳ್ಳುವದು ಯಾವ ನ್ಯಾಯ ?

ಜ್ಯೋತಿಷ್ಕರೇ ಮೊದಲಾದವರ ಭವಿಷ್ಯದ ಫಲವು ಅವರು ಎಷ್ಟೇ ಹೊಗಳಿ ಹೇಳಿದರೂ ವೇದಾಂತವು ಹೇಳುವ ಫಲದ ಮುಂದೆ ತೀರ

ಕೀಳಾಗಿರುವದು. ಇದರ ಮೇಲೆ ಅದು ಕೂಡ ಆದರೂ ಆಗಬಹುದು; ಆಗದೆಯೂ ಹೋಗಬಹುದು. ವೇದಾಂತದ ಮಾತುಗಳು ಹಾಗೆ ಗಾಳಿಯಲ್ಲಿ ತೂರಿಹೋಗುವವುಗಳಲ್ಲ. ವೇದಾಂತವು ನಮ್ಮ ಆತ್ಮವನ್ನು ಬ್ರಹ್ಮವೆಂದು ಹೇಳುವದು. ಇದು ಬರೀ ಮಾತಲ್ಲ; ಕಣ್ಣಿಗೆ ಕಟ್ಟಿದ ಹಾಗೆ ಕಾಣಬರುವದು. ಈ ಫಲವು ಇನ್ನೆಲ್ಲಿಯೂ ಸಿಕ್ಕದು. ಇದಕ್ಕಿಂತ ಉತ್ತಮವಾದ ಫಲವೆಂಬುದಂತು ಇನ್ನಿಲ್ಲವೇ ಇಲ್ಲ. ತಾನು ಬಹುದೊಡ್ಡವನೆನಿಸಿಕೊಳ್ಳಬೇಕೆಂದು ಎಲ್ಲರಿಗೂ ಆಸೆಯುಂಟಷ್ಟೆ. ಬ್ರಹ್ಮಕ್ಕಿಂತ ದೊಡ್ಡದಿಲ್ಲ. ತಾನು ಆ ಬ್ರಹ್ಮವಾಗುವದು ಯಾರಿಗೆ ಬೇಡ? ವೇದಾಂತವು ಎಲ್ಲ ಸುಖಗಳ ಬಾಯಿಗೂ ಎಳ್ಳು ನೀರನ್ನು ಬಿಡಿಸಿ ವೈರಾಗ್ಯದಿಂದ ಒಣಗಿಸವದೆಂದು ತಿಳಿಯುವದು ಮೂರ್ಖತನ. ವೇದಾಂತದ ವೈರಾಗ್ಯವು ಸುಖವನ್ನು ಕಳೆಯತಕ್ಕದ್ದಲ್ಲ; ಕ್ಷುದ್ರವಾದ ಸುಖಗಳನ್ನು ಪಕ್ಕಕ್ಕೆ ಸರಿಸಿ ಮಹತ್ತಾದ ಸುಖವನ್ನು ಕೈಗೂಡಿಸುವದು. ಆದ್ದರಿಂದ ಇಂಥದ್ದನ್ನು ಎಷ್ಟು ಮಾತ್ರವೂ ಉಪೇಕ್ಷೆಮಾಡದೆ ಅತ್ಯಾದರದಿಂದ ಗ್ರಹಿಸುವದು ಜಾಣತನ. ಇದಲ್ಲದೆ ತಾನಲ್ಲದ ವಿಷಯವನ್ನು ತಾನು ಉಪೇಕ್ಷೆಮಾಡಿದರೂ ಒಪ್ಪುವದು. ತನ್ನನ್ನು ತಾನೆ ಉಪೇಕ್ಷೆಮಾಡುವದು ವಿವೇಕವೆನಿಸೀತೆ? ಇನ್ನೊಂದೇನೆಂದರೆ: ವೇದಾಂತವು ಮನುಷ್ಯನನ್ನು ಕೈಕಟ್ಟಿ ಮೂಲೆಗೆ ಮುಟ್ಟುಮಾಡುವದೆಂದು ಕನವರಿಸುತ್ತಿರುವವರು ಇದರಲ್ಲಿರುವ ಕರ್ಮಯೋಗದ ಕಡೆಗೆ ಕಣ್ಣು ಹಾಕಿದರೆ ಅವರ ಹುಚ್ಚು ಬಿಟ್ಟುಹೋಗುವದು.

ಇದನ್ನೆಲ್ಲ ಕನ್ನಡಿಗರು ವಿಚಾರಕ್ಕೆ ತಂದುಕೊಂಡು ಈ ಗ್ರಂಥದ ಮೂಲಕವಾಗಿ ವೇದಾಂತದ ಪ್ರಯೋಜನವನ್ನು ಸೂರೆಮಾಡಿಕೊಳ್ಳಬೇಕೆಂದು ಬೇಡುತ್ತೇನೆ. ಇಂಥ ಗ್ರಂಥವನ್ನು ಮೊದಲನೆಯ ಸಲ ಹೊರಕ್ಕೆ ತಂದ ಪುಣ್ಯಕ್ಕೆ ಪ್ರಕಾಶಕರು ಪೂರ್ಣಭಾಗಿಗಳಾಗಿದ್ದಾರೆ. ಈ ಗ್ರಂಥದ ಎಷ್ಟೋ ಭಾಗಗಳು ತರ್ಕವಿದ್ವಾನನೂ ಶ್ರೀಶಂಕರಮಠದ ವೇದಾಂತಮಹಾವಿದ್ವತ್ಪರೀಕ್ಷಾಕಕ್ಷೆಯಲ್ಲಿರುವವನೂ ಆದ **ಚಿ|| ಅನಂತಮೂರ್ತಿ ಶಾಸ್ತ್ರಿಯ** ಕಣ್ಣು ಮುಂದೆ ಹಾದು ಹೋಗಿವೆ. ಪ್ರಮಾದದಿಂದ ಬಿದ್ದಿರುವ ಮುದ್ರಣದ ತಪ್ಪುಗಳನ್ನು ವಾಚಕರು ಮುಂದಾಗಿ ತಿದ್ದಿಕೊಳ್ಳಲೆಂದು ಇಲ್ಲಿಯೇ ತಿಳಿಸುತ್ತೇನೆ.

| ಪುಟ | ಸಾಲು। | ಅಶುದ್ಧ | ಶುದ್ಧ |
|---|---|---|---|
| ೨೪ | ೪ | ಒಂದಯುವ | ಒಂದವಯುವ |
| ೧೨೬ | ೧೯ | ಉಪ್ಪುಪ್ಪು | ಉಪ್ಪು |
| ೧೬೧ | ೨೪ | ಅಗು | ಆಗ |
| ೧೭೪ | ೨೪ | ಮುಂದುಗುಣದ | ಮುಂದುಗಾಣದ |
| ೨೨೫ | ೧೬ | ದಿಲ್ಲವಾದರ | ದಿಲ್ಲವಾದರೂ |
| ೨೩೩ | ೧೯ | ಯಾವ | ಯಾವ |

ಇನ್ನೂ ಇಂಥ ಮತ್ತು ಬೇರೆ ಬಗೆಯ ತಪ್ಪುಗಳು ಇನ್ನೇನಾದರೂ ಉಳಿದುಕೊಂಡಿದ್ದರೆ ಅಭಿಜ್ಞರು ದಯವಿಟ್ಟು ತಿಳಿಸಿದರೆ ಅವರಿಗೆ ತಲೆಬಾಗಿ ಅದನ್ನು ತಿದ್ದಿಕೊಳ್ಳುತ್ತೇನೆ.

ಮಕರ ಸಂಕ್ರಮಣ, ಶ್ರೀಮುಖ;
ದತ್ತಾತ್ರೇಯಾಶ್ರಮ, ವಿದುರಾಶ್ವತ್ಥ.
ಪ್ರಕಟಿಸಿದ ದಿನ
ವಿನಾಯಕಚತುರ್ಥೀ, ಭಾವ.

**ಹೊಸಕೆರೆ ಚಿದಂಬರಯ್ಯ**

# ಈ ಗ್ರಂಥದಲ್ಲಿ ಉಪಯೋಗಿಸಿರುವ ಸಂಜ್ಞೆಗಳ ವಿವರ

| ಸಂಜ್ಞೆಗಳು | ವಿವರ |
|---|---|
| ಅಧ್ಯಾ | ಅಧ್ಯಾತ್ಮೋಪನಿಷತ್ತು |
| ಅ. ಭಾ. | ಅಧ್ಯಾಸಭಾಷ್ಯ |
| ಆ. ಬೋ | ಆತ್ಮಬೋಧೋಪನಿಷತ್ತು |
| ಈ | ಈಶಾವಾಸ್ಯೋಪನಿಷತ್ತು |
| ಋ | ಋಗ್ವೇದ |
| ಐ | ಐತರೇಯೋಪನಿಷತ್ತು |
| ಐ. ಅವ | ಐತರೇಯದ ಅವತರಣಿಕೆ |
| ಐ. ಆ | ಐತರೇಯಾರಣ್ಯಕ |
| ಕ | ಕಠೋಪನಿಷತ್ತು |
| ಕೇ | ಕೇನೋಪನಿಷತ್ತು |
| ಕೈ | ಕೈವಲ್ಯೋಪನಿಷತ್ತು |
| ಗ | ಗರ್ಭೋಪನಿಷತ್ತು |
| ಛಾಂ | ಛಾಂದೋಗ್ಯೋಪನಿಷತ್ತು |
| ತೇ | ತೇಜೋಬಿಂದೂಪನಿಷತ್ತು |
| ತೈ | ತೈತ್ತಿರೀಯೋಪನಿಷತ್ತು |
| ತೈ. ಅವ | ತೈತ್ತಿರೀಯದ ಅವತರಣಿಕೆ |
| ತೈ. ಆ. | ತೈತ್ತಿರೀಯಾರಣ್ಯಕ |
| ಪ್ರ | ಪ್ರಶ್ನೋಪನಿಷತ್ತು |
| ಬೃ | ಬೃಹದಾರಣ್ಯಕೋಪನಿಷತ್ತು |

| | |
|---|---|
| ಬ್ರ.ಬಿಂ | ಬ್ರಹ್ಮಬಿಂದೂಪನಿಷತ್ತು |
| ಭ | ಭಗವದ್ಗೀತೆ |
| ಮ | ಮಹೋಪನಿಷತ್ತು |
| ಮ.ವಾ.ರ | ಮಹಾವಾಕ್ಯರತ್ನಾವಳಿ |
| ಮಾಂ | ಮಾಂಡೂಕ್ಯೋಪನಿಷತ್ತು |
| ಮುಕ್ತಿ | ಮುಕ್ತಿಕೋಪನಿಷತ್ತು |
| ಮುಂ | ಮುಂಡಕೋಪನಿಷತ್ತು |
| ಮೈ | ಮೈತ್ರಾಯಣ್ಯುಪನಿಷತ್ತು |
| ಮೈ.ಯಿ | ಮೈತ್ರೇಯ್ಯುಪನಿಷತ್ತು |
| ಶ್ವೇ | ಶ್ವೇತಾಶ್ವತರೋಪನಿಷತ್ತು |
| ಸ.ಸಾ | ಸರ್ವಸಾರೋಪನಿಷತ್ತು |
| ಸ್ಕಂ | ಸ್ಕಂದೋಪನಿಷತ್ತು |
| ಸೂ | ಬ್ರಹ್ಮಸೂತ್ರ |

# ವಿಷಯಕ್ರಮ

ವಿಷಯಗಳು ಪುಟ

ಪ್ರಾರ್ಥನೆ .... .... .... .... ಗ-ಚ

೧ ಸಂಸಾರದ ಒದ್ದಾಟ .... .... .... ೧

ಸಂಸಾರದ ಸ್ವರೂಪ ೧, ಸಂಸಾರದಲ್ಲಿ ಹುರುಳಿಲ್ಲ ೪, ಸಾವಿನ ಗಾಬರಿ೭, ಕತ್ತಲೆಯ ದಾರಿ ೧೪, ಮತ್ತೆ ಹುಟ್ಟುವದು ೨೦, ಬೆಳಕಿನ ದಾರಿ ೨೬.

೨ ಸಂಸಾರವೆಂಬ ಕುತ್ತಕ್ಕೆ ಮದ್ದು .... .... .... ೨೯

ಜಗತ್ತಿನ ಆಕ್ಕರೆಯನ್ನು ಬಿಡುವದು ೨೯, ಜಗತ್ತನ್ನು ಅತ್ಮವೆಂದು ನೋಡುವದು ೩೨, ಆತ್ಮನನ್ನು ಕಂಡವರಿಗೆ ಹುಟ್ಟುಸಾವಿಲ್ಲ ೩೬, ಆತ್ಮನನ್ನು ಇಲ್ಲಿಯೇ ಕಾಣಬೇಕು ೪೦.

೩ ವೇದಾಂತದ ವಿಚಾರ .... .... .... .... ೪೨

ತಾನಲ್ಲದವುಗಳನ್ನು ತಾನೆಂಬ ತಪ್ಪುತಿಳಿವು ೪೨, ತಾನು ಹೊರಗಣವನೆಂಬ ತಪ್ಪುತಿಳಿವು ೪೫, ಕರ್ಮಠರ ತಿಳಿವೂ ಸರಿಯಲ್ಲ ೪೭, ಬ್ರಹ್ಮವನ್ನೆ ಬೇರೆ ತಿಳಿಯಬೇಕು೫೩, ನಾಲ್ಕು ಸಾಧನಗಳು೫೬.

೪ ಜಗತ್ತಿನ ಹುಟ್ಟು .... .... .... .... ೫೯

ಬ್ರಹ್ಮದಿಂದಾದ ಹುಟ್ಟು೫೯,ಬ್ರಹ್ಮವು ತಾನೆ ಜಗತ್ತಾದದ್ದು೬೭, ಜಡಗಳು ಹುಟ್ಟಿದ ಕ್ರಮ ೮೨, ಜೀವರ ಹುಟ್ಟು ೮೯, ಜಗತ್ತು ಹುಟ್ಟಲೇ ಇಲ್ಲ ೯೫.

೫ ಮಾಯೆಯ ಬಿನ್ನಾಣ .... .... .... .... ೧೦೫

ಮಾಯೆ ಕಾಣುವದು ೧೦೫, ಮಾಯೆಯಿಂದಾಗಿರುವ ಕೇಡು ೧೦೭, ಮಾಯೆಯನ್ನು ಹಾರಿಸುವ ಉಪಾಯ ೧೦೮.

೬ ಜಗತ್ತು ಹುಸಿ .... .... .... .... ೧೧೧

ಜಗತ್ತು ಇರುವ ಸಂಭವವಿಲ್ಲ ೧೧೧, ಜಗತ್ತು ಕನಸು ಮೊದಲಾದವುಗಳಂತೆ ೧೧೬, ಜಗತ್ತು ಇಲ್ಲವೆಂಬ ಡಂಗರ ೧೧೯.

೭ ನಿಜವಾದ ಆತ್ಮ .... .... .... .... ೧೨೨

ಆತ್ಮನನ್ನು ಈಗಲೆ ಕಾಣುವ ಅಗತ್ಯ೧೨೨, ಆತ್ಮನನ್ನು ಕಾಣುವ ಯೋಗ್ಯತೆ ೧೨೪, ಆತ್ಮಜ್ಞಾನದ ಹೆಚ್ಚುಗಾರಿಕೆ೧೨೯, ಆತ್ಮನನ್ನು ತೋರಿಸುವ ಕೈಮರಗಳು೧೩೩, ಆತ್ಮಸ್ವರೂಪದ ವರ್ಣನೆ೧೪೨, ಆತ್ಮನ ವಿಭೂತಿ ೧೪೭, ಆತ್ಮನಸ್ಮರಿತ ಗುರ್ತು ೧೪೯.

೮ ಅವತಾರ ಮತ್ತು ಗುರು .... .... .... .... ೧೫೩
ಅವತಾರದ ಗುಟ್ಟು ೧೫೩, ಅವತಾರದ ಅರಿವಿನ ಫಲ ೧೫೫, ಗುರುಗಳ ಅಗತ್ಯ ೧೫೬, ಗುರುಭಕ್ತಿ ೧೬೦.

೯ ಕರ್ಮವೆಂಬ ದಾರಿ .... .... .... .... ೧೬೩
ಕರ್ಮಗಳನ್ನು ಮಾಡಲೇ ಬೇಕು ೧೬೩, ಕರ್ಮಗಳ ಕಶಿ ೧೬೭, ಆತ್ಮನ ಅರಿವಾದ ಮೇಲೆ ಕರ್ಮದ ಅಗತ್ಯವಿಲ್ಲ ೧೭೪, ಜನರ ಮೇಲುಪಙ್ಕ್ತಿಗಾದರೂ ಕರ್ಮವನ್ನು ಮಾಡಬೇಕು ೧೭೭.

೧೦ ಭಕ್ತಿಯೆಂಬ ದಾರಿ .... .... .... .... ೧೮೦
ಭಕ್ತಿಯೆಂದರೇನು ೧೮೦, ಭಕ್ತಿಯ ಹೆಚ್ಚುಗಾರಿಕೆ ೧೮೧, ವಿವೇಕಿಗಳ ಭಕ್ತಿ ೧೮೪.

೧೧ ಯೋಗವೆಂಬ ದಾರಿ .... .... .... .... ೧೮೫
ಮನಸ್ಸನ್ನು ಬಿಗಿಹಿಡಿಯುವ ಅಗತ್ಯ ೧೮೫, ಧ್ಯಾನದ ಹೊರಗಣ ಸಾಧನಗಳು ೧೯೦, ಓಂಕಾರದ ಧ್ಯಾನ ೧೯೧, ಧ್ಯಾನದ ಅಭ್ಯಾಸ ೧೯೬, ಫಲ ೧೯೭, ಯೋಗದಲ್ಲಿ ಕೊನೆ ಮುಟ್ಟದೆ ಹೋದವನ ಗತಿ ೧೯೯.

೧೨ ವಿಚಾರವೆಂಬ ದಾರಿ .... .... .... .... ೨೦೧
ಅವಸ್ಥೆಗಳು ೨೦೧, ಅವಸ್ಥೆಗಳ ಭೇದಗಳು ೨೦೪, ಕನಸಿನ ವಿವರ ೨೦೬, ಸುಷುಪ್ತಿಯ ವಿವರ ೨೦೮. ಆತ್ಮನಿಗೆ ಇನ್ನೊಂದರ ಸೋಂಕಿಲ್ಲ ೨೧೪.

೧೩ ಆತ್ಮನು ಏನನ್ನೂ ಮಾಡುವವನಲ್ಲ .... .... .... ೨೨೦
ಆತ್ಮನ ಮಾಡುವಿಕೆಯು ಮಾಯೆ ೨೨೦, ಮಾಡುವಿಕೆಯು ದೇಹ ಮೊದಲಾದವುಗಳದು ೨೨೨.

೧೪ ಜೀವವು ಬ್ರಹ್ಮವೆ .... .... .... .... ೨೨೪
ವೇದದ ಮಾತುಗಳ ಅಭಿಪ್ರಾಯ ೨೨೪, ಬೇರೆ ಬೇರೆಯೆಂದರೆ ಹಾನಿ ೨೩೦.

೧೫ ಬಹು ದೊಡ್ಡ ಫಲ .... .... .... .... ೨೩೨
ಸ್ವರೂಪ ೨೩೨, ಅದ್ವೈತವೇ ಮಂಗಲ ೨೩೯, ಹೆಚ್ಚುಗಾರಿಕೆಗಳು ೨೪೦.

೧೬ ಅನುಭವಿಗಳ ನಡೆವಳಿಕೆ .... .... .... .... ೨೪೫
ನಡೆನುಡಿಗಳು ೨೪೫, ಪ್ರಾರಬ್ಧಕರ್ಮ ೨೪೮, ವಿದೇಹಮುಕ್ತಿ ೨೫೧.

# ಪ್ರಾರ್ಥನೆ

## (ಶಾಂತಿಪಾಠಗಳ ಅಭಿಪ್ರಾಯಗಳು)

(೧) ಪ್ರಾಣವೃತ್ತಿಯ ಮತ್ತು ಹಗಲಿನ ದೇವತೆಯಾದ ಮಿತ್ರನೂ ಅಪಾನವೃತ್ತಿಯ ಮತ್ತು ರಾತ್ರಿಯ ದೇವತೆಯಾದ ವರುಣನೂ ಕಣ್ಣಿನ ಮತ್ತು ಆದಿತ್ಯನ ದೇವತೆಯಾದ ಅರ್ಯಮನೂ ಬಲದ ದೇವತೆಯಾದ ಇಂದ್ರನೂ ವಾಕ್ಕಿನ ಮತ್ತು ಬುದ್ಧಿಯ ದೇವತೆಯಾದ ಬೃಹಸ್ಪತಿಯೂ ಪಾದದ ದೇವತೆಯಾದ ವಿಷ್ಣುವೂ ನಮಗೆ ಸುಖವನ್ನು ಕೊಡುವವರಾಗಲಿ. ಎಲ್ಲ ಕ್ರಿಯೆಗಳ ಫಲವನ್ನೂ ಹಿಡಿಯಲ್ಲಿಟ್ಟುಕೊಂಡಿರುವ ವಾಯುವಿನ (ಸೂತ್ರಾತ್ಮನ) ರೂಪದಲ್ಲಿರುವ ಬ್ರಹ್ಮನಿಗೆ ಎರಗುತ್ತೇನೆ. ವಾಯುವೆ, ನಿನಗೆ ಎರಗುತ್ತೇನೆ. ನೀನು ಕಣ್ಣು ಮೊದಲಾದ ಎಲ್ಲಕ್ಕಿಂತ ಒಳಗಣವನಾದ್ದರಿಂದ ಪ್ರತ್ಯಕ್ಷವಾದ ಬ್ರಹ್ಮವಾಗಿದ್ದಿ. ನಿನ್ನನ್ನೇ ನಾನು ಪ್ರತ್ಯಕ್ಷವಾದ ಬ್ರಹ್ಮವೆಂದು ಹೇಳುತ್ತೇನೆ. ಶಾಸ್ತ್ರದಲ್ಲಿ ಹೇಳಿದಂತೆ ಹೇಗೆ ಮಾಡಬೇಕೆಂಬ ಬುದ್ಧಿಯ ನಿಶ್ಚಯವು ನಿನ್ನಧೀನವಾದ್ದರಿಂದ ನಿನ್ನನ್ನೇ ಹೇಳುತ್ತೇನೆ. ಅದನ್ನು ಮಾತಿನಿಂದಲೂ ಶರೀರದಿಂದಲೂ ನಡೆಸುವದೂ ನಿನ್ನಧೀನವೇ ಆದ್ದರಿಂದ ನಿನ್ನನ್ನೇ ಸತ್ಯವೆಂದು ಹೇಳುತ್ತೇನೆ. ಹೀಗೆ ನನ್ನಿಂದ ಹೊಗಳಿಸಿಕೊಂಡ ವಾಯುವೆಂಬ ಬ್ರಹ್ಮವು ನನಗೆ ವಿದ್ಯೆಯನ್ನು ಮೈಗೂಡಿಸಿ ಕೊಟ್ಟು ಕಾಪಾಡಲಿ. ಆ ಬ್ರಹ್ಮವೆ ನನಗೆ ಹೇಳಿ ಕೊಡುವ ಗುರುಗಳಿಗೆ ತಿಳಿಯ ಹೇಳುವ ಶಕ್ತಿಯನ್ನು ಕೊಟ್ಟು ಕಾಪಾಡಲಿ. ನನ್ನನ್ನು ಕಾಪಾಡಲಿ. ನನಗೆ ಹೇಳಿಕೊಡುವವರನ್ನು ಕಾಪಾಡಲಿ. —(ತೈ ೧-೧)

(೨) ಬ್ರಹ್ಮವು ನನ್ನನ್ನೂ ನಮ್ಮ ಗುರುಗಳನ್ನೂ ಒಟ್ಟಿಗೆ ಕಾಪಾಡಲಿ. ಅದು ನಮಗೆ ಉಣಿಸಲಿ. ನಾವಿಬ್ಬರೂ ವಿದ್ಯಾಸಂಬಂಧವಾದ ಸಾಮರ್ಥ್ಯವನ್ನು ಹೊಂದೋಣ. ನಮ್ಮ ಓದು ಹುರಿಗೂಡಲಿ. ನಮ್ಮಿಬ್ಬರಲ್ಲಿ ಒಬ್ಬರಿಗೊಬ್ಬರಿಗೆ ಹಗೆತನ ಉಂಟಾಗದಿರಲಿ —( ? )

(೩) ವೇದಗಳ ತಲೆಮಣಿಯಾಗಿಯೂ ಸರ್ವಸ್ವರೂಪವಾಗಿಯೂ ವೇದಗಳೆಂಬ ಅಮೃತದಿಂದ ಮೇಲಕ್ಕೆದ್ದು ಕೊಂಡಿರುವದಾಗಿಯೂ ಇರುವ ಶ್ರೇಷ್ಠವಾದ ಓಂಕಾರದ ಸ್ವರೂಪನಾದ ಪರಮೇಶ್ವರನು ನನ್ನ ಪ್ರಜ್ಞೆಯನ್ನು ಬಲಗೊಳಿಸಲಿ. ಹೇ, ದೇವ, ನಾನು ಸಾವಿನ ಹೆದರಿಕೆಯನ್ನು ತಪ್ಪಿಸುವ ಬ್ರಹ್ಮಜ್ಞಾನವನ್ನು ಹಿಡಿದಿಟ್ಟುಕೊಳ್ಳುವವನಾಗಬೇಕು. ನನ್ನ ಶರೀರವು ಅದಕ್ಕೆ ತಕ್ಕದ್ದಾಗಿರಲಿ. ನನ್ನ ನಾಲಿಗೆಯು ಬಹಳ ಸವಿಮಾತಿನದಾಗಿರಲಿ. ನನ್ನ ಕಿವಿಗಳು ಬಹಳವಾಗಿ ಶ್ರವಣ ಮಾಡಲಿ. ನೀನು ಬ್ರಹ್ಮನ ಒರೆಯಾಗಿದ್ದೀ. ಲೌಕಿಕವಾದ ತಿಳಿವುಗಳಿಗೆ ಮರೆಯಾಗಿರುವ ನೀನು ಸಾಮಾನ್ಯರಿಗೆ ಗೋಚರವಾಗುವದಿಲ್ಲ. ನಾನು ಕೇಳಿ ತಿಳಿದದ್ದನ್ನು ಕಾಪಾಡು. —(ತ್ರೈ ೧-೪)

(೪) ನಾನು ಸಂಸಾರವೆಂಬ ಮರದ ಒಳಗಿರುವ ಪ್ರೇರಕನು. ನನ್ನ ಕೀರ್ತಿಯು ಬೆಟ್ಟದ ಬುಡದಂತೆ ಹರಡಿಕೊಂಡಿರುವದು. ನಾನು ಎಲ್ಲಕ್ಕೂ ಕಾರಣನು ಮತ್ತು ಪಾವನನು. ಸೂರ್ಯನಲ್ಲಿರುವ ಅಮೃತದಂತೆ ಮಂಗಲಕರವಾದ ಆತ್ಮತತ್ತ್ವವಾಗಿದ್ದೇನೆ. ನಾನು ಹೊಳೆಯುವ ಧನ. ಒಳ್ಳೆ ಬುದ್ಧಿಯುಳ್ಳ ನಾನು ಅಮೃತವನ್ನೆರಚಿಕೊಂಡವನಾಗಿದ್ದೇನೆ. ಇದು ತ್ರಿಶಂಕುವು ಬ್ರಹ್ಮಜ್ಞಾನವನ್ನು ಪಡೆದು ಹೇಳಿದ ಮಾತು. --(ತ್ರೈ ೧-೧೦)

(೫) ಹೇ, ದೇವತೆಗಳಿರಾ, ನಮ್ಮ ಕಿವಿಗಳು ಮಂಗಲಕರಗಳಾದ ಶ್ರುತಿಸ್ಮೃತಿವಾಕ್ಯಗಳನ್ನು ಕೇಳುವವುಗಳಾಗಲಿ; ಯಾಗಗಳನ್ನು ಮಾಡುವಲ್ಲಿ ನಾವು ಯಜ್ಞ ಮೊದಲಾದ ಮಂಗಲಕರ್ಮಗಳನ್ನು ಕಣ್ಣು ಮೊದಲಾದವುಗಳಿಂದ ಸಾಕ್ಷಾತ್ತಾಗಿ ನೋಡುವವರಾಗಲಿ; ಕೊರತೆ ಇಲ್ಲದ ಅವಯವಗಳಿಂದಲೂ ಶರೀರದಿಂದಲೂ ಕೂಡಿದವರಾಗಿ ನಾವು ನಿಮ್ಮ ಸ್ತುತಿಯನ್ನು ಮಾಡುವವರಾಗಿ ದೇವತೆಗಳು ಕೊಟ್ಟ ಆಯುಸ್ಸನ್ನೆಲ್ಲ ಅನುಭವಿಸಬೇಕು. ದೊಡ್ಡವರಿಂದ ಹೊಗಳಿಸಿಕೊಳ್ಳುವ ಇಂದ್ರನು ನಮಗೆ ಕ್ಷೇಮವನ್ನುಂಟುಮಾಡಲಿ. ಎಲ್ಲವನ್ನೂ ತಿಳಿದ ಪೂಷನು ನಮಗೆ ಒಳ್ಳೆಯದನ್ನು ಮಾಡಲಿ. ಕಟ್ಟಿಗೆಯ ಗಾಲಿಯನ್ನು ಕಬ್ಬಿಣದ ಹಳಿಯು ಕಾಪಾಡುವಂತೆ ಗರುಡನು

ನಮಗೆ ಹಾವು ಮೊದಲಾದವುಗಳ ತೊಂದರೆಯನ್ನು ತಪ್ಪಿಸಿ ಸುಖವನ್ನು ಕೊಡಲಿ ಬೃಹಸ್ಪತಿಯು ನಮಗೆ ಬ್ರಹ್ಮವರ್ಚಸ್ಸನ್ನು ಕೊಟ್ಟು ಪೊರೆಯಲಿ.
—(ತೈ. ಆ ೧-೧)

(೬) ಆ ಶುದ್ಧಬ್ರಹ್ಮವು ಎಲ್ಲೆಲ್ಲಿಯೂ ತುಂಬಿಕೊಂಡಿರುವದು. ಹೆಸರುಗಳಿಂದಲೂ ರೂಪಗಳಿಂದಲೂ ವ್ಯವಹರಿಸುತ್ತಿರುವ ಈ ಕಾರ್ಯಬ್ರಹ್ಮವು (ಜೀವವು) ತನ್ನ ಸ್ವರೂಪದಿಂದ ಎಲ್ಲೆಲ್ಲಿಯೂ ತುಂಬಿಕೊಂಡಿರುವದೆ. ಈ ಕಾರ್ಯಬ್ರಹ್ಮವು ಕಾರಣರೂಪವಾದ ಆ ಶುದ್ಧಬ್ರಹ್ಮದಿಂದ ಎದ್ದುಕೊಂಡದ್ದಾಗಿರುವದು ಈ ಕಾರ್ಯಬ್ರಹ್ಮದ ಹೆಸರುಗಳನ್ನೂ ರೂಪಗಳನ್ನೂ ಸುಳ್ಳೆಂದು ತಿಳಿದು ಅದು ಎಲ್ಲೆಲ್ಲಿಯೂ ತುಂಬಿಕೊಂಡಿರುವದನ್ನರಿತರೆ ಎಲ್ಲೆಲ್ಲಿಯೂ ತುಂಬಿರುವ ಶುದ್ಧಬ್ರಹ್ಮವೆ ಉಳಿಯುತ್ತದೆ. —(ಬೃ ೫-೧)

(೭) ನನ್ನ ಅವಯವಗಳೂ ವಾಕ್ಕೂ ಪ್ರಾಣವೂ ಕಣ್ಣೂ ಕಿವಿಯೂ ಮತ್ತು ಬಲವೂ ಎಲ್ಲ ಇಂದ್ರಿಯಗಳೂ ನನಗೆ ಹಿತವನ್ನು ಮಾಡುವವುಗಳಾಗಲಿ. ಇವೆಲ್ಲ ಉಪನಿಷತ್ತಿನಿಂದ ಮಾತ್ರ ಗೊತ್ತಾಗುವ ಬ್ರಹ್ಮದಲ್ಲಿ ಎದ್ದು ಕಾಣುವವುಗಳು. ನಾನು ಬ್ರಹ್ಮವನ್ನು ಕಡೆಗಾಣದಿರಬೇಕು. ನನ್ನನ್ನು ಬ್ರಹ್ಮವು ಕಡೆಗಾಣದಿರಲಿ. ಕಡೆಗಾಣದಿರುವಂತಾಗಲಿ, ನಾನು ಕಡೆಗಾಣದಿರುವಂತಾಗಲಿ. ಆತ್ಮನಲ್ಲಿ ನೆಲೆಗೊಂಡ ಮನಸ್ಸುಳ್ಳವನ ಧರ್ಮಗಳೆಂದು ಉಪನಿಷತ್ತುಗಳಲ್ಲಿ ಹೇಳಿರುವವುಗಳೆಲ್ಲ ನನ್ನಲ್ಲಿರಲಿ; ನನ್ನಲ್ಲಿರಲಿ. —(?)

(೮) ನನ್ನ ಮಾತುಗಳು ಮನಸ್ಸಿನಲ್ಲಿದ್ದಷ್ಟನ್ನೆ ಆಡಲಿ. ನನ್ನ ಮನಸ್ಸು ಬ್ರಹ್ಮವನ್ನು ತಿಳಿಸುವ ಮಾತುಗಳಲ್ಲಿಯೇ ಜಾಗರೂಕವಾಗಲಿ. ತನ್ನ ಬೆಳಕಿನಿಂದ ಬೆಳಗುವ ಬ್ರಹ್ಮಚೈತನ್ಯವು ನನ್ನ ಅಜ್ಞಾನವನ್ನು ಕಳೆದು ನನಗೆ ಕಾಣಬರಲಿ. ಹೆ ವಾಕ್ಕೆ, ಹೆ ಮನಸ್ಸೆ, ನನಗೆ ಬ್ರಹ್ಮಜ್ಞಾನವನ್ನು ತಂದುಕೊಡುವವರಾಗಿರಿ. ನಾನು ಕೇಳಿದ ಯಾವ ಗ್ರಂಥವೂ ಮರೆತುಹೋಗದೆ ಇರಲಿ. ನನ್ನ ಹಗಲಿರುಳುಗಳು ಇಂಥ ಓದಿನಲ್ಲಿಯೇ ಕಳೆಯುವವುಗಳಾಗಲಿ. ನಾನು ಪರಮಾತ್ಮವಿಷಯಕವಾದ ಗ್ರಂಥವನ್ನೆ ಓದಿದವನಾಗಬೇಕು. ನಾನು ಮನಸ್ಸಿನಲ್ಲಿ ನಿಜಸ್ಥಿತಿಯನ್ನು ವಿಚಾರಮಾಡಿ ಮಾತಿನಲ್ಲಿ

ಅದನ್ನೆ ಹೇಳುವವನಾಗಬೇಕು. ಆ ಬ್ರಹ್ಮತತ್ತ್ವವು ನನಗೆ ಚೆನ್ನಾಗಿ ತಿಳಿವನ್ನುಂಟುಮಾಡಿ ಕಾಪಾಡಲಿ. ಆ ಬ್ರಹ್ಮತತ್ತ್ವವು ಚೆನ್ನಾಗಿ ತಿಳಿಯು ಹೇಳುವ ಸಾಮರ್ಥ್ಯವನ್ನು ನಮ್ಮ ಗುರುಗಳಿಗೆ ಕೊಟ್ಟು ಕಾಪಾಡಲಿ. ಅದು ನಮ್ಮ ಗುರುಗಳನ್ನು ಕಾಪಾಡಲಿ. —(ಐ. ಆ. ೨-೭-೧-೨೬)

(೯) ಹೆ, ದೇವ, ನಮ್ಮ ಮನಸ್ಸಿಗೆ ಒಳ್ಳೆಯವರ ಕಡೆಯ ಒಲವನ್ನುಂಟುಮಾಡು. —(ಋ ೭-೭-೧)

(೧೦) ಯಾರು ಮೊದಲು ಹಿರಣ್ಯಗರ್ಭನೆಂಬ ಬ್ರಹ್ಮನನ್ನು ಹುಟ್ಟಿಸುವನೊ ಯಾರು ಅವನಿಗೆ ವೇದಗಳು ಹೊಳೆಯುವಂತೆ ಮಾಡುವನೊ ಮೋಕ್ಷವನ್ನು ಬಯಸುವ ನಾನು ನಮ್ಮ ಬುದ್ಧಿಯಲ್ಲಿ ಬೆಳಗುತ್ತಿರುವ ಆ ದೇವನನ್ನು ಶರಣೆನ್ನುತ್ತೇನೆ. (ಶ್ವೇ ೬-೧೮)

---

ಬ್ರಹ್ಮವಿದ್ಯೆಯ ಸಂಪ್ರದಾಯವನ್ನು ಮುಂದುವರಿಸುವವರಾದ ಹಿರಣ್ಯ ಗರ್ಭಬ್ರಹ್ಮನೆ ಮೊದಲಾದವರಿಗೂ ದೊಡ್ಡವರಿಗೂ ಗುರುಗಳಿಗೂ

**ನ ಮ ಸ್ಕಾ ರ**

---

ಶ್ರೀಗುರುಭ್ಯೋ ನಮಃ

# ವೇದಾಂತದ ಜೀವಾಳ

## (ಪ್ರಸ್ಥಾನತ್ರಯದ ತಿರಳು)

## ೧—ಸಂಸಾರದ ಒದ್ದಾಟ

### ಸಂಸಾರದ ಸ್ವರೂಪ

ಅನುಭವವೆಂಬ ಅಡಿಗಲ್ಲಿನ ಮೇಲೆ ಮನುಷ್ಯನ ಭರವಸವು ಹೆಚ್ಚು. ಸಂಸಾರದ ವಿಷಯದಲ್ಲಿ ಯಾರ ಅನುಭವವನ್ನು ತೆಗೆದುಕೊಂಡರೂ ಸಂಸಾರದಲ್ಲಿ ಹುರುಳಿಲ್ಲವೆಂಬ ಮಾತು ಎಲ್ಲರ ಬಾಯಲ್ಲಿಯೂ ಬಂದು ನಿರಾಶೆಯ ನಿಟ್ಟುಸಿರನ್ನು ಹೊರಡಿಸುವದು. ಸಾಮಾನ್ಯವಾಗಿ ಈ ಮಾತು ತುದಿನಾಲಿಗೆಯದೆಂದು ಕಂಡರೂ ಅದರ ಅರ್ಥವು ಕಣ್ಣಿಗೆ ಕಟ್ಟಿದ ಹಾಗೆ ಇರುವದು. ಹೇಗೆಂದರೆ:- ಸಂಸಾರವನ್ನು ಸುಖಮಯವಾಗಿ ಮಾಡಿಕೊಳ್ಳಬೇಕೆಂದು ಹಗಲೂ ಇರುಳೂ ಯುಗಯುಗಾಂತರಗಳಿಂದ ಪ್ರಯತ್ನವು ನಡೆದಿದ್ದರೂ ಸಂಸಾರದಲ್ಲಿರುವ ಯಾವನಿಗೂ ತಾನು ಸುಖಿಯಾದೆನೆನಿಸಿದ್ದು ಕಂಡು ಬಂದಿಲ್ಲ. ಕೆಲಕೆಲವು ಮಟ್ಟಿಗೆ ಸುಖವು ಕಂಡರೂ ಅದು ದುಃಖದಲ್ಲಿಯೇ ಕೊನೆಗಾಣುತ್ತ ಬಂದಿರುವದು ಎಲ್ಲರ ಅನುಭವದಲ್ಲಿಯೂ ಇದೆ. ಹೀಗೆ ಎಲ್ಲರಿಗೂ ತಿಳಿದ ವಿಷಯವನ್ನು ಇಲ್ಲಿ ಕಿವಿಯಲ್ಲಿ ಊದುವದೇನೆಂದು ಕೇಳಬಹುದು. ಈ ವಿಷಯದಲ್ಲಿ ಹಿಂದಿನ ಮಹನೀಯರ ಅನುಭವದ ಮಾತುಗಳ ಬೆಂಬಲವನ್ನು ತೋರಿಸಿ ಅದನ್ನು ಗಟ್ಟಿಗೊಳಿಸುವದೇ ಇಲ್ಲಿಯ ಹೆಚ್ಚುಗಾರಿಕೆ. ಆದ್ದರಿಂದ ಇದರಲ್ಲಿ ಶ್ರುತಿಸ್ಮೃತಿಗಳ ಸಮ್ಮೇಲನವಾಗಿರುವಂತೆ ಅವುಗಳ ತಾತ್ಪರ್ಯಗಳನ್ನೆ ಒಂದಕ್ಕೊಂದು ತಾಕುಹಾಕಿ ಸಾಲುಸಾಲಾಗಿ ಪೋಣಿಸಿ ಅವು ಎದ್ದು ಕಾಣುವಂತೆ ಮಾಡಲಾಗಿರುವದು.

**(ಅ)** ಇಂದ್ರಿಯಗಳ ಮತ್ತು ವಿಷಯಗಳ ಸೇರಿಕೆಯು ಸುಖವನ್ನೂ ದುಃಖವನ್ನೂ ಬೆರೆಸಿಕೊಡುವಂಥದ್ದು, ಬಂದು ಹೋಗತಕ್ಕದ್ದು ಮತ್ತು ನೆಲೆಯಾಗಿ ನಿಲ್ಲತಕ್ಕದ್ದಲ್ಲ (ಭ ೨-೧೪). **(ಆ)** ಈ ಸೇರಿಕೆಯ ಸುಖವು ಮೊದಮೊದಲು ಅಮೃತದಂತಿದ್ದು ಬಲವನ್ನೂ ವೀರ್ಯವನ್ನೂ ರೂಪವನ್ನೂ ಪ್ರಜ್ಞೆಯನ್ನೂ ಹಣವನ್ನೂ ಉತ್ಸಾಹವನ್ನೂ ಹಾಳುಮಾಡಿ ಅಧರ್ಮದಿಂದ ಉಂಟಾಗುವ ನರಕಕ್ಕೆ ಗುರಿಮಾಡುವದರಿಂದ ಕೊನೆಗೆ ವಿಷದಂತಾಗುವದು (ಭ ೧೮-೩೮). **(ಇ)** ಇಂಥ ಸುಖದ ಸವಿಗೆ ಮರುಳಾಗಿ ಮುಖವನ್ನು ಒಮ್ಮೆ ಅರಳಿಸಿಕೊಳ್ಳುತ್ತ ಒಮ್ಮೆ ಸುಕ್ಕಿಸಿಕೊಳ್ಳುತ್ತ ವ್ಯವಹರಿಸುತ್ತಿರುವದೇ ಸಂಸಾರ.

ಇದೊಂದು ಬಗೆಯ ಅಶ್ವತ್ಥವೃಕ್ಷ. ಮಾಯೆಯೆಂಬ ಶಕ್ತಿಯಿಂದ ಕೂಡಿದ ಬ್ರಹ್ಮವೇ ಇದರ ಬೇರು. ಅದು ಸೂಕ್ಷ್ಮವಾದದ್ದರಿಂದಲೂ ಕಾರಣದ ರೂಪವಾದದ್ದರಿಂದಲೂ ನೆಲೆಯಾಗಿರುವಂಥದ್ದಾದ್ದರಿಂದಲೂ ಮೇಲುಗಡೆಗಿರುವದೆನಿಸುವದು. ಬುದ್ಧಿ, ಮನಸ್ಸು-ಮೊದಲಾದವುಗಳೇ ಇದರ ಕೊಂಬೆಗಳು. ಅವು ಕೆಳಗಡೆಗಿರುವವು. ಇದು ನಾಳೆಗಿದ್ದೀತೋ ಇಲ್ಲವೋ ಎನಿಸುವದರಿಂದ ಆ ಅರ್ಥವನ್ನಿಟ್ಟು ಅಶ್ವತ್ಥವೆನಿಸುವದು. ಈ ಸಂಸಾರವೆಂಬ ಅರಳೀಮರವು ಎಂದಿನಿಂದಲೂ ಎಡೆಬಿಡದೆ ಬೆಳೆದುಕೊಂಡು ಬಂದಿದೆ. ಇದಕ್ಕೆ ವೇದಗಳೇ ಎಲೆಗಳು. ಏಕೆಂದರೆ:- ಎಲೆಗಳು ಮರವನ್ನು ಕಾಪಾಡುವಂತೆ ವೇದಗಳು ಧರ್ಮದ ಮತ್ತು ಅಧರ್ಮದ ಫಲಗಳನ್ನು ತೋರಿಸುತ್ತ ಸಂಸಾರವನ್ನು ಬೆಳೆಸಿಕೊಂಡು ಬರುವವು. ಮನುಷ್ಯನ ತಿಳಿವಳಿಕೆಗೂ ಕರ್ಮಕ್ಕೂ ತಕ್ಕ ಫಲವಾಗಿ ಕೆಳಗಿನದಾದ ಮನುಷ್ಯಜನ್ಮವನ್ನು ಮೊದಲು ಮಾಡಿಕೊಂಡು ಮೇಲಿನದಾದ ಬ್ರಹ್ಮಲೋಕದವರೆಗೂ ಇದರ ಕೊಂಬೆಗಳು ಹರಡಿಕೊಂಡಿರುವವು. ಇವುಗಳಲ್ಲಿ ಸತ್ತ್ವ, ರಜ, ತಮ-ಎಂಬ ಗುಣಗಳಿಂದ ಮೈದುಂಬಿಕೊಳ್ಳುತ್ತಿರುವವು. ಸದ್ದು, ಸೋಂಕು-ಮೊದಲಾದ ವಿಷಯಗಳೇ ದೇಹವೆಂಬ ಕೊಂಬೆಗಳಲ್ಲಿ ಮೊಳೆತ ಚಿಗರುಗಳು. ಈ ಮರದ ತಾಯಿಬೇರು ಬ್ರಹ್ಮವೆಂದು ಮೇಲೆ ಹೇಳಿದ್ದಾಗಿದೆಯಷ್ಟೆ. ಧರ್ಮದಲ್ಲಿಯೋ ಅಧರ್ಮದಲ್ಲಿಯೋ ಮುಂದುವರಿಸುವಂಥ ಪ್ರೇಮ, ಹಗೆತನ-ಮೊದಲಾದ ವಾಸನೆಗಳು ಕೆಳಗಡೆಗೆ ಇಳಿದಿರುವ ಮರಿಬೇರುಗಳು. ಇದು ನೋಡಬೇಕೆಂದರೆ

ಸಿಕ್ಕುವ ಮರವಲ್ಲ. ಏಕೆಂದರೆ: ಇದು ಕನಸಿನಂತೆಯೋ ಬಿಸಿಲದೊರೆಯಂತೆಯೋ ಆಕಾಶದ ಅರಮನೆಯಂತೆಯೋ ಬರೀತೋರಿಕೆಯದಾಗಿರುವದು. ತೋರಿ ಹಾರುವ ಇದಕ್ಕೆ ತುದಿಮೊದಲುಗಳೂ ಇಲ್ಲ, ನಡುವೆಯೂ ಇಲ್ಲ. ಇದರ ಬೇರುಗಳೆಲ್ಲ ಬಲವಾಗಿ ಆಳಕ್ಕೆ ಇಳಿದುಕೊಂಡಿರುವವು.

—(ಭ ೧೫ ೧...೩)

ಇದರ ವರ್ಣನೆಯು ಇನ್ನೊಂದು ಬಗೆಯನ್ನು ನೋಡಿ. ಇದು ಕತ್ತರಿಸಿ ಹೋಗುವ ಹುಟ್ಟುಗುಣವಾದ್ದರಿಂದ ಮರಕ್ಕೆ ಹೋಲುವದು. ಇದು ಗಳಿಗೆಗೊಂದೊಂದು ಬಗೆಯಾಗುವದು; ನಾಳೆಯು ಕಂಬದಂತೆ ಉಳಿಯಲಿಲ್ಲವು. ಅನೇಕರು ಅನೇಕ ಬಗೆಯಾಗಿ ವರ್ಣಿಸುವದಾಗಿದ್ದು ನಿಜವನ್ನು ನೋಡಿದರೆ ಇದು ಹೀಗೆಯೇ ಇರುವದೆಂದು ತಿಳಿಯುವದಕ್ಕಾಗದಿರುವದು; ಅಜ್ಞಾನ, ಬಯಕೆ, ಕರ್ಮ-ಎಂಬ ಕಣ್ಣಿಗೆ ಕಾಣದ ಬೀಜದಿಂದ ಹುಟ್ಟಿದೆ. ಸೂಕ್ಷ್ಮದೇಹಗಳ ಒಟ್ಟಿನ ಅಭಿಮಾನಿಯಾದ ಹಿರಣ್ಯಗರ್ಭನೆ ಇದರ ಮೊಳಕೆ. ಬಯಕೆಗಳೇ ಇದನ್ನು ಬೆಳೆಸುವ ನೀರು. ಬುದ್ಧಿ, ಇಂದ್ರಿಯಗಳು, ವಿಷಯಗಳು-ಇವೇ ಚಿಗುರುಗಳು. ವಿದ್ಯೆ, ತಪಸ್ಸು, ದಾನ-ಮೊದಲಾದ ಕ್ರಿಯೆಗಳೇ ಇದರ ಹೂಗಳು. ಸುಖದುಃಖಗಳ ವೇದನೆಯೇ ಇದರ ರಸ. ಇದು ಬ್ರಹ್ಮನೇ ಮೊದಲಾದ ಸಕಲರು ವಾಸಿಸುವ ಲೋಕಗಳೆಂಬ ಗೂಡುಗಳುಳ್ಳದ್ದು. ಪ್ರಾಣಿಗಳು ಸುಖದಿಂದಲೋ ದುಃಖದಿಂದಲೋ ನಗುವ, ಅಳುವ, ಚಪ್ಪಾಳೆಯಿಕ್ಕುವ ಮತ್ತು ಬಾಯಿಬಡಿದುಕೊಳ್ಳುವ ಗದ್ದಲವೇ ಈ ಮರದ ಸದ್ದು. ಬಯಕೆ ಮತ್ತು ಕರ್ಮಗಳೆಂಬ ಬಿರುಗಾಳಿಗಳಿಂದ ಇದು ಯಾವಾಗಲೂ ಹೊಯ್ದಾಡುತ್ತಿರುವದು. ಸ್ವರ್ಗ, ನರಕ, ಪಶು, ಪ್ರೇತ-ಮೊದಲಾದ ಜನ್ಮಗಳೇ ಇದರ ಕೊಂಬೆಗಳು. —(ಕ ೬-೧)

---

* ಹೀಗೆ ಸಂಖ್ಯೆಗಳ ನಡುವೆ ಚುಕ್ಕೆಗಳಿದ್ದರೆ ಮೊದಲನೆಯ ಸಂಖ್ಯೆಯಿಂದ ಕೊನೆಯಲ್ಲಿರುವ ಸಂಖ್ಯೆಯವರೆಗಿನ ಶ್ಲೋಕಗಳದೋ ಮಂತ್ರಗಳದೋ ಆಯಾ ಸ್ಥಲಕ್ಕೆ ತಕ್ಕ ಅರ್ಥ.

## ಸಂಸಾರದಲ್ಲಿ ಹುರುಳಿಲ್ಲ

ಇದು ಹೀಗಿದ್ದರೂ ಇದರ ಮೇಲೆ ಯಾರಿಗೂ ಬೇಸರ ಉಂಟಾಗುವದಿಲ್ಲ. ಇದಕ್ಕಿಂತ ಹೆಚ್ಚಿನ ಸುಖದ ಸುಳಿವು ತಿಳಿಯದಿರುವದೇ ಇದಕ್ಕೆ ಕಾರಣ. ಅದು ಯಾರ ಮನಸ್ಸಿಗೆ ಹೊಳೆಯುತ್ತದೋ ಅವರು ಈ ಮರವನ್ನು ಎಡಗಾಲಿಂದೊದೆಯದೆ ಬಿಡುವದಿಲ್ಲ. ಇದು ಹುರುಳಿಲ್ಲದ್ದೆಂದು ಸರ್ವಸಾಮಾನ್ಯರಿಗೆ ಹೊಳೆಯದಿದ್ದರೂ ಪುಣ್ಯಶಾಲಿಗಳಿಗೆ ಹೊಳೆಯುವದು. ಯಮನು ಏನೋ ಒಂದು ಪ್ರಸಂಗಕ್ಕೆ ಕಟ್ಟುಬಿದ್ದು ನಚಿಕೇತನೆಂಬುವನಿಗೆ ಮೂರು ವರಗಳನ್ನು ಕೊಟ್ಟನು. ನಚಿಕೇತನು ಅನ್ನದಾನದಲ್ಲಿ ಹೆಸರುಗೊಂಡ ಯಾಜ್ಞಿಕರ ಮನೆತನದ ಪುಣ್ಯಶಾಲಿಯಾಗಿದ್ದನು. ಅವನು ಮೂರನೆ ವರವನ್ನು ಕೇಳುವ ಸಮಯವು ಒದಗಿದಾಗ ಅವರಿಬ್ಬರಿಗೂ ನಡೆದ ಮಾತುಗಾರಿಕೆಯಲ್ಲಿ ಸಂಸಾರದ ಟೊಳ್ಳು ಹೊರಬಿದ್ದಿರುವದು. ಅದು ಹೇಗೆಂದರೆ:-

**ನಚಿಕೇತ**-ಮನುಷ್ಯನು ಸತ್ತ ಮೇಲೆ ಅವನ ಶರೀರದಿಂದ ಬೇರೆಯಾಗಿ ಮತ್ತೊಂದು ಶರೀರಕ್ಕೆ ಹೋಗಿ ಸೇರಿಕೊಳ್ಳುವ ಆತ್ಮನೆಂಬ ವಸ್ತು ಒಂದುಂಟೆಂದು ಕೆಲವರೂ ಇಲ್ಲವೆಂದು ಕೆಲವರೂ ಹೇಳುವರು. ಇದರ ನೆಲೆ ನನಗೆ ತಿಳಿಯದಾಗಿದೆ. ಮುಂದಿನ ನನ್ನ ಒಳ್ಳೆ ಅಥವಾ ಕೆಟ್ಟ ಗತಿಯು ಈ ತಿಳಿವಳಿಕೆಯ ಬಾಲವನ್ನು ಹಿಡಿದುಕೊಂಡಿರುವಂತೆ ತೋರುತ್ತದೆ. ಆದ್ದರಿಂದ ಇದನ್ನು ನನಗೆ ತಿಳಿಸು. —(ಕ ೧-೨೦)

**ಯಮ**-ಅಪ್ಪ, ಹಿಂದೆ ದೇವತೆಗಳು ಕೂಡ ಈ ವಿಷಯದಲ್ಲಿ ಸಂಶಯವನ್ನು ಹೊಂದಿದರು. ಇದು ಬಹು ಸೂಕ್ಷ್ಮವಾದ ವಿಷಯ; ಎಷ್ಟು ಬಾರಿ ಕೇಳಿ ತಿಳಿದರೂ ಸಾಮಾನ್ಯರಿಗೆ ಎಂದಿಗೂ ಚೆನ್ನಾಗಿ ತಿಳಿಯತಕ್ಕದ್ದಲ್ಲ. ಆದ್ದರಿಂದ ಸಂಶಯಕ್ಕೆ ದಾರಿ ಇಲ್ಲದ ಇನ್ನೊಂದನ್ನು ಕೇಳು. ಹಣಗಾರನು ಸಾಲಗಾರನನ್ನು ಪೀಡಿಸುವಂತೆ ನೀನು ನನ್ನನ್ನು ಈ ವಿಷಯದಲ್ಲಿ ಪೀಡಿಸಬೇಡ. —(ಕ ೧-೨೧)

**ನ**-ಓಹೋ ! ಈ ವಿಷಯದಲ್ಲಿ ದೇವತೆಗಳೂ ಸಂಶಯಗೊಂಡು ವಿಚಾರ ಮಾಡಿದರಲ್ಲವೆ ? ನೀನು ಅದನ್ನು ಚೆನ್ನಾಗಿ ತಿಳಿಸಬಲ್ಲವನು. ನಿನ್ನ ಹಾಗೆ ಚೆನ್ನಾಗಿ ತಿಳಿಸಬಲ್ಲ ಪಂಡಿತರು ಬೇರೆ ಯಾರೂ ಇಲ್ಲ. ನಾನು ಕೇಳುವದು ಶಾಶ್ವತಸುಖದ ದಾರಿ. ಇದಕ್ಕೆ ಸಮಾನವಿನ್ನೊಂದಿಲ್ಲ. ಉಳಿದವುಗಳೆಲ್ಲ ಸ್ವಲ್ಪಗಳಿಗೆಯ ಬಾಳಿನ ಸುಖವನ್ನು ಮಾತ್ರ ಕೊಡತಕ್ಕವು.— (ಕ೧-೨೨)

**ಯ**-ಮಗು, ನೂರು ವರ್ಷ ಬಾಳುವಂಥ ಮಕ್ಕಳು ಮೊಮ್ಮಕ್ಕಳನ್ನು ಬಯಸು ; ಬೇಕಾದಷ್ಟು ದನಕರುಗಳನ್ನೂ ಆನೆಗಳನ್ನೂ ಹಣಗಳನ್ನೂ ಕುದುರೆಗಳನ್ನೂ ವಿಸ್ತಾರವಾದ ಭೂಮಂಡಲದ ಏಕಚ್ಛತ್ರಾಧಿಪತ್ಯವನ್ನೂ ಬಯಸು ; ತಾನು ಬೇಗ ಸಾಯುವವನಾದರೆ ಇವೆಲ್ಲ ವ್ಯರ್ಥವಾದ್ದರಿಂದ ನಿನಗೆ ಎಷ್ಟು ಕಾಲ ಬದುಕಬೇಕೆನಿಸುವದೊ ಅಷ್ಟುಕಾಲ ಬಲವಾದ ಶರೀರವನ್ನೂ ಪುಷ್ಟಿಯಾದ ಇಂದ್ರಿಯಗಳನ್ನೂ ಹೊಂದಿರು ; ಇದಕ್ಕೆ ಸಮನೆಂದು ನಿನಗೆ ಇನ್ನೇನು ತೋರಿದರೂ ಬಯಸು ; ಬೇಕಾದಷ್ಟು ಬಂಗಾರ, ರತ್ನ, ಹಣ-ಇವುಗಳನ್ನೂ ಇವುಗಳೊಡನೆ ಎಂದೆಂದಿಗೂ ಬದುಕಿರುವದನ್ನೂ ಬಯಸು ; ಬಹಳ ಹೇಳುವದೇನು ! ಈ ದೊಡ್ಡ ಜಗತ್ತಿಗೆಲ್ಲ ಅರಸಾಗು. ಮನುಷ್ಯರಿಗೆ ಮಾತ್ರವಲ್ಲದೆ ದೇವತೆಗಳಿಗೆ ದೊರೆಯತಕ್ಕ ಬಯಕೆಗಳು ಕೂಡ ನಿನಗೆ ದೊರೆಯುವಂತೆ ನಾನು ಮಾಡುತ್ತೇನೆ. ನಾನು ದೇವವರ್ಗದವನು. ನಾನು ಮನಸ್ಸಿನಲ್ಲಿ ಎಣಿಸಿದ್ದು ನಡೆದೇ ತೀರುವದು. ಮನುಷ್ಯರ ಲೋಕದಲ್ಲಿ ದೊರೆಯಲಾಗದಂಥ ಬಯಕೆಗಳನ್ನು ಕೂಡ ಬೇಕಾದ ಹಾಗೆ ಬಯಸು. ಪುರುಷರನ್ನು ಮೋಹಗೊಳಿಸುವ ಈ ದೇವಲೋಕದ ಅಪ್ಸರಸ್ತ್ರೀಯರು, ಈ ತೇರುಗಳು, ಈ ಮಂಗಲವಾದ್ಯಗಳು-ಇವೆಲ್ಲ ನಮ್ಮಂಥವರ ಅನುಗ್ರಹದ ಹೊರತು ಮನುಷ್ಯಲೋಕದವರಿಗೆ ದೊರೆಯತಕ್ಕವುಗಳಲ್ಲ. ನಾನು ಇವುಗಳನ್ನೆಲ್ಲ ಕೊಡುತ್ತೇನೆ. ಇವುಗಳಿಂದ ನೀನು ಸೇವೆಯನ್ನು ತೆಗೆದುಕೊ. ಈ ಸ್ತ್ರೀಯರಿಂದ ನೀನು ಕಾಲು ತೊಳಿಸಿಕೊಳ್ಳುವದೇ ಮೊದಲಾದ ಉಪಚಾರವನ್ನು ಹೊಂದು. ನಚಿಕೇತ, ಕಾಗೆಯ ಹಲ್ಲನ್ನು ಎಣಿಸ ಹೋಗುವ ವ್ಯರ್ಥಪ್ರಯತ್ನದಂತೆ 'ಸತ್ತಮೇಲೆ ಆತ್ಮವೆಂಬುದೊಂದುಂಟೋ ಇಲ್ಲವೋ?' ಎಂಬ ಪ್ರಶ್ನೆಯ ಗಂಟುಬಿಚ್ಚೆಂದು ಮಾತ್ರ ನನ್ನನ್ನು ಕೇಳಬೇಡ.

(ಕ ೧-೨೩...೨೫)

**ನ**-ಆರ್ಯ, ನೀನು ಹೇಳಿದ ಸುಖಸಾಧನಗಳೆಲ್ಲ ‘ ನಾಳೆಗಿರುವವೊ ಇಲ್ಲವೊ ? ’ ಎಂದು ಸಂಶಯಗೊಳ್ಳುವದಕ್ಕೆ ತಕ್ಕವುಗಳು. ಸ್ವಾಮಿ, ಮೃತ್ಯುವೆ, ಇವೆಲ್ಲ ಇಂದ್ರಿಯಗಳ ಜೊಗರನ್ನು ಹೋಗಲಾಡಿಸುವವು. ಅಪ್ಸರಸ್ತ್ರೀಯರೇ ಮೊದಲಾದ ಭೋಗಗಳು ನಮಗೆ ಕೆಡುಕೇ ಸರಿ. ಏಕೆಂದರೆ:– ಇವು ಧರ್ಮ, ವೀರ್ಯ, ಪ್ರಜ್ಞೆ, ತೇಜಸ್ಸು- ಮೊದಲಾದವುಗಳೆನ್ನೆಲ್ಲ ನಾಶಗೊಳಿಸುವವು. ಬಹುಕಾಲ ಬದುಕುವಂತೆ ಮಾಡುತ್ತೇನೆಂದೆಯಷ್ಟೆ. ಬ್ರಹ್ಮನ ಆಯುಷ್ಯ ಕೂಡ ಕಡಿಮೆಯೆ. ಇನ್ನು ನಮ್ಮವರ ಪಾಡೇನು! ಆದ್ದರಿಂದ ಈ ತೇರುಗಳು, ವಾದ್ಯಗಳು, ಕುಣಿತಗಳು–ಇವೆಲ್ಲ ನಿನಗೇ ಇರಲಿ. ಮನುಷ್ಯನಿಗೆ ಹಣವನ್ನು ಕೊಟ್ಟು ತೃಪ್ತಿಗೊಳಿಸುವದಾಗುವದಿಲ್ಲ. ಹಣವೇ ಸುಖದ ಸಾಧನವೆಂದು ಎಲ್ಲಿಯೂ ನಿಶ್ಚಯಿಸೇ ಹಣಗಳಿಸುವರಾದರೂ ಹಣದಿಂದ ಯಾರಿಗೂ ತೃಪ್ತಿಯಾದದ್ದು ಕಂಡಿಲ್ಲ. ನಮಗೆ ಹಣದ ಬಯಕೆ ಇದ್ದರೆ ನಿನ್ನ ದರ್ಶನದ ಫಲವಾಗಿಯೇ ಅದು ನಮಗೆ ದೊರೆಯುವದು. ಬಹುಕಾಲ ಬದುಕುವ ಮಾತೂ ಅಷ್ಟೆ. ನೀನು ನಮ್ಮ ಮೇಲೆ ಅಧಿಕಾರಿಯಾದ ಯಮನಾಗಿರುವವರೆಗೂ ನೀನು ಬದುಕಬಹುದು. ನಿನ್ನ ದರ್ಶನವನ್ನು ಪಡೆದ ಮನುಷ್ಯನು ಬೇಗ ಸಾಯುವವನೂ ದರಿದ್ರನೂ ಹೇಗೆ ಆದಾನು? ಆದ್ದರಿಂದ ನನಗೆ ಆತ್ಮನ ವಿಷಯವನ್ನೇ ಹೇಳಬೇಕು. ಮುಪ್ಪು ಸಾವೂ ಇಲ್ಲದಂಥವರ ಬಳಿಗೆ ಬಂದು ಅವರಿಂದ ಪಡೆಯಬಹುದಾದ ಹೆಚ್ಚಿನ ಪ್ರಯೋಜನವನ್ನರಿತವನು ಮುಪ್ಪು ಸಾವೂ ಉಳ್ಳ ಅವಿವೇಕಿಗಳು ಬೇಡುವಂತೆ ಮೂರು ದಿನದ ಬಾಳಿನ ಮಕ್ಕಳಿಗೂ ಹಣಕ್ಕೂ ಏಕೆ ಬಾಯಿನೀರು ಸುರಿಸುವನು? ಹುರುಳಿಲ್ಲವೆಂದು ತಿಳಿದದ್ದನ್ನು ವಿವೇಕಿಯು ಎಂದೂ ಬಯಸುವದಿಲ್ಲ. ಸಾಮಾನ್ಯರಾದ ಜನರು ಮಕ್ಕಳ ವಿಷಯಕ್ಕೂ ಹಣದ ವಿಷಯಕ್ಕೂ ಮರುಳಾದರೂ ನಾನು ಆ ಬಲೆಗೆ ಬೀಳಲಾರೆನು. ಈ ಅಪ್ಸರಸ್ತ್ರೀಯರೇ ಮೊದಲಾದವರ ಬಣ್ಣವು ಯಾವಾಗಲೂ ಹೀಗೆಯೇ ಇರುವದಿಲ್ಲ. ಆದ್ದರಿಂದ ಮೂರು ದಿನದ ಬಾಳಿನ ಸುಖಸಾಧನಗಳಿಂದ ನನ್ನನ್ನು ಒಳಗುಮಾಡಿಕೊಳ್ಳುವದಕ್ಕೆ ಯತ್ನಿಸಬೇಡ. ನೀನು ಪರಲೋಕವಿಷಯಕವಾದ ವಿಚಾರವನ್ನು ನನಗೆ ತಿಳಿಸು. ಇಂಥ ಗಂಭೀರವಾದ ವಿಚಾರವನ್ನು ಬಿಟ್ಟು ಅವಿ

ವೇಕಿಗಳು ಕೇಳುವ ಕೀಳುವರಪನ್ನು ನಚಿಕೇತನು ಕನಸಿನಲ್ಲಿಯೂ ಮನಸ್ಸಿಗೆ ತಂದುಕೊಳ್ಳುವದಿಲ್ಲ. —(೧೧-೨೬..೨೯)

## ಸಾ ವಿ ನ ಗಾ ಬ ರಿ

ಹೀಗೆ ಪೂರ್ವಿಕರಾದ ಮಹಾಮಹಾವಿವೇಕಿಗಳ ಅಭಿಪ್ರಾಯವಿರುವದರಿಂದ ವಿಷಯಗಳ ಮತ್ತು ಇಂದ್ರಿಯಗಳ ಸೇರಿಕೆಯಿಂದ ಆಗುವ ಸುಖವು ಎಷ್ಟು ಮಾತ್ರವೂ ಬಯಸತಕ್ಕದಲ್ಲವೆಂದು ಸರ್ವಾನುಭವಸಿದ್ಧವಾಯಿತು. ಹೀಗೆ ನಮ್ಮ ಅನುಭವವನ್ನು ದೊಡ್ಡದೊಡ್ಡವರ ಅನುಭವದೊಡನೆ ಒರೆಹಚ್ಚಿ ನೋಡಿದ್ದಾಯಿತು. ವೇದವು ಕೂಡ ಸಂಸಾರದಲ್ಲಿ ಹುರುಳಿಲ್ಲವೆಂದ ಮೇಲೆ ಇನ್ನು ಮಾತಿಲ್ಲ. ಸಂಸಾರದಲ್ಲಿ ಹುರುಳಿಲ್ಲವೆಂಬುದಿಷ್ಟೇ ದೋಷವಲ್ಲ; ಅದರ ಒಡ್ಡಾಟಗಳು ಎಂಥ ಕೆಚ್ಚೆದೆಯುವನಿಗಾದರೂ ಗಾಬರಿಗೊಳಿಸುವ ಹಾಗಿವೆ. ಸುಖದುಃಖಗಳನ್ನು ಬೆರೆಸಿಕೊಂಡು ಅನುಭವಿಸುವದೇ ಸಂಸಾರವೆಂದು ಹಿಂದೆ ಹೇಳಿದ್ದು ತೇಲಿಸಿ ಆಡಿದ ಮಾತು. ಸಂಸಾರವೆಂಬ ಮಾತಿಗೆ ಸುಮ್ಮಸುಮ್ಮನೆ ಸುತ್ತುತ್ತಿರುವದೆಂದರ್ಥ. ಹುಟ್ಟುವದು, ಸಾಯುವದು, ಮತ್ತೆ ಹುಟ್ಟುವದು, ಮತ್ತೆ ಸಾಯುವದು-- ಹೀಗೆ ಕೊನೆ ಇಲ್ಲದೆ ಸುತ್ತುತ್ತಿರುವದೇ ಸಂಸಾರದ ಮೂಲರೂಪ. ಇದರ ಒಳಹೊಕ್ಕು ನೋಡಿದರೆ ಸಂಸಾರದಲ್ಲಿರುವ ಒಡ್ಡಾಟಗಳು ಎದ್ದು ಕಾಣುವವು. ಇವುಗಳನ್ನು ಕಂಡಾಗ ಮಾತ್ರವೆ ಸಂಸಾರದ ನಿಜವಾದ ಬಣ್ಣವನ್ನು ಕಂಡಂತಾಗುವದು. ಈಗ ನಾವು ಆ ಒಳವೈಯ ಹೇಸಿಕೆಯನ್ನು ನೋಡೋಣ.

ಮನುಷ್ಯನಿಗೆ ಸಾವೆಂಬ ಮಾತೇ ಪೈಲಿಗೆಯುಪೆಸಿಸಿರುವದು. ಮದುವೆ ಮೊದಲಾದ ಮಂಗಲಕಾರ್ಯಗಳ ಮಾತು ನಡೆಯುವಾಗ ಸಾವಿನ ಮಾತು ಬಂದರೆ ಸಾಂಪ್ರದಾಯಿಕರು ಅದನ್ನು ಅಪಶಕುನವೆಂದು ಭಾವಿಸುವರು. ಹೀಗೆ ಸಾವೆಂಬ ಮಾತೇ ಎಲ್ಲರಿಗೂ ಓಕರಿಕೆಯನ್ನುಂಟುಮಾಡುತ್ತಿರುವಾಗ ಸಾವಿನ ಸ್ವರೂಪವು ಎಷ್ಟು ಎದೆಗೆಡಿಸುವದೆಂಬದನ್ನು ಹೆಚ್ಚು ಹೇಳಬೇಕಾದದ್ದೇ ಇಲ್ಲ. ಸಾವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಮನು-

ಷ್ಯನು ಎಂಥ ಮಹತ್ಪ್ರಯತ್ನವನ್ನಾದರೂ ಮಾಡಿಯೇ ತೀರುವನು. ತನಗೆ ಸಾವು ಹತ್ತಿರಕ್ಕೆ ಬಂತೆಂದು ತಿಳಿಯುತ್ತಲೆ ಅವನ ಮುಖಕ್ಕೆ ಕಪ್ಪೇರುವದು. ಸಾವಿನ ಸಂಕಟವು ಮೊದಲಾಗುತ್ತಲೆ, ಅದನ್ನು ಅನುಭವಿಸುವವನ ಮಾತೊಂದು ಕಡೆ ಇರಲಿ, ಅದನ್ನು ನೋಡುವವರು ಕೂಡ ಭೂಮಿಗಿಳಿದು ಹೋಗುವರು. ಆಗ ಅವನಿಗೆ ಏನಾಗುವದೊ? ಸತ್ತ ಮೇಲೆ ಅವನು ಎಲ್ಲಿಗೆ ಹೋಗುವನೊ? ಅದು ಯಾವ ಪ್ರಾಪಂಚಿಕರಿಗೂ ತಿಳಿಯದ ಮಾತು. ಸರ್ವಜ್ಞನಾದ ಪರಮೇಶ್ವರನ ಮುಖದಿಂದ ಬಂದದ್ದೆನಿಸಿಕೊಂಡಿರುವ ವೇದವು ಈ ವಿಚಾರವನ್ನೊಳಗೊಂಡಿರುವದು. ಅದನ್ನು ಇಲ್ಲಿ ಸ್ವಲ್ಪ ಮಟ್ಟಿಗೆ ಅನುವಾದ ಮಾಡಲಾಗುವದು.

ಮನುಷ್ಯನು ಪ್ರಯತ್ನಿಸಿದರೆ ತನಗೆ ಸಾವು ಬರುವದನ್ನು ತಾನು ಕಾಣಬಹುದು. ಹೇಗೆಂದರೆ: ಮನುಷ್ಯನು ಉಂಡ ಅನ್ನವು ಹೊಟ್ಟೆಯಲ್ಲಿರುವ ಒಂದು ಬಗೆಯ ಅಗ್ನಿಯಿಂದ ಬೆಂದು ಕರಗಿ ನೀರಾಗಿ ರಕ್ತಕ್ಕೆ ಸೇರುವದಷ್ಟೆ. ಆ ಬಗೆಯ ಕೆಲಸವು ನಡೆಯುತ್ತಿರುವಾಗ ಕುದಿಯುವ ಸದ್ದು ಏಳುವದು. ನಾವು ಕಿವಿಯ ತೂತನ್ನು ಬೆಟ್ಟಿನಿಂದ ಮುಚ್ಚಿಕೊಂಡರೆ ಒಳಗೇ ನಮಗೆ ಆ ಸದ್ದು ಕೇಳಿಸುವದು. ಜೀವನು ಆ ದೇಹದಿಂದ ಹೊರಬೀಳುವ ಸಮಯದಲ್ಲಿ ಆ ಅಗ್ನಿಯು ತಣ್ಣಗಾಗಿ ಆ ಬೇಗೆಯ ಕೆಲಸವು ನಿಂತು ಕುದಿಯುವ ಸದ್ದಡಗುವದು. ಆದ್ದರಿಂದ ಆಗ ಕಿವಿಯ ತೂತನ್ನು ಬೆಟ್ಟಿನಿಂದ ಮುಚ್ಚಿಕೊಂಡರೆ ಯಾವ ಸದ್ದೂ ಕೇಳಬರುವದಿಲ್ಲ. ಇದರಿಂದ ಜೀವನು ಆ ಶರೀರದಿಂದ ಹೊರಬೀಳುವ ಸಡಗರದಲ್ಲಿದ್ದಾನೆಂದು ತಿಳಿಯಬೇಕು. —(ಬೃ ೫-೮)

ನೋಡುವ ಇಂದ್ರಿಯವು ಕಣ್ಣುಗಳಲ್ಲಿಯೂ ಕೇಳುವ ಇಂದ್ರಿಯವು ಕಿವಿಗಳಲ್ಲಿಯೂ ಹೀಗೆಯೇ ಬೇರೆಬೇರೆ ಇಂದ್ರಿಯಗಳು ಬೇರೆಬೇರೆ ತಮ್ಮ ಗೂಡುಗಳಲ್ಲಿರುವವಷ್ಟೆ. ದೇಹೇಂದ್ರಿಯಗಳ ಒಡೆಯನಾದ ಜೀವನು ದೇಹದಿಂದ ಹೊರಬೀಳುವಾಗ ಆ ಗೂಡುಗಳಲ್ಲಿರುವ ಇಂದ್ರಿಯಗಳನ್ನು ಸೆಳೆದುಕೊಳ್ಳುತ್ತಾನೆ. ಹೂಗಳಿಂದ ಸುವಾಸನೆಯನ್ನು ಸೆಳೆದುಕೊಂಡು

ಹೋಗುವ ಗಾಳಿಯಂತೆ ಇಂದ್ರಿಯಗಳನ್ನು ಸೆಳೆದುಕೊಂಡ ಜೀವನು
ಮತ್ತೊಂದು ದೇಹದೊಳಕ್ಕೆ ತೂರಿಕೊಳ್ಳುವಾಗಲೂ ಆ ಇಂದ್ರಿಯಗಳೊಡ
ನೆಯೇ ನುಸುಳುತ್ತಾನೆ. —(ಭಗ೧೫—೭,೮)

ಜೀವನು ಒಂದು ದೇಹವನ್ನು ಬಿಟ್ಟು ಇನ್ನೊಂದಕ್ಕೆ ತೆರಳುವಾಗ
ಅವನ ಒದ್ದಾಟಗಳು ಕಾಣುವವು. ಅವನು ತನ್ನ ಹೆಜ್ಜೆಯನ್ನು ಮುಂದಿಡು
ವದಕ್ಕೆ ಯತ್ನಿಸುತ್ತಲೆ ಉಸಿರು ಮೇಲುಗಡೆಗೇರುತ್ತ ಉಬ್ಬಸ ಉಂಟಾಗು
ವದು. ಒರಳು, ಒನಕೆ, ಬೀಸುವ ಕಲ್ಲು, ಹಾರೆ-ಮೊದಲಾದ ಭಾರವಾದ
ಪದಾರ್ಥಗಳಿಂದ ಗಿಟ್ಟಿಗಿರದಿರುವ ಬಂಡಿಯು ಘರ್ಘರ್ ಎಂದು ಸದ್ದು
ಮಾಡುತ್ತ ಮೆಲ್ಲಗೆ ಮುಂದಕ್ಕೆ ಸಾಗುವಂತೆ ಮರ್ಮಸ್ಥಾನಗಳ ಕೊರೆತ
ದಿಂದ ಆಗುವ ದುಃಖದಿಂದ ದೀನನಾಗಿ ಜೀವನು ನೋಡುವವರಿಗೆ ಹೆದರಿ
ಕೆಯಾಗುವಂತೆ ನರಳುತ್ತ ದೇಹದಿಂದ ಹೊರಡುವನು. ಆಗ ಅವನ ನೆನ
ಪೆಲ್ಲ ಹಾರಿಹೋಗಿರುವದು. ತನ್ನ ಹಿತಕ್ಕಾಗಿ ಅವನು ಆಗ ಏನು ಮಾಡಿ
ಕೊಳ್ಳುವದಕ್ಕೂ ಕೈಲಾಗದಿರುವನು. ಅವನ ಮನಸ್ಸು ಅವನ ಕೈತಪ್ಪಿ
ಹೋಗಿರುವದು. ಹೀಗಿರುವದರ ಜೊತೆಗೆ ಅವನ ಮೈ ಎಲ್ಲ ಮರದ ಮೇಲೆ
ತಾನಾಗಿ ಮಾಗಿದ ಹಣ್ಣಿನಂತೆ ಆಗಿ ಬಹು ದಿನದ ಬಾಳುವೆಯ ಫಲವಾಗಿ
ಬಂದ ಮುಪ್ಪಿನಿಂದಲೊ ಜ್ವರ ಮೊದಲಾದ ಬೇನೆಯಿಂದಲೊ ಸಣ್ಣಗೆ ಕಡ್ಡಿಯಾ
ಗಿರುವದು. ಬೇನೆಯಿಂದ ಅನ್ನವನ್ನರಗಿಸುವ ಅಗ್ನಿಯು ಕಳೆಗುಂದಿ ಅನ್ನ
ವನ್ನು ಅಂಬಲಿಯಾಗಿ ಮಾಡದೆ ಹೋಗುವದು. ಅಂಬಲಿಯಾಗದಿರುವ
ಅನ್ನವು ರಕ್ತಕ್ಕೆ ಸೇರಿಕೊಳ್ಳಲಾಗದ್ದರಿಂದ ಅನ್ನರಸದಿಂದ ಬೆಳೆಯುವ ಮೈ
ಅನ್ನರಸವಿಲ್ಲದೆ ಒಣಗುವದು. ಈ ಸ್ಥಿತಿಯಲ್ಲಿ ಮೇಲುಸಿರು ಮೊದಲಾದಾಗ
ಜೀವನು ಶರೀರವನ್ನು ಬಿಡುವನು. ಇವನು ಯಾವಾಗ ಏಕೆ ಬಿಡುವನೆಂದು
ಹೇಳುವಹಾಗಿಲ್ಲ. ಮನುಷ್ಯನು ಯಾವಾಗಲೂ ಮೃತ್ಯುದೇವತೆಯ ಹಲ್ಲು
ಸಂದಿಯಲ್ಲಿ ಸಿಕ್ಕಿಕೊಂಡವನಾಗಿಯೇ ಇರುವನು. ಮಾವಿನ ಹಣ್ಣು, ಅತ್ತಿಯ
ಹಣ್ಣು—ಮೊದಲಾದವು ಗಾಳಿ ಮೊದಲಾದವುಗಳಿಂದ ತೊಟ್ಟಿನಿಂದ ಕಳಚಿ
ಕೊಳ್ಳುವಂತೆ ಜೀವನು ವಾತ, ಪಿತ್ತ,-ಮೊದಲಾದ ಕಾರಣಗಳಿಂದ ಶರೀರ
ದಿಂದ ಕಳಚಿಕೊಳ್ಳುವನು. ಅವನಿಗೆ ಶರೀರದ ಕಣ್ಣು ಮೊದಲಾದ ಅವ

ಯವಗಳ ಸಂಬಂಧವೆಲ್ಲ ಬಿಡುಗಡೆಯಾಗುವದು. ನಿದ್ದೆ ಬಂದಾಗಲೂ ಜೀವನು ಕಣ್ಣು ಮೊದಲಾದ ಅವಯುವಗಳಿಂದ ದೂರನಾಗುವದುಂಟಾದರೂ ಆಗ ಅವನು ತನ್ನ ಶರೀರವು ಅಮುಂಗಲವಾದ ಬದಲಾವಣೆಯನ್ನು ಹೊಂದದಿರುವದಕ್ಕಾಗಿ ಮೂಗಿನಲ್ಲಿ ಉಸಿರಾಡುವ ಪ್ರಾಣವನ್ನು ಅಲ್ಲಿಯೇ ಉಳಿಯಬಿಟ್ಟು ತಾನು ವಿಶ್ರಾಂತಿ ಹೊಂದಿರುವನು. ಈಗ ಅವನು ಆ ಪ್ರಾಣವನ್ನೂ ಸೆಳೆದುಕೊಂಡು ತನ್ನ ತಿಳಿವಳಿಕೆಗೂ ಕರ್ಮಕ್ಕೂ ಅನುಗುಣವಾದ ಮತ್ತೊಂದು ದೇಹವನ್ನು ಹುಡುಕಿಕೊಂಡು ಮುಂದೆ ಸಾಗುವನು. ಮತ್ತೊಂದು ದೇಹವನ್ನು ತಾನೂ ಮಾಡಿಕೊಳ್ಳಲಾರದವನಾಗಿಯೂ ತನಗಾಗಿ ಮಾಡಿಕೊಡಬಲ್ಲ ಆಳುಗಳೂ ಇಲ್ಲದವನಾಗಿಯೂ ಇರುವ ಜೀವನಿಗೆ ಮತ್ತೊಂದು ದೇಹವು ಹೇಗೆ ದೊರೆಯುವದೆಂದು ಯೋಚನೆಯುಂಟಾಗಬಹುದು. ಜೀವನು ಮತ್ತೊಂದು ದೇಹವನ್ನು ಹುಡುಕುವದು ಅಲ್ಲಿ ತನ್ನ ಕರ್ಮದ ಫಲವನ್ನು ಅನುಭವಿಸುವದಕ್ಕಷ್ಟೆ. ಜಗತ್ತೆಲ್ಲ ಜೀವನಿಗೆ ಅವನ ಕರ್ಮದ ಫಲವನ್ನು ಉಣಿಸುವ ಸಾಧನ. ಜಗತ್ತೆಲ್ಲ ಜೀವರ ಕರ್ಮದಿಂದಲೆ ರೂಪುಗೊಂಡದ್ದು. ಆದ್ದರಿಂದ ಎಚ್ಚರದ ಜಗತ್ತು ಕನಸಿನಿಂದ ಏಳುವವನನ್ನು ಎದುರು ನೋಡುತ್ತಿರುವಂತೆ ಒಂದು ದೇಹವನ್ನು ಬಿಟ್ಟ ಜೀವನ ಬರುವಿಕೆಯನ್ನು ಅವನ ಕರ್ಮವು ಎದುರುನೋಡುತ್ತಿರುವದು. ಅರಸನು ಬರುವ ಹೊತ್ತಿಗೆ ಗೌಡನೂ ಶಾನುಭೋಗರೂ ಅವನಿಗಾಗಿ ಅಡಿಗೆಯನ್ನು ಮಾಡಿಕೊಂಡು ಅವನ ಕುಡಿತಕ್ಕೆ ಬೇಕಾದವುಗಳನ್ನು ಸಜ್ಜು ಮಾಡಿಕೊಂಡು 'ಇಗೊ, ಅರಸನು ಬರುತ್ತಾನೆ' ಎಂದು ಅವನಿಗಾಗಿ ಸಿದ್ಧಗೊಳಿಸಿದ ಅರಮನೆಯ ಮುಂದೆ ಕಾದಿರುವಂತೆ ಜೀವನ ಕರ್ಮಗಳು ತಮ್ಮ ಸ್ವಾಮಿಯು ಬರುತ್ತಾನೆಂದು ಎದುರುನೋಡುತ್ತಿರುವವು. ಹೀಗೆ ಜೀವನು ದೇಹದಿಂದ ಹೊರಡುವಾಗ ಅರಸನನ್ನು ಸೇವಕರು ಹಿಂಬಾಲಿಸುವಂತೆ ಜೀವನನ್ನು ಪ್ರಾಣಗಳೂ ಇಂದ್ರಿಯಗಳೂ ಹಿಂಬಾಲಿಸುವವು.

—(ಬೃ೪-೩-೩೫ . . ೩೮)

ದೇಹವು ಸೊರಗಿದ್ದರಿಂದ ತಾನೂ ಸೊರಗಿದವನಾದ ಆ ದೇಹಸ್ವಾಮಿಯು ಆಗ ಏನೂ ಮುಂದು ತೋಚದವನಂತೆ ಆಗುತ್ತಾನೆ. ಅವನು

ಬದುಕಿರುವವರೆಗೂ ಸೂರ್ಯನು ತನ್ನದೊಂದಂಶದಿಂದ ಅವನ ಕಣ್ಣಲ್ಲಿದ್ದು ಕೊಂಡು ಅವನಿಗೆ ರೂಪದ ಅರಿವಾಗುವಂತೆ ಮಾಡುತ್ತಿರುವನು. ಸಾಯು ವಾಗ ಆ ಸೂರ್ಯಾಂಶವು ಕಣ್ಣಿಗೆ ನೆರವಾಗುವವನ್ನು ಬಿಟ್ಟು ಸೂರ್ಯನ ಬಳಿಗೆ ಹೋಗಿ ಸೇರಿಕೊಳ್ಳುವದು. ಅದರಂತೆ ಅಗ್ನಿಯ ಅಂಶವು ವಾಕ್ಕನ್ನು ಬಿಟ್ಟು ಅಗ್ನಿಗೂ ವಾಯುವಿನ ಅಂಶವು ಪ್ರಾಣವನ್ನು ಬಿಟ್ಟು ವಾಯುವಿಗೂ ಹಿಂದಿ ರುಗುವವು. ಹೀಗೆ ಇಂದ್ರಿಯಾಭಿಮಾನದೇವತೆಗಳೆಲ್ಲ ಹಿಂದಿರುಗುವರು. ಆದ್ದರಿಂದ ಆಗ ಯಾವ ಇಂದ್ರಿಯಕ್ಕೂ ಯಾವ ಅರಿವೂ ಆಗುವದಿಲ್ಲ. ಸಾಯುವವನಿಗೆ ಕಾಣುವದಿಲ್ಲ, ಕೇಳಿಸುವದಿಲ್ಲ, ರುಚಿತೋರುವದಿಲ್ಲ, ವಾಸನೆ ಗೊತ್ತಾಗುವದಿಲ್ಲ ಮತ್ತು ಸೊಂಕು ಹೊಳೆಯುವದಿಲ್ಲ. ಎಚ್ಚರದ ಜೀವನು ತನ್ನ ಇಂದ್ರಿಯಗಳ ಶಕ್ತಿಗಳನ್ನು ಕನಸಿಗೆ-ತೆಗೆದುಕೊಂಡು ಹೋಗುವಂತೆ ಒಂದು ದೇಹವನ್ನು ಬಿಟ್ಟ ಜೀವನು ಇನ್ನೊಂದು ದೇಹವನ್ನು ಹುಡುಕುವಾಗ ಇಂದ್ರಿಯಗಳ ಶಕ್ತಿಗಳನ್ನೆಲ್ಲ ಹೀರಿಕೊಂಡು ಹೋಗುವನು.

—(ಬೃ ೪-೪-೧)

ಹೀಗಾಗಿ ಇಂದ್ರಿಯಗಳೆಲ್ಲ ಸೂಕ್ಷ್ಮದೇಹದಲ್ಲಿ ಒಂದಾಗಿ ಹೃದಯದಲ್ಲಿ ರುವವು. ಆಗ ಪಕ್ಕದಲ್ಲಿರುವವರು ಇವನಿಗೆ ಕಾಣುವದಿಲ್ಲವೆಂದೂ ಕೇಳಿಸು ವದಿಲ್ಲವೆಂದೂ ಮುಂತಾಗಿ ಹೇಳುವರು. ಆ ಸಮಯದಲ್ಲಿ ಅವನು ಹೊರ ಬೀಳುವದಕ್ಕೆ ಅನುಕೂಲವಾಗಿ ಹೃದಯದ ಮುಂಭಾಗದಲ್ಲಿ ನಾಡಿಯ ಬಾಗಿ ಲಲ್ಲಿ ಬೆಳಕಾಗುವದು. ಕನಸುಗಾಣುವವನಿಗೆ ಇಂದ್ರಿಯಗಳನ್ನೆಲ್ಲ ಹೀರಿ ಕೊಂಡಿರುವ ತನ್ನ ಬೆಳಕಿನಿಂದಲೆ ಎಲ್ಲವೂ ಬೆಳಗುವಂತೆ ತನ್ನ ಬೆಳಕಿನಿಂ ದಲೆ ಬೆಳಕಾದ ಆ ಬಾಗಿಲಿನಿಂದ ಆ ಜೀವನು ಸೂಕ್ಷ್ಮಶರೀರದ ಮುಸುಕು ಗೊಂಡವನಾಗಿ ಹೊರಬೀಳುವನು. —(ಬೃ ೪-೪-೨)

ಜೀವನು ಒಂದು ದೇಹವನ್ನು ಬಿಡುವಾಗ ವಾಕ್ಕು ಮೊದಲಾದ ಇಂದ್ರಿ ಯಗಳು ಮನಸ್ಸಿನಲ್ಲಿಯೂ ಮನಸ್ಸು ಪ್ರಾಣದಲ್ಲಿಯೂ ಕಲೆತು ಹೋಗುವ ವೆಂದು ತೋರುವ ಸಂಭವ ಉಂಟು. ಹಾಗಾಗುವದಿಲ್ಲ ಇಂದ್ರಿಯಗಳು ಮನಸ್ಸಿನಲ್ಲಿ ಒಂದಾಗಲಾರವು. ಏಕೆಂದರೆ: ಅವು ಮನಸ್ಸಿನಿಂದ ಹುಟ್ಟಿದವು

ಗಳಲ್ಲ. ಹಾಗೆ ಹುಟ್ಟಿದ್ದರೆ ಮಣ್ಣಿನಿಂದ ಹುಟ್ಟಿದ ಮಡಿಕೆಯು ಮಣ್ಣಿನಲ್ಲಿ ಒಂದಾಗುವಂತೆ ಆಗುತ್ತಿತ್ತು. ಹಾಗಾಗದೆ ಇಂದ್ರಿಯಗಳ ನಡೆವಳಿಕೆಗಳು ಮಾತ್ರ ಮನಸ್ಸಿನಲ್ಲಿ ಅಡಗಿಕೊಂಡಿರುವವು. ಎಂದರೆ ಇಂದ್ರಿಯಗಳ ನಡೆ ವಳಿಕೆಗಳಿಲ್ಲದಂತಾಗಿ ಮನಸ್ಸಿನ ನಡೆವಳಿಕೆಗಳು ಮಾತ್ರ ಇರುವವು. ಕಟ್ಟಿಗೆ ಯಲ್ಲಿ ಹುಟ್ಟಿದ ಅಗ್ನಿಯು ನೀರಿನಲ್ಲಿ ಅಡಗುವಂತೆ ಇಂದ್ರಿಯಗಳ ನಡೆವಳಿಕೆ ಗಳು ಮನಸ್ಸಿನಲ್ಲಿ ಅಡಗಬಹುದು. ಹಾಗೆ ಆದಾಗ ಇಂದ್ರಿಯಾಭಿಮಾನಿ ದೇವತೆಗಳು ಇಂದ್ರಿಯಗಳಿಗೆ ಅನುಗ್ರಹಮಾಡುವದನ್ನು ಬಿಟ್ಟು ಸುಮ್ಮನಾ ಗುವರು. ಇದರಂತೆ ಮನಸ್ಸು ಪ್ರಾಣದಲ್ಲಿ ಕಲೆತುಹೋಗಲಾರದು. ಏಕೆಂ ದರೆ: ಮನಸ್ಸು ಪ್ರಾಣದಿಂದಾದದ್ದಲ್ಲ. ಮನಸ್ಸಿನ ಉಗಮಸ್ಥಾನವು ಅನ್ನ. ಆ ಅನ್ನವು ಧಾನ್ಯದಿಂದಾಗುವದರಿಂದಲೂ ಆ ಧಾನ್ಯಗಳು ನೀರಿನಿಂದ ಬೆಳೆ ಯುವದರಿಂದಲೂ ಪ್ರಾಣದ ಉಗಮಸ್ಥಾನವೂ ನೀರಾದ್ದರಿಂದಲೂ ಅನ್ನದಿಂದ ಹುಟ್ಟಿದ ಮನಸ್ಸು ಅನ್ನಕ್ಕೆ ಕಾರಣವಾದ ನೀರಿನಿಂದ ಹುಟ್ಟಿದ ಪ್ರಾಣದಲ್ಲಿ ಕಲೆಯಬಹುದೆಂದು ಸುತ್ತಿನ ದಾರಿಯಿಂದ ಹೊಂದಿಸುವದಕ್ಕೂ ಹೋಗಬಾರದು. ಏಕೆಂದರೆ: ನೀರು ಪ್ರಾಣದ ಸ್ವರೂಪವನ್ನು ಹೊಂದಿದ ಮೇಲೆ ಅದರಿಂದ ಅನ್ನವು ಹುಟ್ಟುವದಿಲ್ಲವಾದ್ದರಿಂದ ಮನಸ್ಸು ಪ್ರಾಣದಲ್ಲಿ ಕಲೆತು ಹೋಗುವದಿಲ್ಲ. ಮತ್ತೇನೆಂದರೆ: ಇಂದ್ರಿಯಗಳಿಂದ ಕೂಡಿದ ಮನ ಸ್ಸಿನ ವೃತ್ತಿಯು ಪ್ರಾಣದಲ್ಲಿ ಅಡಗಿಕೊಳ್ಳುವದು. ಎಂದರೆ ಮನಸ್ಸಿನ ನಡೆ ವಳಿಕೆಗಳಿಲ್ಲದಂತಾಗಿ ಪ್ರಾಣದ ನಡೆವಳಿಕೆಗಳು ಮಾತ್ರ ಇರುವವು. ನಿದ್ರೆ ಯಲ್ಲಿಯೂ ಹೀಗಾಗುವದು ಅನುಭವದಲ್ಲಿದೆ. ಹೀಗೆ ನಡೆವಳಿಕೆಗಳು ಮಾತ್ರ ಅಡಗದೆ ಇಂದ್ರಿಯಗಳೂ ಮನಸ್ಸೂ ತಾವೇ ಇಲ್ಲದಂತಾಗಿಬಿಟ್ಟಿದ್ದರೆ ಹಾಗೆಯೇ ಮೋಕ್ಷವೇ ಆಗಿಬಿಡುತ್ತಿತ್ತು. ಹಾಗಾಗುವದಿಲ್ಲ. ಆ ಪ್ರಾಣದ ವೃತ್ತಿಯು ಜೀವನಲ್ಲಿ ಅಡಗುವದು. —(ಸೂ ೪-೨-೧, ೨)

ಇರಲಿ. ಆಮೇಲೆ ಪ್ರಾಣವು ತನಗೊಂದಾಶ್ರಯವಿಲ್ಲದೆ ಇರಲಾರ ದಷ್ಟೆ. ಆಗ ಜೀವನು ಅದಕ್ಕಾಶ್ರಯವಾಗಿ ತನ್ನ ಕರ್ಮದಿಂದ ಭೂತಸೂಕ್ಷ್ಮ ಗಳನ್ನು ಸಂಪಾದಿಸಿಕೊಂಡಿರುವನು. ಆ ಭೂತಗಳನ್ನು ಆಶ್ರಯಿಸಿಕೊಂಡು ಪ್ರಾಣವಿರುವದು. ಜೀವನೂ ಅಲ್ಲಿಯೇ ಇರುವನು. ಪ್ರಾಣವನ್ನು ಬಿಟ್ಟು

ಜೀವನಿಗೆ ಹೋಗುವಿಕೆಯೂ ಸಲ್ಲದು ; ಬೇರೆ ದೇಹದಲ್ಲಿ ಉಪಭೋಗವೂ ಆಗದು. ಆದ್ದರಿಂದ ಜೀವನು ಆ ಸೂಕ್ಷ್ಮಶರೀರದಿಂದ ಕೂಡಿಯೇ ಇರುವನು. —(ಸೂ ೩-೧-೧)

ಆ ಸೂಕ್ಷ್ಮಶರೀರವಲ್ಲಿ ತನ್ನ ಬೆಳಕು ಯಾವಾಗಲೂ ಝಗಝಗಿಸುತ್ತಿರುವದು. ಆ ಸೂಕ್ಷ್ಮಶರೀರದ ಮುಸುಕಿನ ಸಂಬಂಧದಿಂದಲೆ ಜೀವನಿಗೆ ಹುಟ್ಟು, ಸಾವು, ಹೋಗುವಿಕೆ, ಬರುವಿಕೆ—ಮೊದಲಾದ ಎಲ್ಲ ನಡೆವಳಿಕೆಗಳು. ಹೃದಯದ ಬಾಗಿಲ ಬೆಳಕಿನಿಂದ ಜೀವನು ಹೊರಬೀಳುವಾಗ ಅವನು ಸೂರ್‍ಯಲೋಕಕ್ಕೆ ಹೋಗುವವಕ್ಕೆ ತಕ್ಕ ತಿಳಿವಳಿಕೆಯನ್ನು ಹೊಂದಿ ಪುಣ್ಯಕರ್ಮವನ್ನು ಮಾಡಿದವನಾಗಿದ್ದರೆ ಮುಖದಲ್ಲಿರುವ ಕಣ್ಣು ಮೊದಲಾದ ಕಂಡಿಗಳಿಂದಲೂ ಬ್ರಹ್ಮಲೋಕಕ್ಕೆ ಹೋಗುವವಕ್ಕೆ ತಕ್ಕ ತಿಳಿವೂ ಪುಣ್ಯವೂ ಉಳ್ಳವನಾಗಿದ್ದರೆ ನಡುನೆತ್ತಿಯಲ್ಲಿರುವ ಬ್ರಹ್ಮರಂಧ್ರದಿಂದಲೂ ಅಥವಾ ತನ್ನ ತಿಳಿವಿಗೂ ಕರ್ಮಕ್ಕೂ ತಕ್ಕಂತೆ ಶರೀರದ ಬೇರೆ ಕಂಡಿಗಳಿಂದಲೂ ಹೊರಬೀಳುವನು. ಹೃದಯದ ಮುಂಭಾಗದ ಬಾಗಿಲ ಬೆಳಕು ಎಲ್ಲರಿಗೂ ಕಾಣುವದಾದರೂ ಹೆಚ್ಚಿನ ಪುಣ್ಯಶಾಲಿಯು ನೆತ್ತಿಯಿಂದ ಹೊರಡುವನು; ಇತರರು ಬೇರೆ ಕಡೆಗಳಿಂದ ಹೊರಡುವರು. ಹೆಚ್ಚಿನ ಪುಣ್ಯಶಾಲಿಯು ಎಲ್ಲಿಂದಲೋ ಹೊರಟುಬಿಟ್ಟರೆ ಅವನಿಗೆ ಹೆಚ್ಚಿನ ಲೋಕವೂ ಸಿಕ್ಕದೆ ಹೋದೀತು; ಅವನು ನಡುನೆತ್ತಿಯಿಂದ ಹೊರಡುವ ಮಾರ್ಗದ ಚಿಂತನೆವನ್ನು ಮಾಡಿದ್ದು ವ್ಯರ್ಥವೂ ಆದೀತು. ಹಾಗಾಗದೆ ದೇವರ ದಯೆಯಿಂದ ಅವನು ನಡುನೆತ್ತಿಯ ಸುಷುಮ್ನೆಯ ಬಾಗಿಲಿಂದಲೆ ಹೊರಡುತ್ತಾನೆ. ಹೀಗೆ ಪರಲೋಕಕ್ಕೆ ಪ್ರಯಾಣ ಮಾಡಿದ ಜೀವನನ್ನು ಅವನ ಸರ್ವಾಧಿಕಾರಿಯಾದ ಪ್ರಾಣನು, ಅರಸನನ್ನು ಮಂತ್ರಿಯು ಹೇಗೊ ಹಾಗೆ, ಹಿಂಬಾಲಿಸುವನು. ಪ್ರಾಣನು ಮುಂದೆ ಹೆಜ್ಜೆ ಇಡುತ್ತಲೆ ವಾಕ್ಕು ಮೊದಲಾದ ಇಂದ್ರಿಯಗಳೆಲ್ಲ ಅದರ ಬಾಲವನ್ನು ಹಿಡಿದ್ದು ಕೊಂಡು ಪ್ರಯಾಣಮಾಡುವವು. ಹೀಗೆ ಹೊರಟಾಗ ಜೀವನು ಕನಸಿನಲ್ಲಿ ಹೇಗೋ ಹಾಗೆ ಅನೇಕ ತಿಳಿವಳಿಕೆಗಳುಳ್ಳವನಾಗಿರುತ್ತಾನೆ. ಆದರೆ ಅವನು ಆಗ ತನ್ನ ಹಿಂದಿನ ಕರ್ಮದ ಕೈಗೊಂಬೆಯಾಗಿರುವನೆ ಹೊರತು ಸ್ವತಂತ್ರನಲ್ಲ. ಸ್ವಾತಂತ್ರ್ಯವಿದ್ದ ಪಕ್ಷದಲ್ಲಿ ಎಲ್ಲರೂ ಆಗ ತಮ್ಮ ಉದ್ಧಾರವನ್ನು ತಾವೆ

ಮಾಡಿಕೊಳ್ಳಬಹುದಾಗುತ್ತಿತ್ತು. ಹಾಗಿಲ್ಲ. ಯಾವಾಗಲೂ ಮನಸ್ಸಿಗೆ ಒಳ್ಳೆ ಕಲ್ಪನೆಗಳನ್ನು ತಂದುಕೊಳ್ಳುತ್ತಿದ್ದರೆ ಆಗ ತಮ್ಮಷ್ಟಕ್ಕೆ ತಾವೆ ಅವು ಬಂದು ಜೀವನ ಉದ್ಧಾರವಾಗುವದು. ಅವನು ಯಾವಾಗಲೂ ಎಂಥ ಕಲ್ಪನೆಗಳನ್ನು ತಂದುಕೊಳ್ಳುತ್ತಿರುವನೊ ಅವೆ ಪರಲೋಕಪ್ರಯಾಣಕಾಲದಲ್ಲಿ ಅವನಲ್ಲಿ ಎದ್ದು ಕಾಣಿಸಿಕೊಳ್ಳುವವು. ಆದ್ದರಿಂದ ಆ ಕಾಲದಲ್ಲಿ ತಮ್ಮ ನೆನಪಿಗೆ ಬಂದೇ ಬರುವಂತೆ ಶ್ರದ್ಧಾಳುಗಳು ಧ್ಯಾನಾಭ್ಯಾಸವನ್ನೊ ಹೆಚ್ಚಿನ ಪುಣ್ಯದ ಗಂಟನ್ನೊ ತಪ್ಪದೆ ಕೂಡಿಹಾಕಿಕೊಂಡಿರಬೇಕು. ಕೆಟ್ಟ ನಡೆವಳಿಕೆಗಳನ್ನು ಸರ್ವಯತ್ನದಿಂದಲೂ ಬಿಟ್ಟುಬಿಡಬೇಕೆಂದು ಎಲ್ಲ ಶಾಸ್ತ್ರಗಳೂ ಒಮ್ಮುಖವಾಗಿ ಹೇಳುವವು. ಪರಲೋಕದ ದಾರಿಯನ್ನು ಹಿಡಿದಾಗ ಏನು ಮಾಡಿಕೊಳ್ಳುವದಕ್ಕೂ ಆಗುವದಿಲ್ಲ. ಆಗ ಅವನು ಕರ್ಮದ ಸೆಳೆತಕ್ಕೆ ಸಿಕ್ಕಿ ಹೋಗುತ್ತಿರುವದರಿಂದ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಬದುಕಿರುವಾಗ ಆದಷ್ಟು ಅಂಥ ಪ್ರಯತ್ನವನ್ನು ಮಾಡಬೇಕು. —(ಬೃ ೪-೪-೨)

## ಕತ್ತಲೆಯ ದಾರಿ

ಪರಲೋಕಕ್ಕೆ ಹೊರಟವನಿಗೆ ದಾರಿಯಲ್ಲಿ ಅನ್ನವೇನೆಂದೂ ಪರಲೋಕದಲ್ಲಿ ಅವನು ಏನುಣ್ಣುವನೆಂದೂ ಹೊಸ ಶರೀರವನ್ನು ಪಡೆಯುವನೆಂತೆಂದೂ ನಾವು ವಿಚಾರಮಾಡಬೇಕು. ಜೀವನು ಪರಲೋಕಕ್ಕೆ ಹೋಗುವಾಗ ಅವನು ತನ್ನ ಜೀವಮಾನದಲ್ಲಿ ಶಾಸ್ತ್ರವು ಮಾಡೆಂದದ್ದೂ ಬೇಡವೆಂದದ್ದೂ ಮಾಡೆನ್ನದ್ದೂ ಬೇಡವೆನ್ನದ್ದೂ ಆದ ಉಪಾಸನೆಗಳನ್ನು ಮಾಡಿದ್ದೂ, ಅದರಂತೆ ಮಾಡೆಂದದ್ದೂ ಬೇಡವೆಂದದ್ದೂ ಮಾಡೆನ್ನದ್ದೂ ಬೇಡವೆನ್ನದ್ದೂ ಆದ ಕರ್ಮಗಳನ್ನು ಮಾಡಿದ್ದೂ, ಹಿಂದೆ ಕರ್ಮದ ಫಲಗಳನ್ನು ಅನುಭವಿಸಿದ ವಾಸನೆಯೂ— ಈ ಮೂರೂ ಬೆನ್ನುಹತ್ತಿರುವವು. ಹಿಂದಿನ ಅನುಭವದ ವಾಸನೆ ಬೆನ್ನು ಹತ್ತದೆಹೋದರೆ ಮುಂದೆ ಕರ್ಮವನ್ನು ಮಾಡುವದಕ್ಕೂ ಫಲವನ್ನು ಅನುಭವಿಸುವದಕ್ಕೂ ಆಗುವದೇ ಇಲ್ಲ. ಅಭ್ಯಾಸವಿಲ್ಲದ ಕೆಲಸದಲ್ಲಿ ಇಂದ್ರಿಯಗಳು ತಮ್ಮ ಕುಶಲತೆಯನ್ನು ತೋರಿಸಲಾರವು. ಕೆಲವರಿಗೆ ಈಗಿನ ಅಭ್ಯಾಸವೇನೂ ಇಲ್ಲದೆ ಚಿತ್ರಕಲೆ, ಗಾಯನ-ಮೊದಲಾದವುಗಳಲ್ಲಿ ಹುಟ್ಟು

ವಾಗಲೆ ಕುಶಲತೆ ತೋರುವದನ್ನು ಕಂಡಿದ್ದೇವೆ. ಕೆಲವರಿಗೆ ಆ ಕಲೆಗಳಲ್ಲಿ ಮುಂದುವರಿಯುವದಕ್ಕೆ ಎಷ್ಟು ಅನುಕೂಲತೆಗಳಿದ್ದರೂ ಅವರಿಗೆ ಅದು ದಕ್ಕುವದಿಲ್ಲವೆಂಬುದನ್ನೂ ಮನಗಂಡಿದ್ದೇವೆ. ವಿಷಯಗಳನ್ನು ಅನುಭವಿಸುವದರಲ್ಲಿಯೂ ಹಾಗೆಯೇ ಕೆಲವರು ಚತುರರಾಗಿರುತ್ತಾರೆ; ಇನ್ನು ಕೆಲವರು ಹಾಗಿರುವದಿಲ್ಲ. ಇದಕ್ಕೆಲ್ಲ ಹಿಂದಿನ ವಾಸನೆಯೆ ಕಾರಣ. ಆದ್ದರಿಂದ ಹಿಂದಿನ ವಾಸನೆ ಬೆನ್ನುಹತ್ತದೆ ಹೋದರೆ ಯಾರಿಗೂ ಏನನ್ನು ಮಾಡುವದಕ್ಕೂ ಏನನ್ನು ಅನುಭವಿಸುವದಕ್ಕೂ ದಾರಿಯೇ ತೋರದೆ ಹೋಗುತ್ತದೆ. ಆದ್ದರಿಂದ ಉಪಾಸನೆ, ಕರ್ಮ, ವಾಸನೆ-ಈ ಮೂರೇ ಅವನಿಗೆ ಪರಲೋಕದ ಬುತ್ತಿ. ಇವೇ ಹೊಸದಾಗಿ ದೊರೆಯುವ ದೇಹಕ್ಕೂ ಅದರಲ್ಲಿ ಪಡೆಯುವ ಅನುಭವಗಳಿಗೂ ಸಾಧನವಾದವು. ಆದ್ದರಿಂದ ಬೇಕೆನಿಸುವ ದೇಹವೂ ಅನುಭವಗಳೂ ದೊರೆಯಬೇಕಾದರೆ ಒಳ್ಳೆ ಉಪಾಸನೆಗಳನ್ನೂ ಒಳ್ಳೆ ಕರ್ಮಗಳನ್ನೂ ಮಾಡಬೇಕು. —(ಬೃ ೪-೪-೨)

ಹೀಗೆ ಒಂದು ದೇಹವನ್ನು ತೊರೆದು ಹೊರಟ ಜೀವನು, ಒಂದು ಗೂಡನ್ನು ತೊರೆದ ಪಕ್ಷಿಯು ಇನ್ನೊಂದು ಗೂಡಿನೊಳಕ್ಕೆ ಸೇರಿಕೊಳ್ಳುವಂತೆ, ಪರಲೋಕದ ಅನುಭವಕ್ಕೆ ತಕ್ಕ ಇನ್ನೊಂದು ದೇಹಕ್ಕೆ ಸೇರಿಕೊಳ್ಳುವನು. ಅಥವಾ ಇವನು ತನ್ನ ಕರ್ಮಗಳ ಫಲಗಳನ್ನು ಅನುಭವಿಸಬೇಕಾದ ಕಡೆಗೆ ಇವನನ್ನು ಬೇರೊಂದು ನಡುಬಗೆಯ ದೇಹವು ಒಯ್ಯುವದು. ಜೀವನು ಇನ್ನೊಂದು ದೇಹಕ್ಕೆ ಸೇರಿಕೊಳ್ಳುವದು, ಹುಲ್ಲುಜಿಗಣೆಯು ಒಂದು ಹುಲ್ಲಕಡ್ಡಿಯ ಕೊನೆಯತನಕ ಹೋಗಿ ಮುಂದಿನ ಕಾಲಿನಿಂದ ಇನ್ನೊಂದು ಹುಲ್ಲಕಡ್ಡಿಯನ್ನು ಹಿಡಿದುಕೊಂಡು ಹಿಂದಿನ ಕಾಲನ್ನು ಅಲ್ಲಿಗೆಳೆದುಕೊಳ್ಳುವಂತೆ, ಇರುವದು. ಕನಸಿಗೆ ಹೋಗುವ ಜೀವನು ಎಚ್ಚರದ ದೇಹವನ್ನು ಬೀಳಗೆಡಹುವಂತೆ ದೇಹಾಂತರಕ್ಕೆ ಹೋಗುವ ಜೀವನು ಒಂದು ದೇಹವನ್ನು ಬೀಳಗೆಡಹಿ ಇನ್ನೊಂದು ದೇಹವನ್ನು ಹಿಡಿದು ಅಲ್ಲಿ ತನ್ನ ವಾಸನೆಗಳನ್ನು ಹರಡಿಕೊಂಡು ಹಿಂದಿನ ದೇಹದ ಅಭಿಮಾನವನ್ನು ಬಿಟ್ಟು ಹೊಸ ದೇಹದಲ್ಲಿ ಅಭಿಮಾನಗೊಳ್ಳುವನು. ಅಲ್ಲಿ ತನ್ನ ಕರ್ಮದ ಫಲವಾಗಿ ಎಲ್ಲ ಇಂದ್ರಿ

ಯುಗಳೂ ಕಾಣಿಸಿಕೊಳ್ಳುವವು ; ಸೂರ್ಯ, ಅಗ್ನಿ-ಮೊದಲಾದ ಇಂದ್ರಿಯಾಭಿಮಾನಿದೇವತೆಗಳೂ ತಮ್ಮ ತಮ್ಮ ಅನುಗ್ರಹವನ್ನು ತೋರಿಸುವರು.

—(ಬೃ ೪-೪-೩)

'ಹೊಸದೇಹವು ಹುಟ್ಟುವಾಗ ಹಿಂದಿನ ಸಾಮಗ್ರಿಗಳಿಂದಲೆ ಬೇರೆ ಬೇರೆ ರೂಪಾಗುವದೊ ಅಥವಾ ಹೊಸ ಸಾಮಗ್ರಿಯಿಂದಾಗುವದೊ?' ಎಂದು ನೋಡಿದರೆ ಆ ಕೆಲಸವು, ಅಕ್ಕಸಾಲೆಯು ಬಂಗಾರದ ಪುಡಿಗಳನ್ನೆಲ್ಲ ಕೂಡಿಸಿ ಹಿಂದಿನದಕ್ಕಿಂತ ಚೆನ್ನಾಗಿರುವ ಆಕಾರವನ್ನು ಮಾಡುವಂತೆ, ಇರುವದು. ಎಂದಿನಂತೆ ಭೂಮಿ, ನೀರು-ಮೊದಲಾದ ಐದು ಭೂತಗಳಿಂದಲೆ ಪಿತೃಲೋಕ, ಗಂಧರ್ವಲೋಕ, ದೇವಲೋಕ, ಬ್ರಹ್ಮಲೋಕ-ಮೊದಲಾದವುಗಳ ಅನುಭವಕ್ಕೆ ತಕ್ಕದ್ದಾಗಿ ಅವನವನ ತಿಳಿವಿಗೂ ಕರ್ಮಕ್ಕೂ ತಕ್ಕ ದೇಹವೇರ್ಪಡುವದು. ಹೊಸ ದೇಹವೇರ್ಪಡುವದಕ್ಕೆ ಸಾಧನವಾದ ಭೂತಸೂಕ್ಷ್ಮಗಳನ್ನು ಅವನು ತನ್ನ ಕರ್ಮಗಳಿಂದ ಮೊದಲೇ ಸಂಪಾದಿಸಿಕೊಂಡಿರುವನೆಂದು ಹಿಂದೆಯೇ ಹೇಳಿದ್ದಾಗಿರುವದು. (ಬೃ—೪-೪-೪)

ಬದುಕಿರುವಾಗ ಬಯಕೆ, ಸಿಟ್ಟು-ಮೊದಲಾದವುಗಳನ್ನು ಮುಂದಿಟ್ಟುಕೊಂಡು ಒಳ್ಳೆ ಕೆಲಸಗಳನ್ನೂ ಕೆಟ್ಟ ಕೆಲಸಗಳನ್ನೂ ಮಾಡಿದ್ದರಿಂದ ಹೀಗೆ ದೇಹದಿಂದ ದೇಹಕ್ಕೆ ಅಲೆದಾಡಬೇಕಾಗುವದು. ಆದ್ದರಿಂದ ಈ ಸುತ್ತಾಟಕ್ಕೆಲ್ಲ ಪುಣ್ಯಪಾಪಕರ್ಮಗಳೆ ಕಾರಣ. ಇದನ್ನರಿತೇ ಇಂಥದ್ದನ್ನು ಮಾಡೆಂದೂ ಇಂಥದ್ದನ್ನು ಬಿಡೆಂದೂ ಶಾಸ್ತ್ರಗಳು ವಿವೇಕವನ್ನು ಹೇಳುವವು. ಇದನ್ನು ಹೇಳುವದೇ ಶಾಸ್ತ್ರದ ಹೆಚ್ಚುಗಾರಿಕೆ. ಬಯಕೆ ಮೊದಲಾದವುಗಳನ್ನು ಬಿಟ್ಟು ಕರ್ಮವನ್ನು ಮಾಡಿದರೂ ಅದು ಪುಣ್ಯವನ್ನಾಗಲಿ ಪಾಪವನ್ನಾಗಲಿ ಏನನ್ನೂ ಕೂಡಿಹಾಕುವದಿಲ್ಲ. ಮಾಡುವಾಗ ಬಯಕೆ ಇದ್ದು ಪುಣ್ಯಪಾಪಗಳುಂಟಾಗಿದ್ದರೂ ಆ ಬಯಕೆಯನ್ನು ತೊರೆದರೆ ಆ ಕರ್ಮವು ಅವನಿಗೆ ತನ್ನ ಫಲವನ್ನು ಅನುಭವಿಸಬೇಕಾದ ಬೇರೆ ದೇಹವನ್ನುಂಟುಮಾಡಹೋಗುವದಿಲ್ಲ. ಬಯಕೆಯೇ ಸುತ್ತಾಟಕ್ಕೆ ಮೂಲ. ಬಯಕೆಯು ಬಲಿತಹಾಗೆಲ್ಲ ಇಂಥದ್ದನ್ನು ಮಾಡಿಯೇ ಬಿಡಬೇಕೆಂಬ ನಿಶ್ಚಯದ ಸ್ವರೂಪವನ್ನು

ಪಡೆಯುತ್ತದೆ. ಆಮೇಲೆ ಅವನು ಆ ಕರ್ಮವನ್ನು ಮಾಡಿಯೇ ಮಾಡು ತ್ತಾನೆ ; ಅದರ ಫಲವನ್ನು ಉಂಡೇ ಉಣ್ಣುತ್ತಾನೆ. —(ಬೃ ೪-೪-೫)

ಇನ್ನು ದೇಹವನ್ನು ಬಿಟ್ಟು ಹೊರಟವರು ಮುಂದೆ ಸಾಗುವ ದಾರಿಯನ್ನು ಕುರಿತು ವಿಚಾರ ಮಾಡಬೇಕು. ಎಲ್ಲರೂ ಒಂದೇ ದಾರಿಯಲ್ಲಿ ಹೋಗುವ ರೆಂದರೆ ಕೀಳಾದವರಿಗೂ ಮೇಲಾದವರಿಗೂ ಒಂದೇ ಗತಿಯೆಂದಂತಾಗುವದು. ಇದು ಬಹು ಅನ್ಯಾಯ. ಆದ್ದರಿಂದ ಅವರಿಗೆ ದಾರಿಗಳು ಬೇರೆಬೇರೆಯಾ ಗಿರಲೇಬೇಕು. ಯಾರು ಜಗತ್ತಿಗೆ ಆಧಾರವಾದ ಬ್ರಹ್ಮದ ಉಪಾಸನೆಯ ನ್ನಾದರೂ ಮಾಡಿಯೂ ಇಲ್ಲವೋ ಅಥವಾ ತಮ್ಮತಮ್ಮ ವರ್ಣಾಶ್ರಮಧರ್ಮ ವನ್ನು ನಡೆಸುತ್ತ ಹೆಚ್ಚಿನ ಪುಣ್ಯಕರ್ಮಗಳನ್ನಾದರೂ ಮಾಡಿಯೂ ಇಲ್ಲವೋ ಅಂಥ ಕೀಳಾದ ಉಂಡಾಡಿಗರಿಗೊಂದು ದಾರಿಯೆಂಬುದೇ ಇಲ್ಲ. ಅಂಥವರು ಕೀಳಾದ ನೊಣ, ಸೊಳ್ಳೆ ಮತ್ತು ಹುಳು ಮೊದಲಾದವುಗಳಂತೆ ಮತ್ತೆ ಮತ್ತೆ ಹುಟ್ಟಿ ಸಾಯತಕ್ಕವರು. ಹಾಗೆಯೇ ಕಾಲವನ್ನು ಕಳೆದುಕೊಂಡಿರುವದೇ ಅವರ ಗತಿ. ಏನನ್ನಾದರೂ ತಮ್ಮ ಹಿತವನ್ನು ಮಾಡಿಕೊಳ್ಳುವದಕ್ಕೂ ಸುಖಪಡುವದಕ್ಕೂ ಅವರ ಹಣೆಯಲ್ಲಿ ಬರೆದಿರುವದಿಲ್ಲ. -(ಛಾಂ ೫-೧೦-೮)

ಮನುಷ್ಯರಾಗಿದ್ದೂ ಧರ್ಮಕರ್ಮಗಳ ಹಂಗುತೊರೆದ ತಿಳಿಗೇಡಿ ಉಂಡಾ ಡಿಗರ ಮಾತು ಹೆಚ್ಚಿಗೆ ಹೇಳುವದಕ್ಕೆ ತಕ್ಕದ್ದಲ್ಲ. ಅವರು ಯಾವ ಒಳ್ಳೇ ಲೋಕವನ್ನೂ ಕಾಣದೆ ಯಮಲೋಕದಲ್ಲಿ ತಮ್ಮ ಪಾಪಕ್ಕೆ ತಕ್ಕ ಯಾತನೆ ಯನ್ನನುಭವಿಸಿ ಮತ್ತೆ ಈ ಲೋಕದಲ್ಲಿ ಹುಟ್ಟಿಬಿಡುತ್ತಾರೆ. ಅಂಥವ ರಿಗೆ ಯಮಲೋಕದಲ್ಲಿ ದೊಡ್ಡ ದೊಡ್ಡ ಏಳು ನರಕಗಳಿವೆ. ಅವರು ಅಲ್ಲಿಗೇ ತಕ್ಕವರು. ಆ ನರಕಗಳಲ್ಲಿ ಚಿತ್ರಗುಪ್ತರೆಂಬ ದೇವದೂತರು ಇರುತ್ತಾರೆಂದೂ ಹೇಳುವದುಂಟು. ಅವರು ಅಲ್ಲಿಯ ಅಧಿಕಾರಿಗಳೇ ಹೊರತು ಯಾತನೆಯನ್ನು ಅನುಭವಿಸುವವರಲ್ಲ. ಧರ್ಮವನ್ನು ಕಡೆಗಂಡವರೆ ಆ ಯಾತನೆಗಳನ್ನುಣ್ಣು ವವರು. ಆ ಯಾತನೆಯನ್ನು ಪಡೆಯತಕ್ಕವರದೆಂಬೊಂದು ಗುಂಪು ಇಲ್ಲದೆ ಹೋಗಿದ್ದು ಎಲ್ಲರೂ ಪುಣ್ಯಕರ್ಮಗಳನ್ನು ಮಾಡಿದ್ದರೆ ಅವರು ಹೋಗುವ ಲೋಕವು ಅವರ ವಾಸಕ್ಕೆ ಸಾಲದೆ ಹೋಗುತ್ತಿತ್ತು. (ಸೂ ೩-೧-೩)

ಇನ್ನು ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಮಾಡಿಕೊಂಡು ಯಜ್ಞಯಾಗಾದಿಗಳನ್ನೊ ಅಥವಾ ಕೆರೆ, ಬಾವಿ-ಮೊದಲಾದ ಪರಹಿತಕ್ಕಾಗುವ ಕಾರ್ಯಗಳನ್ನೊ ಮಾಡಿದವರು ಚಂದ್ರಲೋಕಕ್ಕೆ ಹೋಗುತ್ತಾರೆ. ಅಲ್ಲಿಗೆ ಹೋದರೂ ಅವರು ಅಲ್ಲಿ ಕೆಲವು ಕಾಲ ಸುಖವನ್ನು ಅನುಭವಿಸಿ ಮತ್ತೆ ಈ ಲೋಕಕ್ಕೆ ಬರತಕ್ಕವರೆ. ಅವರದು ದಕ್ಷಿಣದ ಕಡೆಯ ದಾರಿ. ಅವರನ್ನು ದಕ್ಷಿಣಾಯನದ ಅಭಿಮಾನಿದೇವತೆಗಳು ಕರೆದುಕೊಂಡು ಹೋಗುವದರಿಂದ ಅವರ ದಾರಿಯು ದಕ್ಷಿಣದ ಕಡೆಯ ದಾರಿಯೆನಿಸುವದು. ಇದಕ್ಕೆ ಪಿತೃಯಾಣವೆಂದೂ ಕತ್ತಲೆಯ ದಾರಿಯೆಂದೂ ಹೆಸರು. —(ಪ್ರ ೧-೯)

ಧೂಮವೆಂಬ ಪ್ರದೇಶದ ಅಭಿಮಾನಿದೇವತೆ, ರಾತ್ರಿಯೆಂಬ ಪ್ರದೇಶದ ಅಭಿಮಾನಿದೇವತೆ, ಕೃಷ್ಣಪಕ್ಷವೆಂಬ ಪ್ರದೇಶದ ಅಭಿಮಾನಿದೇವತೆ, ದಕ್ಷಿಣಾಯನವೆಂಬ ಪ್ರದೇಶದ ಅಭಿಮಾನಿದೇವತೆ-ಇವರು ಆ ಕರ್ಮಠರನ್ನು ಚಂದ್ರಲೋಕಕ್ಕೆ ಒಯ್ಯುವರು. ಆ ಕರ್ಮಠರು ಅಲ್ಲಿ ತಮ್ಮ ಕರ್ಮದ ಫಲವಿರುವವರೆಗೂ ಉಂಡು ಅಲ್ಲಿಂದ ಮತ್ತೆ ಕೆಳಕ್ಕೆ ಇಳಿಯುವರು. -(ಭ ೮-೨೫)

ಋಕ್, ಯಜುಸ್, ಸಾಮ-ಎಂಬ ಮೂರು ವೇದಗಳನ್ನೂ ಕಲಿತು ಅಗ್ನಿಷ್ಟೋಮ ಮೊದಲಾದವುಗಳಿಂದ ಭಗವಂತನನ್ನು ಪೂಜೆಮಾಡಿ ಸೋಮರಸವನ್ನು ಕುಡಿದು ತಮ್ಮ ಪಾಪವನ್ನು ಕಳೆದುಕೊಂಡವರಾಗಿ ವಸು ಮೊದಲಾದ ದೇವತಾಸ್ವರೂಪದಲ್ಲಿರುವ ಭಗವಂತನ ಮುಂದೆ ಸ್ವರ್ಗಸುಖಕ್ಕಾಗಿ ಬಾಯಿನೀರುಸುರಿಸುವವರು ಪುಣ್ಯವಂತರಾಗಿ ದೇವೇಂದ್ರನ ಲೋಕಕ್ಕೆ ಹೋಗಿ ಆ ಸ್ವರ್ಗದಲ್ಲಿ ದೇವತೆಗಳು ಅನುಭವಿಸುವ ಉತ್ಕೃಷ್ಟವಾದ ಸುಖಗಳಲ್ಲಿ ಓಲಾಡುವರು. ಬಹುದೊಡ್ಡದಾದ ಸ್ವರ್ಗದಲ್ಲಿ ಸುಖವನ್ನುಂಡ ಹಾಗೆಲ್ಲ ಅವರ ಪುಣ್ಯವು ಸವೆದುಹೋಗುವದು. ಆಮೇಲೆ ಅವರು ಈ ಭೂಲೋಕಕ್ಕೇ ಇಳಿಯುವರು. ಹೀಗೆ ಬರೀ ಕರ್ಮವನ್ನು ಮಾಡಿ ಬಯಕೆಯಿಂದ ಬಾಯಿನೀರು ಕರೆದವರು ಮೇಲಕ್ಕೆ ಹೋಗುತ್ತ ಮತ್ತು ಕೆಳಕ್ಕೆ ಬರುತ್ತ ಇರುವದೇ ಹೊರತು ಆ ಸುತ್ತಾಟವನ್ನು ಬಿಟ್ಟು ಸ್ವತಂತ್ರವಾಗಿ ಇರಲಾರರು. —(ಭ ೯-೨೦,೨೧)

ಯಜ್ಞ ಮೊದಲಾದವುಗಳನ್ನು ಮಾಡಿ ಸ್ವರ್ಗಕ್ಕೆ ಏರಿದವರೆಲ್ಲ ದೇವತೆಗಳಿಗೆ ಅನ್ನವಾಗುತ್ತಾರೆಂದು ಒಂದು ಹೇಳಿಕೆಯುಂಟು. ತಾವೇ ಇನ್ನೊಬ್ಬರಿಗೆ ಅನ್ನವಾದವರು ಅಲ್ಲಿ ಉಣ್ಣುವದಿನ್ನೇನೆಂದು ಸಂಶಯವು ಬರಬಹುದು. ತಾವು ಇನ್ನೊಬ್ಬರಿಗೆ ಅನ್ನವಾಗೋಣವೆಂದು ಯಾರು ಯಜ್ಞವನ್ನು ಮಾಡುತ್ತಾರೆ ? ಅಲ್ಲಿ ಅನ್ನವೆಂದರೆ ಇನ್ನೊಬ್ಬರ ಸುಖಕ್ಕಾಗಿ ನ್ಯೆಮಿಸಿದ ಆಳಾಗಿ ದುಡಿಯುವದೆಂದರ್ಥ. ದೇವತೆಗಳು ಏನನ್ನೂ ತಿನ್ನತಕ್ಕವರೇ ಅಲ್ಲ. ಅವರಿಗೆ ನೋಟದಿಂದಲೆ ತೃಪ್ತಿ. ಯಜ್ಞ ಮೊದಲಾದವುಗಳನ್ನು ಮಾಡಿದವರು ಆ ದೇವತೆಗಳ ಆಳಾಗುತ್ತಾರೆ. ಆಳಾದವರಿಗೂ ಊಟ ಉಂಟಷ್ಟೆ. ಹಾಗೆ ಯಜ್ಞ ಮೊದಲಾದವುಗಳನ್ನು ಮಾಡಿದವರಿಗೂ ಸ್ವರ್ಗಲೋಕದಲ್ಲಿ ಸುಖದ ಅನುಭವ ಉಂಟು. —(ಸೂ ೩-೧-೧)

ಯಜ್ಞ ಮೊದಲಾದವುಗಳನ್ನು ಮಾಡಿದವರಿಗೆ ಸ್ವರ್ಗಲೋಕದಲ್ಲಿ ಆಗುವ ಸುಖವು ಆಳುಗಳಿಗಾಗುವ ಸುಖವೆಂದು ಅದನ್ನು ಕಡೆಗಂಡು ಮಾತಾಡಿದ್ದಾಗಿದೆಯಷ್ಟೆ. ಅಲ್ಲಿಯ ಅರಸರಿಗಾಗುವ ಸುಖದ ಹಣೆಯ ಬರೆಹವೂ ಅಷ್ಟೆ. ಏಕೆಂದರೆ: ಈ ಲೋಕವನ್ನು ಸೃಷ್ಟಿಮಾಡಿದ ಈಶ್ವರನು ಅದರ ರಕ್ಷಣೆಗಾಗಿ ಅಗ್ನಿ, ವಾಯು-ಮೊದಲಾದ ದೇವತೆಗಳನ್ನು ಸೃಷ್ಟಿಮಾಡಿದಾಗ ಅವರಿಗೂ ಹಸಿವುಬಾಯಾರಿಕೆಗಳನ್ನು ಗಂಟುಹಾಕಿ ಅವರನ್ನು ಈ ಸಂಸಾರವೆಂಬ ದೊಡ್ಡ ಸಮುದ್ರದಲ್ಲಿ ಕೆಡವಿಬಿಟ್ಟನು. ಈ ಸಂಸಾರವೆಂಬ ಸಮುದ್ರದಲ್ಲಿ ತನ್ನ ಸ್ವರೂಪವನ್ನು ತಿಳಿಯದಿರುವಿಕೆ, ಬಯಕೆ, ಕರ್ಮ-ಇವುಗಳಿಂದುಂಟಾಗುವ ದುಃಖವೇ ನೀರು ; ಉಗ್ರವಾದ ಜೇನೆ, ಮುಪ್ಪು, ಮರಣ-ಇವೇ ದೊಡ್ಡ ಮೊಸಳೆಗಳು ; ಇದಕ್ಕೆ ಉಳಿದವುಗಳಿರುವಂತೆ ಸಾಮಾನ್ಯವಾಗಿ ಮೊದಲಿಲ್ಲ, ಕಡೆಯಿಲ್ಲ, ದಡವಿಲ್ಲ, ಆಧಾರವಿಲ್ಲ ; ವಿಷಯಗಳ ಮತ್ತು ಇಂದ್ರಿಯಗಳ ಸೇರಿಕೆಯಿಂದಾಗುವ ಸಣ್ಣಸುಖವೆಂಬುದೇ ನಡುಗಡ್ಡೆ ; ಐದು ಇಂದ್ರಿಯಗಳು ತಮ್ಮ ತಮ್ಮ ವಿಷಯಗಳನ್ನು ಬಯಸುವದೆಂಬ ಗಾಳಿಯಿಂದ ಕಲ್ಲೋಲಕಲ್ಲೋಲವಾಗಿ ಎದ್ದ ಅನೇಕ ಅನರ್ಥಗಳೇ ದೊಡ್ಡ ದೊಡ್ಡ ಅಲೆಗಳು; ಮಹಾರೌರವ ಮೊದಲಾದ ಅನೇಕ ನರಕಗಳಲ್ಲಿ ಹಾಹಾಕಾರದ ಗೋಳಾಟವೆ ಭೋರ್ಗರೆಯುವಿಕೆ; ಜ್ಞಾನವೆಂಬುದೇ ಹಡಗು; ಸುಳ್ಳಾಡದಿರುವದು

ಮನಸ್ಸಿನಲ್ಲಿಯೂ ಮಾತಿನಲ್ಲಿಯೂ ಕೆಲಸದಲ್ಲಿಯೂ ಒಂದಾಗಿರುವದು, ದಾನ, ದಯೆ, ಯಾರನ್ನೂ ಪೀಡಿಸದಿರುವದು, ಇಂದ್ರಿಯಗಳನ್ನು ಬಿಗಿಹಿಡಿಯುವದು, ಮನಸ್ಸನ್ನು ಬಿಗಿಹಿಡಿಯುವದು-ಮೊದಲಾದ ಗುಣಗಳೇ ಬುತ್ತಿ; ಒಳ್ಳೆಯವರ ಜೊತೆಯಲ್ಲಿದ್ದು ವೈರಾಗ್ಯವನ್ನು ಹೊಂದಿರುವದೇ ದಾರಿ; ಮೋಕ್ಷವೇ ದಡ. ದೇವತೆಗಳೂ ಇಂಥ ಸಮುದ್ರದಲ್ಲಿ ಬಿದ್ದಿರುವವರೇ ಆದ್ದರಿಂದ ಅವರ ಸುಖವೂ ನಿಜವಾದ ಸುಖವಲ್ಲ. ಅವರ ಆಳುಗಳದಿನ್ನೇನು! ಹೀಗೆ ಅಲ್ಲಿ ಸುಖವೂ ಇಲ್ಲ; ಯಾವ ದೇವತೆಗಳ ಲೋಕಕ್ಕೆ ಹೋದರೂ ಹಿಂದಿರುಗುವದು ತಪ್ಪಿದ್ದೂ ಅಲ್ಲ. —(ಐ ೨-೧)

## ಮತ್ತೆ ಹುಟ್ಟುವದು

ಹಿಂದಿರುಗುವದರ ವಿಷಯವೂ ವಿಚಾರಮಾಡತಕ್ಕದ್ದಾಗಿದೆ. ಜೀವರು ಮತ್ತೇಕೆ ಹಿಂದಿರುಗಬೇಕು? ಇದಕ್ಕೆ ಕಾರಣವಿಲ್ಲದೆ ಇಲ್ಲ. ಭೂಲೋಕವನ್ನು ಬಿಟ್ಟು ಉಳಿದ ಲೋಕಗಳೆಲ್ಲ ಭೂಲೋಕದಲ್ಲಿ ಮಾಡಿದ ಕರ್ಮಗಳ ಹೆಚ್ಚಿನ ಫಲಗಳನ್ನು ಅನುಭವಕ್ಕೆ ಕೊಡತಕ್ಕವುಗಳೇ ಹೊರತು ಮನುಷ್ಯನು ತನ್ನ ಏಳಿಗೆಯನ್ನು ಮಾಡಿಕೊಳ್ಳುವದಕ್ಕೆ ತಕ್ಕವುಗಳಲ್ಲ. ಮನುಷ್ಯನಿಗೆ ಮತ್ತೆ ಭೂಲೋಕದಲ್ಲಿ ಹುಟ್ಟುವಿಕೆ ಇಲ್ಲದೆ ಹೋದರೆ ಅವನಿಗೆ ತನ್ನ ಏಳಿಗೆಯನ್ನು ಮಾಡಿಕೊಳ್ಳುವ ಅವಕಾಶವೇ ಸೊನ್ನೆಯಾಗುವದು. ಹಾಗಾಗಬಾರದೆಂದು ಮನುಷ್ಯನು ಭೂಮಿಯ ಮೇಲೆ ಮತ್ತೆ ಹುಟ್ಟುವದೇ ಸೃಷ್ಟಿಯ ನಿಯಮ. ಮನುಷ್ಯನು ತಾನು ಭೂಲೋಕದಲ್ಲಿ ಮನುಷ್ಯನಾಗಿದ್ದಾಗ ಮಾಡಿದ ಪುಣ್ಯಕರ್ಮಗಳ ಹೆಚ್ಚಿನ ಫಲಗಳನ್ನೆಲ್ಲ ಅಲ್ಲಿ ಅನುಭವಿಸುವನು. ಹೆಚ್ಚುಹೆಚ್ಚಿನ ಪುಣ್ಯಗಳಿಂದ ಹೆಚ್ಚುಹೆಚ್ಚಿನ ಸುಖವು ದೊರೆಯಬೇಕಾಗುವದು. ಜೀವನು ಭೂಲೋಕದಲ್ಲಿ ದೊರಕದಂಥ ಹೆಚ್ಚಿನ ಸುಖಗಳನ್ನು ಪರಲೋಕದಲ್ಲಿ ಅನುಭವಿಸಿ ಉಳಿದ ಸಾಮಾನ್ಯಸುಖವನ್ನು ಅನುಭವಿಸುವದಕ್ಕೂ ಹೆಚ್ಚಿನ ಪುಣ್ಯವನ್ನು ಕೂಡಿಹಾಕಿಕೊಳ್ಳುವದಕ್ಕೂ ಭೂಮಿಗೆ ಹಿಂದಿರುಗುವನು.

ತನ್ನ ನಿಜಸ್ವರೂಪವೇನೆಂಬುದನ್ನು ತಿಳಿಯದ್ದರಿಂದ ತನಗೆ ಗಂಟು ಬಿದ್ದಿರುವ ದೇಹೇಂದ್ರಿಯಗಳೊಳಗೆ ಸಿಕ್ಕುಬಿದ್ದವನಾಗಿ ಅವುಗಳನ್ನೆ ತಾನೆಂದು

ತಪ್ಪು ತಿಳಿದು ತಾನು ಸುಖಿಯೆಂದೂ ದುಃಖಿಯೆಂದೂ ಪಂಡಿತನೆಂದೂ ಮೂಢನೆಂದೂ ಭಾವಿಸಿ ತನ್ನ ಸುಖಕ್ಕಾಗಿ ವಿಷಯುಗಳಿಗೆ ಶರಣೆನ್ನುವದೇ ಇವನ ಹುಟ್ಟಿಗೆ ಕಾರಣ. ದೇವತೆಗಳೇ ಮೊದಲಾದ ಮೇಲುಜನ್ಮ ಉಂಟಾಗುವದಕ್ಕೂ ಪಶು ಮೊದಲಾದ ಕೀಳುಜನ್ಮ ಉಂಟಾಗುವದಕ್ಕೂ ನಡುವಣ ಮನುಷ್ಯಜನ್ಮ ಉಂಟಾಗುವದಕ್ಕೂ ಈ ವಿಷಯಾಸಕ್ತಿಯೇ ಮೂಲ.

—(ಭ ೧೩-೨೧)

ಜೀವನು ಪುಣ್ಯದ ಫಲಗಳನ್ನು ಅನುಭವಿಸುವದಕ್ಕೆ ಚಂದ್ರಲೋಕಕ್ಕೆ ಹೋಗಿರುತ್ತಾನಷ್ಟೆ. ಆ ಲೋಕದಲ್ಲಿ ಮಾತ್ರ ಅನುಭವಿಸುವಂಥ ಹೆಚ್ಚಿನ ಪುಣ್ಯವು ಮುಗಿಯುತ್ತಲೆ ಅವನ ವೃಷ್ಟಿ ಭೂಲೋಕದ ಮೇಲೆ ಬೀಳುವದು. ಆಗ ಅವನು ಅನುಭವಿಸಬೇಕಾದ ಸಾಮಾನ್ಯಸುಖದುಃಖಗಳ ಕಾರಣವಾದ ಪುಣ್ಯಪಾಪಗಳು ಇನ್ನೂ ಬೇಕಾದಷ್ಟು ಉಳಿದುಕೊಂಡಿರುವವು. ಹಾಗೆ ಉಳಿದಿಲ್ಲದೆ ಇದ್ದರೆ ಅವನಿಗೆ ಮತ್ತೆ ಭೂಲೋಕದಲ್ಲಿ ಮೇಲಾದ ಜನ್ಮವಾಗಲಿ ಕೀಳಾದ ಜನ್ಮವಾಗಲಿ ಬರುವದಕ್ಕೆ ಕಾರಣವೇ ಇರುವದಿಲ್ಲ. ಹಾಗಾಗಿದ್ದರೆ ಅವನಿಗೆ ಅಲ್ಲಿಯೇ ಮೋಕ್ಷವಾಗಬೇಕಾಗಿತ್ತು. ಹಾಗಾಗುವದಿಲ್ಲ. ಒಂದೇ ಜನ್ಮದಲ್ಲಿ ಎಲ್ಲ ಕರ್ಮಗಳ ಫಲವೂ ಮುಗಿಯಲಾರದು. ಬ್ರಹ್ಮಹತ್ಯ ಮೊದಲಾದ ಪಾಪಗಳಿಗೆ ಒಂದೊಂದು ಕರ್ಮಕ್ಕೇ ಅನೇಕಜನ್ಮಗಳ ಫಲವಿರುವದು. ಅಲ್ಲದೆ ಮನುಷ್ಯ, ನವಿಲು, ಕೋತಿ-ಮೊದಲಾದ ಬೇರೆ ಬೇರೆ ಜನ್ಮಗಳ ವಾಸನೆಗಳೆಲ್ಲ ಒಂದೇ ಜನ್ಮದಲ್ಲಿ ಹೇಗೆ ಕೊನೆಗಂಡಾವು? ಹೀಗಾಗಿ ಹಿಂದಿನ ಕರ್ಮಗಳು ಉಳಿಯುತ್ತ ಬಂದು ಪ್ರತಿಯೊಂದು ಸಲ ಹುಟ್ಟಿ ಸತ್ತಾಗಲೂ ಕೆಲಕೆಲವು ಪುಣ್ಯಪಾಪಗಳು ಮುಂದೆ ಫಲವನ್ನು ಕೊಡುವ ರಾಶಿಗೆ ಸೇರುತ್ತ ಬರುವವು. ಆ ಗುಡ್ಡೆ ತುದಿಮೊದಲು ಕಾಣದಷ್ಟು ಬೆಳೆದರೂ ತನ್ನ ಅರಿವು ತನಗೆ ಆದೊಡನೆ ಹತ್ತಿಯ ಮುದೆಗೆ ಬೆಂಕಿ ಬಿದ್ದಂತೆ ಅವೆಲ್ಲ ಇದ್ದಲ್ಲಿಯೇ ಬೂದಿಯಾಗುವವು. ಅಲ್ಲಿಯವರೆಗೂ ಪ್ರತಿಯೊಂದು ಸಲ ಸತ್ತಾಗಲೂ ಕೆಲಕೆಲವು ಪುಣ್ಯಪಾಪಕರ್ಮಗಳು ಉಳಿಯುತ್ತಲೆ ಬಂದು ಅದರ ಫಲವಾಗಿ ಮೇಲಾದ ಮತ್ತು ಕೀಳಾದ ಜನ್ಮಗಳುಂಟಾಗುವವು.

—(ಸೂ ೩-೧-೨)

ಚಂದ್ರಲೋಕದಲ್ಲಿ ಆಗುವ ಸುಖಕ್ಕಾಗಿ ಮಾಡಿದ ಪುಣ್ಯವು ಮುಗಿಯುತ್ತಲೆ, ಎಣ್ಣೆ ಮುಗಿದ ಮೇಲೆ ದೀಪವು ಹೇಗೊ ಹಾಗೆ, ಅವರು ಅಲ್ಲಿ ಒಂದು ಕಾಲುಗಳಿಗೆಯೂ ಇರುವದಕ್ಕಾಗುವದಿಲ್ಲ. ಚಂದ್ರಮಂಡಲದಲ್ಲಿ ಸುಖಪಡುವದಕ್ಕೆಂದು ದೊರೆತಿದ್ದ ಶರೀರವು ವಿಶೇಷವಾಗಿ ನೀರಿನಿಂದಾದದ್ದು. ಆ ಪುಣ್ಯವು ಮುಗಿಯುತ್ತಲೆ ಜೀವನಿಗೆ ಉಂಟಾದ ಸಂತಾಪದಿಂದ ಆ ನೀರು, ಹೆತ್ತ ತುಪ್ಪವು ಕರಗುವಂತೆ, ಕರಗುತ್ತದೆ. ಆಗ ಅದು ಆಕಾಶದಂತೆ ಅತಿ ಸೂಕ್ಷ್ಮವಾಗುತ್ತದೆ. ಹೀಗಾಗಿ ಆಕಾಶ, ವಾಯು, ಹೊಗೆಯಂಥ ಮೋಡ, ಎಳೆಮೋಡ, ಬಲಿತ ಮೋಡ, ಮಳೆ-ಈ ಮೇಲಮೇಲಣಸ್ಥಿತಿಗಳನ್ನು ದಾಟಿ ಭೂಮಿಗಿಳಿದ ಜೀವನು ಧಾನ್ಯಗಳಲ್ಲಿ ಸೇರಿ ಗಂಡಹೆಂಡಿರ ಹೊಟ್ಟೆಗೆ ಹೊಕ್ಕು ಅಲ್ಲಿಂದ ಹೊರಬೀಳುವನು —(ಛಾಂ ೫-೧೦ ೫,೬)

ಈ ಸಂದರ್ಭದಲ್ಲ ಜೀವನು ಆಕಾಶ ಮೊದಲಾದವೇ ಆಗಿಬಿಡುವದಿಲ್ಲ; ಆಕಾಶದಂತೆ, ವಾಯುವಿನಂತೆ, ಹೊಗೆಯಂಥ ಮೋಡದಂತೆ, ಎಳೆಮೋಡದಂತೆ ಮತ್ತು ಬಲಿತ ಮೋಡದಂತೆ ಆಗುತ್ತಾನೆಂದರ್ಥ. ಆಯಾಸ್ವರೂಪನೇ ಆಗಿಬಿಟ್ಟರೆ ಅವನಿನ್ನು ಭೂಮಿಯ ಮೇಲೆ ಹುಟ್ಟುವದು ಹೇಗೆ? ಆದ್ದರಿಂದ ಅವನು ಅವುಗಳ ಸಮಾನನು ಮಾತ್ರ ಆಗುವನು. ಜೀವನು ಧಾನ್ಯದಲ್ಲಿ ಸೇರುವ ತನಕ ಆಕಾಶ ಮೊದಲಾದ ಸ್ಥಿತಿಗಳಿಂದ ಬೇಗಬೇಗ ಇಳಿಯುತ್ತಾನೆ. ಅವನು ಧಾನ್ಯದಲ್ಲಿ ಸೇರಿದ ಮೇಲೆ ಹೊರಬೀಳುವದು ಮಾತ್ರ ಕಷ್ಟ. ಧಾನ್ಯದಲ್ಲಿ ಸೇರಿದಾಗಲೂ ಅವನು ಧಾನ್ಯರೂಪನೇ ಆಗುವದಿಲ್ಲ. ಪಾಪಿಗಳಾದ ಬೇರೆ ಜೀವರು ಧಾನ್ಯವಾಗಿರುವರು. ಚಂದ್ರಲೋಕದಿಂದಿಳಿದವನು ಅವರೊಡನೆ ಅಂಟಿಕೊಂಡಿರುವನು. ಇಷ್ಟೆ. ಧಾನ್ಯರೂಪರಾದವರಿಗೆ ಆಗುವ ಸುಖಕಷ್ಟಗಳು ಇವನಿಗಿಲ್ಲ. ಇವನು ಧಾನ್ಯರೂಪನೇ ಆಗಿದ್ದರೆ ಧಾನ್ಯವನ್ನು ಬೇಯಿಸಿದಾಗ ಆಗುವ ದುಃಖದಿಂದ ಅಲ್ಲಿಂದ ಹೊರಟೇ ಹೋಗಬೇಕಾಗುವದು. ಹೀಗಾದರೆ ಅವನು ಮುಂದಿನ್ನು ಗಂಡಹೆಂಡಿರ ಹೊಟ್ಟೆಗೆ ಹೋಗಿ ಹುಟ್ಟುವದು ಹೇಗೆ? ಆದ್ದರಿಂದ ಧಾನ್ಯರೂಪರಾದ ಜೀವರೇ ಬೇರೆ. ಅವರಿಗೇ ಅಲ್ಲಿನ ಸುಖದುಃಖ. ಚಂದ್ರಮಂಡಲದಿಂದ ಇಳಿದವರಿಗೆ ಅಲ್ಲಿ ಯಾವ ಸುಖದುಃಖವೂ ಇಲ್ಲ. —(ಸೂ ೩-೧-೪..೬)

ಮಳೆಯ ಸ್ಥಿತಿಯನ್ನು ದಾಟಿ ಧಾನ್ಯವಾಗುವದು ಕೂಡ ಕಷ್ಟವೆ. ಏಕೆಂದರೆ :ಮಳೆಯು ಎಲ್ಲೆಲ್ಲಿಯೋ ಸುರಿದುಬಿಡುವದು. ಮಳೆಯ ನೀರೆಲ್ಲ ಸಸ್ಯಗಳ ಬೆಳೆವಳಿಗೆಗೇ ಉಪಯೋಗವಾಗುವದೆಂಬ ನಿಯಮವೂ ಇಲ್ಲ. ಮರುಭೂಮಿಯಲ್ಲಿ ಬಿದ್ದರಂತು ಅದರ ಸೊಲ್ಲೇ ಅಡಗಿಹೋಗುವದು. ತಿನ್ನುವದಕ್ಕೆ ತಕ್ಕದ್ದಲ್ಲದ ಮರಗಿಡಗಳಾದರೂ ಉಪಯೋಗವಿಲ್ಲ. ಆದ್ದರಿಂದ ಮಳೆಯ ಸ್ಥಿತಿಯನ್ನು ದಾಟಿದ ಮೇಲೆ ಧಾನ್ಯವಾಗುವದು ಕಷ್ಟ. ಧಾನ್ಯವಾದರೂ ಗಂಡಹೆಂಡಿರ ರಕ್ತಕ್ಕೆ ಸೇರುವದು ಇನ್ನೂ ಕಷ್ಟ. ಏಕೆಂದರೆ: ಆ ಧಾನ್ಯಗಳನ್ನು ಸಂನ್ಯಾಸಿಗಳೂ ಹುಡುಗರೂ ತಿಂದರೆ ನಡುಗಾಡಿನಲ್ಲಿ ದಾರಿ ತಪ್ಪಿದಂತಾಗುತ್ತದೆ. ತಿನ್ನುವವರು ಬಹುಜನರಾದ್ದರಿಂದ ಬಸಿರಾಗುವ ಯೋಗ್ಯತೆಯುಳ್ಳ ಗಂಡಹೆಂಡಿರ ಹೊಟ್ಟೆಗೆ ಹೋಗಿ ಅವರ ವೀರ್ಯದಲ್ಲಿ ಸೇರುವ ಯೋಗವು ಕಾಕತಾಲನ್ಯಾಯದಂತೆ ಉಂಟಾಗಬೇಕು. ಧಾನ್ಯದಲ್ಲಿ ಸೇರಿದ ಜೀವನು ಮೊದಲು ಗಂಡನ ಹೊಟ್ಟೆಗೆ ಹೋಗಿ ಅವನ ಎಲ್ಲ ಅವಯವಗಳಿಂದಲೂ ಜಿನುಗಿಬಂದ ವೀರ್ಯದಲ್ಲಿ ಸೇರಿ ಅವನು ಹೆಂಡತಿಯೊಡನೆ ಕೂಡಿ ಆ ತನ್ನ ವೀರ್ಯವನ್ನು ಅವಳ ಯೋನಿಯಲ್ಲಿ ಚೆಲ್ಲಿದಾಗ ಅಲ್ಲಿ ಬಹುಮಟ್ಟಿಗೆ ಆ ಗಂಡನ ರೂಪವನ್ನು ಹೊಂದಿ ಬೆಳೆಯುವನು.

—(ಛಾಂ ೫-೧೦-೬).

ಹೀಗೆ ಮೂಢರಾದ ಜೀವರು ತಮಗೆ ಬೇಕಾದ ದೇಹಕ್ಕಾಗಿ ಗಂಡಸಿನ ವೀರ್ಯದಲ್ಲಿ ಸೇರಿ ಹೆಂಗಸಿನ ಯೋನಿಯೊಳಕ್ಕೆ ಹೋಗುತ್ತಾರೆ. ಇನ್ನೂ ಮೂಢರಾದವರು ಮರ ಮೊದಲಾದ ಜನ್ಮಗಳನ್ನು ಪಡೆಯುತ್ತಾರೆ. ಅವರವರ ತಿಳಿವಳಿಕೆಯೂ ಅವರವರ ಕರ್ಮವೂ ಅವರವರನ್ನು ಅವರವರಿಗೆ ತಕ್ಕ ಜನ್ಮಕ್ಕೆ ತಳ್ಳುವವು.

—(ಕ ೫-೭).

ಒಂದು ಬಗೆಯಿಂದ ನೋಡಿದರೆ ಒಂದೇ ಜನ್ಮವೇ ಮೂರು ಜನ್ಮಗಳನ್ನೊಳಗೊಂಡಿರುವದು. ಅದು ಹೇಗೆಂದರೆ: ಚಂದ್ರಮಂಡಲದಿಂದ ಬಂದ ಜೀವನು ಮೊದಲು ಗಂಡಸಿನ ಹೊಟ್ಟೆಗೆ ಹೋಗಿ ಅವನ ವೀರ್ಯದಲ್ಲಿ ಸೇರುವನು. ಆ ವೀರ್ಯವೆಂಬುವದು ತನ್ನ ಎಲ್ಲ ಅವಯವಗಳಿಂದಲೂ ಜಿನುಗಿ

ಬಂದದ್ದಾದ್ದರಿಂದ ತಾನೇ ಆಗಿರುವದು. ಅದನ್ನು ಆವನು ತನ್ನ ಹೊಟ್ಟೆಯಲ್ಲಿ ಕಾದಿಟ್ಟುಕೊಂಡಿದ್ದು ತಾನು ಹೆಂಗಸನ್ನು ಕೂಡಿದಾಗ ಆವಳ ಯೋನಿಯೊಳಕ್ಕೆ ಚೆಲ್ಲುವನು. ಹೀಗೆ ಗಂಡಸಿನ ದೇಹದಿಂದ ಹೊರಬಿದ್ದದ್ದು ಮೊದಲನೆ ಜನ್ಮ. ಆ ವೀರ್ಯವು ಗಂಡಸಿನಲ್ಲಿ ತನ್ನದೇ ಒಂದಯವವೆಂಬಂತೆ ಹೆಂಗಸಿಗೂ ತನ್ನದೇ ಮೊಲೆ ಮೊದಲಾದವುಗಳ ಸಾಲಿಗೆ ಸೇರಿದ ಒಂದು ಅವಯವದಂತಾಗುವದು. ಆದ್ದರಿಂದಲೆ ಆ ಗರ್ಭವು ಅವಳಿಗೇನೂ ಕುರು ಮೊದಲಾದವುಗಳಂತೆ ನೋವನ್ನುಂಟುಮಾಡುವದಿಲ್ಲ. ಹೀಗೆ ಆ ಬಸುರಿಯು ತನ್ನ ಗಂಡನೆ ಹೊಟ್ಟೆಯೊಳಹೊಕ್ಕಿರುವದನ್ನು ತಿಳಿದು ಆ ಗರ್ಭವನ್ನು ಕೆಡಿಸುವ ಪದಾರ್ಥಗಳನ್ನು ತಿನ್ನದೆ ಅದನ್ನು ಬೆಳೆಸುವವುಗಳನ್ನೇ ಒಳಕೊಳ್ಳುತ್ತ ಅದನ್ನು ಕಾಪಾಡುವಳು. ತನ್ನನ್ನು ಹೊಟ್ಟೆಯೊಳಗಿಟ್ಟುಕೊಂಡು ಬೆಳೆಸುವದರಿಂದಲೆ ಆ ಗಂಡನು ಅವಳನ್ನು ಪೋಷಿಸಬೇಕಾಗಿರುವದು. ಒಬ್ಬರಿಗೊಬ್ಬರು ನೆರವಾಗದಿದ್ದರೆ ಲೋಕದಲ್ಲಿ ಒಬ್ಬರಿಗೊಬ್ಬರ ಸಂಬಂಧವೇ ಇಲ್ಲದೆ ಹೋದೀತು. ಆ ಗರ್ಭವು ಬೆಳೆದು ಮಗುವಾಗಿ ಅವಳ ಬಸಿರಿನಿಂದ ಹೊರಬಿದ್ದ ಮೇಲೆ ಗಂಡನು, ತನ್ನ ಮೇಲೆ ತಾನು ಹೇಗೊ ಹಾಗೆ, ಅದರ ಮೇಲೆ ಪ್ರೀತಿಯನ್ನು ತೋರಿಸುವನು. ಹೀಗೆ ಮಕ್ಕಳು ಹುಟ್ಟುವದರಿಂದಲೆ ಲೋಕವ್ಯವಹಾರವು ಎಡೆಬಿಡದೆ ಸಾಗುತ್ತಿರುವದು. ಆದ್ದರಿಂದ ಮಕ್ಕಳಾಗುವದು ಲೋಕವ್ಯವಹಾರಕ್ಕೆ ಸಾಧನವೇ ಹೊರತು ಮೋಕ್ಷಕ್ಕಲ್ಲ. ಹೀಗೆ ತಾಯ ಬಸಿರಿನಿಂದ ಹೊರಬೀಳುವದು ವೀರ್ಯದ ರೂಪದಿಂದ ತಂದೆಯ ಬಸಿರಿನಿಂದ ಹೊರಬಿದ್ದದ್ದಕ್ಕೆ ಎರಡನೆಯದು. ಆಮೇಲೆ ಮಗನು ತನ್ನ ತಂದೆಯ ವ್ಯಹಾರವನ್ನೆಲ್ಲ ಮುಂದೆ ಸಾಗಿಸುವವನಾಗುವನು. ತಂದೆಯೆನಿಸಿಕೊಂಡವನು ಮುಪ್ಪಾಗಿ ಸಾಯುವನು. ಆ ಸತ್ತವನು ಹುಲ್ಲಜಿಗಣೆಯಂತೆ ತನ್ನ ಹಿಂದಿನ ದೇಹವನ್ನು ಬಿಡುವಾಗಲೆ ತನ್ನ ಕರ್ಮದಿಂದ ದೊರೆತ ಮುಂದಿನ ದೇಹಕ್ಕೆ ತೂರುವನು. ಇದು ಅವನ ಮೂರನೆ ಜನ್ಮ.

—(ಐ ೪-೧..೪)

ಗರ್ಭದಲ್ಲಿ ತಂದೆಯ ವೀರ್ಯವು ಹೆಚ್ಚಾಗಿದ್ದರೆ ಗಂಡುಮಗುವೂ ತಾಯ ವೀರ್ಯವು ಹೆಚ್ಚಾಗಿದ್ದರೆ ಹೆಣ್ಣುಮಗುವೂ ಎರಡೂ ಸಮವಾದರೆ ನಪುಂಸ

ಕವೂ ಆಗುವವು. ಗರ್ಭವೇರ್ಪಡುವಾಗ ಆ ಗಂಡಹೆಂಡಿರ ಮನಸ್ಸು ತಳ ಮಳಿಸುತ್ತಿದ್ದರೆ ಅಂಗಹೀನತೆ ಮೊದಲಾದ ಕೊರತೆಗಳುಳ್ಳ ಮಕ್ಕಳಾಗು ವವು. ಅವರ ಮನಸ್ಸು ಸಮಾಧಾನದಿಂದಿದ್ದರೆ ಅವರಿಗೆ ತಕ್ಕ ಆವರಂಥ ಮಕ್ಕಳೇ ಆಗುವವು. ಹೆಂಗಸಿನ ಬಸಿರಿನಿಂದ ಬರುವದಕ್ಕೆ ಮುಂಚೆ ಆ ಮಗು ವಿಗೆ ತನ್ನ ಹಿಂದಣ ಹುಟ್ಟುಗಳ ಜಾತಿಗಳೂ ತಾನು ಮಾಡಿದ ಒಳ್ಳೆ ಮತ್ತು ಕೆಟ್ಟ ಕರ್ಮಗಳೂ ಎಲ್ಲವೂ ನೆನಪಿಗೆ ಬರುವವು. ಆಗ ಅದು ದೇವರಿಗೆ ಮರೆ ಹೊಗುವದೇನೆಂದರೆ: "ನಾನು ಹಿಂದೆ ಲೆಕ್ಕವಿಲ್ಲದಷ್ಟು ಬಸಿರುಗಳಲ್ಲಿ ಬಂ ದೆನು ; ಬಗೆಬಗೆಯ ಊಟಗಳನ್ನುಂಡೆನು ; ಎಣಿಕೆಗೆ ಬರದಷ್ಟು ಮೊಲೆ ಗಳನ್ನು ಚೀಪಿದೆನು. ಈ ಬ್ರಹ್ಮಾಂಡದಲ್ಲಿ ನಾನು ಹುಟ್ಟದ ಮತ್ತು ಸಾಯದ ನೆಲವೇ ಇಲ್ಲ. ಶಿಶುತನ, ಹುಡುಗತನ, ಹರೆಯ, ಮುಪ್ಪು, ರೋಗ-ಮೊದ ಲಾದವುಗಳ ದುಃಖಗಳಲ್ಲೆಲ್ಲ ನೊಂದು ನೆಲಕಚ್ಚಿಡಿದೆನು. ಈ ಸಲ ಈ ಬಸಿ ರಿನಿಂದ ಹೊರಬಿದ್ದೆನಾದರೆ ನನ್ನ ಪಾಪಗಳನ್ನೆಲ್ಲ ಕಳೆದು ಮುಕ್ತಿಯನ್ನು ಕೊಡುವಂಥ ದೇವರಿಗೆ ಶರಣುಹೋಗುತ್ತೇನೆ. ಹಿಂದೆ ನಾನು ಯಾರ ಯಾರಿಗಾಗಿಯೋ ಏನೇನೋ ಕರ್ಮಗಳನ್ನು ಮಾಡಿದೆನು. ಅದರ ಫಲವನ್ನು ಅವರೆಲ್ಲ ಉಂಡು ಹೋದರು ; ನಾನು ಮಾತ್ರ ಬೇಗುದಿಗೊಳ್ಳುತ್ತಿದ್ದೇನೆ." ಹೀಗೆಲ್ಲ ಹಂಬಲಿಸಿದ ಆ ಜೀವನು ತಾಯ ಬಸಿರಿನಿಂದ ಹೊರಬೀಳುತ್ತಲೆ ಒಂದು ಗಾಳಿ ತಾಕಿ ಅದನ್ನೆಲ್ಲ ಮರೆತುಬಿಡುತ್ತಾನೆ. ಹೀಗೆ ಸಂಸಾರಿಗಳು ಬಸಿರಿನಲ್ಲಿ ಹುಳುಗಳಂತೆ ಮೂತ್ರಪುರೀಷಗಳನ್ನು ತಿಂದುಕೊಂಡು ನರಕದಲ್ಲಿ ಹೇಗೊ ಹಾಗೆ ಶರೀರದಲ್ಲಿರುವರು ವಿವೇಕಿಯು ಇದನ್ನು ಮನಸ್ಸಿಗೆ ತಂದು ಕೊಂಡು ವೈರಾಗ್ಯವನ್ನು ಹೊಂದಬೇಕು. —(೧)

ಇದನ್ನೆಲ್ಲ ಸಹಿಸಿಕೊಂಡು ಹುಟ್ಟಿದರೂ ಮತ್ತು ಹುಟ್ಟಿದ ಮೇಲೆ ಲೋಕಕ್ಕೆಲ್ಲ ಮೇಲುಗೈ ಆಗಿ ಬಾಳಿದರೂ ಯಾರ ಬಾಳೂ ನೆಲೆಯಾಗಿರುವ ದಿಲ್ಲ. ಮಹಾಮಹಾಧನುರ್ಧರರೂ ಚಕ್ರವರ್ತಿಗಳೂ ಆದ ಸುದ್ಯುಮ್ನ, ಇಂದ್ರದ್ಯುಮ್ನ, ಕುವಲಯಾಶ್ವ-ಮೊದಲಾದವರೆಲ್ಲ ತಮ್ಮ ಪ್ರಾಣಸಮಾನ ರಾದ ನಂಟರಿಷ್ಟರನ್ನೂ ಅಪಾರವಾದ ಐಶ್ವರ್ಯವನ್ನೂ ಬಿಟ್ಟು ಕಣ್ಣುಮುಚ್ಚಿ ಕೊಂಡರು. ಗಂಧರ್ವರು ಮೊದಲಾದವರಿಗೂ ಕೇಡು ತಪ್ಪಲಿಲ್ಲ. ದೊಡ್ಡ

ದೊಡ್ಡ ಸಮುದ್ರಗಳೂ ಒಣಗುತ್ತವೆ. ಬೆಟ್ಟಗಳು ಬೀಳುತ್ತವೆ. ಭೂಮಿ ಮುಳುಗುತ್ತದೆ. ದೇವತೆಗಳು ಕಾಲಿಗೆ ಬುದ್ಧಿಯನ್ನು ಹೇಳುತ್ತಾರೆ. ಸಂಸಾರದಲ್ಲಿದ್ದು ವಿಷಯಗಳನ್ನನುಭವಿಸುವದರಲ್ಲೇನೇನೂ ಸುಖವಿಲ್ಲ.

—(ಮೈ ೧-೫.೭)

## ಬೆಳಕಿನ ದಾರಿ

ಇರಲಿ. ಇದುವರೆಗೆ ದಕ್ಷಿಣದ ದಾರಿಯು ಮಾತಾಯಿತಷ್ಟೆ. ಶಾಸ್ತ್ರವು ಇನ್ನೊಂದು ದಾರಿಯನ್ನೂ ಹೇಳಿದೆ. ಅದು ಉತ್ತರದ ದಾರಿ. ಅಗ್ನಿಯೆಂಬ ದೇವತೆ, ಜ್ಯೋತಿಯೆಂಬ ದೇವತೆ- ಹಗಲಿನ ಅಭಿಮಾನಿದೇವತೆ, ಶುಕ್ಲ ಪಕ್ಷದೇವತೆ, ಉತ್ತರಾಯಣದೇವತೆ ಈ ದೇವತೆಗಳು ಕರೆದುಕೊಂಡು ಹೋಗುವ ದಾರಿಯು ಉತ್ತರದ ದಾರಿ. ಈ ದಾರಿಯಲ್ಲಿ ಮುಖ್ಯವಾಗಿ ಉತ್ತರಾಯಣದೇವತೆ ಇರುವದರಿಂದ ಇದು ಉತ್ತರದ ದಾರಿಯೆನಿಸಿತು. ಇದನ್ನು ದೇವಯಾನವೆಂದೂ ಬೆಳಕಿನ ದಾರಿಯೆಂದೂ ಕರೆಯುವದುಂಟು. ಉಪಾಸಕರು ಈ ದಾರಿಯನ್ನು ಹಿಡಿಯುವರು. ಅವರು ಜಗತ್ಕಾರಣವಾದ ಬ್ರಹ್ಮನನ್ನು ಉಪಾಸನೆ ಮಾಡಿದ ಹೆಚ್ಚುಗಾರಿಕೆಯ ಫಲವಾಗಿ ಅವರಿಗೆ ಈ ದಾರಿ ದೊರೆಯುವದು. ಅವರು ಈ ದಾರಿಯಲ್ಲಿ ಸಾಗಿ ತಾವು ಉಪಾಸನೆ ಮಾಡಿದ ಬ್ರಹ್ಮನ ಬಳಿಗೆ ಸೇರುವರು. ಅಮೇಲೆ ಆ ಬ್ರಹ್ಮನ ಜೊತೆಯಲ್ಲಿ ಅವರಿಗೆ ಮುಕ್ತಿಯಾಗುವದು. —(ಛ ೮-೫೪)

ವಿಶೇಷವಾಗಿ ಇಂದ್ರಿಯಗಳನ್ನು ಗೆದ್ದು ಬ್ರಹ್ಮಚರ್ಯೆಯಲ್ಲಿದ್ದು ಶ್ರದ್ಧೆಯಿಂದ ಸೂರ್ಯನಲ್ಲಿರುವ ಚೈತನ್ಯವನ್ನು ಜಗತ್ಕಾರಣವೆಂದೂ ಅದು ತಾನೆಂದೂ ಭಾವಿಸಿದವರು ಉತ್ತರದ ದಾರಿಯನ್ನು ಹಿಡಿದು ಸೂರ್ಯನನ್ನು ಪಡೆಯುವರು. ಅವರಲ್ಲಿ ಚಂದ್ರನಂತೆ ಹೆಚ್ಚುವಿಕೆ, ತಗ್ಗುವಿಕೆ- ಇಲ್ಲ. ಅಲ್ಲಿ ಯಾವ ಹೆದರಿಕೆಯೂ ತಲೆಹಾಕುವದಿಲ್ಲ. ಇದು ಬಹಳ ಹೆಚ್ಚಿನ ಗತಿ. ಬರೀ ಕರ್ಮವನ್ನು ಮಾಡಿ ದಕ್ಷಿಣದ ದಾರಿಯಲ್ಲಿ ಹೋದವರು ಹೇಗೆ ಮತ್ತೆ ಭೂಲೋಕದಲ್ಲಿ ಹುಟ್ಟುವರೊ ಹಾಗೆ ಉತ್ತರದ ದಾರಿಯಲ್ಲಿ ಹೋದವರು ಹಿಂದಿರುಗುವದಿಲ್ಲ. ಬ್ರಹ್ಮದ ನೆಲೆಯನ್ನರಿಯದವರಿಗೆ ಇಲ್ಲಿ ಕಾಲಿಡಲಾಗುವದಿಲ್ಲ.

—(ಪ್ರ ೧-೧೦)

ಈ ದಾರಿಯನ್ನು ಇನ್ನೂ ಬಿಚ್ಚಿ ಹೇಳುವದೆಂದರೆ ಇದು ಅರ್ಚಿ, ಅಗ್ನಿ, ಅಹಸ್ಸು (ಹಗಲು), ಶುಕ್ಲಪಕ್ಷ, ಉತ್ತರಾಯಣ, ಸಂವತ್ಸರ, ದೇವಲೋಕ, ವಾಯು, ಆದಿತ್ಯ, ಚಂದ್ರ, ವಿದ್ಯುತ್ತು, ವರುಣ, ಇಂದ್ರ, ಪ್ರಜಾಪತಿ -ಈ ದೇವತೆಗಳನ್ನು ಮುಂದುಮಾಡಿಕೊಂಡು ಸೇರುವ ಬ್ರಹ್ಮಲೋಕ. ಇವೆಲ್ಲ ಒಂದು ದಾರಿಯಲ್ಲಿ ಒಂದರ ಮುಂದೊಂದಿರುವ ಗುಡ್ಡ, ನದಿ, ಆಲದ ಮರ-ಮೊದಲಾದವುಗಳಂತೆ ಆ ದಾರಿಹೋಕರು ಇಳಿದುಕೊಳ್ಳುವ ಒಂದೊಂದು ಲೋಕಗಳೆಂದೂ ತೋರಬಹುದು. ಅವು ಲೋಕಗಳಲ್ಲ. ಏಕೆಂದರೆ: ಆ ದಾರಿಯಲ್ಲಿ ಸಾಗುವ ಜೀವರ ಇಂದ್ರಿಯಗಳೆಲ್ಲ ಮೂಲೆಗೆ ಮುಟ್ಟಾಗಿರುವದರಿಂದ ಅಲ್ಲಿ ಅವರು ಏನನ್ನೂ ಅನುಭವಿಸುವ ಹಾಗಿಲ್ಲ. ಆ ಜೀವರ ಇಂದ್ರಿಯಗಳು ಮೂಲೆಗೆ ಮುಟ್ಟಾಗಿರುವದರಿಂದಲೆ ಅವರನ್ನು ನಡೆಸಿಕೊಂಡು ಹೋಗುವದಕ್ಕೆ ಬೇರೊಬ್ಬರು ಬೇಕೂಬೇಕು. ಆದ್ದರಿಂದ ಅವರೆಲ್ಲ ದೇವತೆಗಳೆಂದೇ ಇಟ್ಟುಕೊಳ್ಳಬೇಕು —(ಸೂ ೪-೩-೧..೪)

ಉಪಾಸಕರು ತಮ್ಮನ್ನು ಕರೆದುಕೊಂಡು ಹೋಗುವ ಮೊದಲನೆಯ ದೇವತೆಯಾದ ಅಗ್ನಿಯನ್ನು ತಮ್ಮ ಸಾವಿನ ಕಾಲದಲ್ಲಿ ಬೇಡಿಕೊಂಡಿರುವದೂ ಉಂಟು. ಅದರ ಸಾರಾಂಶವೇನೆಂದರೆ: "ಹೆ, ಅಗ್ನಿದೇವ, ನನ್ನನ್ನು ಒಳ್ಳೆ ಉತ್ತರದ ದಾರಿಯಲ್ಲಿ ಕರೆದುಕೊಂಡು ಹೋಗು. ದಕ್ಷಿಣದ ದಾರಿಯಲ್ಲಿ ಎಷ್ಟೋ ಸಲ ಹೋಗಿಯೂ ಬಂದೂ ನನಗೆ ಸಾಕಾಗಿದೆ. ಆದ್ದರಿಂದ ಮತ್ತೆ ಮತ್ತೆ ಬೇಡಿಕೊಳ್ಳುತ್ತೇನೆ. ಹಿಂದಿರುಗದಂಥ ದಾರಿಯಲ್ಲಿ ನನ್ನನ್ನು ಕರೆದುಕೊಂಡು ಹೋಗು. ನಾನು ನನ್ನ ಉಪಾಸನೆಯ ಫಲದ ರುಚಿಯನ್ನು ನೋಡಬೇಕು. ನಾನು ಮಾಡಿರುವದೆಲ್ಲ ನಿನಗೆ ಚೆನ್ನಾಗಿ ಗೊತ್ತು. ನನ್ನಲ್ಲಿರುವ ಪಾಪವನ್ನು ದೂರಮಾಡು. ಅದರಿಂದ ಶುದ್ಧನಾಗಿ ನಾನು ನನ್ನ ಇಷ್ಟವನ್ನು ಪಡೆಯುತ್ತೇನೆ. ಈಗ ನಾನು ನಿನಗೆ ಯಾವ ಸೇವೆಯನ್ನೂ ಮಾಡಲಾರೆನು. ನಿನಗೆ ಬಹಳವಾಗಿ ನಾನು ಕಾಲಿಗೆ ಬೀಳುತ್ತೇನೆ.'' ಹೀಗೆ ಅಗ್ನಿಯು ದೇವತೆಯಾದಮೇಲೆ ಉಳಿದವರೂ ದೇವತೆಗಳೇ ಆಗಿರಬೇಕು.

—(ಈ ೧೮)

ಉತ್ತರದ ದಾರಿಯಲ್ಲಿ ವಿಶೇಷವಾಗಿ ಬೆಳಕಿನ ಅಭಿಮಾನಿದೇವತೆಗ ಳಿದ್ದು ಅದು ಬೆಳಕಿನ ದಾರಿಯೆನಿಸಿಕೊಂಡಿರುವದರಿಂದ ಆ ದಾರಿಯಲ್ಲಿ ಹೋಗಬೇಕಾದರೆ ಉಪಾಸಕರು ಹಗಲೇ ಸಾಯಬೇಕಾದೀತೆಂದು ತಿಳಿಯ ಬಾರದು. ಸಾವಿನ ಮೇಲೆ ನಮ್ಮ ಅಧಿಕಾರವಿಲ್ಲ. ಉಪಾಸಕರು ಹೊರ ಬೀಳುವಾಗ ಆಶ್ರಯಿಸುವ ಸುಷುಮ್ನಾನಾಡಿಗೂ ಸೂರ್ಯರಶ್ಮಿಗೂಯಾವಾಗಲೂ ಸಂಬಂಧವಿರುವದು. ಸುಷುಮ್ನಾನಾಡಿಯು ಬ್ರಹ್ಮಲೋಕದ ದಾರಿಯಬಾಗಿಲು ಆದ್ದರಿಂದ ಉಪಾಸಕನು ರಾತ್ರಿ ಸತ್ತ ಮಾತ್ರಕ್ಕೇ ಬೆಳಕಿನ ದಾರಿಯೂ ಬ್ರಹ್ಮಲೋಕವೂ ಸಿಕ್ಕದೆ ಹೋಗುವದಿಲ್ಲ. ಹೀಗೆಲ್ಲ ಇರುವದರಿಂದ ಉಪಾ ಸಕನಿಗೆ ಕಾಲವೇನೂ ಮುಖ್ಯವಲ್ಲ. ಅವನು ದಕ್ಷಿಣಾಯನದಲ್ಲಿ ಸತ್ತರೂ ಅವನ ಉಪಾಸನೆಯ ಫಲವು ಅವನಿಗೆ ದಕ್ಕಿಯೇ ದಕ್ಕುವದು. ಉತ್ತರಾ ಯಣದ ಕಾಲಕ್ಕೆ ಹೆಚ್ಚುಗಾರಿಕೆಯನ್ನು ಹೇಳುವ ಮಾತುಗಳು ಮೂಢರನ್ನು ಕುರಿತವುಗಳು. ಭೀಷ್ಮಾಚಾರ್ಯರು ಉತ್ತರಾಯಣದ ಕಾಲವನ್ನು ಎದುರು ನೋಡುತ್ತಿದ್ದರೆಂದು ಮುಂತಾಗಿ ಪುರಾಣದಲ್ಲಿ ಹೇಳಿರುವದುಂಟಾದರೂ ಅದಕ್ಕೆ ಕಾರಣ ಬೇರೆ ಇದೆ. ಅವರಿಗೆ ಮನಸ್ಸು ಬಂದಾಗ ಸಾಯಬಹು ದೆಂದು ತಂದೆಯ ವರವಿತ್ತು. ಅದನ್ನು ಜನರಿಗೆ ತೋರ್ಪಡಿಸುವದಕ್ಕಾಗಿ ಅವರು ಕಾದಿದ್ದರೇ ಹೊರತು ಉಪಾಸನೆಯ ಫಲವೆಲ್ಲಿ ತಪ್ಪಿ ಹೋದೀತೋ ಎಂಬ ಅಂಜಿಕೆಯಿಂದ ಕಾದಿರಲಿಲ್ಲ. ಇನ್ನು ಸ್ಮೃತಿಗಳಲ್ಲಿ ಹಗಲು ಮೊದ ಲಾದ ಕಾಲಕ್ಕೆ ಹೆಚ್ಚುಗಾರಿಕೆಯನ್ನು ಹೇಳಿರುವದುಂಟು. ಶ್ರುತಿಯನ್ನು ಹಿಡಿದು ಆಡುವ ಮಾತಿನ ನಡುವೆ ಸ್ಮೃತಿಯು ತಲೆಹಾಕಲಾರದು. ಸ್ಮೃತಿ ಯಲ್ಲಿರುವ ಆ ಮಾತುಗಳಿಗೂ ಅಭಿಮಾನಿದೇವತೆಗಳೆಂದೇ ಅರ್ಥಮಾಡಿ ದರೆ ಯಾವ ವಿರೋಧವೂ ಬರುವದಿಲ್ಲ. —(ಸೂ ೪-೨-೧೦,೧೧)

ಹೀಗೆ ಮನುಷ್ಯನಿಗೆ ಬದುಕಿರುವಾಗಲೂ ಒದ್ದಾಟ; ಸಾಯುವಾಗಲೂ ಒದ್ದಾಟ; ಸತ್ತಮೇಲಿನ ದಾರಿಯಲ್ಲಿಯೂ ಒದ್ದಾಟ; ಆಮೇಲೆ ಹುಟ್ಟು ವಾಗಲೂ ಒದ್ದಾಟ. ಬ್ರಹ್ಮಲೋಕಕ್ಕೆ ಹೋದರೆ ಒದ್ದಾಟವಿಲ್ಲವೆಂದು ತೋರಿದರೂ ಅಲ್ಲಿಯೂ ಅದರ ವಾಸನೆ ಹೋಗಿರುವದಿಲ್ಲ. ಅಲ್ಲಿಯ ಸುಖವು ಬಹು ಹೆಚ್ಚಿನದಾದ್ದರಿಂದಲೂ ಅಲ್ಲಿಂದ ಹಾಗೆಯೇ ಮೋಕ್ಷವಾಗಿ

ಬಿಡುವ ಸಂಭವವಿರುವವದರಿಂದಲೂ ಒದ್ದಾಟಗಳು ಎದ್ದು ಕಾಣವೆ ಇರ ಬಹುದು. ಇಷ್ಟೇ. ಒಟ್ಟಿನ ಮೇಲೆ ಸಂಸಾರವೆಂಬುವದೆಲ್ಲ ಒದ್ದಾಟದ ಮಯವೆ. ಮನುಷ್ಯನು ತನಗೆ ದೇವರು ಕೊಟ್ಟಿರುವ ಬುದ್ಧಿಶಕ್ತಿಯನ್ನು ಸಾರ್ಥಕಗೊಳಿಸಿಕೊಳ್ಳಬೇಕಾದರೆ ಸಂಸಾರದಲ್ಲಿರುವ ಆ ಒಗರನ್ನೆಲ್ಲ ಮುರಿ ಯುವ ಸಾಧನವನ್ನು ಕಂಡುಹಿಡಿಯಬೇಕು ಮತ್ತು ಅದನ್ನು ವ್ಯಯಿಣಿಸಿ ಕೊಂಡು ತಾನು ಹಾಯಾಗಬೇಕು. ಇಲ್ಲದಿದ್ದರೆ ಅವನ ಬಾಳು ವ್ಯರ್ಥ.

# ೨—ಸಂಸಾರ ವೆಂಬ ಕುತ್ತಕ್ಕೆ ಮದ್ದು

## ಜಗತ್ತಿನ ಅಕ್ಕರೆಯನ್ನು ಬಿಡುವದು

ಈ ಸಂಸಾರವೆಂಬ ಅರಳೀಮರದಿಂದ ಹೊರಸಿಡಿದು ಬಾಳುವದೆನ್ನು ವದು ಆಗದ ಮಾತು. ಆದ್ದರಿಂದ ಈ ಸಂಸಾರ ಹಾಸುಹೊಕ್ಕಾಗಳಾಗಿ ರುವ ಕುತ್ತಕ್ಕೆ ನಾವು ಮದ್ದನ್ನು ಕಾಣುವದು ಜಾಣತನ. ಅದು ಶಿಂಬಳ ದಲ್ಲಿ ಬಿದ್ದ ನೊಣದಂತೆ ಸಂಸಾರದಲ್ಲಿಯೇ ತೊಳಲುತ್ತಿರುವ ನಮ್ಮ ಬುದ್ಧಿಗೆ ಹೊಳೆಯುವದಿಲ್ಲ. ಈ ಜಗತ್ತಿನಲ್ಲಿ ತುಂಬಿರುವ ಕುತ್ತಕ್ಕೆ ಜಗತ್ತನ್ನು ಹುಟ್ಟಿಸಿದ ದೇವರೇ ಮದ್ದನ್ನು ಹೇಳಬೇಕು. ಪರಮದಯಾಲುವಾದ ಅವನು ಅದನ್ನು ಹೇಳಿಯೇ ಇರುತ್ತಾನೆ. ಆದ್ದರಿಂದ ಅದನ್ನು ಹುಡುಕಿಕೊಂಡು ನಾವು ಅವನ ಪ್ರಯತ್ನವಿಲ್ಲದೆ ನಿಃಶ್ವಾಸದ ರೂಪವಾಗಿ ಬಂದಿರುವ ವೇದಗಳ ಕಡೆಗೆ ಕಣ್ಣು ಹಾಕಬೇಕು. ಹೀಗಿರುವದರಿಂದ ಆ ಕಡೆಗೆ ನೋಡಿ ಸಂಸಾರ ವೆಂಬ ಕುತ್ತಕ್ಕೆ ಮದ್ದಾಗಿ ಕಂಡ ವಿಷಯಗಳು ಇಲ್ಲಿ ಹೇಳಲಾಗುವವು.

ಹೊರಗಣ ಸದ್ದು ಮೊದಲಾದ ವಿಷಯಗಳು ಕಿವಿ ಮೊದಲಾದ ಇಂದ್ರಿ ಯಗಳಿಗೆ ಬಂದು ಕೂಡಿದರೆ ಆಗ ಅದರಿಂದ ಶೀತವೊ ಉಷ್ಣವೊ ಸುಖವೊ ದುಃಖವೊ ಉಂಟಾಗುವವು. ಶೀತವು ಒಮ್ಮೆ ಬೇಕೆನಿಸಬಹುದು ; ಒಮ್ಮೆ ಬೇಡವೆನಿಸಬಹುದು. ಉಷ್ಣವೂ ಹಾಗೆಯೆ. ಸುಖವು ಯಾವಾಗಲೂ ಬೇಕೆ ನಿಸುವಂಥದ್ದಾಗಿರುವದು; ದುಃಖವು ಯಾವಾಗಲೂ ಬೇಡವೆನಿಸುವಂಥದ್ದಾ ಗಿರುವದು. ಹೀಗೆ ಇದು ಕೊಡುವ ಫಲವೂ ಬಣ್ಣಬಣ್ಣದ್ದಾಗಿರುವದು. ಈ ಫಲಗಳಾಗುವದಕ್ಕೆ ಸಾಧನವಾದ ವಿಷಯಗಳ ಮತ್ತು ಇಂದ್ರಿಯಗಳ

ಸೇರಿಕೆಯೂ ಒಮ್ಮೆ ಬರತಕ್ಕದ್ದೂ ಒಮ್ಮೆ ಹೋಗತಕ್ಕದ್ದೂ ಆಗಿರುವವು. ಹೀಗೆ ಇವು ನೆಲೆಯಾದದ್ದಲ್ಲವಾದ್ದರಿಂದ ಇದನ್ನು ಸುಮ್ಮನೆ ಕಣ್ಣುಮುಚ್ಚಿಕೊಂಡು ಅನುಭವಿಸಿಬಿಡಬೇಕು. ಬೇಕೆನಿಸಿದ್ದು ದೊರೆಯಿತೆಂದು ಹಿಗ್ಗಬಾರದು; ಬೇಡವಾದದ್ದು ಬಂದು ಗಂಟುಬಿತ್ತೆಂದು ತಗ್ಗಬಾರದು.

—(ಭ ೨-೧೪)

(ಅ) ಅದಕ್ಕೇನು ಉಪಾಯ? ಅಸಂಗವೆಂಬ ಬಲವಾದ ಕೊಡಲಿಯಿಂದ ಆ ಮರವನ್ನು ತುಂಡುತುಂಡು ಮಾಡಿಬಿಡಬೇಕು (ಭ ೧೫-೩). (ಆ) ವಿಷಯಗಳ ಮತ್ತು ಇಂದ್ರಿಯಗಳ ಸೇರಿಕೆಯಿಂದಾಗುವ ಸುಖಗಳೆಂಬುವೆಲ್ಲ ಈ ಲೋಕದ ಮತ್ತು ಪರಲೋಕದ ದುಃಖಕ್ಕೇ ಕಾರಣವೆಂದೂ ಬಂದು ಹೋಗತಕ್ಕವುಗಳೆಂದೂ ತಿಳಿದ ವಿವೇಕಿಯು ಇವುಗಳಲ್ಲಿ ಸುಖದ ವಾಸನೆ ಕೂಡ ಇಲ್ಲವೆಂದರಿತವನಾಗಿ ಪಶುಗಳಂತೆ ಅವುಗಳ ಮೇಲೆ ಅಕ್ಕರೆಯನ್ನಿಡದೆ ಅವುಗಳ ಕಡೆಯಿಂದ ಇಂದ್ರಿಯಗಳನ್ನು ಹಿಮ್ಮೆಟ್ಟಿಸಬೇಕು (ಭ೫-೨೨). (ಇ) ಯಾವನು ಸುಖವು ಬಂತೆಂದು ಹಿಗ್ಗದೆ ದುಃಖವು ಬಂತೆಂದು ತಗ್ಗದೆ ಒಂದೇ ರೀತಿಯಲ್ಲಿರುವನೋ ಆ ಜಾಣನನ್ನು ಶೀತೋಷ್ಣ ಮೊದಲಾದವುಗಳು ಎಷ್ಟು ಮಾತ್ರವೂ ನೋಯಿಸಲಾರವಾದ್ದರಿಂದ ಅವನು ಮೋಕ್ಷಕ್ಕೆ ತಕ್ಕವನಾಗುತ್ತಾನೆ (ಭ ೨-೧೫). (ಈ) ಹೊರಗಣ ವಿಷಯಗಳಲ್ಲಿ ಆಸಕ್ತಿ ಇಲ್ಲದ ಮನಸ್ಸಿಗೆ ಆಗುವ ಸುಖವು ಎಂದಿಗೂ ಅರೆಯಾಗದ ಬ್ರಹ್ಮಾನಂದ (ಭ ೫-೨೧).

ಅಸಂಗವೆಂಬ ಕೊಡಲಿ ಯಾವದು? ಸಂಸಾರದ ಮೇಲೆ ಅಕ್ಕರೆ ಇಲ್ಲದಿರುವದೇ ಅಸಂಗವೆಂಬ ಕೊಡಲಿ. ಅದು ತುದಿನಾಲಿಗೆಯ ಮಾತ್ರದ್ದಾಗಬಾರದು. ಅಂಥದ್ದು ಬಹುಕಾಲದಿಂದ ಇರುವ ಆ ಮರಕ್ಕೆ ಕಚ್ಚು ಹಾಕಲಾರದು. ಆ ಅಸಂಗತ್ವವು ಹೃದಯದಿಂದ ಮೇಲಕ್ಕೆದ್ದು ಬಂದದ್ದಾಗಿರಬೇಕು. ಸಂಸಾರವೆಲ್ಲ ದುಃಖಮಯವೆಂದು ತೋರಿದ ಮೇಲೆ ಯಾವ ವಿವೇಕಿಗೆ ತಾನೆ ಅಕ್ಕರೆ ಇದ್ದೀತು! ಅದರ ಮೇಲಿನ ಅಕ್ಕರೆ ಮೊದಲು ಅಳಿಯಬೇಕು. ಆ ಅಕ್ಕರೆಯನ್ನಿಟ್ಟುಕೊಂಡು ಸುಖದುಃಖಗಳ ಹೊಡೆತ

ವನ್ನು ತಪ್ಪಿಸಿಕೊಳ್ಳುವೆನೆಂದರೆ ದಕ್ಕೀತೆ? ಒಳಕಲ್ಲೊಳಗೆ ತಲೆಯನ್ನಿಟ್ಟು ಒನಕೆಯ ಪೆಟ್ಟನ್ನು ತಪ್ಪಿಸಿಕೊಳ್ಳಲಾದೀತೆ? ಸಂಸಾರದ ಮೇಲಿನ ಅಕ್ಕರೆ ಮೊದಲು ಇಂಗಬೇಕು.

ಅಸಂಗದ ಸಾಧನಗಳನ್ನು ಇನ್ನೂ ಹೇಳಬಹುದು. ಸದ್ದು, ಸೋಂಕು-ಮೊದಲಾಗಿ ಈ ಲೋಕದಲ್ಲಿ ಮತ್ತು ಮುಂದಿನ ಲೋಕದಲ್ಲಿ ದೊರೆಯುವ ಸುಖಸಾಧನಗಳು ಬೇಕೆನಿಸದಿರುವದೂ ಹುಟ್ಟು, ಸಾವು, ಮುಪ್ಪು, ಬೇನೆ ಇವುಗಳೆಲ್ಲ ದುಃಖಗಳೆಂಬ ದೋಷದ ಮಯಗಳೆಂದು ಮನಸ್ಸಿಗೆ ಹಚ್ಚಿಕೊಳ್ಳುವದೂ-ಎಂದರೆ ಹುಟ್ಟುವಿಕೆಯಲ್ಲಿ ಬಸಿರಿನಲ್ಲಿರುವ ಮತ್ತು ಬಸಿರಿನಿಂದ ಹೊರಬೀಳುವ ದೋಷವೂ ಸಾವಿನಲ್ಲಿ ಬಗೆಬಗೆಯ ಸಂಕಟಗಳೆಂಬದೋಷವೂ ಮುಪ್ಪಿನಲ್ಲಿ ಪ್ರಜ್ಞೆ, ಶಕ್ತಿ, ತೇಜಸ್ಸು-ಇವೆಲ್ಲ ಕುಗ್ಗುವ ದೋಷವೂ ಬೇನೆಗಳಲ್ಲಿ ನೋವು, ಗಾಸಿ- ಮೊದಲಾದ ದೋಷವೂ ಇರುವದೆಂದೂ- ಹೀಗೆ ಹುಟ್ಟು, ಸಾವು-ಮೊದಲಾದವುಗಳ ಸ್ವರೂಪವೇ ದುಃಖವಲ್ಲದಿದ್ದರೂ ಅವು ದುಃಖಕ್ಕೆ ಕಾರಣಗಳಾದ್ದರಿಂದ ಎಲ್ಲವೂ ದುಃಖವೆಂಬ ದೋಷದಿಂದ ಕೂಡಿರುವದೆಂದು ಮನಸ್ಸಿನಲ್ಲಿ ಆಳಿದು ಹೊಯ್ಯುವದೂ ವಿಷಯಗಳಲ್ಲಿ ಪ್ರೀತಿ ಇಲ್ಲದಿರುವದೂ ಹೆಂಡಿರು, ಮಕ್ಕಳು, ಮನೆ ಮೊದಲಾದವುಗಳಿಗೇನಾದರೂ ಕೇಡು ಒದಗಿದರೆ ಅದು ತನಗೇ ಒದಗಿದಂತೆ ಮತಿಮೀರಿದ ಅಭಿಮಾನವಿಲ್ಲದಿರುವದೂ ಬೇಕಾದದ್ದು ದೊರೆತಾಗ ಹಿಗ್ಗದೆ ಬೇಡವಾದದ್ದು ಗಂಟುಬಿದ್ದಾಗ ತಗ್ಗದೆ ಯಾವಾಗಲೂ ಮನಸ್ಸನ್ನು ಒಂದೇ ರೀತಿಯಲ್ಲಿಟ್ಟುಕೊಂಡಿರುವದೂ ಅಸಂಗದ ಸಾಧನಗಳು. --(ಭ ೧೩-೮,೯)

ಅಸಂಗವೆಂಬ ಕೊಡಲಿಯಿಂದ ಅದನ್ನು ತುಂಡು ತುಂಡು ಮಾಡಿ ಒಗೆದ ಮೇಲೆ ಸುಖದುಃಖಗಳ ಸೋಂಕಿಲ್ಲದ ನಿತ್ಯಸುಖದ ನೆಲೆಯನ್ನು ಹುಡುಕುವದಕ್ಕಾಗುತ್ತದೆ. ಅದಕ್ಕೆ ಹೋಗಿ ಸೇರಿಕೊಂಡರೆ ಮನುಷ್ಯನು ಮತ್ತೆ ಸಂಸಾರಕ್ಕೆ ಹಿಂದಿರುಗುವದಿಲ್ಲ. ಮಾಯಗಾರನಿಂದ ಆಕಾಶದ ಅರಮನೆ ಮೊದಲಾದವು ಹೊರಬಿದ್ದಂತೆ ಯಾವನಿಂದ ಈ ಸಂಸಾರವೆಂಬ ಅರಳೀಮರವು

ಮೇಲಕ್ಕೆದ್ದು ಬಹುಕಾಲದಿಂದ ಕಾಣುತ್ತಿರುವದೊ ಆ ಮೂಲಪುರುಷನೆ ನಿತ್ಯಸುಖದ ಹೊಲಬು. ಅವನಿಗೇ ಶರಣು ಹೋಗಬೇಕು. —(ಭ ೧೫-೪)

## ಜಗತ್ತನ್ನು ಆತ್ಮವೆಂದು ನೋಡುವದು

ಅವನು ಯಾರು ? ಅವನೆ ಸಂಸಾರದ ಮೇಲುಗಡೆಗಿರುವ ತಾಯಿ ಬೇರು. ಅದರಲ್ಲಿ ದೋಷದ ಸೆಲೆಯೆಂಬುದೇ ಇಲ್ಲ. ಚೈತನ್ಯಸ್ವಭಾವ ಉಳ್ಳ ಅದು ಎಲ್ಲಕ್ಕಿಂತ ಹೆಚ್ಚಿನದು. ಅದಕ್ಕೆಂದಿಗೂ ಅಳಿವಿಲ್ಲ. ನಿಜವಾದ ಇರುವಿಕೆಯುಳ್ಳ ಅದರ ಆಧಾರದ ಮೇಲೆ ಆಕಾಶದ ಅರಮನೆ, ಬಿಸಿಲಗುದುರೆ-ಮೊದಲಾದವುಗಳಂತೆ ನಿಜವಾಗಿಲ್ಲದ ಲೋಕಗಳು ನಿಜವಾಗಿರುವಂತೆ ಕಾಣಿಸಿಕೊಳ್ಳುತ್ತಿರುವವು. ಮಣ್ಣನ್ನು ಬಿಟ್ಟು ಮಡಕೆ ಮೊದಲಾದವು ಹೇಗಿಲ್ಲವೊ ಹಾಗೆ ಅದರ ಆಶ್ರಯವಿಲ್ಲದೆ ಎರಡನೆಯದೇನೇನೂ ಇಲ್ಲ.

—(ಕ ೬-೧)

"ಸತ್ತಮೇಲೆ ಶರೀರಕ್ಕಿಂತ ಬೇರೆಯಾಗಿ ಮತ್ತೊಂದು ದೇಹಕ್ಕೆ ಹೋಗಿ ಸೇರಿಕೊಳ್ಳುವ ಆತ್ಮನೆಂಬ ವಸ್ತು ಉಂಟೊ ಇಲ್ಲವೊ?'' ಎಂದು ನಚಿಕೇತನು ಕೇಳಿದ್ದನಷ್ಟೆ. ಇದೇ ಆ ಆತ್ಮನೆಂಬ ವಸ್ತು. ಇದು ನಚಿಕೇತನೊಬ್ಬನ ಆತ್ಮವಲ್ಲ ; ಸಮಸ್ತಕ್ಕೂ ಆತ್ಮ.

(ಅ) ಮೂರು ದಿನದ ಬಾಳಿನದಾಗಿಯೂ ದುಃಖಮಯವಾಗಿಯೂ ಇರುವ ಈ ಲೋಕಕ್ಕೆ ಬಂದ ಮೇಲೆ ಇದಕ್ಕೆ ಶರಣುಹೋಗಬೇಕು(ಭ-೯-೩೩.) (ಆ) ಹೀಗೆ ವಿವೇಕದಿಂದ ಶರಣು ಹೋಗುವದು ಉಳಿದ ಯಾವ ಪ್ರಾಣಿಗಳಿಗೂ ದಕ್ಕದ ಮಾತಾಗಿ ಮನುಷ್ಯನಿಗೆ ಮಾತ್ರ ಗಂಟಲಲ್ಲಿ ಇಳಿಯಬಹುದಾದ ತುತ್ತಾಗಿದ್ದರೂ ಆ ಮನುಷ್ಯರಲ್ಲಿಯೂ ಕೂಡ ವಿವೇಕಿಗಳು ಕಡಿಮೆಯಾದ್ದರಿಂದ ಎಲ್ಲಿಯೋ ಸಾವಿರಕ್ಕೊಬ್ಬನು ಇತ್ತ ಕಡೆಗೆ ಕಣ್ಣು ಹಾಕುತ್ತಾನೆ ಮತ್ತು ಹಾಗೆ ಕಣ್ಣುಹಾಕಿ ಸಾಧಿಸಿದವರಲ್ಲಿ ಯಾವನೊ ಒಬ್ಬನು ಮಾತ್ರ ಅದರ ನಿಜವಾದ ಬಣ್ಣವನ್ನು ಅರಿಯುತ್ತಾನೆ (ಭ ೭-೩).

ವಿಷಯಗಳ ಮೇಲೆ ಅಕ್ಕರೆಯನ್ನಿಡದೆ ಅವುಗಳನ್ನೆಲ್ಲ ದೂರಕ್ಕೆ ತಳ್ಳಿಬಿಡುವದು ಸಾಧ್ಯವೆ ? ಇಲ್ಲ. ಹೆಂಡಿರುಮಕ್ಕಳನ್ನೆಲ್ಲ ನಡುನೀರಿ

ನಲ್ಲಿ ಬಿಟ್ಟು ತಾವು ಪಡಕ್ಕೆ ಹತ್ತಿದೆವೆಂದು ಓರಿಯರಿ ಹಿಗ್ಗುವ ಸಂನ್ಯಾಸಿಗಳುಂಟು. ಅವರಿಗೆ ಹೆಂಡಿರುಮಕ್ಕಳು ದೂರವಾದರೂ ಶಿಷ್ಯರೂ ಭಕ್ತರೂ ಗಂಟುಬೀಳುವರು. ಅವರು ಕಾಡುಹರಟೆಗಳ ಗೋಜನ್ನು ಹರಿದುಕೊಂಡರೂ ವೇದಾಂತದ ಉಪದೇಶವನ್ನು ಮಾಡುವ ತೊಡಕಿಗೆ ಬೀಳುವರು. ಅವರು ಹೊಲಮನೆಗೆ ತಿರುಗದಿದ್ದರೂ ಭಿಕ್ಷಾನ್ನಕ್ಕಾಗಿಯಾದರೂ ತಿರಿಯುವರು. ಶರೀರದಲ್ಲಿರುವವರೆಗೂ ವಿಷಯಗಳ ಸಂಬಂಧವು ತಪ್ಪಿದ್ದಲ್ಲ. ಆದರೆ ಆ ಸಂಬಂಧವು ಗೃಹಸ್ಥರಲ್ಲಿ ಮತ್ತಷ್ಟು ಸಂಸಾರಕ್ಕೆ ಕಾರಣವಾಗಿರುವದು; ಸಂನ್ಯಾಸಿಗಳಲ್ಲಿ ಅದರ ಬಿಡುಗಡೆಗೆ ಕಾರಣವಾಗಿರುವದು. ಆದರೂ ಸಂನ್ಯಾಸಿಗಳಿಗೂ ವಿಷಯಗಳ ಸಂಬಂಧವೇನೂ ತಪ್ಪಿದ್ದಲ್ಲ. ವಿಷಯಗಳನ್ನು ದೂರಕ್ಕೆ ತಳ್ಳುವದು ಸಾಧ್ಯವೂ ಅಲ್ಲ ; ಅದು ನಿಜವಾದ ಸಂನ್ಯಾಸವೂ ಅಲ್ಲ.

ಹಾಗಾದರೇನು ಮಾಡಬೇಕು ? ಪರಮಾತ್ಮನ ನಿಜವಾದ ಇರುವಿಕೆಯ ಆಧಾರದ ಮೇಲೆ ಜಗತ್ತೆಂಬುದೆಲ್ಲ ಸುಳ್ಳಾಗಿ ತೋರಿಕೊಳ್ಳುತ್ತಿರುವದೆಂದು ಜಗತ್ತನ್ನೆಲ್ಲ ಈಶ್ವರಭಾವನೆಯಿಂದ ಮುಚ್ಚಿಹಾಕಿ ಅವುಗಳನ್ನು ಅನುಭವಿಸಬೇಕು. ಶ್ರೀಗಂಧ ಮೊದಲಾದ ಮರಗಳು ನೀರಿನಲ್ಲಿ ಕೊಳೆತು ಕೆಟ್ಟ ವಾಸನೆಯನ್ನು ಹೊಂದಿದ್ದ ಸಂದರ್ಭದಲ್ಲಿ ಅದನ್ನು ಉಜ್ಜಿದರೆ ಅದರ ನಿಜವಾದ ಒಳ್ಳೆ ವಾಸನೆಯು ಆ ಕೆಟ್ಟ ವಾಸನೆಯನ್ನೆಲ್ಲ ಮುಚ್ಚಿಹಾಕುವದಷ್ಟೆ. ಆತ್ಮವಸ್ತುವಿನಲ್ಲಿ ಮಾಯೆಯ ಸಂಬಂಧದಿಂದ ನಾನು ಮಾಡುವವನೆಂಬ ಮತ್ತು ಅನುಭವಿಸುವವನೆಂಬ ಕೆಟ್ಟ ವಾಸನೆಯುಂಟಾಗಿರುವದು. ಅದನ್ನು ವಿಚಾರವೆಂಬ ಒರೆಗೆ ಹಚ್ಚಿ ತಿಕ್ಕಿದರೆ ಜಗತ್ತೆಲ್ಲ ಮಾಯೆಯಿಂದ ಸುಳ್ಳಾಗಿ ಎದ್ದು ಕಾಣಿಸಿಕೊಳ್ಳುತ್ತಿರುವದೆಂದು ಗೊತ್ತಾಗಿ ಅದರ ಇರುವಿಕೆಯು ಮೂಲೆಗೆ ಮುಟ್ಟಾಗಿ ಆತ್ಮವಸ್ತುವಿನ ನಿಜವಾದ ಇರುವಿಕೆಯೇ ಎಲ್ಲೆಲ್ಲಿಯೂ ವಿಜೃಂಭಿಸುವದು. ಈ ದೃಷ್ಟಿಯುಂಟಾದೊಡನೆ ಜಗತ್ತು ಇದ್ದಂತೆ ಕಂಡರೂ ಇಲ್ಲದಂತಾಗುವದರಿಂದ ಅದನ್ನು ಅನುಭವಿಸಿದರೂ ಅದರ ಸಂಬಂಧವು ಮನಸ್ಸಿಗೆ ಕಚ್ಚಿಕೊಳ್ಳದಿರುವದು. ಹೀಗಾಗುವದೇ ನಿಜವಾದ ಸಂನ್ಯಾಸ. ಈ ಸಂನ್ಯಾಸದಲ್ಲಿ ಒಂದು ದೃಷ್ಟಿಯಿಂದ ನೋಡಿದರೆ ತನ್ನ ಅಥವಾ ಇತರರ

ಯಾವ ವಸ್ತುವಿನ ಮೇಲೆಯೂ ಬಯಕೆಯನ್ನು ಹರಿಸದೆ ಇರುವವರಿಗಾಗುತ್ತದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಹೊರಗೆ ಯಾವ ವಸ್ತುವೂ ಇಲ್ಲವೇ ಇಲ್ಲವೆಂದಾಗುವದರಿಂದ ಬಯಕೆಯೆಂಬುದು ತಲೆಯೆತ್ತುವದಕ್ಕೇ ಕಾರಣವು ತಪ್ಪುತ್ತದೆ. ಆದ್ದರಿಂದ ಈ ಸಂನ್ಯಾಸವನ್ನು ಚೆನ್ನಾಗಿ ಅಳವಡಿಸಿಕೊಳ್ಳಬೇಕು. ಹೀಗಾದರೇ ಸಂಸಾರವೆಂಬ ಅರಳೀಮರವನ್ನು ನಿಜವಾಗಿ ತುಂಡುತುಂಡು ಮಾಡಿದಂತಾಗುವದು. ಇಲ್ಲದಿದ್ದರೆ ಕಣ್ಣಿಗೆ ಕಾಣದ ಆ ಮರವನ್ನು ತುಂಡುತುಂಡು ಮಾಡುವದು ಹೇಗಾದೀತು? —(೩೧)

ನಿಜವಾಗಿ ಆತ್ಮವೆಂಬ ವಸ್ತುವೇ ಎಲ್ಲೆಲ್ಲಿಯೂ ತುಂಬಿಕೊಂಡಿರುವದೆಂದು ವೇದಾಂತದ ಸಿದ್ಧಾಂತ. ವೇದವನ್ನು ಗೌರವಿಸುವವರೆಲ್ಲರೂ ಈ ಮಾತನ್ನು ಒಪ್ಪಿಕೊಂಡರೂ ಕೆಲವರು ಆತ್ಮವಸ್ತುವಲ್ಲದೆ ಅದಕ್ಕಿಂತ ಬೇರೆಯಾದ ಜಗತ್ತೆಂಬ ವಸ್ತುವಿರುವದೆನ್ನುವವರೂ ಉಂಟು. ಇದು ಹೇಗೆ ಸರಿಯಾದೀತು! ಜಗತ್ತೆಂಬುದೊಂದಿರಬೇಕಾದರೆ ಆತ್ಮವೆಂಬುದೊಂದಿಲ್ಲದ ಕಡೆ ಬೇಕಾಗುವದು. ಹಾಗೆ ಜಗತ್ತಿಗೆ ಅವಕಾಶವನ್ನು ಬಿಟ್ಟು ಆತ್ಮವಸ್ತು ಒಂದು ಕಡೆಗೆ ಓರೆಯಾಗಿ ಸರಿದುಕೊಂಡಿರುವದಾದರೆ ಅದೂ ಜಗತ್ತಿನಂತೆಯೆ ಮೊದಲೂ ಕೊನೆಯೂ ಉಳ್ಳದ್ದಾಗಬೇಕಾಗುವದು. ಅದು ಹಾಗೆ ಇರುವದೆಂದು ವಿವೇಕಿಗಳು ಯಾರೂ ಒಪ್ಪುವದೇ ಇಲ್ಲ. ಒಪ್ಪಿದರೆ ಅದಕ್ಕೆ ನಾಶವನ್ನೂ ಒಪ್ಪಬೇಕಾಗುತ್ತದೆ. ಏಕೆಂದರೆ: ಮೊದಲೂ ಕೊನೆಯೂ ಇರುವವುಗಳೆಲ್ಲ ನಾಶವಾಗುವದನ್ನು ನೋಡಿದ್ದೇವೆ. ಹೀಗಾಗಿ ಆತ್ಮವೂ ಜಗತ್ತೂ ಎಲ್ಲವೂ ನಾಶವಾಗಿಬಿಟ್ಟರೆ ಕೊನೆಗೆ ಸೊನ್ನೆಯೇ ಗತಿಯಾಗುವದು. ಆತ್ಮವು ಸೊನ್ನೆಯಾದರೆ ತಾನೆ ಇಲ್ಲದಂತಾಗುವದರಿಂದ ಮನುಷ್ಯನ ಜೀವನವೆಲ್ಲ ನಿರಾಶೆಯಲ್ಲಿ ಮುಗಿಯುವದು. ಸಾಯಲಾಗಿ ಹಾಸಿಗೆಯ ಮೇಲೆ ಮಲಗಿರುವವನಿಗೆ ಯಾವ ಬಗೆಯ ಏಳಿಗೆಯಲ್ಲಿ ತಾನೆ ಉತ್ಸಾಹವಿರುವದು? ಮನುಷ್ಯನ ಸ್ಥಿತಿ ಹಾಗಿಲ್ಲ. ಅವನು ಇನ್ನಿಲ್ಲವೆಂಬಷ್ಟು ಹೆಚ್ಚಿನ ಏಳಿಗೆಯನ್ನು ಪಡೆಯಬಲ್ಲ ಪ್ರಾಣಿ. ಅವನಿಗೂ ಏಳಿಗೆಯ ಅವಕಾಶವಿಲ್ಲದಿದ್ದರೆ ಇನ್ನು ಯಾರು ಏಳಿಗೆಯನ್ನು ಪಡೆಯಬೇಕು? ಯಾರಿಗೂ ಏಳಿಗೆ ಇಲ್ಲವೆಂದರೆ ಇಂಥ ಜಗತ್ತಿನ ಸೃಷ್ಟಿಯಿಂದ ದೇವರಿಗಾದರೂ ಏನು ಪ್ರಯೋಜನ?

ಏನೂ ಪ್ರಯೋಜನವಿಲ್ಲವೆಂದರೆ ಅವನನ್ನು ಹುಚ್ಚನೆನ್ನಬೇಕಾಗುವದು. ಇದು ತಲೆತಿರುಗಿದ ಮಾತು. ಆಶ್ಚರ್ಯಕರವಾದ ಜಗತ್ತನ್ನು ನೋಡಿ ವಿಚಾರಪರರು ಅದರ ಮೂಲಪುರುಷನಾದ ತನ್ನ ಕಡೆಗೆ ಬರಲೆಂಬುದೇ ಅವನ ಉದ್ದೇಶ. ಆದ್ದರಿಂದ ಲೋಕದಲ್ಲಿ ಎಲ್ಲವೂ ಹೋದರೂ ಒಂದು ಉಳಿದುಕೊಳ್ಳಲೇಬೇಕು. ಆ ಒಂದನ್ನು ಕಳೆಯುವದಕ್ಕೆ ಯಾರಿಂದಲೂ ಆಗದು. ಎಲ್ಲವೂ ನಾಶವಾಗಿ ಶೂನ್ಯವಾಯಿತೆಂದರೂ ಅದಕ್ಕೆ ಸಾಕ್ಷಿಯಾಗಿ ಒಬ್ಬ ಆತ್ಮನಿರಬೇಕಾಗುವದು. ಆತ್ಮನಿಗೆ ನಾಶವಿಲ್ಲದಿರಬೇಕಾದರೆ ಅವನು ಮೊದಲೂ ಕೊನೆಯೂ ಉಳ್ಳವನಾಗಬಾರದು. ಅವನಿಗೆ ಅವಿಲ್ಲವೆಂದೊಪ್ಪಿಕೊಂಡರೆ ಅವನಿಗಿಂತ ಬೇರೆಯಾದ ಜಗತ್ತೆಂಬುದೊಂದಿರುವದೆಂದು ಒಪ್ಪುವದಕ್ಕೆ ಯಾರಿಗೂ ಎಲ್ಲಿಯೂ ಒಂದು ಸೀಳುದಾರಿಯೂ ಇರುವದಿಲ್ಲ. ಆತ್ಮನಿರುವ ಕಡೆಯಲ್ಲಿಯೇ ಜಗತ್ತಿರುವದೂ ಆಗುವದಿಲ್ಲ. ಒಂದೇ ಕಡೆ ಎರಡು ವಸ್ತುಗಳು ಇರುವದಸಂಭವ. ಆದ್ದರಿಂದ ಆತ್ಮವಸ್ತು ನಿಜನಾಗಿ ಎಲ್ಲೆಲ್ಲಿಯೂ ಇರುವದೆಂದೂ ಜಗತ್ತು ಆ ನಿಜವಾದ ಆತ್ಮವಸ್ತುವಿನ ಆಧಾರದ ಮೇಲೆ ಸುಳ್ಳಾಗಿ ಎದ್ದು ಕಾಣುತ್ತಿರುವದೆಂದೂ ಹೊಂದಿಸಿ ಹೇಳುವದೇ ಯುಕ್ತವಾಗಿರುವದು. ಹೀಗಿರುವದರಿಂದ ಸುಳ್ಳಾದ ಜಗತ್ತಿನ ಸ್ವರೂಪವನ್ನು ಮರೆಮಾಡಿ ನಿಜವಾದ ಆತ್ಮನ ಸ್ವರೂಪವನ್ನು ಕಾಣುವದು ಶ್ರೇಯಸ್ಕರವೆಂಬ ಮಾತು ಜೋಗಸೆಯಲ್ಲಿಟ್ಟುಕೊಂಡು ತಲೆಯಮೇಲೆ ಹೊರುವದಕ್ಕೆ ತಕ್ಕದಾಗಿರುವದು.

ಸುಳ್ಳಾದ ಜಗತ್ತನ್ನು ಮರೆಮಾಡಿ ನಿಜವಾದ ಆತ್ಮನನ್ನು ಕಾಣುತ್ತಲೆ ಜಗತ್ತು ತನ್ನ ಹುಳುಕು ಹೊರಬಿತ್ತೆಂದು ಬಾಲವನ್ನು ಮುದುರಿಕೊಂಡು ತಾನೆ ಸುಮ್ಮಗಿಟ್ಟುವದು. ಆಮೇಲೆ ಆ ಸುಳ್ಳಾದ ಜಗತ್ತಿನಲ್ಲಿ ಹೇಗೆ ಅಕ್ಕರೆಯುಂಟಾದೀತು! ಇದೇ ಅಕ್ಕರೆಯನ್ನು ಬಿಡುವ ಮಾರ್ಗ. ಈ ಅಕ್ಕರೆಯು ಹೋಗುತ್ತಲೆ ಅವನು, ಕನಸಿನಲ್ಲಿ ತಿರಿಯುವವನಾಗಿದ್ದವನು ಎಚ್ಚತ್ತು ಚಕ್ರವರ್ತಿಯಾಗಿರುವಂತೆ, ತಾನೆ ಆನಂದಸ್ವರೂಪನಾಗಿರುವನು.

## ಆತ್ಮನನ್ನು ಕಂಡವರಿಗೆ ಹುಟ್ಟುಸಾವಿಲ್ಲ

ಹೊರಗಣ ವಿಷಯಗಳೊಡನೆ ಪ್ರೇಮವನ್ನು ಬೆಳೆಸಿಕೊಂಡು ಸಂಸಾರದಲ್ಲಿರುತ್ತ ತೀರ ಕೀಳಾಗಿ ಧರ್ಮಕರ್ಮಗಳ ಹಂಗು ಹರಿದುಕೊಂಡ ತಿಳಿಗೇಡಿ ಉಂಡಾಡಿಗರಿಗೆ ಸತ್ತ ಮೇಲಿನ ದಾರಿಯೆಂಬುದೊಂದಿಲ್ಲದೆ ಹುಟ್ಟಿಸಾಯುತ್ತಿರಬೇಕಾಗುವದೆಂದೂ ವರ್ಣಾಶ್ರಮಧರ್ಮಗಳನ್ನು ಕೊಡವಿಕೊಳ್ಳದೆ ಅದರ ಜೊತೆಗೆ ವಿಶಿಷ್ಟ ಕರ್ಮಗಳನ್ನೂ ಪರಹಿತಗಳನ್ನೂ ಮಾಡುತ್ತ ಮೇಲಾದವರೆನಿಸಿಕೊಂಡಿರುವ ಕರ್ಮಠರಿಗೆ ಕತ್ತಲೆಯ ದಾರಿಯಿಂದ ಚಂದ್ರಲೋಕವೆಂಬ ಸ್ವರ್ಗವು ದೊರೆಯುವದೆಂದೂ ಅವರಿಗಿಂತ ಮೇಲಿನ ಮೆಟ್ಟಿಲಿನವರಾಗಿ ಈ ಜಗತ್ತಿನ ತಾಯಿಬೇರಾದ ಬ್ರಹ್ಮದ ಯೋಚನೆಯನ್ನು ಹಚ್ಚಿಕೊಂಡ ಉಪಾಸಕರಿಗೆ ಬೆಳಕಿನ ದಾರಿಯಿಂದ ಬ್ರಹ್ಮಲೋಕವು ಸಿಕ್ಕಿ ಅಲ್ಲಿಂದ ಹಾಗೆಯೇ ಮೋಕ್ಷವಾಗುವದೆಂದೂ ಹೇಳಿದ್ದಾಗಿದೆಯಷ್ಟೆ. ಇವರೆಲ್ಲರಿಗಿಂತ ಮಹಾನುಭಾವರಾಗಿ ಆ ಬ್ರಹ್ಮವನ್ನು ತಮ್ಮ ಆತ್ಮವೆಂದು ಮನಗಂಡವರಿಗೆ ಸತ್ತ ಮೇಲಿನ ದಾರಿಯ ವಿಚಾರವೇನೆಂದು ಕುತೂಹಲ ಉಂಟಾಗಬಹುದು. ದಾರಿಯೆಂಬುವೆರಡೇ. ಒಂದು ಕತ್ತಲೆಯದು ; ಒಂದು ಬೆಳಕಿನದು. ಧರ್ಮಕರ್ಮಗಳ ಹಂಗು ಹರಿದ ತಿಳಿಗೇಡಿ ಉಂಡಾಡಿಗರಿಗೆ ಹೇಗೆ ದಾರಿಯೆಂಬುದಿಲ್ಲವೋ ಹಾಗೆ ಧರ್ಮಕರ್ಮಗಳ ಫಲಗಳನ್ನೆಲ್ಲ ಮೀರಿದ ಬ್ರಹ್ಮವನ್ನು ಕಣ್ಣಾರೆ ಕಂಡವರಿಗೂ ದಾರಿಯೆಂಬುದಿಲ್ಲ. ಈ ಸಂಸಾರದಲ್ಲಿ ಉಂಡಾಡಿಗರು ತೀರ ಕೆಳಗಿನ ತುಟ್ಟತುದಿ ; ಬ್ರಹ್ಮವನ್ನರಿತವರು ತೀರ ಮೇಲಿನ ತುಟ್ಟತುದಿ. ಎರಡು ತುದಿಗಳಿಗೂ ಮುಂದೆ ದಾರಿ ಇಲ್ಲದಿರುವದು ಸಹಜವು. ಕೆಳಗಣ ತುದಿಯವರು ದೇಹವನ್ನು ಬಿಟ್ಟು ತೆರಳುವರು ; ಆದರೂ ಮುಂದೆ ದಾರಿ ಇಲ್ಲ. ಮೇಲಿನ ತುದಿಯವರು ದೇಹವನ್ನು ಬಿಟ್ಟು ಹೊರಡುವದೂ ಇಲ್ಲ; ಮುಂದೆ ದಾರಿಯೂ ಇಲ್ಲ.

‘ ಮೇಲಿನ ತುದಿಯವರೆಂದು ಹೆಸರುಗೊಂಡಿರುವವರೂ ಸಾಯುವದು ಲೋಕದಲ್ಲಿ ಕಾಣುವದಲ್ಲ ! ’ ಎಂದರೆ ನಿಜ. ಲೋಕದಲ್ಲಿ ಶರೀರವಿರುವವರೆಲ್ಲರೂ ಸಾಯುವದು ಕಾಣಬರುತ್ತದೆ. ಆದರೆ ಬ್ರಹ್ಮವನ್ನರಿಯದವರ ಇಂದ್ರಿಯಗಳೂ ಮನಸ್ಸೂ ಮೊದಲಾದವುಗಳು ಕಣ್ಣು ಮೊದಲಾದ ಕಡೆಗ

ಳಿಂದಲೊ ನಡುನೆತ್ತಿಯಿಂದಲೊ ಅವರ ದೇಹವನ್ನು ಬಿಟ್ಟು ಹಿಂದೆ ಹೇಳಿದಂತೆ ಪ್ರಯಾಣಮಾಡುತ್ತವೆ. ಬ್ರಹ್ಮವನ್ನರಿತವರ ಇಂದ್ರಿಯಗಳೂ ಮನಸ್ಸೂ ಪ್ರಯಾಣ ಮಾಡುವದೇ ಇಲ್ಲ; ಇದ್ದಲ್ಲಿಯೇ ಇಲ್ಲವಾಗುತ್ತವೆ. ಬ್ರಹ್ಮವನ್ನರಿಯದವರಲ್ಲಿ ಫಲವನ್ನು ಕೊಡುವ ಅನೇಕ ಪುಣ್ಯಪಾಪಕರ್ಮಗಳಿರುವವು. ಅವುಗಳ ಫಲವನ್ನು ಅನುಭವಿಸುವದಕ್ಕಾಗಿ ಅವರು ಹೋಗಿ ಬರಬೇಕಾದ ಅಗತ್ಯವಿರುವದು. ಜ್ಞಾನಿಗಳ ಎಲ್ಲ ಕರ್ಮಗಳೂ ಅವರ ಜ್ಞಾನದ ಪ್ರಭಾವದಿಂದ ಸುಟ್ಟುಹೋಗಿರುವವು. ಎಂದರೆ ಅವರಿಗೆ ದೇಹೇಂದ್ರಿಯಗಳಿಂದ ನಡೆದ ಆ ಕರ್ಮಗಳಿಗೂ ದೇಹೇಂದ್ರಿಯಗಳಿಗಿಂತ ಬೇರೆಯಾಗಿ ಜ್ಞಾನಸ್ವರೂಪರಾದ ತಮಗೂ ಏನೂ ಸಂಬಂಧವಿಲ್ಲವೆಂಬ ಅರಿವು ಉಂಟಾಗಿರುವದು. ಕರ್ಮಗಳು ಸುಟ್ಟುಹೋಗುವವೆಂಬ ಮಾತಿಗೆ ಇದೇ ಅರ್ಥವೇ ಹೊರತು ಅವು ಕಟ್ಟಿಗೆಯಂತೆ ಸುಟ್ಟು ಬೂದಿಯಾಗುವವೆಂದರ್ಥವಲ್ಲ. ಜ್ಞಾನವಾದಾಗ ಕರ್ಮಗಳ ಪಾಡು ಅರಳೆಯ ಗುಡ್ಡೆಗೆ ಬೆಂಕಿ ಬಿದ್ದಂತೆ ಆಗುವದೆಂಬ ಮಾತು ಮನಸ್ಸಿಗೆ ಹಿಡಿಯುವದಕ್ಕೆಂದು ಹೇಳಿದ ಒಂದು ಬಗೆಯ ಬೆಡಗು. ಆದ್ದರಿಂದ ಅದರ ತಾತ್ಪರ್ಯವನ್ನು ತೆಗೆದುಕೊಳ್ಳಬೇಕೇ ಹೊರತು ಅಕ್ಷರಾರ್ಥವನ್ನು ತೆಗೆದುಕೊಳ್ಳಬಾರದು. ಹೀಗೆ ಅವರ ಕರ್ಮಗಳೆಲ್ಲ ಕಳಚಿಕೊಂಡು ಹೋಗುವದರಿಂದ ಅವರ ಇಂದ್ರಿಯಗಳೂ ಮನಸ್ಸೂ ಎಲ್ಲಿಗೂ ಪಯಣ ಮಾಡಬೇಕಾದದ್ದಿಲ್ಲ. ಆದ್ದರಿಂದ ಅವರು ಪ್ರಯಾಣಮಾಡುವದಿಲ್ಲ. ವ್ಯಾಸರ ಮಕ್ಕಳಾದ ಶುಕಾಚಾರ್ಯರು ಮೋಕ್ಷವನ್ನು ಬಯಸುವವರಾಗಿ ಸೂರ್ಯಮಂಡಲವನ್ನು ಕುರಿತು ಹೊರಟರೆಂದು ಹೇಳುವದುಂಟು. ಅವರು ಯೋಗಬಲದಿಂದ ಶರೀರದೊಡನೆಯೇ ಹಾಗೆ ಹೊರಟರೆಂದು ತಿಳಿಯಬೇಕು. ಏಕೆಂದರೆ: ಅವರ ಪ್ರಯಾಣವು ಜನರ ಹೇಳಿಕೆಯಂತೆ ಎಲ್ಲರ ಕಣ್ಣಿಗೂ ಕಾಣಬಂದಿರಬೇಕಾದರೆ ಪ್ರಯಾಣಕಾಲದಲ್ಲಿ ಅವರು ಶರೀರದೊಡನೆಯೇ ಇರಬೇಕಾಗುವದು. ಶರೀರವಿಲ್ಲದೆ ಮೇಲಕ್ಕೆ ಹೋಗಿದ್ದರೆ ಯಾರು ಕಾಣುತ್ತಿದ್ದರು ? ತಾವು ಎಲ್ಲೆಲ್ಲಿಯೂ ತುಂಬಿರುವ ಬ್ರಹ್ಮವೆಂದು ಅರಿತಿದ್ದ ಅವರು ನೋಡುವವರಿಗೆ ಶರೀರದೊಳಗಿರುವವರ ಹಾಗೆ ವಾಯುವೇಗದಿಂದ ಅಂತರಿಕ್ಷದಲ್ಲಿ ಹೋಗುತ್ತ ತಮ್ಮ ಪ್ರಭಾವವನ್ನು ತೋರಿಸಿ ಆಮೇಲೆ ಎಲ್ಲಿಯೋ ತಮ್ಮ ಶರೀರವನ್ನು ಉದುರಿಸಿ ಎಲ್ಲೆಲ್ಲಿಯೂ ತುಂಬಿರುವ ಬ್ರಹ್ಮವಾದರು. ಇಲ್ಲಿ

ಸಾವು ಜ್ಞಾನಿಗಳಿಗೆ ಪ್ರಯಾಣವಿಲ್ಲವೆನ್ನುವದು ಇಲ್ಲಿಯೇ ದೇಹವನ್ನು ಉದುರಿಸಿದವರ ಮಾತು. ಸಾವೆನ್ನುವದು ದೇಹಕ್ಕೆ ಸಂಬಂಧಪಟ್ಟಿದ್ದು. ಜ್ಞಾನಿಗಳಿಗೆ ಸಂಬಂಧಪಟ್ಟಿರುವಂತೆ ಹೊರಗಣವರಿಗೆ ಕಾಣುತ್ತಿದ್ದ ದೇಹವು ಸಾಯುವದು. ಇತರರ ದೇಹವು ಸತ್ತಾಗ ಅದರೊಳಗಿದ್ದ ಇಂದ್ರಿಯಗಳೂ ಮನಸ್ಸೂ ಪ್ರಾಣದೊಡನೆ ಪ್ರಯಾಣಮಾಡುವವು. ಜ್ಞಾನಿಯ ದೇಹವು ಸತ್ತಾಗ ಅದರೊಳಗಿದ್ದ ಇಂದ್ರಿಯಗಳೂ ಮನಸ್ಸೂ ಪ್ರಯಾಣಮಾಡುವದಿಲ್ಲ. ಇದೇ ವಿಶೇಷ. ಆ ಮನಸ್ಸೂ ಇಂದ್ರಿಯಗಳೂ ಇದ್ದಲ್ಲಿಯೇ ಇಲ್ಲವಾಗುವವು- ಎಂದರೆ ಪರಮಾತ್ಮನಲ್ಲಿ ಲಯವಾಗುವವು. —(ಸೂ ೪-೨-೬,೭)

ಯಾರಿಗೆ ಇಂದ್ರಿಯಗಳೂ ಮನಸ್ಸೂ ಹೀಗೆ ಪರಮಾತ್ಮನಲ್ಲಿ ಲಯವಾಗಿ ಎಲ್ಲೆಲ್ಲಿಯೂ ತುಂಬಿರುವ ಬ್ರಹ್ಮತ್ವ ಉಂಟಾಗುವದೊ ಅವರು ಇತರರಂತೆ ಮತ್ತೆ ಹುಟ್ಟುವದಿಲ್ಲ. ಇಂದ್ರಿಯಗಳೂ ಮನಸ್ಸೂ ಇದ್ದರಷ್ಟೆ ಮತ್ತೆ ಹುಟ್ಟುವದು! ಅವುಗಳ ತೊಡರನ್ನೆಲ್ಲ ಹರಿದುಕೊಂಡು ಮೋಕ್ಷವನ್ನು ಅಂಗೈಯೊಳಗಣ ನೆಲ್ಲಿಯಕಾಯಾಗಿ ಮಾಡಿಕೊಂಡವರಿಗೆ ಹುಟ್ಟೆನ್ನೆಲ್ಲಿಯದು? ಹುಟ್ಟುವಿಕೆಯೆಂಬುದು ಅನೇಕ ದುಃಖಗಳ ತೌರುಮನೆ. ಹುಟ್ಟಿದರೂ ನೆಲೆಯಾಗಿರುವ ಸಂಭವವಿಲ್ಲ. ಇಂಥ ಹುಟ್ಟು ಆ ಮಹಾತ್ಮರ ಹತ್ತಿರಕ್ಕೆ ಸುಳಿಯುವದಿಲ್ಲ. —(ಭ ೮-೧೫)

ಇಲ್ಲಿ ಒಂದು ಸಂಶಯವು ಬರುತ್ತದೆ. ಅದೇನೆಂದರೆ: “ಅವನು ಬ್ರಹ್ಮವನ್ನರಿಯುವದಕ್ಕೆ ಮುಂಚೆ ಮಾಡಿದ ಮತ್ತು ಬ್ರಹ್ಮವಾದ ಮೇಲೆ ಮಾಡುವ ಎಷ್ಟೋ ಕರ್ಮಗಳು ಇರುವಾಗ ಅವೆಲ್ಲ ಫಲವನ್ನು ಕೊಡದೆ ಹೇಗೆ ಹೋದಾವು? ಪ್ರಾರಬ್ಧಕರ್ಮಗಳಲ್ಲಿ ಯಾವದೂ ಫಲವನ್ನು ಕೊಡದೆ ಹೋಗುವದಿಲ್ಲವಷ್ಟೆ. ಹಾಗೆಯೇ ಆ ಕರ್ಮಗಳ ರಾಶಿಯೂ ಕೊನೆಯ ಪಕ್ಷ ಒಂದು ಜನ್ಮವನ್ನಾದರೂ ಕೊಟ್ಟು ತಮ್ಮ ಫಲಗಳನ್ನು ಉಣ್ಣಿಸಿ ತೀರಿಸಬೇಕಾಗುತ್ತದೆ. ಇದಿಲ್ಲದೆ ಹೋದರೆ ಮಾಡಿದ ಕರ್ಮಗಳೆಲ್ಲ ಮಣ್ಣುಮುಕ್ಕಿ ಹೋಗಿ ಶಾಸ್ತ್ರದ ಮಾತು ಸುಳ್ಳಾಗುತ್ತದೆ.” ಈ ಸಂಶಯಕ್ಕೆ ಪರಿಹಾರವಿದೆ. ಕರ್ಮವೆಂಬುವೆಲ್ಲ ಹುಟ್ಟನ್ನು ಕೊಡುವವೆಂಬ ಮಾತು ನಿಜ. ಆದರೆ ಆ ಹುಟ್ಟನ್ನು ಕೊಡಬೇಕಾದರೆ ಅವರಲ್ಲಿ ಬ್ರಹ್ಮವನ್ನರಿಯದಿರುವಿಕೆ,

ಬಯಕೆ-ಇವುಗಳ ಬೀಜಗಳಿರಬೇಕು. ಆ ಬೀಜಗಳಿರುವ ಕರ್ಮಗಳು ಮಾತ್ರವೆ ಹುಟ್ಟನ್ನು ಕೊಡುವವೆಂದು ಎಷ್ಟೋ ಕಡೆ ಹೇಳಿರುವದುಂಟು. ಬ್ರಹ್ಮದ ಅರಿವಾಗುತ್ತಲೆ ಆ ಅರಿವೆಂಬ ಬೆಂಕಿಯಿಂದ ಆ ಬೀಜಗಳು ಹುರಿದು ಹೋಗುವವು. ಹುರಿದ ಬೀಜಗಳು ಹೇಗೆ ಹುಟ್ಟಲಾರವೋ ಹಾಗೆ ಬ್ರಹ್ಮವನ್ನರಿತವನ ಕರ್ಮಗಳು ಹುಟ್ಟನ್ನು ಕೊಡುವವಿಲ್ಲ. ಬ್ರಹ್ಮದ ಅರಿವಾಗುತ್ತಲೆ ಆ ಅರಿವೆಂಬ ಬೆಂಕಿಯು ಆ ಅರಿವು ಬಂದ ಮೇಲೆ ಮಾಡುವ ಕರ್ಮಗಳ ಬೀಜಗಳನ್ನು ಮಾತ್ರ ಹುರಿಯುವದೆಂದು ಹೇಳಿ ಹಿಂದಿನ ಕರ್ಮಗಳನ್ನು ಹಿಂದಿನಂತೆಯೇ ಉಳಿಸಬಾರದು. ಅದು ಆಮೇಲಿನವಕ್ಕೆ ಮಾತ್ರ ತಗಲಿ ಹಿಂದಿನದನ್ನು ಉಳಿಸುವದಿಲ್ಲ. ಆಗ ಮುಂದಿನ ಮತ್ತು ಹಿಂದಿನ ಎಲ್ಲ ಕರ್ಮಗಳ ಬೀಜಗಳೂ ಒಟ್ಟಿಗೆ ಹುರಿದುಹೋಗುವವು. ಬ್ರಹ್ಮದ ಅರಿವು ಬರುತ್ತಲೆ ಅದರ ಸೆಕೆ ಎಲ್ಲ ಕರ್ಮಗಳಿಗೂ ಏಕಪ್ರಕಾರವಾಗಿ ಹತ್ತುವದು. ಪ್ರಾರಬ್ಧ ಕರ್ಮವೂ ಕರ್ಮವಾದ್ದರಿಂದ ಅದೂ ಹುರಿದುಹೋಗಿರುವದೆನ್ನಬೇಕಾದರೂ ಅವರಲ್ಲಿ ಯಾವದೂ ಬ್ರಹ್ಮವನ್ನರಿತವನಿಗೆ ಫಲವನ್ನು ಕೊಡದೆ ಹೋಗದಿರುವಂತೆ ಈ ರಾಶಿಯೂ ಫಲವನ್ನು ಕೊಡಬೇಕೆನ್ನುವದು ಸರಿಯಲ್ಲ. ಬಿಟ್ಟ ಬಾಣವು ಗುರಿಗೆ ತಗಲಿಯೇ ಬೀಳಬೇಕು. ಪ್ರಾರಬ್ಧವು ಅದರಂತೆ ಫಲವನ್ನು ಕೊಟ್ಟೇ ತೀರುವದು. ಇನ್ನೂ ಬಿಡದಿರುವ ಬಾಣವು ಇದ್ದ ಕಡೆಯೇ ಸುಮ್ಮನಾಗುವಂತೆ ಫಲವನ್ನು ಕೊಡುವದಕ್ಕೆ ಹೊರಟಿಲ್ಲದ ಕರ್ಮಗಳು ಇದ್ದಲ್ಲಿಯೇ ಬೀಜಶಕ್ತಿಯನ್ನು ಕಳೆದುಕೊಳ್ಳುವದರಿಂದ ಬ್ರಹ್ಮವನ್ನರಿತವನು ಮತ್ತೆ ಹುಟ್ಟುವದಕ್ಕೆ ದಾರಿ ಇಲ್ಲ. — (ಛ ೧೩-೨೩)

ಯಾವನಿಗೆ ಬಯಸತಕ್ಕ ವಸ್ತುವೆಂಬುದೊಂದಿಲ್ಲವೋ ಯಾವನು ಎಲ್ಲೆಲ್ಲಿಯೂ ತುಂಬಿರುವ ಬ್ರಹ್ಮವೆ ತಾನೆಂದು ಅರಿತಿರುವನೊ ಅವನು ನಿಜವನ್ನರಿತವನು. ಅವನು ಮತ್ತೆ ಹುಟ್ಟುವದಿಲ್ಲವೆಂದು ಹೇಳುವ ಮಾತಿಗೆ ಕಾಲಿದೆ. ಇದಕ್ಕೆ ದೃಷ್ಟಾಂತವಿದೆ. ಯಾವನು ಕದ್ದಿರಬಹುದೆಂದು ತೋರುತ್ತದೆಯೊ ಅವನನ್ನು ಪರೀಕ್ಷಿಸಲೆಂದೂ ಕದ್ದಿದ್ದರೆ ಅವನಿಗೆ ತಕ್ಕ ಶಿಕ್ಷೆಯನ್ನು ಕೊಡಲೆಂದೂ ಅರಸನ ಕಡೆಯ ಆಳುಗಳು ಅವನ ಕೈಗಳನ್ನು ಕಟ್ಟಿ ಹಿಡಿದುಕೊಂಡು ಎಳತರುತ್ತಾರೆ ಮತ್ತು ಇವನು ಇಂಥವನ ಪದಾರ್ಥವನ್ನು ಕಳ್ಳತನದಿಂದ

ಎತ್ತಿಕೊಂಡು ಹೋಗಿರುವನೆಂದು ಹೇಳಿ ಅವನನ್ನು ನ್ಯಾಯಾಧಿಪತಿಯ ಮುಂದೆ ನಿಲ್ಲಿಸುತ್ತಾರೆ. ಆಗ ಅವನು ತಾನು ಕದ್ದಿಲ್ಲವೆಂದು ಹೇಳುತ್ತಾನೆ. ಇಂಥ ಸಂದರ್ಭದಲ್ಲಿ ಹಿಂದಿನ ಕಾಲದಲ್ಲೊಂದು ಪದ್ಧತಿ ಇತ್ತು. ಅವನ ನಿಜವನ್ನು ತಿಳಿಯುವದಕ್ಕಾಗಿ ನ್ಯಾಯಾಧಿಪತಿಯು ಅವನ ಕೈಯಲ್ಲೊಂದು ಕಾದ ಕಬ್ಬಿಣದ ತುಂಡನ್ನಿಡಹೇಳುತ್ತಿದ್ದನು. ಅವನು ಕದ್ದವನಾಗಿದ್ದು ಹೊರಗೆ ಇಲ್ಲವೆಂದರೆ ತಾನು ಸುಳ್ಳನ್ನು ಮುಂದೆ ಹಿಡಿದದ್ದರ ಫಲವಾಗಿ ಅವನ ಕೈ ಸುಟ್ಟುಹೋಗುತ್ತಿತ್ತು. ಆಗ ಅವನಿಗೆ ತಕ್ಕ ಶಿಕ್ಷೆಯೂ ಆಗುತ್ತಿತ್ತು. ಅವನು ಕದ್ದಿಲ್ಲದೆ ಇದ್ದರೆ ನಿಜವನ್ನು ಮುಂದೆ ಹಿಡಿದದ್ದರ ಫಲವಾಗಿ ಅವನ ಕೈ ಸುಡದೆ ಇರುತ್ತಿತ್ತು. ಆಗ ಅವನಿಗೆ ಬಿಡುಗಡೆಯಾಗುತ್ತಿತ್ತು. ಹೀಗೆ ಬ್ರಹ್ಮನನ್ನರಿತವನು ನಿಜವನ್ನು ಹಿಡಿದಿರುವವನಾಗುವದರಿಂದ ಮತ್ತೆ ಶರೀರದ ಕಟ್ಟಿನೊಳಕ್ಕೆ ಬರಬೇಕಾಗುವದಿಲ್ಲ. —(ಛಾಂ ೬-೧೬-೧..೩)

ಸಂಸಾರವೆಂಬ ಅರಳೀಮರದ ಮೇಲೆ ಹತ್ತಿರುವವರೆಗೂ ನಾವು ಅಜ್ಞಾನವೆಂಬ ಬಲವಾದ ನಿದ್ರೆಯಲ್ಲಿ ಒಂದರ ಹಿಂದೊಂದು ಅನರ್ಥವೆಂಬ ಕನಸನ್ನು ಕಾಣುತ್ತಿರುವೆವಷ್ಟೆ. ಇದರಲ್ಲಿದ್ದುಕೊಂಡೇ ನಾವು ಇದರ ತಾಯಿಬೇರಾದ ಆತ್ಮನನ್ನು ತಿಳಿಯಲಾಗುವದು. ಇದನ್ನು ನಾವು ತಿಳಿಯದೆ ಹೋದರೆ ಹುಟ್ಟು, ಸಾವು-ಮೊದಲಾದ ಲೆಕ್ಕವಿಲ್ಲದಷ್ಟು ಕುತ್ತಗಳ ಬಾಯಿಗೆ ತುತ್ತಾಗುವೆವು. ಇದನ್ನು ತಿಳಿದವರು ಸಾವಿನ ಕಣ್ಣಿಯನ್ನು ಕಳಚಿಕೊಳ್ಳುವರು. ಇದನ್ನು ಅರಿಯದವರು ಹುಟ್ಟು, ಸಾವು-ಮೊದಲಾದ ದುಃಖದಿಂದ ದುಃಖಕ್ಕೇ ಸಾಗುತ್ತಿರುವರು. ಇವರಿಗೆ ಅವರ ಬಿಡುಗಡೆಯೆಂಬುದಿಲ್ಲವೇ ಇಲ್ಲ. —(ಬೃ ೪-೪-೧೪)

## ಆತ್ಮನನ್ನು ಇಲ್ಲಿಯೇ ಕಾಣಬೇಕು

ಆದ್ದರಿಂದ ಶರೀರವು ಸಾಯುವದಕ್ಕೆ ಮುಂಚೆಯೇ ಆ ಬ್ರಹ್ಮವಿಚಾರವನ್ನು ಅರೆದುಕೊಂಡು ಕುಡಿದು ತನ್ಮಯನಾಗಬೇಕು. ಅಂಥವನಿಗೆ ಸಂಸಾರವೆಂಬ ಕಣ್ಣಿಯು ಕಳಚಿಕೊಂಡುಹೋಗುತ್ತದೆ. ಹಾಗೆ ಮಾಡದೆ ತಾನು ಬ್ರಹ್ಮಕ್ಕೆ ದೂರನಾಗಿಯೇ ಉಳಿದರೆ ಅವನು ತನ್ನ ಪುಣ್ಯದ ಪ್ರಭಾವದಿಂದ

ಎಷ್ಟು ಹೆಚ್ಚು ಕಾಲ ಉತ್ತಮಲೋಕದಲ್ಲಿದ್ದರೂ ಸೃಷ್ಟಿಕಾಲದಲ್ಲಿ ಭೂಮಿ ಮೊದಲಾದವುಗಳು ಸೃಷ್ಟಿಯಾಗುವಾಗ ಇವನೂ ಶರೀರವೆಂಬ ಹೊರಲಾರದ ಹೊರೆಯನ್ನು ಹೊತ್ತುಕೊಂಡು ಈ ಲೋಕದ ಸಂಸಾರವೆಂಬ ರಂಗಮಂಟಪಕ್ಕೆ ಇಳಿಯಬೇಕಾಗುತ್ತದೆ. ಆದ್ದರಿಂದ ಇಲ್ಲಿಯೇ ಆತ್ಮನನ್ನು ಕಾಣುವ ಹೆಣಗಾಟವನ್ನೆಲ್ಲ ಮಾಡಬೇಕು. ಆ ಬ್ರಹ್ಮಸ್ವರೂಪದ ಅರಿವು ಈ ಲೋಕದಲ್ಲಿ ಮೈಗೂಡಿದ ಹಾಗೆ ಬೇರೆ ಎಲ್ಲೆಲ್ಲಿಯೂ ಆಗುವದಿಲ್ಲ. ಕನ್ನಡಿಯಲ್ಲಿ ನಮ್ಮ ಮುಖವನ್ನು ಹೇಗೆ ಸ್ಪಷ್ಟವಾಗಿ ಕಾಣುತ್ತೇವೊ ಹಾಗೆ ಮಲವನ್ನೆಲ್ಲ ಕಳೆದುಕೊಂಡ ಮನಸ್ಸಿನಿಂದ ಈ ಲೋಕದಲ್ಲಿ ಬ್ರಹ್ಮವನ್ನು ಕಣ್ಣಿಗೆ ಕಟ್ಟಿದಂತೆ ಕಾಣಬಹುದು. ಬೇರೆ ಲೋಕಗಳೆಲ್ಲ ನಮ್ಮ ಪುಣ್ಯಪಾಪಗಳ ಫಲಗಳನ್ನು ನಮ್ಮ ಬಾಯಿಗೆ ತುರುಕುವವುಗಳೇ ಹೊರತು ಬ್ರಹ್ಮದ ದರ್ಶನಕ್ಕೆ ಅನುಕೂಲವಾಗತಕ್ಕವುಗಳಲ್ಲ. ಭೂಲೋಕಕ್ಕಿಂತ ಮೇಲುಗೈ ಆದದ್ದೆನಿಸಿಕೊಂಡಿರುವ ಪಿತೃಲೋಕದಲ್ಲಿ ನಮ್ಮ ಪುಣ್ಯದ ಫಲವಾಗಿ ಅದರ ದರ್ಶನವಾಗುವ ಯೋಗವೇನಾದರೂ ಒದಗಿದರೆ ಆ ದರ್ಶನವು, ಎಚ್ಚರದ ವಾಸನೆಯಿಂದ ಕನಸಿನ ನೋಟಗಳೆಲ್ಲ ಹೇಗೆ ಅಸ್ಪಷ್ಟವಾಗಿರುವವೊ ಹಾಗೆ, ಅಸ್ಪಷ್ಟವಾಗಿ ಮಾತ್ರ ಆದೀತು. ಏಕೆಂದರೆ: ಪ್ರಾಣಿಗಳಿಗೆ ಇಲ್ಲಿಗಿಂತ ಅಲ್ಲಿ ಇಂದ್ರಿಯಗಳ ಸುಖಾನುಭವಕ್ಕೆ ಬಾಯಿನೀರು ಸುರಿಯುವದು ಹೆಚ್ಚು. ಅದಕ್ಕಿಂತ ಹೆಚ್ಚಿನ ಗಂಧರ್ವಲೋಕದ ಮಾತು ತೆಗೆದುಕೊಂಡರೆ ಅಲ್ಲಿಯೂ ಅದು, ನೀರಿನಲ್ಲಿ ಕಾಣುವ ನೆರಳಿನಂತೆ, ಸ್ಪಷ್ಟವಾಗಿಲ್ಲದಿರುವದು. ಇಂದ್ರಿಯಗಳ ಸುಖದ ಬಾಯಾರಿಕೆ ಹೆಚ್ಚಿರುವ ಕಡೆ ಬ್ರಹ್ಮವಿಚಾರವು ಸುಳಿಯುವದಿಲ್ಲ. ಈ ಲೋಕದಲ್ಲಿಯೂ ಬ್ರಹ್ಮವು ಒಲಿಯದಿರುವದಕ್ಕೆ ಇಂದ್ರಿಯಸುಖದ ಬಯಕೆಯೇ ಕಾರಣ. ಬಯಕೆಯು ಅದಕ್ಕೆ ಬಲವಾದ ಅಡ್ಡಿ. ಬೇರೆ ಲೋಕಗಳಲ್ಲಿ ಈ ಅಡ್ಡಿಯು ಮತ್ತಷ್ಟು ಹುರಿಗೂಡಿರುವದು. ಆದ್ದರಿಂದ ಬೇರೆ ಲೋಕಗಳಲ್ಲಿಯೂ ಬ್ರಹ್ಮವನ್ನು ಕಾಣಬಹುದೆಂದು ಶಾಸ್ತ್ರಕಾರರು ಎಷ್ಟೋ ಹೇಳಿದ್ದರೂ ಅಲ್ಲಿ ಅದು ಕಾಣಬರುವದರ ಹಣೆಯ ಬರೆಹವು ಮಸುಕೆ. ಬ್ರಹ್ಮಲೋಕ ಒಂದರಲ್ಲಿ ಮಾತ್ರ ಬಿಸಿಲು ಮತ್ತು ನೆರಳುಗಳಂತೆ ಅದು ಸ್ಪಷ್ಟವಾಗಿ ಕಾಣುವದು. ಆ ಲೋಕವು ದೊರೆಯಬೇಕಾದರೆ ಬಹು

ಹೆಚ್ಚಿನ ಪುಣ್ಯಕರ್ಮಬೇಕು ; ಬಹು ಹೆಚ್ಚಿನ ಉಪಾಸನೆ ಬೇಕು. ಆದ್ದರಿಂದ ಇಲ್ಲಿಯೇ ಅದನ್ನು ಕಾಣುವ ಯತ್ನವನ್ನು ಮಾಡಬೇಕು. —(ಕ ೬-೪,೫).

ಬ್ರಹ್ಮವನ್ನು ಅರಿಯುವದಕ್ಕೆ ಯಾರಿಗೂ ಯಾವ ಹೆಚ್ಚುಗಟ್ಟಲೆಯ ಯೋಗ್ಯತೆಯೂ ಬೇಕಾಗಿಲ್ಲ. ತನಗಿಂತ ಬೇರೆಯಾದವುಗಳನ್ನು ದೊರಕಿಸಿ ಕೊಳ್ಳುವದಕ್ಕಾದರೆ ಆ ಬಗೆಯ ಯೋಗ್ಯತೆ ಬೇಕಾದೀತು. ಬ್ರಹ್ಮವು ಎಲ್ಲರ ಆತ್ಮ. ತನ್ನನ್ನು ತಾನು ಅರಿಯುವದಕ್ಕೇನು ಬೇಕು ? ಅರಿಯಬೇಕೆಂಬ ಮನಸ್ಸೊಂದು ಬೇಕು. ಇಷ್ಟು. 'ಮನಸ್ಸಿದ್ದರೆ ಮಹಾದೇವ'--ಎಂದು ಗಾದೆಯುಂಟು. ಆದ್ದರಿಂದ ಪ್ರತಿಯೊಬ್ಬನೂ ತನ್ನನ್ನು ತಾನು ಅರಿಯುವ ಯತ್ನವನ್ನು ಮಾಡಬೇಕು.

# ೩—ವೇದಾಂತದ ವಿಚಾರ

## ತಾನಲ್ಲದವುಗಳನ್ನು ತಾನೆಂಬ ತಪ್ಪು ತಿಳಿವು

ತನ್ನನ್ನು ತಾನು ಅರಿಯಬೇಕೆಂಬ ಮಾತು ಜನರಿಗೆ ಹುಚ್ಚರ ಕನವರಿಕೆಯಂತೆ ತೋರಬಹುದು. ಏಕೆಂದರೆ: ತನ್ನನ್ನು ತಾನು ಹೊಸದಾಗಿ ಅರಿಯುವದೇನು? ತಾನಲ್ಲದ್ದನ್ನು ಅರಿಯಬೇಕೆಂದರೆ ಒಪ್ಪೀತು. ಏಕೆಂದರೆ: ತಾನಲ್ಲದ ಎಲ್ಲ ವಿಷಯಗಳೂ ತನಗೆ ತಿಳಿದಿರುವದಿಲ್ಲವಾದ್ದರಿಂದ ಅವುಗಳನ್ನು ತಿಳಿಯತಕ್ಕದ್ದು ಉಳಿದಿರುವದು. ತಾನಲ್ಲದ ವಸ್ತುಗಳನ್ನು ತನ್ನ ಇಂದ್ರಿಯಗಳ ಸುಖಕ್ಕಾಗಿ ಉಪಯೋಗಮಾಡಿಕೊಳ್ಳಬೇಕಾಗಿರುವದರಿಂದ ಆ ಉಪಯೋಗದಲ್ಲಿ ಹೆಚ್ಚು ಹೆಚ್ಚು ನಾಗರಿಕತೆಯನ್ನು ಹೊಂದುವದಕ್ಕಾಗಿಯೂ ಆ ವಸ್ತುಗಳ ವಿಚಾರವನ್ನು ಹೆಚ್ಚು ಹೆಚ್ಚಾಗಿ ತಿಳಿದಿರುವದು ಆಗತ್ಯವಾಗಿರುವದು. ಆದ್ದರಿಂದಲೆ ವಿದ್ಯಾಭ್ಯಾಸವೆಂಬ ಹೆಸರಿನಿಂದ ನಡೆಯುವ ಸಡಗರದಲ್ಲ ಬರೀ ಈ ವಿಚಾರವೇ ಇರುವದು. ಈ ವಿದ್ಯಾಭ್ಯಾಸದಲ್ಲಿ ತನ್ನ ಅರಿವು ತನಗೆ ಉಂಟಾಗಬೇಕೆಂಬ ಸೊಲ್ಲು ಕೂಡ ಇಲ್ಲ ಮತ್ತು ತನ್ನನ್ನು ತಾನು ಅರಿಯಬೇಕೆಂಬ ಮಾತಿಗೆ ಅರ್ಥವೂ ಇಲ್ಲ. ಏಕೆಂದರೆ: ತನ್ನ ಅರಿವು ತನಗಿಲ್ಲದೆ ಯಾವ ನಡೆವಳಿಯೂ ಸಾಗುವದೇ ಇಲ್ಲ. ತಾನೆಂ

ವರೆ ದೇಹ, ಇಂದ್ರಿಯಗಳು, ಮನಸ್ಸು ಮತ್ತು ಪ್ರಾಣ-ಇವುಗಳ ಗುಂಪೆಂದು ಎಂಥ ದಡ್ಡರಿಗೂ ಚೆನ್ನಾಗಿ ಗೊತ್ತು. ಇದನ್ನೇ ಮತ್ತೆ ಮತ್ತೆ ಮೆಲಕು ಹಾಕುವದೇನು ?

**(ಅ)** ಲೋಕದಲ್ಲಿರುವ ಸ್ಥಿತಿ ಹೀಗೆಯೇ ಸರಿ. ಇದನ್ನು ಅಲ್ಲವೆನ್ನುವದಿಲ್ಲ. ಆದರೆ ಈ ನಮ್ಮ ಸ್ಥಿತಿಯು ವಿವೇಕದಿಂದ ಕೂಡಿದ್ದಲ್ಲವೆಂದೂ ಮಂಕುಬೂದಿಯ ಬೇಳುವೆಗೊಳಗಾದವರು ಒಂದನ್ನು ಇನ್ನೊಂದನ್ನಾಗಿ ತಿಳಿಯುವಂತೆ ಇರುವವೆಂದೂ ಆ ಮಂಕನ್ನು ಹರಿದುಕೊಂಡ ವಿವೇಕಿಗಳು ಹೇಳುವರು. (ಅ. ಭಾ). **(ಆ)** ಈ ಮಾತು ನಿಜವಾದರೆ ನಾವು ನಮ್ಮ ಸ್ವರೂಪವೆಂದು ತಿಳಿದಿರುವದು ನಾವಲ್ಲವಾಗಬೇಕಾಯಿತು. ನಾವು ನಮ್ಮ ಸ್ವರೂಪವೆಂದು ತಿಳಿದಿರುವದೇ ನಾವೇನೋ ಅಥವಾ 'ಬೇರೆಯೋ ಎಂಬದನ್ನು ಗೊತ್ತುಮಾಡುವದಕ್ಕಾಗಿ ನಾವು ನಮ್ಮ ಸ್ವರೂಪವೆಂದು ತಿಳಿದಿರುವದನ್ನು ನಮ್ಮ ಅನುಭವವೆಂಬ ಒರೆಗಲ್ಲಿಗೆ ತಿಕ್ಕಿ ನೋಡೋಣ. ಎಚ್ಚರದ ದೇಹ ಮೊದಲಾದವುಗಳ ಗುಂಪನ್ನು ನಾವೆನ್ನುತ್ತೇವಷ್ಟೆ. ಈ ಗುಂಪೇ ನಾವಾದರೆ ಈ ಗುಂಪಿನಲ್ಲಿ ಯಾವದಾದರೊಂದಿಷ್ಟು ಕಡಿಮೆಯಾದರೂ ನಾವು ಕಡಿಮೆಯಾಗಬೇಕು. ದೇಹವೂ ಇಂದ್ರಿಯಗಳೂ ಕೆಟ್ಟರೂ ಮನಸ್ಸು ಪಲ್ಲಟವಾದರೂ ನಾವು ಕೆಡದೆಯೂ ಪಲ್ಲಟವಾಗದೆಯೂ ಇರುವೆವು ಇದರ ಮೇಲೆ ಅವುಗಳನ್ನೆಲ್ಲ ನಮ್ಮವುಗಳೆಂದು ನಾವೇ ಬಾಯಿಬಿಟ್ಟು ಹೇಳುವಾಗ ಅವೇ ಹೇಗೆ ನಾವಾದೇವು ? ಇನ್ನೊಂದು ವಿಚಾರವನ್ನು ನೋಡಿ. ನಾವು ಕನಸುಗಾಣುವಾಗ ಎಚ್ಚರದ ದೇಹದ ಅರಿವೇ ಇಲ್ಲದವರಾಗುವದರಿಂದ ಆಗ ಮಾಡುವ ನಡೆವಳಿಕೆಗಳಲ್ಲಿ ನಮ್ಮ ಸ್ವರೂಪವು ಕಡಿಮೆಯಾಗಬೇಕಷ್ಟೆ. ಹಾಗಾಗುವದಿಲ್ಲ. ಎಚ್ಚರದ ನಮಗೂ ಕನಸಿನ ನಮಗೂ ಏನೂ ಹೆಚ್ಚು ಕಡಿಮೆ ಇಲ್ಲ. ಹೀಗೆಯೇ ನಾವು ಸತ್ತು ಮತ್ತೆ ಹುಟ್ಟುವಾಗ ಈಗಿನ ದೇಹವಿಲ್ಲದೆ ಮತ್ತೊಂದು ದೇಹವು ಗಂಟುಬಿದ್ದಿರುವದು. ಆದರೂ ಈ ನಮಗೂ ಆ ನಮಗೂ ಏನೂ ಭೇದವಿರುವದಿಲ್ಲ. ಇನ್ನು ನಾವು ತನಿನಿದ್ರೆಯಲ್ಲಿರುವಾಗ ಎಚ್ಚರದ ದೇಹ, ಇಂದ್ರಿಯಗಳು, ಮನಸ್ಸು, ಪ್ರಾಣ—ಈ ಯಾವವರ ಅರಿವೂ ಇಲ್ಲದವರಾಗುವದರಿಂದ ಆಗ ನಮ್ಮ ಸ್ವರೂಪವು ಇಲ್ಲವೆಂದೇ

ಹೇಳಬೇಕಾಗುವದು. ಆದರೆ ಎಚ್ಚತ್ತ ಮೇಲೆ ನಾವು ಇಷ್ಟು ಹೊತ್ತೂ ಸುಖವಾಗಿ ನಿದ್ರೆಮಾಡಿದೆವೆಂದು ನಮ್ಮ ಅನುಭವವನ್ನು ಹೇಳುವದರಿಂದ ತನಿನಿದ್ರೆಯಲ್ಲಿ ನಾವಿದ್ದೆವೆಂದು ಕಣ್ಣಿಗೆ ಕಟ್ಟಿದಂತೆ ಕಾಣುವದು. ಆಗ ನಾವಿಲ್ಲದೆ ಇದ್ದರೆ ಆ ಅನುಭವವು ನಮಗೆ ಆಗುತ್ತಲೇ ಇರಲಿಲ್ಲ. ಆದ್ದರಿಂದ ಆಗ ನಾವು ಇದ್ದೆವು. ಇಷ್ಟೇ ಅಲ್ಲ. ಎಚ್ಚರದ ನಮಗೂ ಕನಸಿನ ನಮಗೂ ತನಿನಿದ್ರೆಯ ನಮಗೂ ಯಾವ ಹೆಚ್ಚು ಕಡಿಮೆಯೂ ಇಲ್ಲದೆ ನಾವು ಯಾವಾಗಲೂ ಅಚ್ಚಳಿಯದವರಾಗಿರುವೆವು. ಈ ದೃಷ್ಟಿಯಿಂದ ನೋಡಿದರೆ ಎಚ್ಚರದ ದೇಹ ಮೊದಲಾದವುಗಳ ಗುಂಪನ್ನು ನಾವೆನ್ನುವದರಲ್ಲಿ ಹುರುಳಿಲ್ಲ. ದೇಹ ಮೊದಲಾದವುಗಳು ನಮಗಿಂತ ಬೇರೆಯಾದವುಗಳು. ಅವುಗಳನ್ನು ನಾವೆಂದು ತಿಳಿಯುವದು ಒಂದನ್ನು ಇನ್ನೊಂದನ್ನಾಗಿ ತಪ್ಪುತಿಳಿದದ್ದಾಗುವದಲ್ಲದೆ ಮತ್ತೇನು? ಈ ಉದಾಹರಣೆಯಲ್ಲಿ ಹೊರಗಣ ವಿಷಯಗಳನ್ನು ನೋಡಿ ಅವುಗಳನ್ನು ತಾನೆಂದು ತಪ್ಪು ತಿಳಿದಂತಾಗುವದು.

ಹಾಗಾದರೆ ತಾನು ಯಾರು? ವಿಚಾರಕ್ಕೆ ಹೊರಟರೆ ಈ ಪ್ರಶ್ನೆಯುಂಟಾಗುವದರಿಂದಲೇ ತನ್ನನ್ನು ತಾನು ಅರಿಯಬೇಕಾಗಿಬರುವದು. ತನ್ನ ಅರಿವನ್ನು ಮುಂದಿಟ್ಟುಕೊಂಡೇ ಎಲ್ಲ ನಡೆವಳಿಕೆಗಳೂ ಆಗುವವೆಂದು ಹೇಳಿದ ಮಾತಿನಲ್ಲಿ ಕೂಡಿಕೊಂಡಿರುವ ತನ್ನ ಅರಿವು ತಪ್ಪಾದದ್ದೆಂದು ತೋರಿಸಿದ ಮೇಲೆ ಅದರ ಮುಂದಿನ ಎಲ್ಲ ನಡೆವಳಿಕೆಗಳೂ ತಪ್ಪಾದ ತಳಹದಿಯುಳ್ಳವುಗಳೆಂದು ಹೊಸದಾಗಿ ಹೇಳಬೇಕಾದದ್ದೇ ಉಳಿದಿಲ್ಲ. ಹೀಗಾಗಿ ಮನುಷ್ಯನ ನಡೆವಳಿಕೆಗಳೆಂಬ ಮೇಲುಮಹಡಿಗಳು ತಪ್ಪುತಿಳಿವೆಂಬ ತಳಹದಿಯ ಮೇಲೆ ಮುಗಿಲುಮುಟ್ಟುತ್ತಿರುವವು. ಪ್ರಾಪಂಚಿಕರು ನಡೆಸುವ ವಿದ್ಯಾಭ್ಯಾಸವು ಈ ಮೇಲುಮಹಡಿಗಳ ಅಂದವನ್ನು ಹೆಚ್ಚಿಸುವ ಮಾತ್ರದೆ ಹೊರತು ತಳಹದಿಯನ್ನು ಗಟ್ಟಿಗೊಳಿಸುವದಾಗಿಲ್ಲ. ಆದ್ದರಿಂದ ನಮ್ಮ ಶಾಸ್ತ್ರಕಾರರು ಹೊಟ್ಟೆಯ ಪಾಡಿನ ಆ ವಿದ್ಯೆಯನ್ನು ಅವಿದ್ಯೆಯೆಂದು, ಎಂದರೆ ತಿಳಿಗೇಡಿತನದ್ದೆಂದು ಕರೆಯುವರು. ಅದನ್ನು ವಿದ್ಯೆ ಎನ್ನುವದು ಉಪಚಾರದ ಮಾತು. ತಳಹದಿಯನ್ನು ಗಟ್ಟಿಗೊಳಿಸುವ ವಿದ್ಯೆಯೇ ನಿಜವಾದ ವಿದ್ಯೆ. ತನ್ನ ನಿಜಸ್ಥಿತಿಯನ್ನು ತಾನು ಅರಿಯುವದು ತಳಹದಿಯನ್ನು ಗಟ್ಟಿಗೊಳಿಸು

ವದು. ಆದ್ದರಿಂದ ಅದು ಮಿಥ್ಯೆ. ಹೊರಗಣ ವಸ್ತುಗಳ ವಿಚಾರವಲ್ಲಿ ಇನ್ನಿಲ್ಲವೆಂಬಷ್ಟು ತಿಳಿದವರೂ ತನ್ನ ನಿಜವನ್ನು ತಾನು ತಿಳಿಯದಿದ್ದರೆ ಅದೆಲ್ಲ ಆಕಾಶದ ಅರಮನೆ. ಹೊರಗಣ ವಸ್ತುಗಳ ವಿಚಾರವನ್ನೆಲ್ಲ ಮುಗಿಸಿರುವೆನೆಂದು ಘೋಷಿಸುವವನ್ನು ಎಷ್ಟೋ ಮೇಲಕ್ಕೇರುವವರಲ್ಲಿಯೂ ತಮ್ಮ ನಿಜವು ತಮಗೆ ತಿಳಿದಿರುವ ಸಂಭವವು ಬಹು ಕಡಿಮೆ. ತನ್ನನ್ನು ತಾನು ಅರಿಯಬೇಕೆಂಬ ಕಡೆಗೆ ಮನಸ್ಸನ್ನು ಹಾಕುವವರು ಬಹು ಕಡಿಮೆಯಾದರಿಂದ ತನ್ನನ್ನು ತಾನು ಅರಿಯಬೇಕೆಂದು ಎಲ್ಲರನ್ನೂ ಎಚ್ಚರಗೊಳಿಸುವದು ಸಹಜವಾಗಿರುವದು. ತಾನು ಯಾರೆಂಬ ಮಾತಿಗೆ 'ನಿಜವಾದ ಆತ್ಮ' ಎಂಬ ಹೆಸರಿನಿಂದ ಮುಂದೆ ಒಂದು ಪ್ರಕರಣವೆ ಉತ್ತರವಾಗಿರುವದು. ಆದ್ದರಿಂದ ಈಗ ಇಲ್ಲಿ ಆ ವಿಚಾರವನ್ನು ಹೆಚ್ಚು ಕೆದಕುವದಕ್ಕೆ ಹೋಗುವದು ಬೇಡ. ಕುತೂಹಲವನ್ನು ಕಳೆಯುವದಕ್ಕಾಗಿ ಒಂದು ಮಾತಿನಲ್ಲಿ ಹೇಳಬೇಕೆಂದರೆ ದೇಹ ಮೊದಲಾದವುಗಳಲ್ಲಿ ಶಕ್ತಿಯನ್ನು ತುಂಬುವ ಚೈತನ್ಯವೆ ತಾನು.

ಇರಲಿ. ದೇಹ ಮೊದಲಾದವುಗಳನ್ನು ತಾನೆಂಬ ತಪ್ಪುತಿಳಿವಿನ ವಿಷಯವನ್ನು ಹೇಳಿದ್ದಾಯಿತಷ್ಟೆ. ಅವುಗಳ ಧರ್ಮಗಳನ್ನೂ ತನ್ನದೆಂದು ತಿಳಿಯುವದುಂಟು. 'ನಾನು ಬಡವಾಗಿದ್ದೇನೆ' ಎಂಬ ಮುಂತಾದ ಮಾತುಗಳಲ್ಲಿ ತನ್ನದೆಂದು ಹೇಳುವ ಬಡತನವೆಂಬ ಧರ್ಮವು ದೇಹದ್ದು. 'ನಾನು ಮೂಕ' ಎಂಬ ಮುಂತಾದ ಮಾತುಗಳಲ್ಲಿ ತನ್ನದೆಂದು ಹೇಳುವ ಮೂಕತನವೆಂಬ ಧರ್ಮವು ಇಂದ್ರಿಯದ್ದು. 'ನಾನು ಬಯಸುತ್ತೇನೆ' ಎಂಬ ಮುಂತಾದ ಮಾತುಗಳಲ್ಲಿ ತನ್ನದೆಂದು ಹೇಳುವ ಬಯಕೆಯೆಂಬ ಧರ್ಮವು ಮನಸ್ಸಿನದು. ಹೀಗೆ ತಾನಲ್ಲದ ವಸ್ತುಗಳ ಧರ್ಮವನ್ನು ತನ್ನದೆಂದು ತನ್ನ ಮೈಮೇಲೆ ಹಾಕಿಕೊಳ್ಳುವದೂ ತಪ್ಪುತಿಳಿವಳಿಕೆ. --( ಆ. ಛಾ)

## ತಾನು ಹೊರಗಣವನೆಂಬ ತಪ್ಪುತಿಳಿವು

**(ಅ)** ಹೊರಗಣ ವಸ್ತುಗಳನ್ನು ತಾನೆಂದೂ ಅವುಗಳ ಧರ್ಮಗಳನ್ನು ತನ್ನದೆಂದೂ ತಪ್ಪು ತಿಳಿದಂತೆ ತನ್ನನ್ನು ಹೊರಗಣ ವಸ್ತುಗಳೆಂದೂ ತನ್ನ ಧರ್ಮಗಳನ್ನೂ ಹೊರಗಣ ವಸ್ತುಗಳ ಧರ್ಮಗಳೆಂದೂ ತಪ್ಪುತಿಳಿಯುವದೂ

ಉಂಟು. (ಅ. ಭಾ). (ಆ) ಒಂದು ಕೋಣೆಯಲ್ಲಿ ಮಲಗಿ ಕನಸು ಕಾಣುವಾಗ ತಾನೊಬ್ಬನೇ ಇರುವನಷ್ಟೆ. ಆದರೂ ಕನಸಿನಲ್ಲಿ ಅವನು ಹೊರಗೆ ವಸ್ತುಗಳಿರುವವೆಂದು ನೋಡುವನು. ಎಚ್ಚರವು ಕನಸಿನಂತೆಯೇ ಎಂದು ಮುಂದೆ ಗೊತ್ತಾಗುವದು. ಹೀಗೆ ತಾನೊಬ್ಬನು ನಿಜವಾಗಿರುವಾಗ ಆ ತನ್ನಲ್ಲಿ ಸುಳ್ಳಾದ ಹೊರಗಣ ವಸ್ತುಗಳನ್ನು ಕಂಡದ್ದೂ ತಪ್ಪುತಿಳಿವಳಿಕೆ. ಇನ್ನು ತನ್ನ ನಿಜವಾದ ಸ್ವರೂಪಕ್ಕೆ ತನಗಿಂತ ಬೇರೆಯಾದ ಧರ್ಮವೆಂಬುದೊಂದಿಲ್ಲ. ಅದರ ಸ್ವರೂಪವಿಶೇಷವೇ ಅದರ ಧರ್ಮ. ಇರುವಿಕೆ, ತಿಳಿವು, ಸುಖ-ಇವೇ ಅದರ ಸ್ವರೂಪವಿಶೇಷ ಅಥವಾ ಧರ್ಮ. ಮನುಷ್ಯನು ತನ್ನ ಈ ಸ್ವರೂಪವನ್ನು ವಿಷಯಗಳ ಮೇಲೆ ಹಾಕುವದೂ ಉಂಟು. 'ರಾಮನಿದ್ದಾನೆ; ಅವನು ತಿಳಿಯುವವನು; ಸುಖಿ' ಎಂದು ದೇಹ ಮೊದಲಾದವುಗಳ ಗುಂಪನ್ನು ರಾಮನೆಂದಿಟ್ಟುಕೊಂಡು ಹೇಳುವಾಗ ಇರುವದೂ ತಿಳಿವೂ ಸುಖವೂ ಜಡವಾಗಿ ಬರೀ ತೋರಿಕೆಯದಾದ ದೇಹದಲ್ಲಿಲ್ಲ. ಅವು ದೇಹ ಮೊದಲಾದವುಗಳ ಗುಂಪಿಗೆ ಶಕ್ತಿಯನ್ನು ಕೊಡುತ್ತ ಒಳಗಿರುವ ಆತ್ಮನ ಸ್ವರೂಪ. ಅದನ್ನು ತಪ್ಪಾಗಿ ದೇಹ ಮೊದಲಾದವುಗಳ ಗುಂಪಿನ ಮೇಲೆ ಹಾಕಿದಂತಾಗುವದು. ಇದೂ ತಪ್ಪುತಿಳಿವಳಿಕೆ.

(ಅ) ಎಲ್ಲರೂ ಹೀಗೆ ನಿಜವಾದ ತನ್ನನ್ನು ಸುಳ್ಳಾದ ಹೊರಗಣ ವಸ್ತುಗಳಾಗಿಯೂ ಸುಳ್ಳಾದ ಹೊರಗಣ ವಸ್ತುಗಳನ್ನು ನಿಜವಾದ ತಾನಾಗಿಯೂ ತಪ್ಪು ತಿಳಿಯುತ್ತ ನಿಜವನ್ನೂ ಸುಳ್ಳನ್ನೂ ಬೆರೆಸಿಕೊಂಡು ಮಾಡುವ ನಡೆವಳಿಕೆಯವರೇ ಆಗಿರುವರು. (ಅ. ಭಾ). (ಆ) ತಪ್ಪುತಿಳಿವಳಿಕೆಯೆಂಬುದು ಯಾವದಾದರೊಂದು ಬಗೆಯಲ್ಲಿ ಮಂಕು ಕವಿದಾಗ ಮಾತ್ರ ಆಗುವದರಿಂದ ನಾವೆಲ್ಲರೂ ಯಾವದೋ ಒಂದು ಮಂಕುಬೂದಿಯ ಬೇಳುವೆಗೆ ಒಳಗಾಗಿರುವೆವೆಂದು ಒಪ್ಪಬೇಕಾಗಿರುವದು. ನಿದ್ರೆಯ ಮಬ್ಬಿನಿಂದ ಕನಸು ಕಾಣುವವರು ಎಚ್ಚತ್ತು ಕಣ್ಣು ಹೊಸಕಿಕೊಂಡು ಎದ್ದು ತಮ್ಮ ಕನಸನ್ನೂ ತಮ್ಮನ್ನೂ ಬೇರೆ ಮಾಡಿಕೊಂಡು ತಮ್ಮ ಕನಸು ಸುಳ್ಳಾದದ್ದೆಂದೂ ತಮ್ಮೊಬ್ಬರ ಇರುವಿಕೆಯೇ ನಿಜವಾದದ್ದೆಂದೂ ತಿಳಿಯುವಂತೆ ನಿಜವನ್ನೂ ಸುಳ್ಳನ್ನೂ ಬಿಡಿಸಿ ಬಿಡಿಸಿ ತಿಳಿಯುವವರಿಗೇ ವಿವೇಕಿಗಳೆಂದು ಹೆಸರು. ಆ ವಿವೇಕಿಗಳನ್ನು ನಮ್ಮ ಮುಂದಾಳುಗಳನ್ನಾಗಿ ಮಾಡಿಕೊಂಡು ನಾವೂ ನಿಜವನ್ನೂ ಸುಳ್ಳನ್ನೂ

ವಿಂಗಡಿಸಿ ತಿಳಿಯಬೇಕು. ನಮ್ಮ ಸ್ವರೂಪವನ್ನು ಮರೆಮಾಡಿ ಕಾಣುವ ಸುಳ್ಳನ್ನು ಬೇರೆ ಮಾಡಿ ಹೊರಕ್ಕೆ ಹಾಕಿದ ಮೇಲೆ ಮಾತ್ರವೇ ನಿಜವಾದ ನಮ್ಮ ಸ್ವರೂಪವು ಎದ್ದು ಕಾಣುವದು. ಈ ಪ್ರಯತ್ನವನ್ನು ಮಾಡಲೆಂದೇ ತನ್ನನ್ನು ತಾನು ಅರಿಯಬೇಕೆಂದು ಹಿರಿಯರು ಆಗಾಗ ಎಚ್ಚರಿಸುವರು.

ತನ್ನ ಸ್ವರೂಪವು ಚೈತನ್ಯವಾದರೆ ಅದು ಉಳಿದ ಜಡವಸ್ತುಗಳನ್ನೆಲ್ಲ ತನ್ನ ಅರಿವಿಗೊಳಗುಮಾಡೀತೇ ಹೊರತು ತಾನು ಯಾವ ಇಂದ್ರಿಯದ ಅರಿವಿಗೂ ಒಳಗಾಗುವದಲ್ಲವೆಂದಾಗುವದು. ಎಲ್ಲ ಇಂದ್ರಿಯಗಳಿಗೂ ಶಕ್ತಿಯನ್ನು ಕೊಡತಕ್ಕ ಅದು ಇಂದ್ರಿಯಗಳ ಅರಿವಿಗೆ ಒಳಗಾಗುವದೆಂಬುದು ಅಸಂಭವ. “ಒಂದನ್ನು ಇನ್ನೊಂದನ್ನಾಗಿ ತಿಳಿಯಬೇಕಾದರೆ ಆ ಒಂದೆಂಬುದು ನಮ್ಮ ಇಂದ್ರಿಯಗಳ ಅರಿವಿನೊಳಗೆ ಸಿಕ್ಕುಬಿದ್ದದ್ದಾಗಬೇಕು. ಆಗ ಮಾತ್ರವೆ ಅದನ್ನು ಇನ್ನೊಂದಾಗಿ ತಪ್ಪು ತಿಳಿಯುವದಕ್ಕಾಗುತ್ತದೆ. ಚೈತನ್ಯವು ಯಾವ ಇಂದ್ರಿಯದ ಅರಿವಿಗೂ ಒಳಗಾಗದ್ದಾದ ಮೇಲೆ ಅದನ್ನು ನಾವು ಹೊರಗಣ ವಿಷಯಗಳೆಂದು ತಪ್ಪು ತಿಳಿಯುವದು ಹೇಗೆ?” ಈ ಆಕ್ಷೇಪವು ಹೊರಗೆ ಸರಿಯಾಗಿ ಕಂಡರೂ ಒಳಗೆ ಹುಳುಕಾಗಿರುವದು ಚೆನ್ನಾಗಿ ವಿಚಾರ ಮಾಡಿದರೆ ಇಂದ್ರಿಯಗಳ ಅರಿವಿನೊಳಗಾದದ್ದನ್ನು ಮಾತ್ರವೆ ತಪ್ಪು ತಿಳಿಯಲಾಗುವದೆಂಬ ನಿಯಮವೇನೂ ಇಲ್ಲ. ಆಕಾಶವೆಂಬ ವಸ್ತು ಯಾವ ಇಂದ್ರಿಯದ ಅರಿವಿಗೂ ಒಳಗಾಗುವದಿಲ್ಲ. ಆದರೂ ಜನರು ಅದನ್ನು ಕಪ್ಪಾದದ್ದೆಂದು ತಪ್ಪುತಿಳಿಯುತ್ತಾರೆ. ಆಕಾಶವೆಂದರೆ ಬಯಲು. ಆಕಾರವಿಲ್ಲದ್ದರಿಂದ ಯಾವ ಇಂದ್ರಿಯದ ಅರಿವಿಗೂ ಒಳಗಾಗದ ಅದರಲ್ಲಿ ಕಪ್ಪಿರುವದೆಂಬ ಮಾತಿಗೆ ಕಾಲಿಲ್ಲ. ಆದ್ದರಿಂದ ಚೈತನ್ಯವು ಯಾವ ಇಂದ್ರಿಯದ ಅರಿವಿಗೂ ದಕ್ಕದ್ದರಿಂದ ಅದನ್ನು ತಪ್ಪು ತಿಳಿಯುವದಾಗಲಾರದೆಂದು ಸಿಬುರೆಬ್ಬಿಸಿದ್ದು ಸರಿಯಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಆ ಚೈತನ್ಯವು ‘ನಾನು, ನಾನು’ ಎಂಬ ಮನೋವೃತ್ತಿಯೊಳಗೆ ಸಿಕ್ಕುಬಿದ್ದದ್ದಾಗಿರುವದು. ಅದನ್ನು ತಪ್ಪಾಗಿ ತಿಳಿಯುವದಕ್ಕೆ ಇಷ್ಟು ಸಾಕು.

## ಕರ್ತೃತರ ತಿಳಿವೂ ಸರಿಯಲ್ಲ

‘ಇರಲಿ. ತನ್ನನ್ನು ತಾನು ಅರಿಯಬೇಕೆಂಬ ಕಡೆಗೆ ಮನಸ್ಸನ್ನು ಹಾಕುವವರು ಬಹುಕಡಿಮೆಯೆಂಬ ಮಾತಿನಲ್ಲಿಯೂ ಕೆಚ್ಚು ಕಡಿಮೆಯೆಂದು

ತೋರುತ್ತದೆ. ಹೊಟ್ಟೆಬಟ್ಟೆಗಳ ದುಡಿತದಲ್ಲಿಯೇ ಮುಳುಗಿರುವವರು ಆ ಕಡೆಗೆ ಕಣ್ಣು ಹಾಕದೆ ಇರಬಹುದು. ಸತ್ತಮೇಲೆ ಒಳ್ಳೆ ಲೋಕಗಳಿಗೆ ಹೋಗಬೇಕೆಂದು ವೇದದಲ್ಲಿ ಹೇಳಿರುವ ಕರ್ಮಗಳನ್ನು ಮಾಡುವವರು ತಮ್ಮ ಸ್ವರೂಪವನ್ನು ಈಗ ಇರುವ ದೇಹಕ್ಕಿಂತ ಬೇರೆಯಾದದ್ದೆಂದು ತಿಳಿದುಕೊಂಡಿರುವರು. ಅವರ ಸಂಖ್ಯೆಯೂ ಹೆಚ್ಚಾಗಿರುವದು. ಆದ್ದರಿಂದ ಅವರನ್ನೂ ಜ್ಞಾನಿಗಳೊಳಗೆ ಸೇರಿಸಿಕೊಳ್ಳಬೇಕಾಗುವದು' ಎಂದೊಂದು ಆಕ್ಷೇಪಣೆಯೂ ಏಳಬಹುದು. ಹೊಟ್ಟೆಬಟ್ಟೆಗಳ ದುಡಿತದಲ್ಲಿಯೇ ಮುಳುಗಿರುವವರಿಗಿಂತ ಕರ್ಮಠರು ಜ್ಞಾನಿಗಳೇ ಸರಿ. ಆದರೆ ಅವರು ತಿಳಿದಿರುವ ಆತ್ಮಸ್ವರೂಪವು ಹಸಿವುಬಾಯಾರಿಕೆಗಳಿಂದ ತಲ್ಲಣಿಸುತ್ತ ಲೋಕದಿಂದ ಲೋಕಕ್ಕೆ ಸುತ್ತುವಂಥದ್ದಾಗಿರುವದು. ತನ್ನನ್ನು ತಾನು ಅರಿಯಬೇಕೆಂಬ ಮಾತಿನಲ್ಲಿರುವ ಆತ್ಮಸ್ವರೂಪವು ಇಂಥದ್ದಲ್ಲ. ಅದು ಹುಟ್ಟುಸಾವುಗಳಿಗೆ ದೂರವಾಗಿರುವ ಚೈತನ್ಯ. ಆದ್ದರಿಂದ ಕರ್ಮಠರು ಕೂಡ ತಮ್ಮನ್ನು ತಾವು ಅರಿಯತಕ್ಕದ್ದು ಉಳಿದೇ ಇರುವದು. ಕರ್ಮವನ್ನು ಮಾಡುವವರಿಗೆ ತಮ್ಮ ಆತ್ಮವು ದೇಹಕ್ಕಿಂತ ಬೇರೆಯೆಂಬಷ್ಟು ಮಾತ್ರ ತಿಳಿದರೆ ಸಾಕು. ದೇಹವು ಸತ್ತ ಮೇಲೆ ಹೆಚ್ಚು ಸುಖವನ್ನು ಕೊಡುವ ಲೋಕಕ್ಕೆ ಹೋಗೋಣವೆಂದು ಅವರು ಕರ್ಮಗಳಿಗೆ ಕೈ ಹಾಕುವರು. ತಾನು ಹುಟ್ಟುಸಾವುಗಳಿಗೆ ದೂರವಾಗಿರುವ ಚೈತನ್ಯವೆಂಬ ತಿಳಿವಳಿಕೆಯು ಅವರಿಗೆ ಬೇಕಿಲ್ಲ. ಇಷ್ಟೇ ಅಲ್ಲ. ಈ ತಿಳಿವಳಿಕೆಯು ಅವರಿಗೆ ಬಾಧಕವಾಗಿರುವದು. ಸತ್ತ ಮೇಲೆಯೂ ಮತ್ತೆ ಹುಟ್ಟಿದಾಗಲೂ ತನಗೆ ವಿಷಯಸುಖವು ದೊರೆಯುತ್ತಿರಬೇಕೆಂದಲ್ಲವೆ ಅವರು ಕರ್ಮಗಳನ್ನು ಮಾಡುವರು? ತಮ್ಮ ಸ್ವರೂಪಕ್ಕೆ, ಎಂದರೆ ತಮಗೆ, ಹುಟ್ಟುಸಾವುಗಳೇ ಇಲ್ಲವೆಂದು ತಿಳಿದರೆ ಅವರು ಕರ್ಮಕ್ಕೇಕೆ ಕೈನೀಡುವರು. ಆದ್ದರಿಂದ ಅದು ಅವರಿಗೆ ಬಾಧಕ. ಸಂಸಾರದ ಒದ್ದಾಟಗಳನ್ನು ತಪ್ಪಿಸಿಕೊಳ್ಳಬೇಕಾದರೆ ಅವರಿನ್ನೂ ತಮ್ಮ ಸ್ವರೂಪವನ್ನು ಚೆನ್ನಾಗಿ ಅರಿಯಬೇಕಾಗಿರುವದು

—(ಆ. ಭಾ)

ಹೀಗೆ ವೇದದಲ್ಲಿ ಹೇಳಿರುವ ಕರ್ಮಗಳನ್ನು ಮಾಡುವವರ ತಿಳಿವಳಿಕೆಯು ಬಹ್ವಾದ ಮೇಲೆ ಸಂಸಾರವೆಂಬ ಕುತ್ತಕ್ಕೆ ಮದ್ದನ್ನು ಕಾಣುವದಕ್ಕೆ

ವೇದಗಳ ಕಡೆಗೆ ಕಣ್ಣು ಹಾಕಬೇಕೆಂದು ಹಿಂದೆ ಹೇಳಿದ ಮಾತು ಅರ್ಥವಿಲ್ಲದ್ದಾಗುವದೆಂದು ಮತ್ತೊಂದು ಸಂಶಯವು ಬರಹುದು. ಸರಿ. ಆ ಮಾತಿಗೆರಡಿಲ್ಲ. ವೇದಗಳಲ್ಲಿಯೇ ಎರಡು ದೊಡ್ಡ ಭಾಗಗಳುಂಟು. ಒಂದು ಕರ್ಮಗಳನ್ನು ಹೇಳುವ ಭಾಗ ; ಇನ್ನೊಂದು ಆತ್ಮಸ್ವರೂಪವನ್ನು ಹೇಳುವ ಭಾಗ. ಇವೆರಡೂ ವೇದಗಳೆ. ಈ ದೃಷ್ಟಿಯನ್ನಿಟ್ಟುಕೊಂಡು ವೇದಗಳ ಕಡೆಗೆ ಕಣ್ಣು ಹಾಕಬೇಕೆಂಬ ಮಾತು ಹೊರಟಿತು. ಆದರೆ ಕರ್ಮಗಳನ್ನು ಹೇಳುವ ಭಾಗಕ್ಕೆ ವೇದಗಳೆಂದೂ ಆತ್ಮಸ್ವರೂಪವನ್ನು ಹೇಳುವ ಭಾಗಕ್ಕೆ ವೇದಾಂತವೆಂದೂ ಹೇಳುವ ವಾಡಿಕೆಯೂ ಉಂಟು. ಈ ದೃಷ್ಟಿಯನ್ನಿಟ್ಟುಕೊಂಡು ಮಾತಾಡಿದರೆ ಆ ಮಾತಿಗೆ ವೇದಾಂತಗಳ ಕಡೆಗೆ ಕಣ್ಣು ಹಾಕಬೇಕೆಂದರ್ಥ. ವೇದಾಂತವೆಂದರೆ ವೇದದ ಕೊನೆಯ ಭಾಗ. ಬೇರೆ ಬೇರೆ ಕಡೆ ಬಂದಿರುವ ಆ ಕೊನೆಯ ಭಾಗಗಳಿಗೆ ಉಪನಿಷತ್ತುಗಳೆಂದೂ ಹೆಸರು. ಆತ್ಮವೆಂಬ ಮಾತು ಒಂದು ದೇಹದೊಳಗೆ ಸಿಕ್ಕುಬಿದ್ದಿರುವ ಚೈತನ್ಯವನ್ನು ಹೇಳುವದು. ಉಪನಿಷತ್ತು ಬರೀ ಇವಿಷ್ಟನ್ನೇ ಹೇಳುವದಿಲ್ಲ. ಗಡಿಗೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬಿಟ್ಟರೆ ಗಡಿಗೆಯಲ್ಲಿದ್ದ ಬಯಲು ದೊಡ್ಡ ಬಯಲೇ ಆಗಿರುವಂತೆ ದೇಹವನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ಬಿಟ್ಟರೆ ದೇಹದೊಳಗೆ ಸಿಕ್ಕುಬಿದ್ದದ್ದೆನಿಸಿದ್ದ ಚೈತನ್ಯವು ಎಲ್ಲೆಲ್ಲಿಯೂ ತುಂಬಿರುವ ಚೈತನ್ಯವಾಗುವದು. ಆಗ ಅದಕ್ಕೆ ಬ್ರಹ್ಮವೆಂದು ಹೆಸರು. ವೇದಾಂತವು ಬ್ರಹ್ಮದ ಸ್ವರೂಪವನ್ನು ಹೇಳುವದಕ್ಕೆ ಹೊರಟದ್ದಾಗಿರುವದು.

ವೇದಗಳೆಲ್ಲ ಕರ್ಮಗಳನ್ನು ಹೇಳುವದಕ್ಕೆ ಹೊರಟವುಗಳೆಂದು ಹೇಳುವವರ ಮಾತನ್ನು ನೋಡಿದರೆ ವೇದಾಂತದಲ್ಲಿ ಯಾವದೊಂದು ಕರ್ಮವೂ ಇಲ್ಲದಿದ್ದರೂ ಅದು ಕರ್ಮವನ್ನು ಮಾಡುವವನ ಸ್ವರೂಪವನ್ನು ಹೇಳುತ್ತ ಕರ್ಮಗಳಿಗೆ ಅಂಗವಾಗಿರುವ ವಿಚಾರ ಉಳ್ಳದ್ದಾಗಿರಬೇಕೇ ಹೊರತು ಕರ್ಮದ ಕುಣಿಕೆಯೊಳಕ್ಕೆ ಕತ್ತನ್ನು ನೀಡದ ಬ್ರಹ್ಮಸ್ವರೂಪದ್ದಿರಲಾರದೆಂದು ತೋರಬಹುದು. ಉಪನಿಷತ್ತುಗಳೆಲ್ಲ ಬ್ರಹ್ಮಸ್ವರೂಪವನ್ನೇ ಹೇಳುವದಕ್ಕೆ ಹೊರಟವುಗಳೆಂಬುದು ಅವುಗಳ ತುದಿಮೊದಲುಗಳನ್ನು ಬಲ್ಲವರಿಗೆ ಗೊತ್ತಾಗುವದು. ಆದನ್ನು ಕರ್ಮಗಳಿಗೆ ಅಂಗವೆಂದರೆ ಇರುವ ಅರ್ಥವನ್ನು ಬಿಟ್ಟು

ಇಲ್ಲದ ಅರ್ಥವನ್ನು ಹುಟ್ಟುಗಟ್ಟಿದಂತಾಗುತ್ತದೆ. ಅದು ಕರ್ಮವನ್ನು ಮಾಡುವವನ ಸ್ವರೂಪವನ್ನು ಹೇಳುವದೆಂಬ ಮಾತಿನ ಅರ್ಥವನ್ನು ಬಿಚ್ಚಿದರೆ ಬಣ್ಣಗೇಡು. ಕರ್ಮವನ್ನು ಮಾಡುವವನು ತನಗಿಂತ ಬೇರೆಯಾದ ಜಡವಾದ ಉಪಕರಣಗಳನ್ನಿಟ್ಟುಕೊಂಡಿರುವನು. ಹೀಗೆ ಕರ್ಮಕ್ಕೆ ಜೀವರು, ಜಡವಸ್ತುಗಳು-ಎಂಬ ಭೇದವು ಬೇಕು. ಮುಂದಿನ ಪ್ರಕರಣಗಳಲ್ಲಿ ಹೇಳುವಂತೆ ವೇದಾಂತವನ್ನರಿತವನು ಎಲ್ಲವನ್ನೂ ಬ್ರಹ್ಮಸ್ವರೂಪವೆಂದು ಕಾಣುವವನಾಗುವದರಿಂದ ಅವನಿಗೆ ಎರಡನೆಯದೆಂಬುದೇ ಇಲ್ಲದೆ ಹೋಗುವಾಗ ಅವನು ಕರ್ಮವನ್ನು ಮಾಡುವವನಾಗುವದು ಹೇಗೆ ? —(ಸೂ ೧-೧-೪)

ಮೋಕ್ಷವು ಹೊಸದಾಗಿ ಹುಟ್ಟುವದಾದರೂ ಪಡೆಯುವದಾದರೂ ಶುದ್ಧಿಗೊಳ್ಳುವದಾದರೂ ರೂಪಾಂತರಗೊಳ್ಳುವದಾದರೂ ಕರ್ಮವು ಬೇಕಾದೀತು. ಮೋಕ್ಷವು ಯಾವಾಗಲೂ ಇರುವಂಥದ್ದಾದ್ದರಿಂದ ಹುಟ್ಟುವದಲ್ಲ. ಶಾಸ್ತ್ರವು ಮೊದಲಿಂದಲೂ ಸಹಜವಾಗಿರುವ ಮೋಕ್ಷಕ್ಕೆ ಬಂದಿರುವ ಮುಸುಕನ್ನು ಹಾರಹೊಡೆಯುವದೇ ಹೊರತು ಅದನ್ನು ಹೊಸದಾಗಿ ಹುಟ್ಟಿಸುವದಿಲ್ಲ. ಮೋಕ್ಷವು ಹುಟ್ಟಿದರೆ ಒಂದಲ್ಲೊಂದು ದಿನ ಅದು ಸಾಯುತ್ತದೆ. ಏಕೆಂದರೆ. ಹುಟ್ಟಿದ್ದಕ್ಕೆ ಸಾವು ತಪ್ಪಿದ್ದಲ್ಲ. ಮೋಕ್ಷವು ಸಾಯತಕ್ಕದ್ದೆಂದು ಯಾರೂ ಒಪ್ಪಿಯೂ ಇಲ್ಲ ; ಅಂಥದ್ದನ್ನು ಯಾರೂ ಬಯಸುವದೂ ಇಲ್ಲ. ಮೋಕ್ಷವು ಪಡೆಯತಕ್ಕದ್ದೂ ಅಲ್ಲ. ಅದು ಹೊರಗಣವಾಗಿದ್ದರೆ ಪಡೆಯಬೇಕಾಗುತ್ತಿತ್ತು. ಅದು ತನ್ನ ಸ್ವರೂಪವೇ ಆದ್ದರಿಂದ ಪಡೆಯತಕ್ಕದ್ದಲ್ಲ. ಅದು ಪಡೆಯತಕ್ಕದ್ದಾದರೆ ಒಂದು ದಿನ ಕಳೆದು ಹೋಗತಕ್ಕದ್ದೂ ಆಗುವದು. ಏಕೆಂದರೆ: ಪಡೆದದ್ದೆಲ್ಲ ಕಳೆದುಹೋದದ್ದನ್ನು ನಾವು ನೋಡಿದ್ದೇವೆ. ಮೋಕ್ಷವು ಶುದ್ಧಿಗೊಳ್ಳತಕ್ಕದ್ದೂ ಅಲ್ಲ. ಒಂದರಲ್ಲಿರುವ ದೋಷವನ್ನು ಕಳೆಯಬೇಕಾದರೆ ಅಥವಾ ಅದಕ್ಕೆ ಗುಣವನ್ನು ತುಂಬಬೇಕಾದರೆ ಈ ಶುದ್ಧಿಯ ಕೆಲಸ ಬೇಕು. ಬ್ರಹ್ಮವು ಎಲ್ಲಕ್ಕಿಂತ ಶುದ್ಧವಾದದ್ದು. ಅದರಿಂದ ಏನನ್ನಾದರೂ ತೆಗೆಯುವದಕ್ಕೂ ಅದಕ್ಕೆ ಏನನ್ನಾದರೂ ತುಂಬುವದಕ್ಕೂ ಬರುವ ಹಾಗಿಲ್ಲ. ಹಾಗಾಗುವದಾದರೂ ಅದು ದಿನದಿನಕ್ಕೆ ನಾಶವಾಗತಕ್ಕದ್ದೇ ಆಗುವದು. ಮೋಕ್ಷವು ರೂಪಾಂತರಗೊಳ್ಳತಕ್ಕದ್ದೂ ಅಲ್ಲ.

ಹಾಗಾಗುವದಾದರೂ ಹಾಲು ರೂಪಾಂತರವಾಗಿ ಮೊಸರಾದಂತೆ ನಾಶವು ಆದರ ಹಣೆಯಲ್ಲಿ ಬರೆದದ್ದೆ. ಆದ್ದರಿಂದ ಬ್ರಹ್ಮವೆಂದಿಗೂ ಕರ್ಮದ ಅಂಗವಲ್ಲ. --(ಸೂ ೧-೧-೪)

ಫಲಕ್ಕಾಗಿ ಮಾಡುವ ಕರ್ಮಗಳನ್ನೂ ಮಾಡಬಾರದ ಕೆಲಸಗಳನ್ನೂ ಬಿಟ್ಟು ಪ್ರಾರಬ್ಧಕರ್ಮವನ್ನು, ಎಂದರೆ ಈ ದೇಹವು ಹುಟ್ಟಿದ್ದು ಮೊದಲು ಸಾಯುವವರೆಗೆ ಅನುಭವಿಸಬೇಕೆಂದು ಹಣೆಯಲ್ಲಿ ಬರೆದಿರುವವನ್ನೆಲ್ಲ, ಅನುಭವಿಸಿ ನಿತ್ಯಕರ್ಮಗಳನ್ನು ಮಾಡುವದರಿಂದ ತನಗೆ ಪಾಪವು ಗಂಟುಬೀಳದಂತೆ ಮಾಡಿಕೊಂಡರೆ ಹೆಚ್ಚು ಪ್ರಯತ್ನವಿಲ್ಲದೆ ಮನಸ್ಸು ಆತ್ಮನಲ್ಲಿದ್ದು ಮೋಕ್ಷವಾಗುವದೆಂದು ಕರ್ಮಾಭಿಮಾನಿಗಳಾದ ಕೆಲವರ ಅಭಿಪ್ರಾಯವಿರುವದು. ಅದು ಸರಿಯಲ್ಲ. ಏಕೆಂದರೆ. ಈ ಜನ್ಮದಲ್ಲಿ ಅನುಭವಿಸಬೇಕೆಂದು ಹಣೆಯಲ್ಲಿ ಬರೆದಿರುವ ಕರ್ಮಗಳಲ್ಲದೆ ಇನ್ನೂ ಹಿಂದೆ ಮುಗಿಲು ಮುಟ್ಟುವಷ್ಟು ರಾಶಿಯಾಗಿ ಬಿದ್ದಿರುವ ಕರ್ಮಗಳೆಷ್ಟೋ ಇವೆ. ಅವೆಲ್ಲ ಹಿಂದಿನ ಅನೇಕಜನ್ಮಗಳಿಂದ ಗುಡ್ಡೆಯಾಗುತ್ತ ಬೆಳೆದಿರುವವು. ಅವುಗಳಲ್ಲಿ ಒಳ್ಳೆಯ ಫಲಗಳನ್ನು ಕೊಡುವವುಗಳೂ ಉಂಟು; ಕೆಟ್ಟ ಫಲಗಳನ್ನು ಕೊಡುವವುಗಳೂ ಉಂಟು. ಅವುಗಳನ್ನೆಲ್ಲ ಒಂದೇ ಜನ್ಮದಲ್ಲಿ ಉಂಡು ತೀರಿಸುವದು ಆಗದ ಮಾತು. ಉಳಿಯುವ ಕರ್ಮಗಳಿಗಾಗಿ ಜನ್ಮವನ್ನೆತ್ತಲೇಬೇಕಾಗುವದು. ನಿತ್ಯಕರ್ಮಗಳನ್ನು ಮಾಡುವದರಿಂದ ಆ ಹಿಂದಿನ ಕರ್ಮಗಳೆಲ್ಲ ನಾಶವಾದಾವೆನ್ನುವದಕ್ಕೂ ದಾರಿ ಇಲ್ಲ. ಏಕೆಂದರೆ: ನಿತ್ಯಕರ್ಮವನ್ನು ಮಾಡದಿದ್ದರೆ ದೋಷವು ಮಡಿಲಿಗೆ ಬೀಳುವದೆಂದು ಕರ್ಮಠರ ಅಭಿಪ್ರಾಯ. ಆ ದೋಷವನ್ನು ಬರಗೊಡದಿರುವದಕ್ಕಾಗಿ ನಿತ್ಯಕರ್ಮವನ್ನು ಮಾಡಬೇಕೆಂದು ಅವರ ಶಾಸ್ತ್ರವು ಹೇಳುವದು. ಆದ್ದರಿಂದ ನಿತ್ಯಕರ್ಮವು ಹಿಂದಿನ ಕರ್ಮಗಳನ್ನೆಲ್ಲ ಹೋಗಲಾಡಿಸುವದೆಂದು ಹೇಳುವದಕ್ಕೆ ಅವರಿಗೆ ಬಾಯೇ ಇಲ್ಲ. ಒಂದು ಪಕ್ಷ ಹೇಳಿದರೂ ಅದು ಕೆಟ್ಟ ಕರ್ಮಗಳನ್ನು ಹೋಗಲಾಡಿಸೀತೇ ಹೊರತು ಒಳ್ಳೆ ಕರ್ಮಗಳನ್ನು ಹೋಗಲಾಡಿಸಲಾರದು. ಏಕೆಂದರೆ: ಎಣ್ಣೆಗೂ ಸೀಗೆಯ ಕಾಯಿಗೂ ಇರುವಂತೆ ನಿತ್ಯಕರ್ಮಕ್ಕೂ ಒಳ್ಳೆ ಕರ್ಮಕ್ಕೂ ಹಗೆತನವೇನೂ ಇಲ್ಲ. ನಿತ್ಯಕರ್ಮಗಳನ್ನು ಮಾಡದಿದ್ದರೆ ಜ್ಞಾನಿಗೆ ದೋಷವು

ಬಂದು ಗಂಟುಬೀಳುವದೆಂದು ಹೆದರಿಸುವದಷ್ಟೆ. ಆ ಮಾತಿಗೆ ಬುಡ ವಿಲ್ಲ. ನಿತ್ಯಕರ್ಮಗಳನ್ನು ಮಾಡದಿರುವದರಿಂದ ದೋಷವು ಹುಟ್ಟುವದೆಂಬರೆ ತಾಯಿ ಇಲ್ಲದ ಕೂಸು ಹುಟ್ಟಿತೆಂಬಂತೆ ಇಲ್ಲದ್ದರಿಂದ ಇರುವದೆನಿಸಿಕೊಳ್ಳು ವದು ಹುಟ್ಟುವದೆಂದಂತಾಗುವದು. ಇದು ಯಾರೂ ಒಪ್ಪದ ಮಾತು. ನಿತ್ಯಕರ್ಮವನ್ನು ಮಾಡಿದರೆ ಅದು ಚಿತ್ತಶುದ್ಧಿಯನ್ನು ಮಾಡುವದೆಂದರೆ ಮಾತ್ರ ಒಪ್ಪುವದು. ಹೀಗಾಗಿ ಕರ್ಮದಿಂದ ಮೋಕ್ಷವು ತಾನಾಗಿ ಆಗುವ ದೆಂಬ ಮಾತು ನಿಲ್ಲುವದಿಲ್ಲ. ಇನ್ನೊಂದೇನೆಂದರೆ: ಬಹು ಹಿತವಾದಂಥ ಸ್ವರ್ಗವೆಂಬುದು ಕರ್ಮದಿಂದ ದೊರೆಯುವದರಿಂದ ಕರ್ಮದಿಂದಲೇ ಮೋಕ್ಷವು ಹುಟ್ಟುವದೆಂದೂ ಅವರು ನಾಲಿಗೆಯನ್ನು ಮುಂದುಮಾಡುವರು. ಅದೂ ಹೊಂದಿಕೆ ಇಲ್ಲದ ಮಾತು. ಮೋಕ್ಷವೆಂಬುದು ಹುಟ್ಟತಕ್ಕದ್ದ ಲ್ಲವೆಂದು ಹಿಂದೆಯೇ ಹೇಳಿ ಆಗಿದೆ. —(ತೈ-ಅವ)

ಅದು ಇಂದ್ರಿಯಗಳಿಂದ ಮಾಡುವ ಕರ್ಮಕ್ಕೆ ಅಂಗವಾಗಿರದಿದ್ದರೂ ಮನಸ್ಸಿನಿಂದ ಮಾಡುವ ಉಪಾಸನೆಯ ರೂಪವಾದ ಕರ್ಮಕ್ಕೆ ಅಂಗವಾಗಿರಬ ಹುದೆಂದು ತೋರುವ ಸಂಭವ ಉಂಟು. ಅದೂ ಆಗುವದಿಲ್ಲ. ವೇದಾಂ ತವು ಜಗತ್ತಿನಲ್ಲಿ ತನಗೆರಡನೆಯದಾಗಿ ಕಾಣುವದೆಲ್ಲ ತಪ್ಪುತಿಳಿವಳಿಕೆಯ ದೆಂದು ಸಾರಿಸಾರಿ ಹೇಳುತ್ತಿರುವಾಗ ಬ್ರಹ್ಮವು ಉಪಾಸನೆಗಾಗಿ ಹೇಳಿದ್ದು ಹೇಗಾದೀತು! ಉಪಾಸನೆಯಾಗಬೇಕಾದರೆ ಉಪಾಸನೆಯನ್ನು ಮಾಡುವ ಜೀವಚೈತನ್ಯವು ಬೇರೆಯಾಗಿಯೂ ಉಪಾಸನೆಯನ್ನು ಮಾಡಿಸಿಕೊಂಡು ಫಲವನ್ನು ಕೊಡುವ ಈಶ್ವರಚೈತನ್ಯವು ಬೇರೆಯಾಗಿಯೂ ಇರಬೇಕು. ವೇದಾಂತವು ಈ ಭೇದವೆಂಬ ಮರದ ಬುಡಕ್ಕೆ ಕೊಡಲಿಯಾಗಿರುವಾಗ ಅದು ಉಪಾಸನೆಯನ್ನು ಹೇಳುವದೆನ್ನುವದು ವಿವೇಕವಿಲ್ಲದ ಮಾತು. ಆದ್ದರಿಂದ ಬ್ರಹ್ಮವು ಉಪಾಸನೆಗಾಗಿ ಹೇಳಿದ್ದೂ ಅಲ್ಲ; ಕರ್ಮಕ್ಕಾಗಿ ಹೇಳಿದ್ದೂ ಅಲ್ಲ. ಬ್ರಹ್ಮವು ಇನ್ನೊಂದರ ವಿಷಯವಾದ ಮಾತಿನ ನೆರಳಿ ನಲ್ಲಿ ತಲೇ ಬಗ್ಗಿಸಿಕೊಂಡಿದ್ದರೆ ಅದು ಇನ್ನೊಂದರ ಅಂಗವಾಗುತ್ತಿತ್ತು. ಹಾಗಿರದೆ ಅದು ತನ್ನನ್ನೆ ಹೇಳುವದಕ್ಕೆ ಹೊರಟಿರುವ ಕಡೆ ತಾನೇ ತಾನಾಗಿ

ಎಡೆಯುಬ್ಬಿಸಿಕೊಂಡು ತಲೆ ಎತ್ತಿಕೊಂಡಿರುವದರಿಂದ ಅದು ಯಾವದಕ್ಕೂ ಅಂಗವಲ್ಲ. ಅದು ಅನುಭವಕ್ಕೆ ಬರತಕ್ಕದ್ದಾದ್ದರಿಂದ ಅದನ್ನು ಇಲ್ಲವೆನ್ನ ಲಾಗುವದೂ ಇಲ್ಲ. —(ಸೂ ೧-೧-೪)

## ಬ್ರಹ್ಮವನ್ನೆ ಬೇರೆ ತಿಳಿಯಬೇಕು

'ಇನ್ನು ತಾನೇ ತಾನಾಗಿ ಎಲ್ಲೆಲ್ಲಿಯೂ ಇರುವ ಬ್ರಹ್ಮವನ್ನು ಹೇಳುವ ದೇನು? ಇರುವ ವಸ್ತುವಾದರೆ ಕಂಡೇ ಕಾಣುತ್ತದೆ. ಇರುವದನ್ನು ಸುಮ್ಮನೆ ತಿಳಿಯುವ ಮಾತ್ರದಿಂದ ಆಗುವದೇನು?' ಎಂದು ಕೇಳಬಹುದು. ಬ್ರಹ್ಮವು ತಾನೇ ತಾನಾಗಿ ಎಲ್ಲೆಲ್ಲಿಯೂ ಇರುವದಾದರೂ ಇಂದ್ರಿಯಗಳಿಗೆ ಗೋಚರವಾಗುವದಿಲ್ಲ. ನಾನು ನಾನೆಂಬ ಮನೋವೃತ್ತಿಗೆ ಅದು ಗೋಚರ ವಾಗುವದೆಂದರೆ ಅದು ಕರ್ಮವನ್ನು ಮಾಡುವವನ ಸ್ವರೂಪವೇ ಹೊರತು ಬ್ರಹ್ಮದ ಸ್ವರೂಪವಲ್ಲ. ಬ್ರಹ್ಮವು ಆ ಮನೋವೃತ್ತಿಯ ಸಾಕ್ಷಿ. ಅದನ್ನು ತಿಳಿಸುವದಕ್ಕೆ ಶಾಸ್ತ್ರವೇ ಬೇಕು. ನೀನೇ ಆ ಬ್ರಹ್ಮವೆಂದು ಮುಂತಾಗಿ ಉಪನಿಷತ್ತುಗಳು ತೋರಿಸಿದ ಹೊರತು ಯಾರಿಗೂ ಅದು ತಿಳಿಯಬರುವ ದಿಲ್ಲ. ಅದ್ದರಿಂದ ಉಪನಿಷತ್ತು ಆ ಕೆಲಸವನ್ನು ಮಾಡಿರುವದು. ಹೀಗೆಂದು ಬ್ರಹ್ಮಕ್ಕೆ ವೇದಾಂತವು ಮಾತ್ರ ಪ್ರಮಾಣವೆಂದು ತಿಳಿಯಬಾರದು. ಅದಕ್ಕೆ ವೇದಾಂತವು ಪ್ರಮಾಣವೆಂಬುದು ನಿಜವಾದರೂ ಅದು ಅನುಭವಕ್ಕೆ ಗೋಚ ರವಾಗುವದರಿಂದ ವೇದಾಂತದ ಹೊರತು ಅದಕ್ಕೆ ಗತ್ಯಂತರವಿಲ್ಲವೆನ್ನುವ ಹಾಗಿಲ್ಲ. ಆ ಅನುಭವವಾದರೂ ವೇದಾಂತವು ನೆನಪುಗೊಟ್ಟ ಮೇಲೆ ಎದ್ದು ಕಾಣುವದಾದ್ದರಿಂದ ವೇದಾಂತಕ್ಕೆ ಹೆಚ್ಚು ಪ್ರಾಶಸ್ತ್ಯ. ಇನ್ನು ಪ್ರಯೋಜನವನ್ನು ಯೋಚಿಸಿದರೆ ಅದನ್ನು ತಿಳಿಯುವದರಿಂದ ಸರ್ವದುಃಖ ಗಳೂ ಕೊನೆಗಾಣುವದೇ ಅದರ ಪ್ರಯೋಜನ. ಎದುರಿಗೆ ಕಾಣುವದು ಹಾವಲ್ಲ, ಹಗ್ಗವೆಂದು ಇರುವದನ್ನು ಇದ್ದಂತೆ ತಿಳಿದರೆ ಅದರಿಂದ ಹೆದರಿಕೆ ಮೊದಲಾದವುಗಳು ಹೋಗುವ ಪ್ರಯೋಜನವು ಕಾಣುವದಿಲ್ಲವೆ? ಅದರಂತೆ ಬ್ರಹ್ಮವನ್ನು ತಿಳಿಯುವದರಿಂದಲೂ ಪ್ರಯೋಜನ ಉಂಟು. —(ಸೂ ೧-೧-೪)

"ಆ ಬ್ರಹ್ಮವನ್ನು ತಿಳಿಯುವದಕ್ಕೆ ನಾವು ವೇದಾಂತಕ್ಕೆ ಶರಣು ಹೋಗ ಬೇಕಷ್ಟೆ. ವೇದಾಂತವೆಂಬುದು ವೇದದ ಕೊನೆಯ ಭಾಗ. ಅದರಲ್ಲಿ

ನಾವು ತಲೆಯನ್ನು ತೂರಿಸಬೇಕಾದರೆ ಅದರ ಹಿಂದಿನ ಭಾಗವಾದ ವೇದಗಳ ಪರಿಚಯವೆಲ್ಲ ಇರಬೇಕಾಗುವದು. ಎಂದರೆ ಅಲ್ಲಿ ಹೇಳಿರುವ ಕರ್ಮಗಳ ವಿಚಾರವೆಲ್ಲ ನಮ್ಮ ಮನಸ್ಸಿನಲ್ಲಿ ಮನೆಮಾಡಿಕೊಂಡಿರಬೇಕಾಗುವದು.'' ಎಂದು ತೋರಬಹುದು. ಹಾಗೇನೂ ಇಲ್ಲ. ವೇದಾಂತವೆಂಬ ನಂದನ ವನದಲ್ಲಿ ಕಾಲಿಡಬೇಕಾಗಿದ್ದರೆ ಕರ್ಮಗಳ ವಿಚಾರವನ್ನೆಲ್ಲ ತಿಳಿದಿರಬೇಕಾದ ಅಗತ್ಯವೇನೂ ಇಲ್ಲ. ಇಂದ್ರನ ಅಮರಾವತಿಯಲ್ಲಿರುವ ನಂದನವನಕ್ಕೆ ಕಾಲಿಡಬೇಕಾಗಿದ್ದರೆ ಕರ್ಮಗಳ ವಿಚಾರವನ್ನೆಲ್ಲ ತಿಳಿದೂ ಇರಬೇಕು; ಇಂದ್ರ ಮೊದಲಾದ ದೇವತೆಗಳ ಹೊಟ್ಟೆ ತುಂಬುವಂತೆ ಹೋಮ ಮೊದಲಾದ ಕರ್ಮ ಗಳನ್ನು ಮಾಡಿಯೂ ಇರಬೇಕು. ಅಲ್ಲಿ ಅಂಥವರಿಗೆ ಮಾತ್ರ ಪ್ರವೇಶ. ವೇದಾಂತವು ಭೂಲೋಕದಲ್ಲಿಯೇ ಅನುಭವಕ್ಕೆ ಬರುವ ನಂದನವನ. ಇದ ರೊಳಗೆ ಹೆಜ್ಜೆ ಇಡುವದಕ್ಕೆ ಈಗ ಇಂದ್ರನ ದಾಕ್ಷಿಣ್ಯವನ್ನೇನೂ ಸಂಪಾದಿ ಸಬೇಕಾದದ್ದಿಲ್ಲ. ವೇದಾಂತದ ಬ್ರಹ್ಮವು ಇಂದ್ರನೇ ಮೊದಲಾದ ದೇವತೆ ಗಳಿಗೂ ಆತ್ಮವಾದ್ದರಿಂದ ಅವನ್ನು ತಿಳಿಯುವ ಯತ್ನವನ್ನು ಮುಂದುವರಿಸು ತ್ತಲೆ ಅವನ ವಿಷಯದಲ್ಲಿ ಇಂದ್ರನೇ ಮೊದಲಾದವರೂ ಸಹಜವಾಗಿ ಪ್ರಸನ್ನ ರಾಗುವರು. ಆದ್ದರಿಂದ ವೇದಾಂತದ ಬ್ರಹ್ಮವನ್ನರಿಯಬೇಕೆನ್ನುವವನು ಕರ್ಮಗಳ ವಿಚಾರವನ್ನು ತಿಳಿದಿರಬೇಕಾದದ್ದೂ ಇಲ್ಲ; ಕರ್ಮಗಳನ್ನು ಮಾಡಿದ ವನಾಗಬೇಕಾದದ್ದೂ ಇಲ್ಲ. ಕರ್ಮವೂ ಬ್ರಹ್ಮವೂ ಪೂರ್ವಪಶ್ಚಿಮಗಳಿದ್ದ ಹಾಗೆ ಒಂದರ ಮುಖ ಅತ್ತ; ಇನ್ನೊಂದರ ಮುಖ ಇತ್ತ. ಕರ್ಮವು ಪ್ರಾಪಂಚಿಕಸುಖವನ್ನು ಕೊಡತಕ್ಕದ್ದು; ಬ್ರಹ್ಮವು ಮೋಕ್ಷವನ್ನು ಕೊಡತ ಕ್ಕದ್ದು. ಕರ್ಮವನ್ನು ಹೇಳುವ ಶ್ರುತಿಯು ಏನಾದರೊಂದನ್ನು ಮಾಡೆಂದು ಅಪ್ಪಣೆ ಮಾಡುವದು; ಬ್ರಹ್ಮವನ್ನು ಹೇಳುವ ಶ್ರುತಿಯು ಯಾವ ಅಪ್ಪಣೆ ಯನ್ನೂ ಮಾಡುವದಿಲ್ಲ. ಕಣ್ಣೆದುರಿನ ಪದಾರ್ಥದ ಅರಿವು ಬೇಡವೆಂದರೂ ತಾನಾಗಿ ಆಗಿಯೇ ಆಗುವಂತೆ ಬ್ರಹ್ಮವು ತನ್ನ ಅರಿವನ್ನುಂಟುಮಾಡುತ್ತದೆ. ಕರ್ಮವು ಮಾತ್ರ ಅದನ್ನು ಮಾಡುವವನ ಇಚ್ಛೆಯ ಬಾಲವನ್ನು ಹಿಡಿದಿರು ತ್ತದೆ. ಕರ್ಮದ ಫಲವು ಸತ್ತ ಮೇಲೆ; ಬ್ರಹ್ಮದ ಫಲವು ಈಗಲೆ ಅನುಭ ವಕ್ಕೆ ಬರುವದು. ಕರ್ಮವು ಮಾಡಿದವನು ನಡೆಸಿದಂತೆ ಇರುವದು; ಬ್ರಹ್ಮವು

ತಿಳಿಯುವವನ ತಿಳಿವಿನಂತೆ ಇರತಕ್ಕದ್ದಲ್ಲ; ತಾನು ಇದ್ದಂತೆ ಇರುವದು. ಹೀಗಿರುವದರಿಂದ ಬ್ರಹ್ಮದ ಅರಿವಾಗುವದಕ್ಕೆ ಕರ್ಮದ ಅರಿವೂ ಕರ್ಮಗಳೂ ಬೇಕಾಗುವದಿಲ್ಲ. —(ಸೂ ೧-೧-೪)

ಹೀಗೆ ಬ್ರಹ್ಮಕ್ಕೆ ಕರ್ಮದ ಹಂಗಿಲ್ಲದ ಮೇಲೆ ವೇದದಲ್ಲಿ ಮೊದಲು ಕರ್ಮಗಳನ್ನೆಲ್ಲ ಹೇಳಿ ಆಮೇಲೆ ಬ್ರಹ್ಮವನ್ನು ಹೇಳಿರುವದರ ಉದ್ದೇಶವೇನೆಂದು ತಿಳಿಯುವ ಇಚ್ಛೆಯುಂಟಾಗಬಹುದು. ಅವೆರಡನ್ನೂ ಒಂದೇ ಕಡೆ ಒಂದನ್ನು ಮುಂದೆ ಒಂದನ್ನು ಹಿಂದೆ ಹೇಳಿರುವದರಿಂದ ಅವೆರಡಕ್ಕೂ ಏನಾದರೊಂದು ಬಗೆಯ ಸಂಬಂಧವಿರಬೇಕಾದದ್ದು ಸಹಜವೆ. ಹಾಗಿದ್ದೂ ಇದೆ. ಮೊದಲು ಕರ್ಮವನ್ನು ಮಾಡಿ ಮನಸ್ಸಿನ ಹೊಲಸನ್ನೆಲ್ಲ ತೊಳೆದುಕೊಂಡು ಆಮೇಲೆ ಬ್ರಹ್ಮವನ್ನು ಅರಿಯಬೇಕೆಂಬುದೇ ಅದರ ಉದ್ದೇಶ. ಬರೀ ಪ್ರಾಪಂಚಿಕವಾದ ಕೆಲಸಗಳಲ್ಲಿಯೇ ತೊಳಲುವವರ ಮನಸ್ಸಿಗೆ ಅದೇ ಹಂಬಲೇ ಹತ್ತಿರುತ್ತದೆ. ಅದು ಬಯಕೆಗಳ ಮೇಲೆ ಬಯಕೆಗಳನ್ನು ಹುಟ್ಟಿಸುತ್ತ ಮನಸ್ಸಿನಲ್ಲಿ ಅಲೆಗಳ ಹಿಂದೆ ಅಲೆಗಳನ್ನೆಬ್ಬಿಸುತ್ತಿರುತ್ತದೆ. ಅದಕ್ಕೆ ನಿಲುಗಡೆಯೇ ಇಲ್ಲ. ಆದ್ದರಿಂದ ಅದು ಹೊಲಸು. ಅದೇ ಮನುಷ್ಯನೆ ವೇದದಲ್ಲಿ ಹೇಳಿರುವ ಕರ್ಮಗಳಲ್ಲಿ ತೊಡಗಿದರೆ ಆ ಹೊಲಸು ಕಡಿಮೆಯಾಗುತ್ತ ಬಂದು ಮೆಲ್ಲಮೆಲ್ಲಗೆ ಬ್ರಹ್ಮವನ್ನರಿಯುವ ಬಯಕೆ ತಲೆ ಹಾಕುವದು. ಇದೂ ಮನಸ್ಸಿನದೊಂದು ಅಲೆಯಾದರೂ ಪ್ರಾಪಂಚಿಕವಾದ ಅಲೆಗಳನ್ನು ತಳಕ್ಕೆ ತುಳಿದು ಮನಸ್ಸನ್ನು ತಿಳಿಯಾಗಿ ಕೊಡುವ ಶಕ್ತಿ ಇದಕ್ಕುಂಟು. ಮನಸ್ಸು ತಿಳಿಯಾಗದೆ ಹೋದರೆ ಬ್ರಹ್ಮದ ಬಯಕೆಯುಂಟಾಗುವದಿಲ್ಲ. ಆದ್ದರಿಂದ ಬ್ರಹ್ಮಕ್ಕೆ ಕರ್ಮದ ಹಂಗಿಲ್ಲವೆಂದಲ್ಲ. ಬ್ರಹ್ಮವನ್ನರಿಯುವದಕ್ಕೆ ಹೊರಡುವ ಮೊದಲು ಕರ್ಮಗಳ ಅರಿವೂ ಇರಬೇಕು; ಕರ್ಮಗಳನ್ನು ಮಾಡಿಯೂ ಇರಬೇಕು. ಹಾಗಾದರೆ ಇಲ್ಲಿ ಕರ್ಮಗಳನ್ನು ತಿಳಿದಿರಬೇಕಾದ ಆಗತ್ಯವಿಲ್ಲವೆಂದು ಅದನ್ನು ಕಡೆಗಂಡು ಹೇಳಿದ ಮಾತಿಗೆ ಅರ್ಥವೇನೆಂದರೆ: ಬ್ರಹ್ಮವನ್ನು ತಿಳಿಯುವ ಬಯಕೆ ಹುಟ್ಟಿದ ಮೇಲೆ ಕರ್ಮಗಳ ಅರಿವಿನ ಆಗತ್ಯವಿಲ್ಲವೆಂದರ್ಥ. ಬ್ರಹ್ಮದ ಬಯಕೆಯು ಈ ಜನ್ಮದಲ್ಲಿ ಕರ್ಮಗಳನ್ನು ಮಾಡಿದ್ದರಿಂದಾದ ಚಿತ್ತಶುದ್ಧಿಯಿಂದಲಾದರೂ ಹುಟ್ಟಬಹುದು;

ಹಿಂದಿನ ಜನ್ಮದಲ್ಲಿ ಮಾಡಿದ್ದರಿಂದಾದ ಚಿತ್ತಶುದ್ಧಿಯಿಂದಲಾದರೂ ಹುಟ್ಟಬಹುದು. ಹಿಂದಿನ ಜನ್ಮದ ಕರ್ಮದ ಪ್ರಭಾವದಿಂದ ಈ ಜನ್ಮದಲ್ಲಿ ಬ್ರಹ್ಮದ ಬಯಕೆಯುಂಟಾಗಿರುವವರು ಕರ್ಮಗಳ ಅರಿವನ್ನು ಪಡೆಯುವದಕ್ಕೆ ಹೆಣಗಬೇಕಾದದ್ದಿಲ್ಲವೆಂದು ಅದರ ತಾತ್ಪರ್ಯ.

## ನಾಲ್ಕು ಸಾಧನಗಳು

ಬ್ರಹ್ಮದ ವಿಚಾರವನ್ನು ಮಾಡುವದಕ್ಕೆ ಮೊದಲು ಯಾವ ಸಿದ್ಧತೆಯೂ ಇರಬೇಕಾದದ್ದಿಲ್ಲವೋ? ಎಂದರೆ ಇದೆ. ಚಿತ್ತಶುದ್ಧಿಯಾದ ಲಕ್ಷಣಗಳು ಮನಸ್ಸಿನಲ್ಲಿ ಮೊದಲೇ ಮೈಗೂಡಿರಬೇಕು. ಅವು ಯಾವವೆಂದರೆ: (೧) ಬರೀ ತೋರಿಕೆಯವು ಯಾವವು? ನಿಜವಾಗಿರುವದು ಯಾವದು? ಎಂಬುದನ್ನು ಬಿಡಿಸಿ ನೋಡುವ ವಿವೇಕ. (೨) ಈ ಲೋಕದ ಮತ್ತು ಪರಲೋಕದ ವಿಷಯಸುಖಗಳೆಲ್ಲ ಬೇಡವೆನಿಸುವದು. (೩) ಇಂದ್ರಿಯಗಳೂ ಮನಸ್ಸೂ ಹಿಡಿತದಲ್ಲಿರುವದು. (೪) ಸಂಸಾರವೆಂಬ ಸಮುದ್ರವನ್ನು ದಾಟಬೇಕೆಂಬ ಬಯಕೆ. ಈ ನಾಲ್ಕು ಇದ್ದರೆ ಅವನು ಕರ್ಮಗಳನ್ನು ಮುಗಿಸಿ ಅಥವಾ ಅವನ್ನು ಅರಿಯುವ ಗೋಜಿಗೆ ಕೂಡ ಹೋಗದೆ ಬ್ರಹ್ಮವನ್ನು ನಿರುಕಿಸಿಕೊಳ್ಳುವದಕ್ಕೆ ಹೊರಡಬಹುದು. ಈ ನಾಲ್ಕು ಇಲ್ಲದೆ ಬ್ರಹ್ಮದ ಹಂಬಲು ಹುಟ್ಟುವದಿಲ್ಲ. ಆದ್ದರಿಂದ ಮೊದಲು ಈ ನಾಲ್ಕನ್ನು ಮೈಗೂಡಿಸಿಕೊಂಡು ಬ್ರಹ್ಮವಿಚಾರದ ಕಡೆಗೆ ಮನಸ್ಸು ಹಾಕಿ ವೇದಾಂತವೆಂಬ ನಂದನವನದಲ್ಲಿ ವಿಹಾರಮಾಡಬೇಕು. —(ಸೂ ೧-೧-೧)

ಮೊದಲನೆ ಸಾಧನವಿಲ್ಲದಿದ್ದರೆ ಜಗತ್ತೆಲ್ಲ ನೆಲೆಯಾಗಿರುವಂಥದ್ದೆಂದೇ ತಿಳಿದು ಮನುಷ್ಯನು ಸಹಜವಾಗಿ ಅದರ ಮೇಲೆಯೆ ಭರವಸವನ್ನಿಡುವದರಿಂದ ಅವನಿಗೆ ಬ್ರಹ್ಮದ ಸುಳಿವು ಗೊತ್ತಾಗುವದಕ್ಕೆ ಅವಕಾಶವೇ ಇರುವದಿಲ್ಲ. ಜೊಳ್ಳುಗಳನ್ನೆಲ್ಲ ತೂರಿಯಾಡಿದ ಹೊರತು ಗಟ್ಟಿಯಾದ ಕಾಳು ಎದ್ದು ಕಾಣದಿರುವಂತೆ ಮೂರು ದಿನದ ಬಾಳಿನವುಗಳನ್ನು ಗೊತ್ತುಮಾಡಿ ತಳ್ಳದ ಹೊರತು ಎಂದೆಂದಿಗೂ ಇರುವ ಬ್ರಹ್ಮವು ಕೈಗೆ ಸಿಕ್ಕುವದಿಲ್ಲ. ಮೊದಲನೆ ಸಾಧನವಿದ್ದು ಎರಡನೆ ಸಾಧನವಿಲ್ಲದಿದ್ದರೆ ಅವನ ಬ್ರಹ್ಮದ ಬಯಕೆಯು ಅರೆಮನಸ್ಸಿನದಾಗುವದು. ಲೌಕಿಕವಾದ ಸುಖವೂ ಇದ್ದುಕೊಂಡು ಅದರ

ಜೊತೆಗೆ ಬ್ರಹ್ಮಸುಖವೂ ಬರಲೆಂದರೆ ಅದು ಅಳಿಯನ ಹಿಂದೆ ಗಿಳಿಯನ ಹಾಗೆ ಬಂದು ದಾಕ್ಷಿಣ್ಯದ ಉಪಚಾರಕ್ಕೆ ಕುಕ್ಕರಿಸಿಕೊಳ್ಳುವಂಥದ್ದಲ್ಲ. ತನಗೇ ಅಳಿಯನಂಥ ಹೆಚ್ಚುಗಾರಿಕೆ ದೊರೆತರೂ ಅದು ತನ್ನ ಹಿಂದೆ ಗಿಳಿಯನಾಗಿ ಬಾರೆಂದು ಲೌಕಿಕಸುಖದ ಮುಂದೆ ಅಕ್ಷತೆಯ ಬಟ್ಟಲನ್ನು ಹಿಡಿಯುವದೂ ಇಲ್ಲ. ಒಂದು ಪಕ್ಷ ಅದಾಗಿ ಬಂದು ಗಂಟುಬಿದ್ದರೆ ಅದರ ಮೇಲೆ ಬೇಸರಗೊಳ್ಳುವದೂ ಇಲ್ಲ. ಮೊದಲನೆ ಎರಡು ಸಾಧನಗಳಿದ್ದು ಮನಸ್ಸು ಹಿಡಿತದಲ್ಲಿಲ್ಲದೆ ಹೋದರೆ ಬ್ರಹ್ಮವು ನಿಲುಕುವದೇ ಇಲ್ಲ. ಬ್ರಹ್ಮವು ಮನಸ್ಸನ್ನು ಆಳುವ ಎದೆಗಾರನಾದ ಅರಸನನ್ನು ವರಿಸುವದೇ ಹೊರತು ಅವರ ಹಿಂದೆ ಕುರಿಯಂತೆ ತಲೆ ಬಗ್ಗಿಸಿಕೊಂಡು ಓಡುವ ಆಳನ್ನು ಕಡೆಗಣ್ಣಿಂದಲೂ ನೋಡುವದಿಲ್ಲ. ಮೊದಲ ಮೂರು ಸಾಧನಗಳಿದ್ದರೂ ನಾಲ್ಕನೆಯದಿಲ್ಲದಿದ್ದರೆ ಅವನ ಪ್ರಯತ್ನವು ಮುಂದುವರಿಯುವದೇ ಇಲ್ಲ. ವೇದಾಂತವನ್ನು ಸಭೆಯಲ್ಲಿ ತನ್ನ ಬಾಯಿತೋರಿಸುವದಕ್ಕೋ ಅಥವಾ ಮತ್ತೊಬ್ಬನ ಬಾಯಿ ಕಟ್ಟುವದಕ್ಕೋ ತಿಳಿದರೆ ಅದರಿಂದ ಸಂಸಾರವನ್ನು ದಾಟಿಸದಾಗುವದಿಲ್ಲ. ಸಂಸಾರವನ್ನು ದಾಟುವದೆಂಬ ಮೋಕ್ಷವು ತನಗೆ ಕಾಲಿಗೆ ಬಿದ್ದು ಕರೆಯುತಿದ್ದರೂ ಸಂದಿಯಲ್ಲಿ ನುಸುಳಿ ಬಂದು ತಲೆ ಬಗ್ಗಿಸಿಕೊಂಡು ಕುಳಿತುಕೊಳ್ಳುವ ಕಂಗಾಳಿಯಲ್ಲ.

ಈ ನಾಲ್ಕು ಸಾಧನಗಳೂ ಇಲ್ಲದಿದ್ದರೆ ವೇದಾಂತದ ಅರ್ಥವನ್ನು ತಿಳಿಯುವದಕ್ಕೇ ಆಗುವದಿಲ್ಲವೋ? ಎಂದರೆ ಆಗುತ್ತದೆ. ಈ ಸಾಧನಗಳಿಲ್ಲದಿದ್ದರೂ ಶಬ್ದಾರ್ಥವೂ ವಾಕ್ಯಾರ್ಥವೂ ಆಗಬಹುದು. ಭಾಷೆ ತಿಳಿದಿದ್ದು ವೇದಾಂತವನ್ನು ತಿಳಿಯಬೇಕೆಂಬ ಕುತೂಹಲವಿದ್ದರೆ ಅವನು ಓದಿದ ಹಾಗೆಲ್ಲ ಅಥವಾ ವಿಚಾರಮಾಡಿದ ಹಾಗೆಲ್ಲ ವೇದಾಂತವು ತನ್ನ ಮೈಯನ್ನು ಅರಳಿಸಿ ತೋರಿಸುವದು. ಅವರಿಗಿನ್ನೂ ತನ್ನ ಮೇಲಣ ಆದರವು ಸಾಲದೆಂದು ಅದು ತನ್ನ ಸೊಗಸನ್ನೇನೂ ಬಚ್ಚಿಟ್ಟುಕೊಳ್ಳುವದಿಲ್ಲ. ಆದ್ದರಿಂದಲೇ ವೇದಾಂತದ ಶಬ್ದಗಳನ್ನೂ ಅರ್ಥಗಳನ್ನೂ ಸೂತ್ರದ ಬೊಂಬೆಗಳಂತೆ ಕುಣಿಸುವವರು ಅನೇಕರಿರುವರು. ಆದರೆ ಪಾಂಡಿತ್ಯದ ಬಲುಮೆಯಿಂದ ಒಳಗುಮಾಡಿಕೊಂಡ ಆ ವೇದಾಂತವು ಅವರಲ್ಲಿ ಸೆರೆಸಿಕ್ಕಿದ ಸಾಧ್ವಿಯಂತೆ

ಮಾತ್ರ ಇರುವದು. ಹಾಗೆ ಬಲುಮೆಯಿಂದಲ್ಲದೆ ಮೇಲೆ ಹೇಳಿದ ನಾಲ್ಕು ಬಗೆಯ ಸಾಧನಗಳೆಂಬ ಒಲುಮೆಯಿಂದ ಒಲಿಸಿಕೊಂಡ ವೇದಾಂತವು ಒಲಿದು ಬಂದ ನಾರೀಮಣಿಯಂತೆ ತನ್ನಿಂದಾಗುವ ಸುಖದ ಸುಗ್ಗಿಯನ್ನು ಸೂರೆಮಾಡುವದು. ಗ್ರಾಮಾಫೋನು ಹಾಳುವ ಕರುಣಾರಸಪ್ರಧಾನವಾದ ಹಾಡು ಹೇಗೆ ಅದರ ಹೃದಯವನ್ನು ಅರಳಿಸಲಾರದೊ ಹಾಗೆ ಬಲುಮೆಯಿಂದ ವಶಮಾಡಿಕೊಂಡ ವೇದಾಂತವು ಅವನ ಹೃದಯುವನ್ನು ಅರಳಿಸಲಾರದು. ಅವನ ಮಾತುಗಳು ಬರೀ ಕೇಳಿಕೆಯ ಮಾತುಗಳು. ಅವೆಲ್ಲ ಇತರರವೆ ಹೊರತು ಅವನವಲ್ಲ. ಅವನ ಹೃದಯವು ವೇದಾಂತದ ತಣ್ಪನ್ನು ಹೀರಿಕೊಂಡಿರುವದಿಲ್ಲ. ಅವನ ವೇದಾಂತದ ಮಾತುಗಳು ಅವನವಾಗಬೇಕಾದರೆ ವೇದಾಂತವನ್ನು ಒಳಕೊಳ್ಳುವಾಗ ಅವನು ಪಥ್ಯವಾಗಿರಬೇಕು. ಮೇಲೆ ಹೇಳಿದ ನಾಲ್ಕು ಸಾಧನಗಳೇ ಪಥ್ಯ. ಪಥ್ಯವಿಲ್ಲದಿರುವಾಗ ಔಷಧಿಯು ತನ್ನ ಗುಣವನ್ನು ತೋರಿಸುವದಿಲ್ಲ. ನಾಲ್ಕು ಸಾಧನಗಳಿಲ್ಲದಿರುವಾಗ ವೇದಾಂತವು ತನ್ನ ಗುಣವನ್ನು ತೋರಿಸುವದಿಲ್ಲ. ಆಗ ಅದು ಬರೀ ಒಣಮಾತಾಗಿರುವದು. ಅವನು ನಾಲ್ಕು ಸಾಧನಗಳುಳ್ಳವನಾಗಿದ್ದು ವೇದಾಂತವನ್ನು ಒಳಕೊಂಡರೆ ಆಗ ಅದು ಆಶ್ಚರ್ಯಕರವಾದ ಮಹಿಮೆಯನ್ನು ತೋರಿಸುವದು. ಕ್ಷುದ್ರನಾಗಿದ್ದ ಜೀವನು ಮಹತ್ತಾದ ಬ್ರಹ್ಮವಾಗುವದೆಂಬುದೊಂದು ದೊಡ್ಡ ಮಹಿಮೆಯಲ್ಲವೆ? ಯಾವನಲ್ಲಿ ನಾವು ಕೀಳಾದ ನಡೆವಳಿಕೆಗಳನ್ನು ಕಾಣುತ್ತಿದ್ದೆವೊ ಅವನಲ್ಲಿಯೇ ನಮಗೆ ಮೇಲಾದ ನಡೆವಳಿಕೆಗಳು ನಮ್ಮೆದುರಿಗೇ ಕಾಣಬಂದು ಅವನು ನಮಗೆ ಹೊಸಬನಾಗಿ ಕಂಡರೆ ಅದಕ್ಕಿಂತ ಆಶ್ಚರ್ಯವಿನ್ನೇನು! ಅದರಲ್ಲಿಯೂ ನಮ್ಮ ಊಹೆಗೆ ಕೂಡ ನಿಲುಕದಂಥ ಮೇಲಾದ ನಡೆವಳಿಕೆಗಳು! ಈ ಆಶ್ಚರ್ಯವು ಪ್ರಪಂಚದಲ್ಲಿ ತನಗೆ ಸಮಾನವಿನ್ನೊಂದಿಲ್ಲನೆನಿಸುವದು. ಒಬ್ಬನು ವೇದಾಂತವನ್ನು ಒಳಕೊಂಡದ್ದಕ್ಕೆ ಅವನ ಮಾತುಕತೆಗಳ ಸಾಕ್ಷಿ ಸಾಲದು; ವೇದಾಂತವು ಅವನ ನಡೆವಳಿಕೆಗಳಲ್ಲಿ ರೂಪುಗೊಂಡು ತಾಂಡವವಾಡಬೇಕು. ಅವನೊಬ್ಬನೇ ವೇದಾಂತಿ. ಏನೂ ತಿಳಿಯದಿರುವದಕ್ಕಿಂತಲೂ ವೇದಾಂತದ ಮಾತಾಡುವದಕ್ಕೆ ಬರುವದಾದರೂ ಮೇಲೇ; ಆದರೆ ಅದು ನಡೆವಳಿಕೆಯ ರೂಪಕ್ಕೆ ಇಳಿದರೆ ಮಾತ್ರವೆ

ಆವನದಾಗುವದು. ವೇದಾಂತದ ಮಾತುಗಾರನು ಕೈಲಿ ಕಾಸಿಲ್ಲದೆ ಕೋಟ್ಯಂತರ ಹಣಕಾಸುಗಳ ಲೆಕ್ಕಾಚಾರದ ಮಾತಿನಲ್ಲಿ ಮುಳುಗಿರುವವನಂತೆ. ನಡೆವಳಿಕೆಗಿಳಿಸಿದ ವೇದಾಂತದವನು ಸಿರಿಯಲ್ಲಿಯೇ ಮುಳುಗಿ ತೇಲುತ್ತಿರುವ ನವಕೋಟಿನಾರಾಯಣನಂತೆ. ಆದ್ದರಿಂದ ವೇದಾಂತವು ಹಾಗೆ ತನ್ನ ನಡೆವಳಿಕೆಗಳಲ್ಲಿ ಹೊರಹೊಮ್ಮುವವರೆಗೂ ಸಾಧಕನು ನಾಲ್ಕು ಸಾಧನಗಳನ್ನು ಬಲಿಸಿಕೊಳ್ಳುತ್ತ ಬ್ರಹ್ಮವಿಚಾರವನ್ನು ಮೈಯುಣಿಸಿಕೊಳ್ಳುತ್ತಿರಬೇಕು.

# ೪—ಜಗತ್ತಿನ ಹುಟ್ಟು

## ಬ್ರ ಹ್ಮ ದಿಂ ದಾ ದ ಹು ಟ್ಟು

ವೇದಾಂತಶಾಸ್ತ್ರದಂತೆ ಬ್ರಹ್ಮವೆಂಬುದೊಂದುಂಟೆಂಬಿಷ್ಟು ಮಾತ್ರ ತಿಳಿದರೆ ಸಾಲದು. ಅದು ತನ್ನ ಅನುಭವದಲ್ಲಿ ಕಾಣಬೇಕು. ಬ್ರಹ್ಮವು ಎಲ್ಲೆಲ್ಲಿಯೂ ತುಂಬಿರುವದೆಂದು ವೇದಾಂತಶಾಸ್ತ್ರವು ಹೇಳುತ್ತಿರುವಾಗ ನಾವು ನಮ್ಮ ಅನುಭವದಲ್ಲಿ ಎಲ್ಲೆಲ್ಲಿಯೂ ಜಗತ್ತನ್ನು ಕಾಣುತ್ತಿರುವೆವು. ಈ ನಮ್ಮ ಸ್ಥಿತಿಯನ್ನು ನೋಡಿಯೆ ಸಂಸಾರವೆಂಬ ಕುತ್ತಕ್ಕೆ ಮದ್ದನ್ನು ಹೇಳ ಹೊರಟ ವೇದಾಂತಶಾಸ್ತ್ರವು ಜಗತ್ತನ್ನೊಂದು ಕಡೆಗೆ ಸರಿಸಿ ಬ್ರಹ್ಮವನ್ನು ಕಾಣಬೇಕೆಂದು ಹೇಳಿರುವದು. ಆದ್ದರಿಂದ ನಾವು ಬ್ರಹ್ಮವನ್ನು ಕಾಣಬೇಕಾದರೆ ಜಗತ್ತನ್ನೊಂದು ಕಡೆಗೆ ಎತ್ತಿ ಹಾಕಬೇಕು. ಜಗತ್ತನ್ನೆತ್ತುವದು ನಮಗೆ ಸಾಧ್ಯವೆ? ಸಾಧ್ಯ. ನಾವು ಜಗತ್ತನ್ನೆತ್ತುವದೆಂದರೆ ಕೂರ್ಮರೂಪಿಯಾದ ಪರಮಾತ್ಮನು ಎತ್ತಿದಂತೆ ಅಲ್ಲ; ಜಗತ್ತು ಹೇಗೆ ಹುಟ್ಟಿರಬಹುದೆಂಬುದನ್ನು ವಿಚಾರದಿಂದ ಗೊತ್ತುಮಾಡುವದು. ಹೀಗೆ ಜಗತ್ತೆಂಬುದನ್ನೆಲ್ಲ ನಮ್ಮ ವಿಚಾರವೆಂಬ ತಕ್ಕಡಿಯೊಳಕ್ಕೆ ನಮ್ಮ ಮನಸ್ಸಿನಲ್ಲಿಯೇ ಎತ್ತಿ ಹಾಕಿಕೊಂಡರೆ ಅದರ ಬುಡದಲ್ಲಿ ಅದನ್ನು ಹುಟ್ಟಿಸಿದ ಬ್ರಹ್ಮವು ಕಾಣಬರುವ ಸಂಭವ ಉಂಟು. ಆದ್ದರಿಂದ ಜಗತ್ತಿನ ಹುಟ್ಟನ್ನು ಕುರಿತು ವಿಚಾರ ಮಾಡೋಣ.

ಜಗತ್ತು ಹುಟ್ಟಿದ ವಿಚಾರವನ್ನು ಮಾಡುವದಕ್ಕೆ ಮುಂಚೆಯೆ ಜಗತ್ತನ್ನು ನೋಡುತ್ತಲೆ ನಮಗೆ ಅವನ ಸುಳಿವು ಗೊತ್ತಾಗುವದು. ಹೇಗೆಂದರೆ: ಜಗತ್ತಿನಲ್ಲಿ ನಮ್ಮ ಕಿವಿಗೆ ಯಾವ ಹೆಸರು ಕೇಳಿಸಿದರೂ ಅದನ್ನು ಇಟ್ಟವನೊಬ್ಬನಿರಬೇಕೆಂದು ಗೊತ್ತಾಗುವದು; ನಮ್ಮ ಕಣ್ಣಿಗೆ ಯಾವ ಆಕಾರವು ಕಾಣಬಂದರೂ ಅದನ್ನು ಮಾಡಿದವನೊಬ್ಬನಿರಬೇಕೆಂದು ಒಡನೆ ಹೊಳೆಯುವದು. ಒಂದು ಕಡೆ ಅನೇಕರು ಸೇರಿ ಕಚ್ಚಾಟವಿಲ್ಲದೆ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಅವುಗಳ ಫಲಗಳನ್ನು ತಾವು ತಾವು ಅನುಭವಿಸುತ್ತಿದ್ದರೆ ಅವರಿಗೆಲ್ಲ ಅಲ್ಲೊಬ್ಬ ಯಜಮಾನನಿರಬೇಕೆಂದು ಮನಸ್ಸು ಊಹಿಸುವದು. ಒಂದು ಕಡೆಯ ನಡೆವಳಿಕೆಗಳು ಒಂದು ನಿಯಮಕ್ಕೊಳಪಟ್ಟು ನಡೆಯುತ್ತಿದ್ದರೆ ಅಲ್ಲೊಬ್ಬ ನಿಯಾಮಕನಿರಬೇಕೆಂದು ಸಹಜವಾಗಿ ಮನಸ್ಸಿಗೆ ತೋರುವದು. ಜಗತ್ತಿನಲ್ಲಿ ಲೆಕ್ಕವಿಲ್ಲದಷ್ಟು ಹೆಸರುಗಳಿವೆ; ಆಕಾರಗಳಿವೆ; ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಅದರ ಫಲಗಳನ್ನು ಉಣ್ಣುವವರು ಬಹಳವಾಗಿದ್ದಾರೆ. ನಿಯಮಕ್ಕೊಳಪಟ್ಟ ನಡೆವಳಿಕೆಗಳನ್ನು ನೋಡಹೋದರೆ ಕಬ್ಬು ಗದ್ದೆಯಲ್ಲಿ ಬೆಳೆಯುವದೇ ಹೊರತು ಹೊಲದಲ್ಲಲ್ಲ; ಮರಗಳು ಬೇಸಗೆಯಲ್ಲಿ ಚಿಗರುವವೇ ಹೊರತು ಮಳೆಗಾಲದಲ್ಲಲ್ಲ; ಆಯಾಬೀಜಗಳಿಂದ ಆಯಾ ಮರಗಳೇ ಏಳುವವೇ ಹೊರತು ಒಂದರಿಂದಿನ್ನೊಂದೇಳುವದಿಲ್ಲ; ಹುಣಸೇಕಾಯಿ ಯಾವಾಗಲೂ ಹುಳಿಯಾಗಿಯೇ ಇರುವದು; ಬೇವಿನಕಾಯಿ ಯಾವಾಗಲೂ ಕಹಿಯಾಗಿಯೇ ಇರುವದು; ಬೆಂಕಿ ಮೇಲುಮುಖವಾಗಿಯೇ ಉರಿಯುವದು; ನೀರು ಕೆಳಮುಖವಾಗಿಯೇ ಹರಿಯುವದು; ಋತುಧರ್ಮಗಳು ಪ್ರತಿವರ್ಷವೂ ಒಂದೇ ಸಮನಾಗಿ ನಡೆಯುತ್ತಿರುವವು. ಇವನ್ನೆಲ್ಲ ನೋಡಿದರೆ ಇಂಥ ಜಗತ್ತು ತನ್ನಷ್ಟಕ್ಕೆ ತಾನೆ ಧೂಮಕೇತುವಿನಂತೆ ಎದ್ದುಕೊಂಡಿರುವದೆಂಬ ಮಾತು ಒಪ್ಪತಕ್ಕದ್ದಾಗುವದಿಲ್ಲ. ತನ್ನ ಕಣ್ಣ ಸನ್ನೆಯಿಂದಲೆ ಈ ಜಗತ್ತನ್ನು ಹೀಗೆ ಇಟ್ಟುಕೊಂಡಿರುವದಕ್ಕೆ ತಿಳಿದವನೊಬ್ಬನಿರಬೇಕೆಂದು ಎಂಥವರಿಗಾದರೂ ತೋರುವದು. ಇದಲ್ಲದೆ ಮನುಷ್ಯಮಾತ್ರದವರ ಊಹೆಗೆ ಕೂಡ ನಿಲುಕದಂಥ ಆಕಾಶ, ಭೂಮಿ, ಪರ್ವತ, ಸಮುದ್ರ—ಮೊದಲಾದವುಗಳನ್ನೆಲ್ಲ ಹುಟ್ಟಿಸಿರುವ ಅವನು ಎಲ್ಲಿ

ವನ್ನೂ ತಿಳಿದವನೂ ಏನುಬೇಕಾದರೂ ಮಾಡಬಲ್ಲವನೂ ಆಗಿರಬೇಕಾಗುವದು. ಅಂಥ ಯಾವನ ಸಂಬಂಧವೂ ಈ ಜಗತ್ತಿನಲ್ಲಿ ನಮ್ಮ ಇಂದ್ರಿಯಗಳಿಗೆ ಗೋಚರವಾಗುವದಿಲ್ಲ. ಜಗತ್ತನ್ನು ನೋಡುತ್ತಲೆ ನಮಗೆ ಗೊತ್ತಾದ ಅವನ ಸುಳಿವನ್ನು ನಮ್ಮಲ್ಲಿ ಗಟ್ಟಿಗೊಳಿಸುವದಕ್ಕೆ ವೇದಾಂತವು ಅಂಥವನೊಬ್ಬನಿರುವನೆಂದು ಹೇಳಿ ಅವನಿಗೆ 'ಬ್ರಹ್ಮ' ಎಂದು ಹೆಸರಿಟ್ಟಿರುವದು. ಬ್ರಹ್ಮ ಎಂಬ ಮಾತಿಗೆ ಪುರಾಣದಲ್ಲಿ ಹೆಸರುಗೊಂಡಿರುವ ನಾಲ್ಕುಮುಖದ ಬ್ರಹ್ಮನೆಂದರ್ಥವಾದರೂ ವೇದಾಂತವು ಹೇಳುವ ಬ್ರಹ್ಮವೆಂಬ ಮಾತಿನ ಅರ್ಥವು ಆ ಬ್ರಹ್ಮನಲ್ಲ; ಆ ಬ್ರಹ್ಮನನ್ನು ಕೂಡ ಹುಟ್ಟಿಸಿದ ಬ್ರಹ್ಮ. ಹೀಗೆ ಇಂದ್ರಿಯಗಳಿಗೆ ಗೋಚರವಾಗದೆ ಇರುವ ಬ್ರಹ್ಮದ ವಿಷಯಕ್ಕೆ ವೇದಾಂತವೇ ಪ್ರಮಾಣವಾದರೂ ಅದು ನಮ್ಮ ಮನಸ್ಸಿಗೆ ಅಳವಡಬೇಕಾದರೆ ಬರೀ ಕುರುಡುನಂಬಿಕೆ ಸಾಕಾಗುವದಿಲ್ಲ. ವೇದಾಂತದ ಮಾತು ಸರಿಯೆಂಬುದನ್ನು ನಮ್ಮ ಮನಸ್ಸಿಗೆ ಹೊಂದಿಸಿಕೊಳ್ಳುವದಕ್ಕೆ ನಾವು ಯುಕ್ತಿಗಳನ್ನೂ ಉಪಯೋಗಿಸಿಕೊಳ್ಳಬಹುದು. —(ಸ.೧-೧-೨)

ಈ ಜಗತ್ತಿನ ಸ್ವರೂಪವನ್ನು ಸ್ವಲ್ಪ ಬಿಚ್ಚಿ ನೋಡಿದರೆ ಎರಡು ದೊಡ್ಡ ಭೇದಗಳು ಕಾಣಬರುತ್ತವೆ. ನೆಲ, ನೀರು, ಬೆಂಕಿ, ಗಾಳಿ, ಆಕಾಶ, ನಮ್ಮ ಮನಸ್ಸಿನ ಮೂಲವಾದಂಥ ನಾನುನಾನೆಂಬ ವೃತ್ತಿ, ಆ ನಾನೆಂಬ ವೃತ್ತಿಯ ಮೂಲವಾದಂಥ ಮಹತ್ತತ್ತ್ವವೆಂಬ ಅಂತಃಕರಣದ ವೃತ್ತಿ ಮತ್ತು ಜಗತ್ತಿನ ಬೀಜಾವಸ್ಥೆ—ಈ ಎಂಟರದೊಂದು ಗುಂಪು. ಇದರಲ್ಲಿ ಜಡವಸ್ತುಗಳ ಎಲ್ಲ ಬಗೆಗಳೂ ಅಡಕವಾಗಿರುವವು. ಇದು ಕೀಳಾದದ್ದು, ಹೊಲಸಾದದ್ದು ಮತ್ತು ಸಂಸಾರದ ತೊಡಕುಗಳನ್ನು ಹೆಚ್ಚಿಸುವಂಥದ್ದು. ಇವೆಲ್ಲ ಬ್ರಹ್ಮದ ಮಾಯಾಶಕ್ತಿಯು ತಾಳಿರುವ ಬಗೆಗಳು. ಇನ್ನೊಂದು ಗುಂಪುಂಟು. ಅದು ಯಾವದೆಂದರೆ: ಈ ಜಗತ್ತನ್ನೆಲ್ಲ ಒಳಹೊಕ್ಕು ಎತ್ತಿ ಹಿಡಿದುಕೊಂಡಿರುವದಾಗಿ ಎಲ್ಲರ ದೇಹದಲ್ಲಿಯೂ ಉಸಿರನ್ನು ನಿಲ್ಲಿಸಿಕೊಂಡು ನನ್ನ ದೇಹವೆನ್ನುವ ಜೀವವೆಂಬ ಮೇಲಾದ ಚೈತನ್ಯಸ್ವರೂಪ. ಹೀಗೆ ಈ ಜಗತ್ತಿನಲ್ಲಿ ಜಡ, ಜೀವ—ಎಂಬೆರಡು ದೊಡ್ಡ ಭೇದಗಳಿವೆ. ಜಗತ್ತೆಂಬ ಮಾತಿನ ಅರ್ಥದಲ್ಲಿ ಇವೆರಡನ್ನೂ ಕೂಡಿಸಿಕೊಳ್ಳಬೇಕು. —(ಭ.೭-೪,-೫)

ಈ ಜಗತ್ತು ಬ್ರಹ್ಮದಿಂದ ಹೊರಬಿದ್ದದ್ದೆಂದು ವೇದಾಂತಶಾಸ್ತ್ರದ ನಿರ್ಣಯ. ಈ ಅಭಿಪ್ರಾಯವು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ರೂಪುಗೊಂಡಿದೆ. (ಅ) ಒಂದು ಕಡೆ ಬ್ರಹ್ಮವು ಎಲ್ಲ ಜಗತ್ತಿನ ಬೀಜವೆಂದಿದೆ (ಭ ೭-೧೦; ೧೦-೩೯). (ಆ) ಇನ್ನೊಂದು ಕಡೆ ಬ್ರಹ್ಮವೆ ಜಗತ್ತಿನ ತಂದೆ, ತಾಯಿ ಮತ್ತು ತಾತ ಎಂದಿದೆ (ಭ-೯-೧೭). (ಇ) ಮತ್ತೊಂದು ಕಡೆ ಈ ಜಗತ್ತೆಲ್ಲ ಬ್ರಹ್ಮದ ಒಂದಂಶವೆಂದಿದೆ (ಭ ೧೦-೪೨). (ಈ) ಮಗದೊಂದು ಕಡೆ ಬ್ರಹ್ಮವು ಜಗತ್ತನ್ನು ಹೇಗೆ ಹೊರಗೆಡಹಬೇಕೆಂಬ ತಿಳಿವಿನಿಂದ ಉಬ್ಬಿಕೊಂಡು ಜಗತ್ತನ್ನು ಹಡೆಯಿತೆಂದಿದೆ (ಮುಂ ೧-೧-೮,೯). (ಉ) ಬೇರೊಂದು ಕಡೆ ಈ ಜಗತ್ತಾಗುವದಕ್ಕೆ ಮುಂಚೆ ಬ್ರಹ್ಮ ಒಂದೇ ಇತ್ತೆಂದೂ ಅದು ಜಗತ್ತನ್ನು ಹುಟ್ಟಿಸಿತೆಂದೂ ಹೇಳಿದೆ (ಐ ೧-೧-೧; ಛಾಂ ೬-೨-೧,೨). (ಊ) ಒಂದಾನೊಂದು ಕಡೆ ಆ ಬ್ರಹ್ಮವು ತಾನು ಬಹುಬಗೆಯಾಗಬೇಕೆಂದು ಯೋಚಿಸಿ ಇದೆಲ್ಲವನ್ನೂ ಹೊರಗೆಡಹಿತೆಂದಿದೆ (ತೈ ೨-೬).

ಜಗತ್ತು ಹುಟ್ಟುವದಕ್ಕೆ ಮುಂಚೆ ಬ್ರಹ್ಮ ಒಂದೇ ಇತ್ತೆಂದು ಹೇಳಿರುವ ಒಂದು ಕಡೆ ಇರುವ ವಿವರವೇನೆಂದರೆ: ಈಗ ಬಗೆಬಗೆಯ ಹೆಸರುಗಳೂ ಆಕಾರಗಳೂ ಉಳ್ಳ ಜಗತ್ತು ಕಾಣುತ್ತಿರುವದಷ್ಟೆ. ಈ ಹೆಸರುಗಳೂ ಆಕಾರಗಳೂ ಹುಟ್ಟುವದಕ್ಕೆ ಮುಂಚೆ ಇವುಗಳನ್ನೆಲ್ಲ ಬೀಜರೂಪವಾಗಿ ಹೊಟ್ಟೆಯೊಳಗಿಟ್ಟುಕೊಂಡ ಬ್ರಹ್ಮ ಒಂದು ಮಾತ್ರವೆ ಬರೀ ಇರುವಿಕೆಯ ರೂಪದಲ್ಲಿ ಇತ್ತು. ಚೆನ್ನಾಗಿ ವಿಚಾರ ಮಾಡಿದರೆ ಈಗಲೂ ಇರುವದು ಅದೊಂದೆ. ಆದರೆ ಈಗ ಅದರ ಜೊತೆಗೆ ಈ ಜಗತ್ತೂ ಕಾಣುತ್ತಿರುವದು. ಬರೀ ಇರುವಿಕೆಯ ರೂಪವೆಂಬುದು ಬೇಗ ಬುದ್ಧಿಗೆ ಹತ್ತದೆ ಇರಬಹುದು. ಅದು ನಮ್ಮ ಅನುಭವಕ್ಕೆ ಹೊರತೇನೂ ಅಲ್ಲ. ಒಳ್ಳೆ ತನಿನಿದ್ರೆಯಲ್ಲಿ ಹೆಸರಾಗಲಿ ಆಕಾರವಾಗಲಿ ಏನೂ ಇರುವದಿಲ್ಲ. ಎಚ್ಚತ್ತ ಮೇಲೆ ತನಿನಿದ್ರೆಯನ್ನು ನೆನೆಸಿಕೊಂಡರೆ ತನಗೆ ಎರಡನೆಯದೆಂಬುದೇನೇನೂ ಇಲ್ಲದೆ ಆಗ ತಾನು ಬರೀ ಇರುವಿಕೆಯ ರೂಪದಲ್ಲಿದ್ದದ್ದು ತಿಳಿಯಬರುವದು. ಈ ಜಗತ್ತು ಹುಟ್ಟುವದಕ್ಕೆ ಮೊದಲು ಬ್ರಹ್ಮವು ಹಾಗೆ

ಬರೀ ಇರುವಿಕೆಯ ರೂಪದಲ್ಲಿತ್ತು. ಈ ಬರೀ ಇರುವಿಕೆಯ ರೂಪವು ತನಿ ನಿದ್ರೆಯಲ್ಲಿ ಮಾತ್ರವೇ ಅಲ್ಲದೆ ಎಚ್ಚರದಲ್ಲಿ ಕೂಡ ಕಾಣುವದುಂಟು. ಒಬ್ಬನು ಬೆಳಗಾಗುತ್ತಲೆ ಒಂದು ಹಳ್ಳಿಗೆ ಹೋಗುತ್ತಿರುತ್ತಾನೆ. ದಾರಿಯಲ್ಲಿ ಒಬ್ಬ ಕುಂಬಾರನು ಮಡಕೆ ಮೊದಲಾದವುಗಳನ್ನು ಮಾಡುವದಕ್ಕೆಂದು ಕಲಸಿದ ಮಣ್ಣನ್ನು ಹರಡಿರುವದು ಅವನಿಗೆ ಕಾಣಬರುತ್ತದೆ. ಹಳ್ಳಿಯಿಂದ ಹಿಂದಿರುಗಿ ಬರುವಾಗ ಅಲ್ಲಿ ಕುಡಿಕೆ, ಮಡಕೆ--ಮೊದಲಾದ ಅನೇಕ ಹೆಸರುಗಳೂ ರೂಪಗಳೂ ಉಳ್ಳವುಗಳು ಎದ್ದುಕೊಂಡಿರುತ್ತವೆ. ಇದನ್ನು ನೋಡಿ ಈ ಕುಡಿಕೆಮಡಕೆಗಳು ಮೊದಲು ನೋಡಿದಾಗ ಮಣ್ಣುಮಾತ್ರವಾಗಿತ್ತೆಂದು ಅವನು ತಿಳಿಯುತ್ತಾನೆ. ಇದರಂತೆ ಜಗತ್ತು ಹುಟ್ಟುವ ಮುಂಚೆ ಬ್ರಹ್ಮ ಒಂದೇ ಇತ್ತು. ಮೊದಲು ನೋಡಿದಾಗ ಕುಂಬಾರನಾಗಲಿ ಮಡಕೆಗಳನ್ನು ಮಾಡುವ ಇತರ ಸಾಧನಗಳಾಗಲಿ ಎರಡನೆಯದು ಅಲ್ಲೇನೂ ಇಲ್ಲದಿದ್ದಂತೆ ಜಗತ್ತು ಹುಟ್ಟುವದಕ್ಕೆ ಮುಂಚೆ ಬ್ರಹ್ಮದ ಹೊರತು ಎರಡನೆಯದೇನೇನೂ ಇರಲಿಲ್ಲ. ಆ ಬ್ರಹ್ಮದಲ್ಲಿ ಜಗತ್ತು ಬೀಜರೂಪದಲ್ಲಿಲ್ಲದೆ ಇದ್ದರೆ ಇಲ್ಲದ್ದರಿಂದ ಇರುವದು ಹುಟ್ಟುವದು ಹೇಗೆ? ಇಲ್ಲಿ ಇಲ್ಲದ್ದೆಂದರೆ ಮೊಲದ ಕೋಡಿನಂತೆ ಎಂದಿಗೂ ಇಲ್ಲದೆಂದರ್ಥ. ಇರುವದೆಂದರೆ ಎಂದಿಗೂ ಹೋಗದೆ ಯಾವಾಗಲೂ ಎಚ್ಚರಕನಸುನಿದ್ದೆಗಳಲ್ಲಿಯೂ ಹಿಂದೆ, ಈಗ, ಮುಂದೆ--ಎಂಬ ಮೂರು ಕಾಲಗಳಲ್ಲಿಯೂ ಇರುವದೆಂದರ್ಥ. ಇಲ್ಲಿ ಮೂರು ಕಾಲಗಳೆಂದು ಮಾತ್ರ ಹೇಳಿದರೆ ಅದು ಎಚ್ಚರದಲ್ಲಿ ಮಾತ್ರವೆಂದು ತಿಳಿಯುವ ಸಂಭವವಿರುವದರಿಂದ ಅವಸ್ಥೆಗಳನ್ನು ಬೇರೆ ಎತ್ತಿ ಹೇಳಲಾಗಿರುವದು. ಒಂದವಸ್ಥೆಯಲ್ಲಿ ಅದು ಮೂರು ಕಾಲದಲ್ಲಿಯೂ ಇದ್ದರೂ ಇನ್ನೊಂದವಸ್ಥೆಯಲ್ಲಿಲ್ಲದೆ ಹೋದರೆ ಅದು ಇರುವದೆನಿಸಿಕೊಳ್ಳುವದಿಲ್ಲ. ಹೀಗೆ ಇಲ್ಲದ್ದರಿಂದ ಇರುವದು ಹುಟ್ಟುವದೆಂಬ ಮಾತೇ ಕೂಡುವದಿಲ್ಲ. ಆದ್ದರಿಂದ ಆಗ ಜಗತ್ತು ಬೀಜರೂಪದಲ್ಲಿತ್ತೆನ್ನಲೇ ಬೇಕು.

—(ಛಾಂ-೬-೨-೧)

ಆದೀ ವಿಸರವು ಮುಂದೆ ಸಾಗಿರುವದು ಹೇಗೆಂದರೆ: ಇಲ್ಲದ್ದರಿಂದ ಇರುವದು ಹುಟ್ಟುವದಿಲ್ಲವೆನ್ನುವದಾದರೆ ಇರುವವರಿಂದ ಇರುವದು ಹುಟ್ಟುವದೆನ್ನುವದೂ ಆಗಲಾರದೆನ್ನಬೇಕಾಗುವದು. ಇರುವವದರಿಂದ ಇರುವದು ಹುಟ್ಟುವದನ್ನು ನಾವೆಲ್ಲಿಯೂ ಕಂಡಿಲ್ಲ. ಒಂದು ಗಡಿಗೆಯಿಂದ ಇನ್ನೊಂದು ಗಡಿಗೆ ಹುಟ್ಟಿದ್ದನ್ನು ಯಾರು ಕಂಡಿದ್ದಾರೆ? ನಿಜ. ಇರುವ ಒಂದರಿಂದ ಇರುವ ಇನ್ನೊಂದು ಹುಟ್ಟದಿದ್ದರೂ ಇರುವ ಒಂದೇ ಬೇರೆ ರೂಪವನ್ನು ಹೊಂದುವದು ಕಾಣಬಂದಿದೆ. ಉದ್ದಕ್ಕಿರುವ ಹಾವು ಸುತ್ತಿ ಕೊಳ್ಳುವದುಂಟು. ಮಣ್ಣು ಪುಡಿಯಾಗಿಯೂ ಕುಡಿಕೆಯಾಗಿಯೂ ಮಡಕೆಯಾಗಿಯೂ ಮುಚ್ಚಳವಾಗಿಯೂ ಇರುವದುಂಟು. ಹೀಗೆ ಇರುವ ಒಂದೇ ಬೇರೆ ಬೇರೆ ಬಗೆಗಳಾಗುವದಾದರೆ 'ಇದು' ಎಂದು ಹೇಳಿಸಿಕೊಳ್ಳುವವುಗಳು ಹುಟ್ಟುವ ಮುಂಚೆ ಇದ್ದವೆಂಬ ಮಾತು ಹೇಗೆ ಹೊಂದುವದೆಂದರೆ: ಈಗ 'ಇದು' ಎಂದು ಹೇಳಿಸಿಕೊಳ್ಳುವವುಗಳು ಹುಟ್ಟುವ ಮುಂಚೆ ಬರೀ ಇರುವಿಕೆಯ ಮಾತ್ರವಾಗಿದ್ದವೆಂಬ ಮಾತನ್ನು ಮರೆಯಬಾರದು. ಇದರಿಂದ ಜಗತ್ತು ಹುಟ್ಟುವ ಮುಂಚೆ 'ಇದು' ಎಂದು ಹೇಳಿಸಿಕೊಳ್ಳುವವುಗಳಿರದೆ ಏನೂ ಇಲ್ಲದ್ದಾಗಿತ್ತೆಂದೂ 'ಇದು' ಎಂದು ಹೇಳಿಸಿಕೊಳ್ಳುವವುಗಳಿಲ್ಲ ಈಗ ಹುಟ್ಟಿವವೆಂದೂ ಹೇಳಬೇಕಾಗುವದೆಂದು ಯೋಚಿಸಬಾರದು. ಮಣ್ಣಾಗಿದ್ದದ್ದೆ ಗಡಿಗೆ ಮೊದಲಾದವುಗಳಾದಂತೆ ಮೊದಲು ಬರೀ ಇರುವಿಕೆಯಾಗಿದ್ದದ್ದೆ 'ಇದು' ಎಂದು ಹೇಳಿಸಿಕೊಳ್ಳುವ ಬಗೆಬಗೆಗಳಾಯಿತು. ಮಣ್ಣೆನಿಸಿಕೊಂಡಿದ್ದದ್ದು ಗಡಿಗೆ ಮೊದಲಾದದ್ದೆನಿಸಿಕೊಂಡಂತೆ ಇರುವಿಕೆಯೆನಿಸಿಕೊಂಡಿದ್ದದ್ದು ಜಗತ್ತೆನಿಸಿಕೊಂಡಿತೆಂದರೆ ಕುದುರೆಯೂ ಆಕಳೂ ಹೇಗೆ ಒಂದಕ್ಕೊಂದು ಬೇರೆಯೊ ಹಾಗೆ ಅವೆರಡೂ ಬೇರೆಬೇರೆಯೇ ಆಯಿತೆಂದೂ ತಿಳಿಯಬಾರದು. ಗಡಿಗೆ, ಮಡಕೆ—ಎಂಬಿವುಗಳು ಒಂದಕ್ಕೊಂದು ಬೇರೆಯಾದರೂ ಅವು ಮಣ್ಣಿಗಿಂತ ಬೇರೆಯಾದವುಗಳಲ್ಲ. ಹೀಗೆ 'ಇದು' ಎಂದು ಈಗ ಹೇಳಿಸಿಕೊಳ್ಳುವವುಗಳೆಲ್ಲ ಹುಟ್ಟುವ ಮುಂಚೆ ಬರೀ ಇರುವಿಕೆಯ ರೂಪದಲ್ಲಿದ್ದವೆಂದು ಹೇಳುವ ಮಾತು ಹೊಂದುವದು. ಬೇರೆಬೇರೆ ಆಕಾರಗಳೆಂಬುವೆಲ್ಲ ಬರೀ ಮಾತು ಮಾತ್ರ. —(ಛಾಂ ೬-೨-೨)

ಇನ್ನೊಂದು ಕಡೆಯ ವಿವರವನ್ನು ನೋಡಿ. ಜಗತ್ತು ಹುಟ್ಟುವದಕ್ಕೆ ಮೊದಲು ಅದು ಏನೂ ಇಲ್ಲದ್ದಾಗಿತ್ತೆಂಬ ಮಾತೂ ವೇದದಲ್ಲಿರುವದುಂಟು. ಆ ಮಾತಿಗೆ ಏನೇನೂ ಇರಲಿಲ್ಲವೆಂದರ್ಥವಲ್ಲ. ಬಗೆಬಗೆಯ ಹೆಸರುಗಳೂ ಆಕಾರಗಳೂ ಇರಲಿಲ್ಲವೆಂದರ್ಥ. ಏನೂ ಇಲ್ಲದ್ದರಿಂದ ಇರುವದು ಹೇಗೆ ಹುಟ್ಟೀತು? ಜಗತ್ತು ಹುಟ್ಟುವದಕ್ಕೆ ಮುಂಚೆ ಇದ್ದ ಬ್ರಹ್ಮಕ್ಕೇ ಏನೂ ಇಲ್ಲದ್ದೆಂದು ಹೆಸರು. ಆ ಏನೂ ಇಲ್ಲದ್ದರಿಂದ, ಎಂದರೆ ಎದ್ದು ಕಾಣುವ ಹೆಸರುಗಳೂ ಆಕಾರಗಳೂ ಇಲ್ಲದ್ದರಿಂದ, ಹೆಸರುಗಳೂ ಆಕಾರಗಳೂ ಎದ್ದುಕೊಂಡವು. ಆದ್ದರಿಂದ ತಂದೆಯಿಂದ ಹುಟ್ಟಿದ ಮಗನು ತಂದೆಗಿಂತ ಬೇರೆಯಾಗಿರುವಂತೆ ಬ್ರಹ್ಮದಿಂದ ಹುಟ್ಟಿದ ಜಗತ್ತು ಬ್ರಹ್ಮಕ್ಕಿಂತ ಬೇರೆಯಾಗಿರುವದೆಂದು ತಿಳಿಯಬಾರದು. —(ತೈ ೨-೭)

ಮತ್ತೊಂದು ಕಡೆಯ ವಿವರವನ್ನು ನೋಡಿ. ನೀರಿಗಿಂತ ಬೇರೆಯಾಗಿ ನೊರೆಯೆಂಬ ಹೆಸರೂ ಆಕಾರವೂ ಉಂಟಾಗುವದಕ್ಕೆ ಮುಂಚೆ ಆ ನೊರೆಯು ನೀರೆಂದೇ ಕರೆಸಿಕೊಳ್ಳುತ್ತಿದ್ದು ಹೆಸರೂ ಆಕಾರವೂ ಉಂಟಾದಾಗ ನೀರು ಮತ್ತು ನೊರೆಯೆಂದು ಬೇರೆ ಬೇರೆ ಕರೆಸಿಕೊಳ್ಳುವದಷ್ಟೆ. ಜಗತ್ತು ಹೊರಬೀಳುವದಕ್ಕೆ ಮೊದಲು ಯಾವದೊಂದು ಹೆಸರೂ ಆಕಾರವೂ ಇಲ್ಲದೆ ಆತ್ಮ ಒಂದೇ ಇತ್ತು. ಈಗಲೂ ಅದೊಂದೇ ನಿಜವಾಗಿರುವದಾದರೂ ಮೊದಲು ಕಾಣಿಸದೆ ಬೀಜರೂಪವಾಗಿದ್ದ ಹೆಸರುಗಳೂ ಆಕಾರಗಳೂ ಮೊಳೆತು ಜಗತ್ತು ಈಗ ಅನೇಕವಾಗಿಯೂ ಕಾಣುತ್ತಿರುವದು. —(ಐ ೧-೧)

ಮಗದೊಂದು ಕಡೆಯ ವಿವರವನ್ನು ನೋಡಿ. ಮೊದಲು ಬೀಜರೂಪವಾಗಿದ್ದವುಗಳೇ ಬೇರೆಬೇರೆ ಸುಳ್ಳಾದ ಹೆಸರುಗಳನ್ನೂ ಆಕಾರಗಳನ್ನೂ ತಾಳುವವು. ಇಲ್ಲದ್ದು ಹೇಗೆ ಹುಟ್ಟೀತು? ಬಂಜೆಯ ಮಗನು ಇಲ್ಲದವನೆನ್ನಿಸಿಕೊಳ್ಳುವನಷ್ಟೆ. ಅವನು ನಿಜವಾಗಿಯೂ ಹುಟ್ಟುವದಿಲ್ಲ; ಸುಳ್ಳಾಗಿಯೂ ಹುಟ್ಟುವದಿಲ್ಲ. ಇಲ್ಲದವುಗಳೇ ಹುಟ್ಟಿದರೆ ನಮಗೆ ಬ್ರಹ್ಮವನ್ನು ಕಾಣುವ ದಾರಿಯೇ ಇಲ್ಲದಂತಾಗುವದು. ಇದ್ದವುಗಳೆ ಹುಟ್ಟುವದರಿಂದಲ್ಲವೆ ಅವು ಇದ್ದ ಬುಡವನ್ನು ನೋಡಹೋದರೆ ಅಲ್ಲಿ ಬ್ರಹ್ಮದರ್ಶನವಾಗುವದು? ಹಗ್ಗದಲ್ಲಿ ಹಾವು ಸುಳ್ಳಾಗಿ ಹುಟ್ಟುವದಷ್ಟೆ. ಹಗ್ಗದ ನಿಜವನ್ನರಿಯದ್ದರಿಂದ

ಹುಟ್ಟಿದ ಆ ಹಾವು ಹಗ್ಗದ ರೂಪದಲ್ಲಿ ಮೊದಲು ಇದ್ದದ್ದಾಗಿರುವದು. ಬುಡ ದಲ್ಲಿ ಆಧಾರವಿಲ್ಲದೆ ಹಗ್ಗದ ಹಾವುಗಳಾಗಲಿ ಬಿಸಿಲಗುದುರೆಗಳಾಗಲಿ ಎಲ್ಲಿಯೂ ಯಾರಿಗೂ ಕಾಣುವದಿಲ್ಲ. ಹಗ್ಗದಲ್ಲಿ ಹಾವು ಹುಟ್ಟುವದಕ್ಕೆ ಮುಂಚೆ ಆ ಹಾವು ಹಗ್ಗದ ರೂಪದಲ್ಲಿ ಇದ್ದದ್ದೇ ಆಗಿತ್ತು. ಹೀಗೆ ಜಗತ್ತು ಹುಟ್ಟುವ ಮುಂಚೆ ಅದು ಬೀಜಸ್ವರೂಪವಾದ ಬ್ರಹ್ಮದ ರೂಪದಲ್ಲಿ ಇತ್ತು. ನೀರಿ ನಲ್ಲಿ ಒಡಮೂಡಿದ ಸೂರ್ಯನಂತೆ ಮನೋರೂಪರಾದ ತನ್ನ ಜಾತಿಯ ಎಲ್ಲ ಜೀವರನ್ನೂ ತನ್ನ ಜಾತಿಯುಲ್ಲದ ಎಲ್ಲ ಜಡವಸ್ತುಗಳನ್ನೂ ಆ ಬ್ರಹ್ಮವು ಹುಟ್ಟಿಸುತ್ತದೆ. —(ಮಾಂ ೧-೬)

ಯಾವ ಹೆಸರೂ ಯಾವ ಆಕಾರವೂ ಇಲ್ಲದೆ ಇರುವ ಅತ್ಯಂತಸೂಕ್ಷ್ಮ ವಾದ ಬ್ರಹ್ಮದಿಂದ ಲೆಕ್ಕವಿಲ್ಲದಷ್ಟು ಹೆಸರುಗಳಿಂದಲೂ ಆಕಾರಗಳಿಂದಲೂ ತುಂಬಿ ಅತ್ಯಂತಸ್ಥೂಲವಾಗಿರುವ ಜಗತ್ತು ಹೇಗೆ ಹುಟ್ಟಿತೆಂದರೆ ಇದಕ್ಕೆ ದೃಷ್ಟಾಂತವಿದೆ. ಇದನ್ನು ಕಣ್ಣಿಗೆ ಕಟ್ಟಿದಂತೆ ನೋಡಬೇಕಾದರೆ ಮರಗ ಳಲ್ಲಿ ದೊಡ್ಡದಾದ ಆಲದ ಮರದ ಒಂದು ಬೀಜವನ್ನು ತಂದು ಅದನ್ನು ಕಣ್ಣಿಗೆ ಕಾಣಿಸದಂತಾಗುವಷ್ಟು ತುಂಡುಮಾಡು. ಕಣ್ಣಿಗೆ ಕಾಣದಂತಾದ ಆ ತುಂಡಿನಿಂದ ಎಷ್ಟೋ ದೊಡ್ಡ ರೆಂಬೆಗಳೂ ಕೊಂಬೆಗಳೂ ಎಲೆಗಳೂ ಹಣ್ಣುಗಳೂ ಉಳ್ಳ ಮರವು ಎದ್ದು ಕಾಣುವದುಂಟು. ಇದರಂತೆ ಅತ್ಯಂತ ಸೂಕ್ಷ್ಮವಾದ ಬ್ರಹ್ಮದಿಂದ ಅತ್ಯಂತಸ್ಥೂಲವಾಗಿ ಹೆಸರುಗಳೂ ಆಕಾರ ಗಳೂ ಉಳ್ಳ ಜಗತ್ತು ಹುಟ್ಟುವದೆಂದು ನಂಬು. ನಂಬಿಕೆ ಇದ್ದರೆ ಮಾತ್ರ ತಿಳಿ ಯಬೇಕೆಂಬ ವಿಷಯದಲ್ಲಿ ಸಮಾಧಾನ ಉಂಟಾಗುವದು —(ಛಾಂ ೬-೧೨)

ಜೀವರೂಪವಾದ ಮತ್ತು ಜಡರೂಪವಾದ ಈ ಜಗತ್ತು ದೈವಿಕಸಾಮ ರ್ಥ್ಯವುಳ್ಳ ಭೃಗು ಮೊದಲಾದ ಹಿಂದಿನ ಕಾಲದ ಏಳು ಮಹರ್ಷಿಗಳಿಂದ ಮತ್ತು ನಾಲ್ವರು ಮನುಗಳಿಂದ ಆದದ್ದೆಂದು ಹೇಳುವದೂ ಉಂಟು. ಅವ ರೆಲ್ಲ ಜಗತ್ತು ಹುಟ್ಟಿದ ಮೇಲೆ ಮೊದಮೊದಲು ಸಂಸಾರಧರ್ಮದಿಂದ, ಎಂದರೆ ಹೆಣ್ಣುಗಂಡುಗಳ ಕೂಡಿಕೆಯಿಂದ, ಅದನ್ನು ಬೆಳೆಸಿದವರು. ಆದ ದ್ದರಿಂದ ಅವರಿಂದ ಜಗತ್ತು ಹುಟ್ಟಿತೆನ್ನುವದು ಉಪಚಾರದ ಮಾತು. ಏಕೆಂ ದರೆ: ಆ ಮಹರ್ಷಿಗಳೂ ಮನುಗಳೂ ಬ್ರಹ್ಮನ ಬರೀ ಇಚ್ಛಾಮಾತ್ರದಿಂದ

ಹುಟ್ಟಿದವರು. ಹೀಗೆ ಬ್ರಹ್ಮವು ಅವರಿಗೂ ಮೂಲವಾದದ್ದು. ಆದ್ದರಿಂದ ಬ್ರಹ್ಮದಿಂದ ಜಗತ್ತು ಹುಟ್ಟಿತೆನ್ನುವುದೇ ಸರಿ. —(ಛ ೧೦-೬)

## ಬ್ರಹ್ಮವು ತಾನೆ ಜಗತ್ತಾದದ್ದು

ಒಳ್ಳೇದು. ಜಗತ್ತು ಬ್ರಹ್ಮದಿಂದ ಹುಟ್ಟುವುದಾದರೆ ಬ್ರಹ್ಮಕ್ಕೆ ಜಗತ್ತನ್ನು ಹುಟ್ಟಿಸುವ ಸಾಧನಗಳೇನಿದ್ದುವೆಂದು ತಿಳಿಯುವಿಚ್ಛೆಯುಂಟಾಗಬಹುದು. ಜಗತ್ತು ಹುಟ್ಟುವುದಕ್ಕೆ ಮುಂಚೆ ಬ್ರಹ್ಮಕ್ಕೆ ಎರಡನೆಯದೇನೇನೂ ಇರಲಿಲ್ಲವೆಂದು ಹಿಂದೆಯೇ ಹೇಳಿದ್ದಾಗಿರುವುದರಿಂದ ಸಾಧನಗಳೇ ಇಲ್ಲವೆಂದು ಮತ್ತೆ ಹೇಳಬೇಕಾದದ್ದೇ ಇಲ್ಲ. ಜಗತ್ತಿನ ಹುಟ್ಟು ತನಿಸಿದ್ರೆಯಿಂದ ಹುಟ್ಟುವ ಕನಸಿನ ಮತ್ತು ಎಚ್ಚರದ ಜಗತ್ತಿನ ಹುಟ್ಟಿನಂತೆಂದು ಹಿಂದೆ ಹೇಳಿರುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಜೀವರೂಪವೂ ಮತ್ತು ಜಡರೂಪವೂ ಆದ ಈ ಜಗತ್ತು ಬ್ರಹ್ಮಕ್ಕೆ ಹಗಲು ಬರುತ್ತಲೆ ರಾತ್ರಿಯ ತನಿಸಿದ್ರೆಯಿಂದ ಹೊರಬೀಳುತ್ತದೆ; ರಾತ್ರಿಯು ಬರುತ್ತಲೆ ಆ ತನಿಸಿದ್ರೆಗೇ ಹೋಗಿ ಅಡಗಿಕೊಳ್ಳುತ್ತದೆ. ಹೀಗೆ ಏಳುತ್ತ ಬೀಳುತ್ತ ಇರುವುದೆ ಅದರ ಹಣೆಯ ಬರಹ. ಮಾಡದೇ ಇರುವ ಕರ್ಮದ ಫಲಗಳು ಬಂದು ಗಂಟುಬೀಳದಂತೆಯೂ ಮಾಡಿದ ಕರ್ಮಗಳು ವ್ಯರ್ಥವಾಗದಂತೆಯೂ ಹಿಂದಿನ ಕಲ್ಪದಲ್ಲಿದ್ದ ಜಗತ್ತೇ ಕರ್ಮದ ಸುಳಿಯ ಸೆಳೆತಕ್ಕೆ ಸಿಕ್ಕಿ ಸಹಜವಾಗಿ ಮತ್ತೆಮತ್ತೆ ಹುಟ್ಟುತ್ತ ಹೋಗುತ್ತ ಇರುತ್ತದೆ. ಈ ಜಗತ್ತನ್ನು ಹಡೆಯುವ ಆ ನಿದ್ರಾಶಕ್ತಿಯೇ ಬ್ರಹ್ಮದ ಮಾಯಾಶಕ್ತಿ. ಇದರಲ್ಲಿ ಸತ್ತ್ವ, ರಜ, ತಮ-ಎಂಬ ಮೂರುಗುಣಗಳೂ ಸರಿಸಮವಾಗಿ ಸೇರಿರುವುವು. ಇದೇ ಪರಮಾತ್ಮಸ್ವರೂಪವು ನಮಗೆ ತಿಳಿಯಬರದಂತೆ ಮರೆಮಾಡಿರುವ ಪರದೆ. ಈ ಮಾಯೆಯ ಗುಣಗಳು ಎಚ್ಚರದಲ್ಲಿಯೂ ಕನಸಿನಲ್ಲಿಯೂ ಒಳತೋಟಿಯ ಕಡೆತಕ್ಕೆ ಸಿಕ್ಕಿದವುಗಳಾಗಿ ಹೆಸರುಗಳೂ ಆಕಾರಗಳೂ ಉಳ್ಳ ಸ್ಥೂಲರೂಪವನ್ನು ಪಡೆಯುವುವು. ಆದ್ದರಿಂದ ಆಗ ಈ ಸ್ಥೂಲರೂಪಗಳು ಪರಮಾತ್ಮಸ್ವರೂಪವನ್ನು ಮರೆಮಾಡಿರುವ ದಪ್ಪವಾದ ಪರದೆಗಳಾಗಿರುವುವು. ತನಿಸಿದ್ರೆಯಲ್ಲಿ ಅದು ಸೂಕ್ಷ್ಮರೂಪದಲ್ಲಿರುವುದರಿಂದ ತೆಳುವಾದ ಪರದೆಯೆನಿಸುವುದು.

ಪರಮಾತ್ಮನು ಈ ಮಾಯಾಶಕ್ತಿಯನ್ನು ಆಳುವವನಾಗಿದ್ದುಕೊಂಡು ತನ್ನ ಕಣ್ಣು ಸನ್ನೆಯಿಂದಲೇ ಅದರಿಂದ ಜಗತ್ತನ್ನು ಹೊರಗೆಡಹುತ್ತಾನೆ.

—(ಭ ೮-೧೮,೧೯; ೯-೭..೧೦)

ಜಗತ್ತು ಪ್ರಾಣಿಗಳ ಕರ್ಮದ ಸುಳಿಯ ಸೆಳೆತಕ್ಕೆ ಸಿಕ್ಕಿ ಹುಟ್ಟುವದೆಂದೂ ಬ್ರಹ್ಮದಿಂದ ಹುಟ್ಟುವದೆಂದೂ ಎರಡು ಮಾತೂ ಹೇಗೆ ಹೊಂದುವದೆಂದರೆ: ಜಗತ್ತಿನ ಹುಟ್ಟಿಗೆ ಕಾರಣವು ಕರ್ಮದ ಸುಳಿಯ ಸೆಳೆತವೇ ಸರಿ. ಆದರೆ ಅನೇಕವಾಗಿರುವ ಕರ್ಮಗಳಿಗೆ ಅವವುಗಳಿಗೆ ತಕ್ಕ ಅವಕಾಶವನ್ನು ಉಂಟುಮಾಡುವ ಯಜಮಾನಿಕೆಯು ಬ್ರಹ್ಮದ್ದು. ಹೀಗೆ ಅವೆರಡು ಮಾತೂ ಹೊಂದುವವು. ಬ್ರಹ್ಮವು ಜಗತ್ತನ್ನು ಹುಟ್ಟಿಸುವದಾದರೆ ನಾವು ಹುಟ್ಟಿಸಿದವುಗಳು ನಮ್ಮನ್ನು ಸೂತ್ರದ ಬೊಂಬೆಗಳಂತೆ ವಶಮಾಡಿಕೊಂಡು ಒಮ್ಮೆ ಅಳಿಸುತ್ತ ಒಮ್ಮೆ ನಗಿಸುತ್ತ ಆಡಿಸುವಂತೆ ಜಗತ್ತು ಬ್ರಹ್ಮದ ಸೂತ್ರವನ್ನು ಹಿಡಿದುಕೊಂಡು ಅದನ್ನು ಕುಣಿಸುವದೆಂದು ಮಾತ್ರ ತಿಳಿಯಬಾರದು. ಬ್ರಹ್ಮವು ಸಂಸಾರಿಗಳಂತೆ ಅಲ್ಲ. ಅದು ತಾನು ಹುಟ್ಟಿಸಿದ ಜಗತ್ತಿನ ಸೂತ್ರವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಜಗತ್ತನ್ನೇ ಆಡಿಸುತ್ತಿರುವದು. —(ಭ ೭-೧೨)

ಬ್ರಹ್ಮದಿಂದ ಜಗತ್ತು ಹುಟ್ಟಿತೆಂಬ ಮಾತನ್ನು ಒಪ್ಪಿಕೊಳ್ಳೋಣ. ಬ್ರಹ್ಮವು ಈ ಜಗತ್ತನ್ನು ಹೇಗೆ ಮತ್ತು ಏಕೆ ಹುಟ್ಟಿಸಿತು? ಇದನ್ನು ತಿಳಿಯುವ ಕುತೂಹಲವು ಮನಸ್ಸಿಗೆ ಸಹಜವಾಗಿದೆ. ಆದರೆ ನಿಜವನ್ನು ವಿಚಾರಮಾಡತಕ್ಕವರು ಜಗತ್ತಿನ ಹುಟ್ಟುವಿಕೆಯನ್ನು ಕುರಿತ ಒಣ ಮಾತುಗಳಿಗೆ ಮನಸ್ಸು ಹಾಕುವದಿಲ್ಲ. ಏಕೆಂದರೆ: ಇದರ ಹುಟ್ಟೇ ಸುಳ್ಳು. ಒಬ್ಬ ಮಾಯಗಾರನು ಮುಗಿಲ ಕಡೆಗೆ ದಾರವನ್ನೆಸೆದು ತಾನು ಕತ್ತಿಯನ್ನು ಹಿಡಿದುಕೊಂಡು ಅದರ ಮೇಲೆ ಹತ್ತಿ ಕಣ್ಣಿಗೆ ಕಾಣದಂತಾಗಿ ಮತ್ತೊಬ್ಬರ ಕತ್ತಿಯ ಪೆಟ್ಟಿನಿಂದ ತುಂಡುತುಂಡಾಗಿ ಕೆಳಗೆ ಬಿದ್ದು ಮತ್ತೆ ಏಳುವದನ್ನು ನೋಡುವವರಿಗೆ ಆ ಮಾಯೆಯ ನಿಜವನ್ನರಿಯಬೇಕೆಂಬ ಮನಸ್ಸಾಗುವದಿಲ್ಲ. ನಮ್ಮ ತನಿನಿದ್ರೆ, ಕನಸು-ಮೊದಲಾದವುಗಳೆಲ್ಲ ಮಾಯಾವಿಯು ಮೇಲಕ್ಕೆಸೆದ ದಾರದಂತೆ. ಆ ತನಿನಿದ್ರೆ, ಕನಸು-ಮೊದಲಾದವುಗಳ ಅನುಭವಗಾರನು ಆ ನೂಲೇ

ಣಿಯ ಮೇಲೆ ಹತ್ತಿದ ಮಾಯಗಾರನಂತೆ. ನಿಜವಾದ ಮಾಯಾವಿಯು ಆ ದಾರಕ್ಕಿಂತ ಮತ್ತು ದಾರದಮೇಲೆ ಹತ್ತಿದವನಿಗಿಂತ ಬೇರೆಯಾಗಿರುವನು. ಅವನು ನೆಲದ ಮೇಲಿದ್ದು ಕಣ್ಣುಕಟ್ಟಿನಿಂದ ತನ್ನನ್ನು ಕಾಣಿಸಿಕೊಳ್ಳದೆ ಇರುವಂತೆ ಬ್ರಹ್ಮವು ಬೇರೆ ಇರುವದು. ಸಂಸಾರದ ಒದ್ದಾಟಗಳನ್ನು ಕಳೆದುಕೊಳ್ಳಬೇಕೆನ್ನುವವರಿಗೆ ಆ ಬ್ರಹ್ಮದ ಮೇಲೆ ಆದರವೇ ಹೊರತು ವ್ಯರ್ಥವಾದ ಜಗತ್ತಿನ ಹುಟ್ಟಿನ ವಿಚಾರದಲ್ಲಿ ಆದರವಿಲ್ಲ. ಜಗತ್ತಿನ ಹುಟ್ಟಿನ ವಿಚಾರವನ್ನು ಹೊಂದುಗಡೆಯಾಗಿ ಮಾಡಿಕೊಂಡು ತಿಳಿಯಬೇಕೆನ್ನುವವರಲ್ಲಿ ಕೆಲವರು ಜಗತ್ತು ಬ್ರಹ್ಮದ ಬೆಳವಣಿಗೆಯೆನ್ನುವರು ; ಇನ್ನು ಕೆಲವರು ಅದನ್ನು ಮಾಯೆಯ ಮತ್ತು ಕನಸಿನ ಹುಟ್ಟಿನಂತೆ ಎನ್ನುವರು ; ಮತ್ತೆ ಕೆಲವರು ಅದು ಮನಸ್ಸಿಗೆ ಬಂದದ್ದೆಲ್ಲ ನಡೆದು ಹೋಗುವ ಮಹಿಮೆಯುಳ್ಳ ಬ್ರಹ್ಮದ ಇಚ್ಛೆಯ ಹೊರತು ಬೇರೆ ಇಲ್ಲವೆನ್ನುವರು; ಬೇರೆ ಕೆಲವರು ಹೊರಬೀಳುವ ಕಾಲ ಬಂದು ಹೊರಬಿತ್ತೆನ್ನುವರು; ಸುಖಕ್ಕಾಗಿ ಎಂದೂ ಆಟಕ್ಕಾಗಿ ಎಂದೂ ಕೆಲವರ ಅಭಿಪ್ರಾಯ. ಎಲ್ಲ ಬಯಕೆಗಳೂ ತೀರಿರುವವನಿಗೆ ಯಾವ ಬಯಕೆಯನ್ನು ಹೇಳುವದಕ್ಕಾದೀತು? ಜಗತ್ತನ್ನು ಹುಟ್ಟಿಸುವದು ಬ್ರಹ್ಮದ ಹುಟ್ಟುಗುಣವೆಂದು ಮಾತ್ರ ಸಮಾಧಾನಮಾಡಿಕೊಳ್ಳಬೇಕಾಗುವದು. ಹಗ್ಗ ಮೊದಲಾದವುಗಳಲ್ಲಿ ಅದರ ನಿಜವನ್ನರಿಯದಿರುವದರ ಹೊರತು ಹಾವು ಮೊದಲಾದವು ಕಾಣುವದಕ್ಕೆ ಕಾರಣವೇನಿದೆ?

—(ಮಾಂ ೧-೭..೯)

"ಪ್ರಯೋಜನವಿಲ್ಲದೆ ಎಂಥ ದಡ್ಡರೂ ಎಂಥ ಸಣ್ಣ ಕೆಲಸವನ್ನೂ ಮಾಡದಿರುವಾಗ ಎಲ್ಲವನ್ನೂ ಬಲ್ಲ ಈಶ್ವರನು ಇಂಥ ದೊಡ್ಡ ಜಗತ್ತನ್ನು ಹುಟ್ಟಿಸಿದ್ದಕ್ಕೆ ಏನಾದರೂ ಪ್ರಯೋಜನವಿರಬೇಕೆಂದು ಹೇಳಹೋದರೆ ಅವನಿನ್ನೂ ತೃಪ್ತನಲ್ಲವೆನ್ನಬೇಕಾಗುವದು. ಏನೂ ಪ್ರಯೋಜನವಿಲ್ಲವೆಂದರೆ ಹುಟ್ಟಿಸುವ ಮನಸ್ಸಾಗುವದಕ್ಕೇ ದಾರಿ ಇಲ್ಲ. ವಿವೇಕಪೂರ್ವಕವಾದ ವಿಚಾರವೇನೂ ಇಲ್ಲದೆ ಮಾಡಿದನೆಂದರೆ ಅವನು ಎಲ್ಲವನ್ನೂ ಬಲ್ಲವನೆನಿಸುವದಿಲ್ಲ." ಎಂದು ಆಕ್ಷೇಪದ ಸಾಲುಗಳನ್ನೆಬ್ಬಿಸಬಹುದು. ಇವಕ್ಕೆ ಬಲವಿಲ್ಲ. ಲೋಕದಲ್ಲಿ ತೃಪ್ತರಾದವರು ಪ್ರಯೋಜನವನ್ನು ನೋಡದೆ ಲೀಲೆಗಾಗಿ ಮಾಡುವ

ದುಂಟು. ಉಚ್ಛ್ವಾಸನಿಶ್ವಾಸಗಳು ಪ್ರಯೋಜನವನ್ನು ನೋಡದೆ ಬರೀ ತಮ್ಮ ಹುಟ್ಟುಗುಣದಂತೆ ನಡೆಯುತ್ತಿರುವದುಂಟು. ಹಾಗೆ ಜಗತ್ತಿನ ಹುಟ್ಟು ಈಶ್ವರನ ಲೀಲೆ. ಈ ಜಗತ್ತಿನ ರಚನೆ ನಮಗೆ ದೊಡ್ಡದೆನಿಸಿದರೂ ಈಶ್ವರನಿಗೇನೂ ದೊಡ್ಡದಲ್ಲ. ಅವನ ಶಕ್ತಿ ಬಹು ಹೆಚ್ಚಿನದು. ಜಗತ್ತೆಂಬುದು ಪರಮಾತ್ಮನ ಸ್ವರೂಪವನ್ನರಿಯದ್ದರಿಂದ ಸುಮ್ಮನೆ ಎದ್ದುಕೊಂಡದ್ದೆಂಬುದನ್ನೂ ಮರೆಯಬಾರದು. —(ಸು. ೨-೧-೧೧)

“ಈಶ್ವರನು ತನ್ನ ಲೀಲೆಗಾಗಿ ಮಾಡಿರುವ ಜಗತ್ತಿನಲ್ಲಿ ಕೆಲವರನ್ನು ಸುಖಿಗಳನ್ನಾಗಿಯೂ ಕೆಲವರನ್ನು ದುಃಖಿಗಳನ್ನಾಗಿಯೂ ಕೆಲವರನ್ನು ನಡುತರದವರನ್ನಾಗಿಯೂ ಮಾಡಿರುವದನ್ನು ನೋಡಿದರೆ ಅವನಲ್ಲಿ ಪ್ರೀತಿ, ಹಗೆತನ ಮೊದಲಾದ ಹೊಲಸು ಇರುವದೆನ್ನಬೇಕಾಗುವದು. ಪ್ರಲಯವನ್ನು ಮಾಡುವದರಿಂದಂತು ಅವನು ಬಹು ಕ್ರೂರನೆನಿಸುವನು.” ಎಂಬದೊಂದಾಕ್ಷೇಪವೇಳಬಹುದು. ಅವನು ಬೇರೆ ಕಾರಣವೇನೂ ಇಲ್ಲದೆ ತಾನೆ ಹೀಗೆ ಮಾಡಿದ್ದರೆ ಆ ದೋಷಗಳು ಅವನವಾಗುತ್ತಿದ್ದವು. ಹಾಗಿಲ್ಲ. ಹುಟ್ಟುವ ಪ್ರಾಣಿಗಳ ಪಾಪಗಳನ್ನೂ ಪುಣ್ಯಗಳನ್ನೂ ಲೆಕ್ಕಕ್ಕಿಟ್ಟುಕೊಂಡು ಅದಕ್ಕೆ ತಕ್ಕಹಾಗೆ ಎಲ್ಲವನ್ನೂ ಹುಟ್ಟಿಸುವದರಿಂದ ಅವನದೇನೂ ತಪ್ಪಿಲ್ಲ. ಈಶ್ವರನು ಮಳೆಯಂತೆ. ಮಳೆಯು ಎಲ್ಲ ಸಸಿಗಳ ಬೆಳೆಗೂ ಸಾಮಾನ್ಯವಾದ ಕಾರಣವಾದರೂ ಒಂದು ಬತ್ತವೂ ಇನ್ನೊಂದು ಗೋಧಿಯೂ ಮತ್ತೊಂದು ರಾಗಿಯೂ ಆಗುವದಕ್ಕೆ ಆಯಾ ಬೀಜಗಳ ಶಕ್ತಿಯೇ ಕಾರಣ. ಹಾಗೆ ಎಲ್ಲವನ್ನೂ ಹುಟ್ಟಿಸುವವನು ಈಶ್ವರನಾದರೂ ಅವರವರ ಮೇಲುಕೀಳುಗಳಿಗೆ ಅವರವರ ಪಾಪಪುಣ್ಯಗಳು ಕಾರಣ. ಮುಂದಮುಂದಣ ಸೃಷ್ಟಿಗಳಿಗೆ ಪಾಪಪುಣ್ಯಗಳು ಕಾರಣಗಳಾಗಬಹುವೇ ಹೊರತು ಮೊದಲನೆ ಸೃಷ್ಟಿಯಲ್ಲಿ ಕರ್ಮವೇ ಇಲ್ಲದ್ದರಿಂದ ಮೇಲುಕೀಳುಗಳಿಗೆ ಕಾರಣವಿಲ್ಲವೆಂದರೆ ಈ ಸೃಷ್ಟಿಗೆ ಮೊದಲೆಂಬುದೇ ಇಲ್ಲ. ಮೊದಲೆಂಬುದಿರುವದಾದರೆ ಕಾರಣವಿಲ್ಲದೆ ಹುಟ್ಟುವಾಗ ಮುಕ್ತರೂ ಹುಟ್ಟಬೇಕಾದೀತು. ಮತ್ತು ಅವರಿಗೆ ಮಾಡದೆ ಇದ್ದ ಕರ್ಮಗಳು ಗಂಟುಬೀಳಬೇಕಾದೀತು. ಹಾಗಾಗುವದಿಲ್ಲ. ಈಶ್ವರನು ಪಾಪಪುಣ್ಯಗಳಿಗೆ ತಕ್ಕ ಹಾಗೆ ಮೇಲುಕೀಳುಗಳನ್ನುಂಟುಮಾಡುತ್ತಾನೆ. —(ಸೂ ೨-೧-೧೨)

'ಬ್ರಹ್ಮವು ಜಗತ್ತನ್ನು ಹುಟ್ಟಿಸುವದಾಗಲಿ. ಅದಕ್ಕೆ ಸಾಧನವೇನೂ ಇಲ್ಲವೆಂಬ ಮಾತನ್ನು ಇನ್ನಷ್ಟು ಕಡೆತಕ್ಕೆ ಹಚ್ಚಿ ನೋಡಬೇಕಾಗಿದೆ. ಏಕೆಂದರೆ: ಗಡಿಗೆಯೆಂಬುದೊಂದು ಕಂಡಾಗ ಹೊರಗಿದ್ದುಕೊಂಡು ಅದನ್ನು ಮಾಡಿದ ಕುಂಬಾರನೊಬ್ಬನು ಮತ್ತು ತಾನೆ ಅದಾಗಿ ರೂಪುಗೊಂಡ ಮಣ್ಣೊಂದು—ಹೀಗೆ ಎರಡು ಕಾರಣಗಳು ತೋರುತ್ತವೆ. ಜಗತ್ತಿಗೂ ಹೀಗೆ ಎರಡು ಕಾರಣಗಳು ಬೇಕು. ಚೇತನವಾದ ಬ್ರಹ್ಮವು ಜಗತ್ತನ್ನು ಹೊರಗಿದ್ದುಕೊಂಡು ಮಾಡಿದ್ದಾಗಬಹುದು. ಆದ್ದರಿಂದ ತಾನೇ ಜಗತ್ತಾಗಿ ರೂಪುಗೊಂಡ ಕಾರಣವು ಇನ್ನೊಂದು ಬೇಕಾಗುವದು.' ಎಂದು ತೋರಬಹುದು. ಬೇರೆ ಸಾಧನವೇನೇನೂ ಬೇಕಿಲ್ಲ. ಬ್ರಹ್ಮವು ತಾನೆ ಜಗತ್ತಾಗಿರುವದು. ಇನ್ನೊಂದು ಸಾಧನವನ್ನು ಬಯಸದೆ ಹುಟ್ಟಿರುವದಕ್ಕೆ ದೃಷ್ಟಾಂತಗಳಿವೆ. ರೇಷ್ಮೆ ಹುಳು ತನ್ನ ಶರೀರಕ್ಕಿಂತ ಬೇರೆಯಲ್ಲದ ದಾರಗಳನ್ನು ಹೊರಗೆಡಹುತ್ತದೆ; ಆಮೇಲೆ ಮತ್ತೆ ಅವುಗಳನ್ನು ತನ್ನೊಳಕ್ಕೆ ಸೆಳೆದುಕೊಂಡು ತನ್ನನ್ನಾಗಿಯೇ ಮಾಡುತ್ತದೆ. ನೆಲದ ಮೇಲೆ ಬಿದ್ದ ಗಿಡಮರಗಳ ಬೀಜಗಳು ತಮಗಿಂತ ಬೇರೆಯಲ್ಲದ ಗಿಡಮರಗಳನ್ನು ಹೊರಗೆಡಹುತ್ತವೆ. ಬದುಕಿರುವ ಪ್ರಾಣಿಯಿಂದ ಬೇರೆ ಸಾಧನವಿಲ್ಲದೆ ತಲೇ ಕೂದಲೂ ಮೈಕೂದಲೂ ಹೊರಬೀಳುತ್ತವೆ. ಇದರಂತೆ ಬ್ರಹ್ಮದಿಂದ ಬೇರೆ ಸಾಧನವಿಲ್ಲದೆ ಜಗತ್ತು ಹುಟ್ಟುತ್ತದೆ. —(ಮುಂ ೧-೧-೭)

ಹಗ್ಗ ಮೊದಲಾದವುಗಳು ಹಾವು ಮೊದಲಾದವುಗಳನ್ನು ಹುಟ್ಟಿಸುವಂತೆ ಬ್ರಹ್ಮವು ತಾನೆ ತನ್ನನ್ನೆ ಬಗೆಬಗೆಯಾಗಿ ಹುಟ್ಟುಗಟ್ಟಿ ತಾನೆ ಅವುಗಳನ್ನು ತಿಳಿಯುವದು. --(ಮಾಂ ೨-೧೨)

ಸಂಸಾರಿಗಳಿಗೆ ತಾವು ಮಾಡುವ ಪುಣ್ಯ ಮೊದಲಾದವುಗಳಿಗಾಗಿ ತಮಗಿಂತ ಬೇರೆಯಾದ ಸಾಧನಗಳ ಬಯಕೆ ಇರುವಂತೆ ಬ್ರಹ್ಮಕ್ಕೆ ಇಲ್ಲ. ಅದು ತಾನೆ ಬಹು ಬಗೆಯಾಗುವೆನೆಂದು ಯೋಚಿಸಿತು. ಬಹು ಬಗೆಯಾಗುವದೆಂದರೆ ತಂದೆಯು ತನಗಿಂತ ಬೇರೆಯಾದ ಮಗನಾಗುವಂತೆ ಬಹುಬಗೆಯಲ್ಲ; ತನ್ನಲ್ಲಿಯೇ ಮರೆಗೊಂಡಿರುವ ಹೆಸರುಗಳನ್ನೂ ಆಕಾರಗಳನ್ನೂ ಹೊರಗೆಡಹುವದು. ಆದ್ದರಿಂದ ಬ್ರಹ್ಮವು ತಾನೆ ಇದಾಗಿಯೂ ಅದಾಗಿಯೂ ತನ್ನನ್ನೆ ಜಗತ್ತಾಗಿ ಮಾಡಿತು. —(ತೈ ೨-೬; ಛಾಂ ೬-೨-೩)

ಹಾಗೆ ಹೇಳುವದಕ್ಕೆ ಇನ್ನೊಂದು ಕಾರಣವೂ ಉಂಟು. 'ಒಂದು ಮಣ್ಣುಮುದ್ದೆಯನ್ನರಿತರೆ ಅದರಿಂದಾಗುವ ಕುಡಿಕೆ, ಮಡಕೆ--ಮೊದಲಾದವುಗಳೆಲ್ಲ ಅರಿತಂತಾಗುವಂತೆಯೂ ಒಂದು ಬಂಗಾರದ ಗಟ್ಟಿಯನ್ನು ತಿಳಿದರೆ ಅದರಿಂದಾಗುವ ಬಳೆ, ವಂಕಿ-ಮೊದಲಾದವುಗಳನ್ನೆಲ್ಲ ತಿಳಿದಂತಾಗುವಂತೆಯೂ ಒಂದು ಉಗುರ ಉಳಿಯ ವಿಷಯವು ಗೊತ್ತಾದರೆ ಕಬ್ಬಿಣದಿಂದಾದವುಗಳೆಲ್ಲ ಗೊತ್ತಾಗುವಂತೆಯೂ ಯಾವ ಒಂದನ್ನರಿತರೆ ಕೇಳದೆ ಇದ್ದದ್ದನ್ನೆಲ್ಲ ಕೇಳಿದಂತೆಯೂ ಮನಸ್ಸಿಗೆ ಹೊಳೆಯದೆ ಇದ್ದದ್ದೆಲ್ಲ ಹೊಳೆದಂತೆಯೂ ತಿಳಿಯದೆ ಇದ್ದದ್ದೆಲ್ಲ ತಿಳಿದಂತೆಯೂ ಆಗುವದೊ ಅಂಥ ಬ್ರಹ್ಮದ ವಿಷಯವನ್ನು ಕೇಳಿ ತಿಳಿದಿದ್ದೀಯೊ?' ಎಂದು ಆರುಣಿಯೆಂಬ ತಂದೆಯು ಶ್ವೇತಕೇತುವೆಂಬ ಮಗನನ್ನು ಪ್ರಶ್ನೆ ಮಾಡಿ ಅವನಿಗೆ ಅದು ತಿಳಿಯದಿರುವದನ್ನು ಕಂಡು ಅದು ನಿನ್ನ ಆತ್ಮನಾದ ಬ್ರಹ್ಮವೆಂದು ತಾನೆ ಹೇಳಿದ್ದಾನೆ. ಬ್ರಹ್ಮ ಒಂದನ್ನು ತಿಳಿದರೆ ಎಲ್ಲವೂ ತಿಳಿದಂತಾಗಬೇಕಾದರೆ ಆ ಬ್ರಹ್ಮವು ತಾನೆ ಎಲ್ಲವೂ ಆಗಿರಬೇಕು. ಬ್ರಹ್ಮವು ಹೊರಗಿದ್ದು ಮಾಡಿದ್ದಾಗಿದ್ದರೆ ಆ ಬ್ರಹ್ಮವನ್ನರಿತಾಗ ಹೊರಗೆ ಆಗಿರುವದನ್ನು ಅರಿತಂತಾಗುವದಿಲ್ಲ. ಬಡಗಿಯು ಹೊರಗಿದ್ದು ಉಪ್ಪರಿಗೆಯನ್ನು ಮಾಡುತ್ತಾನಷ್ಟೆ. ಆ ಬಡಗಿಯನ್ನರಿತರೆ ಉಪ್ಪರಿಗೆಯನ್ನರಿತಂತೆ ಆಗುವದಿಲ್ಲ. ಬ್ರಹ್ಮವನ್ನರಿತರೆ ಎಲ್ಲವನ್ನೂ ಅರಿತಂತಾಗಬೇಕಾದ್ದರಿಂದ ಬ್ರಹ್ಮವು ತಾನೆ ಜಗತ್ತಾಗಿರುವದು. ಲೋಕದಲ್ಲಿ ಒಂದರಿಂದ ಬೇರೊಂದು ಹುಟ್ಟಿದ್ದ ಸಂದರ್ಭದಲ್ಲಿ ಒಂದನ್ನರಿತರೆ ಬೇರೊಂದು ತಿಳಿಯಲಾರದು. ಬ್ರಹ್ಮದಿಂದ ಜಗತ್ತಾಗಿರುವದು ಹಾಗಲ್ಲ. ಜಗತ್ತೆನಿಸಿಕೊಳ್ಳುವ ಬೇರೆ ಬೇರೆ ಆಕಾರಗಳು ಬರೀ ಮಾತು ಮಾತ್ರ. ಗಡಿಗೆಯೆಂಬ ಮಾತನ್ನು ಬಿಟ್ಟು ಗಡಿಗೆಯೆಂಬ ವಸ್ತು ಒಂದಿಲ್ಲ. ಗಡಿಗೆಯೆಂಬ ಮಾತನ್ನು ಬಿಟ್ಟರೆ ಅದು ಮಣ್ಣು. ಅದರಂತೆ ಜಗತ್ತಿನ ರೂಪವನ್ನು ಮನಸ್ಸಿನಿಂದ ತಳ್ಳಿಹಾಕಿದರೆ ಅದು ಬ್ರಹ್ಮವೆ. ಆದ್ದರಿಂದ ಬ್ರಹ್ಮವು ತಾನೆ ಜಗತ್ತಾಗಿರುವದು.

—(ಛಾಂ ೬-೧-೩..೬)

ಇನ್ನೊಂದು ಕಡೆಯೂ ಹೀಗೆಯೇ ವಿಚಾರವು ಹೊರಟಿರುವದು. ಅಲ್ಲಿ ಒಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವಂತೆ ಜಗತ್ತಿನ ಬಗೆಬಗೆಗಳ

ಗೆಲ್ಲ ತಾಯಿಬೇರು ಯಾವದೆಂದು ಪ್ರಶ್ನೆ ಹೊರಟಿದೆ. ಬೀಜಗಳು ತಾನೇ ಮೊಳಕೆಯಾಗುವಂತೆ ಬ್ರಹ್ಮವು ತಾನೆ ಜಗತ್ತಾಗಿರುವದೆಂದು ದೃಷ್ಟಾಂತದೊಡನೆ ಉತ್ತರವು ಬಂದಿದೆ. ಇದರಿಂದಲೂ ಬ್ರಹ್ಮವು ತಾನೆ ಜಗತ್ತಾಯಿತೆಂದು ಗೊತ್ತಾಗುವದು —(ಮುಂ ೧-೧-೭)

ಇನ್ನೊಂದು ಕಾರಣವೂ ಉಂಟು. ಒಂದು ಇನ್ನೊಂದು ರೂಪನ್ನು ತಾಳಿದರೆ ಆ ಇನ್ನೊಂದು ರೂಪು ಹೋಗುತ್ತಲೆ ಅದು ಮೊದಲಿನದಾಗಿ ತನ್ನಲ್ಲಿಯೇ ಆ ಇನ್ನೊಂದು ರೂಪನ್ನು ಅಡಗಿಸಿಕೊಂಡದ್ದಾಗುವದು. ಮಣ್ಣು ಮಡಕೆಯ ರೂಪನ್ನು ತಾಳಿದರೆ ಆ ಮಡಕೆಯೊಡೆದು ಪುಡಿಪುಡಿಯಾಗಿ ಮಡಕೆಯೆಂಬ ವ್ಯವಹಾರವು ಹೋಗುತ್ತಲೆ ಅದು ಮಣ್ಣೇ ಆಗಿ ಮಡಕೆಯನ್ನು ತನ್ನಲ್ಲಿ ಅಡಗಿಸಿಕೊಂಡದ್ದಾಗುವದು. ಇದರಂತೆ ಈ ಜಗತ್ತಿನ ಬಗೆಬಗೆಯ ಆಕಾರಗಳೆಲ್ಲ ಕೊನೆಗೆ ಬ್ರಹ್ಮದಲ್ಲಿ ಅಡಗುವವೆಂದಿರುವದರಿಂದ ಈ ಆಕಾರಗಳೆಲ್ಲ ಬ್ರಹ್ಮದಿಂದಲೆ ಹೊರಹೊಮ್ಮಿದವುಗಳಾಗಿರುವವು. ಆದ್ದರಿಂದ ಬ್ರಹ್ಮವು ತಾನೆ ಜಗತ್ತಾಗಿರುವದು. —(ಛಾಂ ೧-೯-೧)

ಯೋಚನೆ ಮಾಡಿ ಮಾಡುವ ಕುಂಬಾರ ಮೊದಲಾದವರು ತಾವೆ ಗಡಿಗೆ ಮೊದಲಾದ ಬಗೆಬಗೆಗಳಾದದ್ದು ಲೋಕದಲ್ಲ ಎಲ್ಲಿಯೂ ಕಂಡಿಲ್ಲವೆಂಬ ಕಾರಣದ ಮೇಲೆ ಯೋಚನೆಮಾಡಿ ಜಗತ್ತನ್ನು ಮಾಡಿದ ಬ್ರಹ್ಮವು ತಾನೆ ಜಗತ್ತಾಗಿರಲಾರದೆಂದು ಊಹಿಸುವದಕ್ಕೆ ಹೋಗಬಾರದು. ಬ್ರಹ್ಮವು ತಾನೆ ಜಗತ್ತಾಗಿರಬೇಕೆಂದು ನಾವು ಊಹಿಸಿ ಹೇಳುವದಾಗಿದ್ದರೆ ಹಾಗೆ ಲೋಕದಲ್ಲಿ ಕಂಡಿರುವ ದೃಷ್ಟಾಂತವನ್ನು ಹೇಳಬೇಕು. ಲೋಕದಲ್ಲಿ ಇದನ್ನು ನಾವು ಕಾಣಬೇಕಾದದ್ದಿಲ್ಲ. ಇದು ವೇದದ ಆಧಾರದಿಂದ ಹೇಳುವ ಮಾತು. —(ಸೂ ೧-೪-೭)

ಬ್ರಹ್ಮವು ತಾನೆ ಜಗತ್ತಾಯಿತೆಂದರೆ ಚೇತನವಾದ ಮತ್ತು ಶುದ್ಧವಾದ ಬ್ರಹ್ಮವು ಜಡವಾದ ಮತ್ತು ಅಶುದ್ಧವಾದ ಜಗತ್ತಿನ ರೂಪವನ್ನು ಹೇಗೆ ಪಡೆಯಿತೆಂದೊಂದಾಕ್ಷೇಪವೇಳುವದು. ಚೇತನದಿಂದ ಚೇತನವೇ ಮತ್ತು ಜಡದಿಂದ ಜಡವೇ ಹುಟ್ಟಬೇಕೆಂಬ ನಿಯಮವೇನೂ ಇಲ್ಲ. ಚೇತನರಾದ ಪ್ರಾಣಿಗಳಿಂದ ಜಡಗಳಾದ ಕೂದಲುಗಳು, ಉಗುರುಗಳು,

ಮೊದಲಾದವೂ ಹುಟ್ಟುವದುಂಟು. ಜಡಗಳಾದ ಸಗಣಿ ಮೊದಲಾದವುಗಳಿಂದ ಚೇತನಗಳಾದ ಚೇಳು ಮೊದಲಾದವುಗಳೂ ಹುಟ್ಟುವದುಂಟು. ಇನ್ನು ಚೇತನರಾದ ಪ್ರಾಣಿಗಳ ಜಡವಾದ ಶರೀರದಿಂದ ಜಡವಾದ ಕೂದಲು ಮೊದಲಾದವು ಹುಟ್ಟಿತೆಂದೂ ಜಡಗಳಾದ ಸಗಣಿ ಮೊದಲಾದವುಗಳಿಂದ ಚೇತನಗಳಾದ ಚೇಳು ಮೊದಲಾದವುಗಳ ಜಡವಾದ ಶರೀರವು ಮಾತ್ರ ಹುಟ್ಟಿತೆಂದೂ ಹೇಳಿದರೂ ಜಡಗಳಲ್ಲಿ ಕೆಲವು ಚೇತನಕ್ಕೆ ಮನೆಯಾಗುವವೆಂದೂ ಕೆಲವು ಹಾಗಿಲ್ಲವೆಂದೂ ಭೇದವಿದ್ದೇ ಇರುವದು. ಪ್ರಾಣಿಗಳಲ್ಲಿರುವ ಪೃಥ್ವೀತತ್ತ್ವ ಮೊದಲಾದ ಸ್ವಭಾವವು ಕೂದಲುಗಳಲ್ಲಿಯೂ ಉಗುರುಗಳಲ್ಲಿಯೂ ಇಳಿದು ಬಂದಿರುವದೆಂದೂ ಸಗಣಿಯಲ್ಲಿರುವ ಪೃಥ್ವೀತತ್ತ್ವ ಮೊದಲಾದ ಸ್ವಭಾವವು ಚೇಳುಗಳ ಶರೀರದಲ್ಲಿ ಇಳಿದು ಬಂದಿರುವದೆಂದೂ ಹೇಳಹೋದರೆ ಅದರಂತೆ ಬ್ರಹ್ಮಸ್ವಭಾವವು ಜಗತ್ತಿನಲ್ಲಿ ಇಳಿದು ಬಂದಿರುವದು. ಜಗತ್ತಿನಲ್ಲಿ 'ಇದೆ, ಇದೆ' ಎಂದು ಹೇಳಿಸಿಕೊಳ್ಳುವದು ಬ್ರಹ್ಮದ ಸ್ವಭಾವ. —(ಸೂ ೨-೧-೩)

ಬ್ರಹ್ಮವು ತಾನೆ ಅಶುದ್ಧಿ ಮೊದಲಾದ ಧರ್ಮವುಳ್ಳ ಜಗತ್ತಾದರೆ ಪ್ರಲಯದಲ್ಲಿ ಜಗತ್ತು ಬ್ರಹ್ಮದಲ್ಲಿ ಅಡಗಿದಾಗ ಆ ಹೊಲಸು ಬ್ರಹ್ಮಕ್ಕೆ ಹತ್ತುವದೆಂದೂ ಪ್ರಲಯದಲ್ಲಿ ಎಲ್ಲವೂ ಒಂದಾಗಿ ಬಿಡುವದರಿಂದ ಮತ್ತೆ ಹಿಂದಿನಂತೆ ಭೇದಗಳು ಹುಟ್ಟುವದಕ್ಕೆ ದಾರಿ ಇಲ್ಲವಾಗುವದೆಂದೂ ಹಾಗೆ ದಾರಿ ಇಲ್ಲದಿದ್ದರೂ ಹುಟ್ಟುವದಾದರೆ ಮುಕ್ತರೂ ಮತ್ತೆ ಹುಟ್ಟಬೇಕಾಗುವದೆಂದೂ ಮತ್ತೊಂದಾಕ್ಷೇಪ. ಒಂದರಿಂದಾದ ಇನ್ನೊಂದು ಆ ಒಂದರಲ್ಲಿ ಅಡಗಿದಾಗ ಇನ್ನೊಂದರ ಧರ್ಮಗಳು ಆ ಒಂದಕ್ಕೆ ಹತ್ತಿದ ದೃಷ್ಟಾಂತವೇ ಇಲ್ಲ. ಜಗತ್ತು ತನ್ನಲ್ಲಿ ಅಡಗಿದಾಗ ಬ್ರಹ್ಮವು ಹೊಲಸಾಗಬೇಕಾದದ್ದಿಲ್ಲ. ಗಡಿಗೆಯು ಪುಡಿಯಾಗಿ ಮಣ್ಣಿನಲ್ಲಿ ಅಡಗಿದಾಗ ಗಡಿಗೆಯ ದೊಡ್ಡ ಹೊಟ್ಟೆ ಮೊದಲಾದ ಧರ್ಮಗಳು ಮಣ್ಣಿಗೆ ಬಂದದ್ದು ಎಲ್ಲಿಯೂ ಕಂಡಿಲ್ಲ. ಮಣ್ಣಿನಲ್ಲಿ ಗಡಿಗೆಯ ಧರ್ಮಗಳಿರುವವೆಂದರೆ ಗಡಿಗೆಯು ಮಣ್ಣಲ್ಲಿ ಒಂದಾಗಿಲ್ಲವೆಂದೇ ಹೇಳಬೇಕು. ಹೀಗೆ ಒಂದರ ಧರ್ಮವು ಇನ್ನೊಂದಕ್ಕೆ ಕಲೆಯುವದಕ್ಕೆ ಪ್ರಲಯದ ತನಕ ಏಕೆ? ಈಗಲೂ ಬ್ರಹ್ಮ ಮತ್ತು ಜಗತ್ತು ಎಂಬೆರಡೂ

ಒಂದಾಗಿಯೇ ಇರುವವು. ಅಶುದ್ಧಿ ಮೊದಲಾದ ಧರ್ಮವುಳ್ಳ ಜಗತ್ತು ತನ್ನೊಳಗೆ ಬಂದು ಕೂಡಿಕೊಂಡಾಗ ಬ್ರಹ್ಮಕ್ಕೆ ಆ ಹೊಲಸು ಹತ್ತದೆ ಇರುವವಕ್ಕೆ ಜಗತ್ತೂ ಮತ್ತು ಅವರ ಧರ್ಮಗಳೂ ಬ್ರಹ್ಮನ ಅರಿವಿಲ್ಲದ್ದರಿಂದ ಸುಳ್ಳಾಗಿ ತಲೆ ಎತ್ತಿಕೊಂಡವುಗಳಾಗಿ ಇರುವದೇ ಕಾರಣ. ಒಬ್ಬ ಮಾಯಾವಿಯು ತನ್ನ ಕಣ್ಣುಕಟ್ಟನ್ನು ಬೇಕಾದಷ್ಟು ಹರಡಿರುತ್ತಾನೆ. ಅವನಿಗೇನಾದರೂ ಅವರ ಅಶುದ್ಧಿ ತಾಕುತ್ತದೊ? ಕನಸಿನ ನೋಟದ ಹೊಲಸು ಕನಸು ಕಾಣುವವನಿಗೆ ಅಂಟುವದೊ? ಇಲ್ಲ. ಬ್ರಹ್ಮಕ್ಕೂ ಅದರಂತೆ. ಆದ್ದರಿಂದ ಜಗತ್ತಿನ ಹೊಲಸು ಬ್ರಹ್ಮಕ್ಕೆ ಅಂಟುವದಿಲ್ಲ. ಇನ್ನು ಬ್ರಹ್ಮದಲ್ಲಿ ಹಿಂದಿನ ಭೇದಗಳು ಮತ್ತೆ ಏಳುವದಕ್ಕೆ ದಾರಿ ಇಲ್ಲವೆಂಬ ಆಕ್ಷೇಪವೂ ನಿಲ್ಲುವದಿಲ್ಲ. ಗಾಢನಿದ್ರೆಯಲ್ಲಿ ಎಲ್ಲ ಒಂದಾಗಿದ್ದು ಎಚ್ಚರದಲ್ಲಿ ಮತ್ತೆ ಆ ಭೇದಗಳೆಲ್ಲ ಎದ್ದುಕೊಂಡು ಕಾಣುವದು ನಮ್ಮ ಅನುಭವವಲ್ಲದೆ. ಗಾಢನಿದ್ರೆಯಲ್ಲಿ ಎಲ್ಲ ಒಂದಾದರೂ ತಪ್ಪುತಿಳಿವಳಿಕೆ ಹೋಗಿರುವದಿಲ್ಲವಾದ್ದರಿಂದ ಮತ್ತೆ ಆ ಹಿಂದಿನ ಭೇದಗಳೆಲ್ಲ ಎಚ್ಚರದಲ್ಲಿ ಏಳುತ್ತವೆ. ಪ್ರಲಯದಲ್ಲಿಯೂ ಹಾಗೆಯೆ. ಮುಕ್ತರಿಗೆ ಆ ತಪ್ಪುತಿಳಿವಳಿಕೆ ಹೋಗಿರುವದರಿಂದ ಅವರು ಮತ್ತೆ ಹುಟ್ಟುವದಿಲ್ಲ. ಹೀಗೆ ಈ ಆಕ್ಷೇಪಗಳೆಂಬ ಗೂಬೆಗಳೆಲ್ಲ ನಮ್ಮ ತಲೆಯ ಮೇಲಕ್ಕೆ ಎಂದೂ ಎಷ್ಟು ಮಾತ್ರವೂ ಏರುವದೇ ಇಲ್ಲ; ಜಗತ್ತು ಬ್ರಹ್ಮದ ಹೊರತು ಬೇರೆ ಕಾರಣದಿಂದ ಆಯಿತೆಂದು ಹೇಳುವ ಇತರರ ತಲೆಯ ಮೇಲೆ ಮಾತ್ರ ಅವು ಎಂದೆಂದೂ ಎಳ್ಳಷ್ಟೂ ಕದಲದಂತೆ ಬೇರು ಬಿಟ್ಟುಕೊಂಡು ಕೂತಿರುವವು. —(ಸೂ೨-೧-೯)

ಲೋಕದಲ್ಲಿ ಅನುಭವಿಸುವವನು, ಅನುಭವಕ್ಕೆ ಬರುವ ವಸ್ತು—ಎಂಬ ಭೇದವನ್ನು ಎಲ್ಲರೂ ಒಪ್ಪುತ್ತಿರುವಾಗ ಇವೆರಡರ ಮೂಲವೂ ಬ್ರಹ್ಮವೆಂದೂ ಇವೆರಡೂ ಬ್ರಹ್ಮವನ್ನು ಬಿಟ್ಟು ಬೇರೆ ಇಲ್ಲವೆಂದೂ ಹೇಳುವದು ಹೇಗೆ ಒಪ್ಪೀತೆಂದು ಕೇಳಬಹುದು. ಎಲ್ಲರೂ ಒಪ್ಪುವ ಭೇದವನ್ನು ನಾವು ಅಲ್ಲಗಳೆಯುವದಿಲ್ಲ. ನೊರೆ, ಸಣ್ಣಲೆ, ದೊಡ್ಡ ಅಲೆ—ಇವು ಸಮುದ್ರದ ನೀರಿನ ಹೊರತು ಬೇರೆಯಲ್ಲದಿದ್ದರೂ ನೊರೆ, ಅಲೆ—ಮೊದಲಾದವು ಒಂದಕ್ಕೊಂದು ಕಲೆಯದೆ ಇರುವದುಂಟು. ಇಲ್ಲಿಯೂ ಹಾಗೆಯೇ ಅನುಭವಿಸು

ವವನೂ ಅನುಭವಕ್ಕೆ ಬರುವ ವಸ್ತುವೂ ಎರಡೂ ಕಲೆತು ಒಂದಾಗಿಬಿಡುವದಿಲ್ಲ. ಆದರೂ ಇವೆರಡು ಭೇದವೂ ಬ್ರಹ್ಮಕ್ಕಿಂತ ಬೇರೆಯಲ್ಲ. ಅನುಭವಿಸುವವನು ಬ್ರಹ್ಮದ ರೂಪಾಂತರವಲ್ಲದಿದ್ದರೂ ದೊಡ್ಡ ಬಯಲು ಗಡಿಗೆಯ ಸಂಬಂಧದಿಂದ ಗಡಿಗೆಯ ಬಯಲೆನಿಸುವಂತೆ ಇರುವವನಾದ್ದರಿಂದ ಅವನು ಬೇರೆಯಾದವನಾಗಿರುವನು. —(ಸೂ ೨-೧-೫)

ಹೀಗೆ ಭೇದವನ್ನು ಒಪ್ಪಿದ್ದು ನಡೆವಳಿಕೆಯನ್ನು ನೋಡಿ ಹೇಳುವ ಮಾತು. ನಿಜದ ಕಡೆಗೆ ಕಣ್ಣು ಹಾಕಿದರೆ ಭೇದಗಳೆಲ್ಲ ಬರೀ ತೋರಿಕೆ. ಅವು ಮಾತು ಮಾತ್ರ. ಗಡಿಗೆಯ ಬಯಲೆಂಬುದು ದೊಡ್ಡ ಬಯಲಿಗಿಂತ ಹೇಗೆ ಬೇರೆ ಇಲ್ಲವೊ ಬಿಸಿಲುಗುದುರೆಯು ಮರುಭೂಮಿಗಿಂತ ಹೇಗೆ ಬೇರೆ ಇಲ್ಲವೊ ಹಾಗೆ ಬ್ರಹ್ಮಕ್ಕೆ ಎರಡನೆಯದಾಗಿ ಅನುಭವಿಸುವವನು, ಅನುಭವಕ್ಕೆ ಬರುವ ವಸ್ತು--ಎಂಬ ಭೇದವೇನೇನೂ ಇಲ್ಲ. ಹೀಗೆ ಒಂದನ್ನೆ ನಿಜವೆಂದೊಪ್ಪಿಕೊಂಡರೆ ಇಂಥದನ್ನು ಮಾಡೆಂಬ ಮತ್ತು ಮಾಡಬೇಡವೆಂಬ ಶಾಸ್ತ್ರವೂ ಗುರುಶಿಷ್ಯಭೇದವಿಲ್ಲದ್ದರಿಂದ ಮೋಕ್ಷಶಾಸ್ತ್ರವೂ ವ್ಯರ್ಥವಾಗುವವೆಂದು ಕೊರಗಬೇಕಾದದ್ದಿಲ್ಲ. ಎಚ್ಚರಕ್ಕಿಂತ ಮೊದಲು ಕನಸು ನಿಜವಾಗಿರುವಂತೆ ಬ್ರಹ್ಮದ ಅರಿತವಾಗುವದಕ್ಕೆ ಮುಂಚೆ ಎಲ್ಲ ನಡೆವಳಿಕೆಗಳೂ ನಿಜವಾದವುಗಳೆ. ಬ್ರಹ್ಮ ಒಂದೇ ನಿಜವೆಂಬ ಅರಿವಾಗುವ ತನಕ ಈ ಭೇದಗಳು ಯಾರಿಗೂ ಸುಳ್ಳಾದವುಗಳಾಗುವದಿಲ್ಲ. ಹಗ್ಗದ ಹಾವು ಕಚ್ಚಿದ್ದರಿಂದ ಯಾರೂ ಸತ್ತಿಲ್ಲವೆಂಬ ಮತ್ತು ಬಿಸಿಲದೊರೆಯ ನೀರಿನಿಂದ ಯಾರ ಬಾಯಾರಿಕೆಯೂ ತೀರಿಲ್ಲವೆಂಬ ಯುಕ್ತಿಯ ಮೇಲೆ ಸುಳ್ಳಾದ ವೇದಾಂತ ವಾಕ್ಯದಿಂದ ನಿಜವಾದ ಬ್ರಹ್ಮದ ಅರಿವು ಎಂತಾದೀತೆಂದೂ ಯೋಚನೆಯುಂಟಾಗಬಹುದು. ಹೊಟ್ಟೆಗೆ ವಿಷವು ಸೇರಿರಬಹುದೆಂಬ ಸಂಶಯ ಮಾತ್ರದಿಂದಲೆ ಸಾವು ಮೊದಲಾದದ್ದಾಗುವದುಂಟು. ಸುಳ್ಳುರೇಖೆಯ ಆಕಾರದಿಂದ ನಿಜವಾದ ಆಕಾರದ ಅರಿತವಾಗುವದುಂಟು. ಹೀಗೆ ವೇದಾಂತ ಶಾಸ್ತ್ರದಿಂದ ಬ್ರಹ್ಮದ ಅರಿವಾಗದೆ ಹೋಗುವದಿಲ್ಲ. —(ಸೂ ೨-೧-೬)

ಜಗತ್ತು ಬ್ರಹ್ಮಕ್ಕಿಂತ ಬೇರೆಯಲ್ಲವೆಂಬುದನ್ನು ಉದಾಹರಣೆಗಳಿಂದಲೂ ಮನಗಾಣಿಸಬಹುದು. ಬಟ್ಟೆಯದೊಂದುದಾಹರಣೆ. ಮಡಿಸಿದ

ಬಟ್ಟೆಯು 'ಇದೇನು ಬಟ್ಟೆಯೋ? ಅಥವಾ ಬೇರೊಂದೋ?' ಎಂದು ಸ್ಪಷ್ಟವಾಗಿ ಕಾಣುವದಿಲ್ಲ. ಅದನ್ನೇ ಹರಡಿದರೆ ಅದು ಬಟ್ಟೆಯೇ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಲ್ಲದೆ ಮಡಿಸಿದಾಗ ಇದು ಬಟ್ಟೆಯೆಂದು ಗೊತ್ತಾದರೂ ಅದರ ಉದ್ದ, ಅಗಲ—ಮೊದಲಾದದ್ದೇನೂ ಗೊತ್ತಾಗುವದಿಲ್ಲ. ಹರಡಿದಾಗ ಅವೆಲ್ಲ ಗೊತ್ತಾಗುವದಲ್ಲದೆ ಮಡಿಸಿದ್ದಾಗ ಇದ್ದದ್ದಕ್ಕಿಂತ ಇದು ಬೇರೆಯಲ್ಲವೆಂದೂ ಗೊತ್ತಾಗುತ್ತದೆ. ಹೀಗೆ ಬರೀ ನೂಲಾಗಿರುವಾಗ ಅದರಲ್ಲಿ ಬಟ್ಟೆಯು ಎದ್ದು ಕಾಣುವದಿಲ್ಲ. ಅದನ್ನೇ ಮಗ್ಗಕ್ಕೆ ಹಾಕಿದರೆ ಅದು ಬಟ್ಟೆಯಾಗಿ ಎದ್ದು ಕಾಣುತ್ತದೆ. ಇದರಂತೆ ಜಗತ್ತು ಬ್ರಹ್ಮಕ್ಕಿಂತ ಬೇರೆಯಲ್ಲ. ಪ್ರಾಣಾಯಾಮವಿದ್ದಿನ್ನೊಂದುದಾಹರಣೆ. ಲೋಕದಲ್ಲಿ ಪ್ರಾಣಾಯಾಮವನ್ನು ಮಾಡುವವರು ಪ್ರಾಣ, ಅಪಾನ—ಮೊದಲಾದ ವಾಯುಭೇದಗಳನ್ನೆಲ್ಲ ತಡೆದಿಟ್ಟುಕೊಳ್ಳುತ್ತಾರೆ. ಆಗ ಬದುಕಿರುವದಕ್ಕೆ ಮಾತ್ರ ಆಗುವದೇ ಹೊರತು ಕೈಕಾಲುಗಳನ್ನೆಳೆದುಕೊಳ್ಳುವದೂ ಚಾಚುವದೂ ಮೊದಲಾದದ್ದು ಆಗುವದಿಲ್ಲ. ಪ್ರಾಣ, ಅಪಾನ--ಮೊದಲಾದ ವಾಯುಭೇದಗಳೆಲ್ಲ ಕೆಲಸ ಮಾಡಿದರೆ ಬದುಕಿರುವದಿಷ್ಟೇ ಅಲ್ಲದೆ ಕೈಕಾಲುಗಳನ್ನೆಳೆದುಕೊಳ್ಳುವದೂ ಚಾಚುವದೂ ಮೊದಲಾದದ್ದೆಲ್ಲ ಆಗುತ್ತದೆ. ಪ್ರಾಣಭೇದಗಳೆಲ್ಲ ವಾಯುವಿನ ಹೊರತು ಬೇರೆಯಲ್ಲವಾದ್ದರಿಂದ ಪ್ರಾಣಕ್ಕಿಂತ ಬೇರೆಯಲ್ಲ. ಇದರಂತೆ ಜಗತ್ತು ಬ್ರಹ್ಮಕ್ಕಿಂತ ಬೇರೆಯಲ್ಲ.

—(ಸೂ ೨-೧-೭)

'ಜಗತ್ತೆಲ್ಲ ಬ್ರಹ್ಮವೇ ಎಂದಾದ ಮೇಲೆ ಜೀವನೂ ಬ್ರಹ್ಮನೆಂದಾಗಿ ಬ್ರಹ್ಮವು ಹುಟ್ಟಿಸಿತೆಂಬ ಮಾತಿಗೆ ಜೀವನು ಹುಟ್ಟಿಸಿದನೆಂದೂ ಹೇಳಬಹುದಾಗುವದು. ಆಗ ಅವನು ತನಗೆ ಒಳ್ಳೆಯದನ್ನು ಮಾತ್ರ ಮಾಡಿಕೊಳ್ಳದೆ ಹುಟ್ಟು, ಸಾವು, ರೋಗ,—ಮೊದಲಾದ ಹಾನಿಕರವಾದವುಗಳನ್ನೇಕೆ ಮಾಡಿಕೊಂಡನು? ಶುದ್ಧನಾದ ತಾನು ಕೊಳೆಯಾದ ದೇಹದೊಳಕ್ಕೇಕೆ ಹೊಕ್ಕನು? ಹಾನಿಕರವಾದವುಗಳನ್ನು ಹುಟ್ಟಿಸಿದರೂ ತನ್ನ ಮನಸ್ಸು ಬಂದರೆ ಅವುಗಳನ್ನು ತೊರೆಯಬಹುದಲ್ಲ! ತಾನು ಈ ಜಗತ್ತನ್ನು ಹುಟ್ಟಿಸಿದ್ದರೆ ತನಗೇಕೆ ಅದರ ನೆನಪಿಲ್ಲ? ಮಾಯಗಾರನು ತಾನು ಹರಡಿದ ಮಾಯೆ

ಯನ್ನು ತನ್ನ ಮನಸ್ಸು ಬಂದಂತೆ ಕೊನೆಗಾಣಿಸಿಬಿಡುವ ಹಾಗೆ ಜೀವನು ಈ ಜಗತ್ತನ್ನು ಕೊನೆಗಾಣಿಸುವದಕ್ಕೇಕೆ ಆಗುವದಿಲ್ಲ?' ಎಂಬಾಕ್ಷೇಪಗಳನ್ನೆತ್ತಿ ಹಿಡಿಯಬಹುದು. ಎಲ್ಲವನ್ನೂ ಬಲ್ಲವನಾಗಿ ಏನು ಬೇಕಾದರೂ ಮಾಡ ಬಲ್ಲ ಈಶ್ವರನಾದ ಬ್ರಹ್ಮವು ಜೀವಕ್ಕಿಂತ ಬೇರೆ. ಅದು ಜೀವಗಿಂತ ಹೆಚ್ಚಿನ ಯೋಗ್ಯತೆಯದು. ಜೀವನು ಜಗತ್ತನ್ನು ಹುಟ್ಟಿಸುವನೆಂದರೆ ನೀವು ಹೇಳುವ ಆಕ್ಷೇಪಗಳೇರುತ್ತವೆ. ನಮ್ಮ ಅಭಿಪ್ರಾಯವು ಹಾಗಲ್ಲ. ಬ್ರಹ್ಮವು ಜೀವಕ್ಕಿಂತ ಹೆಚ್ಚಿನದು. ಹೀಗೆ ಒಮ್ಮೆ ಭೇದವೂ ; ಒಮ್ಮೆ ಅಭೇದವೂ ಹೇಗೆ ಕೂಡುವದೆಂದರೆ: ದೊಡ್ಡ ಬಯಲು, ಗಡಿಗೆಯ ಬಯಲು- ಎಂದಂತೆ. ದೊಡ್ಡ ಬಯಲೇ ಗಡಿಗೆಯ ಸಂಬಂಧದಿಂದ ಗಡಿಗೆಯ ಬಯಲೆಂದು ಬೇರೆಯಾಗಿ ಕಂಡಂತೆ ಬ್ರಹ್ಮವೆ ಶರೀರದ ಸಂಬಂಧದಿಂದ ಕಂಡಾಗ ಜೀವನೆಂದು ಬೇರೆಯೆನಿಸುವದು. ಗಡಿಗೆಯ ಸಂಬಂಧವನ್ನು ಬಿಟ್ಟು ನೋಡಿದರೆ ಬ್ರಹ್ಮ ಒಂದೇ ಆಗಿರುವದು. ಎಲ್ಲ ಸಂಬಂಧಗಳನ್ನೂ ತೊರೆದು ನೋಡಿದರೆ ಜೀವನು ಜೀವನೆನಿಸುವದೂ ಇಲ್ಲ; ಬ್ರಹ್ಮವು ಜಗತ್ತನ್ನು ಹುಟ್ಟಿಸಿದ್ದೆನಿಸುವದೂ ಇಲ್ಲ. ಏಕೆಂದರೆ: ಆಗ ಜಗತ್ತೆಲ್ಲವೂ ಸುಳ್ಳಾಗಿ ಎದ್ದು ಕೊಂಡದ್ದೆಂದು ಗೊತ್ತಾಗಿರುವದು. ಆ ಜಗತ್ತೆಂಬುದರ ಹುಟ್ಟೂ ಇಲ್ಲ; ಒಳ್ಳೆಯದನ್ನು ಮಾಡಿಕೊಳ್ಳದೆ ಇದ್ದದ್ದು ಮೊದಲಾದ ದೋಷಗಳೂ ಇಲ್ಲ. ಭೇದಗಳು ಸುಳ್ಳಾಗದೆ ಇರುವಾಗ ಜೀವನು ಬ್ರಹ್ಮವನ್ನು ಹುಡುಕಿ ತಿಳಿದು ಕೃತಾರ್ಥನಾಗಬೇಕೆಂದು ಮುಂತಾಗಿ ಬ್ರಹ್ಮವನ್ನು ಜೀವಕ್ಕಿಂತ ಹೆಚ್ಚಿನದಾಗಿ ಹೇಳಲಾಗುವದು. ಭೂಮಿಯಲ್ಲಿ ಉತ್ಕೃಷ್ಟವಾದ ಮಣಿಗಳೂ ಇರುತ್ತವೆ; ವಜ್ರ, ವೈಡೂರ್ಯ--ಮೊದಲಾದ ನಡುತರದವೂ ಇರುತ್ತವೆ; ಸೂರ್ಯಕಾಂತ ಮೊದಲಾದ ಕಡಿಮೆಯ ಜಾತಿಯವೂ ಇರುತ್ತವೆ; ನಾಯಿಗಳ ಮೇಲೆಯೂ ಕಾಗೆಗಳ ಮೇಲೆಯೂ ಎಸೆಯುವದಕ್ಕೆ ತಕ್ಕ ಕಾಸುಗಲ್ಲುಗಳೂ ಇರುತ್ತವೆ. ಒಂದೇ ಭೂಮಿಯಲ್ಲಿ ಬಿತ್ತಿದ ಬೀಜಗಳಿಂದಲೆ ಬೇರೆಬೇರೆ ಎಲೆ, ಹೂ, ಹಣ್ಣು, ವಾಸನೆ, ರಸ--ಮೊದಲಾದ ಭೇದಗಳು ಕಾಣುತ್ತವೆ. ಒಂದೇ ಅನ್ನರಸದಿಂದ ರಕ್ತ, ಮೊದಲಾದವುಗಳೂ ಕೂದಲು ಮೊದಲಾದವುಗಳೂ ಹುಟ್ಟಿಕೊಳ್ಳುವವು. ಇದರಂತೆ ಒಂದೇ ಬ್ರಹ್ಮದಲ್ಲಿ ಜಗತ್ತನ್ನು ಹುಟ್ಟಿಸುವ

ಈಶ್ವರ ಸುಖದುಃಖಗಳನ್ನು ಅನುಭವಿಸುವ ಜೀವ, ಅನೇಕ ಸುಖಸಾಧನ ಗಳು—ಇವುಗಳೆಲ್ಲ ಎದ್ದು ಕಾಣುತ್ತವೆ. - (ಸೂ ೨-೧-೭)

ಎರಡನೆಯದಿಲ್ಲದ ಬ್ರಹ್ಮವು ಜಗತ್ತನ್ನು ಹುಟ್ಟಿಸಿತೆಂಬ ಮಾತಿನ ಮೇಲೆ ಇನ್ನೊಂದಾಕ್ಷೇಪ. ಅದೇನೆಂದರೆ: ಗಡಿಗೆಯನ್ನು ಮಾಡುವ ಕುಂಬಾರನಿಗೆ ಮಣ್ಣು, ಕೋಲು, ಚಕ್ರ—ಮೊದಲಾದವು ಬೇಕಾಗುವದನ್ನು ನಾವು ನೋಡಿದ್ದೇವೆ; ಎರಡನೆಯದಿಲ್ಲದ ಬ್ರಹ್ಮವು ಜಗತ್ತನ್ನು ಹೇಗೆ ಹುಟ್ಟಿಸೀತು? ಈ ಆಕ್ಷೇಪವೂ ನಿಲ್ಲುವದಿಲ್ಲ. ಹಾಲು ಹೊರಗಣ ಸಾಧನ ವನ್ನೇನೂ ಬಯಸದೆ ತನ್ನದೊಂದು ಬಗೆಯ ಸ್ವಭಾವದ ಬಲದಿಂದ ಮೊಸ ರಾಗುವಂತೆ ಬ್ರಹ್ಮವು ಜಗತ್ತಾಗುವದು. ಹಾಲು ಮೊಸರಾಗುವದಕ್ಕೆ ಬಿಸಿಯ ನೆರವನ್ನು ಬಯಸುವದೆನ್ನುವದಾದರೆ ಬಿಸಿಯು ಮೊಸರಾಗುವಿಕೆ ಯನ್ನು ಬೇಗ ಮಾಡಿಸುವದಿಷ್ಟೇ ಹೊರತು ಮೊಸರಾಗುವ ಸ್ವಭಾವವಿಲ್ಲದ ಆಕಾಶ ಮತ್ತು ವಾಯು ಮೊದಲಾದವುಗಳಿಗೆ ಸೇರಿ ಅವುಗಳನ್ನು ಮೊಸರು ಮಾಡಲಾರದು. ಬ್ರಹ್ಮದಲ್ಲಿ ಶಕ್ತಿಯು ತುಂಬಿತುಳುಕುತ್ತಿರುವದು. ಆದ್ದ ರಿಂದ ಅದು ಬಗೆಬಗೆಯ ವಸ್ತುಗಳನ್ನು ಹುಟ್ಟಿಸುವದು. ಹಾಲಿನಂಥ ಅಚೇತನಗಳು ಹಾಗೆ ರೂಪಾಂತರವಾಗಬಹುದೇ ಹೊರತು ಕುಂಬಾರ ಮೊದಲಾದ ಚೇತನರಿಗೆ ಹಾಗಾಗಲಾರದೆಂದು ಮತ್ತೊಂದು ಸಿಬರನ್ನೆಬ್ಬಿಸ ಬಹುದು. ಅದನ್ನು ದೇವತೆಗಳೇ ಮೊದಲಾದವರ ದೃಷ್ಟಾಂತವು ಹಾರಿಸಿ ಬಿಡುವದು. ದೇವತೆಗಳೇ ಮೊದಲಾದವರು ಹೊರಗಣ ನೆರವನ್ನೇನೂ ಬಯಸದೆ ತಮ್ಮ ಮಹಿಮೆಯಿಂದ ಬೇಕುಬೇಕಾದದ್ದನ್ನೆಲ್ಲ ಹುಟ್ಟಿಸುವರೆಂದು ಎಷ್ಟೋ ಮಂತ್ರಗಳೂ ಇತಿಹಾಸಗಳೂ ಪುರಾಣಗಳೂ ಹೇಳುವವು. ರೇಶ್ಮೆ ಹುಳವು ತಾನೆ ರೇಶ್ಮೆಯನ್ನು ಪಡೆಯುವದು. ಬಲಾಕ ಎಂಬ ಪಕ್ಷಿಗಳು ರೇತಸ್ಸಿಲ್ಲದೆ ಬಸಿರಾಗುವವು. ಹೀಗೆ ಬ್ರಹ್ಮವು ತಾನೆ ಜಗತ್ತನ್ನು ಪಡೆಯ ಬಹುದು. ಇನ್ನು ದೇವತೆಗಳ ಶರೀರಗಳು ಆ ಮಹಿಮೆಗಳನ್ನು ತೋರ್ಪು ವವೆಂದೂ ರೇಶ್ಮೆಹುಳಗಳು ಯಾವದೋ ಸಣ್ಣ ಹುಳಗಳನ್ನು ತಿನ್ನುವದ ರಿಂದ ಅದರ ಜೊಲ್ಲು ಗಟ್ಟಿಯಾಗಿ ರೇಶ್ಮೆಯಾಗುವದೆಂದೂ ಬಲಾಕಗಳು ಗುಡುಗನ್ನು ಕೇಳಿ ಬಸಿರಾಗುವವೆಂದೂ ಹೇಳಿ ಈ ದೃಷ್ಟಾಂತಗಳು ಬ್ರಹ್ಮಕ್ಕೆ

ಸಮಾನವಾಗುವದಿಲ್ಲವೆಂದರೆ ಈ ದೃಷ್ಟಾಂತಗಳೆಲ್ಲ ಕುಂಬಾರನಂತಲ್ಲವೆಂಬಿಷ್ಟು ಮಾತ್ರಕ್ಕೆ ಹೋಲಿಕೆ. ಕುಂಬಾರನೂ ದೇವತೆಗಳೇ ಮೊದಲಾದವರೂ ಚೇತನರಾದರೂ ಕುಂಬಾರನಿಗೆ ಹೊರಗಣ ನೆರವು ಬೇಕು; ದೇವತೆಗಳೇ ಮೊದಲಾದವರಿಗೆ ಅದರ ಅಗತ್ಯವಿಲ್ಲ. ಆದ್ದರಿಂದ ಒಬ್ಬನಲ್ಲಿ ಕಂಡ ಸಾಮರ್ಥ್ಯದಂತೆ ಎಲ್ಲರಲ್ಲಿಯೂ ಇರಬೇಕಾಗಿಲ್ಲ. ಬ್ರಹ್ಮದಿಂದ ಬಗೆಬಗೆಯ ಜಗತ್ತು ಹುಟ್ಟಬಹುದು. —(ಸೂ ೩-೧-೮)

ಬ್ರಹ್ಮದಿಂದ ಜಗತ್ತಾಯಿತೆಂಬುದನ್ನು ಗಟ್ಟಿಗೊಳಿಸುವದಕ್ಕಾಗಿ ಇನ್ನೊಂದಾಕ್ಷೇಪ. 'ಬ್ರಹ್ಮವು ತಾನೆ ಜಗತ್ತಾಗುವಾಗ ಒಂದು ಕಡೆ ಮಾತ್ರ ಜಗತ್ತಾಗಿ ಇನ್ನೊಂದು ಕಡೆ ಹಾಗೆಯೇ ಉಳಿದುಕೊಳ್ಳುವದಕ್ಕೆ ಬರುವದಿಲ್ಲ. ಏಕೆಂದರೆ: ಅದಕ್ಕೆ ಒಂದು ಕಡೆ, ಇನ್ನೊಂದು ಕಡೆ--ಎಂಬ ಅವಯವಗಳ ಭೇದವಿಲ್ಲ. ಬ್ರಹ್ಮವೆಲ್ಲ ಜಗತ್ತಾಯಿತೆಂದರೆ ಬ್ರಹ್ಮವನ್ನು ಹುಡುಕಿ ಕಾಣಬೇಕೆಂದು ಹೇಳುವ ಉಪದೇಶವೇ ವ್ಯರ್ಥ. ಏಕೆಂದರೆ: ಬ್ರಹ್ಮವು ಉಳಿದಿರುವದೇ ಇಲ್ಲ. ಇದಲ್ಲದೆ ಅದಕ್ಕೆ ಒಂದು ಕಡೆ, ಇನ್ನೊಂದು ಕಡೆ--ಎಂಬ ಅವಯವಗಳುಂಟಾದರೆ ಅದು ನಾಶವಾಗತಕ್ಕದ್ದಾಗುವದು. ಈ ಅಭಿಪ್ರಾಯವು ಶ್ರುತಿಗೆ ಸಮ್ಮತವಿಲ್ಲ.' ಈ ಆಕ್ಷೇಪವೂ ನಿಲ್ಲುವದಿಲ್ಲ. ಶ್ರುತಿಯಲ್ಲಿ ಬ್ರಹ್ಮದಿಂದ ಜಗತ್ತು ಹುಟ್ಟಿತೆಂದೂ ಇದೆ; ಜಗತ್ತಿಗಿಂತ ಬೇರೆ ಬ್ರಹ್ಮವಿರುವದೆಂದೂ ಇದೆ. ಹುಟ್ಟಿಸಿದ ಜಗತ್ತಿನಲ್ಲಿ ತಾನೆ ಒಳಹೊಗಬೇಕೆಂದು ಬ್ರಹ್ಮವು ನೋಡಿತೆಂದಿರುವದರಿಂದ ಜಗತ್ತಿಗಿಂತ ಬೇರೆಯಾಗಿ ಬ್ರಹ್ಮವಿರುವದೆಂದಾಯಿತು. ಜಗತ್ತೆಲ್ಲ ಬ್ರಹ್ಮದ ಒಂದು ಪಾದವೆಂದೂ ಇನ್ನು ಮೂರು ಪಾದಗಳು ಮೇಲಿರುವವೆಂದೂ ಸ್ಪಷ್ಟವಾಗಿಯೇ ಶ್ರುತಿ ಇದೆ. ಗಾಢನಿದ್ರೆಯಲ್ಲಿ ಜೀವವು ಬ್ರಹ್ಮದಲ್ಲಿ ಸೇರುವದೆಂದಿದೆಯಷ್ಟೆ. ಜಗದ್ರೂಪವಾದ ಬ್ರಹ್ಮವೆಂದರ್ಥ ಮಾಡಿದರೆ ಜೀವವು ಅದರಲ್ಲಿ ಯಾವಾಗಲೂ ಇದ್ದೇ ಇರುವದು. ಮತ್ತು ಬ್ರಹ್ಮವು ಇಂದ್ರಿಯಗಳಿಗೆ ಗೋಚರವಾಗತಕ್ಕದ್ದಲ್ಲವೆಂದು ಹೇಳಿರುವದರಿಂದ ಇಂದ್ರಿಯಗಳಿಗೆ ಗೋಚರವಾಗುವ ಜಗತ್ತು ಅಲ್ಲಿಯ ಅರ್ಥವಾಗಲಾರದು. ಆಗ ಶುದ್ಧವಾದ ಬ್ರಹ್ಮವಾದರೊ ಉಳಿದಿರುವದಿಲ್ಲ. ಹೀಗಿದ್ದರೂ ಶ್ರುತಿಯು ಬ್ರಹ್ಮವು ಎಲ್ಲ ಜಗದ್ರೂಪವಾಗುವದಿಲ್ಲ

ವೆಂಬೂ ಬ್ರಹ್ಮಕ್ಕೆ ಅವಯವವಿಲ್ಲವೆಂದೂ ಎರಡು ಮಾತನ್ನೂ ಆಡುತ್ತದೆ. ಇಂದ್ರಿಯಕ್ಕೆ ಗೋಚರವಾಗದ ಮಾತಿಗೆ ನಾವು ಶ್ರುತಿಯನ್ನೇ ನಂಬಬೇಕು. ಲೋಕದಲ್ಲಿ ಮಣಿ, ಮಂತ್ರ, ಔಷಧಿ--ಇವುಗಳಲ್ಲಿಯೇ ಕಾಲಭೇದದಿಂದ ಒಂದಕ್ಕೊಂದು ವಿರುದ್ಧವಾದ ಅನೇಕ ಶಕ್ತಿಗಳು ಕಾಣುತ್ತವೆ. ಅದರ ಗುಟ್ಟು ಯಾರಾದರೂ ಹೇಳಿದಾಗ ತಿಳಿಯುವದೇ ಹೊರತು ಬರೀ ನಮ್ಮ ಯುಕ್ತಿಗೆ ನಿಲುಕುವದಿಲ್ಲ. ಇನ್ನು ಬ್ರಹ್ಮದ ವಿಷಯ ಹೇಗೆ ತಿಳಿದೀತು? ಶ್ರುತಿಯಾದರೂ ಹೀಗೆ ಒಂದಕ್ಕೊಂದು ವಿರುದ್ಧವಾದ ಮಾತುಗಳನ್ನು ಹೇಗೆ ಹೇಳಲಾದೀತೆಂದರೆ ಜಗತ್ತಿನ ಭೇದಗಳೆಲ್ಲ ಬ್ರಹ್ಮದ ಅರಿವಿಲ್ಲದ್ದರಿಂದ ಹುಟ್ಟುಗಟ್ಟಿದ್ದೇ ಹೊರತು ನಿಜವಾದವುಗಳಲ್ಲವಾದ್ದರಿಂದ ಅವುಗಳ ಹುಟ್ಟುವಿಕೆಯಿಂದ ಬ್ರಹ್ಮವು ಅವಯವಗಳುಳ್ಳದ್ದಾಗಬೇಕಾಗಿಲ್ಲ. ಕಣ್ಣುಬೇನೆಯುವನಿಗೆ ಇಬ್ಬರು ಚಂದ್ರರು ಕಂಡರೆ ಚಂದ್ರರು ಇಬ್ಬರಾಗಬೇಕಾದದ್ದಿಲ್ಲ. ಬ್ರಹ್ಮದ ಸ್ವರೂಪವನ್ನರಿಯದಿರುವಾಗ ಅದು ಜಗತ್ತಾಗಿ ರೂಪಾಂತರಗೊಳ್ಳತಕ್ಕದ್ದಾಗಿರುತ್ತದೆ. ನಿಜವಾಗಿ ನೋಡಿದರೆ ಅದು ಯಾವ ಬದಲಾವಣೆಯನ್ನೂ ಹೊಂದದೆ ತಾನಿದ್ದಂತೆ ಇರುತ್ತದೆ. ಬ್ರಹ್ಮವು ಜಗದ್ರೂಪವನ್ನು ತಾಳುವದೆಂಬ ಮಾತು ಅದು ಬದಲಾವಣೆಯನ್ನು ಹೊಂದತಕ್ಕದ್ದೆಂದು ಹೇಳುವದಕ್ಕೆ ಹೊರಟದ್ದಲ್ಲ. ಹಾಗೆ ತಿಳಿಯುವದರಿಂದ ಫಲವಿಲ್ಲ. ಯಾವ ಬದಲಾವಣೆಯನ್ನೂ ಹೊಂದದ ಬ್ರಹ್ಮವನ್ನು ತಿಳಿಸುವದಕ್ಕೆ ಇದು ಉಪಾಯ. ಬದಲಾವಣೆಯಾಗದೆ ರೂಪಾಂತರವಾಗುವದೆಂತೆಂದು ಯೋಚನೆಯುಂಟಾಗಬಹುದು. ಕನಸುಗಾಣುವವನಲ್ಲಿ ಯಾವ ಬದಲಾವಣೆಯೂ ಇಲ್ಲದೆ ಅನೇಕ ಆಕಾರಗಳು ಹುಟ್ಟಿದ್ದು ಕಂಡುಬಂದಿದೆ. ದೇವತೆಗಳೂ ಮಾಯಾವಿಗಳೂ ತಮ್ಮಲ್ಲಿ ಯಾವ ಬದಲಾವಣೆಯೂ ಇಲ್ಲದೆ ಆನೆ, ಕುದುರೆ-ಮೊದಲಾದವುಗಳನ್ನು ಹುಟ್ಟಿಸುತ್ತಾರೆ. ಈ ದೋಷಗಳೆಂಬ ಗೂಬೆಗಳೆಲ್ಲ ನಮ್ಮ ತಲೆಯ ಮೇಲಕ್ಕೆ ಎಂದೂ ಎಷ್ಟು ಮಾತ್ರವೂ ಏರುವದೇ ಇಲ್ಲ; ಜಗತ್ತು ಬ್ರಹ್ಮದ ಹೊರತು ಬೇರೆ ಕಾರಣದಿಂದ ಆಯಿತೆಂದು ಹೇಳುವ ಇತರರ ತಲೆಯ ಮೇಲೆ ಎಳ್ಳಷ್ಟೂ ಕದಲದಂತೆ ಕಾಲೂರಿಕೊಂಡು ಕುಳಿತಿರುವವು.

—(ಸೂ ೨-೧-೯)

(ಅ) ಕಾಲ, ದೇಶ ಕಾರಣ,—ಇವುಗಳ ಸ್ವಭಾವಗಳು ಎಂದೆಂದಿಗೂ ಬದಲಾಗದೆ ಒಂದೇ ರೀತಿಯಲ್ಲಿ ನಡೆದುಕೊಂಡು ಬರುತ್ತಿರುವಂತೆ ಹುಟ್ಟಿಸುವದು ಚೇತನದ ಹೊರತು ಬೇರೆ ಯಾವ ಜಡಕ್ಕೂ ಸಾಧ್ಯವಲ್ಲ. (ಸೂ ೧-೧-೨) (ಆ) ಹುಟ್ಟಿಸಬೇಕಾದ ಜಗತ್ತಿನ ರಚನೆ ಮೊದಲಾದವುಗಳನ್ನು ಮೊದಲು ಮನಸ್ಸಿಗೆ ತಂದುಕೊಂಡು ಪ್ರಾಣಿಗಳ ಪುಣ್ಯಪಾಪಗಳಿಗೆ ತಕ್ಕಂತೆ ಹುಟ್ಟಿಸಿತೆಂದು ಹೇಳಿರುವದರಿಂದ ಅದು ಚೇತನವಾಗಿರಬೇಕೇ ಹೊರತು ಜಡವಾಗಿರಲಾರದು (ತೈ೨-೬). (ಇ) ಜಡವು ಚೇತನದ ಬೆಂಬಲವಿಲ್ಲದೆ ತಾನೆ ಕೆಲಸ ಮಾಡಿದ್ದು ಎಲ್ಲಿಯೂ ಕಂಡಿಲ್ಲವಾದ್ದರಿಂದಲೂ ತಾಯ ಮೊಲೆಹಾಲು ಮಗುವಿಗಾಗಿ ಮುಂದೆಬರುವ ಹುಟ್ಟುಗುಣದಂತೆ ಜಡವು ಮಾಡುವದೆಂದರೆ ಅದು ಮಗುವಿನ ಚೀಪುವಿಕೆಯಿಂದ ಮುಂದೆ ಬರುವದಾದ್ದರಿಂದಲೂ ಅಥವಾ ನೀರು ಮುಂದಕ್ಕೆ ಹರಿಯುವಂತೆ ಎಂದರೆ ಅದು ತಗ್ಗನ್ನು ಬಯಸುವದಾದ್ದರಿಂದಲೂ ಒಮ್ಮೆ ಹುಟ್ಟಿಸುವದೂ ಒಮ್ಮೆ ಬಿಡುವದೂ ಜಡಕ್ಕೆ ದಕ್ಕುವ ಮಾತಲ್ಲವಾದ್ದರಿಂದಲೂ ಜಡವು ಜಗತ್ತನ್ನು ಹುಟ್ಟಿಸಲಾರದು (ಸೂ ೨-೨-೧).

## ಜಡಗಳು ಹುಟ್ಟಿದ ಕ್ರಮ

ಒಂದು ಕಡೆ ಹೇಳಿರುವದೇನೆಂದರ: ಜಗತ್ತನ್ನು ಹುಟ್ಟಿಸಬೇಕೆಂದು ಮನಸ್ಸುಮಾಡಿದ ಚೈತನ್ಯವು ಯಾವ ಕ್ರಮದಿಂದ ಹುಟ್ಟಿಸೋಣವೆಂದು ಯೋಚಿಸಿ ಶರೀರದಿಂದ ಯಾವದು ಹೊರಬಿದ್ದರೆ ತಾನು ಹೊರಬಿದ್ದಂತೆ ಆಗುವದೊ ಯಾವದು ಒಳಗೆ ನಿಂತಿದ್ದರೆ ತಾನು ನಿಂತಿದ್ದಂತೆ ಆಗುವದೊ ಎಂಬದನ್ನು ವಿಚಾರಮಾಡಿ ಮೊದಲು ಶರೀರದ ಸರ್ವಾಧಿಕಾರಿಯಾದ ಅಂಥ ಪ್ರಾಣನನ್ನು ಹುಟ್ಟಿಸಿತು. ಪ್ರಾಣನೆಂದರೆ ಎಲ್ಲ ಪ್ರಾಣಿಗಳ ಇಂದ್ರಿಯಗಳಗೆ ಆಧಾರನಾದ ಹಿರಣ್ಯಗರ್ಭನೆಂಬ ಅಂತರಾತ್ಮ. ಅವನಾದ ಮೇಲೆ ಎಲ್ಲ ಪ್ರಾಣಿಗಳೂ ಒಳ್ಳೆ ಕೆಲಸಗಳಿಗೆ ತೊಡಗುವದಕ್ಕೆ ಕಾರಣವಾದ ಶ್ರದ್ಧೆಯೆಂಬುದು ಹುಟ್ಟಿತು. ಅದಾದ ಮೇಲೆ ಕರ್ಮದ ಫಲಗಳನ್ನು ಅನುಭವಕ್ಕೆ ತಂದುಕೊಡುವ ವಸ್ತುಗಳಿಗೆ ಕಾರಣಗಳಾದ ಮಹಾಭೂತಗಳು ಹುಟ್ಟಿದವು. ಅವು ಯಾವವೆಂದರೆ: ಸದ್ದಾಗುವ

ಹುಟ್ಟಿ ಗುಣವುಳ್ಳ ಆಕಾಶ, ತನ್ನ ಸೋಂಕಿನ ಗುಣದಿಂದಲೂ ಹಿಂದಿನ ಸದ್ದೆಂಬ ಗುಣದಿಂದಲೂ ಕೂಡಿದ ವಾಯು, ತನ್ನ ರೂಪೆಂಬ ಗುಣದಿಂದಲೂ ಹಿಂದಿನ ಸೋಂಕು ಮತ್ತು ಸದ್ದು--ಎಂಬ ಗುಣಗಳಿಂದಲೂ ಕೂಡಿದ ಅಗ್ನಿ, ತನ್ನ ರಸವೆಂಬ ಗುಣದಿಂದಲೂ ಹಿಂದಿನ ರೂಪ, ಸೋಂಕು, ಸದ್ದು--ಎಂಬ ಗುಣಗಳಿಂದಲೂ ಕೂಡಿದ ನೀರು, ತನ್ನ ಗಂಧವೆಂಬ ಗುಣದಿಂದಲೂ ಹಿಂದಿನ ರಸ, ರೂಪ, ಸೋಂಕು, ಸದ್ದು--ಎಂಬ ಗುಣಗಳಿಂದಲೂ ಕೂಡಿದ ಪೃಥ್ವಿ. ಆಮೇಲೆ ಈ ಭೂತಗಳಿಂದಲೆ ಆದ ಕರ್ಮಾರ್ಥವಾದ ಐದು ಮತ್ತು ಜ್ಞಾನಾರ್ಥವಾದ ಐದು ಇಂದ್ರಿಯುಗಳೂ ಮತ್ತು ಈ ಇಂದ್ರಿಯುಗಳಿಗೆ ಒಡೆಯನಾಗಿ 'ಹಾಗೊ? ಹೀಗೊ? ಹೀಗೆ ಮಾಡೋಣ' ಎಂದು ಯೋಚಿಸುವ ಮನಸ್ಸೂ ಆದವು. ಹೀಗೆ ದೇಹವೂ ಇಂದ್ರಿಯುಗಳೂ ಹುಟ್ಟಿದ ಮೇಲೆ ಅವುಗಳಿಗೆ ಬೇಕಾದ ಬತ್ತ, ಗೋಧಿ-ಮೊದಲಾದ ಅನ್ನ, ಆ ಅನ್ನವನ್ನು ತಿನ್ನುವದರಿಂದ ಎಲ್ಲ ಕರ್ಮಗಳಲ್ಲಿಯೂ ಮುಂದುವರಿಯುವದಕ್ಕೆ ಅಗತ್ಯವಾದ ಸಾಮರ್ಥ್ಯ, ಹೀಗೆ ಸಮರ್ಥರಾದ ಪ್ರಾಣಿಗಳಿಗೆ ಮನಸ್ಸಿನ ಹೊಲಸನ್ನು ತೊಳೆದುಕೊಳ್ಳುವದಕ್ಕೆ ಸಾಧನವಾದ ತಪಸ್ಸು, ತಪಸ್ಸಿನಿಂದ ಶುದ್ಧವಾದ ಇಂದ್ರಿಯುಗಳ ಮತ್ತು ಮನಸ್ಸಿನ ಕರ್ಮಗಳಿಗೆ ಸಾಧನವಾದ ವೇದಮಂತ್ರಗಳು, ಅವುಗಳಿಂದ ಅಗ್ನಿಹೋತ್ರ ಮೊದಲಾದ ಕರ್ಮಗಳು, ಆ ಕರ್ಮಗಳಿಗೆ ಫಲಗಳಾದ ಲೋಕಗಳು, ಆ ಲೋಕಗಳಲ್ಲಿ ಹುಟ್ಟಿದ ಪ್ರಾಣಿಗಳಿಗೆ ಹೆಸರುಗಳು— ಹೀಗೆ ಹದಿನಾರು ಬಗೆಗಳಾದವು. —(ಪ್ರ ೬-೩,೪)

ಇನ್ನೊಂದು ಕಡೆ ಹೇಳಿರುವದೇನೆಂದರೆ: ಬ್ರಹ್ಮದಿಂದ ಆಕಾಶವು ಹುಟ್ಟಿತು. ಅದು ಸದ್ದೆಂಬ ಗುಣವುಳ್ಳದ್ದಾಗಿದ್ದು ಆಕಾರವುಳ್ಳ ವಸ್ತುಗಳಿಗೆಲ್ಲ ಅವಕಾಶವನ್ನು ಕೊಡತಕ್ಕದ್ದಾಗಿರುವದು. ಆ ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಪೃಥ್ವಿ, ಪೃಥ್ವಿಯಿಂದ ಸಸಿಗಳು, ಸಸಿಗಳಿಂದ ಅನ್ನವಾಗುವ ಧಾನ್ಯಗಳು, ರೇತಸ್ಸಾಗಿ ರೂಪಾಂತರವನ್ನು ಹೊಂದಿದ ಅನ್ನದಿಂದ ಕೈ, ಕಾಲು--ಮೊದಲಾದವುಗಳುಳ್ಳ ದೇಹಗಳು— ಹೀಗೆ ಹುಟ್ಟಿದವು. —(ತೈ ೨-೧)

ಮತ್ತೊಂದು ಕಡೆ ಇರುವದೇನೆಂದರೆ: ಜಗತ್ತನ್ನು ಹುಟ್ಟಿಸಬೇಕೆಂದು ಯೋಚಿಸಿದ ಬ್ರಹ್ಮವು ಈ ಲೋಕಗಳನ್ನು ಹುಟ್ಟಿಸಿತು. ಈ ಲೋಕಗಳೆಂದರೆ: ದ್ಯುಲೋಕದ ಮೇಲೆ ನೀರನ್ನು ಕೂಡಿಹಾಕುವ ಅಂಭಸ್ ಎಂಬ ಲೋಕ, ದ್ಯುಲೋಕದ ಕೆಳಗಿನ ಅಂತರಿಕ್ಷವಾದ ಮರೀಚಿಲೋಕ, ಸಾಯುವ ಪ್ರಾಣಿಗಳುಳ್ಳ ಭೂಲೋಕ, ಅದರ ಕೆಳಗೆ ಬಹು ಪ್ರಾಣಿಗಳು ಹೋಗುವ ಕೀಳುಲೋಕಗಳು ಹೀಗೆ ನಾಲ್ಕು ಲೋಕಗಳನ್ನು ಹುಟ್ಟಿಸಿದ ಮೇಲೆ ಅವುಗಳನ್ನಾಳುವವರಿಲ್ಲದಿದ್ದರೆ ಅವು ಹಾಳಾಗುವವೆಂದು ಅವುಗಳಿಗೆ ಅರಸರನ್ನೂ ಹುಟ್ಟಿಸಬೇಕೆಂಬ ಯೋಚನೆಯುಂಟಾಯಿತು. ಆಗ ಬ್ರಹ್ಮವು ಲೋಕಗಳನ್ನು ಹುಟ್ಟಿಸಿದ ಐದು ಭೂತಗಳ ಒಂದು ಮುದ್ದೆಯನ್ನೆತ್ತಿಕೊಂಡು ಹಿಸುಕಿ ಒಂದು ದೇಹದ ಆಕಾರವನ್ನು ಮಾಡಿತು ಆ ದೇಹ ರಚನೆ ಹೇಗಿರಬೇಕೆಂಬುದನ್ನು ಬ್ರಹ್ಮವು ತನ್ನ ಮನಸ್ಸಿನಲ್ಲಿ ಮಾಡಿಕೊಳ್ಳುತ್ತಲೆ ಅದರಲ್ಲಿ ಹಕ್ಕಿಯ ಮೊಟ್ಟೆಯೊಡೆಯುವಂತೆ ಬಾಯಿಯ ಆಕಾರವು ಒಡೆದು ಮೂಡಿತು. ಆ ಬಾಯಿಯಿಂದ ವಾಕ್ ಎಂಬ ಇಂದ್ರಿಯವೂ ಆ ವಾಕ್ಕಿನಿಂದ ಅಗ್ನಿಯೆಂಬ ದೇವತೆಯೂ ಆದವು. ಆಮೇಲೆ ಮೂಗು ಒಡೆದು ಮೂಡಿತು. ಅದರಿಂದ ಪ್ರಾಣವೂ ಪ್ರಾಣದಿಂದ ವಾಯುವೂ ಆದವು. ಹಾಗೆಯೆ ಕಣ್ಣು, ಕಿವಿ, ಚರ್ಮ, ಹೃದಯ, ಹೊಕ್ಕಳು, ಶಿಶ್ನ—ಇವುಗಳು ಒಡೆದು ಮೂಡಿದವು. ಇವುಗಳಿಂದ ಕ್ರಮವಾಗಿ ನೋಡುವ ಇಂದ್ರಿಯ, ಕೇಳುವ ಇಂದ್ರಿಯ, ಮೈಗೂದಲು, ಮನಸ್ಸು, ಅಪಾನದಿಂದ ಕೂಡಿರುವದರಿಂದ ಅಪಾನವೆಂಬ ಪಾಯ್ವಿಂದ್ರಿಯ, ರೇತಸ್ಸನ್ನು ಬಿಡುವದಕ್ಕಿರುವ ಹಡೆಯುವ ಇಂದ್ರಿಯ - ಇವೂ ಆದಿತ್ಯ, ದಿಕ್ಕುಗಳು, ಸಸಿಗಳು, ಚಂದ್ರ, ಮೃತ್ಯು, ಜಲ—ಈ ದೇವತೆಗಳೂ ಹೊರಬಿದ್ದರು. ಆಮೇಲೆ ಇವರಿಗೆಲ್ಲ ಅನ್ನದ ಸೃಷ್ಟಿಯಾಯಿತು —(ಐ ೧-೨..೪)

ಮಗದೊಂದು ಕಡೆ ಹೇಳಿರುವದೇನೆಂದರೆ: ಇರುವಿಕೆಯ ಸ್ವರೂಪದಲ್ಲಿ ತಾನೇ ತಾನಾಗಿದ್ದ ಬ್ರಹ್ಮವು ತಾನೆ ಬಹು ಬಗೆಯಾಗುವೆನೆಂದು ಯೋಚಿಸಿ ತೇಜಸ್ಸನ್ನು ಹುಟ್ಟಿಸಿತು. ತೇಜಸ್ಸೆಂಬುದು ಕೆಂಪಗೆ ಬೆಳಗುವಂಥದ್ದಾಗಿ ಬೇಯಿಸುವ ಮತ್ತು ಸುಡುವ ವಸ್ತುವೆಂಬುದನ್ನು ಎಲ್ಲರೂ ಬಲ್ಲರು. ಆ

ತೇಜಸ್ಸಿನ ರೂಪವಾದ ಬ್ರಹ್ಮವು ತಾನೆ ಬಹು ಬಗೆಯಾಗುವೆನೆಂದು ನೀರನ್ನು ಹುಟ್ಟಿಸಿತು. ನೀರು ಬೆಳ್ಳಗೆ ಹರಿಯುವಂಥದ್ದಾಗಿ ಅಂಟುವ ದ್ರವವಾಗಿರುವದೆಂದು ಎಲ್ಲರೂ ಬಲ್ಲರು. ನೀರು ತೇಜಸ್ಸಿನಿಂದ ಹುಟ್ಟಿದ್ದಾದ್ದರಿಂದಲೆ ಎಲ್ಲಿಯಾದರೂ ಯಾವಾಗಲಾದರೂ ಅತ್ತಾಗ ಮತ್ತು ಬಿಸಿಗೊಂಡಾಗ ಕಣ್ಣೀರೂ ಬೆವರೂ ಸುರಿಯುತ್ತವೆ. ನೀರಿನ ರೂಪವಾದ ಬ್ರಹ್ಮವು ತಾನೆ ಬಹು ಬಗೆಯಾಗುವೆನೆಂದು ಪೃಥ್ವಿಯನ್ನು ಹುಟ್ಟಿಸಿತು. ನೀರಿನಿಂದಾದ ಭೂಮಿಯಲ್ಲಿ ಬೆಳೆದ ಧಾನ್ಯಗಳಿಂದುಂಟಾಗುವ ಅನ್ನವು ನೀರಿನಿಂದ ಹುಟ್ಟಿದಂತಾಗುವದರಿಂದ ಮಳೆ ಬಂದ ಕಡೆಯಲ್ಲಿ ಬೇಕಾದಷ್ಟು ದವಸಧಾನ್ಯಗಳಾಗುವವು. ಪೃಥ್ವಿಯೆಂಬುದು ರೂಪದಲ್ಲಿ ಬಹುಮಟ್ಟಿಗೆ ಕಪ್ಪಾಗಿ ಜಗತ್ತನ್ನು ಹೊತ್ತುಕೊಂಡು ಅಲ್ಲಾಡದೆ ಭಾರವಾಗಿರುವದು. ಹೀಗೆ ಈ ಮೂರು ಸೂಕ್ಷ್ಮಭೂತಗಳ ಸೃಷ್ಟಿಯಾಯಿತು. —(ಛಾಂ ೬-೨-೩,೪)

ಮೇಲಿನ ಸೃಷ್ಟಿಕ್ರಮವೇ ಮುಂದುವರಿದಿರುವದೇನೆಂದರೆ: ಆಮೇಲೆ ಆ ಮೂರು ಭೂತಗಳ ಬೆರಕೆಯಿಂದಾದ ಸ್ಥೂಲವಸ್ತುಗಳ ಸೃಷ್ಟಿಯಾಯಿತು. ಪ್ರತಿಯೊಂದು ವಸ್ತುವೂ ಆ ಮೂರುಭೂತಗಳ ಬೆರಕೆಯದೆಂದು ತಿಳಿಯುವಂತೆ ಈಗ ಉದಾಹರಣೆಗಳನ್ನು ಕೊಡಲಾಗುವದು: ಮೂರುಭೂತಗಳ ಬೆರಕೆಯಿಂದಾದ ಅಗ್ನಿಯಲ್ಲಿ ಎಲ್ಲರಿಗೂ ಕಾಣುವ ಕೆಂಪುಬಣ್ಣವು ಬೆರಕೆಯದಲ್ಲದ ಸೂಕ್ಷ್ಮಭೂತವಾದ ತೇಜಸ್ಸಿನದು; ಬಿಳೀ ಬಣ್ಣವು ಬೆರಕೆಯದಲ್ಲದ ಸೂಕ್ಷ್ಮಭೂತವಾದ ನೀರಿನದು; ಕಪ್ಪುಬಣ್ಣವು ಬೆರಕೆಯದಲ್ಲದ ಸೂಕ್ಷ್ಮಭೂತವಾದ ಪೃಥ್ವಿಯದು. ಬೆಳ್ಳಗಿರುವ ಸ್ಫಟಿಕವು ಕೆಂಪು ದಾಸವಾಳದ ಹೂವಿನ ಮಗ್ಗುಲಲ್ಲಿರುವಾಗ ಪದ್ಮರಾಗವೆನಿಸಿ ತಿಳಿಯಬಂದಿದ್ದದ್ದು ಸ್ಫಟಿಕವನ್ನೂ ಕೆಂಪುದಾಸವಾಳದ ಹೂವನ್ನೂ ಬೇರೆ ಬೇರೆ ನೋಡಿ ತಿಳಿದಾಗ ಪದ್ಮರಾಗವೆಂಬ ತಿಳಿವು ಹಾರಿಹೋಗುವಂತೆ ಈ ಮೂರು ರೂಪಗಳ ಮೂಲವನ್ನರಿಯುವದಕ್ಕೆ ಮುಂಚೆ ಅಗ್ನಿಯೆಂದು ನಾವು ತಿಳಿದಿದ್ದದ್ದು ಈಗ ಹೋಯಿತು. ಅಗ್ನಿಯೆಂಬುದು ಬರೀ ನಮ್ಮ ತಿಳಿವಿನಲ್ಲಿ ಆಗಿತ್ತೇ ಹೊರತು ಅಂಥದ್ದೊಂದು ವಸ್ತುವೇನೂ ಅಲ್ಲಿ ಆಗಿರಲಿಲ್ಲ. ಅಗ್ನಿಯೆಂಬುದು ಬರೀ ಮಾತು ಮಾತ್ರ. ಆದ್ದರಿಂದ ಅಗ್ನಿ

ಯೆಂಬುದು ಸುಳ್ಳು; ಮೂರು ರೂಪಗಳು ಮಾತ್ರ ನಿಜ. ಮೂರು ರೂಪಗಳನ್ನು ಬಿಟ್ಟು ಅಲ್ಲಿ ನಿಜವಾದದ್ದೇನೂ ಇಲ್ಲ. ಸೂರ್ಯ, ಚಂದ್ರ, ಮಿಂಚು-ಮೊದಲಾದವುಗಳನ್ನು ಬಿಡಿಸಿ ನೋಡಿದರೂ ಹೀಗೆಯೇ ಇರುವದು. ಅಗ್ನಿಯಲ್ಲಿ ಈ ಬೆರಕೆಯು ಸ್ಪಷ್ಟವಾಗಿ ಕಾಣುವದರಿಂದ ತೇಜಸ್ಸನ್ನೆ ಉದಾಹರಣೆಯಾಗಿ ಕೊಟ್ಟಿದ್ದಾಗಿದೆ. ನೀರನ್ನೂ ಭೂಮಿಯನ್ನೂ ಹೀಗೆಯೇ ತಿಳಿಯಬೇಕು. ಹೀಗೆ ಜಗತ್ತೆಲ್ಲ ಅಗ್ನಿಯಂತೆ ಮೂರು ರೂಪಗಳನ್ನು ಬಿಟ್ಟು ಬೇರೆ ಇಲ್ಲವಾದ್ದರಿಂದ ಜಗತ್ತೆಂಬುದು ಬೇರೆ ಇಲ್ಲ. ಪೃಥ್ವಿ ನೀರಿನಿಂದ ಹುಟ್ಟಿದ್ದಾದ್ದರಿಂದ ನೀರು ನಿಜ; ಪೃಥ್ವಿಯೆಂಬುದು ಮಾತು ಮಾತ್ರ. ನೀರು ತೇಜಸ್ಸಿನಿಂದ ಹುಟ್ಟಿದ್ದಾದ್ದರಿಂದ ತೇಜಸ್ಸು ನಿಜ; ನೀರೆಂಬುದು ಮಾತು ಮಾತ್ರ. ತೇಜಸ್ಸು ಬ್ರಹ್ಮದಿಂದ ಹುಟ್ಟಿದ್ದಾದ್ದರಿಂದ ಬ್ರಹ್ಮವು ನಿಜ; ತೇಜಸ್ಸೆಂಬುದು ಮಾತು ಮಾತ್ರ. —(ಛಾಂ ೬-೪-೧..೪)

ಹೀಗೆ ಒಂದರಿಂದೊಂದು ಹುಟ್ಟಿರುವವುಗಳ ಬೆನ್ನು ಹಿಡಿದು ಬುಡವನ್ನು ಹುಡುಕಿಕೊಂಡು ಹೊರಟರೆ ಬ್ರಹ್ಮವನ್ನು ಕಾಣಬಹುದು. ಆದರೆ ಈ ಸಂದರ್ಭದಲ್ಲಿ ಮನುಷ್ಯನು ತನ್ನ ದೇಹೇಂದ್ರಿಯಗಳ ಗುಂಪನ್ನು ತಾನೆಂಬ ಬುದ್ಧಿಯಿಂದ ಉಳಿಸಿಕೊಳ್ಳುವ ಸಂಭವವುಂಟು. ಹಾಗಾಗಬಾರದು. ಆದ್ದರಿಂದ ತನ್ನ ದೇಹೇಂದ್ರಿಯಗಳೂ ಭೂತಗಳಿಂದಾದವುಗಳೆ ಎಂಬವನ್ನು ಈಗ ಮನಗಾಣಿಸಲಾಗುವದು.

ನಾವು ತಿಂದ ಅನ್ನವು ಜಠರಾಗ್ನಿಯಿಂದ ಬೆಂದು ಮೂರು ಭಾಗವಾಗುತ್ತದೆ. ಅದರ ಸ್ಥೂಲವಾದ ಅಂಶವು ಮಲವಾಗಿಯೂ ನಡುತರವಾದ ಅಂಶವು ರಸ ಮೊದಲಾದ ರೂಪವನ್ನು ಹೊಂದಿ ಮಾಂಸವಾಗಿಯೂ ಸೂಕ್ಷ್ಮವಾದ ಅಂಶವು ನಾಡಿಗಳೊಳಹೊಕ್ಕು ವಾಕ್ಕು ಮೊದಲಾದ ಇಂದ್ರಿಯಗಳಿಗೆ ಬೆಂಬಲವನ್ನು ಕೊಡುವ ಮನಸ್ಸಾಗಿಯೂ ಆಗುತ್ತದೆ. ಮನಸ್ಸು ಹೀಗೆ ಮೈದುಂಬಿಕೊಳ್ಳುವದರಿಂದ ಭೂತಗಳಿಂದಾದದ್ದೆ ಆಗಿರುವದು. ಕುಡಿದ ನೀರೂ ಮೂರು ಭಾಗವಾಗುತ್ತದೆ. ಅದರ ಸ್ಥೂಲವಾದ ಅಂಶವು ಮೂತ್ರ; ನಡುತರದ್ದು ರಕ್ತ; ಸೂಕ್ಷ್ಮವಾದದ್ದು ಪ್ರಾಣ. ಹೀಗೆ ಪ್ರಾಣವು ನೀರಿನಿಂದ ಮೈದುಂಬಿಕೊಳ್ಳುವದರಿಂದಲೆ ನೀರು ಕುಡಿಯುತ್ತಿದ್ದರೆ ಪ್ರಾಣವು ಹೋಗು

ವದಿಲ್ಲ. ತಿಂದ ಎಣ್ಣೆ, ತುಪ್ಪ--ಮೊದಲಾದ ತೇಜಸ್ಸಿನ ಪದಾರ್ಥಗಳೂ ಮೂರುಭಾಗವಾಗುತ್ತವೆ. ಅದರ ಸ್ಥೂಲವಾದ ಅಂಶವು ಮೂಳೆ; ನಡುತರದ್ದು ಮೂಳೆಯೊಳಗಣ ಜಿಡ್ಡು; ಸೂಕ್ಷ್ಮವಾದದ್ದು ವಾಕ್. ಎಣ್ಣೆ, ತುಪ್ಪ--ಮೊದಲಾದವುಗಳನ್ನು ತಿಂದರೆ ವಾಕ್ಕು ಸ್ಫುಟವಾಗುವದೆಂದು ಜನರು ಹೇಳುವದಕ್ಕೆ ಇದೇ ಕಾರಣ. ಬರೀ ಅನ್ನವನ್ನು ತಿನ್ನುವ ಇಲಿ ಮೊದಲಾದವುಗಳು ತಮ್ಮ ತಮ್ಮ ವಾಕ್ಕುಗಳುಳ್ಳವುಗಳಾಗಿ ಪ್ರಾಣದಿಂದಿರುವದೂ ಬರೀ ನೀರು ಕುಡಿಯುವ ಮೀನು, ಮೊಸಳೆ--ಮೊದಲಾದವುಗಳು ಮನಸ್ಸೂ ವಾಕ್ಕೂ ಉಳ್ಳವುಗಳಾಗಿರುವದೂ ಹಾಗೆಯೇ ಎಣ್ಣೆಯನ್ನು ಕುಡಿಯುವವುಗಳು ಪ್ರಾಣವೂ ಮನಸ್ಸೂ ಉಳ್ಳವುಗಳಾಗಿರುವದೂ ಉಂಟು. ಆ ಅನ್ನ, ನೀರು-ಮೊದಲಾದವುಗಳೆಲ್ಲ ಮೂರು ಭೂತಗಳ ಬೆರಕೆಯವಾದ್ದರಿಂದ ಎಲ್ಲ ಪ್ರಾಣಿಗಳಿಗೂ ಮನಸ್ಸೂ ವಾಕ್ಕೂ ಪ್ರಾಣವೂ ಇರುವದೇನೂ ಅಸಂಭವವಲ್ಲ. ಹೀಗೆ ಒಂದು ವಸ್ತುವಿನಿಂದ ಸ್ಥೂಲವಾದದ್ದು, ನಡುತರದ್ದು, ಸೂಕ್ಷ್ಮವಾದದ್ದು--ಎಂಬ ಭಾಗಗಳಾಗುವದು ಜಗತ್ತಿನಲ್ಲಿ ನಾವು ಕಾಣದ ವಿಷಯವೇನೂ ಅಲ್ಲ. ಮೊಸರನ್ನು ಕಡೆದಾಗ ಸೂಕ್ಷ್ಮವಾದ ಭಾಗವು ಮೇಲಕ್ಕೆ ಬಂದು ಬೆಣ್ಣೆಯಾಗುತ್ತದೆ. ಹೀಗೆ ಅನ್ನದಿಂದ ಮನಸ್ಸೂ ನೀರಿನಿಂದ ಪ್ರಾಣವೂ ತೇಜಸ್ಸಿನಿಂದ ವಾಕ್ಕೂ ಆಗುವವು.

---(ಛಾಂ ೬-೫,೬)

ಅನ್ನದಿಂದ ಮನಸ್ಸು ಹೇಗಾಗುವದೆಂದು ಸಂಶಯವು ಬಾಧಿಸುತ್ತಿದ್ದರೆ ಅದನ್ನು ದೃಷ್ಟಾಂತದಿಂದ ಪರಿಹರಿಸಲಾಗುವದು. ಅನ್ನದಿಂದ ಮೈದುಂಬಿದ ಮನಸ್ಸಿನ ಶಕ್ತಿಯು ಹದಿನಾರು ಕಲೆಗಳಾಗಿರುವದು. ಮನಸ್ಸು ಮೈದುಂಬಿಕೊಂಡಿದ್ದರೆ ನೋಡುವದು, ಕೇಳುವದು ಮತ್ತು ತಿಳಿಯುವದು ಮೊದಲಾದ ಕೆಲಸಗಳೆಲ್ಲ ನಡೆಯುವವು. ಮನಸ್ಸು ಕುಂಟಿದರೆ ಅದರಿಂದಾಗುವ ಕೆಲಸಗಳೆಲ್ಲವೂ ಕುಂಟುವವು. ದೇಹಕ್ಕೂ ಮತ್ತು ಇಂದ್ರಿಯಗಳಿಗೂ ಇರುವ ಶಕ್ತಿಯೆಲ್ಲ ಮನಸ್ಸಿನದೆ. ಲೋಕದಲ್ಲಿ ಮನಸ್ಸಿನ ಶಕ್ತಿಯುಳ್ಳವರೆ ನಿಜವಾದ ಶಕ್ತರು. ಆ ಮನಸ್ಸಿನ ಶಕ್ತಿಯು ಅನ್ನದಿಂದ ಪುಷ್ಟಿಗೊಳ್ಳುವದು. ಇದನ್ನು ಮನಗಾಣಿಸುವದಕ್ಕಾಗಿ ಒಬ್ಬ ಗುರು ತನ್ನ ಶಿಷ್ಯನನ್ನು ಹದಿನೈದು ದಿನ ಉಣ್ಣದೆ ಬರೀ ನೀರನ್ನು ಕುಡಿದುಕೊಂಡಿರೆಂ

ದನು. ನೀರಿನಿಂದ ಪ್ರಾಣವು ಮೈದುಂಬಿಕೊಳ್ಳುವದರಿಂದ ನೀನು ಸಾಯುವದಿಲ್ಲವೆಂದು ಗುರು ಅವನಿಗೆ ನಂಬಿಕೆಯನ್ನು ಕೊಟ್ಟನು. ಶಿಷ್ಯನು ಹದಿನೈದು ದಿನ ಉಣ್ಣದೆ ಇದ್ದು ಹದಿನಾರನೆಯ ದಿನ ಗುರುವಿನ ಬಳಿಗೆ ಬಂದನು. ಆಗ ಗುರು ವೇದಗಳನ್ನು ಹೇಳೆಂದನು. ಶಿಷ್ಯನು ಆಗ ಅವು ತನ್ನ ಮನಸ್ಸಿಗೆ ಹೊಳೆಯುವದಿಲ್ಲವೆಂದನು. ದೊಡ್ಡ ಕಟ್ಟಿಗೆಯ ರಾಶಿಯನ್ನು ಸುಟ್ಟ ಕೆಂಡಗಳಲ್ಲಿ ಒಂದು ಮಿಣುಕು ಹುಳದಷ್ಟು ಮಾತ್ರ ಉಳಿದು ಕೊಂಡಿದ್ದರೆ ಅದು ತನಗಿಂತ ದೊಡ್ಡದಾದ ರಾಶಿಯನ್ನು ಸುಡಲಾರದಿರುವಂತೆ ನಿನ್ನ ಮನಸ್ಸಿನ ಹದಿನಾರು ಕಲೆಗಳಲ್ಲಿ ಒಂದೇ ಕಲೆ ಮಾತ್ರ ಉಳಿದು ಕೊಂಡಿರುವದರಿಂದ ನಿನಗೆ ವೇದಗಳು ಹೊಳೆಯಲಿಲ್ಲವೆಂದೂ ಉಂಡರೆ ಅ ಮೇಲೆ ಹೊಳೆಯುವವೆಂದೂ ಆಗ ಗುರು ಶಿಷ್ಯನಿಗೆ ತಿಳಿಸಿದನು. ಅದರಂತೆ ಶಿಷ್ಯನು ಉಂಡುಬಂದನು. ಆಗ ಗುರು ಯಾವ ಗ್ರಂಥವನ್ನು ಕೇಳಿದರೂ ಅರ್ಥವನ್ನು ಕೇಳಿದರೂ ಶಿಷ್ಯನು ಎಲ್ಲವನ್ನೂ ಹೇಳಿದನು. ಆ ಮಿಣುಕು ಹುಳದಷ್ಟು ಕೆಂಡದ ಮೇಲೆ ಸಣ್ಣ ಸಣ್ಣ ಕಟ್ಟಿಗೆಯನ್ನೊಟ್ಟಿ ಹೊತ್ತಿಸಿದರೆ ಅದು ಬೇಕಾದಷ್ಟು ಸುಡುವಂತೆ ಶಿಷ್ಯನಲ್ಲಿ ಒಂದೇ ಕಲೆಯಾಗಿ ಉಳಿದು ಕೊಂಡಿದ್ದ ಮನಸ್ಸು ಅನ್ನದಿಂದ ಪುಷ್ಟಿಗೊಂಡು, ಚೆನ್ನಾಗಿ ಬೆಳಗುತ್ತ, ವೇದ ಗಳನ್ನು ಸ್ಮರಣೆಗೆ ತಂದುಕೊಂಡಿತು. ಆದ್ದರಿಂದ ಮನಸ್ಸು ಅನ್ನಮಯ. ಹೀಗೆ ಪ್ರಾಣವು ಜಲಮಯ; ವಾಕ್ಕು ತೇಜೋಮಯ —(ಛಾಂ ೬-೭)

ಇನ್ನು ಈ ಶರೀರದ ಬುಡವು ಯಾವದೆಂಬದನ್ನು ವಿಚಾರ ಮಾಡೋಣ. ಶರೀರವೆಲ್ಲ ಅನ್ನದಿಂದಲೆ ಆಗಿರುವದು. ತಿಂದ ಅನ್ನವು ಜಠರಾಗ್ನಿಯಿಂದ ಬೆಂದು ನೀರಾಗಿ ರಸದ ರೂಪವಾಗುತ್ತದೆ. ಅದರಿಂದ ರಕ್ತ, ರಕ್ತದಿಂದ ಮಾಂಸ, ಮಾಂಸದಿಂದ ಕೊಬ್ಬು, ಕೊಬ್ಬಿನಿಂದ ಮೂಳೆಗಳು, ಮೂಳೆಗ ಳಿಂದ ಮಜ್ಜೆಯೆಂಬ ಸಾರ, ಮಜ್ಜೆಯಿಂದ ರೇತಸ್ಸು—ಹೀಗೆ ಸಾಗುತ್ತದೆ. ಆದ್ದರಿಂದ ದೇಹವನ್ನು ನೋಡಿ ಅದರ ಮೂಲವು ಅನ್ನವೆಂದು ಕಾಣಬೇಕು; ಅನ್ನವನ್ನು ನೋಡಿ ಅದರ ಮೂಲವು ನೀರೆಂದು ಕಾಣಬೇಕು; ನೀರನ್ನು ನೋಡಿ ಅದರ ಮೂಲವು ತೇಜಸ್ಸೆಂದು ಕಾಣಬೇಕು; ತೇಜಸ್ಸೂ ನಾಶವಾಗು ವದಾದ್ದರಿಂದ ಅದರ ಮೂಲವೇನೆಂದು ನೋಡಿ ಬ್ರಹ್ಮವೆಂದು ಕಾಣ ಬೇಕು. —(ಛಾಂ೬-೮.೪)

## ಜೀವರ ಹುಟ್ಟು

ಹೀಗೆ ಜಡಗಳ ಗುಂಪಿನ ಬುಡವನ್ನು ಹುಡುಕುತ್ತ ಹೋಗಿ ಬ್ರಹ್ಮವನ್ನು ಕಾಣುವದೆಂದರೆ ಅದು ನಮಗೆ ಹೊರಗಿನದಾಗಿ ಶ್ರಮೆಗೆ ತಕ್ಕ ಫಲವಾಗದಿರುವದೊಂದು, ಅದು ಇಂದ್ರಿಯಗಳಿಗೆ ಗೋಚರವಾಗತಕ್ಕದ್ದಲ್ಲವಾದ್ದರಿಂದ ಅದರ ಅರಿವು ನಮಗೆ ಬರೀ ಊಹೆಯದಾಗಿ ಪರಿಣಮಿಸುವದೊಂದು--ಹೀಗಾಗಿ ಅದು ನಮಗೆ ಕಣ್ಣಿಗೆ ಕಟ್ಟಿದ ಹಾಗೆ ಆಗುವ ಸಂಭವವಿಲ್ಲವಾದ್ದರಿಂದ ಅದನ್ನು ಕಾಣುವ ಕೆಲಸವು ಸಮರ್ಪಕವಾಗಿ ನಡೆದಂತೆ ಆಗುವದಿಲ್ಲ. ಜೀವರ ಹುಟ್ಟನ್ನೂ ವಿಚಾರ ಮಾಡಿದಾಗ ಆ ಕೆಲಸವು ಮುಗಿಯುವದು. ಜಗತ್ತಿನಲ್ಲಿ ಜಡ, ಜೀವ--ಎಂಬೆರಡು ದೊಡ್ಡ ವಿಭಾಗಗಳೆಂಬ ಮಾತು ಮೊದಲೇ ಬಂದಿದೆಯಷ್ಟೆ. ಅದರಲ್ಲಿ ಜಡವೆಂಬ ಒಂದು ಭಾಗವನ್ನು ಮಾತ್ರ ಹಿಡಿದುಕೊಂಡು ಹುಡುಕಿದರೆ ಅದು ಹೇಗೆ ಸಿಕ್ಕೀತು? ಇದರ ಮೇಲೆ ಚೈತನ್ಯವಾದ ಬ್ರಹ್ಮವು ಜಡವೆಂಬ ಭಾಗದ ಬುಡದಲ್ಲಿ ಕಾಣಿಸಿಕೊಳ್ಳುವದಕ್ಕಿಂತಲೂ ಚೈತನ್ಯದಂತೆ ಕಾಣಬರುವ ಜೀವವೆಂಬ ಭಾಗದಲ್ಲಿ ಎದ್ದು ಕಾಣಿಸಿಕೊಳ್ಳುವದು ಸ್ವಭಾವವಾಗಿರುವದು. ಆದ್ದರಿಂದ ಇನ್ನು ಜೀವರ ಹುಟ್ಟನ್ನು ಕುರಿತು ವಿಚಾರ ಮಾಡಲಾಗುವದು.

ಬ್ರಹ್ಮವು ಹೊರಗಣ ಜಗತ್ತನ್ನೂ ಶರೀರವನ್ನೂ ಹುಟ್ಟಿಸುವದಕ್ಕೆ ಮೊದಲು ನಾನು ಮಾಡುವವನೆಂಬ ಮತ್ತು ಅನುಭವಿಸುವವನೆಂಬ ಲಕ್ಷಣವುಳ್ಳ ಜೀವನನ್ನು ಹುಟ್ಟುಗಟ್ಟುವದು. ಬ್ರಹ್ಮದಲ್ಲಿ ನಾನು ಮಾಡುವವನೆಂಬ ಮತ್ತು ಅನುಭವಿಸುವವನೆಂಬ ಲಕ್ಷಣವಿಲ್ಲ. ಇಂಥ ಶುದ್ಧವಾದ ಬ್ರಹ್ಮದಲ್ಲಿ, ಹಗ್ಗದಲ್ಲಿ ಹಾವು ಹೇಗೊ ಹಾಗೆ, ಜೀವವು ಕಾಣಿಸಿಕೊಳ್ಳುವದು. ಈ ಜೀವನಿಗಾಗಿಯೇ ಪ್ರಾಣ ಮೊದಲಾದ ಬಗೆಬಗೆಯಾದ ಹೊರಗಣ ವಸ್ತುಗಳೂ ಶರೀರವೂ ಆದವು. ಈ ಹೊರಗಣ ವಸ್ತುಗಳ ಮತ್ತು ಶರೀರಗಳ ಹುಟ್ಟೆಂಬುದೆಲ್ಲ ಈ ಜೀವನೆಂಬುವನಿಂದಲೆ ಆಯಿತು. ಇವುಗಳನ್ನೆಲ್ಲ ಹುಟ್ಟಿಸುವ ಅಧಿಕಾರವು ಅವನದೆ. ಅವನಿಗೆ ಹಿಂದಿನ ತಿಳಿವಳಿಕೆಗೆ ಅನುಗುಣವಾಗಿ ನೆನಪಾಗುವದು. ಆದ್ದರಿಂದ ಇವಕ್ಕಿದು ಕಾರಣವೆಂಬ ಅರಿವಿನಿಂದ ಇದರಿಂದಿದಾಗುವದೆಂಬ ಅರಿವು, ಅದರಿಂದ ಇದಕ್ಕಿದು

ಕಾರಣವೆಂಬ ಮತ್ತು ಇದರಿಂದಿದಾಗುವದೆಂಬ ನೆನಪು, ಅದರಿಂದ ಅದರ ಅರಿವು, ಅದರಿಂದ ಅದಕ್ಕೆ ಬೇಕಾದ ಉಪಕರಣ ಮೊದಲಾದವುಗಳ ಅರಿವುಗಳು, ಅವುಗಳಿಂದ ಅದರ ನೆನಪು, ಮತ್ತೆ ಅವುಗಳ ಅರಿವು--ಹೀಗೆ ಎಲ್ಲವುಗಳ ಹುಟ್ಟಿಗೂ ಜೀವರ ಹುಟ್ಟೇ ಮೂಲ. ಆ ಜೀವರ ಹುಟ್ಟಿಗೆ ಕಾರಣವೇನೆಂದರೆ: ಒಂದು ಕಡೆ ಬಿದ್ದಿರುವ ಹಗ್ಗವನ್ನು ಇದು ಹಗ್ಗವೇ ಎಂದು ಗೊತ್ತುಮಾಡಿಕೊಳ್ಳಲಾರದೆ ಮುಬ್ಬುಗತ್ತಲೆಯಲ್ಲಿ 'ಇದೇನು ಹಾವೋ? ನೀರ ಕೋಡಿಯೊ? ಕೋಲೋ?' ಎಂದು ಬಗೆಬಗೆಯಾಗಿ ಹುಟ್ಟುಗಟ್ಟುವಂತೆ ಬ್ರಹ್ಮದ ನಿಜಸ್ಥಿತಿ ತಿಳಿಯದಿರುವದೇ ಜೀವರ ಹುಟ್ಟಿಗೆ ಕಾರಣ. ಮೊದಲು ಹಗ್ಗವೆಂದೇ ನಿಜಸ್ಥಿತಿ ಗೊತ್ತಾಗಿದ್ದರೆ ಹಾವು ಮೊದಲಾದವುಗಳನ್ನು ಹುಟ್ಟುಗಟ್ಟುವ ಕಾರಣವೆ ಇರುವದಿಲ್ಲ. ತನ್ನ ಕೈಬೆರಳುಗಳಲ್ಲಿ ಇನ್ನೊಂದನ್ನು ಹುಟ್ಟುಗಟ್ಟುವದುಂಟೇನು? —(ಮಾಂ ೨-೧೬,೧೭)

ಜೀವರ ಹುಟ್ಟನ್ನು ಕುರಿತು ಒಂದು ಕಡೆ ಹೇಳಿರುವದೇನೆಂದರೆ: ಧಗಧಗ ಉರಿಯುತ್ತಿರುವ ಬೆಂಕಿಯಿಂದ ಬೆಂಕಿಯ ಲಕ್ಷಣಗಳೆ ಇರುವ ಕಿಡಿಗಳು ಹತ್ತು ದಿಕ್ಕಿಗೂ ಲೆಕ್ಕವಿಲ್ಲದಷ್ಟು ಸಿಡಿಯುವಂತೆ ಬ್ರಹ್ಮದಿಂದ ಅನೇಕ ಜೀವರು ಹುಟ್ಟುವರು. ಇಲ್ಲಿರುವ ಅನೇಕವೆಂಬ ಮಾತಿನ ಅರ್ಥದ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು. ದೊಡ್ಡ ಆಕಾಶವು ಒಂದೇ ಆಗಿ ಎಲ್ಲೆಲ್ಲಿಯೂ ಇದ್ದುಕೊಂಡು ಅನೇಕ ಗಡಿಗೆಗಳ ಸಂಬಂಧಗೊಂಡಾಗ ಅವುಗಳ ಅನೇಕ ಬಾಯಿಗಳ ಭೇದದಿಂದ ಅನೇಕ ಗಡಿಗೆಯ ಬಯಲೆನಿಸಿದಂತೆ ಅನೇಕ ಹೆಸರುಗಳೂ ಆಕಾರಗಳೂ ಉಳ್ಳ ದೇಹಗಳ ಸಂಬಂಧದಿಂದ ಮಾತ್ರ ಜೀವರು ಅನೇಕರು. ಗಡಿಗೆಗಳೊಡೆದು ಹೋದರೆ ಅವುಗಳ ಬಾಯಿಯ ಭೇದಗಳಿಲ್ಲದಂತಾಗಿ ಗಡಿಗೆಗಳ ಬಯಲು ದೊಡ್ಡ ಬಯಲಿನಲ್ಲಿ ಸೇರಿಹೋಗುವಂತೆ ದೇಹಗಳು ನಾಶವಾದರೆ ಜೀವರೆಲ್ಲ ಬ್ರಹ್ಮದಲ್ಲಿಯೆ ಸೇರಿಹೋಗುವರು. —(ಮುಂ ೨-೧-೧)

ಬ್ರಹ್ಮವು ಜೀವರೂಪದಿಂದ ಪ್ರವೇಶಿಸಿದ ದಾರಿಯನ್ನು ಕುರಿತು ಒಂದು ಕಡೆ ಹೇಳಿರುವದೇನೆಂದರೆ: ಬ್ರಹ್ಮವು ಲೋಕಗಳನ್ನೂ ಅವುಗಳನ್ನಾಳುವವರನ್ನೂ ಹುಟ್ಟಿಸಿದ ಮೇಲೆ ಊರನ್ನೂ ಊರ ಜನರು ಮೊದಲಾದವ

ವನ್ನೂ ಏರ್ಪಡಿಸಿದ ಅರಸನು ಮತ್ತೊಬ್ಬರ ಭೋಗಕ್ಕಾಗಿ ಇರುವ ಇವೆಲ್ಲ ತನಗಲ್ಲದೆ ಮತ್ತೆ ಯಾರಿಗೆಂದು ಯೋಚಿಸುವಂತೆ ಯೋಚಿಸಿತು. ತಾನು ಅವುಗಳೊಳಹೊಕ್ಕು ನಿಲ್ಲದೆ ಹೋದರೆ ಶರೀರದ ನಡೆವಳಿಕೆಗಳೆಲ್ಲ ವ್ಯರ್ಥವಾಗುವದರಿಂದ, ಊರಿಗೆ ಅರಸನು ಹೋಗೊ ಹಾಗೆ, ತಾನು ಒಳಹೊಕ್ಕು ಅಲ್ಲಿನ ನಡೆವಳಿಕೆಗಳನ್ನೆಲ್ಲ ನೋಡುವವನಾಗಬೇಕೆಂದು ಬ್ರಹ್ಮದ ಮನಸ್ಸಿಗೆ ಬಂತು. ಜಡಪದಾರ್ಥಗಳಿರುವದೆಲ್ಲ ಮತ್ತೊಬ್ಬರ ಭೋಗಕ್ಕೆ. ಊರವರ ಕೆಲಸಗಳೆಲ್ಲ ಹೇಗೆ ಅರಸನಿಗಾಗಿಯೋ ಹಾಗೆ ಶರೀರದ ಕೆಲಸಗಳೆಲ್ಲ ಚೇತನನಾದ ತನಗೇ ಸಲುವೆಂದು ಅದು ತಿಳಿಯಿತು. ಊರೊಳಗಿದ್ದು ನೋಡಿಕೊಳ್ಳದೆ ಇರುವ ಅರಸನನ್ನು ಯಾರೂ ಕೇಳುವವರೇ ಇಲ್ಲವಾಗುವಂತೆ ತಾನು ಇದರೊಳಹೊಕ್ಕು ನೋಡಿಕೊಳ್ಳದಿದ್ದರೆ ತನ್ನನ್ನು ಯಾರೂ ಕೇಳುವವರೇ ಇಲ್ಲವಾಗುವರೆಂದು ಅದಕ್ಕೆ ತೋರಿತು. ಇದಲ್ಲದೆ ತಾನು ಇದರೊಳಹೊಕ್ಕರೆ ತನ್ನ ಅರಿವಿನ ಸ್ವರೂಪವು ತಿಳಿಯಬರುವದಕ್ಕೆ ದಾರಿಯಾಗುವದೆಂಬುದನ್ನರಿತು ಬ್ರಹ್ಮವು ಶರೀರದ ಯಾವ ದಾರಿಯಿಂದ ಒಳಕ್ಕೆ ಹೋಗೋಣವೆಂದು ಆಲೋಚಿಸಿತು. ಶರೀರಕ್ಕೆ ಒಳಹೊಗುವದಕ್ಕೆ, ಇಂದ್ರಿಯಗಳು ಪ್ರವೇಶಿಸಿರುವ ಗೂಡುಗಳನ್ನು ಬಿಟ್ಟರೆ, ಎರಡು ಮಾರ್ಗಗಳಿವೆ. ಒಂದು ಅಂಗಾಲು; ಇನ್ನೊಂದು ನಡುನೆತ್ತಿ. ಬ್ರಹ್ಮದ ಸೇವಕನೂ ಶರೀರದ ಸರ್ವಾಧಿಕಾರಿಯೂ ಆದ ಪ್ರಾಣನು ಅಂಗಾಲಿಂದ ಒಳಹೊಕ್ಕಿದ್ದನು. ಆದ್ದರಿಂದ ಅದನ್ನು ಬಿಟ್ಟು ಬ್ರಹ್ಮವು ಇನ್ನೊಬ್ಬರು ತುಳಿಯದೆ ತನಗೇ ಮೀಸಲಾಗಿರುವ ನಡುನೆತ್ತಿಯನ್ನು ಸೀಳಿಕೊಂಡು ಒಳಹೊಗುತ್ತೇನೆಂದು ನಿಶ್ಚಯಿಸಿ ಒಂದು ಕೂದಲ ಮೊನೆಯಷ್ಟು ದಾರಿಯನ್ನು ಮಾಡಿಕೊಂಡು ಒಳಹೊಕ್ಕಿತು. ಆ ನಡುನೆತ್ತಿಯ ಬಾಗಿಲು ತಲೆಗೆ ಎಣ್ಣೆಯನ್ನೊತ್ತಿದಾಗ ಅದರ ತಂಪನ್ನು ಒಳಕ್ಕೆ ತಿಳಿಯಗೊಡುವದಾಗಿರುವದು. ಶರೀರಕ್ಕೆ ಕಣ್ಣು, ಕಿವಿ--ಮೊದಲಾದ ಎಷ್ಟೋ ಬಾಗಿಲುಗಳಿದ್ದರೂ ಅವೆಲ್ಲ ಸೇವಕರಾದ ದೇವತೆಗಳು ಒಳಹೊಕ್ಕ ಸಾಮಾನ್ಯವಾದ ದಾರಿ. ಅವು ಅಷ್ಟು ಹೆಚ್ಚಿನ ಆನಂದವನ್ನು ಕೊಡತಕ್ಕವುಗಳಲ್ಲ. ದೇಹವನ್ನು ಬಿಡು

ವಾಗ ಈ ನಡುನೆತ್ತಿಯ ಬಾಗಿಲಿನಿಂದ ಹೊರಬಿದ್ದವರು ಬ್ರಹ್ಮವನ್ನು ಸೇರುವರೆಂದು ಹಿಂದೆ ಹೇಳಿರುವದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

--(ಐ ೩-೧೧,೧೨)

ಜೀವರೂಪದ ಪ್ರವೇಶವನ್ನು ಕುರಿತು ಇನ್ನೊಂದು ಕಡೆ ಹೇಳಿರುವದೇನೆಂದರೆ: ಬ್ರಹ್ಮವು ಹಿಂದಿನ ಸೃಷ್ಟಿಯಲ್ಲಿ ತಾನು ಪ್ರಾಣವನ್ನು ಹಿಡಿದುಕೊಂಡಿದ್ದ ಜೀವರೂಪದಲ್ಲಿದ್ದದ್ದನ್ನು ನೆನೆಸಿಕೊಂಡು ಈಗಲೂ ತಾನೆ ಪ್ರಾಣವನ್ನು ಹಿಡಿದುಕೊಂಡಿರುವವನಾಗಿ ಶರೀರದ ಒಳಹೊಕ್ಕು ನೋಡುವದು, ಕೇಳುವದು—ಮೊದಲಾದ ಅರಿವುಗಳನ್ನು ಹೊಂದುತ್ತ ಹೆಸರುಗಳನ್ನೂ ಆಕಾರಗಳನ್ನೂ ಹೊರಗೆಡಹಿತು. ಎಲ್ಲವನ್ನೂ ಬಲ್ಲ ಬ್ರಹ್ಮವು ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿ ಇರಬಹುದಾಗಿರುವಾಗ ದುಃಖಗಳನ್ನು ಅನುಭವಿಸುತ್ತೇನೆಂದು ಅನೇಕ ಕೇಡುಗಳ ತೌರುಮನೆಯಾದ ದೇಹದೊಳಕ್ಕೆ ತಾನಾಗಿ ಹೋಗುವದು ಸರಿಯೆನಿಸಲಾರದೆಂದು ತೋರಬಹುದು. ಅದು ದುಃಖವನ್ನು ಅನುಭವಿಸುತ್ತೇನೆಂದು ತನ್ನ ನಿಜಸ್ವರೂಪದಿಂದಲೆ ಒಳಹೊಕ್ಕಿದ್ದರೆ ಅದು ಸರಿಯೆನಿಸುತ್ತಿರಲಿಲ್ಲ. ಅದು ಒಳಹೊಕ್ಕಿರುವದು ಜೀವರೂಪದಿಂದ. ಜೀವನೆಂದರೆ ಬರೀ ಪ್ರತಿಬಿಂಬದಂತೆ. ಕನ್ನಡಿಯಲ್ಲಿ ಮನುಷ್ಯನು ಪ್ರತಿಬಿಂಬಿಸುವಂತೆ ಜೀವನು ಬುದ್ಧಿಯಲ್ಲ ಒಡೆದು ಮೂಡಿದ ಬ್ರಹ್ಮರೂಪ. ಮೂಲವಾದ ಬಿಂಬವನ್ನೂ ಈ ಪ್ರತಿಬಿಂಬವನ್ನೂ ಬಿಡಿಸಿ ತಿಳಿಯದಿರುವದೆ ತಾನು ಸುಖಿ, ದುಃಖಿ--ಎಂಬ ಮುಂತಾದ ಕಲ್ಪನೆಗಳಿಗೆ ಬೀಜ. ಬುದ್ಧಿಯಲ್ಲಿ ತನ್ನ ನೆರಳುಬಿದ್ದ ಮಾತ್ರಕ್ಕೆ ಆ ಬ್ರಹ್ಮಕ್ಕೆ ದೇಹದ ಸುಖದುಃಖಗಳು ಅಂಟಿಕೊಂಡಾವೆ? ಪುರುಷನ ನೆರಳು ಕನ್ನಡಿಯಲ್ಲಿ ಬಿದ್ದರೆ ಕನ್ನಡಿಯ ಕಲೆಯು ಪುರುಷನ ಮುಖಕ್ಕೆ ಹತ್ತೀತೆ? ಅದರಂತೆ ಸೂರ್ಯನ ನೆರಳು ನೀರಿನಲ್ಲಿ ಬಿದ್ದರೆ ನೀರಿನ ಹೊಲಸು ಸೂರ್ಯನಿಗೆ ಅಂಟೀತೆ? ಜೀವನು ಪರಮಾತ್ಮನ ಪ್ರತಿಬಿಂಬವೆಂಬ ಮಾತನ್ನು ಕೇಳಿದಾಗ ಸೂರ್ಯನಿಗೂ ನೀರಿಗೂ ದೂರವಿರುವದರಿಂದ ಪ್ರತಿಬಿಂಬಿಸಬಹುದೆಂದೂ ಆತ್ಮನು ಎಲ್ಲೆಲ್ಲಿಯೂ ಇರುವವನಾದ್ದರಿಂದ ಹೇಗೆ ಪ್ರತಿಬಿಂಬಿಸುವನೆಂದೂ ಯೋಚನೆ

ಯುಂಟಾಗಬಹುದು. ದೃಷ್ಟಾಂತವನ್ನು ಎಲ್ಲ ಭಾಗದಲ್ಲಿಯೂ ಹೊಂದಿಸುವದಕ್ಕೆ ಹೋಗಬಾರದು. ನೀರು ಅಲ್ಲಾಡಿದಾಗ ಸೂರ್ಯನು ಅಲ್ಲಾಡಿದಂತೆ ಕಂಡರೂ ಆ ಅಲ್ಲಾಟವೆಂಬ ಧರ್ಮವು ನೀರಿನಲ್ಲಿರುವದೇ ಹೊರತು ಸೂರ್ಯನಲ್ಲಿ ಹೇಗಿಲ್ಲವೊ ಹಾಗೆ ಮನಸ್ಸಿನಲ್ಲಿ ಸುಖದುಃಖಗಳಾದಾಗ ಅವು ಆತ್ಮನಲ್ಲಿ ಕಂಡರೂ ಆ ಉಬ್ಬರವಿಳಿತಗಳು ಮನಸ್ಸಿನದೇ ಹೊರತು ಆತ್ಮನದಲ್ಲವೆಂದು ತಿಳಿಯಬೇಕು. ಹೀಗೆ ಜೀವನು ಪ್ರತಿಬಿಂಬವಂತೆ ಸುಳ್ಳಾದವನಾದರೆ ಅವನಿಗೆ ಪರಲೋಕ, ಈ ಲೋಕ-ಮೊದಲಾದವುಗಳೆಲ್ಲ ಇಲ್ಲವಾಗುವವೆಂದರೆ ಹಾಗಲ್ಲ. ಅವನು ಇರುವಿಕೆಯ ರೂಪದಿಂದ ನಿಜವಾದವನೆ ಹೆಸರುಗಳೂ ಆಕಾರಗಳೂ ಉಳ್ಳವುಗಳೆಲ್ಲ ಇರುವಿಕೆಯ ರೂಪದಿಂದ ನಿಜವಾದವುಗಳೆ ಆದರೂ ತಾವು ಸುಳ್ಳಾದವುಗಳೆ. —(ಛಾಂ-೩-೨)

ಬ್ರಹ್ಮವು ಜೀವರೂಪದಿಂದ ಪ್ರವೇಶಮಾಡಿದಂತಾಯಿತೆಂದ ಮೇಲೆ ಜೀವನ ಪರಿಮಾಣವನ್ನು ಕುರಿತು ವಿಚಾರ ಮಾಡುವದಗತ್ಯವಾಗುತ್ತದೆ. ಏಕೆಂದರೆ: ಅವನಿಗೆ ಹೋಗುವಿಕೆಯೂ ಬರುವಿಕೆಯೂ ಉಂಟು. ಜೀವವನ್ನು ಅಣುವೆನ್ನಬೇಕು; ಇಲ್ಲದಿದ್ದರೆ ಶರೀರದಷ್ಟಿರುವನೆನ್ನಬೇಕು; ಇಲ್ಲದಿದ್ದರೆ ಎಲ್ಲೆಲ್ಲಿಯೂ ತುಂಬಿರುವನೆನ್ನಬೇಕು. ಜೀವನು ಎಚ್ಚರದಲ್ಲಿ ಇಂದ್ರಿಯಗಳಲ್ಲಿಯೂ ಕನಸಿನಲ್ಲಿ ಮನಸ್ಸಿನಲ್ಲಿಯೂ ನಿದ್ರೆಯಲ್ಲಿ ಹೃದಯದಲ್ಲಿಯೂ ಇರುವನೆಂದು ಹೇಳುವದರಿಂದ ಹೀಗೆಲ್ಲ ಶರೀರದ ಒಳಗೆ ಸಂಚರಿಸುವವನು ಅಣುವಾಗಿರುವನೆಂದು ಊಹಿಸುವದಕ್ಕೆ ದಾರಿ ಇರುವದು. ಆದರೆ ಅವನು ತನ್ನ ನಿಜವಾದ ರೂಪದಿಂದ ಅಣುವಲ್ಲ; ಬುದ್ಧಿ ಮೊದಲಾದವುಗಳ ಸಂಬಂಧದಿಂದ ಅಣು. ದೇಹದ ಎಲ್ಲ ಕಡೆಯಲ್ಲಿಯೂ ಅವನು ಅರಿಯುತ್ತಿರುವದರಿಂದ ಅವನನ್ನು ಎಲ್ಲಿಯೋ ಒಂದೆಡೆಯಲ್ಲಿರುವ ಅಣುವೆನ್ನಲಾಗದೆಂಬ ಆಕ್ಷೇಪಣೆಯನ್ನು ಕೇಳಿ ದೀಪವು ಎಲ್ಲಿಯೋ ಒಂದೆಡೆಯಲ್ಲಿದ್ದು ತನ್ನ ಬೆಳಕೆಂಬ ಗುಣವನ್ನು ಮನೆಯಲ್ಲೆಲ್ಲ ಹರಡುವಂತೆ ಅಣುವಾದ ಜೀವನು ಶರೀರದ ಒಂದೆಡೆಯಲ್ಲಿದ್ದು ತನ್ನ ಚೈತನ್ಯವೆಂಬ ಗುಣವನ್ನು ಹರಡಿಕೊಂಡಿರುವನೆಂದರೆ ಅದೂ ಹೊಂದುವದಿಲ್ಲ. ಅಣುವಿಗೆ ಅವಯವಗಳಿಲ್ಲದ್ದರಿಂದಲೂ ಅಣುವಿನಲ್ಲಿ ಗುಣವೊಂದು ಬೇರೆ ಇರುವದು ಅಸಂಭವವಾ

ದ್ದರಿಂದಲೂ ಅದಕ್ಕೆ ದೀಪದ ಹೋಲಿಕೆ ಸಲ್ಲುವದಿಲ್ಲ. ಜೀವನು ಕೂದಲ ತುದಿಯಷ್ಟು ಚಿಕ್ಕವನೆಂದು ಶ್ರುತಿಯೂ ಹೇಳುವದುಂಟು. ಅದು ಬುದ್ಧಿಯ ಸಂಬಂಧದಿಂದ ಅಥವಾ ಅವನು ಸುಲಭವಾಗಿ ತಿಳಿಯಬರಲೆಂಬುದರಿಂದ ಮಾತ್ರ ಹೇಳಿದ ಮಾತು. ಜೀವನೆನಿಸಿಕೊಂಡಿರುವವರೆಗೂ ಅವನಿಗೆ ಬುದ್ಧಿಯ ಸಂಬಂಧ ಬಿಟ್ಟದ್ದಲ್ಲ. ಅವನು ಪರಲೋಕಕ್ಕೆ ಹೋದಾಗ ಬುದ್ಧಿಯೊಡನೆಯೆ. ಗಾಢನಿದ್ರೆಯಲ್ಲಿ ಬುದ್ಧಿ ತೋರದೆ ಇದ್ದರೂ ಗಂಡಸುತನವು ಚಿಕ್ಕತನದಲ್ಲಿ ಹೇಗೆ ಬೀಜರೂಪದಲ್ಲಿರುತ್ತದೊ ಹಾಗೆ ಅದು ಆಗ ಬೀಜರೂಪದಲ್ಲಿರುವದು. ಬುದ್ಧಿಯ ಸಂಬಂಧದಿಂದ ಜೀವನನ್ನು ಅಣುವೆನ್ನಬೇಕೇ ಹೊರತು ಅವನ ನಿಜ ಸ್ವರೂಪವು ಅಣುವಲ್ಲ. (ಸೂ ೨-೩-೧೯)

ಇನ್ನು ಜೀವನು ಶರೀರದಷ್ಟಿರುವನೆನ್ನೋಣವೆಂದರ ಅದಕ್ಕೆ ಎಷ್ಟೋ ಕಷ್ಟಗಳಿವೆ. ಶರೀರದಷ್ಟು ಒಂದು ಗೊತ್ತಾದ ಪರಿಮಾಣದವನಾದರೆ ಅವನು ನಾಶವಾಗತಕ್ಕವನಾಗುತ್ತಾನೆ. ಏಕೆಂದರೆ: ಅಂಥ ಏನಾದರೊಂದು ಪರಿಮಾಣದವುಗಳೆಲ್ಲ ನಾಶವಾಗುವದನ್ನು ನಾವು ಕಂಡಿದ್ದೇವೆ. ಜೀವನು ನಾಶವಾಗುವವನಾದರೆ ಮಾಡಿದ ಕರ್ಮಗಳೆಲ್ಲ ವ್ಯರ್ಥವಾಗುತ್ತವೆ. ಇದನ ಮೇಲೆ ಮನುಷ್ಯನಾಗಿದ್ದವನು ಮುಂದಿನ ಜನ್ಮದಲ್ಲಿ ತನ್ನ ಕರ್ಮದ ಸೆಳೆತದಿಂದ ಆನೆಯಾದರೆ ಅದರ ತುಂಬ ತುಂಬಿಕೊಳ್ಳಲಾರನು. ಅದರಂತೆ ಅವನು ಇರುವೆಯಾದರೆ ಅಷ್ಟರೊಳಗೆ ಅಡಗಲಾರನು. ಅಷ್ಟೇಕೆ? ಒಂದು ಜನ್ಮದಲ್ಲಿಯೇ ಹುಡುಗನಾಗಿದ್ದಾಗಿನ ಜೀವವು ಪ್ರಾಯಬಂದಾಗಲೂ ಇರಬೇಕಾದರೆ ಅದು ಹಿಗ್ಗುವದು ಹೇಗೆ? ಹೀಗೆ ಅವನು ಹಿಗ್ಗುವವನೂ ಕುಗ್ಗುವವನೂ ಆದರೂ ಅವನಿಗೆ ನಾಶ ತಪ್ಪಿದ್ದಲ್ಲ. ಹಿಗ್ಗುವ ಮತ್ತು ಕುಗ್ಗುವ ವಸ್ತುಗಳೆಲ್ಲ ನಾಶವಾಗತಕ್ಕವುಗಳೆ. ಆದ್ದರಿಂದ ಅವನನ್ನು ಶರೀರದಷ್ಟೆನ್ನಬಾರದು. ಈ ಕಾರಣಗಳಿಂದ ಜೀವನು ಎಲ್ಲೆಲ್ಲಿಯೂ ತುಂಬಿರುವ ಸ್ವರೂಪದವನು. ಬ್ರಹ್ಮವೆ ಜೀವನಾಗಿ ಒಳಹೊಕ್ಕಿರುವದರಿಂದ ಎಲ್ಲೆಲ್ಲಿಯೂ ತುಂಬಿರುವಿಕೆಯು ಜೀವನಿಗೆ ಒಪ್ಪುವ ಮಾತಾಗುವದು. (ಸೂ ೨-೩-೭)

## ಜಗತ್ತು ಹುಟ್ಟಲೇ ಇಲ್ಲ

ಜಗತ್ತು ಹುಟ್ಟಿದ ವಿಷಯವು ಯಾವ ಜೀವರಿಗೂ ತಿಳಿಯುವದು ಶಕ್ಯವೇ ಇಲ್ಲ. ಏಕೆಂದರೆ: ಜೀವರೂ ಜಗತ್ತಿನಲ್ಲಿ ಸೇರಿದವರು. ಆದಕಾರಣ ಜಗತ್ತಿನ ಹುಟ್ಟಿನ ವಿಷಯಕ್ಕೆ ಅದನ್ನು ಹೇಳುವದಕ್ಕೇ ದೀಕ್ಷೆಯನ್ನು ತೊಟ್ಟು ಹೊರಟಿರುವ ಉಪನಿಷತ್ತಿನ ಮಾತುಗಳ ಮೇಲೆ ಭರವಸವನ್ನಿಡು ವದರ ಹೊರತು ಬೇರೆ ದಾರಿಯೇ ಇಲ್ಲ. ಜಡಗಳ ಹುಟ್ಟಿನ ವಿಷಯವಾಗಿ ಉಪನಿಷತ್ತುಗಳ ಮಾತಿನ ಘೋಷಣೆಯನ್ನು ನೋಡಿದರೆ ಒಂದೊಂದು ಕಡೆ ಒಂದೊಂದು ಬಗೆಯಾಗಿದೆ. ಜಗತ್ತು ಯಾವದೋ ಒಂದು ಕ್ರಮದಲ್ಲಿ ಹುಟ್ಟಿರಬೇಕೇ ಹೊರತು ಅನೇಕ ಕ್ರಮಗಳಲ್ಲಿ ಹುಟ್ಟಿರುವದಸಂಭವ. ಹೀಗಿರುವಾಗ ಅವುಗಳಲ್ಲಿ ಯಾವ ಕ್ರಮವನ್ನು ಮನ್ನಿಸಬೇಕು? ಉಪನಿಷತ್ತು ಅನೇಕ ಕ್ರಮಗಳನ್ನು ಹೇಳಿರುವ ಕಾರಣವೇನು? ಹೆಸರುಗಳನ್ನೂ ಆಕಾರಗಳನ್ನೂ ಹುಟ್ಟಿಸುವ ಅಧಿಕಾರವು ಜೀವನದೆಂಬ ಮಾತು ಬಂದಿದೆಯಷ್ಟೆ. ಅದು ಹೇಗೆ?

ಹೀಗೆ ಆಕ್ಷೇಪವೇಳುವದು ಸಹಜವಾಗಿದೆ. ವೇದಾಂತವು ಜಗತ್ತಿನ ಹುಟ್ಟಿನ ವಿಷಯವನ್ನು ಕುರಿತು ಹೇಳಹೊರಟಿರುವದು ನಿಜವಾದರೂ ಅದನ್ನು ಹೇಳುವದು ಅದರ ಉದ್ದೇಶವಲ್ಲ. ಏಕೆಂದರೆ: ಅದರಿಂದ ಫಲವಿಲ್ಲ. ಬ್ರಹ್ಮವನ್ನರಿತರೆ ಮೋಕ್ಷವೆಂಬ ಫಲವುಂಟು. ಜಗತ್ತಿನ ಹುಟ್ಟಿನ ಕ್ರಮವನ್ನರಿತರೇನಿದೆ? ಅದಕ್ಕೆ ಎಲ್ಲಿಯೂ ಯಾವ ಫಲವನ್ನೂ ಹೇಳಿಲ್ಲ. ಬ್ರಹ್ಮವನ್ನರಿಯಹೇಳುವದೇ ವೇದಾಂತದ ಉದ್ದೇಶ. ಅದು ಆ ಕೆಲಸವನ್ನು ಮಾಡುವಾಗ ನಡುವೆ ಜಗತ್ತಿನ ವಿಷಯವನ್ನು ತೆಗೆದುಕೊಳ್ಳದೆ ಆಗುವದೆ ಇಲ್ಲ. ಏಕೆಂದರೆ: ಕಾಣುತ್ತಿರುವ ಜಗತ್ತಿನಿಂದಲೆ ಕಾಣದೆ ಇರುವ ಬ್ರಹ್ಮವನ್ನು ನಿಲುಕಿಸಬೇಕಾಗಿದೆ. ಆದ್ದರಿಂದ ವೇದಾಂತವು ಜಗತ್ತಿನ ಹುಟ್ಟಿನ ವಿಷಯವನ್ನು ಹೇಳಬೇಕಾಯಿತು. ಈ ಮಾತು ಒಂದೊಂದು ಕಡೆ ಒಂದೊಂದು ವೇಷವನ್ನು ತಾಳಿರುವದಕ್ಕೆ ಬೇರೆ ಕಾರಣ ಉಂಟು. ನಿಜವಾಗಿ ಹುಟ್ಟಿರುವ ವಸ್ತುವಾದರೆ ಅದು ಹುಟ್ಟಿದ ಕ್ರಮವೂ ಒಂದೇ ಇರುತ್ತದೆ; ಅದನ್ನು ಹೇಳುವದರಲ್ಲಿಯೂ ಒಂದೇ ರೂಪವಿರುತ್ತದೆ. ಜಗ

ತ್ತಿನ ವಿಷಯ ಹಾಗಲ್ಲ. ಜಗತ್ತು ಹುಟ್ಟಲೇ ಇಲ್ಲ. ಹೀಗಿರುವಾಗ ಅದಕ್ಕೆ ಕ್ರಮವೆಲ್ಲಿಯದು? ಆದರೂ ಈ ಜಗತ್ತು ಹುಟ್ಟಿರುವದೆಂದು ಎಲ್ಲರೂ ತಿಳಿದಿರುವರು. 'ಬಣ್ಣದ ಬೆಕ್ಕಿಗೆ ಬಣ್ಣದ ಹಾಲು' ಎಂಬಂತೆ ಅವರಿಗೆ ಮೊದಮೊದಲು ಅವರ ತಿಳಿವಳಿಕೆಯನ್ನೆ ಹಿಂಬಾಲಿಸಿಕೊಂಡು ಹೇಳುತ್ತ ಹೋಗಿ ಮೆಲ್ಲಮೆಲ್ಲಗೆ ಅವರನ್ನು ನಿಜದ ಕಡೆಗೆ ತಿರುಗಿಸಬೇಕಾಗಿರುವದು. ಇದೇ ಉಪದೇಶಕ್ರಮ. ಆದ್ದರಿಂದ ಹೇಗೆ ಹೇಗೆ ಹೇಳಿದರೆ ಅವರ ಮನಸ್ಸಿಗೆ ಸರಿಯೆನಿಸೀತೋ ಆ ಕ್ರಮಗಳನ್ನೆಲ್ಲ ಉಪನಿಷತ್ತುಗಳು ಒಂದೊಂದನ್ನೊಂದು ಕಡೆ ಹೇಳಿರುವವು. ಕೇಳುವವನ ವಿಚಾರಶಕ್ತಿಯು ಬೆಳೆದಾಗ ಅದು ನಿಜವನ್ನು ಅವನ ಕಣ್ಣಿಗೆ ಕಟ್ಟಿದ ಹಾಗೆ ಇಡುವದು. ಜಗತ್ತು ಹುಟ್ಟಲೇ ಇಲ್ಲವೆಂಬುದೇ ಅದು ತಿಳಿಸಬೇಕಾದ ನಿಜ. ಅದನ್ನು ತಿಳಿಸುವದೇ ವೇದಾಂತದ ಉದ್ದೇಶ. ಏಕೆಂದರೆ: ಬ್ರಹ್ಮವನ್ನು ತಿಳಿಸುವ ಉದ್ದೇಶವು ನೆರವೇರುವದಕ್ಕೆ ಜಗತ್ತು ಹುಟ್ಟಲೇ ಇಲ್ಲವೆಂಬ ಅರಿವು ಸಹಾಯಕವಾಗುವದು. ಇಂಥ ಸಂದರ್ಭಗಳಲ್ಲಿ ವೇದಾಂತದ ಹಿಂದಿನ ಮತ್ತು ಮುಂದಿನ ಮಾತುಗಳನ್ನೆಲ್ಲ ಲೆಕ್ಕಕ್ಕೆ ತೆಗೆದುಕೊಂಡು ಒಂದು ನಿಲುಗಡೆಗೆ ಬರುವದೇ ಜಾಣತನ. ಹಾಗಲ್ಲದೆ ಒಂದು ಕಡೆ ಒಂದು ಮಾತಿರುವದನ್ನು ನೋಡಿ ಅದನ್ನೆ ಅದು ವೇದಾಂತದ ಮಾತಾದ್ದರಿಂದ ನಿಲುಗಡೆಗೆ ನಿಂತ ಮಾತೆಂದು ನಂಬುವದು ದಡ್ಡತನ ವೇದಾಂತವು ಕುರುಡು ನಂಬಿಕೆಯೆಂಬ ಕತ್ತಲೆಯು ಮರಿಯಲ್ಲ; ಅದು ತನ್ನ ಅನುಭವವನ್ನು ಹಿಡಿದುಕೊಂಡು ಯುಕ್ತಿಗಳ ಬೆಂಬಲದಿಂದ ಸಾಗುವ ವಿಚಾರದಿಂದ ಝುಗಝುಗಿಸುತ್ತ ಎದ್ದು ಕಾಣಿಸುವ ಬೆಳಕಿನ ಆಕಾಶದೀಪ. ಸಂಸಾರವೆಂಬ ಕುತ್ತಕ್ಕೆ ಮದ್ದನ್ನು ಹೇಳುವ ಪ್ರಸಂಗದಲ್ಲಿ ಜಗತ್ತೆಂಬುದೊಂದು ಇಲ್ಲವೇ ಇಲ್ಲವೆಂಬ ಒಂದನುಭವವನ್ನು ನೆನಪುಗೊಟ್ಟಿರುತ್ತೇವಷ್ಟೆ. ಒಂದು ಕಡೆ ಹಾಗೆ ಹೇಳಿ ಇನ್ನೊಂದು ಕಡೆ ಜಗತ್ತು ಹುಟ್ಟಿದ ಕ್ರಮವನ್ನು ಹೇಳಹೋದರೆ ಎರಡೂ ಹೇಗೆ ನಿಜವಾದಾವು? ಈ ಸಂದರ್ಭದಲ್ಲಿ ಯಾವದು ನಿಲುಗಡೆಗೆ ನಿಂತ ಮಾತೆಂಬುದನ್ನು ಗೊತ್ತುಮಾಡುವದಕ್ಕೆ ಯುಕ್ತಿಯ ಉಪಯೋಗವನ್ನು ಮಾಡಬೇಕು. ಅನುಭವದ ಮುಂದೆ ಮಾತಿಲ್ಲವಾದ್ದರಿಂದ ಜಗತ್ತಿಲ್ಲವೆಂಬ

ಮಾತಿನ ಅರ್ಥವನ್ನು ತಿರುಗಿಸುವದಕ್ಕೆ ಬರುವದಿಲ್ಲ. ಆದಕಾರಣ ಜಗತ್ತು ಹುಟ್ಟಿದ ಕ್ರಮವು, ಜನರು ತಾವು ಸಹಜವಾಗಿ ತಿಳಿದಿರುವದಕ್ಕೆ ಒಂದು ವ್ಯವಸ್ಥೆಯನ್ನು ಕೊಟ್ಟು ಮಾಡುವ ಅನುವಾದವೆಂದು ತಿಳಿಯ್ಬೇಕು. ಜಗತ್ತು ಹುಟ್ಟಲೇ ಇಲ್ಲವೆಂಬ ವಿಷಯುಕವಾದ ಸ್ಪಷ್ಟನಾದ ಮಾತುಗಳು ಇನ್ನು ಮುಂದೆ ಕೊಡಲಾಗುವವು.

ಕೆಲವರು ಹುಟ್ಟುವ ಸ್ವಭಾವವಿಲ್ಲದ ಮತ್ತು ಎಂದಿಗೂ ಅಳಿಯದ ಬ್ರಹ್ಮದಿಂದ ನಿಜವಾಗಿಯೇ ಜಗತ್ತು ಹುಟ್ಟಿತೆನ್ನುವರು. ಹುಟ್ಟುವ ಸ್ವಭಾವ ಷ್ಟೆಂದರೆ ತಾನು ಇನ್ನೊಂದರಿಂದ ಹುಟ್ಟಿದ್ದೂ ಅಲ್ಲವೆಂದೂ ತಾನು ಇನ್ನೊಂದಾಗಿ ಹುಟ್ಟುವದೂ ಅಲ್ಲವೆಂದೂ ಅರ್ಥ. ಇದರಿಂದಲೆ ಅದು ಅಳಿಯುವದೂ ಅಲ್ಲವೆಂದಾಯಿತು. ಹೀಗೆ ಹುಟ್ಟುವ ಸ್ವಭಾವವಿಲ್ಲದ್ದು ಜಗತ್ತಾಗಿ ಹುಟ್ಟಿದ ಮೇಲೆ ಅಗತ್ಯವಾಗಿ ಅಳಿಯಲೇ ಬೇಕು. ಅಳಿಯುವ ಸ್ವಭಾವವಿಲ್ಲದ ಬ್ರಹ್ಮವು ಅಳಿಯುವಂಥದ್ದು ಹೇಗೆ ಆದೀತು? ಹುಟ್ಟುಗುಣವೆಂದೂ ಬದಲಾಗುವದಿಲ್ಲ. ಬೆಂಕಿಯ ಬಿಸಿಯು ಅಳಿಯುವದುಂಟೇನು? ಅಳಿವಿಲ್ಲದ ಬ್ರಹ್ಮವು ಅಳಿಯುವ ಜಗತ್ತಾದದ್ದು ನಿಜವೆಂದರೆ ಮೊದಲು ಅದನ್ನು ಅಳಿವಿಲ್ಲದ್ದೆಂದು ಹೇಳಿದ ಮಾತು ಸುಳ್ಳು. ಬ್ರಹ್ಮವು ಜಗತ್ತಾಗಿ ಹುಟ್ಟುವದೆಂದು ಹೇಳುವವರಿಗೆ ಇಂಥದ್ದೊಂದು ಹುಟ್ಟದಿರುವದೆಂಬ ಸೊಲ್ಲೇ ಇಲ್ಲ. ಏಕೆಂದರೆ: ಬ್ರಹ್ಮ ಒಂದೇ ಹುಟ್ಟದಿರುವ ವಸ್ತು. ಅದೂ ಹುಟ್ಟುವದಾದ ಮೇಲೆ ಹುಟ್ಟದಿರುವದೆಂಬುದಿನ್ನಾವುದು? ಇರಲಿ. ಬ್ರಹ್ಮವು ಹುಟ್ಟುವದಿಲ್ಲವೆನ್ನುವವರ ಭಾಗಕ್ಕೆ ಹುಟ್ಟುವಿಕೆಯನ್ನು ಹೇಳುವ ಶ್ರುತಿಯು ವ್ಯರ್ಥವಾದೀತೆಂದು ಹೆದರಬೇಕಾದದ್ದೂ ಇಲ್ಲ. ಹುಟ್ಟುವಿಕೆಯ ಮಾತೆಲ್ಲ ಅನುವಾದವೆಂದು ಮೊದಲೇ ಹೇಳಿದ್ದೇವೆ. ಅಥವಾ ಆ ಶ್ರುತಿಯನ್ನು ನಾವು ಮುಖ್ಯವಾಗಿಟ್ಟುಕೊಂಡರೂ ಅದು ಸುಳ್ಳಾಗಿ ಹುಟ್ಟಿದ ವಿಷಯದ್ದೆಂದು ಹೇಳಬಹುದು. ನಿಜವಾಗಿ ಹುಟ್ಟಿದ ವಿಷಯದ್ದೆಂದೇ ಇಟ್ಟುಕೊಳ್ಳಬೇಕೆಂದರೆ ಅಂಥ ಹುಟ್ಟನ್ನು ತಿಳಿಯುವದರಿಂದ ಪ್ರಯೋಜನವಿಲ್ಲವೆಂದು ಮೊದಲೇ ಹೇಳಿದ್ದೇವೆ. ಹುಟ್ಟುವಿಕೆಯನ್ನು ಹೇಳುವ ಶ್ರುತಿಗೆಲ್ಲ ಮಾಯೆಯಿಂದಾಗುವ ಸುಳ್ಳು ಹುಟ್ಟೇ ಅರ್ಥ. ಹೀಗೆ ಅರ್ಥವನ್ನು ಮಾಡದೆ.

ಹೋದರೆ ಬ್ರಹ್ಮವು ಹುಟ್ಟುವ ಸ್ವಭಾವದ್ದೇ ಅಲ್ಲವೆಂಬ ಶ್ರುತಿಯನ್ನು ಹೊಂದಿಸುವದಕ್ಕೇ ಆಗುವದಿಲ್ಲ. ಇನ್ನೊಂದೇನೆಂದರೆ: ಜಗತ್ತು ನಿಜವಾಗಿ ಹುಟ್ಟಿರುವ ಪಕ್ಷದಲ್ಲಿ ಅನೇಕವಾಗಿರುವ ವಸ್ತುಗಳೆಲ್ಲ ನಿಜವಾಗಿರಬೇಕಾಗಿತ್ತು. ಅನೇಕವೆಂಬುವದಿಲ್ಲವೇ ಇಲ್ಲವೆಂದು ಶ್ರುತಿಯು ಘಂಟೆಯಂತೆ ಕೂಗಿ ಹೇಳುವದು. ಆದ್ದರಿಂದ ಜಗತ್ತು ಹುಟ್ಟಲೇ ಇಲ್ಲ. ಬ್ರಹ್ಮವು ಮಾಯೆಯಿಂದ ಸುಳ್ಳಾಗಿ ಜಗತ್ತಾಗಿರುವದೇ ಹೊರತು ನಿಜವಾಗಿ ಅಲ್ಲ. ಹುಟ್ಟದಿರುವ ಸ್ವಭಾವವೂ ಹುಟ್ಟುವ ಸ್ವಭಾವವೂ ಎರಡೂ ಒಂದು ಕಡೆ ಹೇಗಿದ್ದಾವು? ಅಗ್ನಿಗೆ ತಣ್ಪೂ ಬಿಸಿಯೂ ಎರಡೂ ಇರುವದುಂಟೆ? ಹುಟ್ಟುವಿಕೆ ಮೊದಲಾದ ಭೇದವನ್ನು ಕಾಣುವವರು ಸಾವಿನಿಂದ ಸಾವಿಗೆ ಸಾಗುತ್ತಿರುವರೆಂದು ನಿಂದಿಸಿರುವದರಿಂದಲೂ ಜಗತ್ತಿನ ಹುಟ್ಟು ನಿಜವಲ್ಲ.

—(ಮಾಂ ೩-೨೦..೨೪)

ಜಗತ್ತು ನಿಜವಾಗಿ ಹುಟ್ಟುವದೆಂದು ಹೇಳುವವರ ಬಾಯಲ್ಲಿಯೇ ಜಗತ್ತು ಹುಟ್ಟಲೇ ಇಲ್ಲವೆಂಬ ಅಭಿಪ್ರಾಯವನ್ನು ಹೊರಡಿಸಿಬಿಡಬಹುದು. ಹೇಗೆಂದರೆ: ಜಗತ್ತು ನಿಜವಾಗಿ ಹುಟ್ಟುವದೆನ್ನುವವರಲ್ಲಿ ಮುಖ್ಯವಾದ ಎರಡು ದೊಡ್ಡ ಪಂಗಡಗಳಿವೆ. ಒಂದು ಗುಂಪಿನವರು ಇರುವ ಜಗತ್ತೆ ಹುಟ್ಟಿತೆನ್ನುವರು. ತಾವೆ ತಿಳಿದವರೆಂದುಕೊಳ್ಳುವ ಗಟ್ಟಿಗರಾದ ಇನ್ನೊಂದು ಗುಂಪಿನವರು ಇಲ್ಲದ ಜಗತ್ತು ಹುಟ್ಟಿತೆನ್ನುವರು. ಜಗತ್ತು ಮೊದಲು ಬೀಜರೂಪದಲ್ಲಿ ಇತ್ತೆಂದೂ ಅದು ಸ್ಥೂಲರೂಪವಾಗಿ ಹುಟ್ಟಿತೆಂದೂ ಒಬ್ಬರ ಅಭಿಪ್ರಾಯ. ಲೋಕದಲ್ಲಿ ಜನರು ಇರುವದೆಂಬದನ್ನು ಯಾವದೋ ಒಂದು ಕಾಲದಲ್ಲಿ ಮಾತ್ರ ಇರುವದಕ್ಕೂ ಇಲ್ಲವೆಂಬದನ್ನು ಯಾವದೋ ಒಂದು ಕಾಲದಲ್ಲಿ ಮಾತ್ರ ಇಲ್ಲದ್ದಕ್ಕೂ ನಡೆವಳಿಕೆಯಲ್ಲಿ ಉಪಯೋಗಿಸುವದುಂಟು. ಇದು ವಿವೇಕಿಗಳಿಗೆ ಒಪ್ಪಾಗುವದಿಲ್ಲ. ಅವರ ಅಭಿಪ್ರಾಯ ಬೇರೆ. ಒಂದನ್ನು ನಾವು ಇರುವ ವಸ್ತುವೆಂದು ಹೇಳಿದರೆ ಅದು ಯಾವಾಗಲೂ- ಹಿಂದೆಯೂ ಈಗಲೂ ಮುಂದೆಯೂ - ಇರಬೇಕು. ಈಗ ಮಾತ್ರ ಇರುವದಾಗಿ ಹಿಂದೆ ಅದು ಇಲ್ಲದ್ದಾದರೆ ಅದು ಆ ಹಿಂದಿನ ಕಾಲದಲ್ಲಿ ಇರುವದೆನಿಸಿಕೊಂಡದ್ದಾಗುವದಿಲ್ಲ. ಹಾಗೆಯೆ ಒಂದನ್ನು ನಾವು ಇಲ್ಲ

ದ್ದೆಂದು ಹೇಳಿದರೆ ಅದು ಯಾವಾಗಲೂ ಇಲ್ಲದ್ದಾಗಿರಬೇಕು. ಈಗ ಮಾತ್ರ ಇಲ್ಲದ್ದಾಗಿ ಹಿಂದೆ ಅದು ಇದ್ದದ್ದಾದರೆ ಅದು ಆ ಹಿಂದಿನ ಕಾಲದಲ್ಲಿ ಇಲ್ಲದ್ದೆನಿಸಿಕೊಂಡದ್ದಾಗುವದಿಲ್ಲ. ಇರುವದೆನಿಸಿಕೊಳ್ಳುವ ವಸ್ತು ಎಂದೂ ಇಲ್ಲದ್ದಾಗುವದಿಲ್ಲ; ಇಲ್ಲದ್ದೆನಿಸಿಕೊಳ್ಳುವ ವಸ್ತು ಎಂದೂ ಇರುವದಾಗುವದಿಲ್ಲ. ಜಗತ್ತು ಇರುವ ಸ್ವಭಾವದ್ದಾಗಿರಬೇಕು ಅಥವಾ ಇಲ್ಲದ ಸ್ವಭಾವದ್ದಾಗಿರಬೇಕು. ಇವೆರಡರಲ್ಲಿ ಒಂದೊಂದು ಗುಂಪಿನವರು ಒಂದೊಂದು ಪಕ್ಷವನ್ನು ಹಿಡಿಯುವರು. ಇರುವ ಸ್ವಭಾವದ್ದೆ ಹುಟ್ಟಿತೆಂದು ಒಬ್ಬರು ಹೇಳಿದರೆ ಅದು ಇದ್ದೇ ಇರುವದರಿಂದ ಹುಟ್ಟುವದಿನ್ನೇನೆಂದು ಇನ್ನೊಬ್ಬರು ಆಕ್ಷೇಪಿಸುವರು. ಇಲ್ಲದ ಸ್ವಭಾವದ್ದು ಹುಟ್ಟಿತೆಂದು ಇನ್ನೊಬ್ಬರು ಹೇಳಿದರೆ ಮೊಲದ ಕೊಂಬು ಹೇಗೆ ಹುಟ್ಟಲಾರದೊ ಹಾಗೆ ಇಲ್ಲದ್ದು ಹೇಗೆ ಹುಟ್ಟೀತೆಂದು ಒಬ್ಬರು ಆಕ್ಷೇಪಿಸುವರು. ಹೀಗೆ ಅವರ ಮಾತಿನ ಬಡಿದಾಟವು ನಡೆದಿರುವದು. ನಾವು ಅವರಿಬ್ಬರ ಭುಜವನ್ನೂ ಚಪ್ಪರಿಸುತ್ತೇವೆ. ಏಕೆಂದರೆ: ಒಬ್ಬರಮೇಲೊಬ್ಬರು ಮಾಡುವ ಅವರಿಬ್ಬರ ಆಕ್ಷೇಪಗಳೂ ಯುಕ್ತಿಗೆ ಹೊಂದುತ್ತವೆ. ಇರುವದು ಹುಟ್ಟುವದೆಂಬ ಮಾತಿನಲ್ಲಿ ಸ್ವಾರಸ್ಯವಿಲ್ಲ. ಬೀಜರೂಪವಾಗಿದ್ದದ್ದು ಸ್ಥೂಲರೂಪವಾಗಿ ಹುಟ್ಟಿತೆಂದರೆ ಎಳೇ ಮಗು ಪ್ರಾಯಸ್ಥನಾಗಿಯೂ ಮುದುಕನಾಗಿಯೂ ಹುಟ್ಟಿತೆನ್ನಬಹುದಂಟೇನು? ಮಗು ಹುಟ್ಟಿತೆನ್ನುವದು ಶರೀರದಿಂದ ಹೊರಬಿದ್ದದ್ದನ್ನು ನೋಡಿ ಆಡುವ ನಡೆವಳಿಕೆಯ ಮಾತೇ ಹೊರತು ಮಾತಿನ ಅರ್ಥದ ತೂಕವು ಕೆಡದಂತೆ ಆಡುವ ವಿವೇಕದ ಮಾತಲ್ಲ. ನಾವು ಇಲ್ಲಿ ವಿವೇಕಿಗಳಾಗಿ ವಿಚಾರಮಾಡುತ್ತಿರುವಾಗ, ಶಿವಪೂಜೆಯ ನಡುವೆ ಕರಡಿಯು ಮರಿಯನ್ನು ಬಿಟ್ಟಂತೆ, ನಾಡಾಡಿಗಳ ನಡೆವಳಿಕೆಯ ಮಾತನ್ನು ನಡುವೆ ನುಗ್ಗಿಸಬಾರದು. ಹೀಗೆ ಒಂದು ಪಕ್ಷದವರಲ್ಲಿ ಹುರುಳಿಲ್ಲ. ಇನ್ನೊಂದು ಪಕ್ಷದವರ ಮಾತಂತು ನಾಚಿಕೆಗೇಡು. ಬೀಜರೂಪದಲ್ಲಿದ್ದದ್ದು ಸ್ಥೂಲರೂಪವಾಗಿ ಹುಟ್ಟಿತೆಂದರೆ ನಡೆವಳಿಕೆಗಾದರೂ ಒಪ್ಪೀತು. ಎಷ್ಟುಮಾತ್ರವೂ ಇಲ್ಲದ್ದು ಹುಟ್ಟಿತೆಂಬ ಮಾತು ಹೇಗೆ ಹೊಂದೀತು! ಹೀಗೆ ಇನ್ನೊಂದು ಪಕ್ಷದವರಲ್ಲಿಯೂ ಹುರುಳಿಲ್ಲ. ಆದ್ದರಿಂದ ಅವರು ಒಬ್ಬರನ್ನೊಬ್ಬರು ಗೆಲ್ಲಬೇಕೆಂದು ಎಷ್ಟು

ಹೋರಾಡಿದರೂ ಯಾರೂ ಯಾರನ್ನೂ ಗೆಲ್ಲುವದಕ್ಕಾಗುವದಿಲ್ಲ. ಈ ಹೋರಾಟವು ಅವರಿಬ್ಬರಿಗೂ ನಿರಾಶೆಯನ್ನುಂಟುಮಾಡಿದರೂ ನಮ್ಮ ಹೊಟ್ಟೆಯನ್ನು ಸ್ವಲ್ಪದಲ್ಲಿ ಕೆಡಿಸುವದು. ಇಬ್ಬರ ಜಗಳ ಮೂರನೆಯವರಿಗೆ ಲಾಭ. ಅವರಿಬ್ಬರೂ ಮಾತಿನ ಸಂತೆಯನ್ನು ಹರಡಿ ಕೊನೆಗೆ ಜಗತ್ತಿನಲ್ಲಿ ಯಾವದಕ್ಕೂ ಹುಟ್ಟುವದೆಂಬ ಮಾತೇ ಸಲ್ಲದೆಂಬ ಅಭಿಪ್ರಾಯವನ್ನು ತೇಲಿಸಿಕೊಟ್ಟರು. ಅದೇ ನಮ್ಮ ನಿಲುಗಡೆಯ ಅಭಿಪ್ರಾಯ. ಇದಕ್ಕಾಗಿ ಅವರಿಬ್ಬರನ್ನೂ ನಾವು ಅನುಮೋದಿಸುತ್ತೇವೆ. ಜಗತ್ತಿನಲ್ಲಿ ಯಾವದರ ಹುಟ್ಟೂ ಶಕ್ಯವೇ ಇಲ್ಲ. —(ಮಾಂ ೪-೩..೫)

ಜಗತ್ತು ಹುಟ್ಟಲೇ ಇಲ್ಲವೆಂಬುದಕ್ಕೊಂದು ಕಾರಣವನ್ನು ನೋಡಿ. ಬ್ರಹ್ಮದಿಂದ ಜಗತ್ತಾಗಿರುವದೆಂಬ ಮಾತಿನೊಳಗೆ ಹುರುಳಿದ್ದರೆ ಜಗತ್ತಿನಲ್ಲಿ ನಿಜವಾದ ಇರುವಿಕೆಯ ಸುಳಿವು ಒಂದಿಷ್ಟು ಕಂಡರೂ ಕಾಣಬಹುದಾಗಿತ್ತು. ಬ್ರಹ್ಮವು ಏನನ್ನೂ ಹುಟ್ಟಿಸುವದಿಲ್ಲ. ಉದಾಸೀನದಿಂದಿರುವದೇ ಅವರ ಸ್ವಭಾವ. ಜಗತ್ತಿನ ಹುಟ್ಟಿಗೆ ಮತ್ತೇನು ಕಾರಣವೆಂದರೆ ಬ್ರಹ್ಮದ ಮಾಯಾ ಶಕ್ತಿ. ಬ್ರಹ್ಮದಲ್ಲಿ ಸತ್ತ್ವ, ರಜ, ತಮ-ಎಂಬ ಮೂರು ಗುಣಗಳ ಸರಿಬೆರಕೆಯ ಶಕ್ತಿಯೊಂದುಂಟು. ಅದಕ್ಕೆ ಪ್ರಕೃತಿಯೆಂದೂ ಮಾಯೆಯೆಂದೂ ಅವಿದ್ಯೆಯೆಂದೂ ಬೀಜವೆಂದೂ ಹೆಸರು. ಅದನ್ನು ಇರುವದೆಂದು ಹೇಳುವದಕ್ಕೂ ಬರದು; ಇಲ್ಲದ್ದೆನಲಿಕ್ಕೂ ಬರದು. ಇದಲ್ಲದೆ ಜಡವಾದ ಅದಕ್ಕೆ ಜಗತ್ತನ್ನು ಹುಟ್ಟಿಸುವ ಶಕ್ತಿ ಇಲ್ಲ. ಆದರೂ ಅದು ಬ್ರಹ್ಮದ ಇರುವಿಕೆಯ ಬೆಂಬಲದಿಂದ ತಾನು ಎಂಥ ಮಹತ್ಕಾರ್ಯಗಳನ್ನಾದರೂ ಮಾಡಬಲ್ಲದು. ಲೋಕದಲ್ಲಿ ಕ್ಷುದ್ರನಾದ ಒಬ್ಬ ಇಂದ್ರಜಾಲಗಾರನ ಮಾಯಾಶಕ್ತಿಯೇ ನಮ್ಮ ಮೂಗಿನ ಮೇಲೆ ಬೆರಳಿಡಿಸುವದು. ಇನ್ನು ಬ್ರಹ್ಮದ ಮಾಯಾ ಶಕ್ತಿಯ ವಿಷಯವಾಗಿ ಹೇಳತಕ್ಕದಿನ್ನೇನು! ಹೀಗೆ ಜಗತ್ತಿನ ಹುಟ್ಟಿಗೆ ಬ್ರಹ್ಮವು ಬರೀ ಸಾಕ್ಷಿ ಮಾತ್ರ. ಅದರ ಸಾಕ್ಷಿತ್ವದ ಮಹಿಮೆಯನ್ನು ನಮ್ಮ ಅನುಭವದಲ್ಲಿಯೂ ಕಾಣಬಹುದು. ಬ್ರಹ್ಮವು ನಮ್ಮ ಬುದ್ಧಿಯಲ್ಲಿ ಸಾಕ್ಷಿಯಾಗಿರುವದರಿಂದಲ್ಲವೆ ಅದರ ಬಲದಿಂದ ನಾವು 'ನಾನು ಇದನ್ನು ಅನುಭವಿಸುತ್ತೇನೆ, ಇದನ್ನು ನೋಡುತ್ತೇನೆ, ಇದನ್ನು ಕೇಳುತ್ತೇನೆ' ಎಂದು

ಮುಂತಾಗಿ ಮುಂದುವರಿಯುತ್ತೇವೆ. ಮಾಯಾಶಕ್ತಿಯೂ ಹಾಗೆಯೆ ಅದರ ಸಾಕ್ಷಿತ್ವದ ಬಲದಿಂದ ಮುಂದುವರಿದು ಜಗತ್ತನ್ನು ಹುಟ್ಟಿಸಿರುವದು. ಹೀಗೆ ಆ ಬ್ರಹ್ಮವು ಚೈತನ್ಯ ಮಾತ್ರವಾಗಿ ಮತ್ತು ಎಲ್ಲೆಲ್ಲಿಯೂ ಸಾಕ್ಷಿ ಮಾತ್ರವಾಗಿ ಯಾವದೊಂದು ಭೋಗದ ಸಂಬಂಧವೂ ಇಲ್ಲದೆ ಇರುವದರಿಂದಲೂ ಭೋಗದ ಸಂಬಂಧ ಉಳ್ಳ ಇನ್ನೊಂದು ಚೈತನ್ಯವಿಲ್ಲದ್ದರಿಂದಲೂ ಈ ಜಗತ್ತು ಯಾರಿಗಾಗಿ ಸೃಷ್ಟಿಯಾಗಬೇಕು? ಜನರೆಲ್ಲರೂ ಅನೇಕ ಚೈತನ್ಯಗಳಿರುವವೆಂದು ತಪ್ಪುತಿಳಿದುಕೊಂಡು ಅವರಿಗಾಗಿ ಜಗತ್ತು ಹುಟ್ಟಿರುವದೆಂದು ಮೋಹಗೊಂಡಿದ್ದಾರೆ. ತನ್ನ ಇರುವಿಕೆಯೇ ತಟ್ಟಾಡುವ ಮಾಯಾಶಕ್ತಿಯಿಂದ ಹೊರಬಿದ್ದ ಜಗತ್ತು ನಿಜವಾಗುವದುಂಟೆ? ಚೆನ್ನಾಗಿ ವಿಚಾರ ಮಾಡಿದರೆ ಜಗತ್ತು ಹುಟ್ಟಲೇ ಇಲ್ಲ. ---(ಛ ೯-೧೦)

ಇನ್ನೊಂದು ಕಾರಣವನ್ನು ನೋಡಿ. ಓಡಾಡುವ ಮತ್ತು ಕದಲದೆ ಇರುವ ಯಾವದೊಂದು ವಸ್ತು ಹುಟ್ಟಿತೆಂದರೂ ಅದು ದೇಹ ಮತ್ತು ದೇಹದ ತಿಳಿವುಗಾರ—ಇವರಿಬ್ಬರ ಸೇರಿಕೆಯಿಂದಾಗಿರುವದು. ಆ ಸೇರಿಕೆಯೆಂಬುದೇನು? ಅದು ಗಡಿಗೆಯ ಕಂಟಕ್ಕೂ ಹಗ್ಗದ ಕುಣಿಕೆಗೂ ಆಗುವ ಸೇರಿಕೆಯಂತೆ ಅಲ್ಲ. ಏಕೆಂದರೆ: ದೇಹದ ತಿಳಿವುಗಾರನು ಗಡಿಗೆಯಂತೆ ಅವಯವಗಳುಳ್ಳವನಲ್ಲ. ಅಥವಾ ಆ ಸಮ್ಮೇಲನವು ನೂಲು ಬಟ್ಟೆಯಲ್ಲಿರುವಂತೆಯೂ ಅಲ್ಲ. ಏಕೆಂದರೆ: ನೂಲಿನಿಂದ ಬಟ್ಟೆಯಾಗಿರುವದರಿಂದ ಅವೆರಡಕ್ಕೂ ಒಂದು ಬಗೆಯ ಸಮ್ಮೇಲನವಿರುವದು. ಇಲ್ಲಿ ಶರೀರವೂ ಅದರ ತಿಳಿವುಗಾರನೂ ಒಂದರಿಂದೊಂದಾದವರಲ್ಲ. ದೇಹವು ಕಾಣಬರುವಂಥದ್ದು; ತಿಳಿವುಗಾರನು ನೋಡುವವನು. ಹೀಗೆ ಅವರಿಬ್ಬರ ಸ್ವಭಾವವೂ ಬೇರೆ ಬೇರೆ. ಹೀಗಿರುವ ಇವರಿಬ್ಬರ ಸೇರಿಕೆಯೆಂದರೆ ಹಗ್ಗವೂ ಕಪ್ಪೆಚಿಪ್ಪೂ ಇರುವ ಕಡೆ ಅವುಗಳ ನಿಜವನ್ನು ತಿಳಿಯದೆ ಹಾವನ್ನೂ ಬೆಳ್ಳಿಯನ್ನೂ ಹುಟ್ಟುಗಟ್ಟುವಂತೆ ತಮ್ಮತಮ್ಮ ನಿಜವನ್ನು ಬಿಡಿಸಿ ತಿಳಿಯಲಾರದೆ ಸುಳ್ಳು ತಿಳಿವಳಿಕೆಯನ್ನು ಹೊಂದುವದು. ತಾನಲ್ಲದ ದೇಹವನ್ನು ತಾನೆಂದು ಮುಂತಾಗಿಯೂ ದೇಹದ ಬಣ್ಣ, ಅಳತೆ—ಮೊದಲಾದ ಧರ್ಮಗಳನ್ನು ತನ್ನದಾಗಿಯೂ ಒಂದನ್ನೊಂದು ಬೆರಸಿಕೊಂಡ ಸುಳ್ಳುತಿಳಿವಳಿಕೆಯೇ ಎಲ್ಲ ಜಗತ್ತಿನ

ಸೃಷ್ಟಿಗೆ ಕಾರಣ. ಈ ಸುಳ್ಳು ತಿಳಿವಳಿಕೆಯೇ ಜೀವರ ಜೀವ. ಇದರಿಂದ ಜೀವರಿಂದ ಜಗತ್ತಾಯಿತೆಂಬ ಅಭಿಪ್ರಾಯವಾಗುತ್ತದೆ ಜೀವರಿಗಾಗಿಯೆ ಜಗತ್ತಾದ್ದರಿಂದ ಜೀವರನ್ನೆ ಜಗತ್ತಿನ ಹುಟ್ಟಿಗೆ ಕಾರಣರನ್ನಾಗಿ ಹೀಗೆ ಹೇಳಲಾಗಿರುವದು. ಸುಳ್ಳು ತಿಳಿವಿನಿಂದ ಹೊರಬಿದ್ದ ಜಗತ್ತು ನಿಜವಾದದ್ದಾದೀತೆ? ಅದು ಹುಟ್ಟಲಿಲ್ಲವೆಂಬುದೇ ನಿಲುಗಡೆಗೆ ನಿಂತ ಮಾತು.

—(ಭ ೧೩-೨೬)

ಜೀವರಿಗಾಗಿ ಜಗತ್ತಿನ ಹುಟ್ಟೆಂದಿಷ್ಟೆ ಆ ಜೀವರ ಹುಟ್ಟಿಗೇ ಸಂಚಕಾರವಿರುವದು. ಜೀವರು ಹುಟ್ಟಿದರೆಂದು ಲೋಕದಲ್ಲಿ ಆಡಿಕೊಳ್ಳುವದುಂಟು ಮತ್ತು ಶಾಸ್ತ್ರವು ಆ ಹುಟ್ಟಿನ ದೋಷವನ್ನು ಕಳೆಯುವ ಕರ್ಮಗಳನ್ನೂ ಗೊತ್ತುಮಾಡಿರುವದುಂಟು. ಇದು ಶರೀರದ ಹುಟ್ಟನ್ನು ನೋಡಿ ನಡೆಯುವ ನಡೆವಳಿಕೆಯ ಮಾತೇ ಹೊರತು ಬೇರೆ ಏನೇನೂ ಇಲ್ಲ. ಶರೀರದ ಹುಟ್ಟುಸಾವುಗಳನ್ನೆ ಜೀವನದಾಗಿ ಹೇಳುವದು ರೂಢಿ. ಶರೀರದ ಸಂಬಂಧವನ್ನು ಬಿಟ್ಟು ಜೀವರ ಹುಟ್ಟುಸಾವುಗಳನ್ನು ಯಾರು ಕಂಡಿದ್ದಾರೆ? ಶ್ರುತಿಯಲ್ಲಿ ಕೆಲವು ಕಡೆ ಜೀವರು ಕೆಂಡದ ಕಿಡಿಗಳಂತೆ ಸಿಡಿದು ಬಂದವರೆಂದು ಅವರಿಗೆ ಹುಟ್ಟನ್ನು ಹೇಳಿದೆ; ಇನ್ನು ಕೆಲವು ಕಡೆ ಬ್ರಹ್ಮವೆ ಜೀವರೂಪದಿಂದ ಒಳಹೊಕ್ಕಿತೆಂದು ಹೇಳುವದರ ಮೂಲಕ ಹುಟ್ಟೆಂಬುದಿಲ್ಲವೆಂದೂ ಹೇಳಿದೆ. ಹುಟ್ಟೆಂಬುದಿಲ್ಲವೆಂದು ಹೇಳಿರುವ ಕಡೆಗಳೇ ಹೆಚ್ಚು. ಹುಟ್ಟನ್ನು ಹೇಳಿರುವ ಕಡೆಗಳೆಲ್ಲ ಏನಾದರೊಂದು ಸಂಬಂಧವನ್ನು ನೋಡಿ ಹೇಳಿದ ಮಾತುಗಳು. ಬ್ರಹ್ಮವೇ ಜೀವವೆಂಬುದೇ ನೆಲೆಗೆ ನಿಂತ ಮಾತು. ಬ್ರಹ್ಮವೆ ಜೀವರಾದರೆ ಅವರೂ ಚೈತನ್ಯಸ್ವರೂಪರಾದ್ದರಿಂದ ಅವರಿಗಾಗಬೇಕಾದ ಅರಿವಿಗೆ ಕಣ್ಣು, ಮೂಗು-ಮೊದಲಾದ ಇಂದ್ರಿಯಗಳೇಕೆನ್ನಬಹುದು. ಇಂದ್ರಿಯಗಳು ನೋಟ, ವಾಸನೆ-ಮೊದಲಾದವುಗಳನ್ನು ಬೇರೆಬೇರೆಯಾಗಿ ತಿಳಿಸುವ ಸಾಧನಗಳೇ ಹೊರತು ಇದರಿಂದ ಜೀವನ ಚೈತನ್ಯಕ್ಕೇನೂ ಕೊರತೆಯಾಗುವದಿಲ್ಲ. ನಿದ್ರೆ, ಮೂರ್ಛೆ-ಮೊದಲಾದವುಗಳಲ್ಲಿ ಜೀವರ ಚೈತನ್ಯವೇಕೆ ಕೆಲಸ ಮಾಡುವದಿಲ್ಲವೆಂದರೆ ಆಗ ಅವರಿಗೆ ಚೈತನ್ಯವಿಲ್ಲವೆಂತ ಅಲ್ಲ; ಆಗ ಅರಿಯಲಾಗುವ ಯಾವದೂ ಇರುವದಿಲ್ಲವಾದ್ದರಿಂದ ಅವನು ಅರಿಯುವದಿಲ್ಲ. ಈಗ ನಮಗೆ ಅರಿಯಲಾಗುವ ವಸ್ತುಗಳೆಲ್ಲ ಎಚ್ಚರವೆಂಬ ಅವಸ್ಥೆಗೆ

ಮಾತ್ರ ಗಂಟುಬಿದ್ದವುಗಳೆ ಹೊರತು ಉಳಿದ ಕಡೆ ಅವುಗಳ ಸಂಬಂಧವಿಲ್ಲ. ಹೀಗೆ ಜೀವನು ಬ್ರಹ್ಮನ ಸ್ವರೂಪವೇ ಆದ್ದರಿಂದ ಅವನಿಗೆ ಹುಟ್ಟನ್ನು ಹೇಳುವ ಮಾತು ಹೊಂದುವದಿಲ್ಲ. —(ಸೂ ೨-೩-೧೭..೧೭)

ಹೀಗೆ ಜೀವರು ಹುಟ್ಟೆಯೇ ಇಲ್ಲವೆಂಬುದಿಷ್ಟೇ ಅಲ್ಲ; ಯಾವದೂ ಹುಟ್ಟೆಯೇ ಇಲ್ಲ. ಹುಟ್ಟುವಿಕೆಯ ಸ್ವಭಾವದ್ದಲ್ಲದ ಬ್ರಹ್ಮದಿಂದ ಜಗತ್ತು ಹುಟ್ಟಿತೆಂದರೆ ಅಂಥದ್ದಕ್ಕೊಂದು ದೃಷ್ಟಾಂತವೇ ಸಿಕ್ಕುವದಿಲ್ಲ. ದೃಷ್ಟಾಂತ ವಿಲ್ಲದ್ದರಿಂದಲೆ ಯಾವದೂ ಹುಟ್ಟುವದಿಲ್ಲವೆಂಬ ನಿಲುಗಡೆಗೆ ಬಂದಂತಾ ಯಿತು. ಹುಟ್ಟದ ಬ್ರಹ್ಮದಿಂದ ಜಗತ್ತು ಹುಟ್ಟಿತೆಂದರೆ ಜಗತ್ತು ಬ್ರಹ್ಮದಿಂದ, ಅದು ಮತ್ತೊಂದರಿಂದ, ಅದು ಇನ್ನೊಂದರಿಂದ--ಇದಕ್ಕೆ ಕೊನೆಯೇ ಇಲ್ಲ ಜಗತ್ತಿನಲ್ಲಿ ಧರ್ಮಾಧರ್ಮಗಳಿಗೆ ದೇಹೇಂದ್ರಿಯಗಳ ಗುಂಪೇ ಫಲವೆಂದೂ ದೇಹೇಂದ್ರಿಯಗಳ ಗುಂಪಿಗೆ ಧರ್ಮಾಧರ್ಮಗಳೇ ಫಲ ವೆಂದೂ ಒಂದೇ ಬಾಯಿಂದ ಹೇಳುವರು. ಇದನ್ನು ನೋಡಿದರೆ ಒಂದರಿಂ ದೊಂದು ಹುಟ್ಟುವದೆಂದಾಗುವದಷ್ಟೆ. ಹೀಗಿರುವಾಗ ಧರ್ಮಾಧರ್ಮಗಳೂ ದೇಹೇಂದ್ರಿಯಗಳೂ ಅನಾದಿಯೆಂದೂ ಅವರು ಮಾತಾಡುವರು. ಇವು ಒಂದಕ್ಕೊಂದು ಕೂಡದ ಮಾತು. ಧರ್ಮಾಧರ್ಮಗಳಿಂದ ಹುಟ್ಟಿದ ದೇಹೇಂ ದ್ರಿಯ ಗಳ ಗುಂಪಿನಿಂದಲೆ ಧರ್ಮಾಧರ್ಮಗಳ ಹುಟ್ಟನ್ನು ಹೇಳಿದರೆ ಮಗನಿಂದ ತಂದೆ ಹುಟ್ಟಿದನೆಂಬಂತೆ ಆಗುತ್ತದೆ. ಧರ್ಮಾಧರ್ಮಗಳೂ ದೇಹೇಂದ್ರಿಯಗಳ ಗುಂಪೂ ಒಂದೇ ಸಲ ಹುಟ್ಟಿದವೆಂದರೆ ಅವುಗಳಿಗೊಂದಕ್ಕೊಂದಕ್ಕೆ ಸಂಬಂ ಧವೇ ಇಲ್ಲದಂತಾಗುವದು. ಹೀಗಾಗಿ ಯಾವದೂ ಹುಟ್ಟುವದಿಲ್ಲವೆಂಬ ನಿಲುಗಡೆಗೇ ಬಂದಂತಾಗುವದು. ಧರ್ಮಾಧರ್ಮಗಳೂ ದೇಹೇಂದ್ರಿಯಗಳೂ ಬೀಜಾಂಕುರಗಳಂತೆ ಅನಾದಿಯಾಗಿ ಸಾಗುತ್ತಿರುವವೆಂದರೆ ಇದು ಒಂದು ಮಾತಿಗಿನ್ನೊಂದು ಮಾತು ಉತ್ತರವನ್ನಿತ್ತಂತಾಯಿತೇ ಹೊರತು ವಿವೇಕದ ಉತ್ತರವಲ್ಲ. ಬೀಜದಿಂದ ಅಂಕುರವೊ? ಅಂಕುರದಿಂದ ಬೀಜವೊ? ಎರ ಡಕ್ಕೂ ಆದಿ ಕಾಣುತ್ತಿರುವಾಗ ಅದು ಅನಾದಿಯಾಗುವದು ಹೇಗೆ? ಆ ಉದಾಹರಣೆಯನ್ನೆ ಒರೆಗೆ ಹಚ್ಚಿ ಹೇಳಿ, ದೃಷ್ಟಾಂತವು ಮೊದಲು ದೋಷವಿ ಲ್ಲದ್ದಾದರೆ ಅದರಂತೆ ತಿಳಿಯುವದು ಮುಂದಿನ ಮಾತು. ಹುಟ್ಟುವಿಕೆ ಕಂಡ

ಮೇಲೆ ಅದಕ್ಕೆ ಯಾವದು ಮೊದಲೆಂಬುದು ಕಾಣಲೇಬೇಕು. ಹುಟ್ಟುವ ವೆಂಬ ವಸ್ತುಗಳು ತನ್ನಿಂದ ತಾನಾಗಲಿ ಒಂದರಿಂದಿನ್ನೊಂದಾಗಲಿ ಹೇಗೂ ಹುಟ್ಟುವದಿಲ್ಲ. ಗಡಿಗೆ ತನ್ನಿಂದ ತಾನು ಹುಟ್ಟಿದ್ದು ಎಲ್ಲಿಯೂ ಕಂಡಿಲ್ಲವಾದ್ದರಿಂದ ಯಾವದೂ ತನ್ನಿಂದ ತಾನು ಹುಟ್ಟುವದಿಲ್ಲ. ಗಡಿಗೆಯಿಂದ ಬಟ್ಟೆ ಹುಟ್ಟದಿರುವಂತೆ ಒಂದರಿಂದಿನ್ನೊಂದೂ ಹುಟ್ಟುವದಿಲ್ಲ. ಮಣ್ಣಿನಿಂದ ಗಡಿಗೆಯೂ ತಂದೆಯಿಂದ ಮಗನೂ ಹುಟ್ಟಿದನೆನ್ನುವದುಂಟಾದರೂ ಅದು ಮೂಢರ ಅಭಿಪ್ರಾಯ. ಅದನ್ನು ಒರೆಗೆ ಹಚ್ಚಿದರೆ ಗಡಿಗೆ, ಮಗ--ಎನ್ನುವದೆಲ್ಲ ಮಾತು ಮಾತ್ರ. ಒಂದರಿಂದೊಂದು ಹುಟ್ಟುವದೆಂದು ಹೇಳುವದಕ್ಕೆ ಹೋದಷ್ಟೂ ಯಾವದೂ ಹುಟ್ಟುವದಿಲ್ಲವೆಂದೇ ನೆಲೆಗೆ ನಿಲ್ಲುವದು. ಆದ್ದರಿಂದ ಜಗತ್ತಿನಲ್ಲಿ ನಿಜವಾದ ಹುಟ್ಟೆಂಬುದೇ ಇಲ್ಲ. ಜಗತ್ತು ನಿಜವಾಗಿ ಹುಟ್ಟುವದೆಂಬುದಿನ್ನೆಲ್ಲಿಯದು? — (ಮಾಂ ೪-೧೩..೨೩)

ಜಗತ್ತಿನ ಹುಟ್ಟಿನ ವಿಷಯದಲ್ಲಿ ಅದರ ಕ್ರಮವು ಸಮರ್ಪಕವಾಗಲಿಲ್ಲವೆಂದು ಮಾತ್ರ ಆಕ್ಷೇಪಣೆ ಹೊರಟಿದೆಯಷ್ಟೆ. ಅಷ್ಟೇ ಏಕೆ, ಉದ್ದೇಶದಲ್ಲಿಯೂ ಬಹು ಬಗೆಗಳು ಕಾಣುವದರಿಂದ ಅದೂ ಸಮರ್ಪಕವಾಗಿಲ್ಲ. ಇನ್ನು ಇದು ಎಂದು ಎಲ್ಲಿ ಹುಟ್ಟಿತೆಂಬ ಪ್ರಶ್ನೆಯನ್ನು ಹಾಕಿದರೆ ಆಗುವ ಫಲವೂ ಅಷ್ಟೇ. ಜಗತ್ತು ಹುಟ್ಟಿಯೇ ಇಲ್ಲವಾದ್ದರಿಂದ ಹೇಗೆ? ಏಕೆ? ಎಂದು? ಎಲ್ಲಿ?—ಎಂಬ ಪ್ರಶ್ನೆಗಳಿಗೆ ಎಷ್ಟೇ ಹೊಂದಿಕೆಯಾದ ಉತ್ತರಗಳನ್ನು ಹೇಳಿದರೂ ಅವು ಸಮರ್ಪಕವೆಂದು ತಲೆದೂಗುವಂತಾಗುವದಿಲ್ಲ. ನಿಜವಾಗಿ ಹುಟ್ಟಿದ್ದಕ್ಕೆ ಮಾತ್ರ ಆ ಪ್ರಶ್ನೆಗಳಿಗೆ ಸರಿಯಾದ ಉತ್ತರವು ಬರುವದು. ಜಗತ್ತು ಹುಟ್ಟಿಲ್ಲವಾದ್ದರಿಂದಲೆ ಒಳ್ಳೆ ವಿಚಾರಪರರಿಗೆ ಕೂಡ ಆ ಹುಟ್ಟಿನ ವಿಷಯದಲ್ಲಿ ಹೇಗೆ ಹೇಗೆ ಊಹಿಸಿದರೆ ಹಾಗೆ ಹಾಗೆ ಅದೇ ಸರಿಯೆನಿಸಿ ಬೇರೆ ಬೇರೆ ಅಭಿಪ್ರಾಯಗಳನ್ನು ಕೊಡುವಂತಾಗಿರುವದು. ಕನಸಿನ ಹುಟ್ಟಿನ ವಿಷಯದಲ್ಲಿ ಆ ಪ್ರಶ್ನೆಗಳನ್ನು ಹಾಕಿದರೆ ಏನು ಹೇಳಲಾದೀತು! ಇದರ ಮೇಲೆ ಈ ಕಾರ್ಯಕಾರಣಭಾವ, ಉದ್ದೇಶ, ಕಾಲ, ದೇಶ—ಮೊದಲಾದ ಜಾತಿಯ ಪ್ರಶ್ನೆಗಳು ಜಗತ್ತಿನ ಮೇಲೆ ಏರುವದೇ ಇಲ್ಲ. ಏಕೆಂದರೆ: ಇವೆಲ್ಲ ಜಗತ್ತಿನೊಡನೆ ಹುಟ್ಟಿ ಜಗತ್ತಿನೊಳಗೇ ಇದ್ದುಕೊಂಡಿರು

ವವುಗಳು. ಇವುಗಳನ್ನು ಹೊಟ್ಟೆಯಲ್ಲಿಯೇ ಇಟ್ಟುಕೊಂಡಿರುವ ಜಗತ್ತಿನ ಮೇಲೆ ಇವು ಹೊರಗಣಿಂದ ಏರುವದು ಹೇಗಾದೀತು! ಹೊರಗಂತೂ ಇವು ಇಲ್ಲವೇ ಇಲ್ಲ. ಕಾಲವು ಎಂದು ಹುಟ್ಟಿತೆಂದರೆ ದೇಶವು ಎಲ್ಲಿ ಹುಟ್ಟಿತೆಂದರೆ ಸಮಂಜಸವೆನಿಸುವದೆ? ಕಾರ್ಯಕಾರಣಭಾವವೂ ಉದ್ದೇಶವೂ ಹಾಗೆಯೆ. ಈ ಪ್ರಶ್ನೆಗಳು ಹೀಗೆ ಬಾಯಿಕಟ್ಟುವವರಿಂದಲೂ ಜಗತ್ತು ಹುಟ್ಟಲೇ ಇಲ್ಲ.

# ೫—ಮಾಯೆಯ ಬಿನ್ನಾಣ

## ಮಾಯೆ ಕಾಣುವದು

ಜಗತ್ತಿನ ಹುಟ್ಟಿನ ವಿಷಯವಾದ ಮಾತು ಬಂದಾಗಲೆ ಮಾಯೆಯ ವಿಷಯವು ಬಂದಿತ್ತು. ಅಲ್ಲಿ ಅದು ಬರಲೇ ಬೇಕು. ಏಕೆಂದರೆ: ಜಗತ್ತೆಂಬುದು ಸ್ಥೂಲರೂಪ; ಮಾಯೆಯೆಂಬುದು ಬೀಜರೂಪ. ಇವೆರಡಕ್ಕೂ ಭೇದವೇನೂ ಇಲ್ಲ. ಬೀಜವನ್ನು ನಾವು ಪ್ರತ್ಯಕ್ಷವಾಗಿ ಕಾಣಲರಿಯೆವು. ಆದ್ದರಿಂದ ಅದರ ಕಾಣುವ ರೂಪವಾದ ಜಗತ್ತಿನ ಮಾತು ಬಂದಾಗ ಅದು ತಲೆ ಹಾಕುವದು ಸಹಜವಾದದ್ದು. ಅದನ್ನು ಬಿಟ್ಟು ಮಾಯೆಯೆಂಬುದು ಬಿಡಿಯಾಗಿ ಕಾಣಿಸಿಕೊಳ್ಳುವಂಥದ್ದಲ್ಲವಾದ್ದರಿಂದ ಅದರ ವಿಚಾರವನ್ನು ಹೇಳುವದಕ್ಕಾಗಿ ಅದಕ್ಕಾಗಿಯೇ ಮೀಸಲಾದ ಒಂದು ಪ್ರಕರಣವನ್ನು ವಿಸ್ತರಿಸುವದು ಒಪ್ಪಾಗುವದಿಲ್ಲ. ಏಕೆಂದರೆ: ಅದು ತನ್ನ ಸ್ವಂತವಾದ ಇರುವಿಕೆ ಇಲ್ಲದ್ದಾದ್ದರಿಂದ ಅದರ ವಿಷಯವಾಗಿ ಏನು ಹೇಳುವದಕ್ಕೂ ಬರುವದಿಲ್ಲ. ಏನನ್ನೂ ಹೇಳಲಾಗದಿರುವದಕ್ಕೆ ಒಂದು ಪ್ರಕರಣವೇಕೆ? ಹೀಗೆಂದು ಅದನ್ನು ಕಡೆಗಾಣುವ ಹಾಗಿಲ್ಲ. ಏಕೆಂದರೆ: ಅದರ ಸ್ಥೂಲರೂಪವಾಗಿ ಜಗತ್ತು ಕಾಣುವದರಿಂದ ಅದನ್ನು ಹೇಳದಿರುವದಕ್ಕಾಗುವದಿಲ್ಲ. ಇದು ಇಂಥ ಇಕ್ಕಟ್ಟಿನ ಪ್ರಸಂಗ.

ಈ ಮಾಯೆಯೆಂಬುದು ಬ್ರಹ್ಮವೆಷ್ಟು ಹಳೆಯದೊ ಅಷ್ಟು ಹಳೆಯದು. ಬ್ರಹ್ಮಕ್ಕೂ ಮೊದಲೆಂಬುದಿಲ್ಲ; ಮಾಯೆಗೂ ಮೊದಲೆಂಬುದಿಲ್ಲ. ಮಾಯೆಯೆಂಬುದು ಬ್ರಹ್ಮದ ಶಕ್ತಿ. ಬ್ರಹ್ಮವು ಯಾವಾಗಲೂ ಇರತಕ್ಕದ್ದಾದ್ದರಿಂದ

ಅವರ ಶಕ್ತಿಯಾದ ಮಾಯೆಯೂ ಯಾವಾಗಲೂ ಇರತಕ್ಕದ್ದು ಸಹಜವಾಗಿ
ರುವದು. ಈ ಮಾಯೆಯಿಂದಲೆ ಬ್ರಹ್ಮವು ಜಗತ್ತನ್ನ ಹೊರಗೆಡಹುವದು.
ಜಗತ್ತೆಂಬುದೇನು? ಬುದ್ಧಿಯನ್ನು ಮೊದಲುಗೊಂಡು ದೇಹೇಂದ್ರಿಯಗಳ
ವರೆಗೆ ಇರುವ ಆಕಾರವಿಶೇಷಗಳು ಮತ್ತು ಸುಖ, ದುಃಖ, ಮೋಹ-ಎಂಬ
ಮೊದಲಾದ ಮನೋಭಾವಗಳು — ಇವೆಲ್ಲ ಮಾಯೆಯಿಂದ ಮೈದುಂಬಿದವು
ಗಳು. ಇವೇ ಮಾಯೆಯು ಹೊರಗೆ ಕಾಣುವ ಸ್ವರೂಪ. ಮಾಯೆಯ ನಿಜ
ಸ್ವರೂಪವು ಸತ್ತ್ವ, ರಜ, ತಮ-ಎಂಬ ಮೂರು ಗುಣಗಳ ಸರಿಬೆರಕೆಯದು.
—(ಭ ೧೩-೧೯)

ಹೀಗೆ ಜಗತ್ತಿಗೆ ಬ್ರಹ್ಮ ಮತ್ತು ಮಾಯೆ ಎಂಬ ಎರಡು ಕಾರಣಗಳು
ಕಾಣಬರುವವಷ್ಟೆ. ಅವೆರಡರ ಬೆಲೆಯು ಬೇರೆ ಬೇರೆ. ಬ್ರಹ್ಮವು ತಂದೆ;
ಮಾಯೆಯು ತಾಯಿ. ಜಗತ್ತು ಹೊರಬೀಳುವದು ಮಾಯೆಯೆಂಬ ತಾಯಿ
ಹೊಟ್ಟೆಯಿಂದಲೆ. ಇಷ್ಟು ದೊಡ್ಡ ಜಗತ್ತನ್ನು ಒಳಗೆ ಅಡಗಿಸಿಕೊಂಡಿರುವ
ಇದರ ಹೊಟ್ಟೆಯು ನಮ್ಮ ಮನಸ್ಸಿಗೆ ಕೂಡ ಸಿಲುಕಲಾರದಷ್ಟು ದೊಡ್ಡದಾ
ಗಿರಲೇಬೇಕು. ಬ್ರಹ್ಮವು ಎಲ್ಲ ಪ್ರಾಣಿಗಳನ್ನೂ ಹುಟ್ಟಿಸಿ ಜಗತ್ತನ್ನು ಬೆಳೆ
ಸಬಲ್ಲ ಹಿರಣ್ಯಗರ್ಭನೆಂಬ ಬ್ರಹ್ಮನ ಬೀಜವನ್ನು ಆ ಮಾಯೆಯಲ್ಲಿಡುವದು.
ಅದರಿಂದ ಹಿರಣ್ಯಗರ್ಭನೆಂಬ ಬ್ರಹ್ಮನು ಹುಟ್ಟುವನು. ಬ್ರಹ್ಮವು ಬೀಜವ
ನ್ನಿಟ್ಟಿತೆಂಬ ಮಾತಿನಿಂದ ಲೋಕದಲ್ಲಿ ಮಕ್ಕಳಿಗೆ ತಂದೆ ಹೇಗೊ ಹಾಗೆ
ಬ್ರಹ್ಮವು ತನ್ನ ಪಾಲಿನ ಕೆಲಸವನ್ನು ಮಾಡಿತೆಂದು ಅರ್ಥವನ್ನು ಮಾಡಿಕೊ
ಳ್ಳಬಾರದು. ಹಾಗೆ ಅರ್ಥವನ್ನು ಮಾಡಿದರೆ ಅದು ಬೀಜವನ್ನಿಡುವದೆಂಬ
ಕ್ರಿಯೆಗೆ ಆಶ್ರಯವಾದದ್ದಾಗಿ ನಾಶವಾಗತಕ್ಕದ್ದಾಗುತ್ತದೆ. ಅದು ಬೀಜ
ವನ್ನು ಇಡುವದೆಂದು ಹೇಳಿದ ಮಾತು ವಿಷಯವು ಮನಸ್ಸಿನಲ್ಲಿ ಒಡೆದು
ಮೂಡುವಂತೆ ಮಾಡುವದಕ್ಕಾಗಿ ಆಡಿದ್ದೇ ಹೊರತು ಅದು ಯಾವ ಕೆಲಸ
ವನ್ನೂ ಮಾಡುವದಿಲ್ಲ. ಅದು ಯಾವಾಗಲೂ ಉದಾಸೀನ. ಆದ್ದರಿಂದ
ಬೀಜವನ್ನಿಡುವದೆಂದರೆ ಹಿರಣ್ಯಗರ್ಭನು ಹುಟ್ಟಲೆಂಬ ಮನಸ್ಸು ಮಾಡು
ವದು ಮಾತ್ರವೇ ಹೊರತು ಹೆಚ್ಚಿನದೇನೂ ಇಲ್ಲ. ಅವನು ಹುಟ್ಟಿ ಮುಂದೆ
ಜಗತ್ತನ್ನು ಬೆಳೆಸುವನು. ಅವನು ಬ್ರಹ್ಮದ ಬೀಜದಿಂದ ಹುಟ್ಟಿದವನಾದ್ದ

ರಿಂದ ಆವನು ಮುಂದೆ ಬೆಳೆಸಿದ ಎಲ್ಲ ಪ್ರಾಣಿಗಳಿಗೂ ವಸ್ತುಗಳಿಗೂ ಬ್ರಹ್ಮವೇ ಬೀಜವನ್ನಿಟ್ಟಂತಾಯಿತು. —(ಭ ೧೪-೩,೪)

## ಮಾ ಯೆ ಯಿ ಂ ದಾ ಗಿ ರು ವ ಕೇ ಡು

ಹೀಗೆ ಆದ ಈ ಜಗತ್ತಿನ ಹುಟ್ಟು ಆಕಾಶದ ಉಪವನದಂತೆ ಇದೆ. ಆಕಾಶವು ನಿರ್ಮಲವಾಗಿರುತ್ತದೆ. ಒಬ್ಬ ಮಾಯಾವಿಯು ಆ ಆಕಾಶದಲ್ಲಿ ಬಗೆಬಗೆಯ ಬಣ್ಣಗಳ ಹೂಗಳಿಂದಲೂ ಎಲೆಗಳಿಂದಲೂ ಕೂಡಿದ ಮರಗಳು ಪಟ್ಟವಾಗಿರುವಂತೆ ಕಾಣುವ ಹಾಗೆ ಮಾಡುವದುಂಟು. ಈ ಜಗತ್ತು ಅದ ರಂತೆ. ಇದರಿಂದ ಕೇಡೇನು? ಬರೀ ಆಷ್ಟನ್ನು ಹುಟ್ಟಿಸಿದ್ದರಿಂದ ಕೇಡೇನೂ ಇಲ್ಲ. ಮಾಯಾವಿಯು ತಾನು ಹುಟ್ಟಿಸಿದ್ದೆಲ್ಲ ಕಣ್ಣುಕಟ್ಟೆಂದು ತಿಳಿದು ತನ್ನ ಎಚ್ಚರದಲ್ಲಿ ತಾನಿರುತ್ತಾನೆ. ಈ ಜಗತ್ತಿನ ವಿಷಯದಲ್ಲಿ ಹಾಗಾಗುವ ದಿಲ್ಲ. ಜಗತ್ತನ್ನು ಹುಟ್ಟಿಸಿದ ಬ್ರಹ್ಮವು ತಾನೆ ಆ ಮಂಕುಬೂದಿಯ ಸೆಳೆತಕ್ಕೆ ಒಳಗಾದಂತಾಗಿ ತನ್ನ ನಿಜವನ್ನು ಮರೆತು ತನ್ನನ್ನು ಒಮ್ಮೆ ಸುಖವನ್ನೂ ಒಮ್ಮೆ ದುಃಖವನ್ನೂ ಅನುಭವಿಸುವವನೆಂದು ತಪ್ಪು ತಿಳಿದುಕೊಂಡು ಬೆಪ್ಪು ಹಿಡಿದವನಂತಾಗಿದ್ದಾನೆ. ಮೊದಲು ಬ್ರಹ್ಮವು ಮಾಯಾಶಕ್ತಿಯ ಮೇಲೆ ತನ್ನ ತಿಳಿವಳಿಕೆಯನ್ನು ನಡೆಸುವಂಥದ್ದಾಗಿತ್ತು. ಈ ಬೆಪ್ಪು ಹಿಡಿದ ಮೇಲೆ ಅದು ಆ ಮಾಯೆಯ ಗುಣಗಳಾದ ಸತ್ತ್ವ, ರಜ, ತಮ-ಎಂಬ ಸೂತ್ರಗಳು ತನ್ನನ್ನು ಹೇಗೆ ಹೇಗೆ ಆಡಿಸಿದರೆ ಹಾಗೆ ಹಾಗೆ ಆಡುವ ಕೈಗೊಂಬೆಯಾ ದಂತಾಯಿತು. ಇದಕ್ಕಿಂತ ಹೆಚ್ಚಿನ ಕೇಡಿನ್ನೇನುಂಟು? —(ಮಾಂ೨-೧೯)

ಈ ಬೆಪ್ಪು ಜೀವರಿಗೆಲ್ಲ ಹುಟ್ಟಿದಾಗಿನಿಂದ ಬೆನ್ನು ಹತ್ತಿ ಬಂದಿದೆ. ಇದರಿಂದ ಅವರು ಒಂದನ್ನು ತಮಗೆ ಬೇಕಾದದ್ದೆಂದೂ ಒಂದನ್ನು ತಮಗೆ ಬೇಡವಾದದ್ದೆಂದೂ ತಿಳಿಯುವರು. ಇದರಿಂದ ಒಮ್ಮೆ ಸುಖದ ಭಾವನೆಯೂ ಒಮ್ಮೆ ದುಃಖದ ಭಾವನೆಯೂ ಎದ್ದು ಕಾಣುವವು. ಇದು ಯಾವ ಪ್ರಾಣಿಗ ಳಿಗೂ ಬಿಟ್ಟಿಲ್ಲ. ಈ ಸುಖದುಃಖಗಳು ಮನುಷ್ಯನ ಬುದ್ಧಿಯನ್ನು ಸೂರೆ ಗೊಂಡು ಬಿಡುವವು. ಆಮೇಲೆ ಆ ಬುದ್ಧಿಗೆ ತನ್ನ ಆತ್ಮದ ವಿಷಯವನ್ನು ಕುರಿತು ವಿಚಾರ ಮಾಡುವದಕ್ಕೆ ಆಗುವದೇ ಇಲ್ಲ. ಸುಖದುಃಖಗಳಿಗೆ ಸೂರೆ

ಹೋದ ಬುದ್ಧಿಗೆ ಸಾಮಾನ್ಯವಾಗಿ ಹೊರಗಣ ಸ್ಥೂಲವಿಷಯಗಳ ನಿಜಸ್ಥಿತಿಯು ಕೂಡ ತಿಳಿಯುವದಿಲ್ಲ. ಇನ್ನು ಒಳಗಣ ಸೂಕ್ಷ್ಮವಾದ ಆತ್ಮನ ವಿಷಯವಾದ ನಿಜಸ್ಥಿತಿ ಹೇಗೆ ಹತ್ತೀತು! ಹೀಗೆ ತನ್ನ ನಿಜವನ್ನು ತಾನು ಅರಿಯದಂತೆ ಆಗಿರುವ ಕೇಡು ಹೆಚ್ಚಿನ ಕೇಡಲ್ಲವೆ? —(ಭ೨-೨೭)

ಹುಟ್ಟಿದಾಗಿನಿಂದ ಬೆಪ್ಪರಾಗಿರುವ ಜೀವರು ತಪ್ಪು ತಿಳಿವಳಿಕೆಯಿಂದ ಎದ್ದುಕೊಂಡು ಕಾಣುತ್ತಿರುವ ದೇಹ, ಇಂದ್ರಿಯ - ಇವುಗಳ ಗುಂಪನ್ನು ತಾವೆಂದು ಭ್ರಾಂತಿಗೊಂಡು ತಾವು ಸುಖಿಗಳೆಂದೂ ದುಃಖಿಗಳೆಂದೂ ಏನೂ ತಿಳಿಯದವರೆಂದೂ ಎಲ್ಲವನ್ನೂ ತಿಳಿದವರೆಂದೂ ಮುಂತಾಗಿ ಅಭಿಮಾನಗೊಳ್ಳುತ್ತಾರೆ. ಈ ಅಭಿಮಾನವೇ ಮತ್ತೆ ಮತ್ತೆ ಹುಟ್ಟುವದಕ್ಕೆ ಕಾರಣ. ಇದೇ ಅವರನ್ನು ದೇವತೆಗಳು ಮೊದಲಾದ ಮೇಲಾದ ಹುಟ್ಟಿಗೂ ಪಶುಗಳು ಮೊದಲಾದ ಕೀಳಾದ ಹುಟ್ಟಿಗೂ ಮನುಷ್ಯರಾಗುವ ನಡುವಣ ಹುಟ್ಟಿಗೂ ತಳ್ಳುವದು. ಹೀಗೆ ತಳ್ಳಿಸಿಕೊಳ್ಳುವದು ಕೇಡಲ್ಲವೆ? —(ಭ ೧೩-೨೧)

## ಮಾಯೆಯನ್ನು ಹಾರಿಸುವ ಉಪಾಯ

ಮುಖ್ಯವಾಗಿ ತನ್ನ ನಿಜವನ್ನು ತಾನು ಅರಿಯದಿರುವದು ದೊಡ್ಡ ಕೇಡಷ್ಟೆ. ಇದರಿಂದ ಅವನು ಏನೇನೋ ತಪ್ಪು ತಿಳಿದುಕೊಂಡು ಒಬ್ಬನನ್ನು ತನ್ನ ತಂದೆಯೆಂದೂ ಒಬ್ಬನನ್ನು ತನ್ನ ಮಗನೆಂದೂ ಇದು ನನ್ನ ಹೊಲವೆಂದೂ ಇದು ನನ್ನ ಮನೆಯೆಂದೂ ಇದು ನನ್ನ ಮಠವೆಂದೂ ಇವರಿಂದ ನಾನು ಕೆಟ್ಟೆನೆಂದೂ ಇದರಿಂದ ನಾನು ಬದುಕಿದೆನೆಂದೂ ಕೆಟ್ಟಕನಸನ್ನು ಕಾಣುತ್ತಿರುವನು. ಕನಸಿಗೆ ನಿದ್ರೆ ಮೂಲ. ತಪ್ಪು ತಿಳಿವಳಿಕೆಗಳೆಂಬ ಕನಸಿಗೆಲ್ಲ ತನ್ನ ನಿಜವನ್ನು ತಾನು ಅರಿಯದಿರುವದೆಂಬ ನಿದ್ರೆಯೇ ಮೂಲ. ಈ ನಿದ್ರೆಯು ಜೀವರನ್ನು ಎಂದಿನಿಂದಲೋ ಬೆನ್ನುಹತ್ತಿ ಬಂದಿದೆ. ಆ ನಿದ್ರೆಯಿಂದೆಚ್ಚರವಾದ ಹೊರತು ಕೆಟ್ಟ ಕನಸು ಹೋಗುವದಿಲ್ಲ. ತನ್ನ ನಿಜವನ್ನು ತಾನು ಅರಿಯದಿರುವದೆಂಬ ನಿದ್ರೆ ಹೋಗಬೇಕಾದರೆ ವೇದಾಂತದ ಒಳಗುಟ್ಟನ್ನು ಚೆನ್ನಾಗಿ ತಿಳಿದ ಮಹಾದಯಾಳುವಾದ ಗುರು ಎಚ್ಚರಿಸಬೇಕು. ಗುರು ಅವನಿಗೆ ಅವನ ನಿಜವಾದ ಸ್ವರೂಪದ ನೆನ

ಪನ್ನು ತಂದುಕೊಡಬೇಕು. ಆಗ ಅವನು ತಾನು ಹುಟ್ಟು ಮೊದಲಾದವು ಗಳೇನೂ ಇಲ್ಲದವನೆಂದೂ ತನ್ನ ನಿಜವನ್ನರಿಯದಿರುವದೆಂಬುದೂ ಇಲ್ಲದವ ನೆಂದೂ ತಾನು ಎರಡನೆಯದಿಲ್ಲದವನೆಂದೂ ತಿಳಿಯುವನು.

—(ಮಾಂ ೧-೧೬)

ಈ ಜಗತ್ತನ್ನೆಲ್ಲ ಮಾಯೆಯ ಮೂರು ಗುಣಗಳಿಂದಾದ ಪ್ರೀತಿ, ಹಗೆ ತನ, ತಪ್ಪು ತಿಳಿವಳಿಕೆ-ಎಂಬ ಭಾವಗಳು ಮುಸುಕಿಕೊಂಡುಬಿಟ್ಟಿವೆ. ಇದ ರಿಂದ ಜೀವರು ನಿಜವನ್ನೂ ಸುಳ್ಳನ್ನೂ ಬಿಡಿಸಿ ತಿಳಿಯಲಾರದವರಾಗಿದ್ದಾರೆ. ಗುಣಗಳ ಮುಸುಕಿನೊಳಗೆ ಸಿಕ್ಕಿಕೊಂಡಿರುವ ಇವರು ಗುಣಗಳ ಆಚೆಯ ದಾಗಿ ಹುಟ್ಟು ಮೊದಲಾದ ಯಾವ ಬದಲಾವಣೆಗಳೂ ಇಲ್ಲದ ಬ್ರಹ್ಮವನ್ನು ಹೇಗೆ ತಿಳಿದಾರು?

—(ಭ ೭-೧೩)

ಬ್ರಹ್ಮವು ಹೊಳೆಯುವ ಸ್ವಭಾವದ್ದಾದರೂ ಎಲ್ಲರಿಗೂ ಅದು ಹೊಳೆ ಯುವದಿಲ್ಲ. ಅದರ ಭಕ್ತರಿಗೆ ಮಾತ್ರ ಅದು ಹೊಳೆಯುವದು. ಸೂರ್ಯನು ಹೊಳೆಯುವವನಾದರೂ ಗೂಗೆಗಳಿಗೆ ಹೊಳೆಯುವದಿಲ್ಲ. ಅವುಗಳ ಕಣ್ಣಿಗೆ ಸೂರ್ಯನನ್ನು ಕಾಣುವ ಶಕ್ತಿ ಇಲ್ಲ. ಬ್ರಹ್ಮವನ್ನು ಕಾಣುವ ಮನಸ್ಸೆಂಬ ದೃಷ್ಟಿಯು ಯಾವ ದೋಷವೂ ಇಲ್ಲದ್ದಾಗಬೇಕು. ಬ್ರಹ್ಮವು ಸತ್ತ್ವರಜಸ್ತ ಮೋಗುಣಗಳ ಸರಿಬೆರಕೆಯ ಮಾಯೆಯೆಂಬ ಪರದೆಯ ಹಿಂದೆ ಇದೆ. ಆದ್ದರಿಂದ ಅದು ಎಲ್ಲರಿಗೂ ಕಾಣುವದಿಲ್ಲ. ಆದರೂ ಮಾಯೆಯೆಂಬ ಪರದೆಯು ನಮ್ಮನ್ನು ಮಂಕುಮಾಡಿರುವಂತೆ ಬ್ರಹ್ಮವನ್ನು ಮಂಕುಮಾಡ ಲಾರದು. ಏಕೆಂದರೆ: ಅದು ಬ್ರಹ್ಮದ್ದೇ ಶಕ್ತಿ. ಲೋಕದಲ್ಲ ಮಾಯಾವಿಯು ಮಾಯೆಯನ್ನು ಮಾಡುತ್ತಾನಷ್ಟೆ ಅದು ಇತರರಿಗೆ ಕಣ್ಣುಕಟ್ಟಾಗು ವದೇ ಹೊರತು ಮಾಯಾವಿಗೇ ಅಲ್ಲ. ಹಾಗೆಯೆ ಬ್ರಹ್ಮವು ಮಾಯೆ ಯೆಂಬ ಪರದೆಯ ಹಿಂದೆ ಇದ್ದರೂ ಮಾಯೆಯ ಮಂಕು ಅದನ್ನೇನೂ ಸೋಂಕುವದಿಲ್ಲ.

—(ಭ ೭-೨೫)

ಆ ಪರದೆಯನ್ನು ಹಾರ ಹೊಡೆಯುವವದಕ್ಕೇನು ಗತಿಯೆಂದರೆ ಗತಿ ಇದೆ. ಗುಣಗಳ ಸರಿಬೆರಕೆಯ ಮಾಯಾಶಕ್ತಿಯು ಬ್ರಹ್ಮದ ಶಕ್ತಿಯಷ್ಟೆ. ಆದ್ದರಿಂದ ಅದರ ಮೇಲೆ ಇತರರ ಕೈನಡೆಯದಿದ್ದರೂ, ಮಾಯೆಯ

ಮೇಲೆ ಮಾಯಾವಿಯ ಕೈ ನಡೆಯುವಂತೆ, ಬ್ರಹ್ಮದ ಕೈ ನಡೆದೇ ನಡೆಯುವದು. ಇತರರು ತಮ್ಮ ಕೈಯಿಂದ ಆ ಪರದೆಯನ್ನು ಹಾರಹೊಡೆಯುವದಾಗುವದಿಲ್ಲ. ಅದು ಅವರಿಗೆ ದಕ್ಕುವ ಮಾತಲ್ಲ. ತಾವು ಅದನ್ನು ಹಾರಹೊಡೆಯುತ್ತೇವೆಂಬ ದುರಭಿಮಾನವನ್ನು ದೂರಮಾಡಿ ಅದರ ಒಡೆಯನಾದ ಬ್ರಹ್ಮಕ್ಕೆ ಶರಣು ಬಂದರೆ ಅವರು ಮಾಯೆಯ ಅಡ್ಡಿಯನ್ನು ಕಳೆದುಕೊಳ್ಳಬಹುದು. ಆದರೆ ಎಲ್ಲರೂ ಹಾಗೆ ಶರಣು ಬರುವದಿಲ್ಲ. ಪಾಪವನ್ನು ಮಾಡಿ ಮಾಡಿ ಬುದ್ಧಿಯನ್ನು ಹೊಲಸು ಮಾಡಿಕೊಂಡಿರುವ ತಿಳಿಗೇಡಿಗಳಿಗೆ ಈ ಬ್ರಹ್ಮಕ್ಕೆ ಶರಣು ಹೋಗುವಿಕೆಯು ಸರಿದೋರುವದಿಲ್ಲ. ಅವರ ಬುದ್ಧಿಯನ್ನು ಮಾಯೆಯು ಎತ್ತಕಡೆಗೋ ಹಾರಿಸಿಕೊಂಡು ಹೋಗಿರುವದು. ಆದ್ದರಿಂದ ಅವರು ಹಿಂಸೆ, ಸುಳ್ಳು,—ಮೊದಲಾದವುಗಳಿಗೆ ಮನೆಯಾಗಿ ಜನರ ಗಂಟಲ ಗಾಣವಾಗಿರುವರು. —(ಭಗ-೧೪,೧೫)

ಮಾಯೆಯು ತನ್ನನ್ನು ಉಪೇಕ್ಷೆಯಿಂದ ನೋಡುವವರೆಗೂ ದೊಡ್ಡ ಭೂತವಾಗಿ ಕಾಣುತ್ತಿರುವದು. ದಿಟ್ಟಿಸಿ ನೋಡುತ್ತಲೆ ಅದು ಇದ್ದಲ್ಲಿಯೇ ವ್ಯಗರೆಯುವದು. ಇದು ಹೇಗೆ ಹುಟ್ಟಿತೆಂಬ ವಿಚಾರದ ಗೋಜಿಗೆ ಮಾತ್ರ ಹೋಗಬಾರದು. ಏಕೆಂದರೆ: ಅದು ನಿಲುಕುವ ಮಾತಲ್ಲ. ಇದನ್ನು ಹೇಗೆ ಹಾರ ಹೊಡೆಯಬೇಕೆಂಬ ಯೋಚನೆ ಮಾತ್ರ ಇರಬೇಕು. ಇದರೊಳಗೆ ಸಿಕ್ಕುಬಿದ್ದವರು ಚಿಂತೆಯೆಂಬ ಬೆಂಕಿಯ ದಳ್ಳುರಿಯಿಂದ ಬೆಂದವರಾಗಿಯೂ ಕೋಪವೆಂಬ ಹೆಬ್ಬಾವಿನ ಗಂಟಲೊಳಕ್ಕೆ ನುಸುಳಿದವರಾಗಿಯೂ ಬಯಕೆಯೆಂಬ ಸಮುದ್ರದ ಅಲೆಗಳ ಹೊಡೆತಕ್ಕೆ ಸಿಕ್ಕಿದವರಾಗಿಯೂ ಕೆಸರಿನಲ್ಲಿ ಸಿಕ್ಕಿದ ಆನೆಯಂತೆಯೂ ಆಗಿರುವರು. ಈ ಭಯದಿಂದ ಬಿಡುಗಡೆಯಾಗಬೇಕಾದರೆ ಬ್ರಹ್ಮಕ್ಕೆ ಶರಣು ಹೋಗಬೇಕು. —(ಮ ೨೭)

ಮಾಯೆಯ ವಿಷಯವನ್ನು ಹೇಳುವದಕ್ಕೆ ಹೊರಟು ಹೆಚ್ಚು ಹೇಳಲಾಗದಿರುವದೇ ಇದಕ್ಕೆ ಭೂಷಣ. ಮಾಯಾವಿಯ ಶಕ್ತಿಯನ್ನು ಕುರಿತು ಯಾರು ಏನು ಹೆಚ್ಚು ಹೇಳಲಾದೀತು! ಮಾಯಾವಿಯ ಮಾಯೆಯನ್ನು

ಕುರಿತು ಹೇಗೆ ಹೆಚ್ಚಾಗಿ ಹೊಂದಿಸಿ ಹೇಳಲಾಗುವದಿಲ್ಲವೊ ಮಾಯಾಶಕ್ತಿಯ ವಿಷಯವೂ ಹಾಗೆಯೆ.

## ೬—ಜಗತ್ತು ಹುಸಿ

### ಜಗತ್ತು ಇರುವ ಸಂಭವವಿಲ್ಲ

ಜಗತ್ತಿನ ಹುಟ್ಟು ಎಂಬ ಪ್ರಕರಣದಲ್ಲಿ ಅಲ್ಲಲ್ಲಿ ಮಾಯೆಯ ಮಾತು ಬಂದಿದ್ದಂತೆ ಜಗತ್ತು ಹುಸಿಯೆಂಬ ಮಾತೂ ಬಂದೇ ಇತ್ತು. ಆದರೆ ಅಲ್ಲಿ ಒಂದರಿಂದ ಒಂದು, ಆದರಿಂದ ಇನ್ನೊಂದು, ಅದರಿಂದ ಮತ್ತೊಂದು, ಅದರಿಂದ ಮಗದೊಂದು—ಹೀಗೆ ಹುಟ್ಟಿತೆಂಬ ಮಾತೇ ಪಲ್ಲವಿಯಾಗಿ ಮತ್ತೆ ಮತ್ತೆ ಬರುತ್ತಿದ್ದದ್ದರಿಂದ ಮರೆಯಲ್ಲಿ ಇಣಿಕಿ ಕಾಣಿಸಿಕೊಳ್ಳುತ್ತಿದ್ದ ಮಾಯೆಯ ವಿಷಯದ ಕಡೆಗೂ ಜಗತ್ತು ಹುಸಿಯೆಂಬ ವಿಷಯದ ಕಡೆಗೂ ಜನರ ಕಣ್ಣು ತಿರುಗದೆ ಹೋದರೂ ಹೋಗುವ ಸಂಭವ ಉಂಟು. ಏಕೆಂದರೆ: ಮರೆಯಲ್ಲಿ ಆಡುವ ಮಾತಿನ ಮೇಲೆ ಹೆಚ್ಚು ಭರವಸವು ಉಂಟಾಗುವದಿಲ್ಲ. ಮಾಯೆಯ ವಿಷಯವನ್ನೂ ಜಗತ್ತು ಹುಸಿಯೆಂಬ ವಿಷಯವನ್ನೂ ಅಲ್ಲಿಗೇ ಕೈಬಿಟ್ಟರೆ ವೇದಾಂತದ ಸಿದ್ಧಾಂತಕ್ಕೆ ಪುಷ್ಟಿ ಬರುವದಿಲ್ಲ. ಆದ್ದರಿಂದಲೆ ಮಾಯೆಯ ವಿಷಯವನ್ನು ಬೇರೆ ಸ್ವತಂತ್ರವಾದ ಪ್ರಕರಣವಾಗಿ ಮಾಡಲಾಯಿತಷ್ಟೆ. ಹಾಗೆಯೇ ಜಗತ್ತು ಹುಸಿಯೆಂಬದನ್ನು ನಾಲ್ಕು ದಾರಿ ಸೇರುವ ಕಡೆ ಎರಡು ಕೈಗಳನ್ನೂ ಎತ್ತಿ ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿ ಹುಟ್ಟುವಂತೆ ಹೇಳುವದಕ್ಕಾಗಿ ಅದು ಹುಸಿಯೆಂಬ ಪಲ್ಲವಿಯೊಡನೆ ಅದರ ಸ್ವಂತವಾದ ಪ್ರಕರಣವು ಈಗ ಹಾಡಲಾಗುವದು.

ಒಂದು ವಸ್ತುವನ್ನು ನಾವು ಇರುವದೆಂದು ಹೇಳಿದರೆ ಅದು ಯಾವಾಗಲೂ ಇರುವದಾಗಿಯೇ ಇರಬೇಕು. ಅದಕ್ಕೆ ಇಲ್ಲದ್ದೆಂಬ ಅಮಂಗಲದ ಸೊಲ್ಲು ಬರಲೇ ಬಾರದು. ಈ ಜಗತ್ತಿಗೆ ಪ್ರಲಯವೆಂಬುದೊಂದು ದೊಡ್ಡ ವಿಪತ್ತುಂಟೆಂದು ಎಲ್ಲ ವಿಚಾರಶೀಲರೂ ಒಪ್ಪಿಕೊಂಡಿರುವದನ್ನು ನೋಡಿದರೆ

ಇದು ಒಂದು ದಿನ ತಾನು ಇಲ್ಲವೆನಿಸುವದೆಂದು ಹೇಳಬೇಕಾಗುವದು. ಒಂದು ಸಲ ತಾನು ಹೀಗೆ ಇಲ್ಲವೆನಿಸಿದ್ದು ಮತ್ತೆ ಮತ್ತೆ ಹುಟ್ಟುತ್ತಿರುವದೆಂದು ಹಿಂದಿನವರೆಲ್ಲರೂ ಒಂದೇ ಅಭಿಪ್ರಾಯದಿಂದ ಹೇಳುವದನ್ನು ನೋಡಿದರೆ ಇದು ಕೆಲವು ಕಾಲ ಇರುತ್ತ ಕೆಲವು ಕಾಲ ಇಲ್ಲವಾಗುವದೆಂದಾಯಿತು. ಗಳಿಗೆಗೊಂದೊಂದು ಬಣ್ಣವಾಗುವ ಇದನ್ನು ಇರುವದೆಂದು ಹೇಗೆ ಹೇಳಲಾದೀತು! ಆದ್ದರಿಂದ ಜಗತ್ತು ಇರುವ ಸಂಭವವಿಲ್ಲ.

—(ಭ ೨-೧೬)

ಪ್ರಲಯದ ಮಾತೂ ಒಂದು ಕಡೆ ಇರಲಿ. ಅದು ದೂರದ್ದು. ಈ ಜಗತ್ತು ಎಚ್ಚರದಲ್ಲಿ ಮಾತ್ರ ಇರುವದು. ನಮಗೆ ಎಚ್ಚರ, ಕನಸು, ನಿದ್ರೆ ಎಂಬ ಮೂರು ಅನುಭವಗಳಿರುವವು. ಕನಸಿನಲ್ಲಿ ಬೇರೊಂದು ಜಗತ್ತು ಕಾಣುತ್ತಿರುವದೇ ಹೊರತು ಈ ಜಗತ್ತಿನ ಸೊಲ್ಲೇ ಇಲ್ಲ. ನಿದ್ರೆಯಲ್ಲಂತು ಯಾವ ಜಗತ್ತೂ ಇಲ್ಲ. ನಮ್ಮ ಮೂರು ಅನುಭವಗಳಲ್ಲಿ ಎರಡರಲ್ಲಿಲ್ಲದೆ ಬರೀ ಒಂದರಲ್ಲಿ ಮಾತ್ರ ಕಾಣುವ ಇದನ್ನು ಇರುವದೆನ್ನುವದು ಹೇಗೆ ಒಪ್ಪೀತು? ನೋಡುವವರಾದ ನಾವಿರುವಾಗ ಈ ಜಗತ್ತು ಇದ್ದರೆ ಅದು ಕನಸಿನಲ್ಲಿಯೂ ನಿದ್ರೆಯಲ್ಲಿಯೂ ಏಕೆ ಕಾಣಬಾರದು? ಕಾಣುವದಿಲ್ಲವಾದ್ದರಿಂದ ಜಗತ್ತು ಇರುವ ಸಂಭವವಿಲ್ಲ.

'ಜಗತ್ತು ಎಚ್ಚರದಲ್ಲಿಯಾದರೂ ನೆಲೆಯಾಗಿರುವದೊ ಹೇಗೆ?' ಎಂದು ನೋಡಿದರೆ ಜಗತ್ತಿನಲ್ಲಿ ಯಾವದನ್ನು ನೋಡಿದರೂ ಈಗ ಇದ್ದಂತೆ ಇನ್ನೊಂದು ಗಳಿಗೆಗೆ ಇರುವದಿಲ್ಲ. ಎಲ್ಲ ವಸ್ತುಗಳೂ ಬದಲಾವಣೆಯನ್ನು ಹೊಂದತಕ್ಕವುಗಳಾಗಿರುವವು. ಬದಲಾವಣೆಯನ್ನು ಹೊಂದುವವುಗಳಿಗೆ ಕೊನೆಯ ಬದಲಾವಣೆಯಾದ ನಾಶವು ಹಣೆಯಲ್ಲಿ ಬರೆದದ್ದು. ಆದ್ದರಿಂದ ಇಂಥ ಜಗತ್ತು ಹೇಗೆ ಇರುವದಾದೀತು?

ಇನ್ನೊಂದೇನೆಂದರೆ: ಇಷ್ಟು ದೊಡ್ಡ ಬ್ರಹ್ಮಾಂಡದ ವಿಷಯವನ್ನು ನಮ್ಮ ಬುದ್ಧಿಯೆಂಬ ತಕ್ಕಡಿಯು ತನ್ನೊಳಗಿಟ್ಟುಕೊಂಡು ತೂಗಲಾರದೆಂದು ಈ ವಿಷಯದಲ್ಲಿ ಭಗವಂತನ ಹೇಳಿಕೆಯ ಕಡೆಗೆ ಕಣ್ಣು ಹಾಕಿದರೂ ಜಗತ್ತಿಗೆ

ಇರುವ ಯೋಗ್ಯತೆಯುಂಟಾಗುವದಿಲ್ಲ. ಈ ಬ್ರಹ್ಮಾಂಡದ ಮೊದಲೂ ನಡುವೆಯೂ ಕೊನೆಯೂ ತಾನೇ ಎಂದು ಶ್ರೀಕೃಷ್ಣನ ವಾಕ್ಯವಿದೆ. ಅವು ಮೂರೂ ಅವನಾದ ಮೇಲೆ ಜಗತ್ತಿನ ಇರುವಿಕೆಗಿನ್ನೆಲ್ಲಿ ದಾರಿ?
— (ಭ ೧೦-೩೨)

ಆ ಪರಮಾತ್ಮನ ವಾಕ್ಯದಲ್ಲಿಯೇ ಒಂದು ಕಡೆ ಈ ಎಲ್ಲ ಜಗತ್ತೂ ತನ್ನಲ್ಲಿ ಕಾಣಲಾಗುವದೆಂದು ಹೇಳಿದೆ. ಇದರಿಂದ ಜಗತ್ತು ಪರಮಾತ್ಮನ ಇರುವಿಕೆಯನ್ನು ಅವಲಂಬಿಸಿಕೊಂಡೇ ನಮಗೆ ಕಾಣುವದೇ ಹೊರತು ಅದಕ್ಕೆ ಸ್ವತಂತ್ರವಾದ ಇರುವಿಕೆ ಇಲ್ಲವೆಂದಾಯಿತು. ಕನಸಿನಲ್ಲಿ ನಮ್ಮ ಇರುವಿಕೆಯನ್ನು ಅವಲಂಬಿಸಿಕೊಂಡೇ ಒಂದು ಜಗತ್ತು ನಮಗೆ ಕಾಣುವದು. ಅದಕ್ಕೆ ಸ್ವತಂತ್ರವಾದ ಇರುವಿಕೆ ಇಲ್ಲ. ಈ ಜಗತ್ತು ಅದರ ಜೋಡಿಯದೇ ಎಂದು ಹೇಳಿದಂತಾಯಿತು. —(ಗೀ ೪-೩೫)

ಇನ್ನೊಂದು ಕಡೆ ಶ್ರೀಕೃಷ್ಣನು ಈ ಜಗತ್ತೆಲ್ಲ ತನ್ನಲ್ಲಿರುವದೆಂದು ಹೇಳಿ ಅದೇ ಉಸಿರಿನಲ್ಲಿಯೇ ಈ ಜಗತ್ತು ತನ್ನಲ್ಲಿ ಇಲ್ಲವೂ ಇಲ್ಲವೆಂದು ಹೇಳಿರುವನು. ಇವೆರಡರಲ್ಲಿ ಯಾವದನ್ನು ಸುಳ್ಳೆಂದು ಹೇಳುವದೂ ಆಸ್ತಿಕರಿಗೆ ಒಪ್ಪುವ ಮಾತಲ್ಲ. ಇನ್ನು ಎರಡೂ ನಿಜವಾಗುವದು ಹೇಗೆ? ಇರುವದೆಂಬ ಮಾತನ್ನು ಅಕ್ಷರಾರ್ಥದಂತೆ ಸಂಪೂರ್ಣ ನಿಜವೆಂದಿಟ್ಟುಕೊಂಡರೆ ಇಲ್ಲವೆಂಬ ಮಾತನ್ನು ಸುಳ್ಳೆಂದು ಹೇಳಿದ ಹೊರತು ಬೇರೆ ದಾರಿಯೇ ಇಲ್ಲವಾಗುವದು. ಆದ್ದರಿಂದ ಇಲ್ಲವೆಂಬ ಮಾತನ್ನು ಗಟ್ಟಿಯಾಗಿಟ್ಟುಕೊಂಡು ಇರುವದೆಂಬ ಮಾತಿಗೆ ಉಪಚಾರದ ಅರ್ಥವನ್ನು ಮಾಡಬೇಕು. ಜಗತ್ತು ಇರುವದೆಂದರೆ ಬ್ರಹ್ಮದ ಇರುವಿಕೆಯನ್ನು ಅವಲಂಬಿಸಿಕೊಂಡು ಇರುವಂತೆ ಕಾಣುವದೆಂದು ಹೇಳಿಬಿಡಬಹುದು. ಇರುವಂತೆ ಕಾಣುವ ಮಾಯೆಯ ವಸ್ತುಗಳನ್ನು ಆಗಿನ ಮಟ್ಟಿಗೆ ಇರುವದೆನ್ನುವದುಂಟು. ಬ್ರಹ್ಮದಲ್ಲಿ ಜಗತ್ತಿರುವದೆಂಬುದು ಅಂಥ ಇರುವಿಕೆ. ಈ ಅರ್ಥವು ಯುಕ್ತಿಗೂ ಅನುಭವಕ್ಕೂ ಹೊಂದುವದರಿಂದಲೂ ಕೂಡ ಜಗತ್ತು ನಿಜವಾಗಿರುವ ಸಂಭವವಿಲ್ಲ. —(ಭ ೯-೪,೫)

ಬ್ರಹ್ಮವನ್ನು ತಿಳಿಸುವದಕ್ಕೆ ಹೊರಟ ಉಪನಿಷತ್ತುಗಳು ತಮ್ಮ ಕೆಲಸವನ್ನು ತಾವು ಮಾಡುವದನ್ನು ಬಿಟ್ಟು ಜಗತ್ತು ಇಲ್ಲವೆಂದು ಹೇಳುವ ಗೋಜಿಗೇಕೆ ಹೊರಟವೆಂಬ ಯೋಚನೆಯುಂಟಾಗಬಹುದು. 'ಈ ನಿಡುಗೊಂಬಿನ ಬಿಳೀ ಆಕಳು ಓಡಾಡುತ್ತಿದೆ' ಎಂದು ಬೆಟ್ಟುಬಿಟ್ಟು ತೋರಿಸಿದಂತೆ ಬ್ರಹ್ಮವನ್ನು ತೋರಿಸುವದಕ್ಕೆ ಬರುವದಿಲ್ಲ. ಅದರಲ್ಲಿ ಇಲ್ಲದ ಹೆಸರು, ಆಕಾರ ಮತ್ತು ಕರ್ಮ-ಮೊದಲಾದವುಗಳನ್ನು ಹುಟ್ಟುಗಟ್ಟಿ ಅದನ್ನು ತಿಳಿವಿನ ಸ್ವರೂಪವೆಂದೂ ಇರುವಿಕೆಯು ಸ್ವರೂಪವೆಂದೂ ಹೇಳುವದುಂಟು. ಏನನ್ನೂ ಹುಟ್ಟುಗಟ್ಟದೆ ಹೇಳಬೇಕಾದರೆ ಯಾವ ರೀತಿಯಿಂದ ಬೆಟ್ಟುಬಿಟ್ಟು ತೋರಿಸುವದಕ್ಕೂ ಆಗುವದಿಲ್ಲ. ಏಕೆಂದರೆ: ಅದರಲ್ಲಿ ಹೆಸರಾಗಲಿ, ರೂಪವಾಗಲಿ, ಕೆಲಸವಾಗಲಿ, ಭೇದವಾಗಲಿ, ಜಾತಿಯಾಗಲಿ, ಗುಣವಾಗಲಿ-ಏನೂ ಇಲ್ಲ. ಇವುಗಳಿದ್ದರೆ ಏನಾದರೂ ಹೇಳುವದಕ್ಕಾಗುತ್ತಿತ್ತು. ಇದು ಯಾವದೂ ಬ್ರಹ್ಮದಲ್ಲಿಲ್ಲದ್ದರಿಂದ ಅಂಥ ಬ್ರಹ್ಮವನ್ನು ತಿಳಿಸಬೇಕಾದರೆ ಬೆಟ್ಟುಬಿಟ್ಟು ತೋರಿಸಬಹುದಾದವುಗಳನ್ನೆಲ್ಲ ಅಲ್ಲವೆಂದು ಹೇಳುವದೊಂದೇ ಉಪಾಯ. ಉಪನಿಷತ್ತು ಈ ಉಪಾಯವನ್ನು ಕೈಕೊಂಡಿದೆ. ಒಂದು ಕಡೆ ಬ್ರಹ್ಮವನ್ನು ತಿಳಿಸುತ್ತೇನೆಂದು ಹೊರಟು ಜಗತ್ತಿನ ಸೂಕ್ಷ್ಮರೂಪದ ಮತ್ತು ಸ್ಥೂಲರೂಪದ ಬಗೆಗಳನ್ನು ಹೇಳಿ 'ಇದಲ್ಲ, ಇದಲ್ಲ'ವೆಂದು ಮುಗಿಸಿದೆ. ಈ ಎರಡು ಮಾತುಗಳಲ್ಲಿ ಒಂದರಿಂದ ಬ್ರಹ್ಮವನ್ನೂ ಒಂದರಿಂದ ಜಗತ್ತನ್ನೂ ಇರುವದಿಲ್ಲವೆಂದಿತೆಂದು ಹೇಳಹೋದರೆ ಏನೂ ಉಳಿಯುವದೇ ಇಲ್ಲ. ಎರಡನ್ನೂ ಕಳೆದರೆ ಕಳೆಯುವವನೊಬ್ಬನು ಉಳಿಯಲೇ ಬೇಕು. ಅವನನ್ನು ಕಳೆಯುವದು ಯಾರಿಂದಾದೀತು? ಹೀಗಿರುವಾಗ ಏನೂ ಉಳಿಯದಂತೆ ಮಾಡುವದು ಹೇಗೆ ಸರಿಯಾದೀತು! ಆದ್ದರಿಂದ ಅವೆರಡೂ ಒಂದೇ ಮಾತನ್ನು ಸಾರಿ ಸಾರಿ ಹೇಳಿದ ರೂಪವೆಂದೋ ಅಥವಾ ಸ್ಥೂಲ, ಸೂಕ್ಷ್ಮ-ಎಂಬೆಲ್ಲವನ್ನೂ ಎಂಬರ್ಥದ್ದೆಂದೋ ಇಟ್ಟುಕೊಂಡು ಬ್ರಹ್ಮವನ್ನೊ ಅಥವಾ ಜಗತ್ತನ್ನೊ ಯಾವದಾದರೊಂದನ್ನು ಕಳೆಯಬೇಕು. ಬ್ರಹ್ಮವು ಮಾತಿಗೂ ಮನಸ್ಸಿಗೂ ನಿಲುಕದ್ದೆಂದು ಹೇಳಿರುವದರಿಂದ ಅದನ್ನು ಕಳೆದುಬಿಡೋಣವೆಂದರೆ ಆ ನಿಲುಕದ್ದೆಂಬ ಮಾತಿಗೆ ಅದು ಇಲ್ಲವೆಂದರ್ಥವಲ್ಲ. ಅದು

ಯೋಗಿಗಳಿಗೆ ಕಾಣುವದರಿಂದ ಇದ್ದೇ ಇರುವದು. ಅದು ಯಾವ ತಿಳಿವಿಗೂ ಒಳಗಾಗುವದಿಲ್ಲವೆಂದಿಷ್ಟೇ ಅರ್ಥ. ಪ್ರಪಂಚವೆಂಬುದು ಬರೀ ಮಾತುಮಾತ್ರವಾದ್ದರಿಂದ ಕಳೆಯುವದಕ್ಕೆ ತಕ್ಕದ್ದಾಗಿರುವದು. ಉಪನಿಷತ್ತು ಅದನ್ನು ಕಳೆದು ಬ್ರಹ್ಮವನ್ನು ಉಳಿಸಿದೆ. ಜಗತ್ತು ಇರುವದಾದರೆ ಮಕ್ಕಳ ಏಳಿಗೆಯನ್ನು ಬಯಸುವ ತಾಯಂತೆ ಇರುವ ಉಪನಿಷತ್ತುಗಳು ಹೀಗೆ ಅದನ್ನು ಎಂದಿಗೂ ಕಳೆಯುತ್ತಿರಲಿಲ್ಲ. ಆದ್ದರಿಂದ ಜಗತ್ತು ಇರುವ ಸಂಭವವಿಲ್ಲ. —(ಸೂ [illegible])

ಎಚ್ಚರದಲ್ಲಿಯೂ ಕನಸಿನಲ್ಲಿಯೂ ಜಗತ್ತು ಇರುವದರಿಂದ ದುಃಖವಿರುವದನ್ನೂ ನಿದ್ರೆಯಲ್ಲಿ ಜಗತ್ತು ಇಲ್ಲದ್ದರಿಂದ ದುಃಖವಿಲ್ಲದ್ದನ್ನೂ ನೋಡಿ ಈ ಹಾಳು ಜಗತ್ತು ಹೋದರೆ ಸುಖವಾದೀತೆಂದು ಯಾರಿಗಾದರೂ ಹಂಬಲಿಕೆ ಹತ್ತುವ ಸಂಭವ ಉಂಟು. ಈ ಸಂದರ್ಭದಲ್ಲಿ ಜಗತ್ತು ಹೋಗುವದೆಂಬುದು ಆಗದ ಮಾತೆಂದು ಅವರಿಗೆ ತೋರಿಯೂ ತೋರುವದು. ಆದರೆ ಅವರು ತಿಳಿದುಕೊಂಡಿರುವ ಕಾರಣವು ಮಾತ್ರ ಬೇರೆ. ಜಗತ್ತು ನಿಜವಾಗಿ ಇರುವದರಿಂದ ಹೋಗಲಾರದೆಂದು ಅವರ ಅಭಿಪ್ರಾಯ. ಇದು ತಪ್ಪು. ಜಗತ್ತು ಇದ್ದರೆ ಹೋದೀತು. ಹಗ್ಗದಲ್ಲಿ ಹುಟ್ಟಿದ ಹಾವಿಗೆ ಹೋಗುವಿಕೆಯುಂಟೆ? ಅದರಂತೆ ಮಾಯೆಯು [illegible] ಇರುವದೂ ಇಲ್ಲ; ಹೋಗುವದೂ ಇಲ್ಲ. ಹಾಗೆಯೇ ಜಗತ್ತು ಇರುವದೂ ಇಲ್ಲ; ಹೋಗುವದೂ ಇಲ್ಲ. — (ಮಾಂ ೧-೧೭)

ಇದರ ಜೊತೆಗೆ ಸೃಷ್ಟಿಗಿಂತ ಮೊದಲೂ ಏನೇನೂ ಎಷ್ಟು ಮಾತ್ರವೂ ಇರುವದಿಲ್ಲವೆಂದೂ ಸೃಷ್ಟಿಯಲ್ಲಿಯ ಬೇರೆಬೇರೆ ಆಕಾರಗಳೆಲ್ಲ ಬರೀ ಮಾತು ಮಾತ್ರವೆಂದೂ ಬ್ರಹ್ಮಕ್ಕೆ ಎರಡನೆಯದೆಂಬುದಿಲ್ಲವೆಂದೂ ಭೇದವೆಂಬುದರ ಸುಳಿವೇ ಇಲ್ಲವೆಂದೂ ಕಾಣುವ ರೂಪಗಳೆಲ್ಲ ಮಾಯೆಯಿಂದಾದವುಗಳೆಂದೂ ಎಲ್ಲಿಯೂ ಎರಡನೆಯದಿಲ್ಲವೆಂದೂ ಬ್ರಹ್ಮದ ಹೊರತು ಎರಡನೆಯ ಕಾರಣವಿಲ್ಲದ್ದರಿಂದ ಜಗತ್ತು ಹಾಗೆ ಇಲ್ಲದ್ದೆಂದೂ ಕಾಣುವ ಜಗತ್ತೆಲ್ಲ ಮೋಡದ ಕೋಡಿನಂತೆಯೆಂದೂ ಮನಸ್ಸೆಂಬುದೇ ಪ್ರಪಂಚವಲ್ಲದೆ ಬೇರೆ ಇಲ್ಲವೇ ಇಲ್ಲವೆಂದೂ ಮುಂತಾಗಿ ಉಪನಿಷತ್ತುಗಳು ಅಲ್ಲಲ್ಲಿ ಸ್ಪಷ್ಟವಾಗಿ ಕೈ ಎತ್ತಿ ಹೇಳುತ್ತಿರುವವು. — (ಮ ವಾ. ೮.)

ಜಗತ್ತು ಇರುವದಲ್ಲವೆಂಬ ಮಾತಿನ ಮುಖಕ್ಕೆ ತಾವು ಹುಟ್ಟುಗಟ್ಟಿದ ಬೇರೆ ಬಣ್ಣವನ್ನು ಬಳಿದು ಅದರ ಸ್ವರೂಪವೇ ಬೇರೆಯಾಗುವಂತೆ ಮಾಡುವದರ ಮೂಲಕ ಆ ಮಾತನ್ನು ಮರೆಮಾಡಿ ಜಗತ್ತು ಇರುವದರಿಂದಲೆ ಶ್ರುತಿಯು ಜಗತ್ತಿನ ಹುಟ್ಟನ್ನು ಹೇಳಿ ಅದನ್ನು ಗಟ್ಟಿಗೊಳಿಸಿತೆಂದರೆ ಜಗತ್ತಿಲ್ಲವೆಂದು ಡಂಗುರವನ್ನು ಹೊಡೆದರೂ ನಂಬಲಾರದಷ್ಟು ಜನರೆಲ್ಲರೂ ಅದರ ಇರುವಿಕೆಯಲ್ಲಿ ಭರವಸವುಳ್ಳವರಾಗಿರುವಾಗ ಅದನ್ನು ಶ್ರುತಿಯು ಹೇಳಬೇಕಾದದ್ದಿನ್ನೇಕೆ? ಹುಟ್ಟಿನ ಕ್ರಮವನ್ನು ಹೇಳುವದೇ ಶ್ರುತಿಯ ಉದ್ದೇಶವೆಂದರೆ ಅದನ್ನು ಬಹುಮುಖವಾಗಿ ಹೇಳಿರುವದೇಕೆ? ಇದಲ್ಲದೆ ಜಗತ್ತು ಹುಟ್ಟಿದ ವಿಷಯವನ್ನು ತಿಳಿದರೆ ಇಂಥದ್ದೊಂದು ಫಲವೆಂದು ಎಲ್ಲಿಯೂ ಹೇಳಿಲ್ಲದೆ ಇರುವಾಗ ವ್ಯರ್ಥವಾಗಿ ಆ ವಿಷಯಕ್ಕೆ ಶ್ರುತಿಯು ಗಂಟಲನ್ನು ನೋಯಿಸಿಕೊಂಡಿರುವದೇಕೆ? ಹೇಗೆ ಹೇಗೆ ನೋಡಿದರೂ ಜಗತ್ತು ಇರುವ ಸಂಭವವಿಲ್ಲ.

## ಜಗತ್ತು ಕನಸು ಮೊದಲಾದವುಗಳಂತೆ

ಜಗತ್ತು ಕನಸನ್ನು ಹೋಲುವದರಿಂದ ಸುಳ್ಳೆಂಬ ಮಾತು ಇಲ್ಲಿಲ್ಲಿ ಬಂದಿರುವದಷ್ಟೆ. ಜಗತ್ತು ಹುಸಿಯೆಂಬರ್ಥವು ಮನಸ್ಸಿನಲ್ಲಿ ಒಡೆದು ಮೂಡುವದಕ್ಕಾಗಿ ಈ ಹೋಲಿಕೆಯ ಗಂಟನ್ನು ಇಲ್ಲಿ ಬಿಚ್ಚಿ ಹರಡಲಾಗುವದು. 'ತಿಳಿದರೆ ಎರಡನೆಯದೆಂಬುದಿರುವದಿಲ್ಲ' ಎಂದು ಮೊದಲಾಗಿ ಶ್ರುತಿಯಲ್ಲಿ ಹೇಳಿದ ಅಭಿಪ್ರಾಯವನ್ನು ಯುಕ್ತಿಯಿಂದ ಸಾಧಿಸುವ ಈ ಹಂಚಿಕೆಯು ಚೆನ್ನಾಗಿ ಬಲಪಡಿಸುತ್ತದೆ. ಕನಸಿನಲ್ಲಿ ಕಾಣುವದೆಲ್ಲ ಸುಳ್ಳೆಂದು ಹೇಳುವದು ತಿಳಿದವರ ಅಭಿಪ್ರಾಯ. ಏಕೆಂದರೆ: (೧) ಕನಸಿನಲ್ಲಿ ಕಾಣುವ ಬೆಟ್ಟ, ಆನೆ-ಮೊದಲಾದವು ಶರೀರದಹೊರಗಂತು ಇಲ್ಲ. ಅವೆಲ್ಲ ಶರೀರದೊಳಗಿದ್ದೇ ಕಾಣಬೇಕು. ಜೀವನು ದೇಹದೊಳಗೆ ನಾಡಿಗಳಲ್ಲಿ ಓಡಾಡುವಾಗ ಕನಸುಗಾಣುವನೆನ್ನುವರು. ನಾಡಿಗಳೊಳಗೆ ಬೆಟ್ಟವೂ ಆನೆಯೂ ಇರುವದುಂಟೆ? ಇಲ್ಲ. ಆದ್ದರಿಂದ ಕನಸಿನಲ್ಲಿ ಕಾಣುವದೆಲ್ಲ ಸುಳ್ಳು. (೨) ಒಂದು ಕಡೆ ಮಲಗಿದವನು ಕನಸನ್ನು ಇನ್ನೊಂದು ಕಡೆಯಲ್ಲಿ ಕಾಣುವದರಿಂದ ಅವನು ಅಲ್ಲಿಗೆ ಹೋಗಿ ಕಾಣುವನೆಂದಿಟ್ಟುಕೊಂಡು ಬೆಟ್ಟ ಮೊದಲಾದವು ಶರೀರದೊಳಗೇ ಇರುವದಸಂಭ

ವವೆಂಬ ದೋಷವನ್ನು ಕಳೆಯಹೋದರೆ ಅವನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಿರುವನೆಂದು ಹೇಳುವದಕ್ಕೆ ಬರುವದಿಲ್ಲ. ಏಕೆಂದರೆ: ಅವನು ಮಲಗಿದೊಡನೆ ನೂರಾರು ಗಾವುದಗಳ ಮೇಲಿನ ದೇಶವನ್ನು ನೋಡುವಾಗ ತಿಂಗಳುಗಟ್ಟಲೆ ನಡೆದರೂ ಸಾಗದಷ್ಟು ದೂರಕ್ಕೆ ಹೋಗುವದಕ್ಕೂ ಹಿಂದಿರುಗಿ ಬರುವದಕ್ಕೂ ತಕ್ಕಷ್ಟು ಕಾಲವಿಲ್ಲ. ಇದರ ಮೇಲೆ ಕನಸಿನಿಂದ ಎಚ್ಚರಗೊಳ್ಳುವವರೆಲ್ಲರೂ ಮಲಗಿದ ಕಡೆಯಲ್ಲಿಯೇ ಏಳುವರೇ ಹೊರತು ಕನಸಿನಲ್ಲಿ ಕಾಣುತ್ತಿದ್ದ ದೂರದೇಶದಲ್ಲಿ ಏಳುವದಿಲ್ಲ. ಅವನು ಅಲ್ಲಿಗೆ ಹೋಗಿದ್ದರೆ ಅಲ್ಲಿಯೇ ಏಳಬಹುದಾಗಿತ್ತು. ಹಾಗಾಗುವದಿಲ್ಲ ಇದರ ಮೇಲೆ ರಾತ್ರಿಯಲ್ಲಿ ಮಲಗಿದವನು ಕನಸಿನಲ್ಲಿ ಹಗಲನ್ನು ಕಾಣುತ್ತಾನೆ. ಅವನು ಆ ಕನಸಿನಲ್ಲಿ ಎಷ್ಟೋ ಜನರೊಡನೆ ಕೂಡಿದ್ದಂತಾಗಿರುತ್ತದೆ. ಆ ಜನರು ಯಾರೂ ಅವನನ್ನು ಆಗ ಕಂಡೇ ಇರುವದಿಲ್ಲ. ಆದ್ದರಿಂದ ಕನಸು ಕಾಣುವವನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವದೆಂಬುದು ಸುಳ್ಳು. —(ಮಾಂ ೨-೧,೨)

ಕನಸಿನಲ್ಲಿ ಕಾಣುವದೆಲ್ಲ ಸುಳ್ಳೆಂದಾಯಿತಷ್ಟೆ. ಎಚ್ಚರದ ಪಕ್ಷೆಯ ಬರೆಹವೂ ಇಷ್ಟೆ. 'ಹೊರಗೆ ಕಾಣಬರುವದರಿಂದ' ಎಂಬುದು ಅದಕ್ಕೆ ಕಾರಣ. 'ಕನಸಿನಲ್ಲಿ ಹೊರಗೆ ಕಾಣುವವುಗಳಂತೆ' ಎಂಬುದು ದೃಷ್ಟಾಂತ. ಕನಸಿನಲ್ಲಿ ಹೊರಗೆ ಕಾಣುವವುಗಳೆಲ್ಲ ಹೇಗೆ ಸುಳ್ಳೊ ಹಾಗೆ ಎಚ್ಚರದಲ್ಲಿ ಹೊರಗೆ ಕಾಣುವವುಗಳೂ ಸುಳ್ಳೆ. ಕನಸಿನೊಳಗೆ ಕಾಣುವವುಗಳು ಶರೀರದೊಳಗೆ ಇಕ್ಕಟ್ಟಾದ ಕಡೆ ಕಾಣುವವೆಂದು ಭೇದವು ಕಂಡರೂ ಹೊರಗೆ ಕಾಣಬರುವವುಗಳೆಂಬುದೂ ಸುಳ್ಳಾದವುಗಳೆಂಬುದೂ ಎರಡಕ್ಕೂ ಸಮ. ನೋಡುವವನು, ಕಾಣಬರುವವುಗಳು- ಎಂಬ ಭೇದಗಳು ಕನಸಿಗೂ ಎಚ್ಚರಕ್ಕೂ ಎರಡಕ್ಕೂ ಸಮನಾದ್ದರಿಂದ ಅವೆರಡೂ ಒಂದೇ ಎಂದು ವಿವೇಕಿಗಳ ಅಭಿಪ್ರಾಯ. —(ಮಾಂ ೨-೪,೫)

ಇನ್ನೊಂದು ಕಾರಣ: ಮೊದಲಲ್ಲಿಯೂ ಕೊನೆಯಲ್ಲಿಯೂ ಇಲ್ಲದ ಬಿಸಿಲಗುದುರೆ ಮೊದಲಾದವು ನಡುವೆಯೂ ಇಲ್ಲವಾದ್ದರಿಂದ ಸುಳ್ಳೆಂದು ಎಲ್ಲರೂ ಒಪ್ಪುವರಷ್ಟೆ. ಎಚ್ಚರದಲ್ಲಿ ಕಾಣುವವುಗಳೂ ಮೊದಲಲ್ಲಿಯೂ

ಕೊನೆಯಲ್ಲಿಯೂ ಇಲ್ಲದವುಗಳಾದ್ದರಿಂದ ನಡುವೆಯೂ ಇಲ್ಲದವುಗಳೇ ಆಗಿ ಸುಳ್ಳಾದವುಗಳು. ಎಚ್ಚರದಲ್ಲಿ ಕಾಣುವ ಯಾವದೂ ಅದು ಹುಟ್ಟುವದಕ್ಕೆ ಮುಂಚೆ ಇರಲಿಲ್ಲ; ಅದು ನಾಶವಾದ ಮೇಲೆ ಇರುವದಿಲ್ಲ. ಆದ್ದರಿಂದ ನಡುವೆಯೂ ಇಲ್ಲದಂತೆಯೇ ಆದರೂ ಮೂಢಿಗಳಾದ ಜನರು ಅವು ನಿಜವಾದ ವುಗಳೆಂದು ಮೋಸಹೋಗಿರುವರು. ಎಚ್ಚರದವುಗಳನ್ನು ನಿಜವೆನ್ನುವವ ರಲ್ಲಿ ಬಹು ಬುದ್ಧಿಶಾಲಿಗಳೆಂದು ಹೆಸರುಗೊಂಡವರಿರಬಹುದು. ಅವರು ಒಟ್ಟು ಜಗತ್ತಿನ ಬೆಲೆಯನ್ನು ಕಟ್ಟಿ ತಮ್ಮ ಆತ್ಮದ ಸ್ವರೂಪವನ್ನು ತಿಳಿದಿ ರುವದಿಲ್ಲವಾದ್ದರಿಂದ ಅವರನ್ನೂ ಇಲ್ಲಿ ಮೂಢಿಗಳ ಗುಂಪಿನಲ್ಲಿ ಸೇರಿಸಿ ಕರೆದ ದ್ದಾಗಿರುವದು. ಇದು ಸಾಹಸದ ಮಾತೆಂದು ತೋರಿದರೆ ದಯವಿಟ್ಟು ಮನ್ನಿಸಬೇಕು. —(ಮಾಂ ೨-೬)

ಎಚ್ಚರದ ಊಟವು ಹಸಿವೆಯನ್ನಡಗಿಸುವದಾಗಿಯೂ ಎಚ್ಚರದ ವಾಹನವು ಪ್ರಯಾಣಕ್ಕೆ ಉಪಯೋಗವಾಗುವದಾಗಿಯೂ ಇದ್ದು ಕನಸಿನಲ್ಲಿ ಹಾಗಿಲ್ಲದ್ದರಿಂದ ಕನಸೂ ಎಚ್ಚರವೂ ಒಂದಾಗಲಾರವೆಂದು ಹೇಳಿ ಎಚ್ಚರದ ವುಗಳೆಲ್ಲ ಸುಳ್ಳೆಂಬ ಮಾತನ್ನು ಹಾರಿಸುವದಕ್ಕೆ ಹೊರಟರೆ ಅದು ನಡೆಯ ಲಾರದು ಎಚ್ಚರದ ಊಟವು ಹಸಿವನ್ನಡಗಿಸುವದೆಂಬುದು ಎಚ್ಚರಕ್ಕೆ ಮಾತ್ರ ಆಗುವದೇ ಹೊರತು ಕನಸಿನ ತನಕ ಬೆಳೆಯಲಾರದು. ಎಚ್ಚರ ದಲ್ಲಿ ಹೊಟ್ಟೆಬಿರಿಯುವಂತೆ ತಿಂದು ಕುಡಿದು ಮಲಗಿದವನು ಒಡನೆಯೆ ತಾನು ದಿನವೆಲ್ಲ ಅನ್ನನೀರಿಲ್ಲದವನೆಂದು ಕನಸುಗಾಣುತ್ತಾನೆ. ಕನಸಿನಲ್ಲಿ ತಿಂದು ತೇಗಿದವನು ಎಚ್ಚರದಲ್ಲಿಯೂ ಹಾಗೆಯೇ ಆಗುತ್ತಾನೆ. ಆದ್ದರಿಂದ ಕನಸಿನವುಗಳಂತೆ ಎಚ್ಚರದವುಗಳೂ ಸುಳ್ಳೆ. —(ಮಾಂ ೨-೭)

ಎಚ್ಚರದವುಗಳನ್ನೆ ಕನಸಿನಲ್ಲಿ ಕಂಡಿದ್ದರೆ ಕನಸನ್ನೂ ಎಚ್ಚರವನ್ನೂ ಒಂದೆನ್ನಬಹುದೇ ಹೊರತು ಕನಸಿನಲ್ಲಿ ತಾನು ಎಂದೂ ಇಲ್ಲದ ಎಂಟು ತೋಳಿನವನಾಗಿ ನಾಲ್ಕು ಕೋರೆದಾಡೆಗಳ ಆನೆಯ ಮೇಲೇರಿದಂತೆ ಕಾಣ ಬಹುದಾದ್ದರಿಂದ ಅದು ಎಚ್ಚರಕ್ಕೆ ಸಮನಲ್ಲವೆಂದು ಇನ್ನೊಂದಾಕ್ಷೇಪವ ನ್ನೆತ್ತಬಹುದು. ಅದೂ ನಿಲ್ಲುವದಿಲ್ಲ. ಕನಸಿನಲ್ಲಿ ಕಾಣಬರುವ ಎಂದೂ ಇಲ್ಲ ದ್ದೆಂಬುದೊಂದು ನಿಜವಾದ ಸ್ವರೂಪವಲ್ಲ. ಸಾಮಾನ್ಯನಾದ ಮನುಷ್ಯನಾ

ಗಿದ್ದವನು ನೂರು ಯಾಗಗಳನ್ನು ಮಾಡಿ ಸ್ವರ್ಗಕ್ಕೆ ಹೋಗಿ ಇಂದ್ರನಾದರೆ ಅವನಿಗೆ ಮೈತುಂಬ ಕಣ್ಣಾಗುತ್ತದಂತೆ. ಈ ಮೈತುಂಬ ಕಣ್ಣಾಗುವದೆಂಬುದು ಸ್ವರ್ಗಕ್ಕೆ ಹೋಗಿ ಇಂದ್ರನಾದವನ ಧರ್ಮ. ಅದು ಅವನ ನಿಜಸ್ವರೂಪವಲ್ಲ. ಇದರಂತೆ ಎಂಟು ತೋಳಿನವನಾಗುವದೇ ಮೊದಲಾದದ್ದು ಕನಸುಗಾಣುವವನ ಧರ್ಮ. ಊರೂರುಗಳ ದಾರಿಗಳನ್ನೆಲ್ಲ ತಿಳಿದವನು ದೊಡ್ಡ ದೊಡ್ಡ ಊರಿಗೆ ಹೋಗಿ ಅಲ್ಲಿ ಅದುವರೆಗೆ ತಾನೆಂದೂ ಕಾಣದ ಆಶ್ಚರ್ಯಕರವಾದ ಪದಾರ್ಥಗಳನ್ನು ನೋಡುವಂತೆ ಎಚ್ಚರದವನು ಕನಸಿಗೆ ಹೋದಾಗ ಅಲ್ಲಿ ತಾನು ಎಚ್ಚರದಲ್ಲಿ ಎಂದೂ ಕಾಣದ್ದನ್ನು ನೋಡುವದಕ್ಕಾಗಬಹುದು. ಅದು ಕನಸುಗಾಣುವವನ ಧರ್ಮವೇ ಹೊರತು ನಿಜವಾಗಿರತಕ್ಕದ್ದಲ್ಲ. ಆದ್ದರಿಂದ ಕನಸೂ ಎಚ್ಚರವೂ ಒಂದೆ. —(ಮಾಂ ೨-೮)

ಕನಸೆಂಬುದು ಸುಳ್ಳಾದರೂ ಅದರಲ್ಲಿ ಒಳಗೆ ಮನಸ್ಸಿನಲ್ಲಿಯೇ ಗುಣಾಕಾರ ಹಾಕಿಕೊಂಡದ್ದನ್ನು ಸುಳ್ಳೆನ್ನುತ್ತೇವೆ; ಮನಸ್ಸಿನಿಂದ ಹೊರಗೆ ಕಣ್ಣು ಮೊದಲಾದ ಇಂದ್ರಿಯಗಳಿಗೆ ಕಂಡದ್ದನ್ನು ನಿಜವೆನ್ನುತ್ತೇವೆ. ಹೀಗೆ ಒಂದು ಸುಳ್ಳಾಗಿಯೂ ಒಂದು ನಿಜವಾಗಿಯೂ ಕಂಡರೂ ಎರಡೂ ಸುಳ್ಳೆಂಬುದು ಅನುಭವದಲ್ಲಿದೆ. ಹಾಗೆಯೇ ಎಚ್ಚರದಲ್ಲಿಯೂ ಮನಸ್ಸಿನೊಳಗೆ ಮಾಡಿದ ಮಂಡಿಗೆ ಸುಳ್ಳೆಂದೂ ಹೊರಗೆ ಕಾಣುವದಲ್ಲ ನಿಜವೆಂದೂ ಭೇದವಿದ್ದರೂ ಎರಡೂ ಸುಳ್ಳು. —(ಮಾಂ ೨-೯,೧೦)

ಕನಸೂ ಮಾಯೆಯೂ ಎರಡೂ ಸುಳ್ಳು. ಆದರೂ ದಡ್ಡರಿಗೆ ಅವು ನಿಜವಾದವುಗಳಂತೆ ಕಾಣುತ್ತವೆ. ಬೇಕಾದಷ್ಟು ಅಂಗಡಿಗಳೂ ಮಹಡಿಗಳೂ ಗಂಡಸರೂ ಹೆಂಗಸರೂ ಗಿಟ್ಟಿಗಿರಿದಿರುವಂತೆ ಆಕಾಶದಲ್ಲಿ ಕಾಣುವ ಗಂಧರ್ವನಗರವು ಒಮ್ಮೆಗೇ ಇಲ್ಲದಂತಾಗುವದು. ಈ ಮಾಯೆಯಂತೆಯೂ ಕನಸಿನಂತೆಯೂ ಎಚ್ಚರದವುಗಳೆಲ್ಲ ಸುಳ್ಳು. — (ಮಾಂ ೨-೩೧)

## ಜಗತ್ತು ಇಲ್ಲವೆಂಬ ಡಂಗುರ

ಈ ಜಗತ್ತು ತನ್ನ ಆತ್ಮಸ್ವರೂಪವನ್ನರಿಯದಿರುವಾಗ ಸುಳ್ಳಾಗಿ ಎದ್ದುಕೊಂಡು ಕಾಣುತ್ತಿರುವದು. ಗುರುಗಳ ಅನುಗ್ರಹಕ್ಕೆ ಪಾತ್ರನಾದವನು ತನ್ನ ಸ್ವರೂಪವನ್ನು ಅಂಗಯ್ಯೊಳಗಣ ನೆಲ್ಲಿಯ ಕಾಯಂತೆ ಕಂಡಾಗ ಎರಡ

ನೆಯುದೆಂಬ ವಸ್ತುಗಳ ಸುಳಿವೇ ಇರುವದಿಲ್ಲ. ಬಗೆಬಗೆಯ ವಸ್ತುಗಳಿರುವ ಜಗತ್ತೆಂಬುದೊಂದಿಲ್ಲವೇ ಇಲ್ಲವಾದರೂ ತಮ್ಮ ಅರಿವು ತಮಗಿಲ್ಲದವರಿಗೆ ಮಾತ್ರ ಅದು ಇರುವಂತೆ ಕಾಣುವದು. ಜಗತ್ತನ್ನು ನಿಜವಾಗಿಯೇ ಇರುವ ದೆಂದು ನೋಡುವವರು ಸಾವಿನಿಂದ ಸಾವಿಗೆ ನುಗ್ಗುತ್ತಿರಬೇಕಾಗುತ್ತದೆ.

—(ಬೃ ೪-೪-೧೯)

ತನ್ನ ಆತ್ಮಕ್ಕಿಂತ ಬೇರೆಯಾಗಿ ಬ್ರಹ್ಮವೆಂಬ ವರ್ಣವೊಂದುಂಟೆಂದು ಯಾವನು ತಿಳಿಯುತ್ತಾನೊ ಅವನನ್ನು ಬ್ರಹ್ಮವೆಂಬ ವರ್ಣವು ದೂರವಾ ಡುವದು. ತನ್ನ ಆತ್ಮಕ್ಕಿಂತ ಬೇರೆಯಾಗಿ ಕ್ಷತ್ರವೆಂಬ ವರ್ಣ ಒಂದುಂ ಟೆಂದು ಯಾವನು ತಿಳಿಯುತ್ತಾನೊ ಅವನನ್ನು ಕ್ಷತ್ರವೆಂಬ ವರ್ಣವು ದೂರಮಾಡುವದು. ತನ್ನ ಆತ್ಮಕ್ಕಿಂತ ಬೇರೆಯಾಗಿ ಲೋಕಗಳುಂ ಟೆಂದು ಯಾವನು ತಿಳಿಯುತ್ತಾನೊ ಅವನನ್ನು ಲೋಕಗಳು ದೂರ ಮಾಡುವವು. ತನ್ನ ಆತ್ಮಕ್ಕಿಂತ ಬೇರೆಯಾಗಿ ದೇವತೆಗಳುಂಟೆಂದು ಯಾವನು ತಿಳಿಯುತ್ತಾನೊ ಅವನನ್ನು ದೇವತೆಗಳು ದೂರಮಾಡುವರು. ತನ್ನ ಆತ್ಮಕ್ಕಿಂತ ಬೇರೆಯಾಗಿ ವೇದಗಳುಂಟೆಂದು ಯಾವನು ತಿಳಿಯು ತ್ತಾನೊ ಅವನನ್ನು ವೇದಗಳು ದೂರಮಾಡುವವು. ತನ್ನ ಆತ್ಮಕ್ಕಿಂತ ಬೇರೆಯಾಗಿ ಪ್ರಾಣಿಗಳುಂಟೆಂದು ಯಾವನು ತಿಳಿಯುತ್ತಾನೊ ಅವನನ್ನು ಪ್ರಾಣಿಗಳೆಲ್ಲ ದೂರಮಾಡುವರು. ತನ್ನ ಆತ್ಮಕ್ಕಿಂತ ಬೇರೆಯಾಗಿ ಎಲ್ಲವೂ ಇರುವವೆಂದು ಯಾವನು ತಿಳಿಯುತ್ತಾನೊ ಅವನನ್ನು ಎಲ್ಲವೂ ದೂರವಾ ಡುವವು. ಈ ಬ್ರಹ್ಮ, ಕ್ಷತ್ರ, ಲೋಕಗಳು, ದೇವತೆಗಳು, ವೇದಗಳು, ಪ್ರಾಣಿ ಗಳು--ಎಲ್ಲವೂ ತಮ್ಮನ್ನು ತನಗಿಂತ ಬೇರೆಯಾಗಿ ಕಂಡನೆಂಬ ತಪ್ಪಿನಿಂದ ಅವನಿಗೆ ಉತ್ತಮಗತಿ ದೊರೆಯದಂತೆ ಮಾಡುವವು. ಬ್ರಹ್ಮ, ಕ್ಷತ್ರ,- ಮೊದಲಾದ ಎಲ್ಲವೂ ಈ ಆತ್ಮನೆ ಹೊರತು ಬೇರೆ ಇಲ್ಲ. ಆದ್ದರಿಂದ ಜಗತ್ತು ಹುಸಿ.

—(ಬೃ೪-೫-೭)

ತನಗಿಂತ ಬೇರೆ ಏನಾದರೂ ಇರುವದು ಕಂಡರೆ ಅದು ಬಿಸಿಲಗುದುರೆ ಯಂತೆ ಸುಳ್ಳು. ಬಂಜೆಯ ಮಗನ ಮಾತಿನಲ್ಲಿ ಹೆದರಿಕೆಯುಂಟಾಗುತ್ತಿ ದ್ದರೆ ಜಗತ್ತು ಉಂಟಾದೀತು. ಮೊಲದ ಕೋಡಿನ ತಿವಿತದಿಂದ ಮದ್ದಾನೆ

ಸಾಯುವದಾದರೆ ಜಗತ್ತಿದ್ದೀತು. ಬಿಸಿಲಗುದುರೆಯ ನೀರನ್ನು ಕುಡಿಯುವ ದರಿಂದ ಬಾಯಾರಿಕೆ ಹೋಗುವದಾದರೆ ಜಗತ್ತಿದ್ದೀತು. ಕಪ್ಪೇಚಿಪ್ಪಿನ ಬೆಳ್ಳಿಯು ನಿಜವಾದ ಒಡವೆಯಾಗುವದಾದರೆ ಜಗತ್ತಿದ್ದೀತು. ಬಾಳೆಯ ಕಂಬದ ಕಟ್ಟಿಗೆಯಿಂದ ಅಡಿಗೆಯಾಗುವದಾದರೆ ಜಗತ್ತಿದ್ದೀತು. ಹಸುವಿನ ಮೊಲೆಯಿಂದ ಕೆಳಕ್ಕೆ ಸುರಿದ ಹಾಲು ಮೇಲಕ್ಕೇರುವದಾದರೆ ಜಗತ್ತಿದ್ದೀತು. ಬೆಂಕಿ ಕೆಳಮುಖವಾಗಿ ಉರಿಯುವದಾದರೆ ಜಗತ್ತಿದ್ದೀತು. ಸೊಳ್ಳೆಯಿಂದ ಸಿಂಹ ಸಾಯುವದಾದರೆ ಜಗತ್ತಿದ್ದೀತು. ಆಕಾಶದ ಅರಮನೆ ನಿಜವಾಗು ವದಾದರೆ ಜಗತ್ತಿದ್ದೀತು. ಆಕಾಶದ ಕಪ್ಪು ನಿಜವಾದರೆ ಜಗತ್ತಿದ್ದೀತು. ತಿಂಗಳ ಹಿಂದೆ ಸತ್ತವನು ಮತ್ತೆ ಬದುಕಿಬಂದರೆ ಜಗತ್ತಿದ್ದೀತು. ಉರಿಯ ನಡುವೆ ಕಮಲವು ಬೆಳೆಯುವದಾದರೆ ಜಗತ್ತಿದ್ದೀತು. ಜಾಣರ ಮನಸ್ಸು ದಡ್ಡರಿಗೆ ತಿಳಿಯುವದಾದರೆ ಜಗತ್ತಿದ್ದೀತು. —(ತೇ ೬)

ಸೂರ್ಯನು ಬ್ರಹ್ಮದಲ್ಲಿಯೇ ಮೂಡಿ ಕಾಣುವನು; ಬ್ರಹ್ಮದಲ್ಲಿಯೇ ಮುಳುಗಿ ಕಾಣದೆ ಹೋಗುವನು. ಹೊರಗಣವರೆಂಬ ಅಗ್ನಿ ಮೊದಲಾದ ದೇವತೆಗಳೂ ಶರೀರದೊಳಗಿರುವ ವಾಕ್ಕು ಮೊದಲಾದವುಗಳೂ ಎಲ್ಲವೂ ಗುಂಬದಲ್ಲಿ ಹಾರೇಕಾಲುಗಳಂತೆ ಬ್ರಹ್ಮವನ್ನು ಕಚ್ಚಿ ಹಿಡಿದುಕೊಂಡಿರುವವು. ಆದ್ದರಿಂದ ಎಲ್ಲವೂ ಬ್ರಹ್ಮವೆ. ಅದರ ಜಂಬಲವನ್ನು ಬಿಟ್ಟು ಬೇರೆ ಏನೇನೂ ಇಲ್ಲ. ಆದಕಾರಣ ಜಗತ್ತು ಸುಳ್ಳು. —(ಕ ೪-೯)

ಎಲ್ಲ ವಸ್ತುಗಳೂ ಬ್ರಹ್ಮದಲ್ಲಿ ಎದ್ದು ಕಾಣುವವುಗಳೆ ಹೊರತು ಬ್ರಹ್ಮಕ್ಕಿಂತ ಬೇರೆಯಾದವುಗಳಲ್ಲವೆಂದೂ ತನ್ನ ದೇಹಕ್ಕೆ ತಾನು ಹೇಗೋ ಹಾಗೆ ಕಾಣುವೆಲ್ಲಕ್ಕೂ ತಾನು ಆತ್ಮವೆಂದೂ ಯಾವನು ತಿಳಿಯುವನೊ ಅವನು ಅಶೆಬುರುಕನಾಗುವದಿಲ್ಲ. ಬ್ರಹ್ಮಕ್ಕಿಂತ ಜಗತ್ತು ಬೇರೆಯೆಂಬುದು ಸುಳ್ಳು. —(ಈ ೬)

ಯಾವನ ತಿಳಿಗಣ್ಣಿಗೆ ಎಲ್ಲ ವಸ್ತುಗಳೂ ಬ್ರಹ್ಮವೆ ಆಗಿರುವದೊ ಅವ ನಿಗೆ ತಪ್ಪುತಿಳಿವಳಿಕೆಯೂ ಇಲ್ಲ; ದುಃಖವೂ ಇಲ್ಲ; ಹುಟ್ಟುಸಾವುಗಳೂ ಇಲ್ಲ. ಬ್ರಹ್ಮಕ್ಕಿಂತ ಜಗತ್ತು ಬೇರೆಯೆಂಬುದು ಸುಳ್ಳು. —(ಈ ೭)

ನಿಜವಾಗಿ ಬೆಳಗುತ್ತಿರುವದು ಬ್ರಹ್ಮ ಒಂದೆ. ಹೆಸರುಗಳೂ ಆಕಾರಗಳೂ ಮಾತು ಮಾತ್ರ. ಮುಂದಿರುವದೂ ಹಿಂದಿರುವದೂ ಬಲಕ್ಕಿರುವದೂ ಎಡಕ್ಕಿರುವದೂ ಮೇಲಿರುವದೂ ಕೆಳಗಿರುವದೂ--ಹೀಗೆ ಹರಡಿಕೊಂಡಿರುವ ಈ ಜಗತ್ತೆಲ್ಲ ಆ ಬ್ರಹ್ಮವೆ. ಬ್ರಹ್ಮವಲ್ಲದ್ದೆಂದು ಕಾಣುವದು ಹಗ್ಗದಲ್ಲಿ ಕಾಣುವ ಹಾವಿನಂತೆ ತಪ್ಪುತಿಳಿವಳಿಕೆ. ಆದ್ದರಿಂದ ಜಗತ್ತು ಸುಳ್ಳು.

—(ಮು. ವಾ. ರ)

ಇಂಥ ಜಗತ್ತಿನಿಂದ ಸುಖವನ್ನು ಪಡೆಯುತ್ತೇನೆಂದು ಹೊರಡುವದು ಕಾಮನ ಬಿಲ್ಲಿನ ಉಪಯೋಗದಿಂದ ಸ್ವರಾಜ್ಯವನ್ನು ಪಡೆಯುವೆನೆಂಬಂತೆ ನಾಚಿಕೆಗೇಡೇ ಸರಿ ಜಗತ್ತು ಹುಡುಗರಿಗೆ ಕತ್ತಲೆಯಲ್ಲಿ ಕಾಣುವ ದೆವ್ವ. ಬೆಳಕು ಬರುವ ತನಕ ಕಾಣುತ್ತಿರುವದು ಅದರ ಸ್ವಭಾವ. ಅದರ ಇರುವಿಕೆಯೆಲ್ಲ ತನ್ನ ಅರಿವು ತನಗಿಲ್ಲದಿರುವದೆಂಬ ಕತ್ತಲೆಯಲ್ಲಿಯೇ ಆದ್ದರಿಂದ ಜಗತ್ತು ಹುಸಿ! ಜಗತ್ತು ಹುಸಿ !!

# ೭—ನಿಜವಾದ ಆತ್ಮ

## ಆತ್ಮನನ್ನು ಈಗಲೆ ಕಾಣುವ ಅಗತ್ಯ

ತನ್ನ ಅರಿವು ತನಗಿಲ್ಲದಿರುವದೆಂಬ ಕತ್ತಲೆಯಲ್ಲಿ ಕಾಣುವ ಜಗತ್ತೆಂಬ ಸುಳ್ಳುದೆವ್ವಕ್ಕೆ ತನ್ನ ಅರಿವೆಂಬ ಬೆಳಕೇ ಉಚ್ಚಾಟನಮಂತ್ರ. ತನ್ನ ಅರಿವು ತನಗಿಲ್ಲದ ಮನುಷ್ಯನು ಯಾವನೂ ಇಲ್ಲವೆಂಬುದು ನಿಜ. ಆದರೆ ಎಲ್ಲರೂ ತಿಳಿದಿರುವ ತಮ್ಮ ಅರಿವು ಸುಳ್ಳಾದದ್ದು. ದೇಹವನ್ನೊ ಇಂದ್ರಿಯಗಳನ್ನೊ ಪ್ರಾಣವನ್ನೊ ಮನಸ್ಸನ್ನೊ ದೇಹವೆಂದು ತಿಳಿದಿರುವವರು ಬಹಳ. ಅವರಲ್ಲಿಯೂ ದೇಹವನ್ನು ತಾವೆಂದು ತಿಳಿದಿರುವವರೇ ಹೆಚ್ಚು. ಇದು ಹೇಗೆ ತಪ್ಪೆಂಬುದನ್ನು ಹಿಂದೆ ತೋರಿಸಿದ್ದಾಗಿರುವದು. ಈಗ ನಿಜವಾದ ಆತ್ಮನನ್ನು ಕುರಿತು ಈ ಪ್ರಕರಣವು ಪ್ರಸ್ತಾಪಿಸುವದು. ಸಂಸಾರವೆಂಬ ಕುತ್ತಕ್ಕೆ ಮದ್ದನ್ನು ಹೇಳುವಾಗ ತಲೇ ಹಾಕಿದ್ದ ಈ ವಿಚಾರದ ಎಲ್ಲ ಪದರಗಳನ್ನೂ ಈಗ ಇಲ್ಲಿ ಬಿಚ್ಚಿ ತೋರಿಸಲಾಗುವದು.

ತನ್ನ ನಿಜವಾದ ಆತ್ಮನನ್ನು ತಾನು ಅರಿಯದವನು ತನ್ನನ್ನು ತಾನು ಕೊಂದುಕೊಂಡ ಪಾಪಿಯಾಗುತ್ತಾನೆ. ತನಗೊಂದಾತ್ಮನಿದ್ದರೂ ಅದನ್ನು ಅರಿಯದಿರುವದೆಂಬ ಮುಸುಕನ್ನು ಗುಬರುಹಾಕಿಕೊಂಡು ಅದನ್ನು ಕಡೆಗಂಡರೆ ಅದನ್ನು ಯಾವಾಗಲೂ ಹಿಂಸೆಯಲ್ಲಿಟ್ಟಂತೆ ಅಲ್ಲದೆ ಮತ್ತೇನು! ತನ್ನ ಆತ್ಮನಿಗೆ ಇರುವ ಮುಪ್ಪಿಲ್ಲದಿರುವಿಕೆ, ಮರಣವಿಲ್ಲದಿರುವಿಕೆ-ಮುಂತಾದ ಒಳ್ಳೊಳ್ಳೆ ಲಕ್ಷಣಗಳನ್ನೆಲ್ಲ ಮುಚ್ಚಿಹಾಕುವದೆಂದರೆ ತನ್ನ ಕೊಲೆಯಲ್ಲದೆ ಮತ್ತೇನು? ಇಂಥ ಹೆಚ್ಚಿನ ಪಾಪವನ್ನು ಮಾಡಿದವರು ಈ ಲೋಕದಿಂದ ಆ ಲೋಕಕ್ಕೆ ಆ ಲೋಕದಿಂದ ಈ ಲೋಕಕ್ಕೆ ಲಾಳೀಹೊಡೆಯುವ ಶಿಕ್ಷೆಯನ್ನು ಹೊಂದಿರುವದೇನಾಶ್ಚರ್ಯ! ತಮ್ಮ ಆತ್ಮನನ್ನು ತಾವು ಅರಿಯದವರು ಯಜ್ಞ, ಯಾಗ-ಮೊದಲಾದ ಸತ್ಕರ್ಮಗಳನ್ನು ಮಾಡಿ ಅದರ ಫಲವನ್ನು ಉಣ್ಣುವದಕ್ಕಾಗಿ ದೇವತೆಗಳ ಲೋಕಕ್ಕೆ ಹೋಗಬಹುದು. ತಮ್ಮನ್ನು ತಾವು ತಿಳಿದುಕೊಂಡವರ ಯೋಗ್ಯತೆಗೆ ಹೋಲಿಸಿದರೆ ಆ ದೇವಲೋಕವೂ ಅಸುರಲೋಕವೆ. ಏಕೆಂದರೆ: ಅಲ್ಲಿಯೂ ಎಷ್ಟೋ ಕಚ್ಚಾಟಗಳುಂಟು. ಕಚ್ಚಾಡುವದು ಅಸುರರ ಸ್ವಭಾವ. ಇದರ ಮೇಲೆ ಈ ಸುತ್ತಾಟದ ಸುಳಿಗೆ ಸಿಕ್ಕಿದವರು ಒಂದೊಂದು ವೇಳೆ ಕಲ್ಲುಗಳಾಗಿಯೋ ಮರಗಳಾಗಿಯೋ ಆಗುವದೂ ಉಂಟು. ಅಮೇಲೆ ಅವರ ಹಿಂದಿನ ತಿಳಿವಳಿಕೆಗೂ ಕರ್ಮಕ್ಕೂ ತಕ್ಕ ಜನ್ಮಗಳು ಅವರಿಗೆ ಗಂಟುಬೀಳುವವು. —(ಈ ೩)

ತಮ್ಮ ಆತ್ಮನನ್ನು ತಾವು ಅರಿಯದಿರುವದೆಂಬ ಕಣ್ಣುಗತ್ತಲೆಯ ಕುರುಡರಿಗೆ ಸುಖವಿಲ್ಲದ ಲೋಕಗಳಲ್ಲಿಯೇ ಸುತ್ತುತ್ತಿರುವದು ಹಣೆಯಲ್ಲಿ ಬರೆದದ್ದೆ. ತಿಳಿಯದವರು ಸತ್ತ ಮೇಲೆ ಅಲ್ಲಿಗೆ ಹೋಗಿಯೇ ತೀರಬೇಕು. ತಿಳಿಯದವರೆಂದರೆ ಸಾಮಾನ್ಯವಾಗಿ ಪಂಡಿತರಲ್ಲದವರೆಂದರ್ಥವಲ್ಲ; ತಮ್ಮ ಆತ್ಮನನ್ನು ತಾವು ತಿಳಿಯದವರು. ಇಂಥ ಹುಟ್ಟಿಸಾಯುವ ಸ್ವಭಾವದವರಿಗೆ ಬೇರೆ ಗತಿ ಇಲ್ಲ. —(ಬೃ ೪-೪-೧೧)

ತಮ್ಮನ್ನು ತಾವು ಅರಿಯದೆ ಸಂಸಾರದ ಒದ್ದಾಟಗಳು ತುಂಬಿತುಳುಕುತ್ತಿರುವಂಥ ದೇವತೆಗಳ ಜನ್ಮವಾದರೂ ಮನುಷ್ಯರ ಜನ್ಮವಾದರೂ ಮೃಗಗಳ ಜನ್ಮವಾದರೂ ಹುಟ್ಟು, ಮುಪ್ಪು, ಬೇನೆ, ಸಾವು—ಮೊದಲಾದವುಗಳಿಗೆ ತಲೆ

ಗೊಡುವದು ಬಹು ಕಷ್ಟ. ಈ ಒದ್ದಾಟಗಳನ್ನು ಕಳೆದುಕೊಳ್ಳುವದಕ್ಕೆ ತಮ್ಮನ್ನು ತಾವು ಅರಿಯುವದೆಂಬುದೊಂದೇ ತಕ್ಕ ಮದ್ದು. ಅದರ ವ್ಯಾಪನೆಗೆ ಮನುಷ್ಯಜನ್ಮವು ಒಳ್ಳೆ ಹುಲಸು. ಆದ್ದರಿಂದ ಮನುಷ್ಯಜನ್ಮವು ಬಂದಿರುವಾಗ ಈಗಲೆ ಆ ಮದ್ದನ್ನು ಮೈಯುಣಿಸಿಕೊಳ್ಳಬೇಕು. ಮನುಷ್ಯನೊಬ್ಬನೆ ಅದಕ್ಕೆ ತಕ್ಕವನು. ಈಗಲೆ ಹೆಣಗಿದರೆ ಅವನು ಒದ್ದಾಟಗಳನ್ನೆಲ್ಲ ದಾಟಿ ನಿಜವಾದ ಸುಖಿಯಾಗುತ್ತಾನೆ. ಈಗ ಬದುಕಿರುವಾಗಲೆ ಅವನು ಅದನ್ನು ಅರಿಯದೆ ಹೋದರೆ ಅವನ ಒದ್ದಾಟಗಳಿಗೆ ಕೊನೆಯೇ ಇಲ್ಲ. ಈ ಗುಟ್ಟನ್ನು ತಿಳಿದು ಜಾಣರು ಪ್ರತಿಯೊಂದು ವಸ್ತುವಿನಲ್ಲಿಯೂ ಪ್ರಾಣಿಯಲ್ಲಿಯೂ ಹುಡುಕಿ ಹುಡುಕಿ ಎಲ್ಲವನ್ನೂ ನೂಲಿನಂತೆ ಪೋಣಿಸಿಕೊಂಡಿರುವ ಬ್ರಹ್ಮವನ್ನು ಕಣ್ಣಿಗೆ ಕಟ್ಟಿದ ಹಾಗೆ ಕಂಡು ನಾನುನನ್ನದೆಂಬ ದುರಭಿಮಾನಗಳನ್ನು ಮೂಲೆಗೆ ಮುದುರಿಟ್ಟು ಈ ಲೋಕವನ್ನು ಬಿಟ್ಟ ಮೇಲೆ ಸಾವಿಲ್ಲದ ಬ್ರಹ್ಮವಾಗುತ್ತಾರೆ. ಆದ್ದರಿಂದ ಬ್ರಹ್ಮವನ್ನು ಈಗಲೆ ಕಾಣಬೇಕು. --(ಕೇ ೨-೫)

## ಆತ್ಮನನ್ನು ಕಾಣುವ ಯೋಗ್ಯತೆ

ಆ ಬ್ರಹ್ಮವನ್ನು ನಾವು ಈಗ ಅರಿತಿಲ್ಲದಿದ್ದರೂ ಅದು ಇಲ್ಲವೆಂದು ಸಾಧಿಸುವ ಸಾಹಸವನ್ನು ಮಾಡಬಾರದು. ಬ್ರಹ್ಮವಿಲ್ಲವೆಂದು ತಿಳಿದರೆ ತಾನೂ ಇಲ್ಲದವನೇ ಆಗುತ್ತಾನೆ. ಇಲ್ಲದ ವಸ್ತುವಿಗೆ ಪುರುಷಾರ್ಥವೆಲ್ಲಿಯದು? ಅದರಂತೆ ಇವನೂ ಯಾವ ಪುರುಷಾರ್ಥವೂ ಇಲ್ಲದವನಾಗುತ್ತಾನೆ. ಹಾಗಲ್ಲದೆ ಬ್ರಹ್ಮದಲ್ಲಿ ಬೆಟ್ಟಿಟ್ಟು ತೋರಿಸುವ ಏನೊಂದು ವಿಶೇಷವೂ ಇಲ್ಲದಿದ್ದರೂ ಎಲ್ಲ ನಡೆವಳಿಕೆಗಳಿಗೂ ಅದು ಬೆಂಬಲವಾಗಿರುವದೆಂದು ಯಾವನು ತಿಳಿಯುತ್ತಾನೊ ಅವನು ನಿಜವಾಗಿ ಇರುವವನಾಗುವನೆಂದು ದೊಡ್ಡವರು ಹೇಳುತ್ತಾರೆ. ಬ್ರಹ್ಮವು ನಡೆವಳಿಕೆಯ ವಸ್ತುವಾಗಿಲ್ಲದಿರುವದೇ ಅದನ್ನು ಇಲ್ಲವೆನ್ನುವದಕ್ಕೆ ಕಾರಣವಾಗಿರುವದು. ಲೋಕದಲ್ಲಿ ಗಡಿಗೆ ಮೊದಲಾದ ಬಳಕೆಯ ವಸ್ತುಗಳು ಬರೀ ಮಾತುಮಾತ್ರವಾಗಿದ್ದರೂ ಅವುಗಳನ್ನು ಇರುವವೆಂದು ಹೇಳುವರು; ಹಾಗಲ್ಲದವುಗಳನ್ನು ಇಲ್ಲವೆನ್ನುವರು. ಈ ರೂಢಿಯ ಮೆಟ್ಟಿಲನ್ನು ದಾಟಿ ಬ್ರಹ್ಮವನ್ನು ಉಂಟೆನ್ನುವವನು ಬ್ರಹ್ಮದಂತೆ ಇರುವವ

ನೆನಿಸಿಕೊಳ್ಳುವನು. ಬ್ರಹ್ಮವಿಲ್ಲವೆಂಬುದರಿಂದಾಗುವ ಹಾನಿಯು ಇನ್ನೊಂದು ಬಗೆಯಲ್ಲಿಯೂ ಇರುವದು. ಯಾವನು ಬ್ರಹ್ಮವಿಲ್ಲವೆಂದು ತಿಳಿಯುತ್ತಾನೊ ಅವನು ವರ್ಣ, ಆಶ್ರಮ--ಮೊದಲಾದ ವ್ಯವಸ್ಥೆಗಳಲ್ಲಿ ಶ್ರದ್ಧೆ ಇಲ್ಲದವನಾಗಿ ಯಾವದೊಂದು ಸನ್ಮಾರ್ಗವೂ ಇಲ್ಲವೆಂದು ತಿಳಿಯುವವನಾಗುತ್ತಾನೆ. ಅವನನ್ನು ಜನರು ಅಸಾಧುವೆನ್ನುವರು. ಹಾಗಲ್ಲದೆ ಬ್ರಹ್ಮ ಉಂಟೆಂದು ತಿಳಿದರೆ ಅವನು ಆ ಬ್ರಹ್ಮವನ್ನು ಪಡೆಯುವದಕ್ಕೆ ದಾರಿಯಾದ ವರ್ಣ, ಆಶ್ರಮ-- ಮೊದಲಾದ ವ್ಯವಸ್ಥೆಗಳಲ್ಲಿ ಶ್ರದ್ಧೆಯುಳ್ಳವನಾಗಿ ಒಳ್ಳೆ ದಾರಿಯನ್ನು ಹಿಡಿದಿರುವವನೆನಿಸಿಕೊಳ್ಳುತ್ತಾನೆ. ಆದ್ದರಿಂದ ಬ್ರಹ್ಮ ಉಂಟೆಂದೇ ನಂಬಬೇಕು.

--(ತೈ ೨-೬)

ಬ್ರಹ್ಮವು ಬುದ್ಧಿ ಮೊದಲಾದವುಗಳ ಹಿಡಿತಕ್ಕೆ ಸಿಲುಕುತ್ತಿದ್ದರೆ ಇಗೊ ಇದೆಂದು ಹೇಳುವದಕ್ಕೆ ಬರುತ್ತಿತ್ತು. ಯಾವದಕ್ಕೂ ಸಿಲುಕದ್ದರಿಂದ ಬ್ರಹ್ಮವಿಲ್ಲವೆನ್ನಬೇಕಾಗುವದು. ಇಂದ್ರಿಯಗಳಿಗೆ ಕಾಣಬರುವವುಗಳನ್ನು ಇರುವವೆಂದೂ ಕಾಣಬರದವುಗಳನ್ನು ಇಲ್ಲವೆಂದೂ ಹೇಳುವದು ಲೋಕದಲ್ಲಿ ರೂಢಿ ಬ್ರಹ್ಮವು ಮಾತಿಗೂ ಮನಸ್ಸಿಗೂ ಕಣ್ಣಿಗೂ ಯಾವ ಇಂದ್ರಿಯಕ್ಕೂ ಸಿಕ್ಕತಕ್ಕದ್ದಲ್ಲ. ಆದ್ದರಿಂದ ಅದನ್ನು ಇಲ್ಲವೆನ್ನಬೇಕಾದರೂ ಈ ಜಗತ್ತಿಗೆ ಬುಡವಾಗಿ ಅದು ಇದ್ದೇ ಇರುವದು. ಈ ಜಗತ್ತು ಎದ್ದು ಕಾಣಿಸಿಕೊಳ್ಳುತ್ತಲೂ ಮುಳುಗಿ ಕಾಣದಂತಾಗುತ್ತಲೂ ಇರುವದಷ್ಟೆ. ಹೀಗೆ ಅದನ್ನು ಹೊರಗೆಡಹುತ್ತ ಒಳಸೆಳೆದುಕೊಳ್ಳುವಂಥದ್ದೊಂದಿರಲೇಬೇಕು. ಸ್ಥೂಲವಾದದ್ದನ್ನು ಅದರ ಸೂಕ್ಷ್ಮರೂಪದಲ್ಲಿ, ಅದನ್ನು ಅದಕ್ಕಿಂತ ಸೂಕ್ಷ್ಮವಾದದ್ದರಲ್ಲಿ-ಹೀಗೆ ಒಂದನ್ನೊಂದರಲ್ಲಿ ಅಡಗಿಸುತ್ತ ಹೋದರೆ ಇರುವದೊಂದು ಉಳಿದೇ ಉಳಿಯುತ್ತದೆ. ಜಗತ್ತಿಗೆ ಆ ಇರುವದರ ಬುಡವಿಲ್ಲದಿದ್ದರೆ ಕಾಣ್ಬವದೆಲ್ಲ ಇಲ್ಲದ್ದೆಂದೇ ನಮಗೆ ತಿಳಿಯಬರಬೇಕಾಗಿತ್ತು. ಹಾಗಾಗದೆ 'ಇದೆ, ಇದೆ,' ಎಂದೇ ತೋರಿಕೊಳ್ಳುವದರಿಂದ ಜಗತ್ತಿಗೆ ಇರುವದರ ಬುಡ ಉಂಟೆಂದು ತಿಳಿಯಬೇಕು. ವೇದದ ಹೇಳಿಕೆಗೆ ಕಿವಿಗೊಟ್ಟು ಬ್ರಹ್ಮವಿರುವದೆಂದು ನಂಬದವನಿಗೆ ಅದು ಹೇಗೆ ನಿಜವಾಗಿ ತೋರೆತೀತು? ಬ್ರಹ್ಮವಿಲ್ಲವೆನ್ನುವದು ಅಸುರರಿಗೆ ತಕ್ಕ ಮಾತು. ಬ್ರಹ್ಮ ಉಂಟೆನ್ನುವದೇ ಹಿತಕರ.

ಬ್ರಹ್ಮವು ಇದೆಯೆಂಬ ಮಾತಿಗೂ ಇಲ್ಲವೆಂಬ ಮಾತಿಗೂ ಒಳಗಾಗತಕ್ಕದ್ದಲ್ಲವಾದರೂ ಅದು ಯಾವ ಬದಲಾವಣೆಯನ್ನೂ ಹೊಂದದ್ದೆಂದೂ ಅದರಿಂದ ಹೊರಬೀಳುವ ಜಗತ್ತು ಬರೀ ಮಾತುಮಾತ್ರದ್ದೆಂದೂ ತಿಳಿಯುವಾಗಲೆ ಅವನಿಗೆ ಅವನ ಆತ್ಮದ ನಿಜವಾದ ಸ್ವರೂಪವು ಗೊತ್ತಾಗಿರುವದು. ಆತ್ಮವನ್ನು ತಿಳಿಯುವದಕ್ಕೆ ಅದೇ ದಾರಿ. ಜಗತ್ತಿನ ಸಂಬಂಧವನ್ನು ಹಿಡಿದುಕೊಂಡು ಬಿಡದವರೆಗೆ ಹೋಗಿ ನೋಡಿದರೆ ಅದು ಇರುವದೆನಿಸುವದು. ಅದನ್ನು ನಂಬಿ ಆ ಸಂಬಂಧವನ್ನು ಒಂದು ಕಡೆಗೆ ಸರಿಸಿ ನೋಡಿದರೆ ಅದು ಇದೆ, ಇಲ್ಲ-ಎಂಬ ಯಾವ ಮಾತಿಗೂ ಒಳಗಾಗದ್ದಾಗಿ ನಿಜಸ್ವರೂಪದಿಂದ ತೋರಿಕೊಳ್ಳುವದು. ಆ ನಿಜಸ್ವರೂಪವನ್ನು ಕಾಣುವದಕ್ಕಾಗಿ ಮೊದಲು ಬ್ರಹ್ಮವಿದೆಯೆಂದಿಟ್ಟುಕೊಳ್ಳಬೇಕು. (ಕ ೬-೧೨, ೧೩)

ಜಗತ್ತಿಗೊಂದು ಬುಡವಿದ್ದರೆ ಅದೇಕೆ ಕಾಣಬರುವದಿಲ್ಲವೆಂಬೊಂದು ಸಂದೇಹವೇಳುವದು. ಇದನ್ನು ಹೋಗಲಾಡಿಸುವದಕ್ಕೆ ಒಂದು ಕಥೆ ಸಹಾಯವಾಗುವದು. ಈ ಸಂಶಯವನ್ನು ಹೊಂದಿದ ಶಿಷ್ಯನನ್ನು ಕುರಿತು ಗುರು ಒಂದು ಉಪ್ಪಿನ ಹರಳನ್ನು ಗಡಿಗೆಯ ನೀರಿನಲ್ಲಿ ಹಾಕಿ ಮರುದಿನ ಬಂದು ತನ್ನನ್ನು ನೋಡೆಂದನು. ಶಿಷ್ಯನು ಅದರಂತೆ ಮಾಡಿ ಮರುದಿನ ಬಂದನು. ಆಗ ಗುರು ಹಿಂದಿನ ರಾತ್ರಿ ಉಪ್ಪಿನ ಹರಳನ್ನು ಹಾಕಿದ ನೀರುಳ್ಳ ಗಡಿಗೆಯನ್ನು ತರಹೇಳಿದನು. ಶಿಷ್ಯನು ಅದನ್ನು ತಂದದ್ದೂ ಆಯಿತು; ರಾತ್ರಿ ಅದರಲ್ಲಿ ಹಾಕಿಟ್ಟ ಉಪ್ಪಿನ ಹರಳನ್ನು ತಡಕಿ ನೋಡಿದ್ದೂ ಆಯಿತು. ಆ ಹರಳು ಕೈಗೆ ಸಿಕ್ಕಲಿಲ್ಲ. ಮೊದಲು ಹರಳಾಗಿದ್ದ ಉಪ್ಪು ಈಗ ಕರಗಿ ಕಣ್ಣಿಗೂ ಸೋಂಕಿಗೂ ಕಾಣದಿದ್ದರೂ ಅಲ್ಲಿಯೇ ಹರಡಿಕೊಂಡಿರುವದನ್ನು ಬೇರೆ ಉಪಾಯದಿಂದ ಕಾಣಲಾಗುವದೆಂದು ಹೇಳಿ ಗುರು ಆ ನೀರನ್ನು ಬೇರೆಬೇರೆ ಕಡೆಯಿಂದ ತೆಗೆದುಕೊಂಡು ಒಂದೊಂದು ಗುಟುಕನ್ನು ಕುಡಿಯಹೇಳಿದನು. ಶಿಷ್ಯನು ಹಾಗೆ ಮಾಡಿದನು. 'ಅದು ಹೇಗಿದೆ?' ಎಂದು ಗುರು ಕೇಳಿದಾಗ ಶಿಷ್ಯನು ರುಚಿಯಲ್ಲಿ ಉಪ್ಪಾಗಿರುವದೆಂದನು. ಆಮೇಲೆ ಆ ನೀರನ್ನು ಚೆಲ್ಲಿ ಬಾಯನ್ನು ತೊಳೆದುಕೊಂಡು ಬಾರೆಂದು ಗುರು ಹೇಳಿದನು. ಶಿಷ್ಯನು ಆರೀತಿ ನಡೆದನು. ಮೊದಲು ಕಣ್ಣಿಗೂ ಸೋಂಕಿಗೂ

ತಿಳಿಯಬರುತ್ತಿದ್ದ ಉಪ್ಪಿನ ಹರಳು ನೀರಿನಲ್ಲಿ ಕರಗಿ ಕಣ್ಣಿಗೂ ಸೋಂಕಿಗೂ ತಿಳಿಯಬರದ್ದಾದರೂ ನಾಲಿಗೆಗೆ ಗೊತ್ತಾಗುವಂತೆ ಜಗತ್ತಿನ ಬುಡವಾದ ಬ್ರಹ್ಮವು ಆಲದ ಬೀಜದಂತೆ ಸೂಕ್ಷ್ಮವಾಗಿರುವ ಕಾರಣದಿಂದ ಇಂದ್ರಿಯಗಳಿಗೆ ಕಾಣಬರದಿದ್ದರೂ ಗುರುವಿನ ಉಪದೇಶವನ್ನು ಹೊಂದಿ ವಿಚಾರ ಮಾಡುವವನಿಗೆ ಕಾಣಬರುವದೆಂದು ಗುರು ಆಗ ಹೇಳಿದನು. —(ಛಾಂ ೬.೧೩)

ಅದು ಸಾಮಾನ್ಯವಾಗಿ ಮನಸ್ಸಿಗೆ ಕೂಡ ನಿಲುಕದಿರುವದಕ್ಕೆ ಕಾರಣವಿದೆ. ದೊಡ್ಡದೊಡ್ಡ ನದಿಗಳ ಅಲೆಗಳನ್ನು ಹಿಂದಕ್ಕೆ ತಡೆದು ನಿಲ್ಲಿಸುವದು ಹೇಗೆ ಆಗದ ಮಾತೊ ಹಾಗೆ ಮನುಷ್ಯನ ಹಿಂದಿನ ಪಾಪಪುಣ್ಯಗಳನ್ನು ಹಿಮ್ಮೆಟ್ಟಿಸುವದು ಆಗದ ಮಾತು. ಸಮುದ್ರದ ಎಲ್ಲೆಯನ್ನು ಹೇಗೆ ತಪ್ಪಿಸುವದಾಗುವದಿಲ್ಲವೊ ಹಾಗೆ ಮನುಷ್ಯನಿಗೆ ಬರುವ ಸಾವನ್ನು ತಪ್ಪಿಸುವದಾಗುವದಿಲ್ಲ. ದನದ ಕೊರಳನ್ನು ಕಣ್ಣಿಯು ತನ್ನ ಗೂಲಿಗೆ ಬೀಳಿಸಿಕೊಂಡು ಕಟ್ಟಿರುವಂತೆ ಮನುಷ್ಯನ ಒಳ್ಳೆ ಮತ್ತು ಕೆಟ್ಟ ಕರ್ಮಗಳ ಫಲಗಳೆಂಬ ಹಗ್ಗಗಳು ಅವನನ್ನು ಬಿಗಿದಿರುವವು. ಮನುಷ್ಯನು ಸೆರೆಮನೆಯಲ್ಲಿರುವವನಂತೆ ಮತ್ತೊಬ್ಬರ ಕೈಗೊಂಬೆಯಾಗಿದ್ದಾನೆ. ಅವನು ಯಮನೆದುರಿಗಿದ್ದಂತೆ ಅನೇಕ ಭಯಗಳ ನಡುವೆ ಇರುವನು; ಹೆಂಡವನ್ನು ಕುಡಿದವನಂತೆ ವಿಷಯಸುಖದಿಂದ ಎಚ್ಚರತಪ್ಪಿದವನಾಗಿರುವನು; ಹೆಬ್ಬಾವು ಕಡಿದವನಂತೆ ಅನೇಕ ವಿಪತ್ತುಗಳಿಗೆ ತುತ್ತಾಗಿರುವನು; ಕಗ್ಗತ್ತಲೆಯಂತಿರುವ ವಿಷಯಾಭಿಲಾಷೆಯಿಂದ ಕುರುಡನಾಗಿರುವನು; ಕನಸಿನಲ್ಲಿ ಹೇಗೊ ಹಾಗೆ ಸುಳ್ಳು ನೋಟಗಳನ್ನು ನೋಡುತ್ತಿರುವನು. ಹೀಗೆ ಅವನು ತಳಮಳಿಸುತ್ತಿರುವದರಿಂದ ಅವನ ಮನಸ್ಸು ಬ್ರಹ್ಮವನ್ನು ನಿಲುಕಿಸಿಕೊಳ್ಳಲಾರದು. —(ಮೈ ೪-೨)

ಈ ಆತ್ಮವನ್ನು ತಿಳಿಯಬೇಕಾದರೆ ಎಷ್ಟೋ ವೇದಗಳನ್ನೂ ಶಾಸ್ತ್ರಗಳನ್ನೂ ಓದಿ ತಿಳಿಯಹೇಳಬಲ್ಲವನಾಗಬೇಕಾದೀತೆಂದು ತೋರಬಹುದು. ಆತ್ಮವು ಅಂಥವರ ನಾಲಿಗೆಯ ಬಲಿಗೆ ಸಿಕ್ಕತಕ್ಕದ್ದಲ್ಲ; ಅನೇಕ ಗ್ರಂಥಗಳನ್ನು ಓದಿ ನೆನಸಿಟ್ಟುಕೊಳ್ಳುವ ಶಕ್ತಿಗೂ ಅದು ಒಳಗಾಗತಕ್ಕದ್ದಲ್ಲ; ಅನೇಕರಿಂದ ಅನೇಕ ಬಗೆಯಾಗಿ ಕೇಳಿರುವವರಿಗೂ ದಕ್ಕತಕ್ಕದ್ದಲ್ಲ; ಆತ್ಮವಿಚಾರಕ್ಕೇ ತಮ್ಮ ಆಯುಸ್ಸನ್ನು ಧಾರೆಯೆರೆಯುವದರಿಂದುಂಟಾಗುವ ಹುರು

ಪಿಲ್ಲದವರಿಗೆ ಇದು ಒಲಿಯತಕ್ಕದ್ದಲ್ಲ; ಮೂರು ದಿನದ ಬಾಳಿನ ಮಕ್ಕಳು, ಧನಕರುಗಳು-ಮೊದಲಾದವುಗಳ ಮೇಲಿನ ಅತಿಪ್ರೀತಿಯಿಂದ ನಡುನಡುವೆ ಹಾರಿಹೋಗುವವರ ಬಳಿಗೆ ಇದು ಸುಳಿಯತಕ್ಕದ್ದಲ್ಲ; ಹೊರಗಣ ವಿಷಯಗಳ ಸೋಂಕನ್ನು ಕೊಡವಿಕೊಳ್ಳದೆ ಇರುವವರ ತಿಳಿವಳಿಕೆಯ ನಟನೆಗೆ ಇದು ಮರುಳಾಗತಕ್ಕದ್ದಲ್ಲ. ಈ ಉಪಾಯಗಳೆಲ್ಲ ಬೇಡವೆಂದಲ್ಲ. ಇವೂ ಇರಬೇಕು. ಬರೀ ಇವಕ್ಕೆ ಸಾಧ್ಯವಾಗುವದಿಲ್ಲವೆಂದರ್ಥ. ಹಾಗಾದರಿನ್ನೇನು ಬೇಕು? ತನ್ನ ಆತ್ಮನ ಅರಿವು ತನಗಾಗಬೇಕೆಂಬ ಇಚ್ಛೆಯಿಂದ ಕೂಡಿದ ಬೇಡಿಕೆಯು ಇವೆಲ್ಲವನ್ನೂ ಮೀರಿಸಿರಬೇಕು. ಬಲವಾದ ಇಚ್ಛೆಯನ್ನು ಚೆನ್ನಾಗಿ ಮೈಗೂಡಿಸಿಕೊಂಡು ಆತ್ಮನನ್ನು ಸೆರಗೊಡ್ಡಿ ಬೇಡುವ ವಿವೇಕಿಯು ಮೇಲೆ ಹೇಳಿದ ಉಪಾಯಗಳನ್ನು ಎಡೆಬಿಡದೆ ನಡೆಸಬೇಕು. ಆಗ ಆ ಆತ್ಮವು ಆ ಸಾಧಕನ ಕಣ್ಣಿಗೆ ಅಡ್ಡವಾಗಿ ತನ್ನನ್ನು ಮರೆಮಾಡುವ ಅಜ್ಞಾನವೆಂಬ ಪರದೆಯನ್ನು ಹಾರಹೊಡೆದು ತನ್ನ ಉತ್ಕೃಷ್ಟವಾದ ಸ್ವರೂಪವನ್ನು ತಾನು ತೋರಿಸಿಕೊಳ್ಳುವದು. —(ಮುಂ ೩-೨-೩,೪)

ಕಂಡ ಮತ್ತು ಕಾಣದ ಹೊರಗಣ ವಸ್ತುಗಳ ಮೇಲೆ ಬುದ್ಧಿಯನ್ನು ಹರಿಯಗೊಡದೆ ಮನಸ್ಸನ್ನು ತಿಳಿಯಾಗಿಟ್ಟುಕೊಂಡಿರುವವರು ಮಾತ್ರ ತಮ್ಮ ಆತ್ಮವು ಕರ್ಮಗಳಿಂದಾಗುವ ಹೆಚ್ಚುಕುಂದುಗಳಿಲ್ಲದ್ದೆಂದು ತಿಳಿಯುವರು. —(ಕ ೨-೨೦)

ಶ್ರುತಿಗಳೂ ಸ್ಮೃತಿಗಳೂ ಮಾಡಬಾರದ್ದೆಂದು ಹೇಳಿರುವ ಕೆಟ್ಟ ಕೆಲಸಗಳನ್ನು ಬಿಡದೆ ಇರುವವರೂ ಇಂದ್ರಿಯಗಳ ಚಾಪಲ್ಯವನ್ನು ತಡೆದಿಟ್ಟುಕೊಳ್ಳಲಾರದವರೂ ಹರಿದಾಡುವ ಮನಸ್ಸಿನವರೂ ಒಂದು ಪಕ್ಷ ಮನಸ್ಸನ್ನೊಂದು ಕಡೆ ಇಟ್ಟುಕೊಂಡರೂ ಹಾಗೆ ಮಾಡಿದ್ದರ ಫಲಕ್ಕೆ ಬಾಯಿನೀರು ಸುರಿಸುವವರೂ ಆತ್ಮನ ವಿಷಯವನ್ನರಿತರೂ ಆ ಅರಿವು ಅವರದಾಗುವದಿಲ್ಲ. ಅವರು ಇನ್ನೊಬ್ಬರ ಅಭಿಪ್ರಾಯವನ್ನು ತಮ್ಮ ಬಾಯಲ್ಲಿ ಆಡುವವರು ಮಾತ್ರ ಆಗುತ್ತಾರೆ. —(ಕ ೨-೨೪; ಭ ೧೫-೧೧)

ಈ ಆತ್ಮನು ಕಣ್ಣಿಗೆ ನೋಡುವ ಶಕ್ತಿಯನ್ನೂ ಕಿವಿಗೆ ಕೇಳುವ ಶಕ್ತಿಯನ್ನೂ ಕೊಡುತ್ತ ಎಲ್ಲ ಪ್ರಾಣಿಗಳೊಳಗೂ ಇದ್ದರೂ ಮಾಯೆಯಿಂದ

ಮರೆಯಾಗಿ ತಾನು ಆತ್ಮವೆಂದು ಕಾಣಿಸಿಕೊಳ್ಳುತ್ತಿಲ್ಲ. ಹೀಗೆ ಇದು ಯಾರಿಗೂ ಕಾಣಿಸಿಕೊಳ್ಳುವದೇ ಇಲ್ಲವೆಂದಿಲ್ಲ. ಬಹು ಸೂಕ್ಷ್ಮವಾಗಿರುವ ಇದು ಶುದ್ಧಿಗೊಳಿಸದಿರುವ ಬುದ್ಧಿಯವರಿಗೆ ಕಾಣಿಸಿಕೊಳ್ಳುವದಿಲ್ಲ; ಬುದ್ಧಿಯ ಬಯಕೆ, ಸಿಟ್ಟು-ಮೊದಲಾದ ಹೊಲಸನ್ನೆಲ್ಲ ಕಳೆದುಕೊಂಡು ಒಳ್ಳೆ ಮೊನೆಯಾಗಿರುವ ಹಾಗೆ ಸಾಣೆ ಹಿಡಿದಂತೆ ಅದನ್ನು ಸೂಕ್ಷ್ಮವಾದ ವಿಚಾರಗಳನ್ನು ತಿಳಿದುಕೊಳ್ಳುವದಕ್ಕೆ ತಕ್ಕದ್ದನ್ನಾಗಿ ಮಾಡಿಕೊಂಡವರಿಗೆ ಇದು ಕಾಣಬರುವದು. —(ಕ ೩-೧೨)

## ಆತ್ಮಜ್ಞಾನದ ಹೆಚ್ಚುಗಾರಿಕೆ

ಆತ್ಮನ ಅರಿವಾಗಬೇಕಾದರೆ ಅದರ ಬಯಕೆ ಹೆಚ್ಚಬೇಕು. ಆ ಬಯಕೆಗೆ ದಾರಿಗೊಡದಿರುವ ಬೇರೆ ಬಯಕೆಯೊಂದಿದೆ. ಲೋಕದಲ್ಲಿ ಹಿತಕರವಾದದ್ದೇ ಬೇರೆ; ಸುಖಕರವಾದದ್ದೇ ಬೇರೆ. ಅವೆರಡರಿಂದಾಗುವ ಪ್ರಯೋಜನಗಳೂ ಬೇರೆಬೇರೆ. ಯಾರು ಯಾವ ವರ್ಣಾಶ್ರಮಕರ್ಮವನ್ನು ಮಾಡಿದರೂ ಅವೆರಡರಲ್ಲೊಂದರ ಬಯಕೆ ಇರುತ್ತದೆ. ಬರಿ ಹಿತವಾದದ್ದರ ಸೆಳೆತದಿಂದ ಕೊಸರಿಕೊಂಡು ಸುಖಕರವಾದದ್ದನ್ನು ಬಯಸುವದು ಜಾಣತನ. ಹಿತಕರವಾದದ್ದೆಂಬುದು ಈಗ ಮಾತ್ರ ಮನಸ್ಸನ್ನು ಉಲ್ಲಾಸಗೊಳಿಸಿ ಕೈಬಿಡುತ್ತದೆ. ಸುಖಕರವಾದದ್ದೆಂಬುದು ಈಗ ಒಂದು ಪಕ್ಷ ಹಿತವಾಗಿ ಕಾಣದಿದ್ದರೂ ಮುಂದೆ ಸುಖವನ್ನು ಸೂರೆಗೊಡುತ್ತದೆ. ಈ ಮುಂದಿನ ದೃಷ್ಟಿ ಇಲ್ಲದೆ ಈಗಿನ ಹಿತವನ್ನು ಮಾತ್ರ ಆರಿಸಿಕೊಂಡ ದಡ್ಡರು ತಮಗೆ ನಿಜವಾಗಿ ಆಗುವ ಲಾಭವನ್ನು ಕಳೆದುಕೊಂಡವರಾಗುತ್ತಾರೆ. ಮನುಷ್ಯನಿಗೆ ಇವೆರಡರಲ್ಲಿ ಯಾವದನ್ನು ಬೇಕಾದರೂ ಆರಿಸಿಕೊಳ್ಳುವ ಸ್ವಾತಂತ್ರ್ಯವಿದ್ದರೂ ಸಾಮಾನ್ಯವಾಗಿ ದಡ್ಡನು ವಿಚಾರವಿಲ್ಲದೆ ದೇಹೇಂದ್ರಿಯಗಳಿಗೆ ಹಿತವೆನಿಸುವ ಹಗುರವಾದ ಮಕ್ಕಳು, ದನಕರು-ಮೊದಲಾದವುಗಳಿಗೆ ಬೇಗ ಮರುಳಾಗಿಬಿಡುವನು. ಜಾಣನು ಅವೆರಡನ್ನೂ ತನ್ನ ಬುದ್ಧಿಯಲ್ಲಿ ತೂಕಕ್ಕೆ ಹಾಕಿ ನೋಡಿ ಭಾರವಾದದ್ದಾಗಿ ಕಂಡ ಸುಖಕರವಾದದ್ದನ್ನೆ ಆರಿಸಿಕೊಳ್ಳುತ್ತಾನೆ. —(ಕ ೨-೧,೨)

ಹಿತಕರವಾದವುಗಳಿಗೂ ಸುಖಕರವಾದವುಗಳಿಗೂ ಬಹು ದೂರ. ಇವು ಒಂದಕ್ಕೊಂದು ಪೂರ್ವಪಶ್ಚಿಮಗಳಿದ್ದ ಹಾಗೆ. ಒಂದರ ದಾರಿ ಅತ್ತ; ಒಂದರ ದಾರಿ ಇತ್ತ. ಒಂದು ದಡ್ಡತನದ್ದು; ಇನ್ನೊಂದು ಜಾಣತನದ್ದು. ಒಂದು ಸಂಸಾರದಲ್ಲಿ ಸುತ್ತಿಸುತ್ತದೆ; ಇನ್ನೊಂದು ಸುಖಸಮುದ್ರದಲ್ಲಿ ಹಾಯಾಗಿ ಈಸಾಡಿಸುತ್ತದೆ. ಹಿತಕರವಾದವುಗಳನ್ನು ಕಡೆಗಂಡ ಮೇಲೆ ಸುಖಕರವಾದದ್ದರ ಮಾತು. ಸಂಸಾರದಲ್ಲಿ ಸುತ್ತುತ್ತಿರುವವರು ಕಗ್ಗತ್ತಲೆಯಲ್ಲಿ ಸುಗ್ಗುತ್ತಿರುವವರಂತೆ. ಮಕ್ಕಳುಗಳು, ದನಕರುಗಳು-ಮೊದಲಾದ ಅನೇಕ ಬಯಕೆಗಳೆಂಬ ಬಳ್ಳಿಗಳು ಅವರ ಕಾಲುಗಳಿಗೆ ತೊಡರಿಕೊಂಡಿರುವವು. ಹೀಗಿದ್ದರೂ ಅವರು ತಾವೇ ಜಾಣರಿಗೆಲ್ಲ ಹಿರಿಯರೆಂದು ತಲೆತಿರುಗಿದವರಾಗಿರುವರು. ತಮಗೆ ತಿಳಿಯದ ಶಾಸ್ತ್ರವೇ ಇಲ್ಲವೆಂದು ಅವರ ಎದೆಯುಬ್ಬಿಕೊಂಡೇ ಇರುವದು. ಅವರು ಮುಪ್ಪು, ಬೇನೆ, ಸಾವು-ಮೊದಲಾದ ಬಹುಬಗೆಯ ಕುಟಕುಹಾದಿಗಳಲ್ಲಿ ಕುರುಡನ ಬೆನ್ನುಹಿಡಿದು ಹೋಗುವ ಕುರುಡರ ತಂಡದಂತೆ ಒಬ್ಬರನ್ನು ನೋಡಿಕೊಂಡು ಒಬ್ಬರು ವಿಚಾರವಿಲ್ಲದೆ ಹೋಗುತ್ತಿರುವರು. —(ಕ ೨-೪,೫)

ಸತ್ತ ಮೇಲೆ ತನ್ನ ಗತಿಯೇನೆಂಬುದರ ವಿಚಾರವು ದಡ್ಡರಿಗೂ ಮಕ್ಕಳ ಮೇಲೆಯೂ ದನಕರುಗಳ ಮೇಲೆಯೂ ಅತಿಪ್ರೀತಿ ಇರುವವರಿಗೂ ಹಣದ ಮೇಲಿನ ಮೋಹದಿಂದ ಕಣ್ಣುಗತ್ತಲೆ ಹಿಡಿದಿರುವವರಿಗೂ ಹೊಳೆಯುವದಿಲ್ಲ. ಈ ಹೆಂಗಸರು, ಈ ಊಟ-ಮೊದಲಾದವುಗಳಿರುವ ಈ ಲೋಕವನ್ನು ಬಿಟ್ಟು ಕಣ್ಣಿಗೆ ಕಾಣದ ಪರಲೋಕವಿನ್ನೆಲ್ಲಿಯದೆಂದು ಹಲುಬುವವರು ಮತ್ತೆ ಮತ್ತೆ ಯಮನ ಕೈಗೆ ಸಿಕ್ಕುತ್ತ ಹುಟ್ಟಿಸಾಯುತ್ತ ಇರಬೇಕಾಗುವದು. ಲೋಕದಲ್ಲಿ ಜನರ ಹಣೆಯ ಬರೆಹವೆಲ್ಲ ಇದೇ ಆಗಿರುವದು. ಎಲ್ಲಿಯೋ ಸಾವಿರಕ್ಕೊಬ್ಬನು ಆತ್ಮವಿಚಾರವನ್ನರಿಯುವನು. ಎಷ್ಟೋ ಜನಕ್ಕೆ ಅದು ಕಿವಿಗೆ ಬೀಳುವದು ಕೂಡ ಇಲ್ಲ. ಕಿವಿಗೆ ಬಿದ್ದರೂ ಎಷ್ಟೋ ಜನರ ಬುದ್ಧಿಯಲ್ಲಿ ಅದು ಇಳಿಯುವದಿಲ್ಲ. ಇದನ್ನು ತಿಳಿಯಹೇಳುವವನೂ ಎಲ್ಲಿಯೋ ಒಬ್ಬನಿರುವನು. ಆ ತಿಳಿಯಹೇಳಿದ್ದನ್ನು ತಿಳಿದುಕೊಳ್ಳುವವನೂ ಎಲ್ಲಿಯೋ ಒಬ್ಬನಿರುವನು. ತಿಳಿವಿನ ಬಲವುಳ್ಳ ಗುರುವಿನ

ಬಾಯಿಂದ ಕೇಳಿ ತಿಳಿದುಕೊಳ್ಳುವವನು ಎಲ್ಲಿಯಾದರೂ ಇದ್ದಾನೋ ಇಲ್ಲವೊ! ಸಾಮಾನ್ಯವಾದ ಲೌಕಿಕಬುದ್ಧಿಯವರು ಇದನ್ನು ತಿಳಿಯಹೇಳಲಾಗುವದಿಲ್ಲ. ಮಹಾಮಹಾ ಬುದ್ಧಿಶಾಲಿಗಳೆನಿಸಿಕೊಂಡಿರುವವರಲ್ಲಿ ಆತ್ಮನಿರುವನೆಂದೊಬ್ಬರು, ಇಲ್ಲವೆಂದೊಬ್ಬರು, ಅವನು ಏನನ್ನಾದರೂ ಮಾಡುವ ಸ್ವಭಾವದವನೆಂದೊಬ್ಬರು, ಏನನ್ನೂ ಮಾಡದವನೆಂದೊಬ್ಬರು, ಅವನು ಶುದ್ಧನೆಂದೊಬ್ಬರು, ಅಶುದ್ಧನೆಂದೊಬ್ಬರು-ಹೀಗೆಲ್ಲ ತಲೆಗೊಂದು ಮಾತಾಡುವರು. ಅದನ್ನು ತಿಳಿಯಲಾಗುವ ದಾರಿಯೇ ಬೇರೆ. ಯಾವ ಬ್ರಹ್ಮದ ವಿಷಯವನ್ನು ಕುರಿತು ತಾನು ಹೇಳಹೋಗುವನೋ ಆ ಬ್ರಹ್ಮವೆ ತಾನಾಗಿರುವ ಗುರು ಹೇಳಿದರೆ ಆಗ ಅದು ತಿಳಿಯದೆ ಹೋಗುವದಕ್ಕೆ ಕಾರಣವೇ ಇಲ್ಲ. ಆತ್ಮವಿಚಾರವು ಬಹು ಸೂಕ್ಷ್ಮವಾದದ್ದು. ಅದು ಬರೀ ತನ್ನ ಬುದ್ಧಿಯಿಂದ ಊಹಿಸುವದಕ್ಕೆ ಆಗತಕ್ಕದ್ದಲ್ಲ. ಒಂದು ಬುದ್ಧಿಗೆ ಒಂದು ಊಹೆಯಾದರೆ ಇನ್ನೊಂದು ಬುದ್ಧಿಯು ಇನ್ನೊಂದನ್ನು ಊಹಿಸಬಹುದು. ಇದಕ್ಕೆ ಕೊನೆಯೇ ಇರುವದಿಲ್ಲ. ಬಲ್ಲ ಗುರುವಿನ ಮುಖದಿಂದ ತಿಳಿದ ತಿಳಿವು ಬುದ್ಧಿಯ ಯಾವ ಊಹೆಯಿಂದಲೂ ಹಾರಿಹೋಗುವದಿಲ್ಲ. ಬುದ್ಧಿಯಿಂದ ಊಹಿಸುವವರು ಶಾಸ್ತ್ರದ ನೆರವಿಲ್ಲದೆ ಏನೋ ಒಂದನ್ನು ಹುಟ್ಟುಗಟ್ಟುವರು. ಆದ್ದರಿಂದ ಬಲ್ಲ ಗುರು ಹೇಳಿದರೇ ಅದು ನಿಲ್ಲುವದು. —(ಕ ೨-೭..೯)

ಈ ಆತ್ಮವಿಷಯವನ್ನು ಎಲ್ಲ ವೇದಗಳೂ ಒಂದೇ ರೀತಿಯಲ್ಲಿ ಹೇಳುವವು. ಎಲ್ಲ ಬಗೆಯ ತಪಸ್ಸುಗಳಿಗೂ ಅದೇ ಕೊನೆಯ ಫಲ. ಗುರುಗಳ ಬಳಿಯಲ್ಲಿ ನಿಯಮದಿಂದ ಮಾಡುವ ವಾಸ ಮೊದಲಾದದ್ದೆಲ್ಲ ಅದಕ್ಕಾಗಿಯೆ. ಇದನ್ನು ತಿಳಿದವರಿಗೆ ಬಯಸಿದ್ದೆಲ್ಲ ದೊರೆಯುತ್ತದೆ. ಇದು ಬಹು ಹೆಚ್ಚಿನದು. ಇದನ್ನು ತಿಳಿದರೆ ಬ್ರಹ್ಮಲೋಕಕ್ಕೆ ಹೋಗಿ ಅಲ್ಲ ಪೂಜೆಯನ್ನು ಹೊಂದಬಹುದು. —(ಕ ೨-೧೫..೧೭)

ಆತ್ಮವೆಂಬುದು ಕಣ್ಣಿಗೆ ಕಣ್ಣು, ವಾಕ್ಕಿಗೆ ವಾಕ್ಕು, ಮನಸ್ಸಿಗೆ ಮನಸ್ಸು. ಹೀಗಿರುವಾಗ ಕಣ್ಣು, ವಾಕ್ಕು, ಮನಸ್ಸು-ಇವು ಅದರ ಬಳಿಗೆ ಹೇಗೆ ಹೋದಾವು? ತನ್ನ ಬಳಿಗೆ ತಾನು ಹೋಗುವದೆಂಬುದು ಹೇಗಾದೀತು? ಕಣ್ಣು ತನ್ನ ಹಿಂದೆ ತನಗೆ ಬೆಂಬಲವಾಗಿರುವದನ್ನು ಹೇಗೆ

ಕಂಡೀತು? ವಾಗಿಂದ್ರಿಯದಿಂದ ಒಂದು ಮಾತು ಹೊರಟು ಆ ಮಾತಿನ ಅರ್ಥವನ್ನು ಅದು ಬೆಳಗಿದಾಗ ವಾಗಿಂದ್ರಿಯವು ಒಂದರ್ಥದ ಬಳಿಗೆ ಹೋದಂತಾಗುತ್ತದೆ. ಆ ಮಾತಿಗೂ ಆ ಮಾತನ್ನು ಹೊರಡಿಸುವ ವಾಗಿಂದ್ರಿಯಕ್ಕೂ ಬ್ರಹ್ಮವು ಆತ್ಮವಾಗಿರುವದು. ಆದ್ದರಿಂದ ವಾಕ್ಕು ಬ್ರಹ್ಮನ ಬಳಿಗೆ ಹೋಗಲಾರದು. ಬೆಂಕಿಯು ಸುಡತಕ್ಕದ್ದೂ ಬೆಳಗತಕ್ಕದ್ದೂ ಆದರೂ ತನ್ನನ್ನು ತಾನು ಹೇಗೆ ಬೆಳಗುವದೂ ಇಲ್ಲವೋ ಸುಡುವದೂ ಇಲ್ಲವೋ ಹಾಗೆ ಮನಸ್ಸು ಇನ್ನೊಂದನ್ನು ಯೋಚನೆಗೆ ತೆಗೆದುಕೊಂಡು ಗೊತ್ತುಮಾಡೀತೇ ಹೊರತು ತನ್ನ ಆತ್ಮವಾದ ಬ್ರಹ್ಮವನ್ನೇ ಯೋಚನೆಗೆ ತೆಗೆದುಕೊಂಡು ಗೊತ್ತುಮಾಡಲಾರದು. ಯಾವದಾದರೊಂದು ವಸ್ತುವಿನ ಅರಿವಾಗಬೇಕಾದರೆ ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ಆಗಬೇಕು. ಬ್ರಹ್ಮವು ಅವೆರಡಕ್ಕೂ ಸಿಲುಕುವದಿಲ್ಲವಾದ್ದರಿಂದ ಬ್ರಹ್ಮವೆಂಬುದಿಂಥದ್ದೆಂದು ತಿಳಿಯಲಾಗುವದಿಲ್ಲವೆಂದು ಸ್ಪಷ್ಟವಾಗುವದು. ಆದ್ದರಿಂದಲೆ ಇದನ್ನು ಇತರರಿಗೆ ಯಾವ ರೀತಿಯಿಂದ ಮನಗಾಣಿಸಬೇಕೆಂಬುದೂ ಬಗೆಹರಿಯುವದಿಲ್ಲ. ಹೀಗಿದ್ದರೂ ಕೂಡ ಶಾಸ್ತ್ರವು ಒಂದು ದಾರಿಯನ್ನು ಹೇಳಿಕೊಟ್ಟದೆ. ಅದೇನೆಂದರೆ: ಅದು ತಿಳಿದದ್ದಕ್ಕಿಂತಲೂ ಬೇರೆ ಮತ್ತು ತಿಳಿಯದದ್ದಕ್ಕಿಂತಲೂ ಮೇಲಿನದು ಎಂಬುದು. ಲೋಕದಲ್ಲಿ ತಿಳಿದದ್ದೆಂದರೆ ಬದಲಾವಣೆಯನ್ನು ಹೊಂದಿ ಆಗಿರತಕ್ಕ ಎಲ್ಲವೂ. ಬ್ರಹ್ಮವು ಅದಕ್ಕಿಂತ ಬೇರೆ. ತಿಳಿಯದ್ದೆಂದರೆ ಬದಲಾವಣೆಯನ್ನು ಹೊಂದಿ ಆಗಿರತಕ್ಕ ಎಲ್ಲವುಗಳ ಕಾರಣದ ಸ್ವರೂಪ. ಬ್ರಹ್ಮವು ಅದಕ್ಕಿಂತ ಬೇರೆ. ತಿಳಿದದ್ದೆನಿಸಿಕೊಳ್ಳುವವುಗಳೆಲ್ಲ ಕ್ಷುದ್ರವಾದವುಗಳು, ನಾಶವಾಗತಕ್ಕವುಗಳು ಮತ್ತು ದುಃಖಕರವಾದವುಗಳು. ಆದ್ದರಿಂದ ಅವುಗಳೆಲ್ಲ ತೆಗೆದುಹಾಕುವದಕ್ಕೆ ತಕ್ಕವುಗಳು. ಬ್ರಹ್ಮವು ತಿಳಿದದ್ದಕ್ಕಿಂತ ಬೇರೆಯಾದ್ದರಿಂದ ತೆಗೆದುಹಾಕುವದಕ್ಕೆ ತಕ್ಕದ್ದಲ್ಲ. ಅದು ತಿಳಿಯದ್ದಕ್ಕಿಂತ, ಎಂದರೆ ಕಾರಣದ ಸ್ವರೂಪಕ್ಕಿಂತ, ಬೇರೆಯಾದ್ದರಿಂದ ತೆಗೆದುಕೊಳ್ಳುವದಕ್ಕೆ ತಕ್ಕದ್ದಲ್ಲ. ಕಾರಣವಾಗಿದ್ದರೆ ಕಾರ್ಯಕ್ಕೆಂದು ತೆಗೆದುಕೊಳ್ಳಬಹುದಾಗಿತ್ತು. ಹಾಗಿಲ್ಲ. ಯಾವದು ಇಂದ್ರಿಯಗಳಿಂದ ಬೆಳಗಿಸಿ ಕೊಳ್ಳತಕ್ಕದ್ದಲ್ಲವೋ ಯಾವದು ಇಂದ್ರಿಯಗಳನ್ನು ಬೆಳಗುವದೋ ಅದು ಬ್ರಹ್ಮ. —(ಕೇ ೧-೪,೫)

## ಆತ್ಮನನ್ನು ತೋರಿಸುವ ಕೈಮರಗಳು

(೧) ಗಂಡನನ್ನು ಪ್ರೀತಿಸುವದು ಗಂಡನ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಹೆಂಡತಿಯನ್ನು ಪ್ರೀತಿಸುವದು ಹೆಂಡತಿಯ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಮಕ್ಕಳನ್ನು ಪ್ರೀತಿಸುವದು ಮಕ್ಕಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಹಣವನ್ನು ಪ್ರೀತಿಸುವದು ಹಣದ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ದನಗಳನ್ನು ಪ್ರೀತಿಸುವದು ದನಗಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಬ್ರಾಹ್ಮಣಜಾತಿಯನ್ನು ಪ್ರೀತಿಸುವದು ಬ್ರಾಹ್ಮಣ ಜಾತಿಯ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಕ್ಷತ್ರಿಯ ಜಾತಿಯನ್ನು ಪ್ರೀತಿಸುವದು ಕ್ಷತ್ರಿಯಜಾತಿಯ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಲೋಕಗಳನ್ನು ಪ್ರೀತಿಸುವದು ಲೋಕಗಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ದೇವತೆಗಳನ್ನು ಪ್ರೀತಿಸುವದು ದೇವತೆಗಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ವೇದಗಳನ್ನು ಪ್ರೀತಿಸುವದು ವೇದಗಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಪ್ರಾಣಿಗಳನ್ನು ಪ್ರೀತಿಸುವದು ಪ್ರಾಣಿಗಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಎಲ್ಲವನ್ನೂ ಪ್ರೀತಿಸುವದು ಎಲ್ಲವುಗಳ ಬಯಕೆ ತೀರಲೆಂದಲ್ಲ; ತನ್ನ ಬಯಕೆ ತೀರಲೆಂದು. ಹೀಗೆ ಎಲ್ಲರಿಗೂ ತನ್ನ ತನ್ನ ಸ್ವರೂಪವು ಅತಿಪ್ರಿಯವಾಗಿರುವದು. ಆ ತನ್ನ ಸ್ವರೂಪವನ್ನು ಕುರಿತು ಗುರುಗಳಿಂದಲೂ ವೇದಗಳಿಂದಲೂ ಕೇಳಿ ತಿಳಿದುಕೊಳ್ಳಬೇಕು. ಆ ತಿಳಿದದ್ದನ್ನು ತನ್ನ ಮನಸ್ಸಿನಲ್ಲಿಯೇ ಯುಕ್ತಿಯಿಂದ ಗುಣಾಕಾರ ಹಾಕಬೇಕು. ಆಮೇಲೆ ಇದು ಹೀಗೆಯೇ ಸರಿಯೆಂದು ಗೊತ್ತುಮಾಡಿಕೊಳ್ಳಬೇಕು. ತನ್ನನ್ನು ತಾನು ತಿಳಿದರೆ ಈಗ ತನಗಿಂತ ಬೇರೆಯೆನಿಸಿಕೊಂಡಿರುವ ಎಲ್ಲವನ್ನೂ ತಿಳಿದಂತಾಯಿತು. ಏಕೆಂದರೆ: ತನ್ನನ್ನು ಬಿಟ್ಟು ಬೇರೆಯೆಂಬುದಿಲ್ಲವೇ ಇಲ್ಲ. ತಾನು ಹುಟ್ಟುಗಟ್ಟಿದರೆ ಜಗತ್ತೇ ಹೊರತು ತಾನು ಸುಮ್ಮನಿದ್ದರೆ ಜಗತ್ತೇ ಇಲ್ಲ. ಆದ್ದರಿಂದ ತನ್ನನ್ನು ತಿಳಿದರೆ ಸಾಕು. —(ಬೃ ೪-೫-೬)

(೨) ನಮ್ಮ ಶರೀರದಲ್ಲಿ ಇಂದ್ರಿಯಗಳಿರುವದಂತು ಎಲ್ಲರಿಗೂ ಗೊತ್ತಿಷ್ಟೆ. ಯಾವ ವಿಷಯಗಳನ್ನು ಬೆಳಗುವದಕ್ಕಾಗಿ ಇವು ಹುಟ್ಟಿರುವವೋ ಆ ಹೊರಗಣ ವಿಷಯಗಳು ಇಂದ್ರಿಯಗಳಿಗಿಂತ ಹೆಚ್ಚಿನ ಯೋಗ್ಯತೆಯುಳ್ಳವುಗಳಾಗಿ ಸೂಕ್ಷ್ಮಗಳಾಗಿ ಒಳಗಿನವುಗಳೆನಿಸುವವು. ಆ ವಿಷಯಗಳಿಗಿಂತಲೂ ಅವುಗಳನ್ನು ಯೋಚಿಸುವ ಮನಸ್ಸು, ಎಂದರೆ ಮನಸ್ಸಾಗಿರುವ ಭೂತಸೂಕ್ಷ್ಮಗಳು, ಸೂಕ್ಷ್ಮತರ ಮತ್ತು ಒಳಗಿನದು. ಯೋಚಿಸುವ ಮನಸ್ಸಿಗಿಂತಲೂ ಗೊತ್ತುಮಾಡುವ ಬುದ್ಧಿಯು, ಎಂದರೆ ಬುದ್ಧಿಯಾಗಿರುವ ಭೂತಸೂಕ್ಷ್ಮಗಳು, ಸೂಕ್ಷ್ಮತಮ ಮತ್ತು ಒಳಗಿನದು. ಆ ಒಂದು ಬುದ್ಧಿಗಿಂತಲೂ ಎಲ್ಲ ಬುದ್ಧಿಗಳ ಆತ್ಮವಾಗಿ ತಿಳಿಯು ಬಂದೂ ತಿಳಿಯಬರದ ಹಾಗಿರುವವನಾಗಿಯೂ ಜಗದ್ಬೀಜದಿಂದ ಮೊದಲು ಹೊರಬಿದ್ದದ್ದಾಗಿಯೂ ಇರುವ ಹಿರಣ್ಯಗರ್ಭನೆಂಬ ಮಹತ್ತತ್ತ್ವವು ಹೆಚ್ಚಿನದು. ಆ ಮಹತ್ತತ್ತ್ವಕ್ಕಿಂತಲೂ ಜಗತ್ತಿನ ಎಲ್ಲ ಹೆಸರುಗಳೂ ಆಕಾರಗಳೂ ಕರಗಿ ಗಡ್ಡೆಕಟ್ಟಿ ಬೀಜರೂಪವಾಗಿರುವ ಅವ್ಯಕ್ತವೆಂಬ ತತ್ತ್ವವು ಹೆಚ್ಚಿನದು. ಈ ಅವ್ಯಕ್ತವೆಂಬ ತತ್ತ್ವವು ಆಲದ ಬೀಜದ ಚೂರಿನಲ್ಲಿ ಆಲದ ಮರದ ಶಕ್ತಿಯು ಹೇಗೋ ಹಾಗೆ ಪರಮಾತ್ಮನಲ್ಲಿ ಹಾಸುಹೊಕ್ಕಾಗಿ ಹರಡಿಕೊಂಡಿರುವದು. ಈ ಅವ್ಯಕ್ತಕ್ಕಿಂತಲೂ ಎಲ್ಲಕ್ಕೂ ಕಾರಣವಾಗಿ ಎಲ್ಲೆಲ್ಲಿಯೂ ತುಂಬಿಕೊಂಡಿರುವ ಚೈತನ್ಯವು ಹೆಚ್ಚಿನದು. ಅದಕ್ಕಿಂತ ಹೆಚ್ಚಿನದಿನ್ನೊಂದಿಲ್ಲ. ಆದ್ದರಿಂದ ಸೂಕ್ಷ್ಮತೆಯಲ್ಲಿ, ಹೆಚ್ಚುಗಾರಿಕೆಯಲ್ಲಿ ಮತ್ತು ಒಳಗಿನದೆಂಬುದರಲ್ಲಿ ಅದೇ ಕೊನೆ. —(ಕ ೩-೧೦,೧೧)

(೩) ಯಾವ ಚೈತನ್ಯದ ಬಲದಿಂದ ರೂಪವೂ ರಸವೂ ಗಂಧವೂ ಸೋಂಕೂ ಗಂಡಹೆಂಡಿರ ಸುಖಾನುಭವವೂ ಸ್ಪಷ್ಟವಾಗಿ ತಿಳಿಯುವವೋ ಅದು ಆತ್ಮ. ಲೋಕದಲ್ಲಿ ಆತ್ಮನೆಂದರೆ ದೇಹೇಂದ್ರಿಯಗಳ ಗುಂಪೆಂದೂ ಆ ಗುಂಪಿನಿಂದಲೆ ಈ ಅರಿವುಗಳಾಗುವವೆಂದೂ ಎಲ್ಲರೂ ತಿಳಿದಿರುವರು. ಅದು ತಪ್ಪು. ದೇಹೇಂದ್ರಿಯಗಳ ಗುಂಪೆಂಬುದೂ ರೂಪ, ರಸ, ಗಂಧ-ಮೊದಲಾದವುಗಳ ಸ್ವರೂಪದ್ದೇ ಆಗಿದೆ. ಅದೂ ತಿಳಿಯಬರುವ ಸ್ವರೂಪದ್ದೇ ಆದ್ದರಿಂದಲೂ ತಿಳಿಯುವವನಾಗಲಾರದು. ರೂಪು ಮೊದಲಾದವುಗಳ ಸ್ವರೂಪದ್ದೇ ಆದ

ದೇಹೇಂದ್ರಿಯಗಳ ಗುಂಪು ರೂಪು ಮೊದಲಾದವುಗಳನ್ನು ತಿಳಿಯುವದಾದರೆ ಹೊರಗಣ ರೂಪು ಮೊದಲಾದವುಗಳೂ ತಮ್ಮ ತಮ್ಮ ಮತ್ತು ಒಂದು ಮತ್ತೊಂದರ ರೂಪು ಮೊದಲಾದವುಗಳನ್ನು ತಿಳಿಯುವದಾಗುತ್ತಿತ್ತು. ಹಾಗಿಲ್ಲ. ಎಲ್ಲರೂ ರೂಪು ಮೊದಲಾದವುಗಳಿರುವ ದೇಹ ಮೊದಲಾದವುಗಳನ್ನು, ಯಾವದರಿಂದ ಕಬ್ಬಿಣವು ಸುಡುತ್ತದೋ ಅದು ಬೆಂಕಿಯೆಂಬಂತೆ, ದೇಹೇಂದ್ರಿಯಗಳ ಗುಂಪಿಗಿಂತ ಬೇರೆಯಾದ ಚೈತನ್ಯಸ್ವಭಾವದ ಆತ್ಮನಿಂದ ತಿಳಿಯುವರು. —(ಕ ೪-೩)

(೪) ಯಾರ ಇಚ್ಛೆಯಂತೆ ಮನಸ್ಸು ಹೊರಬಿದ್ದು ವಿಷಯಗಳ ಮೇಲೆ ಎರಗುತ್ತದೆ? ಮನಸ್ಸು ತನ್ನಷ್ಟಕ್ಕೆ ತಾನೆ ಆ ಕೆಲಸವನ್ನು ಮಾಡುವದೆಂದರೆ ಯಾವದಾದರೊಂದು ಕೆಟ್ಟದ್ದೆಂದು ತಿಳಿದ ಮೇಲೆ ಅದು ಆ ಯೋಚನೆಯನ್ನು ಹಚ್ಚಿಕೊಳ್ಳದೆ ಬಿಡಬಹುದಾಗುತ್ತದೆ. ಅನುಭವದಲ್ಲಿ ಹಾಗಿಲ್ಲ. ಅದನ್ನು ಎಷ್ಟು ಬಿಗಿಹಿಡಿದರೂ ಅದು ಹಾನಿಕರವಾದ ಮತ್ತು ಕ್ರೂರವಾದ ಕಾರ್ಯಗಳಲ್ಲಿ ಮುಂದುವರಿಯುತ್ತದೆ. ಆದ್ದರಿಂದ ಅದರ ಹಿಂದೆ ಯಾರೋ ಇದ್ದು ಅದನ್ನು ಅಟ್ಟುತ್ತಿರಬೇಕೆಂದು ತೋರುತ್ತದೆ. ಹಾಗೆಯೆ ಪ್ರಾಣವು ಯಾರ ಆಳಾಗಿ ಇಂದ್ರಿಯಗಳ ಮುಂದಾಳುತನವನ್ನು ವಹಿಸಿ ಮುಂದೆ ಹೆಜ್ಜೆ ಇಡುತ್ತದೆ? ಪ್ರಾಣವು ಮುಂದೆ ಹೆಜ್ಜೆಯನ್ನಿಟ್ಟಮೇಲೆಯೆ ಇಂದ್ರಿಯಗಳು ಬಸವನ ಹಿಂದಿನ ಬಾಲದಂತೆ, ತಮ್ಮ ಹೆಜ್ಜೆಯನ್ನೆತ್ತುವವು. ಜನರು ಯಾರ ಸನ್ನೆಯಂತೆ ಮಾತಾಡುತ್ತಾರೆ? ಕಣ್ಣು, ಕಿವಿ-ಮೊದಲಾದವುಗಳ ಮೇಲೆ ಯಾವ ದೇವನು ಒಡೆಯತನವನ್ನು ನಡೆಸುತ್ತಿದ್ದಾನೆ? ಇದಕ್ಕುತ್ತರವೇನೆಂದರೆ: ದೇಹೇಂದ್ರಿಯಗಳ ಗುಂಪಿನೊಳಗೊಬ್ಬನಿದ್ದಾನೆ. ಅವನು ಕೇಳುವ ಇಂದ್ರಿಯಕ್ಕೆ ಕೇಳುವ ಇಂದ್ರಿಯ; ಮನಸ್ಸಿನ ಮನಸ್ಸು; ವಾಕ್ಕಿನ ವಾಕ್ಕು; ಪ್ರಾಣದ ಪ್ರಾಣ; ಮತ್ತು ಕಣ್ಣಿನ ಕಣ್ಣು. ಇಂಥವನೆಂದು ಹೇಳದೆ ಕಣ್ಣಿನ ಕಣ್ಣೆಂದು ಮುಂತಾಗಿ ಹೇಳುವದು ಹೇಗೆ ಒಪ್ಪುವದೆಂದರೆ: ಬೇರೆ ರೀತಿಯಿಂದ ಹೇಳಬಹುದಾದ ಹೆಚ್ಚಿಗೆಗಳೇನೂ ಅವನಲ್ಲಿಲ್ಲದ್ದರಿಂದ ಹಾಗೆ ಹೇಳುವದೇ ಸರಿ. ಕಣ್ಣು ಮೊಲಾದವುಗಳ ಕೆಲಸವನ್ನು ಬಿಟ್ಟು ಅವನಿಗೆ ತನ್ನದೇ ಒಂದು ಬೇರೆ ಕೆಲಸವಿದ್ದರೆ ಅವನು ಕಣ್ಣಿನ ಕಣ್ಣೆಂದು ಹೇಳಿದ

ಉತ್ತರವು ಪ್ರಶ್ನೆಗೆ ತಕ್ಕದ್ದಾಗುತ್ತಿರಲಿಲ್ಲ. ಅವನಿಗೆ ಅಂಥದ್ದೇನೂ ಇಲ್ಲ. ಕಣ್ಣು, ಕಿವಿ-ಮೊದಲಾದವುಗಳ ಬೇರೆ ಬೇರೆ ನಡೆವಳಿಕೆಗಳನ್ನು ನೋಡುತ್ತ ಅವುಗಳೊಳಗೆ ಸೇರದಂಥವನೂ ಅನೇಕವಸ್ತುಗಳಿಂದ ಕೂಡಿ ಆಗಿರುವ ಮನೆ ಮೊದಲಾದವುಗಳು ಮತ್ತೊಬ್ಬರ ಪ್ರಯೋಜನಕ್ಕಾಗಿರುವ ನಿಯಮದಂತೆ ಅನೇಕ ಭೂತಗಳಿಂದ ಆಗಿರುವ ಅವುಗಳಿಂದ ಸೇವೆಗೊಳ್ಳುವವನೂ ಒಬ್ಬನಿರುವನೆಂದು ತಿಳಿಯಬೇಕು. ಹೇಗೆ ಬೆಳಕಿಗೊಂದು ಬೇರೆ ಬೆಳಕಿಲ್ಲವೊ ಹಾಗೆ ಅವನು ಕಣ್ಣಿಗೊಂದು ಬೇರೆ ಕಣ್ಣಲ್ಲ. ಅವನು ಕಣ್ಣು ಮೊದಲಾದವುಗಳಿಗೆ ನೋಡುವದೇ ಮೊದಲಾದ ಶಕ್ತಿಯನ್ನು ಕೊಡುವವನು. ಚೈತನ್ಯಸ್ವರೂಪನಾದ ಅವನ ಬೆಂಬಲವಿಲ್ಲದೆ ಮನಸ್ಸು ಯಾವ ಯೋಚನೆಯನ್ನೂ ಹಚ್ಚಿಕೊಳ್ಳಲಾರದು ಮತ್ತು ಪ್ರಾಣವೂ ಅಲ್ಲಾಡಲಾರದು. ಯಾವದನ್ನು ಮಾತಿನಿಂದ ಹೇಳಲಾಗುವದಿಲ್ಲವೊ ಯಾವದು ಮಾತನ್ನು ಹೊರಗೆಡಹುವದೊ ಯಾವದನ್ನು ಮನಸ್ಸಿನಿಂದ ಯೋಚಿಸಲಾಗುವದಿಲ್ಲವೊ ಮತ್ತು ಗೊತ್ತುಮಾಡುವದಿಲ್ಲವೊ ಯಾವದು ಮನಸ್ಸನ್ನು ಒಳಗುಮಾಡಿಕೊಂಡಿದೆಯೊ ಯಾವದನ್ನು ಕಣ್ಣಿನಿಂದ ಕಾಣಲಾಗುವದಿಲ್ಲವೊ ಯಾವನಿಂದ ಕಣ್ಣುಗಳು ನೋಡಬಲ್ಲವೊ ಯಾವದನ್ನು ಕಿವಿಯು ತನ್ನಲ್ಲಿ ತುಂಬಿಕೊಳ್ಳಲಾರದೊ ಯಾವದು ಕಿವಿಯನ್ನು ಒಳಗುಮಾಡಿಕೊಂಡಿದೆಯೊ ಯಾವದನ್ನು ಮೂಗು ವಾಸನೆಯಿಂದ ಗುರ್ತಿಸಲಾರದೊ ಯಾವದು ಮೂಗಿನಲ್ಲಿ ಉಸಿರನ್ನು ಆಡಿಸುತ್ತಿರುವದೊ ಅದು ಬ್ರಹ್ಮ. (ಕೇ ೧-೧,೨,೫...೯.)

(೫) ಯಾವದು ಹೃದಯದಿಂದ ಪ್ರಾಣವಾಯುವನ್ನು ಮೇಲಕ್ಕೆ ಏರಿಸುತ್ತಿರುವದೊ ಯಾವದು ಅಪಾನವಾಯುವನ್ನು ಕೆಳಕ್ಕೆ ಇಳಿಸುತ್ತಿರುವದೊ ಅದು ಆತ್ಮ. ಹೃದಯಕಮಲದ ಬಯಲಲ್ಲಿದ್ದು ಬುದ್ಧಿಯಲ್ಲಿ ಜ್ಞಾನರೂಪದಿಂದ ಎದ್ದು ಕಾಣಿಸಿಕೊಳ್ಳುವ ಅದಕ್ಕೆ ಕಣ್ಣು ಮೊದಲಾದ ದೇವತೆಗಳು ರೂಪ ಮೊದಲಾದ ಕಾಣಿಕೆಗಳನ್ನು ಸಲ್ಲಿಸುತ್ತಿರುವರು.

—(ಕ ೫-೩)

(೬) ರಾಜನು ಬಿಟ್ಟುಹೋದರೆ ಪ್ರಜೆಗಳು ಕೈ ಮುದುರಿಕೊಳ್ಳುವಂತೆ ಯಾವದು ಬಿಟ್ಟುಹೋದರೆ ದೇಹದಲ್ಲಿ ಯಾವ ನಡೆವಳಿಕೆಯೂ ಇಲ್ಲವಾಗುವದೊ ಅದು ಆತ್ಮ. ಯಾವದು ಬಿಟ್ಟು ಹೋದೊಡನೆ ಶರೀರವೂ ಇಂದ್ರಿ

ಯಗಳೂ ಎಲ್ಲವೂ ನಿರ್ವೀರ್ಯವಾಗಿ ಬಿದ್ದು ಹೋಗುವವೋ ಆ ಆತ್ಮವು ದೇಹೇಂದ್ರಿಯಗಳಿಗಿಂತ ಬೇರೆಯೆಂದು ಸಿದ್ಧವಾಯಿತು. ಪ್ರಾಣ, ಅಪಾನ- ಮೊದಲಾದ ವಾಯುಗಳು ಹಾರಿಹೋದರೆ ಎಲ್ಲವೂ ಹಾಳಾಗುವದೆಂಬುದರ ಹೊರತು ಆತ್ಮನೆಂಬ ಬೇರೊಂದು ವಸ್ತು ಬಿಟ್ಟುಹೋಗುವ ವಿಚಾರವು ಯಾರಿಗೂ ತಿಳಿಯದಿರಬಹುದು. ದೇಹವೃಕ್ಷ, ಮನುಷ್ಯನು ಪ್ರಾಣಾಪಾನ ಗಳಿಂದಾಗಲಿ ಕಣ್ಣು ಮೊದಲಾದವುಗಳಿಂದಾಗಲಿ ಬದುಕಿರುವದಿಲ್ಲ. ಈ ಪ್ರಾಣ ಮೊದಲಾದವುಗಳೆಲ್ಲ ಬೇರೆ ಬೇರೆ ಭೂತಗಳ ಬೆರಕೆಯಿಂದಾದವುಗಳು. ಆದ್ದ ರಿಂದಲೆ ಮನೆ ಮೊದಲಾದವುಗಳ ಬಾಳು ಮತ್ತೊಬ್ಬರಿಗಾಗಿ ಹೇಗೊ ಹಾಗೆ ಇವುಗಳ ಬಾಳು ಮತ್ತೊಬ್ಬರಿಗಾಗಿ ಇರುವದು. ಆದಕಾರಣ ಪ್ರಾಣ ಮೊದಲಾದವುಗಳಿಗಿಂತ ಬೇರೆಯಾದವನಿಂದ ಎಲ್ಲವೂ ಒಟ್ಟುಗೂಡಿಸಿಕೊಂ ಡವುಗಳಾಗಿ ಅವನಿಗಾಗಿ ಪ್ರಾಣವನ್ನು ಹಿಡಿದುಕೊಂಡಿರುವವು. ಆ ಬೇರೆ ಯಾದವನೆ ಆತ್ಮ. —(ಕ ೫-೪,೫)

(೭) (ಅ) ಕನಸಿನಲ್ಲಿ ಕಂಡವುಗಳನ್ನೂ ಎಚ್ಚರದಲ್ಲಿ ಕಂಡವುಗ ಳನ್ನೂ ಎರಡನ್ನೂ ಯಾವನು ನೋಡುವನೊ ಅವನು ಆತ್ಮ (ಕ ೪-೪). **(ಆ)** ಎಚ್ಚರಕನಸುಗಳ ದುಃಖವನ್ನೂ ತನಿಸಿದ್ರೆಯ ದುಃಖಬೀಜವನ್ನೂ ಹೇಳುವದಕ್ಕೆ ಹೆಸರಿಲ್ಲದಂತೆ ಮಾಡುವವನಾಗಿಯೂ ಎರಡನೆಯದೆಂಬು ದೆಲ್ಲ ಹಗ್ಗದ ಹಾವಿನಂತೆ ತನ್ನೊಳಗೆ ಹುಟ್ಟುಗಟ್ಟಿದ್ದಾದ್ದರಿಂದ ತನ್ನಲ್ಲಿ ಯಾವ ಬದಲಾವಣೆಯನ್ನೂ ಹೊಂದದವನಾಗಿಯೂ ಎಚ್ಚರ, ಕನಸು, ನಿದ್ರೆ-ಈ ಮೂರು ಅವಸ್ಥೆಗಳ ಸಾಕ್ಷಿಯಾಗಿಯೂ ಇರುವ ಚೈತನ್ಯವು ನಾಲ್ಕನೆಯವನಾದ ಆತ್ಮ (ಮಾಂ ೧-೧೦). (ಇ) ಎಚ್ಚರದಲ್ಲಿಯೂ ಕನಸಿನಲ್ಲಿಯೂ ಕಾಣಬಂದ ಪದಾರ್ಥಗಳು ಸುಳ್ಳಾದರೂ ಅವೆರಡನ್ನೂ ಕಂಡವನೊಬ್ಬನುಂಟೆಂಬ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲವಷ್ಟೆ; ಅವನೆ ಆತ್ಮ (ಮಾಂ ೨-೧೧).

(೮) (ಅ) ನೀರು ಮೊದಲಾದ ಐದು ಭೂತಗಳು ಹುಟ್ಟುವದಕ್ಕೆ ಮುಂಚೆ ಬ್ರಹ್ಮದ ಸಂಕಲ್ಪಮಾತ್ರದಿಂದ ಹುಟ್ಟಿ ದೇವತೆಗಳೇ ಮೊದಲಾದ ವರ ಶರೀರವನ್ನೆಲ್ಲ ರಚಿಸಿ ಎಲ್ಲ ಪ್ರಾಣಿಗಳ ಹೃದಯದಲ್ಲಿರುವ ಬಯಲಿನೊಳ ಹೊಕ್ಕು ಸದ್ದು ಮೊದಲಾದ ವಿಷಯಗಳನ್ನು ಅನುಭವಿಸುತ್ತ ದೇಹೇಂದ್ರಿ

ಯಗಳೊಡನೆ ಇರುವ ಹಿರಣ್ಯಗರ್ಭನಿಗೆ ಯಾವನು ಸಾಕ್ಷಿಯಾಗಿರುವನೊ ಅವನು ಆತ್ಮ. (ಕ ೪-೬). **(ಆ)** ಯಾವನಿಗೆ ಎಲ್ಲ ಧರ್ಮಗಳಿಗೂ ಊರುಗೋಲಾಗಿರುವ ಬ್ರಹ್ಮ, ಕ್ಷತ್ರ-ಎಂಬ ಜಾತಿಗಳೆರಡೂ ಒಂದೊಂದು ತುತ್ತಾಗಿವೆಯೊ ಎಲ್ಲವನ್ನೂ ನುಂಗಿ ನೀರುಕುಡಿಯುವ ಮೃತ್ಯುವೆಂಬುದು ಒಂದು ತುತ್ತಿಗೂ ಸಾಲದೆ ನಾಲಿಗೆಗೆ ತೊಡೆದುಕೊಳ್ಳುವ ಮಾತ್ರದ ನಂಚಿಕೆಯಾಗಿದೆಯೊ ಅವನು ಆತ್ಮ (ಕ ೨-೨೫). **(ಇ)** ಯಾವದರಿಂದ ಈ ಜಗತ್ತೆಲ್ಲ ಹುಟ್ಟುವದೊ ಯಾವದರಿಂದ ಈ ಹುಟ್ಟಿದವುಗಳೆಲ್ಲ ಬದುಕಿರುವವೊ ಯಾವದರೊಳಗೆ ಸೇರಿ ಅವೆಲ್ಲ ತಮ್ಮ ಇರುವಿಕೆಯನ್ನು ಕಳೆದುಕೊಳ್ಳುವವೊ ಅದು ಆತ್ಮ (ತೈ ೩-೧). **(ಈ)** ಹಗ್ಗವು ಹಾವನ್ನು ಒಳಸೆಳೆದುಕೊಳ್ಳುವಂತೆ ಮತ್ತು ಹೊರಗೆಡಹುವಂತೆ ಯಾವದು ಪ್ರಲಯದ ಕಾಲದಲ್ಲಿ ಜಗತ್ತನ್ನು ಒಳಸೆಳೆದು ಕೊಳ್ಳುವದೊ ಮತ್ತು ಸೃಷ್ಟಿಯ ಸಮಯದಲ್ಲಿ ಅದನ್ನು ಹೊರಗೆಡಹುವದೊ ಅದು ಆತ್ಮ. (ಭ ೧೩-೧೬).

(೯) **(ಅ)** ಈ ಜಗತ್ತಿನಲ್ಲಿ ಇರುವದೆಲ್ಲ ಯಾವದರಿಂದ ಹೊರಬಿದ್ದು ಯಾವದರ ಕಟ್ಟಪ್ಪಣೆಯನ್ನು ತಲೆಯಲ್ಲಿ ಹೊತ್ತು ನಡೆಸುತ್ತಿರುವದೊ ಆ ಬ್ರಹ್ಮವೆಂಬುದು ವಜ್ರವೆಂಬ ಆಯುಧವನ್ನು ಎತ್ತಿ ಹಿಡಿದುಕೊಂಡಿರುವದರಂತೆ ಹೆದರಿಸುವದಾಗಿ ಅಂಥ ಒಡೆಯನೆದುರಿಗೆ ಆಳುಗಳು ಕಟ್ಟಿಗೊಳಪಟ್ಟು ನಡೆಯುವಂತೆ ಚಂದ್ರ, ಸೂರ್ಯ, ಗ್ರಹ, ನಕ್ಷತ್ರ-ಮೊದಲಾದವುಗಳನ್ನೆಲ್ಲ ಎಡೆಬಿಡದೆ ಒಂದೇ ರೀತಿಯಲಿ ದುಡಿಯುತ್ತಿರುವಂತೆ ಮಾಡಿರುವದು (ಕ೬.೨) **(ಆ)** ಆ ಆತ್ಮನ ಹೆದರಿಕೆಯಿಂದ ಬೆಂಕಿಯು ಸುಡುತ್ತದೆ; ಸೂರ್ಯನು ಬಿಸಿಗೊಳಿಸುತ್ತಾನೆ; ಇಂದ್ರನೂ ವಾಯುವೂ ಮೃತ್ಯುವೂ ಓಡುತ್ತಿರುತ್ತಾರೆ (ಕ ೬-೩). (ಇ) ಭೂಮಿಯೂ ಆಕಾಶವೂ ಯಾರ ಅಪ್ಪಣೆಯ ಆಧಾರದ ಮೇಲೆ ನಿಂತಿವೆಯೊ ಸೂರ್ಯನೂ ಚಂದ್ರನೂ ಯಾರ ಮಾತಿನ ಮೇಲೆ ಕೊಳ್ಳಿಯಂತೆ ಯಾವಾಗಲೂ ತಿರುಗುತ್ತಿರುವರೊ ಯಾರ ಹೆದರಿಕೆಯಿಂದ ನದಿಗಳೂ ಸಮುದ್ರಗಳೂ ತಮ್ಮ ಮೇರೆಯನ್ನು ಮೀರದೆ ಇರುವವೊ ಮರಗಿಡಗಳೂ ಪ್ರಾಣಿಗಳೂ ಯಾರ ಹೇಳಿಕೆಯಂತೆ ತಮ್ಮ ಕಟ್ಟಿನೊಳಗಿರುವವೊ ಋತುಗಳೂ ಅಯನಗಳೂ ವರ್ಷಗಳೂ

ಯಾರ ಆಜ್ಞೆಯನ್ನು ದಾಟಲಾರವೊ ಮಾಡುವವರೂ ಅವರ ಫಲಗಳೂ ಯಾರ ಸನ್ನೆಯಂತೆ ತಮ್ಮ ತಮ್ಮ ಕಾಲವನ್ನು ಮೀರದಿರುವವೊ ಎಲ್ಲವನ್ನೂ ಬಲ್ಲದ್ದಾಗಿ ಆ ಮಹಿಮೆಯುಳ್ಳದ್ದು ಬ್ರಹ್ಮವು.—(ಮುಂ ೨-೨-೭).

(೧೦) ಯಾವದು ಭೂಮಿಯನ್ನೂ ಆಕಾಶವನ್ನೂ ಮನಸ್ಸನ್ನೂ ಪ್ರಾಣಗಳನ್ನೂ ಎಲ್ಲ ಇಂದ್ರಿಯಗಳನ್ನೂ ಪೋಣಿಸಿಕೊಂಡಿದೆಯೊ ಅದು ಬ್ರಹ್ಮ. —(ಮುಂ ೨-೨-೫)

(೧೧) ದೇಹದಲ್ಲಿರುವ ನಾಡಿಗಳೆಲ್ಲ ಬಂಡಿಯ ಗುಂಬದಲ್ಲಿ ಹಾರೇ ಕಾಲುಗಳು ಹೇಗೋ ಹಾಗೆ ಯಾವ ಹೃದಯವನ್ನು ಹಿಡಿದುಕೊಂಡಿವೆಯೊ ಆ ಹೃದಯದಲ್ಲಿ ಬುದ್ಧಿಗಾಗುವ ತಿಳಿವುಗಳಿಗೆಲ್ಲ ಸಾಕ್ಷಿಯಾಗಿ ನಡುವೆ ಇರುತ್ತ ಯಾವನು ಸಿಟ್ಟು, ಹರ್ಷ-ಮೊದಲಾದ ವೃತ್ತಿಗಳನ್ನು ಪಡೆದವನೆನಿಸುವನೊ ಅವನು ಆತ್ಮ. —(ಮುಂ ೨-೨-೬)

(೧೨) ಯಾವ ವ್ಯವಹಾರವಾದರೂ ದೇಹೇಂದ್ರಿಯಗಳ ಹೊರಗಿರುವ ಬೇರೆ ಬೆಳಕಿನಿಂದ ಸಾಗುವದೊ? ದೇಹೇಂದ್ರಿಯಗಳೊಳಗಿರುವ ಬೆಳಕಿನಿಂದ ಸಾಗುವದೊ?–ಎಂಬುದನ್ನು ತಿಳಿಯಬೇಕೆಂದು ಒಮ್ಮೆ ಜನಕನು ಯಾಜ್ಞವಲ್ಕ್ಯರನ್ನು ಕೇಳಿದನು. ಆದಿನ ಏನೂ ಹೆಚ್ಚಿಗೆ ಹೇಳುವದಿಲ್ಲವೆಂದು ಮನಸ್ಸು ಮಾಡಿಕೊಂಡಿದ್ದ ಯಾಜ್ಞವಲ್ಕ್ಯರು ಒಮ್ಮೆಗೇ ಕೊನೆಗೆ ಸಿಲ್ಲುವ ಮಾತನ್ನು ಹೇಳದೆ ಕಡಿದಷ್ಟು ತುರಿಸಿಕೊಳ್ಳುವಂತೆ ಸೂರ್ಯನೆಂದು ಉತ್ತರ ಕೊಟ್ಟರು. ದೇಹೇಂದ್ರಿಯಗಳ ಗುಂಪಿಗಿಂತ ಬೇರೆಯಾಗಿ ಕಣ್ಣಿಗೆ ನೋಡುವ ಶಕ್ತಿಯನ್ನು ಕೊಡುತ್ತ ಹೊರಗಿರುವ ಸೂರ್ಯನಿಂದಲೆ ಅಲ್ಲವೆ ಜನರು ಇರುವದು, ಓಡಾಡುವದು, ಕೆಲಸಮಾಡುವದು, ಹಿಂದಿರುಗುವದು? ಆದರೆ ಸೂರ್ಯನು ಮುಳುಗಿದ ಮೇಲೆ ಯಾವದು ಬೆಳಕೆಂದು ಇನ್ನೊಂದು ಪ್ರಶ್ನೆ ಹೊರಟಿತು. ಅದಕ್ಕೆ ಚಂದ್ರನೆಂದು ಉತ್ತರ ಬಂತು. ಸೂರ್ಯನೂ ಮುಳುಗಿ ಚಂದ್ರನೂ ಮುಳುಗಿದ ಮೇಲೆ ಯಾವದರ ಬೆಳಕೆಂದು ಮತ್ತೊಂದು ಪ್ರಶ್ನೆ ಹೊರಟಿತು. ಆದಕ್ಕೆ ಅಗ್ನಿಯೆಂದುತ್ತರ ಬಂತು. ಸೂರ್ಯನೂ ಮುಳುಗಿ ಚಂದ್ರನೂ ಮುಳುಗಿ ಅಗ್ನಿಯೂ ಆರಿಹೋದ ಮೇಲೆ ಯಾವದರ ಬೆಳಕೆಂದು ಮಗದೊಂದು ಪ್ರಶ್ನೆ ಹೊರಟಿತು. ಅದಕ್ಕೆ ವಾಕ್ಕೆಂದು ಉತ್ತರ ಬಂತು.

ಯಾವ ಬೆಳಕೂ ಇಲ್ಲದಾಗ ಕಿವಿಗೇನಾದರೂ ಸದ್ದು ಕೇಳಿದರೆ ಮನಸ್ಸಿನಲ್ಲಿ ವಿವೇಕ ಉಂಟಾಗಿ ಆ ಸದ್ದಿನ ದಾರಿಯನ್ನು ಹಿಡಿದು ಮುಂದುವರಿಯ ಬಹುದು. 'ವಾಕ್ಕನ್ನು ಬೆಳಕೆಂದು ಹೇಳಬಹುದೇ?' ಎಂದರೆ ಹೇಳ ಬಹುದು. ಒಳ್ಳೆ ಮಳೆಗಾಲದಲ್ಲಿ ಕರೀ ಮೋಡಗಳು ಕವಿದುಕೊಂಡು ತನ್ನ ಕೈ ಕೂಡ ತನಗೆ ಚೆನ್ನಾಗಿ ಕಾಣದಿರುವಾಗ ಎಲ್ಲಿಯಾದರೂ ಏನಾದರೂ ಒಂದು ಸದ್ದಾದರೆ, ನಾಯಿ ಬಗುಳಿದರೆ ಅಥವಾ ಕತ್ತೆ ಕಿರಚಿದರೆ, ಅದರಿಂದ ಆಕಡೆ ಊರಿರುವದೆಂದರಿತು ಮನುಷ್ಯನು ಆ ಕಡೆಗೆ ಹೋಗುತ್ತಾನೆ. ಆದ್ದರಿಂದ ವಾಕ್ಕು ಬೆಳಕಿನ ಕೆಲಸವನ್ನು ಮಾಡಿದಂತಾಯಿತು. ಈ ವಾಕ್ಕಿನಂತೆ ಗಂಧ ಮೊದಲಾದವುಗಳು ಕೂಡ ಬೆಳಕಿನ ಕೆಲಸವನ್ನು ಮಾಡು ವವು. ಮೂಗಿಗೇನಾದರೂ ವಾಸನೆ ತಗಲಿದರೆ ಮುಂದುವರಿಯುವದೋ ಹಿಂದುವರಿಯುವದೋ-ಏನಾದರೂ ಆಗುವದುಂಟು. ಜನಕನು ಇಲ್ಲಿಗೂ ಸುಮ್ಮನಾಗಲಿಲ್ಲ. ಸದ್ದು ಕೂಡ ಇಲ್ಲದಾಗ ಯಾವ ಬೆಳಕೆಂದು ಪ್ರಶ್ನೆ ಮುಂದೆ ಸಾಗಿತು. ಏಕೆಂದರೆ: ಎಲ್ಲ ವ್ಯವಹಾರಕ್ಕೂ ದೇಹೇಂದ್ರಿಯಗಳಿ ಗಿಂತ ಬೇರೆಯಾದ ಹೊರಗಣ ಬೆಳಕೇ ಮೂಲವಾದರೆ ಎಚ್ಚರದಂತೆ ಕನಸಿ ನಲ್ಲಿಯೂ ನಿದ್ರೆಯಲ್ಲಿಯೂ ಬೇರೆ ಹೊರಗಣ ಬೆಳಕೇ ಇರುವದೆನ್ನಬೇಕಾ ಗುವದು. ಏಕೆಂದರೆ: ಕನಸಿನಲ್ಲಿ ಊರಿಂದೂರಿಗೆ ಹೋಗುವದೂ ನಂಟರಿ ಷ್ಟರನ್ನು ಕಾಣುವದೂ ಮೊದಲಾದ ವ್ಯವಹಾರಗಳೆಲ್ಲ ಉಂಟೇ ಉಂಟು ಮತ್ತು ನಿದ್ದೆಯಿಂದೆದ್ದವನು ಸುಖವಾಗಿ ನಿದ್ದೆಮಾಡಿದೆನೆಂದೂ ಆಗ ಏನೇನೂ ತಿಳಿಯಲಿಲ್ಲವೆಂದೂ ಹೇಳುವದುಂಟು. ಆದ್ದರಿಂದ ಸದ್ದು ಕೂಡ ಇಲ್ಲದಾಗ ಯಾವ ಬೆಳಕೆಂಬ ಪ್ರಶ್ನೆ ಕೇಳತಕ್ಕದ್ದಾಗಿರುವದು. ಅದಕ್ಕೆ ಆತ್ಮನೆಂಬ ಬೆಳಕೆಂದು ಉತ್ತರ. ಆತ್ಮನೆಂಬುದು ದೇಹೇಂದ್ರಿಯಗಳಿಗಿಂತ ಬೇರೆಯಾಗಿ ಅವಕ್ಕೆ ಬೆಳಕನ್ನು ಕೊಡುವ ವಸ್ತು. ಸೂರ್ಯನಿರುವನೆಂದು ಕಾಣಬೇಕಾದರೂ ಆತ್ಮನಿರಬೇಕು. ಹೀಗೆ ಸೂರ್ಯನನ್ನು ಆತ್ಮನು ಬೆಳಗಿ ದಂತೆ ಆತ್ಮನನ್ನು ಬೆಳಗುವದಿನ್ನೊಂದಿಲ್ಲ. ದೇಹೇಂದ್ರಿಯಗಳಿಗಿಂತ ಬೇರೆ ಯಾದ ಸೂರ್ಯ ಮೊದಲಾದ ಬೆಳಕುಗಳು ಕಣ್ಣು ಮೊದಲಾದವುಗಳಿಗೆ ಕಾಣ ಬರುವದುಂಟು. ಆತ್ಮನೆಂಬ ಬೆಳಕು ಹಾಗೆ ಕಾಣಬರುವದಿಲ್ಲ. ಆತ್ಮನೆಂಬ

ಬೆಳಕು ತಾನು ಕಾಣಬರದಿದ್ದರೂ ಬೆಳಕಿನ ಕೆಲಸವು ನಡೆಯುವದು ಪ್ರತ್ಯಕ್ಷವಾಗಿದೆ. ಈ ಆತ್ಮನು ದೇಹೇಂದ್ರಿಯಗಳಿಗಿಂತ ಬೇರೆಯಾಗಿ ದೇಹೇಂದ್ರಿಯಗಳಿಗಿಂತ ಒಳಗೆ ಇರುವನು. ಅವನು ಆದಿತ್ಯ ಮೊದಲಾದ ಬೆಳಕುಗಳಂತೆ ಐದು ಭೂತಗಳ ಬೆರಕೆಯುವನಲ್ಲ. ಆದ್ದರಿಂದಲೆ ಅವನು ಸೂರ್ಯ ಮೊದಲಾದವರಂತೆ ಕಣ್ಣು ಮೊದಲಾದವುಗಳಿಗೆ ಕಾಣುವದಿಲ್ಲ.

—(ಬೃ ೪-೩-೨..೬)

(೧೩) ಜಗತ್ತಿನ ಹುಟ್ಟುಹೋಗುಗಳಿಗೆ ಕಾರಣವಾದದ್ದು ಆತ್ಮ ಅಥವಾ ಬ್ರಹ್ಮವೆಂಬ ಸೂತ್ರವನ್ನಿಟ್ಟುಕೊಂಡರೆ ಅನ್ನಮಯವಾದ ಶರೀರವೂ ಆತ್ಮವಾಗುತ್ತದೆ. ಏಕೆಂದರೆ: ಭೂಮಿಯಲ್ಲಿರುವ ಚರವಾದ ಮತ್ತು ಜಡವಾದ ವಸ್ತುಗಳೆಲ್ಲ ರಸ ಮೊದಲಾದ ರೂಪಗಳನ್ನು ಹೊಂದಿದ ಅನ್ನದಿಂದಲೆ ಹುಟ್ಟುತ್ತವೆ; ಅನ್ನದಿಂದಲೆ ಪ್ರಾಣವನ್ನು ಹಿಡಿದುಕೊಂಡಿರುತ್ತವೆ; ಕೊನೆಗೆ ಅನ್ನವೇ ಆಗಿ ಹೋಗುತ್ತವೆ. ಎಲ್ಲ ಪ್ರಾಣಿಗಳಿಗೂ ಅನ್ನವೇ ಹೆಚ್ಚಿನದು. ಅನ್ನವೆಂಬ ಮಾತಿಗೆ ಇತರರಿಗೆ ತಿಂಡಿಯಾಗಿರುವದೆಂದೂ ತಾನು ಇತರರನ್ನು ಒಳಕೊಳ್ಳುವದೆಂದೂ ಅರ್ಥ. ಹೀಗೆ ಇದು ಮೊದಲು ಆತ್ಮವಾಗಿ ಕಂಡರೂ ಈ ಅಭಿಪ್ರಾಯವು ಕೊನೆಯವರೆಗೂ ನಿಲ್ಲುವದಿಲ್ಲ. ಇದರೊಳಗಣ ಆತ್ಮವಾಗಿ ಇನ್ನೊಂದಿದೆ. ಅದು ಪ್ರಾಣಮಯ. ಆ ಪ್ರಾಣಮಯವು ಈ ಅನ್ನಮಯವಾದ ದೇಹದೊಳಗೆಲ್ಲ ತುಂಬಿಕೊಂಡಿದೆ. ಶರೀರದಲ್ಲಿರುವ ಅಗ್ನಿ ಮೊದಲಾದ ದೇವತೆಗಳು ಇದರ ಬಲದಿಂದ ತಮ್ಮ ಕೆಲಸವನ್ನು ಮಾಡುತ್ತಾರೆ. ಮನುಷ್ಯರೂ ಪಶುಗಳೂ ಎಲ್ಲರೂ ಪ್ರಾಣಮಾಡುತ್ತಿರುವದರಿಂದಲೆ ಕೆಲಸಮಾಡುವವರಾಗುತ್ತಾರೆ ಪ್ರಾಣವೇ ಮನುಷ್ಯನ ಬದುಕುವಿಕೆಯ ಕಾರಣ. ಪ್ರಾಣವು ಹೋದರೆ ಸಾವು ಕಟ್ಟಿಟ್ಟ ಗಂಟು. ಈ ಅಭಿಪ್ರಾಯವೂ ಕೊನೆಯವರೆಗೂ ನಿಲ್ಲುವದಿಲ್ಲ. ಇದರೊಳಗಣ ಆತ್ಮವಾಗಿ ಇನ್ನೊಂದಿದೆ. ಅದು ಮನೋಮಯ. ಅದರಲ್ಲಿ ವಿಷಯಗಳನ್ನು ಯೋಚನೆಗೆ ತೆಗೆದುಕೊಳ್ಳುವ ಮನಸ್ಸೇ ಮುಖ್ಯ. ಅದೂ ಕೊನೆಯದಲ್ಲ. ಅದರೊಳಗಣ ಆತ್ಮವಾಗಿ ಇನ್ನೊಂದಿದೆ. ಅದು ವಿಜ್ಞಾನಮಯ. ಅದರಲ್ಲಿ ಗೊತ್ತುಮಾಡುವ ಸ್ವಭಾವವುಳ್ಳ ಬುದ್ಧಿಯೇ ಮುಖ್ಯ. ಇದನ್ನು

ಹೀಗೆ ಮಾಡಬೇಕೆಂದು ಗೊತ್ತುಮಾಡಿಕೊಂಡ ಮೇಲಷ್ಟೆ ಮಾಡುವವನು ಶ್ರದ್ಧೆಯಿಂದ ಯಜ್ಞ ಮೊದಲಾದವುಗಳನ್ನು ಮಾಡುವನು. ಇದೂ ಕೊನೆಯದಲ್ಲ. ಇದರೊಳಗೂ ಆತ್ಮವಾಗಿ ಇನ್ನೊಂದಿದೆ. ಅದು ಆನಂದ ಮಯ. ಅದರಲ್ಲಿ ತನ್ನ ತಿಳಿವಿಗೂ ಕರ್ಮಕ್ಕೂ ಫಲವಾದ ಆನಂದವು ಮುಖ್ಯ. ಅದು ಹೆಚ್ಚು ಕಡಿಮೆಯಾಗುವದುಂಟು. ಆದ್ದರಿಂದ ಇದೂ ಕೊನೆಯದಲ್ಲ. ಇವೆಲ್ಲಕ್ಕೂ ಆಧಾರವಾಗಿರುವ ಎರಡನೆಯದರ ಸೋಂಕಿಲ್ಲದ ಬ್ರಹ್ಮವು ನಿಜವಾದ ಆತ್ಮ. —(ತೈ ೨-೧-೫)

## ಆತ್ಮಸ್ವರೂಪದ ವರ್ಣನೆ

ಆತ್ಮವು ಇಂದ್ರಿಯಗಳಿಗಾಗಲಿ ಮನಸ್ಸಿಗಾಗಲಿ ಗೋಚರವಾಗತಕ್ಕ ವಿಶೇಷಗಳಿಲ್ಲದ್ದಾದ್ದರಿಂದ ಅದನ್ನು ಹೀಗೆಂದು ಬೆಟ್ಟುಬಿಟ್ಟು ಹೇಳುವದು ಆಗುವದಿಲ್ಲ. ಇದನ್ನು ಹೇಳುವ ಜಾತಿಯ ರೀತಿಯೇ ಬೇರೆ. ಬಹು ಮಟ್ಟಿಗೆ ಉಳಿದೆಲ್ಲವುಗಳಿಂದಲೂ ಇದನ್ನು ಬಿಡಿಸಿ ಹೇಳಬೇಕಾಗಿರುವದರಿಂದ ಉಳಿದವುಗಳ ಯಾವ ಧರ್ಮವೂ ಇದರಲ್ಲಿಲ್ಲವೆಂದು ಹೇಳುವದೇ ಇದನ್ನು ತಿಳಿಸುವ ಸಮೀಪದ ದಾರಿ. ಶಾಸ್ತ್ರವು ಈ ದಾರಿಯನ್ನು ಹಿಡಿದು ಬೇರೆ ಬೇರೆ ಕಡೆಗಳಲ್ಲಿ ಬೇರೆಬೇರೆಯಾಗಿ ಹೇಳಿರುವದು. ಅವುಗಳಲ್ಲಿ ಕೆಲವು ಇಲ್ಲಿ ಹೇಳಲಾಗುವವು.

(೧) ಅದು ಇರುವದೆನಿಸಿಕೊಳ್ಳುವದೂ ಇಲ್ಲ; ಇಲ್ಲವೆನಿಸಿಕೊಳ್ಳು ವದೂ ಇಲ್ಲ. ಲೋಕದಲ್ಲಿ ಇರುವದೆನಿಸಿಕೊಳ್ಳದ ವಸ್ತುವೇ ಇಲ್ಲವೆಂಬುದು ನಿಜ; ಇರುವದೆನಿಸಿಕೊಳ್ಳದ್ದನ್ನು ಇಲ್ಲವೆಂದೇ ತಿಳಿಯಬೇಕು. ಆದರೆ ಆತ್ಮ ನನ್ನು ಇಲ್ಲವೆನ್ನೋಣವೆಂದರೆ ಅದು ಇಲ್ಲವೆಂಬ ಬುದ್ಧಿಗೂ ಒಳಗಾಗತಕ್ಕ ದ್ದಲ್ಲ. ಯಾವದಾದರೂ ಇರುವದೆಂಬ ಬುದ್ಧಿಗೆ ಗೋಚರವಾಗಬೇಕು; ಇಲ್ಲದಿದ್ದರೆ ಇಲ್ಲವೆಂಬ ಬುದ್ಧಿಗೆ ಗೋಚರವಾಗಬೇಕು. ಆತ್ಮವು ಇಂದ್ರಿಯ ಗಳಿಗೆ ನಿಲುಕದ್ದಾದ್ದರಿಂದ ಅವೆರಡಕ್ಕೂ ಹೊರತಾಗಿರುವದು. ಇಂದ್ರಿಯ ಗಳಿಗೆ ಕಾಣಬರತಕ್ಕದ್ದನ್ನು ಇರುವದೆಂದೂ ಇಲ್ಲವೆಂದೂ ಹೇಳಬಹುದು. ಬ್ರಹ್ಮವು ಅಂಥದ್ದಲ್ಲವಾದ್ದರಿಂದ ಹಾಗೆ ಹೇಳುವದಕ್ಕೆ ಬರುವದಿಲ್ಲ. ಒಂದು ಮಾತು ಕಿವಿಗೆ ಬಿದ್ದಾಗ ಆಕಳು, ಕುದುರೆ-ಎಂದಂತೆ ಒಂದು ಬಗೆಯ ಜಾತಿ ತೋರಿದರೂ ಅಡಿಗೆ ಮಾಡುತ್ತಾನೆ, ಓದುತ್ತಾನೆ—ಎಂದಂತೆ ಕೆಲಸ ತೋರಿ ದರೂ ಕಪ್ಪಗೆ, ಬೆಳ್ಳಗೆ—ಎಂದಂತೆ ಗುಣವು ತೋರಿದರೂ ಹಣ

ಗಾರ, ಹೊಲಗಾರ - ಎಂದಂತೆ ಸಂಬಂಧವೇನಾದರೂ ತೋರಿದರೂ ಅದರ ಅರ್ಥವು ಬುದ್ಧಿಗೆ ಹತ್ತೀತು. ಆತ್ಮವು ಅಂಥ ವಿಶೇಷವೇನೂ ಇಲ್ಲದ್ದಾದ್ದ ರಿಂದ ಅದು ಇರುವದೆನಿಸುವದೂ ಇಲ್ಲ. ಅದು ಎರಡನೆಯದಿಲ್ಲದ್ದೂ ಯಾವ ದಕ್ಕೂ ಒಳಗಾಗದ್ದೂ ಆತ್ಮವಾದದ್ದೂ ಆದ್ದರಿಂದ ಅವನ್ನು ಯಾವ ಮಾತಿ ನಿಂದ ತಿಳಿಸುವದಕ್ಕೂ ಆಗುವದಿಲ್ಲ. —(ಭ ೧೩-೧೨)

(೨) (ಅ) ಅದು ಹುಟ್ಟುವಿಕೆ ಇಲ್ಲದ್ದು. ಲೋಕದಲ್ಲಿ ಎಲ್ಲ ವಸ್ತುಗ ಳಿಗೂ ಹುಟ್ಟುವಿಕೆಯೆಂಬ ಒಂದು ಬಗೆಯ ಬದಲಾವಣೆಯುಂಟು. ಇದಕ್ಕೆ ಅದಿಲ್ಲ.—(ಗೀ ೨-೨೦). (ಆ) ನೀರಿನಲ್ಲಿ ಅಲೆ ಹುಟ್ಟುವದಕ್ಕೆ ಗಾಳಿ ಹೇಗೆ ಬೇರೆ ಕಾರಣವಾಗಿರುವದೊ ಹಾಗೆ ಆತ್ಮನನ್ನು ಹುಟ್ಟಿಸುವದಕ್ಕೆ ಇನ್ನೊಂದು ಕಾರಣವೆಂಬುದಿಲ್ಲ. ಆದ್ದರಿಂದ ಅದು ಹುಟ್ಟಿಲ್ಲದ್ದು. ಲೋಕದಲ್ಲಿರುವ ವಸ್ತುಗಳ ಎಲ್ಲ ಬದಲಾವಣೆಗಳಿಗೂ ಹುಟ್ಟುವಿಕೆಯೆ ಮೊದಲನೆಯದು. ಆತ್ಮಕ್ಕೆ ಅದಿಲ್ಲವೆಂದದ್ದರಿಂದ ಯಾವ ಬದಲಾವಣೆಯೂ ಇಲ್ಲವೆಂದಾಯಿತು. —(ಮುಂ ೨-೧-೨). (ಇ) ಆತ್ಮನು ಬೇರೆ ಕಾರಣದಿಂದ ತಾನು ಹುಟ್ಟಿದ ವನೂ ಅಲ್ಲ; ಈ ಆತ್ಮನಿಂದ ಬೇರೆ ಏನೊಂದೂ ಹುಟ್ಟಲೂ ಇಲ್ಲ. ಹುಟ್ಟು ವಿಕೆಯೆಂಬುದರ ಸೋಂಕೇ ಅದರಲ್ಲಿಲ್ಲ.—(ಕ-೨-೧೮).

(೩) (ಅ) ಅದು ಸಾವಿಲ್ಲದ್ದು. ಸಾವೆಂಬುದು ಕೊನೆಯ ಬದಲಾ ವಣೆ. ಆತ್ಮಕ್ಕೆ ಅದಿಲ್ಲ—(ಭ ೨-೨೦). (ಆ) ಚತುರ್ಮುಖಬ್ರಹ್ಮನನ್ನು ಮೊದಲುಗೊಂಡು ಎಲ್ಲವೂ ನಾಶವಾದರೂ ಆತ್ಮಕ್ಕೆ ನಾಶವಿಲ್ಲ (ಭ ೮-೨೦). (ಇ) ಆತ್ಮವು ಇನ್ನೊಂದು ಕಾರಣದಿಂದ ಹುಟ್ಟಿದ್ದಲ್ಲವಾಗಿರುವದರಿಂದಲೂ ಅದಕ್ಕೆ ಸಾವಿಲ್ಲ. ಇದರ ಬುಡವಿನ್ನೊಂದಿದ್ದರೆ ಅದರಿಂದ ಚಿಗುರಿದ ಇದು ತನಗೆ ತಾನೆ ಹೋದೀತು. ಇನ್ನೊಂದೇನೆಂದರೆ: ಆತ್ಮವು ಇನ್ನೊಂದರಿಂದ ಹುಟ್ಟಿದ್ದಲ್ಲವಾದ್ದರಿಂದಲೆ ಅವಯವವಿಲ್ಲದ್ದಾಗಿರುವದು. ಅಂಥದ್ದು ಹೇಗೆ ನಾಶವಾದೀತು! ಅದರಂತೆ ಇದು ಗುಣಗಳನ್ನು ಮೀರಿದ್ದಾದ್ದರಿಂದಲೂ ಇದಕ್ಕೆ ನಾಶವಿಲ್ಲ. ಗುಣವುಳ್ಳದ್ದಾಗಿದ್ದರೆ ಗುಣವು ಕಂದಿದ ಹಾಗೆಲ್ಲ ಕಂದೀತು. ಆತ್ಮಕ್ಕೆ ಆ ಭಯವಿಲ್ಲ.—(ಭ ೧೩-೩೧).

(೪) ಅದು ಯಾವಾಗಲೂ ಒಂದೇ ರೀತಿಯಲ್ಲಿರತಕ್ಕದ್ದು. ಅವಯವ ಉಳ್ಳದ್ದಾದರೂ ಸೊರಗೀತು. ಆತ್ಮವು ಅವಯವಗಳಿಲ್ಲದ್ದೂ ಗುಣಗಳಿಗೆ ಮೀರಿದ್ದೂ ಆದ್ದರಿಂದ ಇದರಲ್ಲಿ ಸೊರಗುವಿಕೆ ಇಲ್ಲ. —(ಭ ೨-೨೦)

(೫) (ಅ) ಆತ್ಮವು ಹಿಂದೆಯೂ ಹೊಸಬನೆ. ಅವಯವಗಳು ಬೆಳೆಯುವಂಥ ವಸ್ತುವಾದರೆ ಅದು ಬೆಳೆದು ಈಗ ಹೊಸದೆನಿಸಿಕೊಂಡೀತು. ಆತ್ಮನು ಅವಯವಗಳಿಲ್ಲದವನಾಗಿ ಬೆಳೆಯುವಿಕೆ ಇಲ್ಲದವನಾದ್ದರಿಂದ ಹಿಂದೆಯೂ ಹೊಸಬನೆ; ಈಗಲೂ ಹೊಸಬನೆ. —(ಭ ೨-೨೦). (ಆ) ಬೀಜದಿಂದ ಹೊರಹೊಮ್ಮಿ ಬೆಳೆಯುವ ಮೊಳಕೆಯಂತೆ ಆತ್ಮನು ಅವಯವಗಳಿಂದ ಬೆಳೆಯುವವನಲ್ಲ (ಕ ೨ ೧೮).

(೬) ಆತ್ಮವು ಇರುವದೆನಿಸಿಕೊಳ್ಳುವದೂ ಅಲ್ಲವೆಂಬ ಮಾತಿನಿಂದ ಇಲ್ಲದ್ದೆಂದು ಊಹಿಸುವ ಸಾಹಸವನ್ನು ಮಾಡಬಾರದು. ಅದಕ್ಕೆ ತನ್ನದಾಗಿ ಪ್ರತ್ಯೇಕವಾದ ಕೈ, ಕಾಲು-ಮೊದಲಾದ ಅವಯವಗಳೇನೂ ಇಲ್ಲದಿದ್ದರೂ ಎಲ್ಲ ಪ್ರಾಣಿಗಳ ಅವಯವಗಳೂ ಅದರದೇ ಆಗಿರುವವು. ಬ್ರಹ್ಮವು ಎಲ್ಲ ಶರೀರಗಳ ಆತ್ಮವಾದ್ದರಿಂದ ಎಲ್ಲೆಲ್ಲಿಯೂ ಅದರ ಕೈಗಳೆ; ಎಲ್ಲೆಲ್ಲಿಯೂ ಅದರ ಕಾಲುಗಳೆ; ಎಲ್ಲೆಲ್ಲಿಯೂ ಅದರ ಕಣ್ಣುಗಳೆ; ಎಲ್ಲೆಲ್ಲಿಯೂ ಅದರ ತಲೆಗಳೆ; ಎಲ್ಲೆಲ್ಲಿಯೂ ಅದರ ಮುಖಗಳೆ; ಎಲ್ಲೆಲ್ಲಿಯೂ ಅದರ ಕಿವಿಗಳೆ. ಶರೀರಗಳೆಲ್ಲ ಸುಳ್ಳಾದರೂ ಶರೀರಗಳ ಮೂಲಕ ಬ್ರಹ್ಮವನ್ನು ನಿಲುಕಿಸಿಕೊಳ್ಳುವದಕ್ಕೆ ಮೆಟ್ಟಿಲಾಗಿ ಇಲ್ಲಿ ಎಲ್ಲೆಲ್ಲಿಯೂ ಅದರ ಕೈಗಳೆಂದು ಮುಂತಾಗಿ ಹೇಳಿದ್ದಾಗಿರುವದು. —(ಭ ೧೩-೧೩)

(೭) (ಅ) ಅದು ಯಾವ ಇಂದ್ರಿಯಗಳೂ ಇಲ್ಲದ್ದಾದ್ದರಿಂದ ಯಾವದರ ಸೋಂಕೂ ಅದಕ್ಕಿಲ್ಲ (ಭ ೧೩-೧೪). (ಆ) ಆಕಾಶವು ಎಲ್ಲೆಲ್ಲಿಯೂ ಹರಡಿಕೊಂಡಿದ್ದರೂ ಸೂಕ್ಷ್ಮವಾದದ್ದಾದ್ದರಿಂದ ಹೇಗೆ ಯಾವದರ ಸೋಂಕನ್ನೂ ಹತ್ತಿಸಿಕೊಳ್ಳುವದಿಲ್ಲವೊ ಹಾಗೆ ಆತ್ಮವು ಎಲ್ಲ ಶರೀರಗಳೊಳಗೂ ತುಂಬಿಕೊಂಡಿದ್ದರೂ ಯಾವದರ ಸೋಂಕನ್ನೂ ಹತ್ತಿಸಿಕೊಳ್ಳುವದಿಲ್ಲ. (ಭ ೧೩-೩೪). (ಇ) ಸೂರ್ಯನು ಎಲ್ಲ ಜಗತ್ತನ್ನೂ ಬೆಳಗಿದರೂ ಹೇಗೆ ಯಾವದರ ಸೋಂಕನ್ನೂ ಹತ್ತಿಸಿಕೊಳ್ಳುವದಿಲ್ಲವೊ ಹಾಗೆ ಆತ್ಮವು

ಎಲ್ಲವನ್ನೂ ಬೆಳಗಿದರೂ ಯಾವದರ ಸೋಂಕನ್ನೂ ಹತ್ತಿಸಿಕೊಳ್ಳುವದಿಲ್ಲ (ಭ ೧೩-೩೩). (**ಈ**) ತನ್ನಲ್ಲಿ ವಾಯು ಎಲ್ಲೆಲ್ಲಿಯೂ ಹರಿದಾಡುತ್ತಿದ್ದರೂ ಆಕಾಶವು ಅದರ ಸೋಂಕನ್ನು ಅಂಟಿಸಿಕೊಳ್ಳದಿರುವಂತೆ ತನ್ನಲ್ಲಿ ಜಗತ್ತು ಎಷ್ಟು ಕಾಣುತ್ತಿದ್ದರೂ ಆತ್ಮವು ಅದರ ಸೋಂಕನ್ನೆಷ್ಟು ಮಾತ್ರವೂ ಹತ್ತಿಸಿಕೊಳ್ಳುವದಿಲ್ಲ (ಭ ೯-೬).

(೮) ಅದು ದೂರದಲ್ಲಿರುವದಾಗಿಯೂ ಇರುವದು; ಹತ್ತಿರದಲ್ಲಿರುವದಾಗಿಯೂ ಇರುವದು. ಅದನ್ನು ಬುದ್ಧಿಗೊಳಪಡಿಸಿ ಕಾಣಬೇಕೆಂದರೆ ಸಹಸ್ರಕೋಟಿ ವರ್ಷಗಳು ಹೆಣಗಿದರೂ ದಕ್ಕತಕ್ಕದ್ದಲ್ಲವಾದ್ದರಿಂದ ಅದು ದೂರದಲ್ಲಿರುವದು; ತಿಳಿದವರಿಗೆ ಅದು ಆತ್ಮವೇ ಆದ್ದರಿಂದ ಹತ್ತಿರದ್ದಾಗಿರುವದು. —(ಭ ೧೩-೧೫)

(೯) (ಅ) ಅವನು ಬೇರೆಬೇರೆ ದೇಹಗಳಲ್ಲಿ ಬೇರೆಬೇರೆ ಯೆಂಬಂತೆ ಕಂಡರೂ ಬೇರೆಬೇರೆ ಗಡಿಗೆಗಳಲ್ಲಿ ಬೇರೆಬೇರೆಯಾಗಿ ಕಾಣುವ ಆಕಾಶವು ಹೇಗೆ ಒಂದೋ ಹಾಗೆ ಆತ್ಮವು ಒಂದಾಗಿರುವದು (ಭ ೧೩-೧೬). (**ಆ**) ಅಗ್ನಿಯು ಬೇರೆಬೇರೆ ಆಕಾರದ ಕಟ್ಟಿಗೆಗೆ ಹತ್ತಿ ಉರಿಯುವಾಗ ಹೇಗೆ ಬೇರೆ ಬೇರೆ ಆಕಾರದ್ದಾಗಿ ಕಾಣುವದೊ ಹಾಗೆ ಆತ್ಮವು ಬೇರೆಬೇರೆ ದೇಹಗಳ ಒಳಹೊಕ್ಕು ಬೇರೆಬೇರೆಯಾಗಿ ಕಾಣುವದು. ಅದು ನಿಜವಾಗಿರುವದು ಒಂದು. —(ಕ ೫-೯). (**ಇ**) ಒಂದೇ ವಾಯು ಪ್ರಾಣರೂಪದಿಂದ ಬೇರೆ ಬೇರೆ ದೇಹಗಳೊಳಗಾಡುತ್ತ ಬೇರೆಬೇರೆಯಾಗಿರುವಂತೆ ಆತ್ಮವು ಬೇರೆಬೇರೆ ದೇಹಗಳೊಳಹೊಕ್ಕು ಬೇರೆಬೇರೆಯಾಗಿ ಕಾಣುವದು. ಅದು ನಿಜವಾಗಿರುವದು ಒಂದೆ. —(ಕ ೫-೧೦). (ಈ) ಎಲ್ಲ ಶರೀರಗಳ ಆತ್ಮವೂ ಒಂದೇ ಆದರೆ ಎಲ್ಲ ಶರೀರಗಳಲ್ಲಿ ಆಗುವ ದುಃಖಗಳೂ ಅದಕ್ಕೆ ಗಂಟುಬಿದ್ದೀತೆಂದು ಯೋಚಿಸಬೇಕಾದದ್ದಿಲ್ಲ. ಎಲ್ಲರ ಕಣ್ಣುಗಳೊಳಗೂ ನೋಡುವ ಶಕ್ತಿಯನ್ನು ಕೊಡತಕ್ಕವನಾಗಿರುವ ಸೂರ್ಯನು ಹೊಲಸಾದ ಪದಾರ್ಥಗಳನ್ನು ಬೆಳಗಿದಾಗ ಹೇಗೆ ಅವುಗಳಸೋಂಕನ್ನು ಹೊಂದಿದವನಾಗುವದಿಲ್ಲವೊ ಹಾಗೆ ಎಲ್ಲ ಶರೀರಗಳ ಆತ್ಮನಾದ

ವನು ಆ ಸುಳ್ಳಾದ ಶರೀರಗಳಲ್ಲಾಗುವ ದುಃಖಗಳ ಸೋಂಕನ್ನು ಹೊಂದಿದ ವನಾಗುವದಿಲ್ಲ. —(ಕ ೫-೧೧).

(೧೦) (ಅ) ಹೀಗೆ ದೂರದಿಂದ ಬೆಟ್ಟುಮಾಡಿ ತೋರಿಸುವ ಮಾತುಗಳು ಇನ್ನೂ ಎಷ್ಟೋ ಇವೆ. ಹತ್ತಿರದಲ್ಲಿ ನಿಂತು ತೋರಿಸುವ ಮಾತುಗಳಲ್ಲಿ ಒಂದು ಒಂದೇ ಉಸುರಿನಲ್ಲಿ ಅವನನ್ನು ಸತ್ಯಸ್ವರೂಪವೆಂದೂ ಜ್ಞಾನಸ್ವರೂಪವೆಂದೂ ಅನಂತಸ್ವರೂಪವೆಂದೂ ಕರೆದಿರುತ್ತದೆ. ಸತ್ಯ ಸ್ವರೂಪವೆಂದರೆ ಯಾವಾಗಲೂ ನಿಜವಾಗಿ ಒಂದೇ ರೀತಿಯಲ್ಲಿದ್ದೇ ಇರುವದೆಂದರ್ಥ. ಗಡಿಗೆ ಮೊದಲಾಗಿ ಲೋಕದಲ್ಲಿ ಕಾಣಬರುವ ಪದಾರ್ಥ ಗಳೆಲ್ಲ ಒಂದು ಕಾಲದಲ್ಲಿ ಇರುವಂತೆ ಕಾಣಿಸಿಕೊಂಡು ಇನ್ನೊಂದು ಕಾಲ ದಲ್ಲಿ ಇಲ್ಲದೆ ಹೋಗುವದುಂಟು. ಬ್ರಹ್ಮವು ಹಾಗಲ್ಲ. ಅದು ಯಾವಾ ಗಲೂ ಒಂದೇ ರೀತಿಯಲ್ಲಿ ನಿಜವಾಗಿ ಇದ್ದೇ ಇರುವದು. ಹೀಗೆ ಹೇಳಿದ ರಿಂದ ಅದು ಹೊಸದಾಗಿ ಆದದ್ದಲ್ಲವೆಂದಾಗಿ ಗಡಿಗೆಗೆ ಮಣ್ಣು ಹೇಗೊ ಹಾಗೆ ಕಾರಣಮಾತ್ರವಾದದ್ದೆಂದು ಹೇಳಿದಂತಾಗುವದರಿಂದ ಲೋಕದಲ್ಲಿ ಕಾರಣ ಗಳಾಗುವ ಕಣ್ಣು ಮೊದಲಾದವು ಹೇಗೆ ಜಡವೊ ಹಾಗೆ ಅದೂ ಜಡವಾದ ದ್ದೆಂದು ತಿಳಿಯುವದಕ್ಕೆ ದಾರಿಯುಂಟಾಗಬಹುದು. ಆ ಅಡ್ಡದಾರಿಗೆ ಮುಳ್ಳಿಳೆಯುವದಕ್ಕಾಗಿ ಅದರ ಮುಂದೆಯೇ ಅದು ಜ್ಞಾನಸ್ವರೂಪವೆಂಬ ಮಾತು ಬಂದಿರುವದು. ಇದರಿಂದ ಅದು ಜಡವಲ್ಲವೆಂದು ತಿಳಿಯಬೇಕು. ಜ್ಞಾನವೆಂಬ ಮಾತಿಗೆ ಏನನ್ನಾದರೂ ತಿಳಿಯುವದಕ್ಕೆ ಸಾಧನವಾದ ಅಂತಃ ಕರಣವೆಂದರ್ಥವಲ್ಲ. ಅದು ಒಂದು ಸಾಧನವಾದರೆ ನಿಜವಾಗಿರುವಂಥದ್ದೂ ಆಗುವದಿಲ್ಲ ಮತ್ತು ಕೊನೆ ಇಲ್ಲದ್ದೂ ಆಗುವದಿಲ್ಲ. ಜ್ಞಾನವೆಂದರೆ ತಿಳಿ ವೆಂಬ ಭಾವಾರ್ಥ. ಜ್ಞಾನವೆಂಬ ಮಾತಿಗೆ ಸಾಧನವಾದದ್ದೆಂಬರ್ಥವನ್ನು ತೆಗೆದುಕೊಳ್ಳದಿರಲೆಂದೇ ಅದರ ಮುಂದೆ ಅನಂತವೆಂಬ ಮಾತು ಬಂದಿರು ವದು. ಅನಂತವೆಂದರೆ ಕೊನೆ ಇಲ್ಲದ್ದೆಂದರ್ಥ. ಲೋಕದಲ್ಲಿ ಸಾಧನ ವಾದ ಯಾವದೂ ಕೊನೆ ಇಲ್ಲದ್ದಾಗಿಲ್ಲ. ಬ್ರಹ್ಮವು ಕೊನೆ ಇಲ್ಲದ್ದು. ಇದರಿಂದ ಬ್ರಹ್ಮವು ಸುಳ್ಳಲ್ಲದ್ದೂ ಜಡವಲ್ಲದ್ದೂ ಕೊನೆ ಇಲ್ಲದ್ದೂ ಆಗಿರು ವದೆಂದಾಯಿತು. —(ತೈ ೨-೧). (ಆ) ಮೇಲಿನ ಅಭಿಪ್ರಾಯವನ್ನು

ಇನ್ನೂ ಸಣ್ಣ ದುವಾಡಿ ಅದನ್ನು ಇನ್ನೊಂದು ಕಡೆ ಜ್ಞಾನವೆಂದು ಕರೆದಿರು ವರು. ಏಕೆಂದರೆ: ಈ ಜಗತ್ತೆಲ್ಲ ಜ್ಞಾನದಲ್ಲಿ ಹುಟ್ಟಿ ಜ್ಞಾನದಲ್ಲಿದ್ದು ಜ್ಞಾನ ದಲ್ಲಿ ಅಡಗತಕ್ಕದ್ದಾಗಿರುವದು. ಜ್ಞಾನದ ಸಂಬಂಧವಿಲ್ಲದೆ ಜಗತ್ತು ಕಾಣಿ ಸಿಕೊಳ್ಳುವದಕ್ಕೆ ದಾರಿ ಇಲ್ಲ. ಆದ್ದರಿಂದ ಜಗತ್ತು ಜ್ಞಾನದೊಳಗೆ ಕಟ್ಟುಬಿದ್ದದ್ದು. ಅಥವಾ ಜ್ಞಾನವೆಂಬುದು ಎಲ್ಲರಿಗೂ ಬಹು ಬೆಲೆಯುಳ್ಳ ಒಂದು ಕಣ್ಣಾಗಿರುವದು. ಆದ್ದರಿಂದ ಜ್ಞಾನವೆಂಬುದು ಬ್ರಹ್ಮ. ಈ ಜ್ಞಾನವನ್ನು ಜಗತ್ತಿನ ಎಲ್ಲ ಸಂಬಂಧದಿಂದ ಕೆಲಕ್ಕೆ ಸರಿಸಿ ನೋಡಿದಾಗ ಅದು ಎರಡನೆಯದಿಲ್ಲದ ಒಂದೇ ಒಂದಾಗಿರುವದು. ಅದೇ ಒಳ್ಳೆ ಸತ್ತ್ವ ಗುಣದೊಡನೆ ಸಂಬಂಧಗೊಂಡಾಗ ಜಗತ್ತಿನ ಬೀಜವನ್ನೊಳಗೊಂಡಿರುವ ಈಶ್ವರನೆನಿಸುವದು. ಜಗತ್ತಿನ ಬೀಜದಿಂದ ಮೊಳೆತ ಬುದ್ಧಿಯಲ್ಲಿ ಅಭಿ ಮಾನಗೊಂಡಾಗ ಅದೇ ಹಿರಣ್ಯಗರ್ಭನೆನಿಸುವದು —(ಐ ೩-೨,೪). (ಇ) ಜ್ಞಾನವೆಂದರೆ ತಿಳಿವಿನ ಸಾಧನವಲ್ಲವೆಂಬರ್ಥವನ್ನು ನೆನಪಿನಲ್ಲಿಡಬೇಕು. ತಿಳಿವುಗಳಾಗುವಾಗ ಬುದ್ಧಿಯು ಯಾವ ವಸ್ತುಗಳನ್ನು ತಿಳಿಯುವದೊ ಆ ವಸ್ತುಗಳ ಆಕಾರಗಳನ್ನು ಪಡೆಯುವದಷ್ಟೆ. ಅದು ಬ್ರಹ್ಮವಲ್ಲ. ಆ ಬುದ್ಧಿಯ ಆಕಾರಗಳಿಗಿಂತ ಬೇರೆಯಾಗಿ ಅವುಗಳನ್ನು ಅರಿಯುವ ಸಾಕ್ಷಿ ಯಾದ ಜ್ಞಾನವು ಬ್ರಹ್ಮ. —(ಕೇ ೨-೪)

## ಆತ್ಮನ ವಿಭೂತಿ

(ಅ) ಆತ್ಮನನ್ನು ಹೀಗೆಂದು ಬೆಟ್ಟಿಟ್ಟು ತೋರಿಸುತ್ತ ನಿರೂಪಿಸುವದ ಕ್ಕಾಗದ ಮೇಲೆ ಅದಿನ್ನು ನಮಗೆ ಹೇಗೆ ಹೊಳೆದೀತೆಂದು ನಿರಾಶರಾಗಬೇ ಕಾದದ್ದಿಲ್ಲ. ಎಲ್ಲವುಗಳ ಹೊಳಪಿಗೂ ಅದರ ಹೊಳಪು ಮೂಲ. ಸೂರ್ಯನು ಎಲ್ಲವನ್ನೂ ಬೆಳಗುವವನಾದರೂ ಆತ್ಮನನ್ನು ಬೆಳಗುವದಿಲ್ಲ. ಆತ್ಮನ ಬೆಳ ಕಿನಿಂದಲೆ ಅವನು ಎಲ್ಲವನ್ನೂ ಬೆಳಗುವವನಾಗಿರುವನು. ಅವನ ಆ ಬೆಳ ಗುವ ಶಕ್ತಿಯು ಸ್ವಂತದ್ದಲ್ಲ; ಆತ್ಮನಿಂದ ಕಡವಾಗಿ ಬಂದದ್ದು. ಅವನಂ ತೆಯೆ ಚಂದ್ರನಾಗಲಿ, ನಕ್ಷತ್ರಗಳಾಗಲಿ, ಮಿಂಚುಗಳಾಗಲಿ ಬ್ರಹ್ಮವನ್ನು ಬೆಳಗಲಾರವು. ಬಹು ಮೇಲಿರುವ ಅವುಗಳ ಪಾಡೇ ಹೀಗಾದ ಮೇಲೆ ಭೂಮಿಯ ಮೇಲಿರುವ ಅಗ್ನಿಯ ಪಾಡಿನ್ನೇನು! ಜಗತ್ತಿನಲ್ಲಿ ಬೆಳಗುವದೆಲ್ಲ

ಬ್ರಹ್ಮದ ಬೆಳಕಿನಿಂದ ಬೆಳಗುತ್ತದೆ. ಬೆಂಕಿಯು ಸುಡುವದನ್ನು ಹಿಂಬಾಲಿಸಿ ನೀರೂ ಕೊಳಿಯೂ ಸುಡುವವೆ ಹೊರತು ತಾವು ತಾವೆ ಹೇಗೆ ಸುಡಲಾರವೊ ಹಾಗೆ ಸೂರ್ಯ ಮೊದಲಾದವರು ತಾವಾಗಿ ಬೆಳಗಲಾರರು. —(ಮುಂ ೨-೨-೧೦). (ಆ) ಚೈತನ್ಯವೆಂಬ ಬೆಳಕು ಎಲ್ಲ ವಸ್ತುಗಳಲ್ಲಿಯೂ ಇರುವಾಗ ಸೂರ್ಯನಲ್ಲಿರುವ ಬೆಳಕು ಆತ್ಮನದೆಂದು ಹೇಳುವದಕ್ಕೆ ಕಾರಣವೇನೆಂದರೆ ಅದರಲ್ಲಿ ಬೆಳಕು ಹೆಚ್ಚು. ಆದರಿಂದ ಅದನ್ನು ಹೆಸರು ಹಿಡಿದು ಹೇಳಿದ್ದಾಗಿರುವದು. ಸತ್ತ್ವಗುಣವು ಹೆಚ್ಚಿದಷ್ಟೂ ಈ ಹೊಳಪು ಹೆಚ್ಚುವದು. ನಮ್ಮ ಮುಖವು ತಾನಿರುವಂತೆ ಇದ್ದರೂ ಕಟ್ಟಿಗೆಯಲ್ಲಿಯೂ ಗೋಡೆಯಲ್ಲಿಯೂ ಅದು ಪ್ರತಿಬಿಂಬಿಸುವದಿಲ್ಲ; ಹೊಲಸಿಲ್ಲದ ಕನ್ನಡಿ ಮೊದಲಾದವುಗಳಲ್ಲಿ ಪ್ರತಿಬಿಂಬಿಸುತ್ತದೆ. ಅದರಂತೆ ಸೂರ್ಯನಲ್ಲಿ ಹೊಳಪು ಹೆಚ್ಚಾಗಿರುವದರಿಂದ ಅದನ್ನು ಉದಾಹರಣೆಗೆ ತೆಗೆದುಕೊಳ್ಳಲಾಗಿರುವದು. —(ಭ ೧೫-೧೨)

ಬ್ರಹ್ಮವು ಭೂಮಿಯ ಒಳಹೊಕ್ಕು ತನ್ನ ಬಲದಿಂದ ಸಮಸ್ತ ಪ್ರಾಣಿಗಳನ್ನೂ ವಸ್ತುಗಳನ್ನೂ ಎತ್ತಿ ಹಿಡಿದುಕೊಂಡಿರುವದು. ಬ್ರಹ್ಮವು ಒಳಹೊಕ್ಕಿರುವದರಿಂದಲೆ ಇಷ್ಟು ದೊಡ್ಡ ಭೂಮಿಯು ಕೆಳಕ್ಕೆ ಬಿದ್ದುಹೋಗದೆಯೂ ಒಡೆದು ಹೋಗದೆಯೂ ಗಟ್ಟಿಯಾಗಿರುವದು. —(ಭ ೧೫-೧೩)

ಬ್ರಹ್ಮವು ರಸಸ್ವರೂಪನಾದ ಚಂದ್ರನಾಗಿ ಭೂಮಿಯಿಂದ ಮೇಲಕ್ಕೆದ್ದು ಬತ್ತ, ಗೋದಿ-ಮೊದಲಾದ ಸಸಿಗಳಿಗೆ ರಸವನ್ನು ತುಂಬಿ ರುಚಿಯನ್ನು ಉಂಟುಮಾಡುವದು (ಭ ೧೫-೧೩).

ಎಲ್ಲ ಪ್ರಾಣಿಗಳ ಹೊಟ್ಟೆಯಲ್ಲಿ ತಿಂದದ್ದನ್ನು ಅರಗಿಸುವ ಅಗ್ನಿಯಾಗಿ ಬ್ರಹ್ಮವು ಪ್ರಾಣ, ಅಪಾನ-ಮೊದಲಾದ ವಾಯುಗಳಿಂದ ಕೂಡಿ ಆಹಾರವನ್ನೆಲ್ಲ ಕರಗಿಸಿ ರಕ್ತಕ್ಕೆ ಸೇರಿಕೊಳ್ಳುವದಕ್ಕೆ ತಕ್ಕದ್ದನ್ನಾಗಿ ಮಾಡುವದು. ತಿನ್ನುವವನು ಅಗ್ನಿಯೆಂದೂ ತಿನ್ನುವ ಅನ್ನವು ಸೋಮ (ಚಂದ್ರ)ನಿಂದ ಪುಷ್ಟಿಗೊಂಡದ್ದಾದ್ದರಿಂದ ಸೋಮನೆಂದೂ ಭಾವಿಸಿ ಊಟವನ್ನು ಅಗ್ನೀಷೋಮವೆಂದು ನೋಡುವವರಿಗೆ ಅನ್ನದೋಷದ ಸೋಂಕು ತಗಲುವದಿಲ್ಲ.

—(ಭ ೧೫-೧೪)

ಬ್ರಹ್ಮವು ಎಲ್ಲ ಪ್ರಾಣಿಗಳ ಬುದ್ಧಿಯೆಂಬ ಗುಹೆಯಲ್ಲಿ ಒಳಹೊಕ್ಕಿರುವದು. ಆದ್ದರಿಂದ ಎಲ್ಲರಿಗೂ ತಿಳಿವಾಗುವದೂ ನೆನಪಾಗುವದೂ ನೆನಪು ಹಾರುವದೂ ಎಲ್ಲ ಬ್ರಹ್ಮದಿಂದಲೆ. ಪುಣ್ಯವನ್ನು ಮಾಡಿದವರಿಗೆ ಅವರ ಪುಣ್ಯಕ್ಕೆ ತಕ್ಕಂತೆ ಜ್ಞಾನವೂ ನೆನಪೂ ಆಗುತ್ತವೆ; ಪಾಪವನ್ನು ಮಾಡಿದವರಿಗೆ ಅವರ ಪಾಪಕ್ಕೆ ಫಲವಾಗಿ ಅವು ಹಾರಿಹೋಗುತ್ತವೆ. —(ಛ ೧೫-೧೬)

## ಆತ್ಮನನ್ನರಿತ ಗುರುತು

ಇಷ್ಟೆಲ್ಲ ಹೇಳಿದ್ದನ್ನು ಕೇಳಿ ಯಾರಿಗಾದರೂ ತಮಗೆ ಅದು ಚೆನ್ನಾಗಿ ತಿಳಿಯಿತೆಂದು ನಂಬಿಕೆಯುಂಟಾಗಬೇಕಾದದ್ದು ಅಗತ್ಯವೇ ಸರಿ. ಆದರೆ ಅದರಲ್ಲೊಂದೆಚ್ಚರಿಕೆ ಇರಬೇಕಾಗಿದೆ. ಬುದ್ಧಿಗೆ ಒಳಗಾಗುವ ವಸ್ತುವನ್ನು ಚೆನ್ನಾಗಿ ತಿಳಿಯಬಹುದು. ಅಗ್ನಿಯು ತನ್ನ ಬಾಯಿಗೆ ತುತ್ತಾದ ಕಟ್ಟಿಗೆಯನ್ನು ಸುಟ್ಟೀತೇ ಹೊರತು ತನ್ನನ್ನೇ ತಾನು ಹೇಗೆ ಸುಟ್ಟೀತು? ಬ್ರಹ್ಮವೆಂಬುದು ಎಲ್ಲರ ಆತ್ಮ. ಅದು ತಿಳಿದದ್ದಕ್ಕಿಂತಲೂ ಬೇರೆಯೆಂದೂ ತಿಳಿಯದ್ದಕ್ಕಿಂತಲೂ ಬೇರೆಯೆಂದೂ ಹಿಂದೆ ಒಮ್ಮೆ ಮಾತು ಬಂದಿದೆ. ಆದ್ದರಿಂದ ತಮಗೆ ಅದು ಚೆನ್ನಾಗಿ ತಿಳಿಯಿತೆಂಬ ಭಾವನೆಯನ್ನು ಹೋಗಲಾಡಿಸಬೇಕಾಗಿದೆ. ಬ್ರಹ್ಮವೇ ಎಲ್ಲವನ್ನೂ ತಿಳಿಯುವದಾದ್ದರಿಂದ ಅದನ್ನು ತಿಳಿವಿಗೊಳಮಾಡಿಕೊಳ್ಳುವದು ಸಾಗದ ಮಾತು. ಇವರ ಮೇಲೆ ವೇದಾಂತವನ್ನು ಕೇಳಿದವರೆಲ್ಲ ಅದನ್ನು ಚೆನ್ನಾಗಿ ತಿಳಿದುಕೊಳ್ಳುವರೆಂದು ಹೇಳುವದಕ್ಕೆ ಬರುವದಿಲ್ಲ. ಪಾಪದ ಕಲೆಗಳೆಲ್ಲ ಅಳಿಸಿ ಹೋಗಿರುವ ತಿಳಿಬುದ್ಧಿಯ ಯಾವನೋ ಒಬ್ಬನು ತಿಳಿಯುವನೇ ಹೊರತು ಉಳಿದವರಲ್ಲಿ ಅದು ಬೇರು ಬಿಡುವದಿಲ್ಲ. ಕಣ್ಣೊಳಗೆ ಕಾಣುವ ಪುರುಷನೆ ಆತ್ಮನೆಂದು ಬ್ರಹ್ಮನ ಬಾಯಿಂದ ದೇವತೆಗಳೊಡೆಯನಾದ ಇಂದ್ರನೂ ಕೇಳಿದನು; ರಾಕ್ಷಸರ ಅಧಿಪತಿಯಾದ ವಿರೋಚನನೂ ಕೇಳಿದನು. ವಿರೋಚನನು ಬುದ್ಧಿಶಾಲಿಯಾಗಿದ್ದರೂ ಅವನ ಬುದ್ಧಿಯಲ್ಲಿ ಪಾಪದ ಕಲೆಗಳಿದ್ದದ್ದರಿಂದ ದೇಹವನ್ನೆ ಆತ್ಮನೆಂದು ತಪ್ಪು ತಿಳಿದುಕೊಂಡನು. ಇಂದ್ರನಿಗೂ ಆ ಮಾತು ಎರಡುಮೂರು ಬಾರಿ ಕಿವಿಗೆ ಬಿದ್ದರೂ ಬುದ್ಧಿಯ ಹೊಲಸಿನ್ನೂ ಹೋಗದೆ ಇದ್ದದ್ದರಿಂದ ತಿಳಿಯಲಾರದೆ ನಾಲ್ಕನೆ ಸಲ ನಿಜವನ್ನರಿತನು. ಇದರಂತೆ

ಒಬ್ಬ ಗುರುವಿನ ಶಿಷ್ಯರಲ್ಲಿಯೇ ಒಬ್ಬನು ಸರಿಯಾಗಿ ತಿಳಿದುಕೊಳ್ಳುತ್ತಾನೆ; ಇನ್ನೊಬ್ಬನು ತಪ್ಪುತಿಳಿದುಕೊಳ್ಳುತ್ತಾನೆ; ಮತ್ತೊಬ್ಬನು ಏನನ್ನೂ ತಿಳಿದು ಕೊಳ್ಳುವದೇ ಇಲ್ಲ. ಆದ್ದರಿಂದ ತಮಗೆ ಚೆನ್ನಾಗಿ ತಿಳಿಯಿತೆನ್ನುವಾಗಲೂ ಸರಿಯಾಗಿ ತಿಳಿಯದಿರುವ ಸಂಭವ ಉಂಟು. —(ಕೇ ೨-೧)

ನಿಜವನ್ನರಿತವನ ಭಾವನೆ ಹೇಗಿರುವದೆಂದರೆ: ತನಗೆ ಅದು ಚೆನ್ನಾಗಿ ತಿಳಿಯಿತೆಂದೂ ಇಲ್ಲ; ತಿಳಿಯಲಿಲ್ಲವೆಂದೂ ಇಲ್ಲ. ಎಂದರೆ ತಿಳಿದೂ ಇದೆ; ತಿಳಿಯದೆಯೂ ಇದೆ. ಈ ಮಾತುಗಳು ಒಂದಕ್ಕೊಂದು ಎದುರಾಳಿಗಳಾಗಿ ಕಾಣಬರುವವು. ಚೆನ್ನಾಗಿ ತಿಳಿಯಿತೆನ್ನದಿದ್ದರೆ ತಿಳಿಯಿತೆನ್ನುವದು ಹೇಗೆ? ತಿಳಿಯಿತೆಂದೇ ಹೇಳುವದಾದರೆ ಚೆನ್ನಾಗಿ ತಿಳಿಯಿತೆನ್ನದಿರುವದೇಕೆ? ಇವಕ್ಕೆ ಸಮಾಧಾನವಿಷ್ಟು. ಯಾರಿಗೆ ಬ್ರಹ್ಮವು ತಿಳಿಯಲಿಲ್ಲವೆನಿಸಿತೊ ಅವನಿಗೆ ಅದು ತಿಳಿಯಿತು. ಯಾರಿಗೆ ಅದು ತಿಳಿಯಿತೆನಿಸಿತೊ ಅವನಿಗೆ ಅದು ತಿಳಿಯಲಿಲ್ಲ. ಚೆನ್ನಾಗಿ ತಿಳಿಯಿತೆನ್ನುವಾಗ ಅವನು ಇಂದ್ರಿಯಗಳನ್ನೂ ಮನಸ್ಸನ್ನೂ ಬುದ್ಧಿಯನ್ನೂ ಆತ್ಮವಾಗಿ ತಿಳಿದಿರುತ್ತಾನೆ. ಅದ್ದರಿಂದ ಅವನಿಗೆ ನಿಜವಾದ ಬ್ರಹ್ಮದ ಅರಿವಾಗಲಿಲ್ಲ. —(ಕೇ ೨-೨,೩)

ಬ್ರಹ್ಮದ ಅರಿವಾದಾಗ ಅದರ ಫಲವು ಕಾಣಬರುತ್ತದೆ. ಅದೇನೆಂದರೆ: ಬುದ್ಧಿಯನ್ನು ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿದ್ದ ಬಯಕೆಗಳೆಲ್ಲ ಬಟ್ಟಬಯಲಾಗಿ ಹೋಗುತ್ತವೆ. ಲೋಕದಲ್ಲಿ ಕಾಣಬರುವ ವಸ್ತುಗಳ ವಿಷಯವಾಗಿ ಸಾಯುವವರೆಗೂ ಗಂಗಾಪ್ರವಾಹದಂತೆ ಎಡೆಬಿಡದೆ ಬರುವ ಸಂದೇಹಗಳೆಲ್ಲ ಕತ್ತರಿಸಿ ಹೋಗುತ್ತವೆ. ಹೀಗಾಗಿ ನಮಗೆ ಫಲವನ್ನು ಕೊಡುವದಕ್ಕೆ ಮುಂದೆ ಬರದೆ ರಾಶಿರಾಶಿಯಾಗಿ ಹಿಂದೆ ಗುಪ್ಪೆಯಾಗಿರುವ ಕರ್ಮಗಳೂ ಜ್ಞಾನವಾದ ಮೇಲೆ ನಡೆಯುವ ಕರ್ಮಗಳೂ ನಾಶವಾಗುವವು. ಈ ಹುಟ್ಟಿಗೆ ಗಂಟುಬಿದ್ದಿರುವ ಕರ್ಮಗಳು ಮಾತ್ರ ಫಲವನ್ನು ಕೊಡುತ್ತಿರುವವು. —(ಮುಂ ೨-೨-೮)

ಬ್ರಹ್ಮವನ್ನರಿತವನಿಗೆ ಆ ಅರಿವಿನಿಂದಲೆ ತೃಪ್ತಿಯುಂಟಾಗಿರುವದು. ಅವರಿಗೆ ದೇಹವನ್ನು ಬೆಳೆಸಿ ತೃಪ್ತಿಯನ್ನುಂಟುಮಾಡುವ ಹೊರಗಣ ಸಾಧನಗಳೇನೂ ಬೇಕೆನಿಸುವದಿಲ್ಲ. ಅವರಿಗೆ ಒಂದರ ಮೇಲೆ ಪ್ರೀತಿಯೂ

ಒಂದರ ಮೇಲೆ ಹಗೆತನವೂ ಇರುವದಿಲ್ಲ. ಅವರ ಇಂದ್ರಿಯಗಳು ಹರಿದಾಟವನ್ನು ಬಿಟ್ಟು ತೆಪ್ಪಗಿರುವವು. ಎರಡನೆಯದಿಲ್ಲದ ಬ್ರಹ್ಮವೆ ತಮ್ಮ ಆತ್ಮವೆಂದರಿತ ಬುದ್ಧಿಶಾಲಿಗಳು ಶಾಂತರಾಗಿದ್ದು ದೇಹವು ಬಿದ್ದುಹೋದ ಮೇಲೆ, ಒಡೆದ ಗಡಿಗೆಯ ಬಯಲು ದೊಡ್ಡ ಬಯಲಿನಲ್ಲಿ ಸೇರುವಂತೆ ಬ್ರಹ್ಮದಲ್ಲಿ ಸೇರುತ್ತಾರೆ. —(ಮುಂ ೩-೨-೫)

ವೇದಾಂತವನ್ನು ಕೇಳಿದ್ದರಿಂದ ಉಂಟಾದ ತಿಳಿವಳಿಕೆಯಿಂದ ಪರಮಾತ್ಮಸ್ವರೂಪವನ್ನು ಚೆನ್ನಾಗಿ ಗೊತ್ತುಮಾಡಿಕೊಂಡು ತಮಗೆ ಕರ್ಮಗಳಿಂದಾಗಬೇಕಾದದ್ದಿನ್ನೇನೆಂದು ಎಲ್ಲಕ್ಕೂ ಸೇರುಬಿಟ್ಟು ಬ್ರಹ್ಮವನ್ನೇ ಹೇಳುತ್ತ ಕೇಳುತ್ತ ತಿಳಿಯುತ್ತ ಬ್ರಹ್ಮದಲ್ಲಿಯೇ ಇರುವ ಯತ್ನವುಳ್ಳವರಾಗಿ ತಿಳಿಯಾದ ಬುದ್ಧಿಯುಳ್ಳ ಅವರು ಬದುಕಿರುವಾಗಲೂ ಬ್ರಹ್ಮವಾಗಿದ್ದು ತಮ್ಮ ಕೊನೆಯ ದೇಹವನ್ನು ಬಿಡುತ್ತಲೆ ಬ್ರಹ್ಮದಲ್ಲಿ ಒಂದಾಗುತ್ತಾರೆ. ಸಂಸಾರಿಗಳು ಹೇಗೆ ಬೇರೆ ಲೋಕಗಳಿಗೆ ಹೋಗುತ್ತಾರೊ ಇವರು ಹಾಗೆ ಎಲ್ಲಿಗೂ ಹೋಗುವದಿಲ್ಲ. —(ಮುಂ ೩-೨-೬)

ಬ್ರಹ್ಮವನ್ನರಿತವನಿಗೆ ಯಾವದೂ ಹೆದರಿಕೆಯನ್ನುಂಟುಮಾಡಲಾರದು. ತನಗೆರಡನೆಯದೆಂಬುದೊಂದಿದ್ದರೆ ಅವನಿಗೆ ಹೆದರಿಕೆಯಾದೀತು. ಅದಿಲ್ಲ. ಕಣ್ಣಿನ ದೋಷವು ಹೋಗುತ್ತಲೆ ಆಕಾಶದಲ್ಲಿ ಎರಡಾಗಿ ಕಾಣುತ್ತಿದ್ದ ಚಂದ್ರರು ಒಂದಾಗುವಂತೆ ಬ್ರಹ್ಮದ ಅರಿವಾಗುತ್ತಲೆ ಎರಡನೆಯದೆಲ್ಲ ಮಾಯವಾಗುವದು. ಪುಣ್ಯವನ್ನು ಮಾಡದೆ ಇದ್ದದ್ದಕ್ಕಾಗಿ ಅಥವಾ ಪಾಪವನ್ನು ಮಾಡಿದ್ದಕ್ಕಾಗಿ ಅವನ ಮನಸ್ಸಿಗೆ ತಳಮಳವಾಗುವದಿಲ್ಲ; ಏಕೆಂದರೆ: ಈ ಕರ್ಮಗಳೆಲ್ಲ ತಳಮಳವನ್ನುಂಟುಮಾಡತಕ್ಕವುಗಳೆಂದರಿತೇ ಅವನು ಮೊದಲೇ ತಾನಾಗಿಯೇ ಅವುಗಳನ್ನು ದೂರಮಾಡಿ ಪರಮಾತ್ಮ ಭಾವನೆಯನ್ನು ವೈಗೂಡಿಸಿಕೊಂಡಿರುವನು. ಅವನ ದೃಷ್ಟಿಯಿಂದ ಪುಣ್ಯಪಾಪಗಳೆಂಬುವು ಆತ್ಮನನ್ನು ಬಿಟ್ಟು ಬೇರೆ ಇಲ್ಲ. ಅವನು ಅವುಗಳನ್ನೂ ಆತ್ಮವಾಗಿಯೇ ಕಾಣುವನು. ಆದ್ದರಿಂದಲೇ ಆ ಕರ್ಮಗಳ ಜೀವವೆಲ್ಲ ಹಾರಿ ಹೋಗಿ ಅವು ಅವನಿಗೆ ಮತ್ತೆ ಹುಟ್ಟುಸಾವುಗಳನ್ನು ಕೊಡುವ ಶಕ್ತಿಯನ್ನು ಕಳೆದುಕೊಳ್ಳುವವು. —(ತೈ ೨-೯)

ಗುರುಗಳಿಂದಲೂ ಶಾಸ್ತ್ರಗಳಿಂದಲೂ ಬ್ರಹ್ಮವನ್ನರಿತ ಬುದ್ಧಿಶಾಲಿಯು ಅದನ್ನು ಚೆನ್ನಾಗಿ ಹಣ್ಣುಮಾಡಿಕೊಳ್ಳಬೇಕು. ಆ ಅರಿವನ್ನು ಹಣ್ಣುಮಾಡಬೇಕೆನ್ನುವವನು ಅದನ್ನು ಸಂನ್ಯಾಸ, ಮನೋನಿಗ್ರಹ, ಇಂದ್ರಿಯನಿಗ್ರಹ ವ್ಯವಹಾರದಿಂದ ಹಿಮ್ಮೆಟ್ಟಿರುವದು, ಸುಖದುಃಖಗಳನ್ನು ಸಮವಾಗಿ ಭಾವಿಸುವದು, ಬ್ರಹ್ಮಚಿಂತನೆ-ಈ ಸಾಧನಗಳಲ್ಲಿ ಒತ್ತೀಹಾಕಬೇಕು. ಬೇರೆ ಬೇರೆ ಶಾಸ್ತ್ರಗಳನ್ನು ಕಲಿಯುವ ಗೋಜಿಗೆ ಹೋಗಬಾರದು. ಬ್ರಹ್ಮಜ್ಞಾನದ ಸಂಬಂಧವಾದ ಮಾತುಗಳನ್ನು ಮಾತ್ರವೇ ಬಳಸುತ್ತಿರಬೇಕು. ಅದೊಂದೇ ಮೋಕ್ಷವೆಂಬ ಅಮೃತರಸವನ್ನು ಹಿಡಿದಿಟ್ಟುಕೊಂಡಿರುವ ಕಟ್ಟಿ ಉಳಿದ ಮಾತುಗಳು ಬರೀ ಬಾಯಿನೋವಿಗೆ ಮಾತ್ರ ಕಾರಣಗಳಾಗುವವು.

—(ಬೃ ೪-೪-೨೧)

ಪ್ರತಿಯೊಬ್ಬರಲ್ಲಿಯೂ ದೇಹ, ಇಂದ್ರಿಯ, ಮನಸ್ಸು, ಬುದ್ಧಿ-ಇವುಗಳೊಳಗೆ ಒಬ್ಬನೆ ಪರಮಾತ್ಮನು ಒಂದೇ ರೀತಿಯಲ್ಲಿರುವನೆಂದೂ ಅವುಗಳೆಲ್ಲ ನಾಶವಾದರೂ ಪರಮಾತ್ಮನು ನಾಶವಾಗದಿರತಕ್ಕವನೆಂದೂ ಯಾವನು ನೋಡುತ್ತಾನೊ ಅವನು ಸರಿಯಾಗಿ ನೋಡಿದವನಾಗುತ್ತಾನೆ. ಲೋಕದಲ್ಲಿ ಎಲ್ಲರೂ ನೋಡುತ್ತಾರೆ; ನಿಜ. ಆದರೆ ಕಣ್ಣಿನಲ್ಲಿ ದೋಷವುಳ್ಳವರು ಇಬ್ಬರು ಚಂದ್ರರನ್ನು ನೋಡುವಂತೆ ಕೆಲವರು ತಪ್ಪಾಗಿ ನೋಡುತ್ತಾರೆ. ಒಬ್ಬ ಚಂದ್ರನನ್ನು ನೋಡುವವನೆ ಹೇಗೆ ಸರಿಯಾಗಿ ನೋಡುವವನೊ ಹಾಗೆ ಪ್ರತಿಯೊಬ್ಬರಲ್ಲಿಯೂ ಬೇರೆಬೇರೆ ಆತ್ಮನನ್ನು ನೋಡುವವರಿಗಿಂತಲೂ ಒಬ್ಬ ಆತ್ಮನನ್ನಾಗಿಯೇ ನೋಡುವವರು ಸರಿಯಾಗಿ ನೋಡುವವರಾಗಿರುವರು. ಎಲ್ಲ ಪ್ರಾಣಿಗಳಲ್ಲಿಯೂ ಇರುವ ಆತ್ಮನು ತಾನೊಬ್ಬನೇ ಎಂದು ತಿಳಿದವನು ತನ್ನನ್ನು ತಾನು ಕೊಂದುಕೊಂಡ ದೋಷವಿಲ್ಲದವನಾಗುತ್ತಾನೆ. ಒಂದೊಂದು ದೇಹದಲ್ಲಿ ಒಬ್ಬೊಬ್ಬರೆಂದು ತಿಳಿದಾಗ ಆ ದೇಹಗಳಲ್ಲೆಲ್ಲ ತನ್ನ ಆತ್ಮವೇ ಇದ್ದರೂ ಅದನ್ನು ಇಲ್ಲದಂತೆ ಕಂಡದ್ದರಿಂದ ಅವನು ತನ್ನನ್ನು ತಾನು ಕೊಂದುಕೊಂಡವನಾಗುತ್ತಾನೆ. ತನ್ನ ಆತ್ಮವೇ ಎಲ್ಲರಲ್ಲಿಯೂ ಇರುವದೆಂದು ಕಾಣುವವನು ಸರಿಯಾಗಿ ನೋಡುವವನಾದ್ದರಿಂದ ಮೋಕ್ಷವನ್ನು ಪಡೆಯುತ್ತಾನೆ. —(ಭ ೧೩-೨೭,೨೮)

# ೮—ಅವತಾರ ಮತ್ತು ಗುರು

## ಅವತಾರದ ಗುಟ್ಟು

ಬ್ರಹ್ಮದಲ್ಲಿ ಹುಟ್ಟುವಿಕೆಯ ಸಂಬಂಧವೆಳ್ಳಷ್ಟೂ ಇಲ್ಲ. ಜಗತ್ತಿನಲ್ಲಿ ಹುಟ್ಟುವಿಕೆಯೆಂಬುದೇ ಮೊದಲನೆಯ ಬದಲಾವಣೆ. ಅದಕ್ಕೊಳಗಾದವುಗಳು ಬೆಳೆಯುವದು, ಸೊರಗುವದು-ಮೊದಲಾದ ಎಷ್ಟೋ ಬದಲಾವಣೆಗಳನ್ನು ಹೊಂದುತ್ತವೆ. ಇವುಗಳಲ್ಲಿ ನಾಶವೆಂಬುದು ಕೊನೆಯ ಬದಲಾವಣೆ. ಬ್ರಹ್ಮವು ಮೊದಲನೆಯ ಬದಲಾವಣೆಗೇ ಸಿಕ್ಕದೆ ಇರುವದರಿಂದ ಅದಕ್ಕೆ ಕೊನೆಯ ಬದಲಾವಣೆಯ ಸೋಂಕೂ ಇಲ್ಲದಿರುವದು ಸಹಜವಾಗಿದೆ. ಸಮಸ್ತಜಗತ್ತಿಗೂ ಆಧಾರವಾದ ಬ್ರಹ್ಮದ ಈ ಸ್ವರೂಪವನ್ನು ಅರಿಯುವದು ಬಹು ಕಷ್ಟ. ಯಾವದನ್ನು ಅರಿತ ಹೊರತು ಮನುಷ್ಯನ ಹುಟ್ಟು ಸಾರ್ಥಕವಾಗುವದಿಲ್ಲವೋ ಆ ಬ್ರಹ್ಮವು ಯಾರಿಗೂ ನಿಲುಕದ ಆ ಸ್ಥಿತಿಯಲ್ಲಿಯೇ ಇದ್ದರೆ ಜನರ ಉದ್ಧಾರವಾಗುವದು ಹೇಗೆ? ಜಗತ್ತಿನಲ್ಲಿ ವ್ಯವಹರಿಸುವವರಿಗೆ ಜಗತ್ತಿನ ಕರ್ತನಾದ ಆ ಭಗವಂತನ ದರ್ಶನಕ್ಕಿಷ್ಟು ಮಾತ್ರವೂ ಸೌಲಭ್ಯವಿಲ್ಲದಿದ್ದರೆ ಅದೊಂದು ದೊಡ್ಡ ಕೊರತೆಯೆಂದೇ ಆಗುತ್ತಿತ್ತು. ಈ ಕೊರತೆಯು ಕೂಡ ತನ್ನ ಸೃಷ್ಟಿಯಲ್ಲಿರಬಾರದೆಂದು ಅವನು ಅದಕ್ಕೆ ಪರಿಹಾರವನ್ನು ಕಲ್ಪಿಸಿರುವನು. ಅದೇನೆಂದರೆ: ಯಾವದೊಂದಾಕಾರವೂ ಇಲ್ಲದ ತಾನು ಒಂದಾನೊಂದಾಕಾರವನ್ನು ಧರಿಸಿ ಹುಟ್ಟಿದವನಂತೆ ಕಾಣಿಸಿಕೊಳ್ಳುವದು. ಇದನ್ನೇ ಜನರು ಅವತಾರವೆಂದು ಕರೆಯುವರು. ಅವತಾರವೆಂದರೆ ಇಳಿದು ಬರುವದೆಂದರ್ಥ. ಬ್ರಹ್ಮವು ಮಾತಿಗೂ ಮನಸ್ಸಿಗೂ ಸಿಲುಕದಂಥ ತನ್ನ ಸ್ವರೂಪದ ಉತ್ಕೃಷ್ಟವಾದ ಸ್ಥಿತಿಯನ್ನು ತನ್ನ ಭಕ್ತರಿಗಾಗಿ ಒಳಸರಿಸಿಕೊಂಡು ಎಲ್ಲರಂತೆ ಎಲ್ಲರಿಗೂ ಕಾಣಬರುವ ಒಂದು ಸ್ವರೂಪಕ್ಕೆ ಇಳಿದು ಬರುವದೇ ಅವತಾರ. ಈ ಬೇರೊಂದು ರೂಪಕ್ಕೆ ಇಳಿದು ಬರುವದನ್ನು ನೋಡಿ ಅವನನ್ನು ಎಲ್ಲರಂತೆ ಹುಟ್ಟಿದವನೆನ್ನಬಾರದು. ಏಕೆಂದರೆ: ಲೋಕದಲ್ಲಿ ಹುಟ್ಟುವವರೆಲ್ಲ ತಮ್ಮ ತಮ್ಮ ಹಿಂದಿನ ಪಾಪಪುಣ್ಯಗಳ ಕಟ್ಟಿಗೆ ಸಿಕ್ಕು

ಬಿದ್ದವರಾಗಿ ಹುಟ್ಟುತ್ತಾರೆ. ಬ್ರಹ್ಮದ ಹುಟ್ಟು ಹಾಗಲ್ಲ. ಅದು ಯಾವದ ರಿಂದ ಈ ಜಗತ್ತು ಸುಳ್ಳಾಗಿ ಹೊರಬಿದ್ದಿದೆಯೊ ಯಾವದರ ಕಣ್ಣುಕಟ್ಟಿ ಸಿಂದ ಜನರು ತಮ್ಮ ಆತ್ಮವಾದ ಬ್ರಹ್ಮವನ್ನು ತಿಳಿಯದಂತಾಗಿದೆಯೊ ಆ ತನ್ನ ಮಾಯಾಶಕ್ತಿಯಿಂದ. ಆದ್ದರಿಂದ ಬ್ರಹ್ಮವು ಹುಟ್ಟಿದಂತೆ ಕಾಣು ವದೇ ಹೊರತು ನಿಜವಾಗಿ ಎಲ್ಲರಂತೆ ಹುಟ್ಟುವದೆಂಬ ಬದಲಾವಣೆಯನ್ನು ಹೊಂದುವದಿಲ್ಲ. — (ಭ ೪-೬)

ಈ ಬಗೆಯ ಅವತಾರವು ಅಗತ್ಯವಾದ ಸಮಯದಲ್ಲಿ ಆಗುತ್ತದೆ. ಈಶ್ವರನು ಜಗತ್ತನ್ನು ಹುಟ್ಟಿಸಿದಾಗಲೆ ಅದರಲ್ಲಿರುವ ಪ್ರಾಣಿಗಳು ತಮ್ಮ ಏಳಿ ಗೆಗಾಗಿ ಏನನ್ನು ಮಾಡಬೇಕೆಂದೂ ಏನನ್ನು ಮಾಡಬಾರದೆಂದೂ ತಿಳಿಸುವದ ಕ್ಕಾಗಿ ವೇದಗಳನ್ನು ಹೊರಗಡೆಹಿದ್ದಾನೆ. ಜನರು ಅದನ್ನು ಶ್ರದ್ಧೆಯಿಂದ ನಡೆಸುತ್ತ ಮುಂದೆ ಸಾಗುತ್ತಿರುವಾಗ ಕೆಲಕೆಲವು ಕಾಲದ ಮೇಲೆ ಧರ್ಮದ ಕಟ್ಟುಗಳೆಲ್ಲ ಸಡಿಲಿ ಅಧರ್ಮದ ಆಚಾರಗಳು ಮೇಲಕ್ಕೆದ್ದುಕೊಳ್ಳುತ್ತವೆ. ಅಂಥ ಸಂದರ್ಭದಲ್ಲಿ ಧರ್ಮವನ್ನು ಹುರಿಗೂಡಿಸುವದಕ್ಕಾಗಿ ಆ ವೇದಪುರು ಷನೆ ಇಳಿದು ಬರಬೇಕಾದ ಅಗತ್ಯ ಉಂಟಾಗುತ್ತದೆ. ಆಗ ಅವತಾರವಾಗು ತ್ತದೆ. —(ಭ ೪-೭)

ಅವತಾರದ ಉದ್ದೇಶವೆಂಬುದು ಇನ್ನೂ ವಿವರಿಸಿ ತಿಳಿಯತಕ್ಕದ್ದಾಗಿದೆ. ಜಗತ್ತಿನಲ್ಲಿ ಸುಖವು ತಾಂಡವವಾಡಬೇಕಾದರೆ ಧರ್ಮವಿರಬೇಕು. ಧರ್ಮವು ತಲೆಕೆಳಗಾದರೆ ಜಗತ್ತು ತಲೆಕೆಳಗಾಗುವದು. ತಾನು ಹುಟ್ಟಿಸಿದ ಜಗತ್ತು ಹೀಗೆ ಕೆಡುವದು ಈಶ್ವರನಿಗೆ ಇಷ್ಟವಲ್ಲ. ಜಗತ್ತು ನೆಲೆಯಾಗಿರಬೇಕಾದರೆ ಅದು ತಲೆಕೆಳಗಾಗಿ ಉರುಡಿಕೊಳ್ಳುವ ಸಮಯ ಬಂದಾಗ ಈಶ್ವರನೆ ಅದಕ್ಕೆ ಕೈಗೊಟ್ಟು ಎತ್ತಿ ಹಿಡಿಯಬೇಕೇ ಹೊರತು ಇನ್ನೊಬ್ಬರಿಂದ ಅದು ಆಗುವ ಮಾತಲ್ಲ. ಧರ್ಮವನ್ನು ಹೇಳುವದಕ್ಕೆ ವೇದವು ಸೊಂಟವನ್ನು ಕಟ್ಟಿದ್ದರೂ ಈ ಜಗತ್ತಿನ ಉದ್ಧಾರಕ್ಕೆ ಬರೀ ಬಾಯ ಮಾತಿನ ಉಪದೇಶವು ಎಷ್ಟೋ ಸಂದರ್ಭದಲ್ಲಿ ಸಾಲದೆ ಹೋಗುವದು. ಏಕೆಂದರೆ: ಒಂದೊಂದು ವೇಳೆ ಕೆಲ ಕೆಲವರು ಕೆಲವು ಧರ್ಮಗಳನ್ನು ಮಾತ್ರ ಪಟ್ಟಾಗಿ ಹಿಡಿದು ಅದರಿಂದ ತಮ್ಮೊ ಳಗೆ ಬೇಕಾದಷ್ಟು ಸಾಮರ್ಥ್ಯವನ್ನು ತುಂಬಿಕೊಂಡು ಅದನ್ನು ದುರುಪಯೋಗ

ಮಾಡುವದಕ್ಕೆ ಎದ್ದು ಕೊಳ್ಳುತ್ತಾರೆ. ಧರ್ಮದಿಂದುಂಟಾದ ಬಲವನ್ನು ಜಗತ್ತಿನ ಹಿತಕ್ಕಾಗಿ ಉಪಯೋಗ ಮಾಡದೆ ಕ್ಷುದ್ರವಾದ ತಮ್ಮ ದೇಹೇಂದ್ರಿಯಗಳ ಒಂದುಗಳಿಗೆಯ ಹಿತಕ್ಕಾಗಿ ಉಪಯೋಗಮಾಡುವದೇ ಅದರ ದುರುಪಯೋಗ. ರಾವಣ, ದುರ್ಯೋಧನ - ಮೊದಲಾದವರು ಧರ್ಮವನ್ನು ದುರುಪಯೋಗ ಮಾಡಿದವರಾಗಿ ಬಹಳ ಹಾವಳಿಯನ್ನೆಬ್ಬಿಸಿದರು. ಅವರ ಹುಟ್ಟಡಗಿಸುವದಕ್ಕಾಗಿ ಆಗ ಅವತಾರವಾಗಬೇಕಾಯಿತು. ಹೀಗೆ ಧರ್ಮದಿಂದ ತಮಗುಂಟಾದ ಸಾಮರ್ಥ್ಯವನ್ನು ದುರುಪಯೋಗ ಮಾಡುವವರನ್ನು ತುಳಿದು ಬಿಡುವದಕ್ಕಾಗಿಯೂ ಅವರ ಹಾವಳಿಯಿಂದ ಸಜ್ಜನರಿಗಾಗುತ್ತಿದ್ದ ಹಾನಿಯನ್ನು ತಪ್ಪಿಸುವದಕ್ಕಾಗಿಯೂ ಈಶ್ವರನು ಅವತರಿಸುವನು. ಧರ್ಮದ ಬಲವಿಲ್ಲದವರು ತಮಗೆ ತಾವೇ ನಾಶವಾಗುವದರಿಂದ ಅವರ ಹುಟ್ಟಡಗಿಸುವದಕ್ಕೆ ಈಶ್ವರನೇನೂ ಇಳಿದು ಬರಬೇಕಾಗಿಲ್ಲ. ಧರ್ಮದ ಬಲವುಳ್ಳವರನ್ನು ಸೋಲಿಸುವದು ಬಹು ಕಷ್ಟವಾದ್ದರಿಂದ ಆ ಕೆಲಸಕ್ಕಾಗಿ ಈಶ್ವರನು ತಾನೆ ಬರಬೇಕಾಗುತ್ತದೆ. ಈಶ್ವರನು ಅವತಾರ ಮಾಡಿ ಅಂಥವರ ಸೊಕ್ಕನ್ನು ಮುರಿದರೆ ಸಜ್ಜನರಾದವರು ತಮ್ಮ ಧರ್ಮದಲ್ಲಿ ತಾವು ನಿರ್ಭಯರಾಗಿ ಮುಂದುವರಿಯುವರು. ಇದರಿಂದ ಧರ್ಮಕ್ಕೆ ಮತ್ತೆ ಜೀವಕಳೆ ಬರುವದು.—(ಭ ೪-೮)

ಇದು ಬ್ರಹ್ಮದ ಹುಟ್ಟಿನ ಮತ್ತು ಕರ್ಮದ ಗುಟ್ಟು. ಎಲ್ಲರ ಹುಟ್ಟಿನ ಮತ್ತು ಕರ್ಮದ ಬಗೆಯೇ ಬೇರೆ. ಅದು ಕರ್ಮದ ಕಟ್ಟಿಗೆ ಸಿಕ್ಕಿ ಹುಟ್ಟುವ ಜೀವರ ಯೋಗ್ಯತೆಗೆ ಅನುರೂಪವಾದದ್ದು. ಅವತಾರದ ಹುಟ್ಟಿನ ಮತ್ತು ಕರ್ಮದ ಬಗೆಯೇ ಬೇರೆ. ಇದು ತನ್ನ ಮಾಯಾಶಕ್ತಿಯಿಂದ ಹುಟ್ಟಿದಂತೆ ತೋರ್ಪಡಿಸಿಕೊಳ್ಳುವ ಈಶ್ವರನ ಯೋಗ್ಯತೆಗೆ ಅನುರೂಪವಾದದ್ದು. ಈ ಹುಟ್ಟನ್ನು ಎಲ್ಲರೂ ತಿಳಿದುಕೊಳ್ಳಬೇಕು. ಈ ತಿಳಿವಳಿಕೆಯನ್ನು ಮೈಗೂಡಿಸಿಕೊಂಡರೆ ಮನುಷ್ಯನು ಮತ್ತೆ ಹುಟ್ಟದಂಥ ಉತ್ತಮವಾದ ಗತಿಯನ್ನು ಹೊಂದುವನು. —(ಭ ೪-೯)

## ಅವತಾರದ ಅರಿವಿನ ಫಲ

ಬ್ರಹ್ಮವು ಹೀಗೆ ಹುಟ್ಟಿದರೂ ಅದರ ಆಕಾಶದಂಥ ಅಖಂಡಸ್ವರೂಪವೆಳ್ಳಷ್ಟೂ ಅಚ್ಚಳಿದಿರುವದಿಲ್ಲ. ಏಕೆಂದರೆ: ಅವತಾರವೆಂಬುದು ಮಾಯೆ.

ಸಮಸ್ತಜಗತ್ತನ್ನೂ ಹೊರಗೆಡಹಿದವನಾಗಿಯೂ ಎಲ್ಲರ ಹೃದಯದಲ್ಲಿರುವ ಆತ್ಮನಾಗಿಯೂ ಇರುವ ಈಶ್ವರನ ಈ ಮಹಿಮೆಯ ತತ್ವವನ್ನು ಅರಿಯುವದು ಕಷ್ಟ. ಆದ್ದರಿಂದಲೆ ಅವಿವೇಕಿಗಳಾದವರು ಈ ಅವತಾರಗಳನ್ನು ಮನುಷ್ಯರ ಲೆಕ್ಕದಲ್ಲಿಯೇ ಎಣಿಸುವರು. ಇದರಿಂದ ಅವರು ಈಶ್ವರನನ್ನು ಅವಮಾನಗೊಳಿಸಿದಂತಾಗುವದು. ಬುದ್ಧಿಗೆ ಕೂಡ ಸಿಲುಕದಷ್ಟು ಹೆಚ್ಚಿನ ಯೋಗ್ಯತೆಯುಳ್ಳವನನ್ನು ತೀರ ಕಡಿಮೆಯ ಯೋಗ್ಯತೆಯುಳ್ಳವನನ್ನಾಗಿ ಭಾವಿಸುವದು ಅವಮಾನವಲ್ಲದೆ ಮತ್ತೇನು? ಈಶ್ವರನನ್ನು ಅವಮಾನಗೊಳಿಸಿದರೆ ಅವರಿಗೆ ಹಾನಿ ತಪ್ಪೀತೆ? ಅವರ ಆಸೆಗಳೂ ವ್ಯರ್ಥವಾಗುವವು; ಅವರು ಮಾಡುವ ಕರ್ಮಗಳೂ ವ್ಯರ್ಥವಾಗುವವು; ಅವರ ತಿಳಿವಳಿಕೆಯೂ ವ್ಯರ್ಥವಾಗುವದು. ಅವರು ಅವಿವೇಕಿಗಳಾಗಿ ಹೋಗುವರು. ಅವರು ಕೊನೆಗೆ ದೇಹವನ್ನೇ ಆತ್ಮವೆಂದು ತಿಳಿಯುವವರಾಗಿ ತಮೋಗುಣದ ಆವೇಶದಿಂದ ರಾಕ್ಷಸರ ಸ್ವಭಾವವನ್ನು ಹೊಂದಿ ಮತ್ತೊಬ್ಬರನ್ನು ಹೊಡೆದು ಬಡಿದು ಕಂಡಕಂಡವರ ಒಡವೆಗಳನ್ನು ಬಾಚಿಬಳಿದುಕೊಂಡು ತಿಂದು ತೇಗುವ ಕ್ರೂರಕರ್ಮಿಗಳಾಗುತ್ತಾರೆ. ಮನಸ್ಸನ್ನು ಬಿಗಿಹಿಡಿಯುವದು, ಇಂದ್ರಿಯಗಳನ್ನು ಬಿಗಿಹಿಡಿಯುವದು, ಕನಿಕರ, ಶ್ರದ್ಧೆ-ಮೊದಲಾದ ದೇವತೆಗಳ ಸ್ವಭಾವವನ್ನು ಹೊಂದಿರುವ ಮಹಾನುಭಾವರು ಆ ಅವತಾರಗಳನ್ನು ಜಗತ್ಕಾರಣವಾದ ಬ್ರಹ್ಮವೆಂದೇ ತಿಳಿದು ಸೇವೆಮಾಡುತ್ತಾರೆ. —(ಭ ೯-೧೧..೧೩)

ಆ ಅವತಾರದ ಮೂರ್ತಿಗಳನ್ನು ಎಲ್ಲ ಪ್ರಾಣಿಗಳ ಹೃದಯದಲ್ಲಿಯೂ ಆತ್ಮವಾಗಿರುವ ಈಶ್ವರನೆಂದು ಅಚ್ಚಳಿಯದ ಭಕ್ತಿಯಿಂದ ಸೇವಿಸುವವರು ಸತ್ತ್ವರಜಸ್ತಮೋಗುಣಗಳೆಂಬ ಹಗ್ಗಗಳ ಕಟ್ಟುಗಳನ್ನು ಕಳಚಿಕೊಂಡು ಮೋಕ್ಷವನ್ನು ಹೊಂದುತ್ತಾರೆ. ಅವತಾರಗಳು ನಾಶವಿಲ್ಲದ ಮತ್ತು ಮೋಕ್ಷಸ್ವರೂಪವಾದ ಬ್ರಹ್ಮದ ವಾಸದ ಮನೆಗಳು. ಎಂದೆಂದಿಗೂ ಇರುವ ಧರ್ಮದ ವಿಷಯಕವಾದ ತಿಳಿವಳಿಕೆಗೆ ಅವು ಆಧಾರಸ್ಥಾನಗಳು. ಅವು ಪರಮಸುಖದ ನೆಲೆಮನೆ. —(೧೪-೨೬,೨೭)

## ಗುರುಗಳ ಅಗತ್ಯ

ಹೀಗೆ ಒಮ್ಮೊಮ್ಮೆ ಅವತಾರವಾಗುವದೆಂಬ ಮಾತಿನಿಂದ ಎಷ್ಟೋ ಕಾಲ ಜಗತ್ತಿನಲ್ಲಿ ಅವತಾರವಿಲ್ಲದೆ ಇರುವದೂ ಉಂಟೆಂದು ತಿಳಿಯಬಾರದು.

ಹೆಚ್ಚುಗಟ್ಟಲೆಯ ಅಗತ್ಯವಾದಾಗ ಹೆಚ್ಚಿನ ಅವತಾರವಾಗುವದು. ನಿತ್ಯಗಟ್ಟಲೆಯಲ್ಲಿ ಬ್ರಹ್ಮವು ಗುರುವಿನ ರೂಪದಲ್ಲಿ ಕಾಣಿಸಿಕೊಳ್ಳುತ್ತಲೆ ಇರುವದು. ಗುರುಗಳೆಂದರೆ ತಮ್ಮ ಅಂತಃಕರಣವನ್ನು ವಿಚಾರವೆಂಬ ಕಡೆಗೋಲಿನಿಂದ ಕಡೆದು ಜ್ಞಾನದ ಮೂಲವಾದ ಬ್ರಹ್ಮವನ್ನು ಮೇಲಕ್ಕೆ ತೇಲಿಸಿಕೊಂಡು ಅದರ ಸುಖದಿಂದ ಆನಂದಿಸುವವರಾಗಿ ತಮ್ಮನ್ನು ಶರಣುಹೊಕ್ಕವರಿಗೂ ಆ ಸ್ಥಿತಿಯನ್ನು ತಂದುಕೊಂಡಬಲ್ಲನರು. ವೇದದ ಅರ್ಥವನ್ನು ಇದ್ದದ್ದಿದ್ದ ಹಾಗೆ ತಿಳಿಯುವಷ್ಟು ಶುದ್ಧಬುದ್ಧಿ ಇಲ್ಲದ ಜನರಿಗೆ ಅದರ ಗಂಟನ್ನು ಬಿಚ್ಚಿ ಹೇಳುವದಕ್ಕೆ ಗುರುಗಳ ರೂಪವಾದ ಅವತಾರವು ಬಹು ಉಪಯೋಗವಾಗುವದು. ಆದ್ದರಿಂದ ಭಗವಂತನು ಮಾಡಬೇಕಾದ ಧರ್ಮೋಜ್ಜೀವನವನ್ನು ತಮ್ಮ ಹೃದಯದೊಳಕ್ಕೆ ಇಳಿದು ಬಂದಿರುವ ಭಗವಂತನನ್ನುಳ್ಳ ಗುರುಗಳು ಮುಂದುವರಿಸುತ್ತಿರುವರು. ಬ್ರಹ್ಮವು ಎಲ್ಲರ ಹೃದಯದಲ್ಲಿಯೂ ಇರುವದಾದರೂ ಗುರುಗಳು ಅದನ್ನು ಕಡೆದು ಮೇಲಕ್ಕೆ ತಂದುಕೊಂಡು ಅದರ ಸವಿಯನ್ನು ಚಪ್ಪರಿಸುತ್ತಿರುವವರಾಗಿರುವರು. ಇದೇ ಗುರುಗಳಲ್ಲಿರುವ ವಿಶೇಷ. ಮನುಷ್ಯನಿಗೆ ಅನುಭವದ ಮೇಲೆ ನಂಬಿಕೆ ಹೆಚ್ಚೆಂಬ ಮಾತು ಈ ಗ್ರಂಥದ ಮೊದಲಲ್ಲಿಯೇ ಬಂದಿದೆಯಷ್ಟೆ. ಆ ಅನುಭವವನ್ನೇ ಶಾಸ್ತ್ರವು ಎತ್ತಿ ಹೇಳಿದರೆ ಮನುಷ್ಯನ ಭರವಸವು ಇನ್ನಷ್ಟು ಹೆಚ್ಚುವದು. ಶಾಸ್ತ್ರವು ಹೇಳಿದ ಆ ಮಾತನ್ನೇ ಗುರುಗಳಾದವರು ತಮ್ಮ ಅನುಭವದಲ್ಲಿ ಕಂಡ ಮಾತೆಂದು ಹೇಳಿದರೆ ಆಗ ಅದು ಕದಲದಂತೆ ಗಟ್ಟಿಯಾಗುವದು. ಮನುಷ್ಯನು ಒಂದು ಜ್ಞಾನವನ್ನು ಪಡೆಯುವ ದೊಡ್ಡ ಪ್ರಯತ್ನಕ್ಕೆ ಕೈ ಹಾಕುವಾಗ ಆ ಹಾದಿಯಲ್ಲಿ ನಡೆದು ನುರಿತವರ ನೆರವು ದೊರೆತರೆ ಬಹು ಸಹಾಯವಾಗುವದು. ಆದ್ದರಿಂದ ಬ್ರಹ್ಮದ ಅರಿವನ್ನು ಪಡೆಯಬೇಕೆಂಬ ಮನುಷ್ಯನಿಗೆ ಗುರುಗಳ ನೆರವು ಅತ್ಯಗತ್ಯವಾಗಿರುವದು. ಮನುಷ್ಯನಿಗೆ ವಿವೇಕಶಕ್ತಿಯನ್ನು ಕೊಟ್ಟಿರುವದು ದೇವರಿಂದಾಗಿರುವ ಉಪಕಾರ. ಆ ಶಕ್ತಿಯನ್ನು ಪುಷ್ಟಿಗೊಳಿಸಿ ಬ್ರಹ್ಮವೆಂಬ ನೆಲೆಗೆ ಮುಟ್ಟಿಸುವದು ಗುರುಗಳಿಂದಾಗುವ ಉಪಕಾರ. —(ಮ ೪-೫)

ಗುರುಗಳ ಪರಂಪರೆಯಿಂದ ಬಂದ ಜ್ಞಾನವು ನಮ್ಮನ್ನು ಬಹು ಜನರು ನಡೆದು ಸವೆಸಿರುವ ಸುರಕ್ಷಿತವಾದ ದಾರಿಯಲ್ಲಿ ಒಯ್ಯುವದು. ಬರೀ ನಮ್ಮ

ಬುದ್ಧಿಯಿಂದ ಊಹಿಸಿದ ಅರ್ಥವು ಎಷ್ಟೋ ವೇಳೆ ನಮ್ಮನ್ನು ಅಡ್ಡದಾರಿಗೆ ಳೆದು ಕಲ್ಲುಮುಳ್ಳುಗಳಿರುವ ಕಗ್ಗಾಡಿನಲ್ಲಿ ಕಣ್ಣುಕಟ್ಟಿ ಬಿಡುವ ಸಂಭವ ಉಂಟು. ಗುರುಗಳು ಸರಿಯಾದ ದಾರಿಯಲ್ಲಿ ಸಾಗಿದವರಾದ್ದರಿಂದ ಅವರನ್ನು ಹಿಂಬಾಲಿಸುವದು ಶ್ರೇಯಸ್ಕರವು. ಗುರುಪರಂಪರೆಯಲ್ಲಿ ಬ್ರಹ್ಮನೇ ಮೊದಲನೆ ಆಚಾರ್ಯ ಅಥವಾ ಗುರು. ಅವನಿಂದ ಎಷ್ಟೋ ಪರಂಪರೆಗಳು ಹೊರಟಿವೆ. ಒಂದು ಪರಂಪರೆಯಲ್ಲಿ ಅವನು ಅದನ್ನು ತನ್ನ ಹಿರಿಯ ಮಗನಾದ ಅಥರ್ವನಿಗೆ ಹೇಳಿದನು. ಆ ಅಥರ್ವನು ಅಂಗಿರೆಂಬುವನಿಗೆ ಹೇಳಿದನು. ಅಂಗಿರನು ಸತ್ಯವಹನಿಗೆ ಹೇಳಿದನು. ಸತ್ಯವಹನು ತನ್ನ ಮಗನೋ ಶಿಷ್ಯನೋ ಆದ ಅಂಗಿರಸನಿಗೆ ಹೇಳಿದನು. ಆ ವಿದ್ಯೆಯನ್ನು ಅಂಗಿರಸನಿಂದ ಶೌನಕನು ಪಡೆದನು. ಹೀಗೆ ಗುರುಪರಂಪರೆಯು ಬ್ರಹ್ಮನಿಂದ ಮೊದಲಾಗಿ ನಡೆದು ಬಂದಿದೆ. —(ಮುಂ ೧-೧-೧..೨)

ಆದ್ದರಿಂದ ಪ್ರತಿಯೊಬ್ಬನೂ ಇಂದ್ರಿಯಗಳನ್ನೂ ಮನಸ್ಸನ್ನೂ ಹಿಡಿತದಲ್ಲಿಟ್ಟುಕೊಂಡಿರುವ ಗುರುಗಳಿಗೆ ಶರಣು ಹೋಗಬೇಕು. ತನಗೆ ಶಾಸ್ತ್ರದಲ್ಲಿ ಎಷ್ಟೇ ಪರಿಚಯವಿದ್ದರೂ ತನ್ನಷ್ಟಕ್ಕೆ ತಾನೆ ಬ್ರಹ್ಮಜ್ಞಾನವನ್ನು ಹುಡುಕಬಾರದು. ತಾನು ಆಶ್ರಯಿಸಬೇಕಾದ ಗುರು ವೇದವನ್ನು ಓದಿದವನಾಗಿರಬೇಕು. ಬರೀ ಅಕ್ಷರವನಿಂದಲೂ ಪ್ರಯೋಜನವಿಲ್ಲ. ಅವನು ಚೆನ್ನಾಗಿ ಅದರ ಅರ್ಥವನ್ನು ತಿಳಿದವನಾಗಿಯೂ ಇರಬೇಕು. ಇವೆರಡೂ ಇರುವ ಬರೀ ಮಾತುಗಾರನಿಂದಲೂ ಹೆಚ್ಚಿನ ಪ್ರಯೋಜನವಿಲ್ಲ. ಅವನು ಉಳಿದ ಕರ್ಮಗಳ ಗೋಜನ್ನೆಲ್ಲ ಪರಿದುಕೊಂಡು, ತಪಸ್ವಿಯು ಯಾವಾಗಲೂ ತಪಸ್ಸನ್ನು ಮಾಡುತ್ತಿರುವಂತೆ, ಯಾವಾಗಲೂ ಬ್ರಹ್ಮವನ್ನೇ ಹೇಳುತ್ತ ಬ್ರಹ್ಮವನ್ನೇ ಕೇಳುತ್ತ ಬ್ರಹ್ಮವನ್ನೇ ತಿಳಿಯುತ್ತ ಬ್ರಹ್ಮದಲ್ಲಿಯೇ ಮುಳುಗಿ ತೇಲುತ್ತಿರುವವನಾಗಬೇಕು. ಅಂಥ ಗುರುವಿನ ಬಳಿಗೆ ಹೋಗಿ ಶಿಷ್ಯನು ಸೆರಗೊಡ್ಡಿ ಬ್ರಹ್ಮವಿದ್ಯೆಯ ಭಿಕ್ಷೆಯನ್ನು ಬೇಡಬೇಕು. ಇಷ್ಟು ಹೊತ್ತಿಗೆ ಶಿಷ್ಯನಲ್ಲಿಯೂ ಒಂದು ಬಗೆಯ ಹೆಚ್ಚಿನ ಯೋಗ್ಯತೆಯುಂಟಾಗಿರಬೇಕು. ಅವನ ಮನಸ್ಸಿನ ಸೊಕ್ಕೆಲ್ಲ ಅಡಗುತ್ತ ಬಂದಿರಬೇಕು ; ಇಂದ್ರಿಯಗಳೂ ಹಿಡಿತಕ್ಕೆ ಒಳಗಾಗಿರಬೇಕು ಮತ್ತು ವೈರಾಗ್ಯವೂ ಎಲ್ಲ ಬಗೆಯಿಂದಲೂ ಮೈಗೂಡಿರಬೇಕು. ಶಿಷ್ಯ

ನಲ್ಲಿ ಚಿತ್ತವು ಹೀಗೆ ಹುಲಸಾಗಿದ್ದರೆ ಮಾತ್ರ ಗುರು ಅವನ ಹೃದಯದಲ್ಲಿ ಬ್ರಹ್ಮದ ಬೀಜವನ್ನು ಬಿತ್ತುವುದಕ್ಕಾಗುತ್ತದೆ. —(ಮುಂ ೧-೨ ೧೨,೧೩)

ವ್ಯಾಸರ ಮಕ್ಕಳಾದ ಶುಕಾಚಾರ್ಯರು ತಮ್ಮ ಬುದ್ಧಿಯಿಂದಲೆ ಶಾಸ್ತ್ರಾರ್ಥವನ್ನೆಲ್ಲ ತಿಳಿದರು. ಹೀಗೆ ಅವರಿಗೆ ಬ್ರಹ್ಮದ ಅರಿವಾದರೂ ಅದೇ ಸರಿಯೆಂದು ಮನಸ್ಸು ಅಲ್ಲಿ ನೆಲೆಗೊಳ್ಳಲಿಲ್ಲ. ಹೀಗೆ ಒಂದು ದಿನ ಮೇರುಪರ್ವತದ ಮೇಲೆ ಒಂಟಿಯಾಗಿ ಕುಳಿತಿರುವಾಗ ಅವರು ತಮ್ಮ ತಂದೆಯವರಾದ ವ್ಯಾಸರನ್ನು ಕುರಿತು ಜಗತ್ತಿನ ಹುಟ್ಟುಹೋಗುಗಳ ಪ್ರಶ್ನೆಯನ್ನು ತೆಗೆದರು. ವ್ಯಾಸರು ಅದಕ್ಕೆಲ್ಲ ಸರಿಯಾಗಿ ಉತ್ತರವನ್ನು ಕೊಟ್ಟರು. ಶುಕರಿಗೆ ಅದೆಲ್ಲ ಮೊದಲೇ ತಿಳಿದಿದ್ದದ್ದರಿಂದ ಆ ಮಾತಿನ ಮೇಲೆ ಹೆಚ್ಚು ಗೌರವ ಉಂಟಾಗಲಿಲ್ಲ. ಶುಕರ ಮನಸ್ಸಿನ ಕೀಲು ವ್ಯಾಸರಿಗೆ ತಿಳಿಯಿತು. ಆಗ ಅವರು ತಮಗೆ ಅದು ಚೆನ್ನಾಗಿ ತಿಳಿಯದೆಂದು ಹೇಳಿ ಶುಕರನ್ನು ಮಿಥಿಲಾಪಟ್ಟಣದಲ್ಲಿ ರಾಜರ್ಷಿಯಾಗಿದ್ದ ಜನಕರಾಜನ ಬಳಿಗೆ ಕಳುಹಿಸಿದರು. ಶುಕರು ಅರಮನೆಯ ಬಾಗಿಲಿಗೆ ಬಂದು ಬಾಗಿಲುಕಾಯುವವರ ಮೂಲಕ ತಮ್ಮ ಬಂದಿರುವಿಕೆಯನ್ನು ರಾಜನಿಗೆ ತಿಳಿಸಿದರು. ಜನಕನು ಅವರ ಉದ್ದೇಶವನ್ನರಿತು ಪರೀಕ್ಷಾರ್ಥವಾಗಿ ಅವರನ್ನು ಉಪೇಕ್ಷೆ ಮಾಡಿ ಕಾದಿರಹೇಳಿದನು. ಹಾಗೆಯೇ ಏಳು ದಿನಗಳು ಕಳೆದುವು. ಅಲ್ಲಿಯವರೆಗೂ ಶುಕರು ಬ್ರಹ್ಮಸ್ವರೂಪದಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಂಡು ಅಲ್ಲಿಯೇ ನಿಂತಿದ್ದರು. ಆಮೇಲೆ ಜನಕನು ಅವರನ್ನು ಒಳಕ್ಕೆ ಬರಮಾಡಿಕೊಂಡು ಅವರಿಗೆ ಉತ್ತಮಸ್ತ್ರೀಯರಿಂದ ಊಟವನ್ನೂ ಉಪಚಾರವನ್ನೂ ಮಾಡಿಸಿ ಅವರನ್ನು ಲಾಲಿಸುವ ಉದ್ಯೋಗವನ್ನೂ ನಡೆಸಿದನು. ಬೆಟ್ಟದಂತೆ ಬಲವಾಗಿದ್ದ ಅವರ ಮನಸ್ಸನ್ನು ಅವು ಯಾವವೂ ಕದಲಿಸಲಾಗಲಿಲ್ಲ. ಅದನ್ನು ಕಂಡು ಜನಕನು ಅವರ ಕಾಲಿಗೆರಗಿ ಕೃತಕೃತ್ಯರಾದ ತಮಗೆ ತನ್ನಿಂದೇನಾಗಬೇಕೆಂದು ಕೇಳಿದನು. ಆಗ ಶುಕರು ತಂದೆಯನ್ನು ಕುರಿತು ಕೇಳಿದ್ದ ಪ್ರಶ್ನೆಯನ್ನೆ ಜನಕನ ಮುಂದಿಟ್ಟರು. ಜನಕನು ಅದಕ್ಕೆಲ್ಲ ಉತ್ತರವನ್ನಿತ್ತನು. ಅದೆಲ್ಲ ತಂದೆಯು ಹೇಳಿದ ಮಾತೇ ಎಂದೂ ತಾನೇ ಇದೆಲ್ಲವನ್ನೂ ಮೊದಲೇ ತಿಳಿದುಕೊಂಡೂ ಇದ್ದೆನೆಂದೂ ಶುಕರು ಹೇಳಿದರು. ಅದೇ ನಿಜವಾಗಿ ನೆಲೆಗೆ ನಿಂತ ಅರ್ಥ

ನೆಂದು ಜನಕನು ಹೇಳುತ್ತಲೆ ಶುಕರ ಮನಸ್ಸಿನ ಅಲುಗಾಟವಡಗಿತು. ಹೀಗಾಗಿ ತಮ್ಮ ಸಂಶಯಗಳನ್ನೆಲ್ಲ ಕಳೆದುಕೊಂಡು ಶುಕರು ಮೇರುಪರ್ವತದ ಶಿಖರಕ್ಕೆ ಹೋಗಿ ಎಡೆಬಿಡದ ಸಮಾಧಿಯನ್ನು ಸಾಧಿಸುವವರಾದರು.

—(ಮ -೨).

## ಗು ರು ಭ ಕ್ತಿ

ಗುರುಗಳಿಗೆ ಶರಣು ಹೋಗುವದೆಂದರೇನೆಂಬುದೂ ತಿಳಿಯತಕ್ಕದ್ದಾಗಿದೆ. ಗುರುಗಳಿಗೆ ಶರಣನ್ನುವವನು ಮೊದಲು ಅವರಿಗೆ ಉದ್ದಕ್ಕೆ ಅಡ್ಡಬೀಳಬೇಕು. ತಾನು ಹೀಗೆ ನೆಲಮುಟ್ಟಿದವನಾಗುವದರಿಂದ ಗುರುಗಳಿಗಿಂತ ತೀರ ಕೀಳಾದವನೆಂದು ವಿನಯವನ್ನು ತೋರಿಸಿಕೊಂಡಂತೆ ಆಗುವದಲ್ಲದೆ ಗುರುಗಳ ಮಾತಿನ ಮುಂದೆ ತನ್ನ ಬುದ್ಧಿಯ ಹೆಚ್ಚುಗಾರಿಕೆಯ ಅಧಿಕಪ್ರಸಂಗವೇನೂ ಇಲ್ಲವೆಂದೊಪ್ಪಿಕೊಂಡಂತಾಗುವದು. ಅಡ್ಡಬಿದ್ದ ಮೇಲೆ ಅವರ ಮುಂದೆ ಸಮಯವರಿತು ಒಂದೊಂದಾಗಿ ತನ್ನ ಪ್ರಶ್ನೆಗಳನ್ನಿಡಬೇಕು. ಆ ಪ್ರಶ್ನೆಗಳು ತನಗೆ ಬೇಕಾದ ಜ್ಞಾನವನ್ನು ತಂದುಕೊಡತಕ್ಕವುಗಳಾಗಬೇಕು. ತನ್ನ ಮನಸ್ಸು ಜಗತ್ತಿನ ಸೆಳೆತಕ್ಕೆ ಏಕೆ ಸಿಕ್ಕುಬಿದ್ದಿದೆ?, ಅದನ್ನು ತಪ್ಪಿಸಿಕೊಳ್ಳುವದು ಹೇಗೆ?, ನಮಗೆ ಬ್ರಹ್ಮವೇಕೆ ತಿಳಿಯುವದಿಲ್ಲ?—ಇಂಥಪ್ರಶ್ನೆಗಳನ್ನು ಮಾಡಬೇಕು. ಇವುಗಳಿಗೆ ಉತ್ತರವನ್ನು ಕೊಡುವಾಗ ಗುರುಗಳಿಗೆ ತನ್ನ ಮೇಲೆ ಕನಿಕರ ಉಂಟಾಗುವದಕ್ಕಾಗಿ ತಾನು ಗುರುಗಳನ್ನು ಬಗೆಬಗೆಯಿಂದ ಸೇವೆ ಮಾಡುತ್ತಿರಬೇಕು. ಈ ಸೇವೆಯಿಂದ ಗುರುಗಳಿಗೇನೂ ಪ್ರಯೋಜನವಿರುವದಿಲ್ಲ. ಶಿಷ್ಯನ ಶೀಲಸ್ವಭಾವವನ್ನು ಅವರು ಕಂಡುಹಿಡಿದುಕೊಳ್ಳುವದಕ್ಕೆ ಇದರಿಂದ ಒಳ್ಳೆ ಅವಕಾಶ ದೊರೆಯುತ್ತದೆ. ಶಿಷ್ಯನು ಆ ಜ್ಞಾನವನ್ನು ಪಡೆಯುವದಕ್ಕೆ ತಕ್ಕವನೆಂದು ಅರಿತ ಮೇಲೆ ಗುರುಗಳು ಆ ವಿಚಾರದಲ್ಲಿ ಬಾಯಿಬಿಡುವರು. ಅದುವರೆಗೆ ಅವರು ಸುಮ್ಮನಿರುವದನ್ನು ನೋಡಿ ತತ್ತ್ವವನ್ನು ಯಾರಿಗೂ ಹೇಳದೆ ಲೋಭದಿಂದ ಬಚ್ಚಿಟ್ಟುಕೊಂಡಿರುವರೆಂದು ತಿಳಿಯುವದು ತಪ್ಪು. ತಕ್ಕವರಲ್ಲದವರಿಗೆ ಹೇಳಿ ತಮ್ಮ ಉಪದೇಶವನ್ನು ವ್ಯರ್ಥಮಾಡಿಕೊಳ್ಳುವದು. ಅವರಿಗೆ ಒಪ್ಪುವದಿಲ್ಲ. ಇಷ್ಟೆ.

—(ಭ ೪-೩೪)

ಸುಕೇಶ ಮೊದಲಾದ ಆರು ಜನ ಶಿಷ್ಯರು ಬ್ರಹ್ಮವನ್ನು ತಿಳಿಯಬೇಕೆಂದು ಪಿಪ್ಪಲಾದನೆಂಬ ಮುನಿಯ ಬಳಿಗೆ ಹೋದಾಗ ಅವನು ಅವರನ್ನು ಕುರಿತು 'ನೀವು ಇದುವರೆಗೆ ಎಷ್ಟೋ ತಪಸ್ಸನ್ನು ಮಾಡಿರುವಿರಾದರೂ ಇಲ್ಲಿ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಬ್ರಹ್ಮಚರ್ಯದಿಂದಲೂ ಶ್ರದ್ಧೆಯಿಂದಲೂ ಒಂದು ವರ್ಷ ಆದರದಿಂದ ಸೇವೆಯನ್ನು ಮಾಡಿಕೊಂಡಿರಿ. ಆಮೇಲೆ ನಿಮನಿಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿ' ಎಂದು ಹೇಳಿರುತ್ತಾರೆ. ಆದ್ದರಿಂದ ಗುರುಸೇವೆ ಅಗತ್ಯ. —(ಪ್ರ ೧-೧-೨).

ಹೀಗೆ ಮಾಡಿ ತಮ್ಮ ಸ್ವರೂಪದ ನಿಜವನ್ನು ಕಣ್ಣಾರೆ ಕಂಡ ಗುರುಗಳಿಂದ ಉಪದೇಶವನ್ನು ಪಡೆಯಬೇಕು. ಇದಕ್ಕಾಗಿ ಮೊದಲು ಅಜ್ಞಾನವೆಂಬ ನಿದ್ರೆಯಿಂದ ಏಳುವ ಇಚ್ಛೆಯಾಗಬೇಕು. ಆತ್ಮಜ್ಞಾನದ ಕಡೆಗೆ ಮನಸ್ಸು ಹರಿಯಬೇಕಾದರೆ ಎಲ್ಲ ಅನರ್ಥಗಳಿಗೂ ಬೀಜವಾದಂಥ ಈ ಭಯಂಕರವಾದ ನಿದ್ರೆಯ ಮಬ್ಬು ಹರಿದು ಎಚ್ಚರ ಉಂಟಾಗುತ್ತ ಬರಬೇಕು. ಆಮೇಲೆ ಗುರುಗಳ ಉಪದೇಶದ ಅರ್ಥವಾಗುವದು. ಆತ್ಮನ ವಿಷಯವು ಕತ್ತಿಯ ಧಾರೆಯಂತೆ ಬಹು ಸೂಕ್ಷ್ಮವಾದ್ದರಿಂದ ಅದನ್ನು ಹಿಡಿದುಕೊಳ್ಳುವದು ಕಷ್ಟ. ಅದು ಹತ್ತುವದಕ್ಕಾಗದಷ್ಟು ಕಡಿದಾದ ಬೆಟ್ಟದಂತಿದೆ. ಗುರುಗಳ ನೆರವಿಲ್ಲದೆ ಅದರ ಮೇಲಕ್ಕೆ ಹೋಗುವದಕ್ಕಾಗುವದಿಲ್ಲ.
—(ಕ ೩-೧೪)

ಗುರುಗಳ ಅಗತ್ಯವನ್ನು ಕುರಿತು ಒಂದು ಉದಾಹರಣೆಯನ್ನು ಹೇಳಬಹುದು. ಕಾಂದಹಾರ್ (ಗಾಂಧಾರ) ಎಂದು ಪ್ರಸಿದ್ಧವಾಗಿರುವ ದೇಶದಲ್ಲಿ ಕಳ್ಳರು ಒಬ್ಬನನ್ನು ಕಣ್ಣುಕಟ್ಟಿ ಕಾಡಿಗೆ ಕರೆದುಕೊಂಡು ಬಂದು ಅವನಲ್ಲಿದ್ದುದನ್ನೆಲ್ಲ ಸುಲಿದುಕೊಂಡು ಅಲ್ಲಿ ಕೈಬಿಟ್ಟು ಹೋದರು. ಅವನು ತನ್ನ ಪಾಡು ಹೀಗಾಗಿರುವದೆಂದು ಹತ್ತು ದಿಕ್ಕಿಗೂ ತಿರುಗಿ ಗೋಳಿಟ್ಟನು. ಆಗ ಅಲ್ಲಿಗೆ ಒಬ್ಬ ದಯಾಳು ಬಂದು ಅವನ ಕಟ್ಟುಗಳನ್ನು ಕಳಚಿ 'ಇಗೋ! ಈ ಉತ್ತರದಿಕ್ಕಿನಲ್ಲಿ ನಿನ್ನ ದೇಶವಿರುವದು' ಎಂದು ತೋರಿಸಿದನು. ಆಗ ಅವನು ಊರಿಂದೂರ ದಾರಿಯನ್ನು ವಿಚಾರಿಸಿಕೊಳ್ಳುತ್ತ ತನ್ನ ಬುದ್ಧಿಯಿಂದ ಆ ದಾರಿಯ ಗುರ್ತುಗಳನ್ನು ನೋಡಿ ತಿಳಿದುಕೊಳ್ಳುತ್ತ ತನ್ನ ಊರಿಗೆ ಬಂದು ಸೇರಿದನು. ನಮ್ಮೆಲ್ಲರ ಪಾಡೂ ಇದಕ್ಕೆ ಹೋಲುತ್ತದೆ. ನಮ್ಮ ಆತ್ಮವು

ತಾನೆ ತನ್ನ ಮಾಯೆಯಿಂದ ಹೊರಗೆಡಹಿರುವ ಪಂಚಭೂತಗಳಿಂದ ರೂಪುಗೊಂಡು ಅನೇಕ ದುಃಖಗಳ ಆವಾಸಸ್ಥಾನವಾಗಿರುವ ದೇಹವೆಂಬ ಅರಣ್ಯದೊಳಹೊಕ್ಕು ಮುಂಗಾಣದೆ ನಿಂತಿದೆ. ಅದರ ಕಣ್ಣಿಗೆ ಅಜ್ಞಾನವೆಂಬ ಪರದೆ ಅಡ್ಡಗಟ್ಟಿದೆ. ಅದಕ್ಕೆ ಹೆಂಡತಿ, ಮಕ್ಕಳು-ಮೊದಲಾದವರ ಮೇಲಿನ ಆಸೆಯೆಂಬ ಹಗ್ಗದ ಕಟ್ಟುಗಳು ಬಿದ್ದಿವೆ. ಪುಣ್ಯಪಾಪಗಳೆಂಬ ಕಳ್ಳರು ಅದನ್ನು ಈ ಕಗ್ಗಾಡಿಗೆ ತಂದು ಬಿಟ್ಟಿದ್ದಾರೆ. 'ಅಯ್ಯೊ, ಮುದುಕನಾದೆನಲ್ಲ! ಸಾಯುವೆನಲ್ಲ! ಹಣವು ಹೋಯಿತಲ್ಲ! ಹೇಗೆ ಬದುಕಲಿ? ನನ್ನ ಗತಿಯೇನು?' ಎಂದು ಮುಂತಾಗಿ ಈ ಆತ್ಮನ ಗೋಳುಗಳು ಹತ್ತು ದಿಕ್ಕುಗಳ ಗೋಡೆಗಳನ್ನೂ ಬಿರಿಯುವಂತೆ ಮಾಡಿವೆ. ನಮ್ಮ ಯಾವದೋ ಒಂದು ಹೆಚ್ಚಿನ ಪುಣ್ಯವು ಫಲವನ್ನು ಕೊಡುವದಕ್ಕೆ ಬಂದಾಗ ಮಹಾದಯಾಳುವಾದ ಗುರುವಿನ ದರ್ಶನವು ನಮಗೆ ಆಗುತ್ತದೆ. ಅವರು ನಮ್ಮ ಗೋಳನ್ನು ಕೇಳಿ ಕನಿಕರದಿಂದ ನಮ್ಮ ಅಜ್ಞಾನವೆಂಬ ಕಣ್ಣುಮರೆಯನ್ನು ಪಕ್ಕಕ್ಕೆ ಸರಿಸಿ ನಮ್ಮ ಸ್ವರೂಪದ ಅರಿವನ್ನು ನಮಗೆ ಎಚ್ಚರಗೊಳಿಸುವರು. ಆಗ ನಾವು ನಮ್ಮ ಸ್ವರಾಜ್ಯವಾದ ಬ್ರಹ್ಮಪದವಿಯಲ್ಲಿ ವಿರಾಜಿಸುವವರಾಗುವೆವು.

—(ಛಾಂ ೬-೧೪)

ಗುರುಗಳಿಂದ ಈ ಅನುಗ್ರಹವು ನಮಗೆ ದೊರೆಯಬೇಕಾದರೆ ಭಗವಂತನ ಮೇಲಿರುವಷ್ಟೆ ಹೆಚ್ಚಾದ ಭಕ್ತಿಯು ಗುರುಗಳ ಮೇಲಿರಬೇಕು; ಗುರುಗಳ ಮೇಲೆ ಅಂಥ ಭಕ್ತಿ ಇದ್ದರೇ ಅವರು ಹೇಳಿದ ಅಭಿಪ್ರಾಯಗಳು ನಮ್ಮ ಮನಸ್ಸಿಗೆ ಚೆನ್ನಾಗಿ ಹೊಳೆಯುವವು. —(ಶ್ವೇ ೬-೨೩)

ಗುರುಗಳ ಕೃಪಾದೃಷ್ಟಿಯು ನಮ್ಮ ಮೇಲೆ ಬಿದ್ದ ಹೊರತು ನಾವು ವಿಷಯಗಳನ್ನು ಬಿಡುವದೂ ಆಗುವದಿಲ್ಲ; ಆತ್ಮಸ್ವರೂಪವನ್ನು ಕಾಣುವದೂ ಆಗುವದಿಲ್ಲ ಮತ್ತು ಉತ್ಕೃಷ್ಟವಾದ ಬ್ರಾಹ್ಮೀಸ್ಥಿತಿಯು ನಮಗೆ ದಕ್ಕುವದೂ ಇಲ್ಲ. —(ಮು ೪-೭೭)

ತಾನೇ ದೊಡ್ಡವನೆಂಬ ಭಾವನೆ ಇಲ್ಲದಿರುವದು, ತನ್ನಲ್ಲಿಲ್ಲದ್ದನ್ನು ತೋರಿಸಿಕೊಳ್ಳದಿರುವದು—ಮೊದಲಾದ ಎಷ್ಟೋ ಸಾಧನಗಳ ಜೊತೆಗೆ ಗುರುಸೇವೆಯೂ ಒಂದು ಸಾಧನ. ಇವುಗಳನ್ನು ಜ್ಞಾನಸಾಧನವೆನ್ನುವದೇನು? ಜ್ಞಾನವೆಂದೇ ಹೇಳುವಂತಿರುವವು. —(ಭ೧೩-೭..೧೧)

# ೯— ಕರ್ಮವೆಂಬ ದಾರಿ

## ಕರ್ಮಗಳನ್ನು ಮಾಡಲೇ ಬೇಕು

ಹಿಂದಿನ ಅಧ್ಯಾಯಗಳಲ್ಲಿ ವೇದಾಂತದ ಮುಖ್ಯತತ್ತ್ವಗಳನ್ನೆಲ್ಲ ಮುಂದಿಟ್ಟದ್ದಾಯಿತು. ಯಾರ ಮನಸ್ಸಿನಲ್ಲಿ ಪ್ರಾಪಂಚಿಕನಾದ ಸುಖದ ಬಯಕೆಯ ಕಲೆ ಎಳ್ಳಷ್ಟೂ ಇಲ್ಲವೆ ಇರುವದೊ ಅಂಥವರ ಶುದ್ಧವಾದ ಬುದ್ಧಿಗೆ ಇಷ್ಟು ಹೇಳಿದ್ದು ಸಾಕು ಇಷ್ಟರಿಂದ ಅವರಿಗೆ ಬ್ರಹ್ಮವು ಕಣ್ಣಿಗೆ ಕಟ್ಟಿದಂತಾಗಿ ಅವರು ಮುಂದೆ ಹೇಳಲಾಗುವ ಬಹುಮೊತ್ತ ಫಲವನ್ನು ಸೂರೆಗೊಂಡು ಮನುಷ್ಯರಾಗಿ ಬದುಕಿದ್ದೇ ಬ್ರಹ್ಮರಾಗಿ ಆನಂದದಲ್ಲಿ ಓಲಾಡುತ್ತಿರುವರು. ಅಂಥವರು ಇನ್ನೇನೂ ಮಾಡಬೇಕಾದದ್ದಿಲ್ಲ. ಅಂಥವರು ಬಹು ಕಡಿಮೆ. ಸಾಮಾನ್ಯವಾಗಿ ಎಲ್ಲರೂ ಇಷ್ಟನ್ನು ಕೇಳಿದ ಮೇಲೆ ಇದನ್ನು ಬಹು ಯತ್ನದಿಂದ ಪ್ರಯೋಗಿಸಿಕೊಳ್ಳಬೇಕಾಗಿರುವದು. ಏಕೆಂದರೆ: ಯಾರ ಬುದ್ಧಿಯಲ್ಲಿ ನೋಡಿದರೂ ಪ್ರಾಪಂಚಿಕವಾದ ಸುಖವನ್ನು ಸವಿಯಬೇಕೆಂಬ ವಾಸನೆಯು ತುಂಬಿತುಳುಕುತ್ತಿರುವದು. ಇದು ಒಬ್ಬರಲ್ಲಿ ಹೆಚ್ಚಾಗಿರಬಹುದು; ಒಬ್ಬರಲ್ಲಿ ಕಡಿಮೆಯಾಗಿರಬಹುದು. ಅಂತು ಇಲ್ಲವೆ ಇಲ್ಲ. ಹೀಗೆ ಬುದ್ಧಿಯು ತುಂಬ ಪ್ರಾಪಂಚಿಕವಾದ ಸುಖದ ವಾಸನೆ ತುಂಬಿಕೊಂಡಿರುವದರಿಂದ ಬ್ರಹ್ಮವಿಚಾರದ ವಾಸನೆಯು ಅಲ್ಲಿ ತೂರಿಕೊಳ್ಳುವದಕ್ಕೆ ದಾರಿ ಇಲ್ಲ. ಪ್ರಾಪಂಚಿಕವಾದ ಸುಖದ ವಾಸನೆಯನ್ನು ಹೊರಕ್ಕೆ ಚೆಲ್ಲುತ್ತ ಅಲ್ಲಿಗೆ ಬ್ರಹ್ಮವಿಚಾರದ ವಾಸನೆಯನ್ನು ಹೊಗಿಸುವ ಯತ್ನವನ್ನು ನಡೆಸಬೇಕು. ಹೀಗೆ ಮಾಡುತ್ತ ಈಗ ಪ್ರಾಪಂಚಿಕಸುಖದ ವಾಸನೆಯು ಎಷ್ಟು ತುಂಬಾಗಿದೆಯೊ ಬ್ರಹ್ಮವಿಚಾರದ ವಾಸನೆಯು ಅಷ್ಟು ತುಂಬಾಗುವಂತೆ ಮಾಡಬೇಕು. ಈಗ ಪ್ರಾಪಂಚಿಕವಾದ ಸುಖದ ವಾಸನೆಯು ಬ್ರಹ್ಮವಿಚಾರದ ವಾಸನೆಗೆ ಸ್ಥಲವಿಲ್ಲದಂತೆ ಮಾಡಿರುವ ಹಾಗೆ ಬ್ರಹ್ಮವಿಚಾರದ ವಾಸನೆಯು ಪ್ರಾಪಂಚಿಕವಾದ ಸುಖದ ವಾಸನೆಗೆ ಬುದ್ಧಿಯಲ್ಲಿ ನಿಲ್ಲುವದಕ್ಕೆ ನೆರಳಿಲ್ಲದಂತೆ ಮಾಡಬೇಕು. ಈಗ ಪ್ರಾಪಂಚಿಕವಾದ ಸುಖದ ವಾಸನೆಯು

ತಾನೆ ಬುದ್ಧಿಯ ತುಂಬ ತುಂಬಿಕೊಂಡು ತನ್ನ ಸೂತ್ರದ ಬೊಂಬೆಯಂತೆ ಮನುಷ್ಯನನ್ನು ಕುಣಿಸುವ ಹಾಗೆ ಬ್ರಹ್ಮವಿಚಾರದ ವಾಸನೆಯು ತಾನೆ ಬುದ್ಧಿಯ ತುಂಬ ತುಂಬಿಕೊಂಡು ಮನುಷ್ಯನ ನಡೆನುಡಿಗಳಲ್ಲೆಲ್ಲ ತಾನೆ ತಾಂಡವವಾಡಬೇಕು. ಈಗ ಪ್ರಾಪಂಚಿಕನಾದ ಒಬ್ಬನ ನಡೆನುಡಿಗಳನ್ನು ನೋಡಿದವರಿಗೆ ಇವನು ಪ್ರಾಪಂಚಿಕವಾದ ಸುಖದ ವಾಸನೆಯಿಂದ ತುಂಬಿದವನೆಂದು ತಾನಾಗಿ ಗೊತ್ತಾಗುವಷ್ಟು ಅದು ತನ್ನ ಗಂಧವನ್ನು ಹೊರಗೆಡಹುತ್ತಿರುವಂತೆ ಆತ್ಮವನ್ನರಿತವನ ನಡೆನುಡಿಗಳನ್ನು ನೋಡಿದವರಿಗೆ ಇವನು ಬ್ರಹ್ಮವಿಚಾರದ ವಾಸನೆಯಿಂದ ತುಂಬಿದವನೆಂದು ತಾನಾಗಿ ಗೊತ್ತಾಗುವಷ್ಟು ಅದು ತನ್ನ ಗಂಧವನ್ನು ಹೊರಗೆಡಹುತ್ತಿರಬೇಕು. ಆಗ ಮನುಷ್ಯನು ಹುಟ್ಟಿದ್ದಕ್ಕೆ ಸಾರ್ಥಕವಾಗುವದು. ಆಗ ಅವನಲ್ಲಿ ಬಹು ದೊಡ್ಡ ಫಲದ ಅನುಭವವು ಮೈದೋರುವದು. ಆದ್ದರಿಂದ ಸಾಮಾನ್ಯವಾಗಿ ಎಲ್ಲರೂ ಮೊದಲು ಬ್ರಹ್ಮಸ್ವರೂಪದ ವಿಚಾರವನ್ನು ಕೇಳಿ ತಿಳಿದುಕೊಂಡು ಆದರ ಬಹು ದೊಡ್ಡ ಫಲವನ್ನು ಅನುಭವಿಸುವದಕ್ಕಾಗಿ ಅದನ್ನು ಮೈಗೂಡಿಸಿಕೊಳ್ಳುವದಕ್ಕೆ ತಮ್ಮ ಸರ್ವಪ್ರಯತ್ನವನ್ನೂ ಮಾಡಬೇಕು.

ಈ ಯತ್ನವೆಂಬುದು ಕರ್ಮವೆಂಬ ದಾರಿ, ಭಕ್ತಿಯೆಂಬ ದಾರಿ, ಯೋಗವೆಂಬ ದಾರಿ, ವಿಚಾರವೆಂಬ ದಾರಿ-ಎಂಬ ನಾಲ್ಕು ದಾರಿಗಳ ರೂಪದಲ್ಲಿರುವದು. ಈ ನಾಲ್ಕು ದಾರಿಗಳೂ ಒಂದಕ್ಕೊಂದು ಸಂಬಂಧವಿಲ್ಲದ ಬೇರೆ ಬೇರೆಯಲ್ಲ ಇವು ನಾಲ್ಕೂ ಒಂದೇ ದಾರಿ. ಕೆಲಕೆಲವು ದೂರದ ತನಕ ಅದಕ್ಕೆ ಒಂದೊಂದು ಹೆಸರು. ಇಷ್ಟೇ. ಈಗ ನಾವು ಪ್ರಾಪಂಚಿಕವಾದ ತಿಳಿವುಗಳಲ್ಲಿಯೂ ಪ್ರಾಪಂಚಿಕವಾದ ಕೆಲಸಗಳಲ್ಲಿಯೂ ಮುಳುಗಿರುವೆವಷ್ಟೇ. ಎಣ್ಣೆಯ ಕಾಗದದ ಜಿಡ್ಡು ಅಕ್ಷರಗಳ ಮೂಡುವಿಕೆಗೆ ಅಡ್ಡಿಯಾಗಿರುವಂತೆ ಇವು ಬುದ್ಧಿಯಲ್ಲಿ ಬ್ರಹ್ಮದ ಮೂಡುವಿಕೆಗೆ ಅಡ್ಡಿಯಾಗಿರುವವು. ಆದ್ದರಿಂದ ಇವುಗಳ ಹೊಗರನ್ನು ಮುರಿಯುವದಕ್ಕಾಗಿ ಈಶ್ವರನ ಸಂಬಂಧವಾದ ಕೆಲಸಗಳನ್ನು ವೇದವು ಹೇಳುವ ರೀತಿಯಲ್ಲಿ ಒಂಟಿಸಿಕೊಳ್ಳುವದು ಕರ್ಮವೆಂಬ ದಾರಿ; ಈಶ್ವರನ ಕಥೆಗಳನ್ನು ಕೇಳೋಣ, ಹೇಳೋಣ, ಹಾಡೋಣ, ನೆನೆಯೋಣ-ಮೊದಲಾಗಿ ತನ್ನ ಮನಸ್ಸಿಗೆ ರುಚಿಸಿದ ರೀತಿಯಲ್ಲಿ ಈಶ್ವರನ ಕಡೆಯ ಒಲವನ್ನು ಹೆಚ್ಚಿಸಿಕೊಳ್ಳುವದು ಭಕ್ತಿಯೆಂಬ ದಾರಿ; ಆ ಒಲ

ವನ್ನು ಕದಲದಂತೆ ಈಶ್ವರನಲ್ಲಿಯೇ ನಿಲ್ಲಿಸುವದು ಯೋಗವೆಂಬ ದಾರಿ; ಈ ಮೂರು ದಾರಿಗಳಲ್ಲಿ ನಡೆಯುವ ಹೊತ್ತಿಗೆ ಅದುವರೆಗಿನ ನಡಿಗೆಯು ತಿಕ್ಕಾಟದಿಂದ ಬುದ್ಧಿಯಲ್ಲಿರುವ ಪ್ರಾಪಂಚಿಕವಾದ ಜಿಡ್ಡು ಹಾರಿಹೋಗಿ ರುವದರಿಂದ ಅದಕ್ಕೆ ಬ್ರಹ್ಮದ ವಿಚಾರವನ್ನು ಅಂಟಿಸಿಕೊಂಡು ಬೆಳಿಸುವದು ವಿಚಾರವೆಂಬ ದಾರಿ. ಅದರಲ್ಲಿ ಸಾಗಿದಾಗ ಬ್ರಹ್ಮವು ಅಂಗಯ್ಯೊಳಗಣ ನೆಲ್ಲಿಯ ಕಾಯಾಗುವದು. ಇದೇ ಆ ದಾರಿಯ ಕೊನೆಯ ನೆಲೆ.

ಈಗ ಇಲ್ಲಿ ಮೊದಲನೆಯದಾದ ಕರ್ಮವೆಂಬ ದಾರಿಯನ್ನು ವಿವರಿಸಲಾಗುವದು. ಇಲ್ಲಿ ಕರ್ಮವೆಂಬ ಮಾತಿಗೆ ಬ್ರಹ್ಮದ ಒಲವನ್ನು ಪಡೆಯುವದಕ್ಕಾಗಿ ವೇದದಲ್ಲಿ ಹೇಳಿರುವ ಕರ್ಮವೆಂಬ ಅರ್ಥವನ್ನೆ ಇಟ್ಟುಕೊಳ್ಳಬೇಕು. ದೇಹೇಂದ್ರಿಯಗಳ ಸುಖಕ್ಕಾಗಿ ಮಾಡುವ ಕೆಲಸವನ್ನು ಕುರಿತು ವೇದವೇನೂ ಹೇಳಹೋಗುವದಿಲ್ಲ. ಏಕೆಂದರೆ: ದೊಡ್ಡದೊಡ್ಡ ಜ್ಞಾನಿಗಳೆನಿಸಿದವರು ಕೂಡ ತಮ್ಮ ಹಿಂದಿನ ಪಾಪಪುಣ್ಯಗಳ ವಾಸನೆಗೆ ತಕ್ಕಂತೆ ಈಗ ಬಂದಿರುವ ಹುಟ್ಟುಗುಣವನ್ನು ಅನುಸರಿಸಿ ನಡೆಯುತ್ತಾರೆ. ಮೂರ್ಖರ ಪಾಡೇನು! ದೇಹೇಂದ್ರಿಯಗಳ ಸುಖಕ್ಕಾಗಿ ಹೋರಾಡುವದೆಂಬುದು ಪ್ರತಿಯೊಬ್ಬನಿಗೂ ತನ್ನ ಹುಟ್ಟುಗುಣವಾಗಿಯೇ ಇರುವದು. ಅದನ್ನು ಯಾರೂ ಹೊಸದಾಗಿ ಹೇಳಬೇಕಾದದ್ದಿಲ್ಲ. ದೇಹೇಂದ್ರಿಯಗಳ ಸುಖಕ್ಕಾಗಿ ಮಾಡುವ ಕೆಲಸವು ಒಂದು ದಾರಿಯೇ ಅಲ್ಲ. ದಾರಿಯೆಂದರೆ ಒಂದು ನೆಲೆಗೆ ಮುಟ್ಟಿಸತಕ್ಕದ್ದು. ದೇಹೇಂದ್ರಿಯಗಳ ಸುಖಕ್ಕಾಗಿ ಮಾಡುವ ಕೆಲಸವು ಅಷ್ಟಷ್ಟಕ್ಕೇ ಮುಗಿದುಹೋಗುವದು ಮತ್ತು ಹುಟ್ಟುಸಾವುಗಳನ್ನು ಕೊಡುವದು. ಆದ್ದರಿಂದ ಅದು ದಾರಿಯಲ್ಲ. ಈಗ ನಾವು ಹೇಳುವ ಕರ್ಮವೆಂಬುದು ಬ್ರಹ್ಮವೆಂಬ ನೆಲೆಗೆ ಮುಟ್ಟಿಸುವ ಒಂದು ದಾರಿ. ಆದ್ದರಿಂದ ಇಲ್ಲಿ ಕರ್ಮವೆಂದರೆ ಬ್ರಹ್ಮದ ಒಲವನ್ನು ಪಡೆಯುವದಕ್ಕೆ ಮಾಡಬೇಕಾಗಿ ವೇದದಲ್ಲಿ ಹೇಳಿರುವ ಕೆಲಸಗಳೆಂದರ್ಥ. —(ಭ ೩-೩೩)

**(ಅ) ಯಾವ ಕರ್ಮವನ್ನೂ ಮಾಡದೆ ಇರುವದೆಂಬುದು ಯಾರಿಗೂ ಆಗುವ ಮಾತಲ್ಲ (ಭ ೧೮-೧೧). (ಆ) ಬರೀ ದೇಹೇಂದ್ರಿಯಗಳ ಸುಖಕ್ಕಾಗಿ ಮಾಡುವ ಕೆಲಸವು ಮನುಷ್ಯನನ್ನು ಹುಟ್ಟುಸಾವುಗಳಿಗೆ ತಳ್ಳತಕ್ಕ**

ದ್ದಾದ್ದರಿಂದ ಅದನ್ನು ಆದಷ್ಟು ಕಡಿಮೆಮಾಡಿಕೊಳ್ಳುತ್ತ ಈಶ್ವರನಸಂಬಂಧ ವಾದ ಕೆಲಸಗಳಲ್ಲಿ ತೊಡಗಬೇಕು (ಈ ೧೧). (ಇ) ದೇಹೇಂದ್ರಿಯಗಳಿಗಾಗಿ ಹೇಗೆ ಸಾಯುವ ತನಕ ದುಡಿಯುವನೊ ಹಾಗೆ ಈಶ್ವರನ ಸಂಬಂಧವಾದ ಕೆಲಸಗಳಲ್ಲಿ ಸಾಯುವ ತನಕ ದುಡಿಯಬೇಕು (ಈ ೨).

ಯಾರ ಯಾರ ದುಡಿತವು ಹೇಗೆ ಹೇಗೆ ಇರಬೇಕೆಂಬ ವಿಷಯದಲ್ಲಿ ವೇದವು ಒಂದು ನಿಯಮವನ್ನು ಮಾಡಿರುತ್ತದೆ. ಮನುಷ್ಯರನ್ನು ನಾಲ್ಕು ಜಾತಿಯಾಗಿ ವಿಂಗಡಿಸಿ ಅದು ಅವರಿಗೆ ಬೇರೆ ಬೇರೆ ಕರ್ಮಗಳನ್ನು ಗೊತ್ತು ಮಾಡಿದೆ. ಸತ್ತ್ವಗುಣವು ಹೆಚ್ಚಾಗಿರುವವರು ಬ್ರಾಹ್ಮಣರು. ಮನಸ್ಸನ್ನೂ ಇಂದ್ರಿಯಗಳನ್ನೂ ಬಿಗಿಹಿಡಿಯುವದು, ತಪಸ್ಸು, ಒಳಗೂ ಹೊರಗೂ ಕೂಡ ಶುಚಿಯಾಗಿರುವದು, ಕ್ಷಮೆ, ಸರಳತೆ, ಆತ್ಮನ ಅರಿವು, ಅದರ ಅನುಭವ, ದೇವರಿದ್ದಾನೆಂಬ ಮುಂತಾದ ಭರವಸೆ-ಇವೆಲ್ಲ ಬ್ರಾಹ್ಮಣರ ಹುಟ್ಟುಗುಣಕ್ಕೆ ತಕ್ಕ ಕರ್ಮಗಳು. ಸತ್ತ್ವಗುಣವೂ ಇದ್ದು ರಜೋಗುಣವು ಹೆಚ್ಚಾಗಿರುವವರು ಕ್ಷತ್ರಿಯರು. ಶೌರ್ಯ, ಧಿಟ್ಟತನ, ಧೈರ್ಯ, ಯಾವ ಕೆಲಸವನ್ನಾದರೂ ಚೆನ್ನಾಗಿ ಮಾಡುವದು, ಯುದ್ಧದಲ್ಲಿ ತಲೆ ತಪ್ಪಿಸಿಕೊಳ್ಳದಿರುವದು, ಕೈಬಿಟ್ಟುಕೊಡುವದು, ಆಳುವದು-ಇವೆಲ್ಲ ಕ್ಷತ್ರಿಯರ ಹುಟ್ಟುಗುಣಕ್ಕೆ ತಕ್ಕ ಕರ್ಮಗಳು ತಮೋಗುಣವೂ ಇದ್ದು ರಜೋಗುಣವು ಹೆಚ್ಚಾಗಿರುವವರು ವೈಶ್ಯರು. ಉಳುವದು, ದನಗಳನ್ನು ಸಾಕುವದು, ವ್ಯಾಪಾರ-ಇವೆಲ್ಲ ವೈಶ್ಯರ ಹುಟ್ಟುಗುಣಕ್ಕೆ ತಕ್ಕ ಕರ್ಮಗಳು. ರಜೋಗುಣವೂ ಇದ್ದು ತಮೋಗುಣವು ಹೆಚ್ಚಾಗಿರುವವರು ಶೂದ್ರರು. ಸೇವೆ ಮಾಡುವದು ಶೂದ್ರರ ಹುಟ್ಟುಗುಣಕ್ಕೆ ತಕ್ಕ ಕರ್ಮ.

—(ಭ ೪-೧೩;೧೮-೪೨..೪೪)

(ಅ) ತನ್ನ ಹುಟ್ಟುಗುಣಕ್ಕೆ ತಕ್ಕದ್ದಲ್ಲದ ಕರ್ಮವನ್ನು ತನ್ನಿಂದ ಚೆನ್ನಾಗಿ ನಡೆಸುವದಕ್ಕೆ ಆಗುವಂತಿದ್ದರೂ ತನ್ನ ಹುಟ್ಟುಗುಣಕ್ಕೆಂದು ಗೊತ್ತಾಗಿರುವದರಲ್ಲಿ ಗುಣವಿಲ್ಲದಿದ್ದರೂ ತನ್ನ ಹುಟ್ಟುಗುಣಕ್ಕೆ ತಕ್ಕ ಕರ್ಮವೆ ತನಗೆ ಮೇಲಾದ್ದರಿಂದ ಅದನ್ನು ಮಾಡುವದರಿಂದ ಯಾವ ಪಾಪವೂ ಇಲ್ಲ (ಭ ೧೮-೪೭). (ಆ) ತನ್ನ ಹುಟ್ಟುಗುಣಕ್ಕೆ ತಕ್ಕದ್ದರಲ್ಲಿ ದೋಷವು

ಕಂಡರೂ ಅದನ್ನು ಬಿಡಬಾರದು. ಏಕೆಂದರೆ: ಬೆಂಕಿಯನ್ನು ಅದರಲ್ಲಿ ಹುಟ್ಟಿದ ಹೊಗೆಯು ಮುತ್ತಿಕೊಂಡಿರುವಂತೆ ಎಲ್ಲ ಕೆಲಸಗಳಲ್ಲಿಯೂ ದೋಷವಿದ್ದೇ ಇರುವದು.—(ಭ ೧೮-೪೮). (ಇ) ತನ್ನ ಹುಟ್ಟುಗುಣಕ್ಕೆ ತಕ್ಕ ಕರ್ಮದಲ್ಲಿ ಸಾವು ಒದಗಿದರೂ ಮೇಲೇ; ಮತ್ತೊಬ್ಬರ ಹುಟ್ಟುಗುಣದ ಕರ್ಮವು ನರಕಕ್ಕೆ ದಾರಿಯನ್ನು ಮಾಡುವದು —(ಭ ೩-೩೫).

(ಅ) ಯಾವ ಕೆಲಸವನ್ನೂ ಮಾಡದೆ ಇದ್ದರೆ ಶರೀರವಿರುವದೇ ಕಷ್ಟವಾದೀತಾದ್ದರಿಂದ ಕರ್ಮವನ್ನು ಮಾಡಲೇ ಬೇಕಷ್ಟೆ. ಶಾಸ್ತ್ರದಲ್ಲಿ ತನಗೆ ಗೊತ್ತಾಗಿರುವ ಕರ್ಮವನ್ನು ಮಾಡುವದೊಳ್ಳೆಯದು.—(ಭ ೩-೮). (ಆ) ಜನರನ್ನು ಹುಟ್ಟಿಸಿದಾಗಲೆ ಬ್ರಹ್ಮನು ಯಜ್ಞಗಳನ್ನು ಸೃಷ್ಟಿಸಿ ಜನರನ್ನು ಕುರಿತು ಈ ಯಜ್ಞಗಳಿಂದ ನೀವು ಬೇಕುಬೇಕಾದದ್ದನ್ನು ಪಡೆದುಕೊಳ್ಳಿರೆಂದೂ ಯಜ್ಞವು ನಿಮಗೆ ಬೇಡಿದ್ದನ್ನೆಲ್ಲ ಕೊಡಲೆಂದೂ ಮೊದಲೇ ಹೇಳಿದನು (ಭ ೩-೧೦). (ಇ) ನಾವು ಯಜ್ಞವನ್ನು ಮಾಡಿ ಇಂದ್ರನೆ ಮೊದಲಾದ ದೇವತೆಗಳನ್ನು ಸಂತೋಷಗೊಳಿಸಬೇಕೆಂದೂ ಅವರು ನಮಗೆ ಮಳೆ ಮೊದಲಾದವುಗಳನ್ನು ಕೊಟ್ಟು ಸಂತೋಷಗೊಳಿಸಬೇಕೆಂದೂ ಹೀಗೆ ಒಬ್ಬರನ್ನೊಬ್ಬರು ಸಂತೋಷಗೊಳಿಸುತ್ತ ಒಳ್ಳೆ ಗತಿಯನ್ನು ಹೊಂದಲೆಂದೂ ಬ್ರಹ್ಮನ ಅಭಿಪ್ರಾಯ (ಭ ೩-೧೧). (ಈ) ಯಜ್ಞ, ದಾನ, ತಪಸ್ಸು-ಇವು ಮನುಷ್ಯನನ್ನು ಶುದ್ಧಿಗೊಳಿಸತಕ್ಕವುಗಳಾದ್ದರಿಂದ ಅವುಗಳನ್ನು ಬಿಡದೆ ಮಾಡಲೇಬೇಕು (ಭ ೧೮-೫). (ಉ) ತಿಳಿವಳಿಕೆ ಇಲ್ಲದೆ ಇವುಗಳನ್ನು ಬಿಡುವದು ತಾಮಸವೆನಿಸುವದು (ಭ ೧೮-೭). (ಊ) ಇವುಗಳನ್ನು ಮಾಡುವದರಿಂದ ಶರೀರಕ್ಕೆ ಆಯಾಸವಾಗುವದೆಂದು ಕೈಬಿಡುವದು ರಾಜಸವೆನಿಸುವದು (ಭ ೧೮-೮). (ಋ) ಯಾರು ಯಜ್ಞಗಳನ್ನು ಚೆನ್ನಾಗಿ ಮಾಡಿ ಬಿಡುವಾದ ಮೇಲೆ ಯೋಗ್ಯವಾದ ಊಟವನ್ನು ಉಣ್ಣುತ್ತಾರೊ ಅವರು ಈಶ್ವರನನ್ನು ಕಾಣುತ್ತಾರೆ. ಆ ಊಟವು ಅಮೃತ. ಯಜ್ಞವನ್ನು ಮಾಡದವರಿಗೆ ಈ ಲೋಕದ ಸುಖವೇ ಇಲ್ಲ; ಪರಲೋಕದ್ದಿನ್ನೆಲ್ಲಿಯದು?

—(ಭ ೪-೩೧).

(ಅ) ಉಂಡ ಅನ್ನವು ರಕ್ತವಾಗಿಯೂ ರೇತಸ್ಸಾಗಿಯೂ ರೂಪುಗೊಂಡ ಮೇಲೆ ಅದರಿಂದ ಮಕ್ಕಳು ಹುಟ್ಟುವರಷ್ಟೆ. ಆ ಅನ್ನವಾಗುವ ಧಾನ್ಯಗಳೆಲ್ಲ ಮಳೆಯಿಂದ ಬೆಳೆಯುವವು. ಮಳೆಯು ಯಜ್ಞದಿಂದಾಗುವದು. ಹೇಗೆಂದರೆ: ಯಜ್ಞದಲ್ಲಿ ನಾವು ಅಗ್ನಿಯಲ್ಲಿ ಹಾಕಿದ ಆಹುತಿಯು ಸೂರ್ಯನಿಗೆ ಹೋಗಿ ಸೇರುವದೆಂದೂ ಸೂರ್ಯನಿಂದ ಮಳೆಯಾಗುವದೆಂದೂ ಮಳೆಯಿಂದ ಧಾನ್ಯವಾಗುವದೆಂದೂ ಅದರಿಂದ ಸಂತತಿಯಾಗುವದೆಂದೂ ದೊಡ್ಡವರು ಹೇಳಿದ್ದಾರೆ.—(ಭ ೩-೧೪). (ಆ) ಹೀಗೆ ಸುತ್ತುತ್ತಿರುವ ಚಕ್ರಕ್ಕೆ ಯಾವನು ನೆರವಾಗುವದಿಲ್ಲವೊ ತನ್ನ ಇಂದ್ರಿಯಗಳ ಸುಖವನ್ನು ಮಾತ್ರ ನೋಡಿಕೊಳ್ಳುವ ಅವನು ಪಾಪಜೀವಿ. ಅವನ ಬಾಳು ವ್ಯರ್ಥ—(ಭ೩-೧೬). (ಇ) ದೇವತೆಗಳು ಕೊಟ್ಟ ಧಾನ್ಯದಿಂದಾದ ಅನ್ನವನ್ನು ದೇವರಿಗೆ ನಿವೇದನ ಮಾಡದೆ ಹೊಟ್ಟೆಬಾಕತನದಿಂದ ಮುಕ್ಕುವವನು ದೇವತೆಗಳ ಸ್ವತ್ತನ್ನು ಎತ್ತಿಹಾಕಿದ ಕಳ್ಳನೇ ಸರಿ (ಭ ೩-೧೨). (ಈ) ದೇವರಿಗೆ ನಿವೇದನ ಮಾಡಿ ಆ ಪ್ರಸಾದವನ್ನು ತಿಂದರೆ ಅದು ಪಾಪಗಳನ್ನೆಲ್ಲ ಕಳೆಯುವದು. ಹಾಗೆ ಮಾಡದೆ ತಮ್ಮ ಬಜ್ಜು ಬೆಳೆಸಿಕೊಳ್ಳುವದಕ್ಕಾಗಿ ಬೇಯಿಸುವವರು ಆ ಧಾನ್ಯವನ್ನು ಕುಟ್ಟುವಾಗ, ಬೀಸುವಾಗ, ಬೇಯಿಸುವಾಗ ತಮ್ಮ ಅರಿವಿಲ್ಲದೆ ನಡೆದ ಹಿಂಸೆಯೇ ಮೊದಲಾದ ಅನೇಕ ಪಾಪಗಳನ್ನು ಗಂಟು ಹಾಕಿಕೊಳ್ಳುತ್ತಾರೆ. —(ಭ ೩-೧೩)

ಮನುಷ್ಯನು ತಾನು ಕರ್ಮಸಂಬಂಧಿಯಲ್ಲದ ಆತ್ಮಸ್ವರೂಪನೆಂದು ತಿಳಿಯಬೇಕಾದದ್ದೇನೋ ಸರಿ. ಆದರೆ ಆ ಜ್ಞಾನವು ಕರ್ಮವನ್ನು ಮಾಡಿದ ಹೊರತು ಆಗಲಾರದು. ಆ ಜ್ಞಾನವಿಲ್ಲದೆ ಕರ್ಮಗಳನ್ನೆಲ್ಲ ಬಿಟ್ಟು ಕುಳಿತ ಮಾತ್ರಕ್ಕೇ ತಾನು ಕರ್ಮಸಂಬಂಧಿಯಲ್ಲದ ಆತ್ಮನಾಗುವದಿಲ್ಲ. ಆ ಜ್ಞಾನವಾಗುವದಕ್ಕೆ ತಕ್ಕ ಚಿತ್ತಶುದ್ಧಿಗಾಗಿ ಕರ್ಮವು ಬೇಕೇ ಬೇಕು. —(ಭ-೩-೪)

### ಕರ್ಮಗಳ ಕಿಶಿ

(ಅ) ಹೊಟ್ಟೇಪಾಡಿನ ಕರ್ಮಗಳಲ್ಲಿ ಸ್ವರ್ಗದ ಸೆಲೆಯೇ ಇಲ್ಲ. ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳಲ್ಲಿ ಅದೊಂದುಂಟು. ಜ್ಞಾನದ ಕಡೆಯ ಗುರಿಯನ್ನಿಟ್ಟುಕೊಳ್ಳದೆ ಮಾಡುವ ಬರೀ ಕರ್ಮಗಳು ದುಃಖಕ್ಕೇ ಕಾರಣಗಳಾ

ಗುವವು. ಈ ಕರ್ಮಗಳೆಲ್ಲ ತಾವೂ ನಾಶವಾಗತಕ್ಕವುಗಳು ಮತ್ತು ತಮ್ಮ ಫಲವೂ ನಿಲ್ಲದಂಥವುಗಳು. ಇಂಥ ಕರ್ಮಗಳೆ ತಮಗೆ ಗತಿಯೆಂದು ಯಾರು ತಿಳಿಯುತ್ತಾರೊ ಅಂಥ ಮೂಢರು ಶಾಸ್ತ್ರದಲ್ಲಿ ಹೇಳಿದ ಕರ್ಮಗಳನ್ನು ಮಾಡಿದರೆ ಸ್ವಲ್ಪಕಾಲ ಸ್ವರ್ಗದಲ್ಲಿ ಅಲ್ಲಾಡುತ್ತಿದ್ದು ಆಮೇಲೆ ಎಲ್ಲರೂ ಮುಪ್ಪುಸಾವುಗಳಿಗೆ ಹಿಂದಿರುಗುತ್ತಾರೆ — (ಮುಂ ೧-೨-೭). (ಆ) ಕರ್ಮಗಳಲ್ಲಿರುವ ಈ ಒಗಟನ್ನು ಕಳೆಯುವದಕ್ಕೆ ಶಾಸ್ತ್ರವು ಉಪಾಯವನ್ನು ಕಂಡು ಹಿಡಿದಿರುತ್ತದೆ. ಲೌಕಿಕವಾದ ಕರ್ಮವಾಗಲಿ, ಶಾಸ್ತ್ರದಲ್ಲಿ ಹೇಳಿದ ಕರ್ಮವಾಗಲಿ-ಕರ್ಮಗಳೆಂಬುವೆಲ್ಲ ಏನಾದರೂ ಫಲವನ್ನು ಕೊಟ್ಟೇ ಕೊಡುತ್ತವೆ. ಆ ಫಲಗಳಲ್ಲಿ ಒಂದೊಂದು ಬೇಕೆನಿಸುವದೂ ಉಂಟು; ಒಂದೊಂದು ಬೇಡವೆನಿಸುವದೂ ಉಂಟು. ಈ ಸಂದರ್ಭದಲ್ಲಿ ಮನುಷ್ಯನು ತನ್ನ ಮನುಷ್ಯತ್ವವನ್ನು ತೋರಿಸತಕ್ಕದ್ದಿರುವದು ಅದೇನೆಂದರೆ: ಬೇಕುಬೇಡೆಂಬವುಗಳ ಬಲೆಗೆ ಅವನು ಬೀಳಬಾರದು ಅವುಗಳ ಬಲೆಗೆ ಬಿದ್ದೊಡನೆ ಅವನು ತನ್ನ ಹುಟ್ಟುಗುಣಕ್ಕೆ ತಕ್ಕ ಕರ್ಮಗಳನ್ನು ಕಡೆಗಂಡು ಮತ್ತೊಬ್ಬರ ಹುಟ್ಟುಗುಣದ ಕರ್ಮಗಳಿಗೆ ಕೈಹಾಕುವವನಾಗುತ್ತಾನೆ. ಆ ಬಲೆಯನ್ನೊಂದು ಕಡೆಗೆ ಸರಿಸಿಬಿಟ್ಟರೆ ಆಮೇಲೆ ಅವನು ಶಾಸ್ತ್ರವನ್ನು ಗೌರವಿಸುವವನಾಗಿ ತನ್ನ ಹುಟ್ಟುಗುಣಕ್ಕೆ ತಕ್ಕದ್ದನ್ನು ಮಾಡುವವನಾಗುತ್ತಾನೆ. ಬೇಕುಬೇಡೆಂಬೀ ಎರಡೂ ಮನುಷ್ಯನ ಏಳಿಗೆಯ ದಾರಿಯುಲ್ಲಿರುವ ಕಳ್ಳರು.--(ಭ ೩-೩೪)

(ಅ) ಬಯಕೆ, ಸಿಟ್ಟು, ದುರಾಶೆ-ಈ ಮೂರೂ ನರಕದ ಬಾಗಿಲುಗಳು. ಇವುಗಳಿಗೆ ಕಾಲಿಡುತ್ತಲೆ ಮನುಷ್ಯನು ಹಾಳಾಗುವನು. ಆದ್ದರಿಂದ ಈ ಮೂರನ್ನೂ ಬಿಡಬೇಕು. —(ಭ ೧೬-೨೧). (ಆ) ಈ ಮೂರರಲ್ಲಿ ಹಿರಿಯದಾದ ಬಯಕೆ ಎಂಬುದು ಮನುಷ್ಯನನ್ನು, ಅವನು ಬೇಡವೆಂದರೂ ಅರಸನು ಆಳನ್ನು ಮುಂದುಮಾಡುವಂತೆ, ಪಾಪದಲ್ಲಿ ತೊಡಗಿಸುವದು (ಭ ೩-೩೬). (ಇ) ಸತ್ತ್ವಗುಣದ ಬಯಕೆಯು ಧರ್ಮಕ್ಕೆ ಒಪ್ಪಾದದ್ದಾಗಿ ಈಶ್ವರಾಂಶವೆನಿಸಿರುವದರಿಂದ ಇಲ್ಲಿ ಬಯಕೆಯೆಂಬ ಮಾತಿಗೆ ರಜೋಗುಣದ ಬಯಕೆಯೆಂದರ್ಥ (ಭ ೭-೧೧). (ಈ) ಏಕೆಂದರೆ: ರಜೋಗುಣದ ಬಯ

ಕೆಯು ತನಗೇನಾದರೂ ಅಡ್ಡಿಯೊದಗುತ್ತಲೆ ಸಿಟ್ಟಿನ ರೂಪಕ್ಕೆ ತಿರುಗಿ ಮನುಷ್ಯನಿಗೆ ಎಲ್ಲ ಅನರ್ಥಗಳನ್ನೂ ಉಂಟುಮಾಡುವದಾಗಿಯೂ ಎಷ್ಟು ಕೊಟ್ಟರೂ ಹೊಟ್ಟೆತುಂಬದ್ದಾಗಿಯೂ ಮಹಾಪಾಪಿಯಾಗಿಯೂ ಎಲ್ಲರ ಹಗೆಯಾಗಿಯೂ ಇರುವದು. ಹೊಗೆಯು ಬೆಂಕಿಯನ್ನು ಮುತ್ತಿಕೊಂಡಿರುವಂತೆಯೂ ಕೊಳೆಯು ಕನ್ನಡಿಯನ್ನು ಮುಸುಕಿಕೊಂಡಿರುವಂತೆಯೂ ಜರಾಯುವೆಂಬ ಚೀಲವು ಗರ್ಭವನ್ನು ಆವರಿಸಿಕೊಂಡಿರುವಂತೆಯೂ ರಜೋಗುಣದ ಬಯಕೆಯು ಆತ್ಮನನ್ನು ಸುತ್ತುಗಟ್ಟಿಕೊಂಡಿರುವದು. ರಜೋಗುಣದ ಬಯಕೆಯನ್ನು ಮೂರ್ಖನು ತತ್ಕಾಲದಲ್ಲಿ ಗೆಳೆಯನಂತೆ ಕಂಡು ಕೊನೆಗೆ ತನಗೆ ಹಾನಿಯಾದಾಗ ಆದರಿಂದ ತಾನು ಕೆಟ್ಟೆನೆಂದು ತಲೇ ಚಚ್ಚಿಕೊಳ್ಳುವನು ; ಜ್ಞಾನಿಯು ಅದೇ ತನ್ನನ್ನು ಹಿಂದೆ ಕೇಡಿಗೆ ಗುರಿಮಾಡಿದ್ದೆಂದು ಅದರ ಮೇಲೆ ಯಾವಾಗಲೂ ಹಗೆತನ ಉಳ್ಳವನಾಗಿರುವನು. ಅದು ಇಂದ್ರಿಯ, ಮನಸ್ಸು, ಬುದ್ಧಿ-ಇವುಗಳನ್ನು ಮನೆ ಮಾಡಿಕೊಂಡು ಜ್ಞಾನವನ್ನು ಮರೆಮಾಡಿ ಮನುಷ್ಯನನ್ನು ದಿಕ್ಕುಗೆಡಿಸುವದು ಆದ್ದರಿಂದ ಇಂದ್ರಿಯಗಳನ್ನು ಮೊದಲು ಬಿಗಿಹಿಡಿದು ಶಾಸ್ತ್ರದಿಂದಲೂ ಗುರುಗಳಿಂದಲೂ ತಿಳಿದ ಆತ್ಮವಿಷಯಕವಾದ ತಿಳಿವಳಿಕೆಯನ್ನೂ ಅದರ ಅನುಭವವನ್ನೂ ಹಾಳುಮಾಡುವ ಪಾಪಿಯಾದ ಈ ರಜೋಗುಣದ ಬಯಕೆಯನ್ನು ತೊಲಗಿಸಬೇಕು. —(ಭ ೩-೩೭..೪೧)

(ಅ) ಬಯಕೆ, ಸಿಟ್ಟು-ಮೊದಲಾದವುಗಳನ್ನು ಬಿಟ್ಟು ಇಂದ್ರಿಯಗಳನ್ನು ಬಿಗಿಹಿಡಿದು ಆತ್ಮನನ್ನು ಅರಿತವರಿಗೆ ಬದುಕಿರುವಾಗಲೂ ಸತ್ತ ಮೇಲೆಯೂ ಯಾವಾಗಲೂ ಮೋಕ್ಷವೇ (ಭ ೫-೨೬). (ಆ) ಕಂಡು ಕೇಳಿದ ಮತ್ತು ನೆನಪಾದ ವಿಷಯಗಳು ಬೇಕೆನಿಸಿದರೆ ಕೂದಲು ಹುರಿಗೂಡಿ ಮುಖವು ಅರಳಿ ಉಂಟಾಗುವ ಬಯಕೆಯನ್ನೂ ಬೇಡವೆನಿಸಿದರೆ ಮೈನಡುಕ, ಬೆವರು, ಹಲ್ಲುಕಡಿಯುವದು ಮುಂತಾದವುಗಳನ್ನು ಮುಂದುಗೊಂಡು ಬರುವ ಸಿಟ್ಟನ್ನೂ ಸಾಯುವದಕ್ಕೆ ಮುಂಚೆ ಬದುಕಿರುವಾಗಲೆ ಯಾವನು ತಡೆಯಬಲ್ಲನೊ ಅವನೆ ಸುಖಿ (ಭ ೫-೨೩).

(ಅ) ಕರ್ಮಗಳಿಗೆ ಹೇಳಿರುವ ಫಲದ ಮಾತುಗಳು, ಕಣ್ಣಿಗೆ ಹೂ ಹೇಗೊ ಹಾಗೆ, ಕಿವಿಗೆ ಮನೋಹರವಾಗಿರುವವು. ಇವಕ್ಕೆ ಮರುಳಾದ ದಡ್ಡರು

ಸ್ವರ್ಗ, ಧನ-ಮೊದಲಾದವುಗಳನ್ನು ಕೊಡುವ ಕರ್ಮಗಳಿಗಿಂತ ಹೆಚ್ಚಿನದೇನೂ ಇಲ್ಲವೆಂದು ಬಯಕೆಗೆ ಸೋತು ಸ್ವರ್ಗವೆ ಹೆಚ್ಚಿನ ಸುಖವೆಂದು ಮೋಸ ಹೋಗಿ ಭೋಗಕ್ಕಾಗಿ ಮತ್ತು ಐಶ್ವರ್ಯಕ್ಕಾಗಿ ಹುಟ್ಟು, ಸಾವು-ಮೊದಲಾದವುಗಳನ್ನು ಕೊಡುವ ಕರ್ಮಗಳ ಬಡಿವಾರವನ್ನೆ ಹಾಡಿ ಹರಸುತ್ತಿರುವರು. ಅಂಥವರ ಬುದ್ಧಿಯು ಒಮ್ಮುಖವಾಗುವದಿಲ್ಲ. —(ಭ ೨-೪೨..೪೪). **(ಆ)** ಫಲವನ್ನು ಬಯಸಿ ಮಾಡುವ ಕರ್ಮವು ಬಹು ಕೀಳು. ಜಾಣನಾದವನು ಜ್ಞಾನಕ್ಕೆ ಶರಣು ಹೋಗಲೇಬೇಕು. ಬಯಸುವವದೆನ್ನುವದು ತಿರುಕತನ.—(ಭ ೨-೪೯). **(ಇ)** ತಾನು ಮಾಡುವ ಕರ್ಮದಲ್ಲಿ ಪಾಪವು ಗಂಟು ಬಿದ್ದೀತೆಂಬ ಪ್ರಸಂಗವೇನಾದರೂ ಕಂಡರೂ ಆ ಕರ್ಮದ ಫಲವಾಗುವ ಸುಖವನ್ನೂ ನಷ್ಟವನ್ನೂ, ಗೆಲವನ್ನೂ ಸೋಲನ್ನೂ-ಈ ಜೋಡಿಗಳನ್ನೆಲ್ಲ ಸಮವಾಗಿ ನೋಡಿದರೆ ಆ ಪಾಪವೆಳ್ಳಷ್ಟೂ ಗಂಟುಬೀಳುವದಿಲ್ಲ (ಭ ೨-೩೮). **(ಈ)** ಸಮತ್ವಬುದ್ಧಿಯಿಂದ ನೋಡುವವರಿಗೆ ಆ ಕರ್ಮಗಳ ಪಾಪವೂ ಅಂಟುವದಿಲ್ಲ; ಪುಣ್ಯವೂ ಅಂಟುವದಿಲ್ಲ. ಪಾಪವು ಹೇಗೆ ಹುಟ್ಟುಸಾವುಗಳನ್ನು ಕೊಡತಕ್ಕದ್ದೋ ಪುಣ್ಯವೂ ಹಾಗೆಯೇ. ಆವೆರಡನ್ನೂ ಅಂಟಿಸಿಕೊಳ್ಳದಿರುವಂತೆ ಸಮತ್ವಬುದ್ಧಿ ಇರುವದೇ ಕರ್ಮದಲ್ಲಿ ಜಾಣತನ.—(ಭ ೨-೫೦). **(ಉ)** ಬೆಳೆ ಇಟ್ಟ ಸಸಿಗಳಿಗೆ ಕೊಯ್ಲು ಇರುವಂತೆ ಬಯಕೆ ಇಲ್ಲದ ಕರ್ಮಗಳ ಆರಂಭವು ನಾಶವಾಗುವದಿಲ್ಲ. ಔಷಧಿಗಳಿಂದ ಒಮ್ಮೊಮ್ಮೆ ತೊಂದರೆಗಳುಂಟಾಗುವಂತೆ ಬಯಕೆ ಇಲ್ಲದ ಕರ್ಮಗಳ ಮುಂದ ತೊಂದರೆಗಳು ತಲೆ ಹಾಕುವದಿಲ್ಲ. ಇಂಥ ಕರ್ಮವನ್ನು ಸ್ವಲ್ಪವೇ ನಡೆಸಿದರೂ ಅದು ಹುಟ್ಟು ಸಾವುಗಳ ಭಯವನ್ನು ಹಿಮ್ಮೆಟ್ಟಿಸಿ ಕಾಪಾಡುವದು.—(ಭ ೨-೪೦). **(ಊ)** ನರಕ, ಸ್ವರ್ಗ, ಮನುಷ್ಯತ್ವ-ಇವೆಲ್ಲ ಫಲವನ್ನು ಬಯಸುವ ಕರ್ಮಠರಿಗೆ ಬಂದು ಗಂಟುಬೀಳುವವೇ ಹೊರತು ಫಲವನ್ನು ಬಯಸದವರಿಗಲ್ಲ (ಭ ೧೮-೧೨). **(ಋ)** ಬಯಕೆಗಳನ್ನು ಬಿಟ್ಟರೆ ಎಲ್ಲ ಕರ್ಮಗಳನ್ನೂ ಬಿಟ್ಟಂತೆಯೆ. ಏಕೆಂದರೆ: ಬಯಕೆಯುಂಟಾಗುತ್ತಲೆ ಮಾಡಬೇಕೆನಿಸುತ್ತದೆ. ಆಮೇಲೆ ಮಾಡುತ್ತಾನೆ. ಪ್ರಾಣಿಯು ಏನು ಮಾಡಿದರೂ ಬಯಕೆಯಿಂದಲೆ. —(ಭ೬-೪). **(ೠ)** ತನಗೆ ಗೊತ್ತಾದ ಕರ್ಮವನ್ನು ಬಯಕೆಯಾಗಲಿ ಹಗೆತನವಾಗಲಿ ಇಲ್ಲದೆ

ಫಲವನ್ನು ಬಯಸದೆ ಮಾಡುವ ಕರ್ಮವು ಸಾತ್ತ್ವಿಕ; ತಾನು ಮಾಡುತ್ತೇನೆಂಬ ಗರ್ವವನ್ನಿಟ್ಟುಕೊಂಡು ಫಲವನ್ನು ಬಯಸಿ ಬಹು ಕಷ್ಟಪಟ್ಟು ಮಾಡುವದು ರಾಜಸ; ಮುಂದೇನಾಗುವದೆಂಬುದನ್ನೂ ಶಕ್ತಿಯಾಗಲಿ ಹಣವಾಗಲಿ ಎಷ್ಟು ವೆಚ್ಚವಾಗುವದೆಂಬುದನ್ನೂ ಪ್ರಾಣಿಗಳಿಗಾಗುವ ಪೀಡೆಯನ್ನೂ ಅದನ್ನು ಮಾಡಿ ಮುಗಿಸುವದಕ್ಕೆ ತನ್ನಲ್ಲಿರಬೇಕಾದ ಯೋಗ್ಯತೆಯನ್ನೂ ನೋಡಿಕೊಳ್ಳದೆ ಮಾಡುವದು ತಾಮಸ.—(ಭ ೧೮-೨೩..೨೫).

(ಅ) ಬಯಕೆಯನ್ನು ಬಿಡುವದರ ವಿಷಯವನ್ನೇ ಇಲ್ಲಿ ವಿವರಿಸಲಾಗುವದು. ಕರ್ಮವನ್ನು ಮಾಡುವವರು ಎಂಥ ಬಿಕ್ಕಟ್ಟಿನ ಕಾಲವಲ್ಲಿಯೂ ಅದರ ಫಲಕ್ಕೆ ಬಾಯಿನೀರು ಸುರಿಸಬಾರದು. ಫಲವನ್ನು ಬಯಸುತ್ತಾಲೆ ಅದನ್ನು ಉಂಡು ತೀರಿಸುವದಕ್ಕಾಗಿ ಮತ್ತೆ ಮತ್ತೆ ಹುಟ್ಟಿ ಸಾಯುತ್ತಿರಬೇಕಾಗುತ್ತದೆ. ಫಲವು ಬೇಡವೆಂದರೆ ಕರ್ಮವನ್ನು ಮಾಡುವ ಆಯಾಸವಿನ್ನೇಕೆಂದು ಅದನ್ನು ಬಿಡಲೂ ಬಾರದು. —(ಭ ೨-೪೭). (ಆ) ವೇದದಲ್ಲಿ ಹೇಳಿರುವ ಕರ್ಮಗಳೆಲ್ಲ ಸಂಸಾರದಲ್ಲಿ ಆಗುವ ಫಲವನ್ನು ಬೇಳಗತಕ್ಕವುಗಳು. ಆ ಫಲಕ್ಕೆ ಸೋಲಬಾರದು. ತನ್ನ ಕರ್ಮದ ಫಲವಾಗಿ ಸುಖವಾದರೂ ಆಗಲಿ, ದುಃಖವಾದರೂ ಆಗಲಿ; ಪಾಲಿಗೆ ಬಂದದ್ದು ಪಂಚಾಮೃತವೆಂದು ಅವುಗಳನ್ನು ಸಮವಾಗಿ ಕಾಣುತ್ತ ಯಾವಾಗಲೂ ಸತ್ತ್ವಗುಣದವನಾಗಿರಬೇಕು. ಮರೆತಾದರೂ ಇಲ್ಲದ್ದು ಬರಬೇಕೆಂದೂ ಇದ್ದದ್ದು ಹೋಗಬಾರದೆಂದೂ ಮನಸ್ಸಿಗೆ ಹಚ್ಚಿಕೊಂಡು ತೊಳಲಬಾರದು. ಅಂಥವರಿಗೆ ಮೋಕ್ಷದ ದಾರಿ ಸಾಗುವದಿಲ್ಲ. —(ಭ ೨-೪೫).

(ಅ) ಫಲದ ಬಯಕೆಯವರಿಗೆ ಆಗುವ ದೊಡ್ಡ ಹಾನಿಯೇನೆಂದರೆ: ಅದು ಅವರನ್ನು ಈಶ್ವರನ ಮೇಲೆ ಭಕ್ತಿಯನ್ನು ಮಾಡಗೊಡದೆ ಆ ಈಶ್ವರನಿಂದ ಅಧಿಕಾರವನ್ನು ಹೊಂದಿ ಜಗತ್ತಿನ ಯೋಗಕ್ಷೇಮಕ್ಕಾಗಿ ದುಡಿಯುತ್ತಿರುವ ಸೇವಕರಾದ ಇಂದ್ರನೇ ಮೊದಲಾದ ದೇವತೆಗಳ ಕಡೆಗೆಳೆಯುವದು. ಏಕೆಂದರೆ: ಆ ಫಲಗಳೆಲ್ಲ ಅವರ ಮೂಲಕವೆ ಬರುತ್ತಿರುವವು. ಈ ಮನುಷ್ಯಲೋಕದಲ್ಲಿ ಫಲವು ಕೈಸೇರುವದು ಬಹು ಬೇಗ. ಆದ್ದರಿಂದ ಫಲದ ಬಯಕೆಯು ಮನುಷ್ಯನನ್ನು ದೇವತೆಗಳ ಕಡೆಗೆಳೆಯುವ ಮೂಗು

ದಾಣವಾಗಿರುವದು.—(ಭ ೪-೧೨). (ಆ) ಮನುಷ್ಯರು ತಮ್ಮ ಹುಟ್ಟುಗುಣಕ್ಕೇ ತಾವು ದಾಸರಾಗಿ ಬಯಕೆಗೆ ಸೋತು ಬೇರೆಬೇರೆ ದೇವತೆಗಳ ಪೂಜೆಗೆ ಗೊತ್ತಾಗಿರುವ ನಿಯಮಗಳನ್ನು ನಡೆಸುತ್ತ ಅವರ ಪೂಜೆಗಳನ್ನು ಮಾಡುವರು. ಯಾರು ಯಾರು ಯಾವಯಾವ ದೇವತೆಗಳನ್ನು ಶ್ರದ್ಧೆಯಿಂದ ಪೂಜಿಸುವರೊ ಅವರವರಿಗೆ ಈಶ್ವರನು ಆಯಾ ಶ್ರದ್ಧೆಯನ್ನೇ ಬಲಪಡಿಸುವನು. ಅವರು ಆ ಶ್ರದ್ಧೆಯಿಂದ ಆ ದೇವತೆಗಳನ್ನೇ ಪೂಜಿಸುವರು. ಅವರ ಫಲಗಳನ್ನು ಈಶ್ವರನೆ ಕೊಟ್ಟರೂ ಪಡೆಯುವವರು ಅದನ್ನು ಆ ದೇವತೆಗಳ ಮೂಲಕ ಪಡೆಯುತ್ತಾರೆ. ದಷ್ಟರು ಪಡೆಯುವ ಆ ಫಲಗಳೆಲ್ಲ ಮೂರು ದಿನದ ಬಾಳಿನವು. ಹೀಗೆ ದೇವತೆಗಳನ್ನು ಪೂಜಿಸಿದವರು ಸತ್ತ ಮೇಲೆ ಆ ದೇವತೆಗಳ ಲೋಕಕ್ಕೆ ಹೋಗುತ್ತಾರೆ. ಈಶ್ವರನನ್ನು ಪೂಜಿಸಿದವರಿಗೆ ಆಯಾಸವು ಅಷ್ಟೇ ಆದರೂ ಬಹು ಹೆಚ್ಚಿನ ಫಲವು ದೊರೆಯುವದು.—(ಭ ೭-೨೦. ೨೩). (ಇ) ಈಶ್ವರನನ್ನು ಗುರಿಯಲ್ಲಿಟ್ಟುಕೊಂಡು ಈಶ್ವರನೆ ಸರ್ವರ ಆತ್ಮನೆಂಬ ಬುದ್ಧಿಯಿಂದ ಮಾಡಬಾರದ ಕೆಲಸಗಳನ್ನು ಮಾಡಿದರೂ ಕೂಡ ಈಶ್ವರನ ಅನುಗ್ರಹದಿಂದ ಅವನಿಗೆ ಅಚ್ಚಳಿಯದ ಸುಖವೇ ದೊರೆಯುತ್ತದೆ. (ಭ ೧೮ ೫೬). (ಈ) ಯಾವನಿಂದ ಈ ಜಗತ್ತು ಹೊರಬಿದ್ದಿದೆಯೊ ಯಾವನು ಈ ಜಗತ್ತಿನಲ್ಲೆಲ್ಲ ತುಂಬಿಕೊಂಡಿರುವನೊ ಅಂಥ ಈಶ್ವರನನ್ನು ಪೂಜಿಸಿದರೆ, ಎಂದರೆ ಅದನ್ನು ಈಶ್ವರನ ಪ್ರೀತಿಗೆಂದು ಮಾಡಿದರೆ, ಅವನಿಗೆ ಬ್ರಹ್ಮಜ್ಞಾನವನ್ನು ಪಡೆಯುವ ಯೋಗ್ಯತೆಯುಂಟಾಗುತ್ತದೆ. (ಭ ೧೮-೪೬). (ಉ) ಈಶ್ವರನಿಗಲ್ಲದ ಕರ್ಮವನ್ನು ಮಾಡಿದರೆ ಅದು ಮಾತ್ರ ಅವನನ್ನು ಹುಟ್ಟುಸಾವುಗಳ ಕಟ್ಟಿಗೊಳಪಡಿಸುವದು. ಆದ್ದರಿಂದ ಫಲವನ್ನು ಬಯಸದೆ ಈಶ್ವರನಿಗಾಗಿ ಕರ್ಮವನ್ನು ಮಾಡಬೇಕು.

—(ಭ ೩-೯).

ಫಲವನ್ನು ಬಯಸುವವರು ಶ್ರದ್ಧೆಯಿಂದ ಆಯಾ ಬಯಕೆಯನ್ನು ತೀರಿಸುವ ಅಧಿಕಾರ ಉಳ್ಳ ಬೇರೆಬೇರೆ ದೇವತೆಗಳನ್ನು ಪೂಜಿಸುವರೆಂದು ಹಿಂದೆ ಮಾತು ಬಂತಷ್ಟೆ. ಆ ದೇವತೆಗಳ ಆತ್ಮವು ಈಶ್ವರನೆ. ಅವರು ಬೇರೆಬೇರೆ ದೇವತೆಗಳನ್ನು ಪೂಜಿಸಿದರೂ ಈಶ್ವರನನ್ನೇ ಪೂಜಿಸಿದಂತಾಗು

ವದು ಈ ಗುಟ್ಟು ಅವರಿಗೆ ಗೊತ್ತಿಲ್ಲ. ಶ್ರುತಿಯಲ್ಲಿ ಅಥವಾ ಸ್ಮೃತಿಯಲ್ಲಿ ಹೇಳಿರುವ ಯಾವ ಯಜ್ಞವನ್ನು ಮಾಡಿದರೂ ಆ ಪೂಜೆಯನ್ನು ತೆಗೆದುಕೊಂಡು ಆ ಹವಿಸ್ಸನ್ನುಣ್ಣುವವನು ಈಶ್ವರನೆ. ಇದನ್ನು ತಿಳಿಯದೆ ಅವರು ಬೇರೆ ದೇವತೆಗಳಲ್ಲಿ ಮನಸ್ಸಿಟ್ಟು ಹೆಚ್ಚಿನ ಫಲವಾಗುತ್ತಿದ್ದದ್ದನ್ನು ಕಳೆದುಕೊಳ್ಳುತ್ತಾರೆ. ದೇವತೆಗಳ ಭಕ್ತರು ದೇವಲೋಕಕ್ಕೂ ಪಿತೃಗಳ ಭಕ್ತರು ಪಿತೃಲೋಕಕ್ಕೂ ಭೂತಗಳ ಭಕ್ತರು ವಿನಾಯಕ, ಮಾತೃಗಣ-ಮೊದಲಾದ ಭೂತಗಳ ಲೋಕಕ್ಕೂ ಹೋಗುತ್ತಾರೆ. ಈಶ್ವರನ ಭಕ್ತರು ಈಶ್ವರನನ್ನೆ ಪಡೆಯುತ್ತಾರೆ. ಈಶ್ವರನನ್ನು ಭಜಿಸದವರು ಸಣ್ಣ ಫಲವನ್ನು ಮಾತ್ರ ಪಡೆಯುತ್ತಾರೆ. —(ಭ ೯-೨೩, ೨೫)

## ಆತ್ಮನ ಅರಿವಾದ ಮೇಲೆ ಕರ್ಮದ ಅಗತ್ಯವಿಲ್ಲ

(ಅ) ಯಾವನು ತನ್ನ ಮನಸ್ಸನ್ನು ಒಮ್ಮುಖವಾಗಿ ಸಾತ್ವಿ ಬ್ರಹ್ಮದಲ್ಲಿ ನಿಲ್ಲಿಸಲರಿಯನೊ ಅವನು ಮಾತ್ರವೆ ಆ ಯೋಗ್ಯತೆಯನ್ನು ಪಡೆಯುವದಕ್ಕಾಗಿ ಕರ್ಮವನ್ನು ಮಾಡಲೇ ಬೇಕೇ ಹೊರತು ಯಾವನು ಧ್ಯಾನದ ಮೆಟ್ಟಿಲನ್ನು ಹತ್ತಿ ಕದಲದೆ ನಿಂತಿರುವನೊ ಅವನಿಗೆ ಅದು ಅಗತ್ಯವಲ್ಲ. ಅವನು ಕರ್ಮಗಳನ್ನೆಲ್ಲ ಕೈಬಿಟ್ಟು ತನ್ನ ಧ್ಯಾನವನ್ನೆ ಮುಂದುವರಿಸಬೇಕು. ಅವನು ಕರ್ಮಗಳನ್ನು ಬಿಟ್ಟು ಎಷ್ಟೆಷ್ಟು ಹಿಮ್ಮೆಟ್ಟಿ ನಿಲ್ಲುವನೊ ಅಷ್ಟಷ್ಟು ಅವನು ಮನಸ್ಸನ್ನು ಅಲುಗಾಡದಂತೆ ಇಡಬಲ್ಲವನಾಗುವನು. ಇಂದ್ರಿಯಗಳಿಗೆ ಬೇಕೆನಿಸುವ ಶಬ್ದ ಮೊದಲಾದ ವಿಷಯಗಳನ್ನು ದೊರಕಿಸುವದಕ್ಕಾಗಿ ಅಥವಾ ಈ ಸುಖಗಳನ್ನು ಸತ್ತ ಮೇಲೆ ಕೊಡುವ ಬುತ್ತಿಯನ್ನು ಸಿದ್ಧಗೊಳಿಸುವದಕ್ಕಾಗಿ ಯಾವದೊಂದು ಕರ್ಮದ ಕಡೆಗೂ ಯಾವಾಗ ಎಷ್ಟು ಮಾತ್ರವೂ ಬುದ್ಧಿಯು ಹರಿಯುವದಿಲ್ಲವೊ ಆಗ ಅವನು ಧ್ಯಾನದ ಮೆಟ್ಟಿಲನ್ನು ಹತ್ತಿ ನಿಂತವನಾಗುವನು. (—ಭ ೬-೩, ೪). (ಆ) ಯಾರು ಧ್ಯಾನಯೋಗದ ಮೆಟ್ಟಿಲಿನ ಗುರಿ ಇಲ್ಲದೆ ಸುಮ್ಮನೆ ಕುರಿಯಂತೆ ತಲೆ ಬಗ್ಗಿಸಿಕೊಂಡು ಕರ್ಮವನ್ನೆ ಮಾಡುತ್ತಿರುತ್ತಾರೊ ಅವರಿಗೆ ಎಂದೆಂದಿಗೂ ಮುಂದುಗಾಣದ ಸಂಸಾರವೇ ಗತಿ. ಯಾರು ಕರ್ಮವನ್ನು ಮಾತ್ರ ಬೋಧಿಸುವಂಥ ವೇದಭಾಗದಲ್ಲಿಯೇ ಮನಸ್ಸಿಟ್ಟು ವೇದವೆಲ್ಲ ಇದನ್ನು ಮಾಡೆಂದೂ ಇದನ್ನು ಬಿಡೆಂದೂ

ಕರ್ಮವನ್ನೇ ಹೇಳುವದೆಂದು ತಿಳಿಯುತ್ತ ಉಪನಿಷತ್ತುಗಳ ಅರ್ಥವನ್ನು ಉಪೇಕ್ಷೆ ಮಾಡುವರೊ ಅವರಿಗಂತು ಇನ್ನೂ ಹೆಚ್ಚಿನ ದುರ್ಗತಿ. ಆತ್ಮಸ್ವರೂಪವನ್ನು ಅರಿಯದವರಿಗೆ ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ಕಷ್ಟವನ್ನನುಭವಿಸುವದೇ ಹಣೆಯಲ್ಲಿ ಬರೆದದ್ದು. —(೪-೪-೧೦, ೧೧)

(ಅ) ಧ್ಯಾನದ ಮೆಟ್ಟಲಿನವರಿಗೇ ಕರ್ಮವು ಆಗತ್ಯವಿಲ್ಲವೆಂದ ಮೇಲೆ ಜ್ಞಾನಿಗೆ ಅದರ ಆಗತ್ಯವಿಲ್ಲವೆಂದು ಹೇಳಬೇಕಾದದ್ದೇ ಇಲ್ಲ. ಆದರೂ ಅವನಿಗೆ ಕರ್ಮಗಳಿಂದಾಗುವ ಲಾಭವೇನೂ ಇಲ್ಲದೆ ಹೋಗುವದಿಲ್ಲ. ಒಂದು ಬಾವಿಯಿಂದಾಗುವ ಪ್ರಯೋಜನಗಳನ್ನೆಲ್ಲ ಹೇಗೆ ದೊಡ್ಡ ಕೆರೆಯು ಒಳಗೊಂಡಿರುವದೊ ಹಾಗೆ ಕರ್ಮಗಳಿಂದಾಗುವ ಪ್ರಯೋಜನಗಳನ್ನೆಲ್ಲ ಬ್ರಹ್ಮಜ್ಞಾನವು ಒಳಗೊಂಡಿರುವದು.—(ಭ ೨-೪೬). (ಆ) ಯಾವನು ತನ್ನ ಆತ್ಮನಲ್ಲಿಯೇ ಪ್ರೀತಿಯುಳ್ಳವನಾಗಿ ಅದೇ ಸಾಕೇ ಹೊರತು ಅದರ ಮುಂದೆ ಅನ್ನನೀರು ಕೂಡ ಬೇಡವೆಂದು ತನ್ನಲ್ಲಿ ತಾನು ತೃಪ್ತನಾಗಿರುವನೊ ಅವನು ಏನೇನೂ ಮಾಡಬೇಕಾದದ್ದಿಲ್ಲ. ಮಾಡಿದ್ದರಿಂದ ಅವನಿಗೆ ಆಗಬೇಕಾದದ್ದೇನೇನೂ ಇಲ್ಲ. ಮಾಡದೆ ಇರುವದರಿಂದ ಏನಾದರೂ ದೋಷ ಬಂದೀತೆಂಬ ಅಥವಾ ಲಾಭಕ್ಕೆ ಕೊರತೆಯಾದೀತೆಂಬ ಹೆದರಿಕೆ ಅವನಿಗಿಲ್ಲ. ಅವನಿಗೆ ಯಾರಿಂದಲೂ ಏನೂ ಆಗಬೇಕಾದದ್ದಿಲ್ಲವಾದ್ದರಿಂದ ಅವನು ಏನನ್ನೂ ಮಾಡಬೇಕಾದ ಆಗತ್ಯವಿಲ್ಲ. —(ಭ ೩-೧೭,೧೮)

(ಅ) ಇದರ ಮೇಲೆ ಜ್ಞಾನವೂ ಕರ್ಮವೂ ಒಂದು ಕಡೆ ಇರಲಾರವು. ಜ್ಞಾನಿಯು ತಾನು ಏನನ್ನೂ ಮಾಡುವವನಲ್ಲವೆಂದರಿತಿರುವನು; ಕರ್ಮವು ತಾನು ಮಾಡುವವನೆಂಬ ಅಭಿಮಾನ ಉಳ್ಳವನಿಂದ ನಡೆಯತಕ್ಕದ್ದಾಗಿರುವದು. ಜ್ಞಾನಿಯು ಬ್ರಹ್ಮ ಒಂದನ್ನೇ ನಿಜವೆನ್ನುವವನಾಗಿರುವನು; ಕರ್ಮವು ಅನೇಕ ವಸ್ತುಗಳುಂಟೆಂಬ ಅರಿವಿನಿಂದ ನಡೆಯತಕ್ಕದ್ದಾಗಿರುವದು. ಹೀಗಿರುವಾಗ ಜ್ಞಾನಿಯಲ್ಲಿ ಕರ್ಮಕ್ಕೆ ಕಾಲಿಡುವದಕ್ಕೆ ದಾರಿಯೆಲ್ಲಿ?—(ಭ ೨-೧೧). (ಆ) ಅಗ್ನಿಹೋತ್ರ ಮೊದಲಾದವುಗಳನ್ನು ಮಾಡಬೇಕೆಂದು ತಿಳಿದ ಮೇಲೆ ತಾನು ಅದನ್ನು ಮಾಡತಕ್ಕವನೆಂಬ ಅಭಿಮಾನ ಉಳ್ಳ ಅಜ್ಞಾನಿಯು ಅದಕ್ಕೆ ಬೇಕಾದ ಅನೇಕ ಉಪಕರಣಗಳನ್ನು ಕೂಡಿಸಿಕೊಂಡು

ಹೇಗೆ ಮಾಡುವನೋ ಹಾಗೆ ತಾನು ಕರ್ಮದ ಸೋಂಕಿಲ್ಲದ ಬ್ರಹ್ಮವೆಂದರಿತ ಮೇಲೆ ಆ ಜ್ಞಾನಿಯು ಹೇಗೆ ಮಾಡುವನು? ಅದು ಅಸಂಭವ- —(ಭ೨-೨). (ಇ) ಕರ್ಮಗಳೆಲ್ಲ ಅಜ್ಞಾನಿಗೆ ಹೇಳಿದವುಗಳೇ ಹೊರತು ಜ್ಞಾನಿಗಲ್ಲ. ಸೂರ್ಯೋದಯವಾದೊಡನೆ ಕತ್ತಲೆ ಅಡಗಿಹೋಗುವಂತೆ ಜ್ಞಾನವು ಹುಟ್ಟುತ್ತಲೆ ಅಜ್ಞಾನವು ಅಡಗಿಹೋಗುವದು. ಅಜ್ಞಾನವಿರುವಾಗ ಮಾಡುವಿಕೆ, ಮಾಡುವ ಸಾಧನ-ಮೊದಲಾದವುಗಳೆಲ್ಲ ನಿಜವೆಂಬ ಬುದ್ಧಿ ಇರುವದರಿಂದ ಕರ್ಮವು ನಡೆಯುವದು. ಅವೆಲ್ಲ ಸುಳ್ಳೆಂಬ ಬುದ್ಧಿಯುಂಟಾದ ಮೇಲೆ ಕರ್ಮವು ಹೇಗೆ ಸಾಗೀತು? —(ಭ ೨-೬೯)

ಇಷ್ಟೆ ಅಲ್ಲ; ವಿಧಿಪ್ರಕಾರವಾಗಿ ಕೈಗೊಂಡಿದ್ದ ಎಲ್ಲ ಕರ್ಮಗಳನ್ನೂ ವಿಧಿಪ್ರಕಾರವಾಗಿಯೇ ಕೈಬಿಟ್ಟು ಸಂನ್ಯಾಸವೆಂಬ ನಾಲ್ಕನೆಯ ಆಶ್ರಮವನ್ನೆ ಸ್ವೀಕರಿಸಬೇಕೆನ್ನುವವರೆಗೂ ಶಾಸ್ತ್ರವು ಹೋಗಿರುವದು. ಗೃಹಸ್ಥನಾಗಿರುವಾಗಲೇ ಜ್ಞಾನವಾದರೂ ಶಾಸ್ತ್ರವು ಅವನನ್ನು ಅಲ್ಲಿ ಇರಗೊಡಿಸುವದಿಲ್ಲ. ಏಕೆಂದರೆ: ಗೃಹಸ್ಥನಾಗಿರುವದೆಂಬುದೊಂದು ಅಭಿಮಾನದ ಗಂಟೇ ಆಗಿರುವದು. ಅಲ್ಲಿ ತನಗೆ ಅಭಿಮಾನವನ್ನು ಹುಟ್ಟಿಸುವ ಹೆಂಡತಿ, ಮಕ್ಕಳು-ಮೊದಲಾದವರ ಸೋಂಕಿರುವದು. ಸಂನ್ಯಾಸಿಗೂ ಭಿಕ್ಷಾಟನಾದಿಗಳಿರುವದರಿಂದ ಗೃಹಸ್ಥನೇ ಆಗಿದ್ದು ಬದುಕಿರುವಷ್ಟು ಮಾತ್ರ ಉಂಡುಕೊಂಡು ಹೊದ್ದುಕೊಂಡು ಮನೆಯಲ್ಲಿಯೇ ಏಕಿರಬಾರದೆಂದು ಒಂದು ಪ್ರಶ್ನೆ ಬರಬಹುದು. ಇದು ಭಿಕ್ಷಾಟನ ಮೊದಲಾದದ್ದಕ್ಕೆ ಮೈಗೊಡಲಾರದ ಮೈಗಳ್ಳರ ಮಾತೇ ಸರಿ. ಅವನು ಆ ಮನೆಯಲ್ಲಿಯೇ ಇರಬೇಕೆಂಬ ಅಭಿಮಾನವೇಕೆ? ಆದ್ದರಿಂದ ಅವನು ಸಂನ್ಯಾಸಿಯಾಗಬೇಕು. ಈ ಸಂನ್ಯಾಸಾಶ್ರಮವು ಬರೀ ಜ್ಞಾನಿಗಳಿಗೆ ಮಾತ್ರವೇ ಅಲ್ಲ. ಮೋಕ್ಷವನ್ನು ಬಯಸುವ ಅಜ್ಞಾನಿಯು ಕೂಡ ಸಂನ್ಯಾಸವನ್ನು ಕೈಗೊಳ್ಳಬೇಕು. ಮನಸ್ಸನ್ನೂ ಇಂದ್ರಿಯಗಳನ್ನೂ ಬಿಗಿಹಿಡಿಯುವದೇ ಮೊದಲಾದ ಸಾಧನವು ಸಂನ್ಯಾಸಾಶ್ರಮದಲ್ಲಿ ಮೈಗೂಡಿದಂತೆ ಬೇರೆ ಆಶ್ರಮದಲ್ಲಿ ಉಂಟಾಗುವದಿಲ್ಲ. ಸಂನ್ಯಾಸವೆಂದರೆ ಬೆಚ್ಚಿಬೀಳುವವರು ತಾವು ದೇವಋಣ, ಋಷಿಋಣ, ಪಿತೃಋಣ-ಎಂಬ ಮೂರು ಸಾಲಗಳ ಹೊರೆಯನ್ನು ಇಳಿಸಿಕೊಳ್ಳದೆ ಹೇಗೆ ಕಾವಿಯನ್ನುಟ್ಟು

ಬಿಡೋಣವೆಂದು ಸೇವವನ್ನು ಮುಂದು ಮಾಡುವರು. ಯಜ್ಞ ಮೊದಲಾದ ಕರ್ಮಗಳನ್ನು ಮಾಡಿದರೆ ದೇವತೆಗಳ ಸಾಲವು ಮುಟ್ಟುವದೆಂದೂ ವೇದಗಳನ್ನು ಓದಿದರೆ ಋಷಿಗಳ ಸಾಲವು ತೀರುವದೆಂದೂ ಒಳ್ಳೆ ಮಗನನ್ನು ಹಡೆದರೆ ಪಿತೃಗಳ ಸಾಲವು ಹರಿಯುವದೆಂದೂ ಹೇಳುವದುಂಟು. ಈ ಸಾಲಗಳ ಹೊರೆಯು ತನ್ನ ತಲೆಯ ಮೇಲೆ ತಾನಾಗಿ ಬಂದು ಆವರಿಸಿಲ್ಲ. ಮದುವೆಯಾಗುವವರೆಗೂ ಆ ಹೊರೆ ಇರುವದೇ ಇಲ್ಲ. ಮದುವೆಯಾಗುತ್ತಲೆ ಅದು ಬಂದು ಕಾಲು ಚಾಚುವದು. ಸಂನ್ಯಾಸವನ್ನು ಮಾಡುತ್ತಲೆ ಅದು ಬಾಲವನ್ನು ಮುದುರಿಕೊಂಡು ಓಡುವದು. ಆದ್ದರಿಂದ ಇಂಥ ಕುಂಟ ನೆವಗಳ ಮರೆಯಲ್ಲಿ ಮೈಮರೆಸಿಕೊಳ್ಳದೆ ಮೋಕ್ಷವನ್ನು ಬಯಸುವವನು ಎದೆಗಾರನಾಗಿ ಮುಂದೆ ಬಂದು ವಿಧಿಪ್ರಕಾರವಾಗಿ ಸಂನ್ಯಾಸವಾಡಿದರೆ ಶಾಸ್ತ್ರವು ಆಗ ಸಂತೋಷಪಡುವದು. —(ಐ. ಅವ.)

## ಜನರ ಮೇಲುಪಙ್ತಿಗಾದರೂ ಕರ್ಮವನ್ನು ಮಾಡಲೇ ಬೇಕು.

ಹೀಗಿದ್ದರೂ ಜ್ಞಾನಿಯು ಜನರಿಗೆ ಮೇಲುಪಙ್ತಿಯಾಗಿ ಕರ್ಮವನ್ನು ಮಾಡುತ್ತಿರುವದೊಳ್ಳೆಯದು. ಚೆನ್ನಾಗಿ ತಿಳಿದವರೆನಿಸಿದ ಜನಕ, ಅಶ್ವಪತಿ-ಮೊದಲಾದ ಹಿಂದಿನ ರಾಜರು ಕರ್ಮದಿಂದಲೆ ಮೋಕ್ಷವನ್ನು ದೊರಕಿಸಿಕೊಂಡರು. ಅವರು ಬ್ರಹ್ಮವನ್ನರಿತರಾಗಿದ್ದರೆಂದಿಟ್ಟುಕೊಂಡರೆ ಅವರು ಜನರ ಮೇಲುಪಙ್ತಿಗಾಗಿ ಕರ್ಮವನ್ನು ನಡೆಸುತ್ತಲೆ ಮುಕ್ತರಾದರು ಇನ್ನು ಅವರು ಜ್ಞಾನವನ್ನಿನ್ನೂ ಪಡೆಯದಿದ್ದವರೆಂದಿಟ್ಟುಕೊಂಡರೆ ಕರ್ಮವನ್ನು ಮಾಡುತ್ತ ಚಿತ್ತವನ್ನು ಶುದ್ಧಮಾಡಿಕೊಂಡು ಹಾಗೆಯೇ ಜ್ಞಾನವನ್ನು ಪಡೆದು ಮುಕ್ತರಾದರೆನ್ನಬೇಕು. ಹಾಗಲ್ಲದೆ ಅವರು ಆತ್ಮವನ್ನರಿತವರಲ್ಲದ್ದರಿಂದಲೆ ಕರ್ಮವನ್ನು ಮಾಡುತ್ತಿದ್ದರೆಂದೂ ಅರಿತವರಾದ ನಾವೇಕೆ ಮಾಡಬೇಕೆಂದೂ ಯಾರಾದರೂ ಕೇಳಬಹುದು. ಜನರು ಕರ್ಮವನ್ನು ಬಿಟ್ಟು ಕೆಡದಂತೆ ಅವರಿಗೆ ಮೇಲುಪಙ್ತಿಯಾಗಿರುವದಕ್ಕಾಗಿಯಾದರೂ ಕರ್ಮವನ್ನು ಮಾಡಬೇಕು. ದೊಡ್ಡವರೆನಿಸಿಕೊಂಡವರು ಏನೇನು ಮಾಡುತ್ತಾರೊ ಉಳಿದವರು ಅದನ್ನು ಮಾಡುತ್ತಾರೆ. ದೊಡ್ಡವರೆನಿಸಿಕೊಂಡವರು ಯಾವದನ್ನು ಸರಿಯೆನ್ನುತ್ತಾರೊ ಉಳಿದವರು ಅದನ್ನೆ ಸರಿಯೆನ್ನು

ತ್ತಾರೆ. ಕೃಷ್ಣನಿಗೆ ಮೂರು ಲೋಕಗಳಲ್ಲಿಯೂ ಏನೇನೂ ಮಾಡಬೇಕಾದದ್ದಿರಲಿಲ್ಲ; ಆದರೂ ಅವನು ಕರ್ಮದಲ್ಲಿ ತೊಡಗಿಯೇ ಇದ್ದನು. ಆಯಾಸವೆಂದು ಬಗೆದು ಅವನು ಎಷ್ಟು ಮಾತ್ರವೂ ಕರ್ಮವನ್ನು ಮಾಡದೆ ಬಿಟ್ಟಿದ್ದರೆ ಜಗತ್ತಿನ ಜನರೆಲ್ಲರೂ ಅವನ ಮೇಲುಪಜ್ಙೆಯನ್ನೇ ತೀಡುತ್ತಿದ್ದರು. ಅವನು ಕರ್ಮವನ್ನು ಮಾಡದೆ ಹೋಗಿದ್ದರೆ ಲೋಕವೇ ಹಾಳಾಗುತ್ತಿತ್ತು ಮತ್ತು ಜಾತಿಗಳ ನಿಯಮಗಳೆಲ್ಲ ಕಲಸಿ ಹೋಗಿ ಹಳಸುತ್ತಿದ್ದವು. ಇದರಿಂದ ಅವನು ಎಲ್ಲರನ್ನೂ ಹಾಳುಮಾಡಿದವನಾಗುತ್ತಿದ್ದನು. ಆದ್ದರಿಂದ ಜನರ ಹಿತವನ್ನು ಬಯಸುವವನು ತಾನು ಆತ್ಮತತ್ತ್ವವನ್ನು ತಿಳಿದವನಾಗಿದ್ದರೂ, ತಿಳಿಯದವರು ಹೇಗೆ ಮಾಡುವರೊ ಹಾಗೆ, ತಾನು ಮಾಡುವವನೆಂಬ ಅಭಿಮಾನವಿಲ್ಲದೆ ಮಾಡಬೇಕು. ತಾನು ಇಂಥದ್ದನ್ನು ಮಾಡಬೇಕೆಂದೂ ತಾನು ಇಂಥ ಫಲವನ್ನು ಉಣ್ಣುವೆನೆಂದೂ ಬಲವಾದ ಅಭಿಪ್ರಾಯ ಉಳ್ಳವರಿಗೆ ಅವರ ಆ ಅಭಿಪ್ರಾಯವನ್ನು ಒಮ್ಮೆಗೇ ಕದಲಗೊಡಬಾರದು. ಅದು ತಿಳುವಳಿಕೆಯಿಂದ ಸಡಿಲವಾಗಬೇಕು. ಆದ್ದರಿಂದ ತಿಳಿದವರು ಸಮತ್ವಬುದ್ಧಿಯನ್ನಿಟ್ಟುಕೊಂಡು ತಿಳಿಯದವರಂತೆ ಮಾಡುತ್ತ ಅವರಿಂದ ಮಾಡಿಸಬೇಕು. —(ಭ ೩-೨೦..೨೬)

ವೇದಾಂತವು ಮೂಗುಹಿಡಿಸಿ ಮೂಲೆಗೆ ಕೂಡಿಸುವದೆಂದು ಕೆಲವರು ಹೇಳುವರು. ಇದು ವೇದಾಂತದ ನಿಜವಾದ ಪ್ರತಿಭೆಯನ್ನು ಹತ್ತಿರಕ್ಕೆ ಹೋಗಿ ಕಾಣದೆ ದೂರದಿಂದ ನೋಡಿ ಏನೇನೋ ತಪ್ಪುತಿಳಿದುಕೊಂಡು ಅದರ ಸ್ವರೂಪವನ್ನು ಕುರಿತು ಏನೇನನ್ನೊ ಕನವರಿಸುತ್ತಿರುವವರ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವ ಮಾತು. ವೇದಾಂತವು ಮೂಗುಹಿಡಿಸುವದೆಂಬ ಮಾತು ಸ್ವಲ್ಪ ಮಟ್ಟಿಗೆ ನಿಜ. ಆದರೆ ಅದು ಹಾಗೆ ಮಾಡಿ ಜೀವನ ಶಕ್ತಿಯನ್ನೆಲ್ಲ ಒಮ್ಮುಖಕ್ಕೆ ತಂದು ಹೆಚ್ಚು ಸದುಪಯೋಗವಾಗುವಂತೆ ಅವನಿಂದ ಕೆಲಸವನ್ನು ಮಾಡಿಸುವದೇ ಹೊರತು ಮೂಲೆಗೆ ಕೂಡಿಸುವದಿಲ್ಲ. ಮೂಲೆಗೆ ಕೂಡಿಸುವದು ಕ್ಷಯರೋಗವೇ ಸರಿ. ವೇದಾಂತದ ಸಂಸ್ಕಾರವಿಲ್ಲದವನಲ್ಲಿ ಅಷ್ಟಿಷ್ಟು ಶಕ್ತಿ ಇದ್ದರೂ ಅದು, ಗಾಳಿಯ ಹೊಯ್ದಾಟದಿಂದ ಬೆಳಕು ಕೊಡಲಾರದ ಪರದೇಶದ ಎಣ್ಣೆಯ ದೀಪದಂತೆ, ಇರುವದು.

ಆದರ ಮೇಲೆ ಗಾಜಿನ ಕೊಳವಿಯನ್ನಿಟ್ಟು ಗಾಳಿಯ ಹೊಯ್ದಾಟವನ್ನು ತಪ್ಪಿ ದೊಡನೆ ಆದು ಉಜ್ಜ್ವಲವಾಗಿ ಬೆಳಗುವಂತೆ ವೇದಾಂತದಿಂದ ಮೂಗು ಹಿಡಿದವರ ಶಕ್ತಿಯು ಹೆಚ್ಚು ಕೆಲಸವನ್ನು ಮಾಡುವದು. ವೇದಾಂತದ ತಿಳಿವಳಿಕೆಯನ್ನು ಮೈಗೂಡಿಸಿಕೊಳ್ಳುವದು ಸಂಸಾರವೆಂಬ ಸಮುದ್ರದಲ್ಲಿ ಈಜುವದನ್ನು ಕಲಿತಂತೆ. ನೀರಿಗೆ ಬಿದ್ದಾಗ ಈಜು ಬರದವನಂತೆ ಈಜುಬಂದವನು ಎದೆಗೆಡುವದಿಲ್ಲ. ಇಷ್ಟೇ ಅಲ್ಲ. ಅವನು ನೆಲದ ಮೇಲೆ ಹೇಗೊ ಹಾಗೆ ನೀರಿನ ಮೇಲೆ ಬಗೆಬಗೆಯ ನಡಿಗೆಯನ್ನು ಕೂಡ ತೋರಿಸುವನು. ಅದರಂತೆ ನಿಜವಾದ ವೇದಾಂತಿಯು ಎಲ್ಲರ ಮೂಗಿನ ಮೇಲೆ ಬೆರಳಿಡಿಸಿ ವ್ಯವಹಾರದಲ್ಲಿ ತನ್ನ ದಕ್ಷತೆಯನ್ನು ತೋರಿಸುವನು. ಇಲ್ಲಿ ವ್ಯವಹಾರವೆಂದರೆ ಸಾಮಾನ್ಯ ಪ್ರಾಪಂಚಿಕರದು ಸಣ್ಣ ಕುಟುಂಬದ್ದಾಗಿದ್ದರೆ ವೇದಾಂತಿಯದು ಲೋಕಕುಟುಂಬದ್ದಾಗಿರುತ್ತದೆ. ಸಣ್ಣ ಕುಟುಂಬಕ್ಕೆ ಕಟ್ಟುಬೀಳುವದನ್ನು ವೇದಾಂತಿಯು ತನ್ನ ಯೋಗ್ಯತೆಗೆ ಬಹುಕಡಿಮೆಯದೆಂದು ತಿಳಿಯುತ್ತಾನೆ. ವೇದಾಂತದ ತಿಳಿವಿನಿಂದ ಅವನಲ್ಲಿ ಹುಟ್ಟುವ ಉತ್ಸಾಹದ ಝರಿಯು ಅವನನ್ನು ಲೋಕಕುಟುಂಬಕ್ಕೆ ಸೆಳೆದೊಯ್ಯುತ್ತದೆ. ಲೋಕದಲ್ಲಿ ಯಾರು ಮಹಾಕರ್ಮವೀರರೆನಿಸಿಕೊಂಡಿರುವರೊ ಅವರಿಗೆಲ್ಲ ತಿಳಿದೊ ತಿಳಿಯದೆಯೊ ವೇದಾಂತವೆ ಸನ್ನೆಯ ಮರವಾಗಿರುವದು. ವೇದಾಂತವೆ ಅವರನ್ನು ಕರ್ಮಕ್ಷೇತ್ರದಲ್ಲಿ ಕುಣಿಸುವದು. ವೇದಾಂತದ ಬೆಂಬಲವಿಲ್ಲದವರ ಕರ್ಮವು ಕಡಿಮೆಯ ತರಗತಿಯದಾಗುವದು. ಹಿಂದಿನ ಕಾಲದ ವೇದಾಂತಿಗಳಾದ **ಶ್ರೀ ಶಂಕರಾಚಾರ್ಯರೂ** ಈಗಿನ ಕಾಲದ ವೇದಾಂತಿಗಳಾದ **ಶ್ರೀವಿವೇಕಾನಂದರೂ** ಹೇಗೆ ಜಗತ್ತಿನಲ್ಲೆಲ್ಲ ಗುಡುಗಾಡಿರುವರೆಂಬುದನ್ನು ನೋಡಿದರೆ ವೇದಾಂತಿಗಳ ಕರ್ಮದಕ್ಷತೆಯ ಬಣ್ಣವು ಹೊರಬೀಳುವದು. ಕೆಲವರು ವೇದಾಂತಿಗಳು ಮೂಗು ಹಿಡಿದುಕೊಂಡು ಮೂಲೆಯಲ್ಲಿ ಕುಳಿತುಕೊಳ್ಳುವದೂ ನಿಜ. ಆದರೆ ಅವರು ಸೋಮಾರಿಗಳಾಗಿ ಕೂತಿರುವದಿಲ್ಲ. ಎಲ್ಲರೂ ಓಡಾಡುತ್ತ ಕೆಲಸಗಳನ್ನು ಮಾಡಿದರೆ ಅವರು ಕುಳಿತೇ ಕೆಲಸ ಮಾಡುವರು. ಅವರು ತಾವು ಇದ್ದಲ್ಲಿಂದಲೆ ಒಬ್ಬರಿಗೂ ಕಾಣದಂತೆ ತಮ್ಮ ಮನಃಶಕ್ತಿಯಿಂದ ಧರ್ಮದ ಅಲೆಗಳನ್ನು ವಾತಾವರಣದಲ್ಲಿ ಹರಿಸುವರು. ಇದರಿಂದ ಅವರು ಬಾಯಿಬಿಟ್ಟು

ಉಪದೇಶಮಾಡದೆ ಜನರಲ್ಲಿ ತಿದ್ದುಪಾಡುಗಳಾಗುವವು. ಇವರ ಕರ್ಮದಕ್ಷತೆಯು ಬಹಳ ಉಚ್ಚತರಗತಿಯದು. ಇವರೇ ನಮ್ಮ ದೇಶದ ಜೀವ. ಇಂಥ ದಕ್ಷತೆಯುಳ್ಳವರನ್ನು ಹೊಂದಿರುವದೇ ನಮ್ಮ ದೇಶದ ಹೆಚ್ಚುಗಾರಿಕೆ. ಇದನ್ನು ಗುರ್ತಿಸುವ ಯೋಗ್ಯತೆ ಇಲ್ಲದೆ ತಮ್ಮ ಮೂಗಿನ ನೇರಕ್ಕೆ ನೋಡಿ ದಡ್ಡರು ಅವರನ್ನು ಸೋಮಾರಿಗಳೆಂದು ಭಾವಿಸುವರು. ವೇದಾಂತಿಗಳೆಂದೆಂದಿಗೂ ಸೋಮಾರಿಗಳಲ್ಲ. ವೇದಾಂತವು ಸರ್ವೋತ್ತಮರಾದ ಕರ್ಮಯೋಗಿಗಳನ್ನು ಸಿದ್ಧಗೊಳಿಸುವ ಸಾಧನ. ಬರೀ ಪ್ರಾಪಂಚಿಕರಾದ ಕರ್ಮಯೋಗಿಗಳು ಎಷ್ಟು ತಿಣಕಿದರೂ ಸಾಧಿಸಲಾಗದ ಮಹಾಕಾರ್ಯಗಳನ್ನು ವೇದಾಂತದ ಕರ್ಮಯೋಗಿಗಳು ಬೆರಳ ತುದಿಯಲ್ಲಿ ಕುಣಿದಾಡಿಸುವರು. ವೇದಾಂತಿಗಳಿಗೆ ಕರ್ಮದಿಂದ ತಮ್ಮ ಸ್ವಂತಕ್ಕಾಗಬೇಕಾದದ್ದೇನೂ ಇಲ್ಲವಾದ್ದರಿಂದ ಅವರು ತಮ್ಮ ದಕ್ಷತೆಯನ್ನು ಧಾರಾಳವಾಗಿ ಪರಹಿತಕ್ಕೆ ಉಪಯೋಗಿಸುವರು. ಒಂದುಗಡೆಯಾದರೂ ಇಣಿಕಿ ನೋಡುತ್ತಿರುವ ಸ್ವಪ್ರಯೋಜನದ ದೃಷ್ಟಿಯುಳ್ಳವರಿಗೆ ಅಷ್ಟು ಧಾರಾಳಬುದ್ಧಿಯುಂಟಾಗುವದು ಶಕ್ಯವೇ ಇಲ್ಲ. ಜ್ಞಾನಿಗಳು ಕರ್ಮವನ್ನು ಮಾಡುವದಿಲ್ಲವೆಂಬ ಮಾತಿಗೆ ಅವರು ಆ ಕರ್ಮಗಳೆಲ್ಲ ದೇಹೇಂದ್ರಿಯಗಳಿಂದ ನಡೆಯುವವೇ ಹೊರತು ತಮ್ಮ ಆತ್ಮನಿಂದ ನಡೆಯುವದಿಲ್ಲವೆಂದು ತಿಳಿದಿರುವರೆಂದರ್ಥ. ನಿಜವಾಗಿ ಬೆಲೆಯುಳ್ಳ ಕರ್ಮವನ್ನು ಮಾಡಬೇಕೆನ್ನುವವರು ನಮ್ಮ ವೇದಾಂತಕ್ಕೆ ಶರಣು ಬರಲೇ ಬೇಕು.

# ೧೦—ಭಕ್ತಿಯೆಂಬ ದಾರಿ

## ಭಕ್ತಿಯೆಂದರೇನು ?

ಕರ್ಮವೆಂಬ ದಾರಿಯು ವೇದದಲ್ಲಿ ಹೇಳಿರುವ ನಿಯಮಗಳಿಗೊಳಪಟ್ಟು ಹೆಜ್ಜೆಯನ್ನಿಡುವ ದಾರಿ. ನಿಯಮಗಳಿಗೊಳಪಟ್ಟು ನಡೆಯುವದು ಒಮ್ಮೊಮ್ಮೆ ಮನುಷ್ಯನಿಗೆ ಸರಿಬೀಳುವದಿಲ್ಲ. ಮನುಷ್ಯನು ಯಾವಾಗಲೂ ತಾನೇ ತಾನಾಗಿ ತನ್ನ ಮನಸ್ಸು ಬಂದಂತೆ ನಡೆಯಬೇಕೆಂದು ಬಯಸುವವನು. ಅವನು ತನ್ನ ಮನಸ್ಸು ದೇವರ ಕಡೆಗೆ ಹರಿಯುವದಕ್ಕೆ ಆ ನಿಯಮಗಳೊಂದು

ಬಗೆಯ ತಡೆಯೆಂದು ಭಾವಿಸುವನು. ಅಂಥವರಿಗೂ ಒಂದು ದಾರಿಯುಂಟು. ಅದು ಭಕ್ತಿಯೆಂಬ ದಾರಿ. ಈ ದಾರಿಯಲ್ಲಿ ವೇದದ ತಾಳಕ್ಕೆ ಹೊಂದಿಕೆಯಾಗಿ ಹೆಜ್ಜೆಯನ್ನಿಡಬೇಕಾದದ್ದಿಲ್ಲ. ಇದರಲ್ಲಿ ಮನಸ್ಸಿನ ಒಲವು ಮುಖ್ಯ. ಒಬ್ಬನಿಗೆ ಮತ್ತೊಬ್ಬರು ಹೇಳುವದನ್ನು ಕೇಳುವ ಒಲವಿದ್ದರೆ ಅವನು ಯಾವಾಗಲೂ ಒಳ್ಳೆ ತಿಳಿದವರಿಂದ ಪರಮಾತ್ಮನ ಕಥೆಗಳನ್ನು ಕೇಳುತ್ತಿರಬಹುದು. ಒಬ್ಬನಿಗೆ ಹಾಡುವ ಒಲವಿದ್ದರೆ ಅವನು ಆ ಕಥೆಗಳನ್ನು ಹಾಡುತ್ತ ಕಾಲವನ್ನು ಕಳೆಯಬಹುದು. ಒಬ್ಬನಿಗೆ ಒಂಟಿಯಾಗಿ ಕುಳಿತುಕೊಳ್ಳುವ ಒಲವಿದ್ದರೆ ಅವನು ಪರಮಾತ್ಮನ ಹೆಸರುಗಳನ್ನು ನೆನೆಯುತ್ತ ಕುಳಿತುಕೊಳ್ಳಬಹುದು. ಒಬ್ಬನಿಗೆ ದುಡಿಯುವ ಒಲವಿದ್ದರೆ ಅವನು ಪರಮಾತ್ಮನ ಭಕ್ತರ ಕೈಕಾಲೊತ್ತುವದು ಮೊದಲಾದದ್ದನ್ನು ಮಾಡಬಹುದು; ಹೂ, ಗಂಧ-ಮೊದಲಾದವುಗಳನ್ನು ಒದಗಿಸಿಕೊಂಡು ಮನಸ್ಸು ದಣಿಯುವಂತೆ ಭಕ್ತರನ್ನೂ ಪರಮಾತ್ಮನ ವಿಗ್ರಹಗಳನ್ನೂ ಪೂಜಿಸಬಹುದು; ಅವರಿಗೆ ಬೇಕಾದಷ್ಟು ನಮಸ್ಕಾರಗಳನ್ನು ಹಾಕಬಹುದು; ದೇವರ ಗುಡಿಯನ್ನು ಗುಡಿಸಿ ಸಾರಿಸಿ ರಂಗವಲ್ಲಿಯನ್ನಿಟ್ಟು ಪಾತ್ರೆಗಳನ್ನೆಲ್ಲ ಬೆಳಗುತ್ತ ಹೂದೋಟವನ್ನು ಬೆಳೆಸಬಹುದು. ಒಬ್ಬನಿಗೆ ಗೆಳೆತನದ ಒಲವಿದ್ದರೆ ಅವನು ದೇವರು ತನಗೆ ಗೆಳೆಯನಾಗಿ ಹತ್ತಿರದಲ್ಲಿಯೇ ಇರುವನೆಂದು ತಿಳಿದು ಅವನ ಒಡನಾಡಿಯಾಗಿರುವಂತೆಯೇ ಭಾವಿಸಿಕೊಳ್ಳುತ್ತಿರಬಹುದು. ಒಬ್ಬನಿಗೆ ಇತರರ ಮೇಲೆ ತನ್ನ ಭರವಸವನ್ನಿಡುವ ಒಲವಿದ್ದರೆ ತನ್ನದನ್ನೆಲ್ಲ ದೇವರಿಗೊಪ್ಪಿಸಿರುವೆನೆಂದು ಭಾವಿಸಿ ತಾನು ದೇವರ ಆಳಾಗಿ ದುಡಿಯುತ್ತಿರುವೆನೆಂದು ತಿಳಿದುಕೊಳ್ಳುತ್ತಿರಬಹುದು. ಹೀಗೆಲ್ಲ ಮನಸ್ಸಿನ ಒಲವನ್ನು ನೋಡಿ ಪರಮಾತ್ಮನ ಮೇಲಿನ ಭಕ್ತಿಯನ್ನು ವೃದ್ಧಿಗೊಳಿಸಿಕೊಳ್ಳುವದು ಭಕ್ತಿಯೆಂಬ ದಾರಿ.

## ಭಕ್ತಿಯ ಹೆಚ್ಚುಗಾರಿಕೆ

(ಅ) ಕರ್ಮವೆಂಬ ದಾರಿಯಲ್ಲಿರುವ ನಿಯಮಗಳನ್ನೆಲ್ಲ ನಡೆಸಲರಿಯದವರು ಒಬ್ಬ ಗುರುಗಳ ಮೂಲಕವಾಗಿ ಭಕ್ತಿಯ ದಾರಿಯನ್ನು ತಿಳಿದುಕೊಂಡು ಶ್ರದ್ಧೆಯಿಂದ ಮುಂದೆ ಹೆಜ್ಜೆಯನ್ನಿಡುತ್ತಾರೆ. ತಮಗೆ ತಿಳಿಯದಿದ್ದರೂ ಗುರುಗಳ ಉಪದೇಶದಲ್ಲಿ ಭರವಸನ್ನಿಟ್ಟು ಅವರು ಕೂಡ ಸಂಸಾರವೆಂಬ

ಮೃತ್ಯುವನ್ನು ದಾಟುತ್ತಾರೆ. —(ಭ ೧೩-೨೫). **(ಆ)** ಎಷ್ಟು ಹೆಚ್ಚಿನ ದುರಾಚಾರಿಯಾಗಲಿ, ನೀನೇ ಗತಿಯೆಂದು ಈಶ್ವರನ ಮೇಲೆ ಭಕ್ತಿಯನ್ನು ಮಾಡಿದರೆ, ಅವನು ಹೆಚ್ಚಿನ ಸದಾಚಾರಿಯೆಂದು ತಿಳಿಯಬೇಕು. ಏಕೆಂದರೆ: ಅವನು ಭಕ್ತಿಯ ದಾರಿಗೆ ತಿರುಗುವ ಧೈರ್ಯವನ್ನು ಮಾಡಿದ್ದು ಅಷ್ಟು ಒಳ್ಳೆಯದು. ಅವನು ಬಹುಬೇಗ ಧಾರ್ಮಿಕನಾದ ಮನಸ್ಸಿನವನಾಗುತ್ತಾನೆ. ಬಹುಬೇಗ ಅವನ ಮನಸ್ಸಿಗೆ ಶಾಂತಿ ದೊರೆಯುತ್ತದೆ. ಈಶ್ವರನ ಭಕ್ತನಿಗೆಂದಿಗೂ ಹಾನಿ ತಟ್ಟುವದಿಲ್ಲವೆಂದು ಆಣೆ ಮಾಡಿ ಹೇಳಬಹುದು. ಈಶ್ವರನ ಮೇಲೆ ಭಕ್ತಿಯನ್ನು ಮಾಡಿ ಮಹಾಮಹಾಪಾಪಿಗಳೂ ಹೆಂಗಸರೂ ವೈಶ್ಯರೂ ಶೂದ್ರರೂ ಕೂಡ ಉತ್ತಮವಾದ ಗತಿಯನ್ನು ಹೊಂದಿದ್ದಾರೆ.

—(ಭ ೯-೩೦. ೩೨).

ಈಶ್ವರನನ್ನು ಒಲಿಸಿಕೊಳ್ಳುವದು ಬಹುಸುಲಭ. ಒಂದೆಲೆಯನ್ನೊ ಒಂದು ಹೂವನ್ನೊ ಒಂದು ಹಣ್ಣನ್ನೊ ಒಂದಿಷ್ಟು ನೀರನ್ನೊ ಈಶ್ವರನ ಮುಂದೆ ಭಕ್ತಿಯಿಂದ ತಂದಿಟ್ಟರೆ ಅದನ್ನು ತಂದ ಭಕ್ತಿಯನ್ನು ನೋಡಿ ಈಶ್ವರನು ಅವರ ಶುದ್ಧವಾದ ಬುದ್ಧಿಗೆ ಮೆಚ್ಚಿ ಅವರು ತಂದದ್ದನ್ನು ತೆಗೆದುಕೊಳ್ಳುತ್ತಾನೆ. ಕೊನೆಗೆ ಅಷ್ಟನ್ನೆಲ್ಲ ತರಬೇಕಾದದ್ದೂ ಇಲ್ಲ. ಭಕ್ತನು ತಾನು ಏನನ್ನು ಮಾಡುತ್ತಾನೊ ಏನನ್ನು ಹೋಮ ಮಾಡುತ್ತಾನೊ ಬ್ರಾಹ್ಮಣರೆ ಮೊದಲಾದವರಿಗೆ ಬಂಗಾರ, ಅನ್ನ-ಮೊದಲಾದ ಏನನ್ನು ದಾನ ಮಾಡುತ್ತಾನೊ ಏನು ತಪಸ್ಸನ್ನು ಮಾಡುತ್ತಾನೊ ಅದನ್ನೆಲ್ಲ ಈಶ್ವರನಿಗೆ ಒಪ್ಪಿಸಿಬಿಟ್ಟರಾಯಿತು. ಹೀಗೆ ಮಾಡಿದರೆ ಅವನು ಮಾಡಿದ ಕರ್ಮಗಳ ಒಳ್ಳೆ, ಮತ್ತು ಕೆಟ್ಟ ಫಲಗಳೆಂಬ ಕಟ್ಟುಗಳೆಲ್ಲ ಕಳಚಿಕೊಂಡು ಹೋಗುತ್ತವೆ. ಹೀಗೆ ಅವನು ಕರ್ಮವನ್ನು ಮಾಡಿದ್ದರಿಂದ ಯೋಗಿಯೂ ಅವನ್ನೆಲ್ಲ ಈಶ್ವರನಿಗೊಪ್ಪಿಸಿ ತಾನು ಕೈತೊಳೆದುಕೊಂಡದ್ದರಿಂದ ಸಂನ್ಯಾಸಿಯೂ ಆಗಿ ಬದುಕಿರುವಾಗಲೆ ಈಶ್ವರನನ್ನು ಪಡೆಯುತ್ತಾನೆ. (ಭ ೯-೨೬..೨೮).

**(ಅ) ಈಶ್ವರನ ಭಕ್ತರು ಯಾವಾಗಲೂ ಅವನ ಕೀರ್ತಿಯನ್ನು ಹಾಡಿಕೊಂಡಿರುವರು; ಯಾವಾಗಲೂ ಮನಸ್ಸನ್ನೂ ಇಂದ್ರಿಯಗಳನ್ನೂ ಬಿಗಿಹಿಡಿಯುವ ವ್ರತವನ್ನು ಎಡೆಬಿಡದೆ ಕೈಗೊಂಡಿರುವರು ಮತ್ತು ಯಾವಾಗಲೂ**

ಅಡ್ಡಬೀಳುತ್ತಿರುವರು. ಹೀಗೆ ಅವರು ಯಾವಾಗಲೂ ಈಶ್ವರನ ಮೇಲೆ ಭಕ್ತಿಯನ್ನು ಮಾಡುತ್ತಿರುವರು. —(ಭ ೯-೧೪). (ಆ) ಈಶ್ವರನನ್ನೇ ತಮ್ಮ ಆತ್ಮವೆಂದು ಚಿಂತಿಸುತ್ತ ಯಾರು ಭಕ್ತಿಯನ್ನು ಮಾಡುತ್ತಾರೋ ಹೀಗೆ ಯಾವಾಗಲೂ ಹೆಣಗುವ ಅವರಿಗೆ ಇಲ್ಲದ್ದನ್ನು ದೊರಕಿಸುವ ಮತ್ತು ಇದ್ದದ್ದನ್ನು ಕಾಪಾಡುವ ಭಾರವನ್ನು ಈಶ್ವರನೆ ಹೊರುತ್ತಾನೆ. ಎಲ್ಲರ ಭಾರವನ್ನೂ ಈಶ್ವರನೆ ಹೊತ್ತಿರುವನೆಂಬುದು ನಿಜ; ಆದರೂ ಒಂದು ವಿಶೇಷವಿದೆ. ಇತರರು ತಮ್ಮ ಯೋಗಕ್ಷೇಮವನ್ನು ತಾವೂ ನೋಡಿಕೊಳ್ಳುತ್ತಿರುತ್ತಾರೆ; ಈಶ್ವರನೆ ಗತಿಯನ್ನುವ ಭಕ್ತರು ತಮ್ಮ ಯೋಗಕ್ಷೇಮವನ್ನು ತಾವು ನೋಡಿಕೊಳ್ಳುವದಿಲ್ಲ. ಅವರಿಗೆ ಬದುಕಿರುವ ಅಥವಾ ಸಾಯುವ ಯೋಚನೆ ಕೂಡ ಇಲ್ಲ. ಅವರು ಎಲ್ಲವನ್ನೂ ಈಶ್ವರನಿಗೊಪ್ಪಿಸಿರುವರು. ಆದ್ದರಿಂದ ಈಶ್ವರನೆ ಅವರ ಭಾರವನ್ನು ಹೊತ್ತಿರುವನು. —(ಭ ೯-೨೨). (ಇ) ಈಶ್ವರನಿಗೆ ಎಲ್ಲರೂ ಸಮ. ಒಬ್ಬರು ಹೆಚ್ಚಲ್ಲ; ಒಬ್ಬರು ಕಡಿಮೆಯಲ್ಲ. ಅವನಿಗೆ ಒಬ್ಬರು ಬೇಡವಾದವರಲ್ಲ; ಒಬ್ಬರು ಬೇಕಾದವರಲ್ಲ. ಅಗ್ನಿಯು ದೂರದಲ್ಲಿರುವವರ ಚಳಿಯನ್ನು ಹೋಗಲಾಡಿಸದೆ ಹತ್ತಿರಕ್ಕೆ ಬಂದು ಕಾಸಿಕೊಳ್ಳುವವರ ಮೇಲೆ ಅನುಗ್ರಹವನ್ನು ಮಾಡುವಂತೆ ಈಶ್ವರನು ತನಗೆ ಶರಣೆಂದು ತನ್ನ ಮಡಿಲಿಗೆ ಬಿದ್ದವರಿಗೆ ತಾನು ಒಳಗಾಗುವದು ಸಹಜವಾಗಿದೆ. —(ಭ ೯-೨೯).

(ಅ) ಈಶ್ವರನಲ್ಲಿ ಮನಸ್ಸನ್ನಿಡಬೇಕು. ಈಶ್ವರನ ಮೇಲೆ ಭಕ್ತಿಯನ್ನು ಮಾಡಬೇಕು. ಈಶ್ವರನನ್ನು ಪೂಜಿಸಬೇಕು. ಈಶ್ವರನಿಗೆ ಎರಗಬೇಕು. ಹೀಗೆ ಈಶ್ವರನೆ ಗತಿಯೆಂದು ಒಂದೇ ಮನಸ್ಸಿನಿಂದ ಮಾಡಿದರೆ ಅವನು ಈಶ್ವರನನ್ನು ಪಡೆಯುತ್ತಾನೆ. —(ಭ ೯-೩೪). (ಆ) ತನ್ನ ಕರ್ಮಗಳನ್ನೆಲ್ಲ ಈಶ್ವರನಿಗಾಗಿ ಮಾಡಬೇಕು. ಈಶ್ವರನು ತನ್ನ ಅರಸೆಂದೂ ತಾನು ಅವನ ಆಳೆಂದೂ ದುಡಿಯಬೇಕು. ಹಣ, ಕಾಸು - ಮೊದಲಾದ ಯಾವದರ ಮೇಲೆಯೂ ಪ್ರೀತಿ ಇಲ್ಲದೆ ಪ್ರೀತಿಯೆಂಬುದೆಲ್ಲ ಈಶ್ವರನಿಗೆ ಮೀಸಲಾಗಿರಬೇಕು. ತನಗೆ ಎಷ್ಟೋ ಕೇಡು ಮಾಡಿದವರ ಮೇಲೆ ಕೂಡ ಹಗೆತನವಿರಬಾರದು. ಅಂಥವನು ಈಶ್ವರನನ್ನು ಪಡೆಯುತ್ತಾನೆ. —(ಭ ೧೧-೫೫)

(೩) ಎಲ್ಲ ಪ್ರಾಣಿಗಳ ಆತ್ಮನಾದ ಈಶ್ವರನ ಮೇಲೆ ಹೀಗೆ ಎಡೆಬಿಡದ ಭಕ್ತಿಯನ್ನು ಮಾಡುವವರು ಸತ್ತ್ವರಜಸ್ತಮೋಗುಣಗಳನ್ನು ದಾಟುತ್ತಾರೆ. (ಭ ೧೪-೨೬).

ಹೀಗೆ ಎಡೆಬಿಡದೆ ಈಶ್ವರನ ಮೇಲಿನ ಭಕ್ತಿಯನ್ನು ಮೈಗೂಡಿಸಿಕೊಳ್ಳುತ್ತ ಬಂದರೆ ಸಾಯುವ ಕಾಲದಲ್ಲಿ ಮನಸ್ಸಿಗೆ ಅದೇ ವಾಸನೆಯುಂಟಾಗುತ್ತದೆ. ಆಗಲೂ ಅವನು ತನ್ನ ದೇಹೇಂದ್ರಿಯಗಳಲ್ಲಿ ಎಷ್ಟು ಬಾಧೆ ಇದ್ದರೂ ತನ್ನ ಪ್ರಯತ್ನವಿಲ್ಲದೆ ಈಶ್ವರನನ್ನೆ ನೆನೆಯುತ್ತಾನೆ; ಅದರ ಫಲವಾಗಿ ಅವನು ಈಶ್ವರನನ್ನೆ ಪಡೆಯುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ. ಮನುಷ್ಯನು ಕೊನೆಯ ಕಾಲದಲ್ಲಿ ಯಾವದರ ನೆನಪನ್ನು ತಂದುಕೊಳ್ಳುತ್ತಾನೊ ಸತ್ತ ಮೇಲೆ ಅದನ್ನು ಪಡೆಯುವನೆಂಬುದು ಈಶ್ವರನ ನಿಯಮ. ಕೊನೆಯ ಕಾಲದಲ್ಲಿ ಈಶ್ವರನ ನೆನಪಾಗಬೇಕಾಗಿದ್ದರೆ ಬದುಕಿರುವಾಗಲೆಲ್ಲ ಈಶ್ವರನನ್ನೆ ನೆನೆಯುತ್ತಿರಬೇಕು. —(ಭ ೮-೫,೬)

## ವಿವೇಕಿಗಳ ಭಕ್ತಿ

ವಿವೇಕಿಗಳು ಈಶ್ವರನೆ ಎಲ್ಲ ಜಗತ್ತಿನ ಆಗುಹೋಗುಗಳಿಗೆ ಕಾರಣನೆಂದೂ ಅವನಿಂದಲೆ ಎಲ್ಲವೂ ಹೊರಬಿದ್ದಿರುವದೆಂದೂ ತಿಳಿದು ಹಾಗೆಯೆ ಮನಸ್ಸನ್ನು ಗಟ್ಟಿಮಾಡಿಕೊಂಡು ಈಶ್ವರನ ಮೇಲೆ ಭಕ್ತಿಯನ್ನು ಮಾಡುತ್ತಾರೆ. ಅವರ ಮನಸ್ಸೆಲ್ಲ ಈಶ್ವರನ ಮೇಲೆಯೇ ಇರುತ್ತದೆ. ಅವರ ಇಂದ್ರಿಯಗಳೆಲ್ಲ ಈಶ್ವರನ ಮೇಲೆಯೇ ಇರುತ್ತವೆ. ಅವರ ಬದುಕಿರುವಿಕೆಯೇ ಈಶ್ವರನನ್ನವಲಂಬಿಸಿರುತ್ತದೆ. ಅವರು ಒಬ್ಬರಿಗೊಬ್ಬರು ಈಶ್ವರನ ಜ್ಞಾನ, ಬಲ, ವೀರ್ಯ-ಮೊದಲಾದವುಗಳನ್ನು ಹೇಳುತ್ತ, ಕೇಳುತ್ತ ಅದರಿಂದಲೇ ಹೊಟ್ಟೆತುಂಬಿದವರಾಗಿ ಅದರಲ್ಲಿಯೇ ಆನಂದಗೊಳ್ಳುತ್ತಿರುತ್ತಾರೆ. ಹೀಗೆ ಹೊರಗಣ ಆಸೆಗಳನ್ನೆಲ್ಲ ತೊರೆದು ಯಾವಾಗಲೂ ಎಡೆಬಿಡದ ಭಕ್ತಿಯನ್ನು ಮಾಡುವವರಿಗೆ ಈಶ್ವರನು ತನ್ನ ನಿಜಸ್ವರೂಪವನ್ನು ಅರಿಯಲಾಗುವ ಬುದ್ಧಿಯನ್ನು ಕೊಡುತ್ತಾನೆ. ಇಷ್ಟೇ ಅಲ್ಲ. ಅವರ ಮೇಲಿನ ಕನಿಕರದಿಂದ ಅವನು ಅವರ ಹೃದಯದಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು, ಎಂದರೆ ದೇಹ ಮೊದಲಾದವುಗಳೆ ತಾವೆಂದಿದ್ದ ತಪ್ಪು

ತಿಳಿವಳಿಕೆಯನ್ನು, ಹೋಗಲಾಡಿಸಿ ಝಗಝಗಿಸುವ ಜ್ಞಾನವೆಂಬ ದೀಪವನ್ನು ಹಚ್ಚುತ್ತಾನೆ. ಬ್ರಹ್ಮವೆ ನಾನೆಂಬುದು ಜ್ಞಾನದೀಪ. ಆ ದೀಪಕ್ಕೆ ಭಕ್ತಿಯೆಂಬುದು ಎಣ್ಣೆ. ಈಶ್ವರನೆ ತನಗೆ ಗತಿಯೆಂಬ ಗಟ್ಟಿಮನಸ್ಸೆಂಬುದೇ ಆ ದೀಪದ ಆಹಾರವಾದ ಗಾಳಿ. ಬ್ರಹ್ಮಚರ್ಯ ಮೊದಲಾದ ಸಾಧನಗಳಿಂದ ಶುದ್ಧವಾದ ಬುದ್ಧಿಯು ಬತ್ತಿ. ವೈರಾಗ್ಯವುಳ್ಳ ಮನಸ್ಸೆಂಬುದೇ ಹಣತೆ. ಪ್ರೀತಿ, ಹಗೆತನ-ಮೊದಲಾದವುಗಳ ಬೀಸುವಿಕೆ ಇಲ್ಲದೆ ವಿಷಯಗಳಿಂದ ಹಿಮ್ಮೆಟ್ಟಿಸಿ ತಂದ ಮನಸ್ಸೇ ಗಾಳಿಯು ಹೊಡೆತವಿಲ್ಲದ ಗೂಡು. ಯಾವಾಗಲೂ ಒಮ್ಮುಖವಾದ ಮನಸ್ಸಿನಿಂದ ಮಾಡುವ ಧ್ಯಾನದಿಂದುಂಟಾದ ಜ್ಞಾನವೇ ಅದರ ಬೆಳಕು. —(ಭ ೧೦-೮. ೧೧)

ಇಂಥ ಜ್ಞಾನವನ್ನು ಪಡೆದ ಭಕ್ತನು ತನಗೆ ಹಾನಿಕರವಾದದ್ದರ ಮೇಲೆ ಕೂಡ ಹಗೆತನವನ್ನು ಮಾಡುವದಿಲ್ಲ. ಅವನು ಎಲ್ಲರಿಗೂ ಗೆಳೆಯನಾಗಿರುವನು. ದುಃಖಿಗಳನ್ನು ಕಂಡರೆ ಅವನ ಮನಸ್ಸು ಕರಗಿ ನೀರಾಗುವದು. ಅವನಿಗೆ ನಾನೆಂಬುದರ ಸೋಂಕಿಲ್ಲ. ಅವನಿಗೆ ತಾನು ಬದುಕಿರುವಷ್ಟಾದರೂ ದೊರಕಲಿ, ಬಿಡಲಿ ಅಥವಾ ಒಳ್ಳೆಯದಾದರೂ ಗಂಟುಬೀಳಲಿ, ಕೆಟ್ಟದಾದರೂ ಗಂಟುಬೀಳಲಿ-ಅವನು ಸಂತೋಷದಿಂದಿರುವನು. ಅವನು ಸುಖವನ್ನೂ ದುಃಖವನ್ನೂ ಸಮವಾಗಿ ಕಾಣುವನು. ಯಾರಾದರೂ ಹೊಡೆದರೂ ಬಯ್ದರೂ ಕೂಡ ಅವನ ಭಾವದಲ್ಲಿ ಬದಲಾವಣೆಯಾಗುವದಿಲ್ಲ. ಹೀಗೆ ಮುಂದೆ ಬಹು ದೊಡ್ಡ ಫಲವೆಂಬ ಪ್ರಕರಣದಲ್ಲಿ ಕಾಣುವ ಲಕ್ಷಣಗಳೆಲ್ಲ ಇವನಲ್ಲಿ ಮನೆಮಾಡಿಕೊಂಡಿರುವವು. —(ಭ ೧೨-೧೩)

# ೧೧—ಯೋಗವೆಂಬ ದಾರಿ

## ಮನಸ್ಸನ್ನು ಬಿಗಿಹಿಡಿಯುವ ಅಗತ್ಯ

ವೇದದ ನಿಯಮಗಳಿಗೊಳಪಟ್ಟು ಕರ್ಮವೆಂಬ ದಾರಿಯಲ್ಲಿ ನಡೆದದ್ದರಿಂದಲೂ ತನ್ನ ಮನಸ್ಸಿನ ಒಲವನ್ನು ಹಿಂಬಾಲಿಸಿ ಭಕ್ತಿಯೆಂಬ ದಾರಿಯಲ್ಲಿ ನಡೆದದ್ದರಿಂದಲೂ ಮನಸ್ಸಿನ ದೊಡ್ಡ ದೊಡ್ಡ ಹೊಲಸುಗಳೆಲ್ಲ ಎಷ್ಟೋ

ಮುಟ್ಟಿಗೆ ಹಾರಿಹೋಗಿರುವವು. ಆದರೂ ಹೊಲಸುಗಳ ದುರ್ವಾಸನೆಯು ಮನಸ್ಸಿನ ಒಳಗಿಳಿದು ಅವನ್ನೆಲ್ಲ ಕೆಡಿಸಿರುವದು. ಅದು ಹೋಗಬೇಕಾದದ್ದು. ಅದನ್ನು ಚೆನ್ನಾಗಿ ಕಾಸಬೇಕು. ಲೋಹಗಳಲ್ಲಿ ಏನಾದರೂ ಬೆರಕೆಯಾಗಿ ಕೆಟ್ಟದ್ದರೆ ಅದನ್ನು ಕಾಸಿ ಶುದ್ಧಿಗೊಳಿಸುವಂತೆ ಮನಸ್ಸನ್ನು ಕಾಸಿ ಶುದ್ಧಿಗೊಳಿಸಬೇಕಾಗಿದೆ. ಮನಸ್ಸನ್ನು ಕಾಸುವದು ಹೇಗೆ? ಅದು ಕೈಯಿಂದ ತೆಗೆದು ಒಲೆಯ ಮೇಲೆ ಇಡುವಂಥದ್ದಲ್ಲ. ಅದರ ಸ್ವಭಾವದ ತಲೆಯ ಮೇಲೆ ಮುಟ್ಟುವದೇ ಅದನ್ನು ಕಾಸುವದು. ಯಾವಾಗಲೂ ಹರಿದಾಡುತ್ತಿರುವದು ಅದರ ಸ್ವಭಾವ. ಅದರ ಕೈಕಾಲುಗಳನ್ನು ಕಟ್ಟಿ ಒಂದು ಕಡೆ ಉರುಳಿಸಿ ಬಿಟ್ಟರೆ ಆ ಸ್ಥಿತಿಯಲ್ಲಿರುವದಕ್ಕ ಅದಕ್ಕೆ ಬಹುತಾಪವಾಗುವದು. ಆ ತಾಪದಿಂದ ಅದರೊಳಗಿರುವ ಹೊಲಸು ಸುಟ್ಟುಹೋಗಿ ಆಗ ಮನಸ್ಸು ಚೊಕ್ಕವಾಗುವದು. ಮನುಷ್ಯನು ಆ ಮನಸ್ಸಿನಿಂದ ಒಮ್ಮೆ ವಿಚಾರ ಮಾಡಿದನೆಂದರೆ ಒಡನೆ ಜ್ಞಾನವು ಅದರಲ್ಲಿ ಒಡೆದುಮೂಡುವದು. ಈ ಬಗೆಯ ಶುದ್ಧಿ ಇಲ್ಲದೆ ಈಗ ನಾವು ಮಾಡುವ ವಿಚಾರದಿಂದ ಆ ಫಲವಾಗುವದಿಲ್ಲ. ಆ ಫಲವಾದ ಹೊರತು ನಮ್ಮ ಉದ್ಧಾರವಾಗುವದಿಲ್ಲ. ಆದ್ದರಿಂದ ಮೋಕ್ಷವನ್ನು ಬಯಸುವವನು ಮನಸ್ಸನ್ನು ಬಿಗಿಹಿಡಿಯುವ ಯತ್ನವನ್ನು ಅಗತ್ಯವಾಗಿ ಮಾಡಬೇಕು. ಇದೇ ಯೋಗ. ಯೋಗವೆಂಬ ಮಾತಿಗೆ ಪ್ರಾಣಾಯಾಮದ ವಿಶೇಷಗಳೆಂದು ಅನೇಕರು ತಿಳಿಯುವರು. ಪ್ರಾಣಾಯಾಮವು ಇದಕ್ಕೆ ಬಾಲಪಾಠ. ಅದನ್ನು ಚೆನ್ನಾಗಿ ತಿಳಿದವರ ಹತ್ತಿರದಲ್ಲಿದ್ದೇ ಮಾಡುವದೊಳ್ಳೆಯದು. ಆದರ ಬಗೆಬಗೆಗಳನ್ನೆಲ್ಲ ಅನುಭವಿಸುವದಕ್ಕೆ ಹೋಗುವದು ಅಷ್ಟೇನೂ ಅಗತ್ಯವಾಗಿ ಕಾಣುವದಿಲ್ಲ. ಪ್ರಾಣಾಯಾಮದ ಗರಡಿಯಲ್ಲಿ ಮಣ್ಣು ಮುಕ್ಕದೆ ಮನಸ್ಸನ್ನು ಬಿಗಿಹಿಡಿಯುವ ಸಾಧನಕ್ಕೆ ಕೈಹಾಕಬಹುದು. ಆದ್ದರಿಂದ ಇಲ್ಲಿ ಯೋಗವೆಂಬ ದಾರಿಯಲ್ಲಿ ಮನಸ್ಸನ್ನು ಬಿಗಿಹಿಡಿಯುವ ಹೆಜ್ಜೆಯಿಂದ ಮುಂದೆ ಸಾಗಲಾಗಿರುವದು.

ಜೀವನು ಹಿಂದೆ ಹೇಳಿದ ಸಂಸಾರವೆಂಬ ಸಮುದ್ರದ ಈಚೆಯ ಕತ್ತಲೆಯ ಮತ್ತು ಬೆಳಕಿನ ದಾರಿಗಳಲ್ಲಿ ಪ್ರಯಾಣ ಮಾಡುವದಕ್ಕೂ ಅಥವಾ ಮೋಕ್ಷವೆಂಬ ಆಚೆಯ ದಡಕ್ಕೆ ಹೋಗುವದಕ್ಕೂ ತಕ್ಕ ದೇಹವೆಂಬ ತೇರಿನ

ಮೇಲೆ ಕುಳಿತಿದ್ದಾನೆ. ವಿವೇಕದಿಂದ ಗೊತ್ತುಮಾಡುವ ಬುದ್ಧಿಯು ಆ ತೇರನ್ನು ನಡೆಸುವವನು; ಯೋಚಿಸುವ ಸ್ವಭಾವದ ಮನಸ್ಸು ಅವನ ಕೈಲಿರುವ ಹಗ್ಗ; ಕಣ್ಣು ಮೊದಲಾದ ಇಂದ್ರಿಯಗಳೇ ಆ ತೇರನ್ನೆಳೆಯುವ ಕುದುರೆಗಳು; ಸದ್ದು, ಸೋಂಕು, ರೂಪ-ಮೊದಲಾದ ವಿಷಯಗಳೆ ಆ ಕುದುರೆಗಳು ಹೋಗುವ ಹಾದಿ. ಈ ಸಂದರ್ಭದಲ್ಲಿ ತೇರನ್ನು ನಡೆಸುವ ಬುದ್ಧಿಯೆಂಬ ಸಾರಥಿಯು ಎಲ್ಲಿ ಮುಂದುವರಿಯಬೇಕೆಂಬುದನ್ನೂ ಎಲ್ಲಿ ಹಿಮ್ಮೆಟ್ಟಬೇಕೆಂಬುದನ್ನೂ ಅರಿಯದೆ ಮನಸ್ಸೆಂಬ ಹಗ್ಗವನ್ನು ಸಡಿಲ ಬಿಟ್ಟಿರುವದಾದರೆ ಇಂದ್ರಿಯಗಳೆಂಬ ಕುದುರೆಗಳು ಕೆಟ್ಟ ಕುದುರೆಗಳಂತೆ ಹಾನಿಯಲ್ಲಿ ಕೊನೆಗಾಣಿಸುತ್ತವೆ. ಬುದ್ಧಿಯು ವಿವೇಕವುಳ್ಳದ್ದಾಗಿ ಹಗ್ಗವನ್ನು ಬಿಗಿಹಿಡಿದಿದ್ದರೆ ಒಳ್ಳೆ ಕುದುರೆಗಳಂತೆ ಇಂದ್ರಿಯಗಳೆಂಬ ಕುದುರೆಗಳನ್ನು ಮುಂದುವರಿಸುವದಕ್ಕೂ ಹಿಮ್ಮೆಟ್ಟಿಸುವದಕ್ಕೂ ಆಗುತ್ತದೆ. ವಿವೇಕವಿಲ್ಲದೆ ಹಗ್ಗವನ್ನು ಸಡಿಲಬಿಟ್ಟ ಬುದ್ಧಿಯು ಜೀವನನ್ನು ಮೋಕ್ಷಕ್ಕೊಯ್ಯಲಾರದು. ಅದು ಅವನನ್ನು ಸಂಸಾರದಲ್ಲಿಯೇ ಸುತ್ತಿಸುವದು. ವಿವೇಕವನ್ನಿಟ್ಟುಕೊಂಡು ಹಗ್ಗವನ್ನು ಬಿಗಿಹಿಡಿದ ಬುದ್ಧಿಯು ಅವನನ್ನು ಮೋಕ್ಷಕ್ಕೊಯ್ಯುತ್ತದೆ.

—(ಕ ೩-೩..೮)

(ಅ) ಇಂದ್ರಿಯಗಳು ಸದ್ದು ಮೊದಲಾದ ತಮ್ಮ ತಮ್ಮ ವಿಷಯದ ಕಡೆಗೆ ನುಗ್ಗುವಾಗ ಮನಸ್ಸೂ ಅವುಗಳ ಬೆನ್ನುಹತ್ತಿ ಹೋದರೆ, ಗಾಳಿಯು ಹಡಗನ್ನು ಸಮುದ್ರದ ಮೇಲೆ ಕಂಡಕಂಡಕಡೆಗೊಯ್ದು ಕೆಡಹುವಂತೆ, ಆ ಮನಸ್ಸು ಆ ಜೀವನನ್ನು ಅಡ್ಡದಾರಿಗೆಳೆದು ಅವನ ವಿವೇಕವನ್ನು ಹಾಳುಮಾಡುವದು (ಭ ೨-೬೭). (ಆ) ಯಾವನ ಮನಸ್ಸೂ ಇಂದ್ರಿಯಗಳೂ ದೇಹವೂ ಹಿಡಿತದಲ್ಲಿರುವವೊ ಅವನು ತನಗೆ ತಾನು ಬಂಧು; ಯಾವನಿಗೆ ಅವು ಹಿಡಿತದಲ್ಲಿರುವದಿಲ್ಲವೊ ಅವನು ತನಗೆ ತಾನೆ ಹಗೆ. ದೇಹವನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ಹಿಡಿತದಲ್ಲಿಟ್ಟುಕೊಂಡಿರುವವನಲ್ಲಿ ಪರಮಾತ್ಮನು ಒಳ್ಳೆ ಸಮಾಧಾನದಿಂದಿರುವನು. (ಭ ೬-೬,೭)

(ಅ) ಮನಸ್ಸನ್ನು ಬಿಗಿಹಿಡಿಯುವದರ ಅಗತ್ಯವನ್ನು ಕುರಿತು ಒಂದು ಕಡೆ ಹೇಳಿರುವದೇನೆಂದರೆ : ಮನಸ್ಸು ಎರಡು ಬಗೆ. ಒಂದು ಶುದ್ಧ;

ಇನ್ನೊಂದು ಅಶುದ್ಧ. ಬಯಕೆಗಳನ್ನು ಹಚ್ಚಿಕೊಳ್ಳುವದು ಅಶುದ್ಧ; ಬಯಕೆಗಳನ್ನು ಹಚ್ಚಿಕೊಳ್ಳದಿರುವದು ಶುದ್ಧ. ಸಂಸಾರದ ಬಲೆಯೊಳಕ್ಕೆ ಸಿಕ್ಕಿಕೊಳ್ಳುವದಕ್ಕೂ ಅದರಿಂದ ನುಣುಚಿಕೊಳ್ಳುವದಕ್ಕೂ ಮನಸ್ಸೇ ಕಾರಣ. ಮನಸ್ಸು ವಿಷಯಗಳ ಮೇಲೆ ಎರಗುತ್ತಲೆ ಬಲೆಯ ನೇಣು ಕೊರಳಿಗೆ ಬೀಳುತ್ತದೆ; ಮನಸ್ಸು ವಿಷಯಗಳಿಂದ ಹಿಮ್ಮೆಟ್ಟುತ್ತಲೆ ಅದು ಕಳಚಿಕೊಳ್ಳುವದು. ಆದ್ದರಿಂದ ಮೋಕ್ಷವನ್ನು ಬಯಸುವವನು ಮನಸ್ಸಿನಲ್ಲಿರುವ ವಿಷಯಗಳ ಸೋಂಕನ್ನು ಹೋಗಲಾಡಿಸಿಕೊಳ್ಳಬೇಕು. ಹಾಗೆ ವಿಷಯಗಳನ್ನೆಲ್ಲ ಕೊಡಹಿದ ಮನಸ್ಸನ್ನು ಹೃದಯದಲ್ಲಿಯೇ ತಡೆದುಬಿಟ್ಟರೆ ಮನಸ್ಸನ್ನು ಗೆದ್ದಂತಾಗಿ ಮೋಕ್ಷವು ಕೈಸೇರುತ್ತದೆ. ಹೃದಯದಲ್ಲಿ ಮನಸ್ಸು ಅಲ್ಲಿಯೇ ಮೈಗರೆಯುವ ತನಕ ಅದನ್ನು ಅಲ್ಲಿ ತಡೆದಿಡಬೇಕು. ಇದೇ ಜ್ಞಾನ. ಇದೇ ಮೋಕ್ಷ. ಇದರ ಹೊರತು ಬೇರೆ ಮಾತುಗಳೆಲ್ಲ ಗ್ರಂಥಕ್ಕೊಂದು ಹೊರೆ.—(ಬ್ರ. ಬಿಂ ೧-೫). (ಆ) ಇನ್ನೊಂದು ಕಡೆ ಹೇಳುವದೇನೆಂದರೆ: ಕಟ್ಟಿಗೆಯನ್ನು ಹಾಕದೆ ಹೋದರೆ ಬೆಂಕಿಯು ತನಗೆ ತಾನೆ ಆರಿಹೋಗುವಂತೆ ಹರಿದಾಟಗಳನ್ನು ನಿಲ್ಲಿಸಿದ ಮನಸ್ಸು ತನ್ನಷ್ಟಕ್ಕೆ ತಾನೆ ತಣ್ಣಗಾಗುವದು. ಮನಸ್ಸೇ ಸಂಸಾರ. ಅದನ್ನು ಪ್ರಯತ್ನದಿಂದ ಶುದ್ಧಿಗೊಳಿಸಬೇಕು. ಮನುಷ್ಯನು ಮನಸ್ಸನ್ನು ಯಾವದರ ಮೇಲಿಡುತ್ತಾನೊ ತಾನ ಅದರ ಸ್ವರೂಪನಾಗುತ್ತಾನೆ. ಇದು ಗುಟ್ಟಾದ ಮಾತು. ಮನಸ್ಸು ಪ್ರಸನ್ನವಾದರೆ ಒಳ್ಳೆ, ಮತ್ತು ಕೆಟ್ಟ ಕರ್ಮಗಳೆಲ್ಲ ಹೇಳುವದಕ್ಕೆ ಹೆಸರಿಲ್ಲದಂತಾಗುತ್ತವೆ. ಪ್ರಸನ್ನವಾದ ಮನಸ್ಸುಳ್ಳವನು ಆತ್ಮಸ್ವರೂಪದಲ್ಲಿ ಅದನ್ನಿಟ್ಟು ತುದಿಮೊದಲಿಲ್ಲದ ಸುಖವನ್ನು ಹೊಂದುತ್ತಾನೆ. ಮನಸ್ಸು ವಿಷಯಗಳ ಕಡೆಗೆ ಹೇಗೆ ಎರಗುವದೊ ಹಾಗೆ ಬ್ರಹ್ಮದ ಕಡೆಗೆ ಹೋಗಿ ಅದನ್ನು ಕಚ್ಚಿಕೊಂಡರೆ ಯಾರಿಗೆ ತಾನೆ ಮೋಕ್ಷವಾಗದೆ ಇದ್ದೀತು!--(ಮೈ ೪-೧..೫).

(ಅ) ಮನಸ್ಸನ್ನು ಬಿಗಿಹಿಡಿಯುವದೆಂಬುದು ಸುಲಭವಾಗಿ ದಕ್ಕುವ ಮಾತಲ್ಲ. ದೊಡ್ಡ ಸಮುದ್ರವನ್ನು ಕುಡಿದು ಮುಗಿಸುವದಕ್ಕಿಂತಲೂ ಮೇರುಪರ್ವತವನ್ನು ಬುಡಮೇಲು ಮಾಡುವದಕ್ಕಿಂತಲೂ ಬೆಂಕಿಯನ್ನು ಮುಕ್ಕುವದಕ್ಕಿಂತಲೂ ಕಷ್ಟವಾದದ್ದು. —(ಮ ೩-೨೦). (ಆ) ಆದ್ದ

ರಿಂದ ಕೈಕೈಹಿಸುಕಿಕೊಂಡು ಹಲ್ಲುಹಲ್ಲು ಕಡಿದು ದೇಹಕ್ಕೆ ದೇಹದಿಂದ
ಮುತ್ತಿಗೆಯನ್ನು ಹಾಕಿ ಮುರಿಯುವಂತೆ ಮೊದಲು ತನ್ನ ಮನಸ್ಸನ್ನು
ಗೆಲ್ಲಬೇಕು (ಮ ೫-೨೫). (ಇ) ಹರಿದಾಡುವ ಮನಸ್ಸನ್ನು ಹಿಡಿತಕ್ಕೆ
ಸಿಕ್ಕಿಸಿಕೊಳ್ಳುವದು ಗಾಳಿಯನ್ನು ಮೂಟೆಯಾಗಿ ಕಟ್ಟುವಷ್ಟು ಕಷ್ಟ. ಅದು
ಸ್ವಲ್ಪ ಹೊತ್ತಾದರೂ ಇದ್ದಕಡೆ ಇರುವಂಥದ್ದಲ್ಲ. ಅದು ಶರೀರವನ್ನೂ
ಇಂದ್ರಿಯಗಳನ್ನೂ ಮುಂದು ಮಾಡಿ ಅವುಗಳನ್ನು ಮತ್ತೊಬ್ಬರ ಕೈಬೊಂಬೆ
ಯಾಗಿ ಮಾಡುವದು. ಆದರ ಶಕ್ತಿ ಬಹಳ. ಅದನ್ನು ಹಿಡಿದು ಕಟ್ಟು
ವದು ಅಸಾಧ್ಯ. ಅದು ಬಹು ಗಟ್ಟಿ; ಆದರೂ ಅದನ್ನು ನಿಲ್ಲಿಸುವದಕ್ಕೆ
ಎರಡು ಉಪಾಯಗಳಿವೆ. ಒಂದು ಅಭ್ಯಾಸ; ಇನ್ನೊಂದು ವೈರಾಗ್ಯ.
ಅಭ್ಯಾಸವೆಂದರೆ ಮನಸ್ಸು ಯಾವದಾದರೊಂದೇ ವಿಷಯವನ್ನು ಅಳಿದು
ಹೊಯ್ಯುತ್ತಿರುವಂತೆ ಮಾಡುವದು; ವೈರಾಗ್ಯವೆಂದರೆ ಕಂಡ ಮತ್ತು ಕೇಳಿದ
ವಿಷಯಗಳಲ್ಲೆಲ್ಲ ದೋಷವನ್ನೇ ಕಾಣುತ್ತ ಅವುಗಳನ್ನು ಬಯಸದೆ ಇರು
ವದು. ವೈರಾಗ್ಯ ಉಂಟಾದರೆ ಮನಸ್ಸು ತನಗೆ ತಾನೆ ಹೊರಬೀಳುವ
ದನ್ನು ತೊರೆದು ಸುಮ್ಮನೆ ನಿಲ್ಲುತ್ತದೆ. —(ಭ ೬-೩೪,೩೫)

(ಅ) ಬ್ರಹ್ಮನು ಕಣ್ಣು, ಕಿವಿ—ಮೊದಲಾದ ಇಂದ್ರಿಯಗಳನ್ನೆಲ್ಲ
ಹೊರಗಡೆಗೆ ಹರಿಯುವಂತೆ ಮಾಡಿದ್ದಾನೆ. ಆದ್ದರಿಂದ ಅವು ಹೊರಗಡೆಗೇ
ಹರಿಯುತ್ತವೆ. ಒಳಗಿರುವ ಆತ್ಮನ ಕಡೆಗೆ ಅವು ತಿರುಗುವದಿಲ್ಲ. ಆದ
ಮಾತ್ರಕ್ಕೇ ಇನ್ನು ಆತ್ಮನನ್ನು ಕಾಣುವ ಆಸೆಯೇ ಇಲ್ಲವೆಂದು ನಿಟ್ಟುಸಿರಿ
ಡಬೇಕಾದದ್ದಿಲ್ಲ. ಲೋಕದಲ್ಲಿ ಭೋರ್ಗರೆಯುತ್ತ ಮುಂದಕ್ಕೆ ನುಗ್ಗುತ್ತಿ
ರುವ ನದಿಯನ್ನು ಹಿಂದಕ್ಕೆ ಬೇಕಾದರೂ ತಿರುಗಿಸುವದಕ್ಕಾಗುವಂತೆ ಮೋ
ಕ್ಷವನ್ನು ಬಯಸುವ ಜೀವರು ಮನಸ್ಸನ್ನೂ ಹಿಂದಿರುಗಿಸಿ ಒಳಗಡೆಯ ಆತ್ಮ
ನನ್ನು ಕಾಣುವರು. ಅಷ್ಟು ಬುದ್ಧಿ ಇಲ್ಲದವರು ಹೊರಹೊರಗೇ ಹರಿದಾ
ಡುತ್ತ ಮೈಗೆಲ್ಲ ಕಟ್ಟುಬೀಳಿಸಿಕೊಂಡವರಾಗಿ ಹುಟ್ಟುಸಾವುಗಳ ಸುಳಿ
ಯಲ್ಲಿ ಸುತ್ತುತ್ತಿರುತ್ತಾರೆ. —(ಕ ೪-೧,೨). '(ಆ) ಐದು ಜ್ಞಾನೇಂ
ದ್ರಿಯಗಳೂ ಮನಸ್ಸೂ ಕೂಡ ವಿಷಯಗಳಿಂದ ಹಿಮ್ಮೆಟ್ಟಿ ಆತ್ಮಸ್ವರೂಪದ
ಲ್ಲಿ ಕವಲದೆ ನಿಂತರೆ ಅದೇ ಹೆಚ್ಚಿನ ಗತಿ. ಹಾಗೆ ನಿಲ್ಲುವದೇ ಯೋಗ.

ಅದು ವೈಗೂಡಿದಾಗ ಅದನ್ನು ಕದಲಗೊಡದಂತೆ ಯುಕ್ತಿಸುತ್ತಿರಬೇಕು. ಏಕೆಂದರೆ: ಆ ಯೋಗವೆಂಬುದು ವೈಗೂಡತಕ್ಕ ಮತ್ತು ವೈಗರೆಯತಕ್ಕ ಸ್ವಭಾವದ್ದು. -(ಕ೬-೧೦-೧೧) (ಇ) ಯೋಗದಲ್ಲಿ ಮನಸ್ಸು ಒಕ್ಕಡೆಗೆ ನಿಲ್ಲುವದೇ ಮುಖ್ಯ. ಬರೀ ಇಂದ್ರಿಯಗಳನ್ನು ಮಾತ್ರ ತಡೆದರೆ ಸಾಲದು. ಇಂದ್ರಿಯಗಳನ್ನು ಮಾತ್ರ ತಡೆದು ಮನಸ್ಸನ್ನು ಹರಿಯಬಿಟ್ಟರೆ ಆಗ ಅದು ವಿಷಯಗಳನ್ನೆ ಹಂಬಲಿಸುತ್ತಿರುವದು. ಆ ಸ್ಥಿತಿಯಲ್ಲಿರುವವನ ಯೋಗವು ಬರೀ ನಟನೆಯದಾಗುವದು. -(ಭ೩-೬).

## ಧ್ಯಾನದ ಹೊರಗಣ ಸಾಧನಗಳು

ಮನಸ್ಸನ್ನು ಒಂದನ್ನೆ ನೆನೆಯುತ್ತಿರುವ ಹಾಗೆ ಮಾಡಿಕೊಳ್ಳಬೇಕೆನ್ನುವವನು ಆಹಾರದಲ್ಲಿಯೂ ವಿಹಾರದಲ್ಲಿಯೂ ಎಚ್ಚರಿಕೆಯಿಂದಿರಬೇಕು. ತನಗೆ ಸಾಮಾನ್ಯವಾಗಿ ಅರಗುವಷ್ಟಕ್ಕಿಂತ ಹೆಚ್ಚು ತಿಂದರೂ ತಪ್ಪಾಗುವದು, ಊಟವನ್ನೆ ತೊರೆದರೂ ತಪ್ಪಾಗುವದು. ತನಗೆ ಅರಗುವಷ್ಟಾದರೆ ಅದು ಆಯಾಸವನ್ನು ಕೊಡದೆ ಅವನನ್ನು ಸಾಕುವದು. ಹೆಚ್ಚು ತಿಂದರೆ ಅದು ಆಯಾಸವನ್ನೆ ಕೊಡುವದು. ಊಟವನ್ನು ಕಡಿಮೆ ಮಾಡಿದರೆ ಶರೀರದ ಪುಷ್ಟಿಗೆ ಸಾಲದಾಗುವದು. ಅರೆಹೊಟ್ಟೆ ಉಣ್ಣಬೇಕು. ಕಾಲುಹೊಟ್ಟೆಗೆ ಕುಡಿಯಬೇಕು. ಇನ್ನು ಕಾಲು ಹೊಟ್ಟೆಯನ್ನು ಗಾಳಿಯಾಡುವದಕ್ಕಾಗಿ ಬಿಡಬೇಕು. ಊಟದಂತೆ ನಿದ್ರೆಗೂ ಕಟ್ಟುಂಟು. ಅವನು ಬಹಳ ನಿದ್ರೆ ಮಾಡಲೂ ಬಾರದು; ಮಿತಿಮೀರಿ ನಿದ್ರೆಗೆಡಲೂಬಾರದು. ಓಡಾಟದಲ್ಲಿಯೂ ಹಾಗೆಯೇ ಮಿತಿ ಇರಬೇಕು. ತಕ್ಕಷ್ಟೆ ಊಟ; ತಕ್ಕಷ್ಟೆ ಓಡಾಟ; ತಕ್ಕಷ್ಟೆ ಕೆಲಸಗಳು; ತಕ್ಕಷ್ಟೆ ನಿದ್ರೆ; ತಕ್ಕಷ್ಟೆ ಎಚ್ಚರ-ಹೀಗಿರಬೇಕು. ಹೀಗಿರುವವನ ಯೋಗವು ಅವನ ದುಃಖವನ್ನು ಕಳೆಯುವದು. —( ಭ ೬-೧೬,೧೭)

(ಅ) ಧ್ಯಾನವನ್ನು ಯಾವಾಗಲೂ ಒಂಟಿಯಾಗಿರುವ ಕಡೆ ನಡೆಸಬೇಕು. ಇತರರ ಸೋಂಕಿದ್ದರೆ ಧ್ಯಾನವು ವೈಗೂಡುವದಿಲ್ಲ. ಅವನ ಬಳಿಯಲ್ಲಿ ತಾನು ಕಾಪಾಡಿಕೊಳ್ಳಬೇಕಾದ ಉಪಕರಣಗಳೂ ಹೆಚ್ಚಾಗಿರಬಾರದು. ಅವಿದ್ದರೆ ಮನಸ್ಸು ಅವುಗಳ ಮೇಲೆ ಕುಳಿತುಕೊಳ್ಳುವದಕ್ಕೆ ಹಾರಾಡುತ್ತಿರುವದು. —(ಭ ೬-೧೦). (ಆ) ಧ್ಯಾನವನ್ನು ಬೆಳಸಬೇಕೆನ್ನುವವನು ತನ್ನ ವಾಸದ ಮನೆಯನ್ನು ಬಿಟ್ಟು ತಾನೊಂದು ಸೆರೆಮನೆಯಿಂದ ಬಿಡು

ಗಡೆಯನ್ನು ಹೊಂದಿದ ಕಳ್ಳನಂತೆ ದೂರದಲ್ಲಿ ನೆಲೆಸಬೇಕು. (ಮೈ ೨-೧.೧). (ಇ) ಆ ನೆಲವು ಉಬ್ಬುತಗ್ಗುಗಳಿಲ್ಲದೆ ಇರಬೇಕು. ಸಕ್ಕರೆ, ಬೆಂಕಿ, ಮರಳು-ಇವು ಅಲ್ಲಿ ಚೆಲ್ಲಿರಬಾರದು. ಸಕ್ಕರೆ ಬಿದ್ದಿದ್ದರೆ ಇರುವೆಗಳು ಬಂದು ಕಚ್ಚುತ್ತವೆ. ಬೆಂಕಿ ಇದ್ದರೆ ಕಾದ ಗಾಳಿಯನ್ನು ಉಸಿರಾಡಬೇಕಾಗುತ್ತದೆ. ಮರಳಿದ್ದರೆ ಒತ್ತುತ್ತದೆ. ಅಲ್ಲಿ ಬೇರೆ ಸದ್ದೂ ಕೇಳಬರಬಾರದು ಹತ್ತಿರದಲ್ಲಿ ನೀರೂ ಇರಬಾರದು. ಅದರಿಂದ ಮೈಮೇಲೆ ತಂಗಾಳಿ ಬೀಸುತ್ತದೆ. ಸ್ಥಲವು ಮನಸ್ಸಿಗೆ ಪ್ರಶಸ್ತವೆನಿಸಬೇಕು. —(ಶ್ವೇ ೨-೧೦). (ಈ) ಅಲ್ಲಿ ಅವನು ತಾನಾಗಿ ಶುದ್ಧವಾಗಿರುವ ಅಥವಾ ತಾನು ಶುದ್ಧಿ ಮಾಡಿಕೊಂಡಂಥ ಒಂದು ಕಡೆ ಅಲ್ಲಾಡದಂಥ ಒಂದು ಪೀಠವನ್ನು ಮಾಡಿಕೊಳ್ಳಬೇಕು. ಅದು ಬಹಳ ಎತ್ತರವಾಗಿಯೂ ಇರಬಾರದು; ತೀರ ನೆಲಮಟ್ಟವಾಗಿಯೂ ಇರಬಾರದು. ನೆಲದ ಮೇಲೆ ದರ್ಭೆಯ ಚಾಪೆ, ಅದರ ಮೇಲೆ ಕೃಷ್ಣಾಜಿನ, ಅದರ ಮೇಲೆ ಮೆತ್ತಗಿರುವ ಬಟ್ಟೆ-ಹೀಗಿರಬೇಕು. (ಭ ೬-೧೧). (ಉ) ಆ ಪೀಠದ ಮೇಲೆ ಕುಳಿತು ಧ್ಯಾನಕ್ಕಾರಂಭಿಸಬೇಕು. ಓಡಾಡುವಾಗ ಮೈಗೆ ಅಲುಗಾಟವಿರುವದರಿಂದ ಧ್ಯಾನವು ಮೈಗೂಡುವದಿಲ್ಲ. ಮಲಗಿ ಮಾಡೋಣವೆಂದರೆ ನಿದ್ರೆ ಬಂದು ಕವಿಯುವದು. ಕುಳಿತರೆ ಮಾತ್ರ ಮೈ ಅಲ್ಲಾಡುವದಿಲ್ಲ. ಆದ್ದರಿಂದ ಕುಳಿತೇ ಧ್ಯಾನವನ್ನು ಸಾಧಿಸಬೇಕು. —(ಸೂ ೪-೧-೭). (ಊ) ಧ್ಯಾನಕ್ಕೆ ಕುಳಿತಿರುವಾಗ ಮೈ, ಕತ್ತು, ತಲೆ- ಈ ಮೂರೂ ಅಲುಗಾಡದೆ ನೆಟ್ಟಗಿರಬೇಕು. ದೃಷ್ಟಿಯು ಮೂಗಿನ ತುದಿಯನ್ನು ನೋಡುವಂತೆ ಇರಬೇಕು. ಇದು ಮನಸ್ಸು ಹೊರಕ್ಕೆ ಹೋಗದಿರಲೆಂದು ಹೇಳಿದ ಮಾತೇ ಹೊರತು ನಿಜವಾಗಿ ಮೂಗಿನ ತುದಿಯನ್ನು ನೋಡಬೇಕಾದದ್ದಿಲ್ಲ. ಅದರಿಂದೇನೂ ಫಲವಿಲ್ಲ. ಮನಸ್ಸು ಆತ್ಮನಲ್ಲಿರಬೇಕು. —(ಭ ೬-೧೩)

## ಓಂಕಾರದ ಧ್ಯಾನ

(ಅ) ಆತ್ಮವು ಕಣ್ಣಿಗೆ ಸಿಕ್ಕತಕ್ಕದ್ದಲ್ಲ; ಮಾತಿಗೂ ನಿಲುಕತಕ್ಕದ್ದಲ್ಲ; ಇಂದ್ರಿಯಗಳಿಗೂ ಕಾಣಬರತಕ್ಕದ್ದಲ್ಲ; ತಪಸ್ಸಿಗೂ ಅಗ್ನಿಹೋತ್ರಾದಿಕರ್ಮಗಳಿಗೂ ದಕ್ಕತಕ್ಕದ್ದಲ್ಲ. ಅದು ಶುದ್ಧವಾದ ಬುದ್ಧಿಯಲ್ಲಿ ಹೊಳೆಯುವದು.

ಸಾಮಾನ್ಯವಾಗಿ ನಮ್ಮ ಮನಸ್ಸು ಹೊರಗಣ ವಿಷಯಗಳ ಮೇಲಿನ ಆಕ್ಕರೆ ಮೊದಲಾದ ಹೊಲಸಿನಿಂದ ಕೂಡಿರುವದರಿಂದ, ಮಸುಕಾದ ಕನ್ನಡಿಯಲ್ಲಿ ಹತ್ತಿರದ ವಸ್ತುವಾದರೂ ಒಡಮೂಡದಿರುವಂತೆ, ನಮ್ಮ ಆತ್ಮವು ನಮ್ಮೊಳಗೇ ಇದ್ದರೂ ಅದು ಎದ್ದು ಕಾಣುವದಿಲ್ಲ. ಕದಡಿದ ನೀರಿನಲ್ಲಿ ಪ್ರತಿಬಿಂಬವು ಮೂಡದಿರುವಂತೆ ಹರಿದಾಟದ ಮನಸ್ಸಿನಲ್ಲಿ ಆತ್ಮತತ್ತ್ವವು ಮೂಡುವದಿಲ್ಲ. ಕನ್ನಡಿಯ ಮಸುಕನ್ನು ಕಳೆದರೆ ಮತ್ತು ನೀರಿನ ಅಲುಗಾಟವನ್ನು ನಿಲ್ಲಿಸಿದರೆ ಪ್ರತಿಬಿಂಬವು ಕಾಣುವಂತೆ ಮನಸ್ಸಿನ ಹೊಲಸನ್ನೆಲ್ಲ ಕಳೆದು ಅದರ ಹರಿದಾಡವನ್ನು ನಿಲ್ಲಿಸಿದರೆ ಅದು ತಿಳಿಯಾಗುವದು. ಆಗ ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿದು ಒಮ್ಮುಖವಾದ ಮನಸ್ಸಿನಿಂದ ಧ್ಯಾನಮಾಡಿದರೆ ಆತ್ಮನನ್ನು ಕಾಣಲಾಗುವದು. ಆತ್ಮವು ಬಹು ಸೂಕ್ಷ್ಮವಾದ ವಸ್ತು. ಅದು ಶುದ್ಧವಾದ ಬುದ್ಧಿಗೆ ಮಾತ್ರ ನಿಲುಕತಕ್ಕದ್ದು. ಯಾವ ಶರೀರದಲ್ಲ ಪ್ರಾಣ, ಅಪಾನ-ಮೊದಲಾದ ವಾಯುಗಳು ಪ್ರವೇಶ ಮಾಡಿವೆಯೊ ಅದೇ ಶರೀರದಲ್ಲಿಯೇ ಅದು ಬುದ್ಧಿಗೆ ತೋರಿಕೊಳ್ಳುವದು. ಅದರೆ ಹಾಗೆ ತೋರಬೇಕಾದರೆ ಹಾಲಿನಲ್ಲಿ ಬೆಣ್ಣೆಯೂ ಕಟ್ಟಿಗೆಯಲ್ಲಿ ಬೆಂಕಿಯೂ ಹಾಸು ಹೊಕ್ಕಾಗಿ ಅಡಗಿರುವಂತೆ ಪ್ರಾಣಗಳೂ ಇಂದ್ರಿಯಗಳೂ ಬುದ್ಧಿಯಲ್ಲಿ ಅಡಗಿರಬೇಕು. ಎಲ್ಲರ ಬುದ್ಧಿಯೂ ಚೈತನ್ಯದಿಂದ ಕೂಡಿರುವದೆಂದು ಲೋಕದಲ್ಲೆಲ್ಲರೂ ಹೇಳುವರಷ್ಟೆ. ಬುದ್ಧಿಯ ಹೊಲಸನ್ನು ಕಳೆಯೊಡನೆ ಆ ಚೈತನ್ಯವು ತನ್ನ ನಿಜಸ್ವರೂಪವನ್ನು ಬೆಳಗುವದು. —(ಮುಂ ೩-೧-೮,೯). (ಆ) ಶರೀರದಲ್ಲಿ ಬಾಗಿಲುಗಳು, ಬಾಗಿಲು ಕಾಯುವವರು-ಮೊದಲಾದ ಅನೇಕ ಉಪಕರಣಗಳಿರುವದರಿಂದ ಅದೊಂದು ನಗರದಂತೆ ಇದೆ. ಅನೇಕ ಉಪಕರಣಗಳಿಂದ ಕೂಡಿದ್ದೆಲ್ಲ ಮತ್ತೊಬ್ಬರ ಭೋಗಕ್ಕಾಗಿ ಇರುವದು ಕಂಡು ಬಂದಿದೆ. ಈ ಶರೀರವೆಂಬ ನಗರಕ್ಕೆ ಹನ್ನೊಂದು ಬಾಗಿಲುಗಳಿವೆ. ತಲೆಯಲ್ಲಿ ಏಳು; ನಾಭಿಯೊಡನೆ ಕೂಡಿ ಕೆಳಗಡೆಯಲ್ಲಿ ಮೂರು ಮತ್ತು ನಡುನೆತ್ತಿಯಲ್ಲೊಂದು- ಇವೇ ಹನ್ನೊಂದು ಬಾಗಿಲು. ಈ ನಗರದ ಒಡೆಯನು ಯಾವಾಗಲೂ ಒಂದೇ ರೀತಿಯಲ್ಲಿರುವ ಆತ್ಮ. ಈ ಆತ್ಮನ ಸ್ವರೂಪವನ್ನು

ಚೆನ್ನಾಗಿ ತಿಳಿದುಕೊಂಡು ಬಯಕೆಗಳನ್ನೆಲ್ಲ ಬಿಟ್ಟು ಧ್ಯಾನ ಮಾಡಿದರೆ ದುಃಖವಿಲ್ಲ ಮಾಯವಾಗುವದು. ಹಾಗೆ ಧ್ಯಾನಮಾಡಿದವನು ಬದುಕಿರುವಾಗಲೆ ಮುಕ್ತನಾಗಿದ್ದು ದೇಹವನ್ನು ಬಿಟ್ಟ ಮೇಲೆ ಮತ್ತೆ ಹುಟ್ಟುವದಿಲ್ಲ. —(ಕ ೫-೧). (ಇ) ಹೇಗೆ ಧ್ಯಾನವನ್ನು ಮಾಡಬೇಕೆಂಬುದನ್ನು ಇಲ್ಲಿ ಒಂದು ಹೋಲಿಕೆಯಿಂದ ತಿಳಿಸಲಾಗುವದು. ಉಪನಿಷತ್ತಿನಲ್ಲಿ ಪ್ರಸಿದ್ಧವಾದ ಧನುಸ್ಸನ್ನು ಹಿಡಿಯಬೇಕು. ಎಡೆಬಿಡದ ಧ್ಯಾನದಿಂದ ಸಾಣೆಹಿಡಿದ ಬಾಣವನ್ನು ಹೂಡಬೇಕು. ಬ್ರಹ್ಮವೆ ತಾನೆಂಬ ಭಾವನೆಯಿಂದ ತುಂಬಿರುವ ಮನಸ್ಸಿನಿಂದ ಎಳೆಯಬೇಕು. ಆ ಬ್ರಹ್ಮವೆ ಗುರಿಯಾಗಿರಬೇಕು. ಇದನ್ನು ಇನ್ನೂ ವಿವರಿಸಲಾಗುವದು. ಓಂಕಾರವೆ ಗುರಿಯನ್ನು ಮುಟ್ಟುವ ಬಾಣವನ್ನು ಹೂಡುವ ಧನುಸ್ಸಿನಂತೆ. ಓಂಕಾರವನ್ನು ಅಭ್ಯಾಸಮಾಡಿ ಶುದ್ಧಿಗೊಂಡವನು, ಧನುಸ್ಸಿನ ಸಹಾಯದಿಂದ ಬಾಣವು ಗುರಿಯಲ್ಲಿ ನಿಲ್ಲುವಂತೆ ಯಾವ ತಡೆಯೂ ಇಲ್ಲದೆ ಬ್ರಹ್ಮದಲ್ಲಿ ನಿಲ್ಲುವನು. ನಮ್ಮ ಜೀವವೇ, ಎಂದರೆ ನೀರಿನಲ್ಲಿ ಸೂರ್ಯ ಮೊದಲಾದವರು ಪ್ರತಿಬಿಂಬಿಸಿದಂತೆ ಶರೀರದಲ್ಲಿ ನಡೆಯುವ ಬುದ್ಧಿಯ ವ್ಯಾಪಾರಗಳಿಗೆಲ್ಲ ಬೆಂಬಲವಾಗಿ ಅದರಲ್ಲಿ ಒಡೆದು ಮೂಡಿರುವ ಚೈತನ್ಯವೆ ಬಾಣದಂತೆ; ಬ್ರಹ್ಮವೆ ಅದರ ಗುರಿಯಂತೆ ಏಕೆಂದರೆ: ಮನಸ್ಸನ್ನು ಹರಿಯಗೊಡದಿರಬೇಕೆನ್ನುವವರು ಬ್ರಹ್ಮವನ್ನು ತಮ್ಮ ಗುರಿಯಾಗಿ ಇಟ್ಟುಕೊಳ್ಳುವರು. ಹೀಗಿರುವದರಿಂದ ಬ್ರಹ್ಮವನ್ನು ಪಡೆಯಬೇಕೆಂಬ ಬಯಕೆಯನ್ನು ಸಡಿಲವಾಗಗೊಡದೆ ಜೀವವೆಂಬ ಬಾಣದಿಂದ ಬ್ರಹ್ಮವನ್ನು ಹೊಡೆಯಬೇಕು. ಆಮೇಲೆ ಬಾಣವು ಗುರಿಯಲ್ಲಿ ಒಂದಾಗಿರುವಂತೆ ದೇಹ ಮೊದಲಾದವುಗಳು ತಾನೆಂಬ ಮೊದಲಾದ ಭಾವನೆಗಳನ್ನೆಲ್ಲ ಬಿಟ್ಟು ತಾನು ಬ್ರಹ್ಮವೇ ಆಗಿರುವ ಫಲವನ್ನು ಮೈಗೂಡಿಸಿಕೊಳ್ಳಬೇಕು. —(ಮುಂ ೨-೨-೩,೪)

(ಅ) ವೇದದಲ್ಲಿ ಹೇಳಿರುವ ಕರ್ಮಗಳನ್ನು ಮಾಡುವವರು ಪೂರ್ವಕ್ಕೂ ಉತ್ತರಕ್ಕೂ ಇದಿರಾಗಿ ಕುಳಿತುಕೊಳ್ಳಬೇಕಷ್ಟೆ. ಧ್ಯಾನಕ್ಕೆ ಆ ನಿಯಮವೇನೂ ಇಲ್ಲ. ಧ್ಯಾನದಲ್ಲಿ ಮನಸ್ಸಿಗೆ ಅನುಕೂಲವಾಗಿ ತೋರುವದೇ ಮುಖ್ಯ. —(ಸೂ ೪-೧-೭). (ಆ) ಕೆಳಗೊಂದು ಅರಳೀಕಟ್ಟೆಗೆಯನ್ನೂ

ಮೇಲೊಂದು ಅರಳೀಕಟ್ಟಿಗೆಯನ್ನೂ ಇಟ್ಟು ಕಡೆದಾಗ ಒಳಗೆ ಅಡಗಿದ್ದ ಅಗ್ನಿ ಕಾಣಿಸಿಕೊಳ್ಳುವದಷ್ಟೆ. ಹಾಗೆ ಈ ದೇಹವೇ ಕೆಳಗಣ ಅರಳೀ ಕಟ್ಟಿಗೆ; ಓಂಕಾರವೇ ಮೇಲಿನ ಅರಳೀ ಕಟ್ಟಿಗೆ. ಧ್ಯಾನವೆಂಬ ಕಡೆತದಿಂದ ಆತ್ಮಜ್ಯೋತಿಯು ಎದ್ದು ಕಾಣಿಸಿಕೊಳ್ಳುವದು. —(ಶ್ವೇ ೧-೧೪).

(೬) ಓಂಕಾರದ ಅರ್ಥವೇನೆಂದರೆ: ಓಂ ಎಂಬುದರಲ್ಲಿ ಅ, ಉ ಮ್,-ಎಂಬ ಮೂರಕ್ಷರಗಳಿವೆ. ಈ ಮೂರಕ್ಷರಗಳಿಗೂ ಬೇರೆಬೇರೆ ಅರ್ಥಗಳಿವೆ. ಮೊದಲನೆ 'ಅ' ಎಂಬ ಅಕ್ಷರಕ್ಕೆ ಎಚ್ಚರದ ಜಗತ್ತಿನಲ್ಲಿ ತಾನು ತನ್ನದೆಂದಭಿಮಾನಿಸುತ್ತ ಎಲ್ಲೆಲ್ಲಿಯೂ ಹರಡಿಕೊಂಡಿರುವ ವಿಶ್ವ ಅಥವಾ ವೈಶ್ವಾನರನೆಂಬ ಹೆಸರಿನ ಚೈತನ್ಯವೆಂದರ್ಥ. ಆ ಚೈತನ್ಯಕ್ಕೂ ಅಕಾರಕ್ಕೂ ಹೋಲಿಕೆಯೇನೆಂದರೆ: (೧) ವೈಶ್ವಾನರನು ಎಚ್ಚರದ ಜಗತ್ತಿನಲ್ಲೆಲ್ಲ ತುಂಬಿಕೊಂಡಿರುವನು; ಅಕಾರವು ಎಲ್ಲ ಮಾತುಗಳಲ್ಲಿಯೂ ತುಂಬಿಕೊಂಡಿರುವದು. (೨) ಮನುಷ್ಯನಿಗಿರುವ ಮೂರು ಅವಸ್ಥೆಗಳಲ್ಲಿ ಎಚ್ಚರವು ಮುಖ್ಯವಾದದ್ದೆಂಬ ಭಾವನೆಯ ಮೇಲೆ ವೈಶ್ವಾನರನು ಮೊದಲನೆಯವನು; ಅಕಾರವು ಅಕ್ಷರಗಳಲ್ಲೆಲ್ಲ ಮೊದಲನೆಯದು. ಆದ್ದರಿಂದ ಅಕಾರವೂ ವಿಶ್ವನೂ ಒಂದು. ಎರಡನೆ 'ಉ' ಎಂಬ ಅಕ್ಷರಕ್ಕೆ ಕನಸಿನಲ್ಲಿ ತಾನು ತನ್ನದೆಂದಭಿಮಾನಿಸುತ್ತ ಎಲ್ಲೆಲ್ಲಿಯೂ ಹರಡಿಕೊಂಡಿರುವ ತೈಜಸನೆಂಬ ಹೆಸರಿನ ಚೈತನ್ಯವೆಂದರ್ಥ. ಈ ಚೈತನ್ಯಕ್ಕೂ ಉಕಾರಕ್ಕೂ ಹೋಲಿಕೆ ಏನೆಂದರೆ: (೧) ತೈಜಸನು ಎಚ್ಚರದ ವಾಸನೆಯಿಂದ ಮೇಲಕ್ಕೆದ್ದಂತಿರುವನು; ಉಕಾರವು ಅಕಾರದಿಂದ ಮೇಲಕ್ಕೆದ್ದಂತಿರುವದು. (೨) ತೈಜಸನು ಎಚ್ಚರದವನಿಗೂ ತನಿನಿದ್ರೆಯವನಿಗೂ ನಡುವಣನಾಗಿರುವನು; ಉಕಾರವು ಅಕಾರಕ್ಕೂ ಮಕಾರಕ್ಕೂ ನಡುವಣದಾಗಿರುವದು. ಮೂರನೆ 'ಮ್' ಎಂಬ ಅಕ್ಷರಕ್ಕೆ ತನಿನಿದ್ರೆಯಲ್ಲಿ ತಾನೇ ತಾನಾಗಿ ಸುಖವನ್ನನುಭವಿಸುವ ಪ್ರಾಜ್ಞನೆಂಬ ಹೆಸರಿನ ಚೈತನ್ಯವೆಂದರ್ಥ. ಈ ಚೈತನಕ್ಕೂ ಮಕಾರಕ್ಕೂ ಹೋಲಿಕೆ ಏನೆಂದರೆ: (೧) ಪ್ರಾಜ್ಞನು ಎಚ್ಚರದ ಜಗತ್ತನ್ನೂ ನೋಡುವವನನ್ನೂ ಕನಸುಗಾಣುವವನನ್ನೂ ಒಳಗೊಳ್ಳುತ್ತ ಹೊರಚೆಲ್ಲುತ್ತ ಧಾನ್ಯವನ್ನು ಅಳೆಯುವ ಬಳ್ಳದಂತೆ ಇರುವನು; ಮಕಾರವು ಅಕಾರವನ್ನೂ ಉಕಾರವನ್ನೂ ಒಳಗೊಳ್ಳುತ್ತ ಹೊರಚೆಲ್ಲುತ್ತ ಇರುವಂತೆ

ಕಾಣುವದು. (೨) ಎಚ್ಚರದ ಜಗತ್ತಿನಲ್ಲಿ ಅಭಿಮಾನಗೊಳ್ಳುವವನೂ ಕನಸಿನಲ್ಲಿ ಅಭಿಮಾನಗೊಳ್ಳುವವನೂ ಪ್ರಾಜ್ಞನಲ್ಲಿ ಮುಳುಗಿ ಒಂದಾದವರಂತಾಗುವರು; 'ಓಂ' ಎಂದಾಗ ಅಕಾರವೂ ಉಕಾರವೂ ಮಕಾರದಲ್ಲಿ ಮುಳುಗಿ ಒಂದಾದಂತೆ ಕಾಣುವದು. —(ಮಾಂ ೧-೧೯..೨೧). (೩) 'ಓಂ' ಎಂದರೆ ಯಾವ ಅವಸ್ಥೆಯ ಅಭಿಮಾನವೂ ಇಲ್ಲದ ಚೈತನ್ಯಮಾತ್ರವೆಂದರ್ಥ. ಅದು ಮೂರವಸ್ಥೆಗಳ ಸಂಬಂಧದಿಂದ ಬಿಡುಗಡೆಯನ್ನು ಹೊಂದಿದ್ದು. ಅದು ಎಲ್ಲರ ಹೃದಯದಲ್ಲಿಯೂ ಇರುವ ಪರಮಾತ್ಮ. ಅದನ್ನು ಹಿಂದೆ ಕಳೆದ ಮೂರವಸ್ಥೆಗಳ ಎಣಿಕೆಯ ದಾರಿಯನ್ನು ಹಿಡಿದು ನಾಲ್ಕನೆಯದೆನ್ನುವರು. ಅದೇ ಆತ್ಮತತ್ತ್ವ. ಇದನ್ನು ತಿಳಿದವರಿಗೆ ದುಃಖದ ಸೆಲೆ ಇಲ್ಲ.—(ಮಾಂ ೧-೨೮).

ಎಚ್ಚರ ಮೊದಲಾದ ಅವಸ್ಥೆಗಳಲ್ಲಿ ನಾನು ನನ್ನದೆನ್ನುವದು ಶರೀರದ ಅಳತೆಯೊಳಗೆ ಸಿಕ್ಕುಬಿದ್ದ ಚೈತನ್ಯವಾಗಿರುವಾಗ ಅದನ್ನು ಎಲ್ಲೆಲ್ಲಿಯೂ ಹರಡಿಕೊಂಡಿರುವದೆಂಬ ಮಾತಿನಿಂದ ಯಾವ ಅಳತೆಗೂ ಸಿಕ್ಕದ್ದನ್ನಾಗಿ ಹೇಳುವದು ಹೇಗೆ ಒಪ್ಪುವದೆಂಬ ಸಂಶಯ ಉಂಟಾಗಬಹುದು. ಗಡಿಗೆಯ ಬಯಲು ಗಡಿಗೆಯ ಅಳತೆಯೊಳಗೆ ಸಿಕ್ಕಿಬಿದ್ದದ್ದಾದರೂ ಯಾವ ಅಳತೆಗೂ ಸಿಕ್ಕದ ಸ್ವಭಾವದ್ದಾಗಿರುವಂತೆ ಚೈತನ್ಯವು ಶರೀರದ ಅಳತೆಯೊಳಗೆ ಸಿಕ್ಕುಬಿದ್ದದ್ದಾದರೂ ಯಾವ ಅಳತೆಗೂ ಸಿಕ್ಕದ ಸ್ವಭಾವದ್ದಾಗಿರುವದು. ಆ ಅರ್ಥವನ್ನು ಅನುಭವದಲ್ಲಿಯೂ ತೋರಿಸಬಹುದು. ಚೈತನ್ಯವು ಶರೀರದ ಅಳತೆಯೊಳಗೆ ಸಿಕ್ಕುಬಿದ್ದಿರುವಂತೆ ಕಂಡರೂ ಅದರ ಪ್ರಭಾವದಿಂದ ಅದರ ಹೆಚ್ಚಿನ ಯೋಗ್ಯತೆಯು, ಎಂದರೆ ಅದು ಎಲ್ಲೆಲ್ಲಿಯೂ ತುಂಬಿರುವಿಕೆಯು, ಎದ್ದು ಕಾಣುವದು. ಅದು ಕಾಣಬರುವ ಜಗತ್ತನ್ನೂ ಕೇಳಬರುವ ಜಗತ್ತನ್ನೂ ಮಾತ್ರವೇ ಅಲ್ಲದೆ ಮನಸ್ಸು ಹುಟ್ಟುಗಟ್ಟುವ ಜಗತ್ತನ್ನೂ ಕೂಡ ತನ್ನ ಜ್ಞಾನವೆಂಬ ಭರಣಿಯ ಒಂದು ಮೂಲೆಯಲ್ಲಿ ಅಡಗಿಸಿಕೊಂಡು ಇನ್ನೂ ಎಷ್ಟಿದ್ದರೂ ಒಳಗೊಳ್ಳುವದಕ್ಕೆ ಅವಕಾಶವನ್ನುಂಟಾಗಿರುವಂತೆ ಇರುವದನ್ನು ನಾವು ಪ್ರತ್ಯಕ್ಷವಾಗಿ ಅನುಭವಿಸುತ್ತೇವೆ. ಇದರಿಂದಲೇ ಅದು ಎಲ್ಲೆಲ್ಲಿಯೂ ಹರಡಿಕೊಂಡಿರುವಂಥದ್ದಾಗಿ ಯಾವ ಅಳ

ತೆಗೂ ಸಿಕ್ಕದ ಸ್ವಭಾವದ್ದೆಂದು ಹೇಳಿದ್ದಾಗಿರುವದು. ಶರೀರದ ಆಳತೆಯೊಳಗೆ ಸಿಕ್ಕುಬಿದ್ದಿರುವ ಚೈತನ್ಯಗಳೆಲ್ಲ ಬಿಡಿಬಿಡಿಯಾದವುಗಳೆಂದು ಎಲ್ಲರೂ ತಿಳಿದೇ ಇರುವರು. ಅದನ್ನೆ ಹೇಳಿದರೆ ಶ್ರುತಿಯದೇನು ಹೆಚ್ಚುಗಾರಿಕೆ? ಸಾಮಾನ್ಯವಾಗಿ ಯಾರಿಗೂ ತಾನಾಗಿ ಹೊಳೆಯದಿರುವ ಗಂಭೀರವಾದ ಅರ್ಥವನ್ನು ಹೇಳಿದರಲ್ಲವೆ ಅದು ಬ್ರಹ್ಮನ ಮುಖದಿಂದ ಬಂದದ್ದೆಂಬ ಗೌರವವು ಅದಕ್ಕೆ ಸಲ್ಲುವದು! ಗಡಿಗೆಯ ಬಯಲು ಬಿಡಿಯಾಗಿರುವದು ಹೇಗೆ ಶಕ್ಯವಿಲ್ಲವೊ ಹಾಗೆ ಚೈತನ್ಯವು ಬಿಡಿಯಾಗಿರುವದು ಶಕ್ಯವಿಲ್ಲ. ಅದು ಯಾವ ಅಳತೆಗೂ ಸಿಕ್ಕದೆ ಎಲ್ಲೆಲ್ಲಿಯೂ ತುಂಬಿಕೊಂಡಿರುವದು.

## ಧ್ಯಾನದ ಅಭ್ಯಾಸ

(ಅ) ಬಯಕೆಗಳನ್ನೆಲ್ಲ ಬಿಟ್ಟು ಮನಸ್ಸು ಒಮ್ಮುಖವಾಗಿ ಆತ್ಮನಲ್ಲಿ ನಿಂತರೆ ಧ್ಯಾನವು ಮೈಗೂಡುವದಕ್ಕೆ ಬಂತೆಂದು ತಿಳಿಯಬೇಕು. ಧ್ಯಾನವನ್ನು ಮಾಡುವವನ ಮನಸ್ಸು ಗಾಳಿ ಇಲ್ಲದ ಕಡೆಯ ದೀಪದಂತೆ ಅಲುಗಾಡದೆ ಇರುವದು. ಹೀಗೆ ಮನಸ್ಸು ನಿಂತಾಗ ಬುದ್ಧಿಯು ಆತ್ಮನನ್ನು ಕಾಣುತ್ತ ತನ್ನಲ್ಲಿ ತಾನೆ ಆನಂದಗೊಳ್ಳುತ್ತಿರುವದು. ಆ ಆನಂದವು ವಿಷಯಗಳಿಂದಾಗುವ ಆನಂದದಂತೆ ಸ್ವಲ್ಪ ಹೊತ್ತಿದ್ದು ಹೋಗತಕ್ಕದ್ದಲ್ಲ. ಏಕೆಂದರೆ: ಅದು ವಿಷಯಗಳಿಂದ ಉಂಟಾದದ್ದಲ್ಲ. ಅದು ಬುದ್ಧಿಯಲ್ಲಿ ತಾನಾಗಿ ತೋರಿಕೊಂಡದ್ದು. ಆ ನೆಲೆಯನ್ನು ಮುಟ್ಟಿದವನು ಅಲ್ಲಿಂದ ಕದಲುವದಿಲ್ಲ. ಅಲ್ಲಿ ದುಃಖದ ಸೋಂಕೇ ಇರುವದಿಲ್ಲ. ಬೇಸರಗೊಳ್ಳದೆ ಅದನ್ನು ಮುಂದುವರಿಸಬೇಕು.—(ಭ ೬-೧೮..೨೩). (ಆ) ಧೈರ್ಯದಿಂದ ಕೂಡಿದ ಬುದ್ಧಿಯಿಂದ ಮನಸ್ಸನ್ನು ಹಾಗೆ ವಿಶ್ರಾಂತಿಗೊಳಿಸಿ ಹೊರಗಣ ಏನನ್ನೂ ಒಳಕ್ಕೆ ಬಿಟ್ಟುಕೊಳ್ಳದೆ ಇರಬೇಕು. ಹೀಗಿದ್ದರೂ ಮನಸ್ಸು ಚಪಲತೆಯಿಂದ ಹೊರಬಿದ್ದರೆ ಅದಕ್ಕೆ ಬುದ್ಧಿಯನ್ನು ಹೇಳಿ ಹಿಡಿತಕ್ಕೆ ತಂದುಕೊಳ್ಳಬೇಕು. —(ಭ ೬-೨೫,೨೬). (ಇ) ದರ್ಭೆಯ ತುದಿಯಿಂದ ಸಮುದ್ರದ ನೀರನ್ನೆತ್ತಿ ಹೊರಕ್ಕೆ ಹಾಕುವ ಕೆಲಸವನ್ನು ನಿರಾಶನಾಗದೆ ಹೇಗೆ ಮಾಡಬೇಕೊ ಹಾಗೆ ಮನಸ್ಸನ್ನು ಬಿಗಿಹಿಡಿಯುವ ಕೆಲಸವನ್ನು ನಿರಾಶನಾಗದೆ ಮಾಡಬೇಕು. ಮನಸ್ಸು ಹೊರಗಣ ವಿಷಯಗಳನ್ನು ಬಯಸಿ ಹೊರಬೀಳು

ವದು ಹೇಗೆ ಕೆಟ್ಟದ್ದೊ ನಿದ್ರೆಯಲ್ಲಿ ಹಾಯಾಗಿ ಅಡಗುವದೂ ಹಾಗೆ ಕೆಟ್ಟದ್ದೆ. ಆದ್ದರಿಂದ ಅದನ್ನೂ ತಡೆಯಬೇಕು. ಎರಡನೆಯದೆಂಬುದೆಲ್ಲ ಮಾಯಿಕವಾದ್ದರಿಂದ ಬರೀ ದುಃಖವನ್ನೆ ಕೊಡತಕ್ಕದ್ದೆಂದು ಬುದ್ಧಿಯನ್ನು ಹೇಳಿ ಹೊರಗಣ ವಿಷಯಗಳ ಅಕ್ಕರೆಯಿಂದ ಮನಸ್ಸನ್ನು ಹಿಮ್ಮೆಟ್ಟಿಸಬೇಕು. ಕಾಣುವದೆಲ್ಲ ಬ್ರಹ್ಮವೇ ಎಂದು ಶಾಸ್ತ್ರದಿಂದಲೂ ಆಚಾರ್ಯರಿಂದಲೂ ತಿಳಿದುಕೊಂಡದ್ದನ್ನು ನೆನವುಗೊಟ್ಟು ಎರಡನೆಯದನ್ನು ಮನಸ್ಸಿಗೇ ತಂದುಕೊಳ್ಳದಂತೆ ಮಾಡಬೇಕು. ನಿದ್ರೆಯಲ್ಲಿ ಅಡಗುವದಕ್ಕೆ ಹೋಗುವ ಮನಸ್ಸನ್ನು ಎಚ್ಚರಗೊಳಿಸಬೇಕು. ಮನಸ್ಸು ನಿದ್ರೆಯಲ್ಲಿಯೂ ಅಡಗದೆ ಹೊರಕ್ಕೂ ಹೋಗದೆ ಒಳಗೆ ನೆಟ್ಟಗೆ ನಿಲ್ಲದೆಯೂ ಇದ್ದರೆ ಅದರಲ್ಲಿನ್ನೂ ಹೊರಗಣ ವಿಷಯಗಳ ಮೇಲಿನ ಅಕ್ಕರೆಯ ಬೀಜವಿರುವದೆಂದು ತಿಳಿದು ಯತ್ನದಿಂದ ಅದನ್ನು ಕದಲದಂತೆ ನೋಡಿಕೊಳ್ಳಬೇಕು. ಮನಸ್ಸು ನೆಟ್ಟಗೆ ನಿಂತದ್ದರಿಂದಾಗುವ ಸುಖಕ್ಕೂ ಮರುಳಾಗಬಾರದು. ಮನಸ್ಸೆಂಬುದೇ ಇಲ್ಲದಂತಾಗಿ ಅದು ಜ್ಞಾನಸ್ವರೂಪವೇ ಆಗುವಂತೆ ಮಾಡಬೇಕು. ನಿದ್ರೆಯಲ್ಲಿ ಅಡಗದೆಯೂ ಹೊರಬೀಳದೆಯೂ ಗಾಳಿ ಇಲ್ಲದ ಕಡೆಯ ದೀಪದಂತೆ ಅಲುಗಾಡದೆ ವಿಷಯದ ಆಕಾರವನ್ನು ಪಡೆಯಹೋಗದೆ ಇದ್ದರೆ ಅದು ಬ್ರಹ್ಮಸ್ವರೂಪವಾಯಿತೆಂದು ತಿಳಿಯಬೇಕು. ಹೀಗೆ ಆತ್ಮನಲ್ಲಿ ನಿಂತು ಎಲ್ಲ ಅನರ್ಥಗಳನ್ನೂ ದಾಟಿ ತಾನೇ ತಾನಾಗಿರುವ ಸುಖವನ್ನು ಆಡಿ ತೋರಿಸುವದಕ್ಕೆ ಬರುವದಿಲ್ಲ. ಏಕೆಂದರೆ: ಅದು ಎಲ್ಲರಿಗೂ ಗೊತ್ತಾಗತಕ್ಕದ್ದಲ್ಲ. ಉತ್ಕೃಷ್ಟವಾದ ಆ ಸುಖವು ಯೋಗಿಗಳಿಗೆ ಮಾತ್ರ ಗೊತ್ತು.

—(ಮಾಂ ೩-೪೧..೪೭).

## ಫ ಲ

(ಅ) ಈ ಧ್ಯಾನವನ್ನು ಮಾಡುತ್ತ ಮಾಡುತ್ತ ನಾನೆಂಬ ಅರಿವು ಕೂಡ ಹೋಗಿ ಬ್ರಹ್ಮ ಒಂದೇ ಉಳಿಯುವವರೆಗೂ ಸಾಧಿಸಬೇಕು. ಅಂಥ ಸ್ಥಿತಿಯು ಬೇಗ ವೈಗೂಡದಿದ್ದರೆ ಸಾಯುವ ತನಕ ಅದನ್ನು ಸಾಗಿಸಬೇಕು. ಕೊನೆಯ ಭಾವನೆಯಿಂದ ಒಳ್ಳೆ ಅದೃಷ್ಟವು ಹುಟ್ಟಿ ಆದಕ್ಕೆ ತಕ್ಕ ಫಲವಾಗುತ್ತದೆ. —(ಶೂ ೧-೪-೮). (ಆ) ಧ್ಯಾನವು ಬಲಿತರೆ ಎಳ್ಳಿನಲ್ಲಿ ಎಣ್ಣೆಯೂ

ಹಾಲಿನಲ್ಲಿ ಬೆಣ್ಣೆಯೂ ಅರಳೀಕಟ್ಟಿಗೆಯಲ್ಲಿ ಬೆಂಕಿಯೂ ಎದ್ದು ಕಾಣು ವಂತೆ ಧ್ಯಾನದಲ್ಲ ಆತ್ಮನು ಎದ್ದು ಕಾಣುವನು. (ಶ್ವೇ ೧-೧೫). (ಇ) ಓಂಕಾರದ ಎಲ್ಲ ಮಾತ್ರೆಗಳನ್ನೂ ತಿಳಿಯದೆ ಒಂದೊಂದೇ ಮಾತ್ರೆ ಯನ್ನು ತಿಳಿದರೂ ಅದಕ್ಕೆ ತಕ್ಕ ಫಲ ಉಂಟು. ಅಕಾರವೆಂಬ ಮಾತ್ರೆಯ ಅರ್ಥವನ್ನು ಮಾತ್ರ ತಿಳಿದು ಓಂಕಾರವನ್ನು ಬ್ರಹ್ಮವೆಂದು ಧ್ಯಾನಿಸಿದರೆ ಅವನು ಮನುಷ್ಯನಾಗಿಯೂ ಅದರಲ್ಲಿಯೂ ಬ್ರಾಹ್ಮಣನಾಗಿಯೂ ಶ್ರದ್ಧೆ ಯುಳ್ಳವನಾಗಿಯೂ ಹುಟ್ಟುವನು. ಅ, ಉ-ಎಂಬ ಎರಡು ಮಾತ್ರೆಗಳ ಅರ್ಥವನ್ನು ಮಾತ್ರ ತಿಳಿದು ಓಂಕಾರವನ್ನು ಬ್ರಹ್ಮವೆಂದು ಧ್ಯಾನಿಸಿದರೆ ಅವನು ಚಂದ್ರಲೋಕಕ್ಕೆ ಹೋಗಿ ಅಲ್ಲಿ ಬೇಕಾದಷ್ಟು ಸುಖವನ್ನು ಅನುಭ ವಿಸಿ ಮತ್ತೆ ಮನುಷ್ಯನಾಗುತ್ತಾನೆ. ಅ, ಉ, ಮ-ಎಂಬ ಮೂರು ಮಾತ್ರೆ ಗಳ ಅರ್ಥವನ್ನೂ ತಿಳಿದು ಓಂಕಾರದಿಂದ ಬ್ರಹ್ಮವನ್ನು ಧ್ಯಾನಿಸಿದರೆ ಅವನು ಸೂರ್ಯನಲ್ಲಿ ಹೋಗಿ ಸೇರುತ್ತಾನೆ. ಚಂದ್ರಲೋಕದಿಂದ ಹಿಂದಿರುಗಿ ಬಂದಂತೆ ಅವನು ಮತ್ತೆ ಹುಟ್ಟುವದಿಲ್ಲ. ಹಾವು ಪರೆಯನ್ನು ಬಿಟ್ಟಂತೆ ಅವನು ಪಾಪಗಳನ್ನೆಲ್ಲ ತೊರೆದು ಸತ್ಯಲೋಕವೆಂಬ ಹಿರಣ್ಯಗರ್ಭಬ್ರಹ್ಮನ ಲೋಕ ವನ್ನು ಪಡೆಯುತ್ತಾನೆ ಅಲ್ಲಿ ಧ್ಯಾನವನ್ನು ಮುಂದುವರಿಸಿ ಅವನು ಪರ ಬ್ರಹ್ಮವನ್ನು ಕಾಣುತ್ತಾನೆ. —(ಪ್ರ ೫-೩.೫).

(ಅ) ಹೀಗೆ ಮನಸ್ಸನ್ನು ನೆಲೆಗೆ ನಿಲ್ಲಿಸಿಕೊಂಡ ಯೋಗಿಗೆ ಮನಸ್ಸಿನ ಹೊಲಸೆಲ್ಲ ಹೋಗಿ ಬಹು ಹೆಚ್ಚಿನ ಸುಖವು ಉಂಟಾಗುತ್ತದೆ. ಅವನಲ್ಲಿ ಅಧರ್ಮ ಮೊದಲಾದವುಗಳ ಹುಟ್ಟಳಿದು ಅವನು ಬ್ರಹ್ಮನೇ ಆಗಿ ಬದುಕಿರು ವಾಗಲೆ ಮುಕ್ತನಾಗುತ್ತಾನೆ. ಧ್ಯಾನದ ಅಡ್ಡಿಗಳನ್ನೆಲ್ಲ ದಾಟಿ ಹೀಗೆ ಪಾಪ ವನ್ನು ಕಳೆದುಕೊಂಡು ಅವನು ಆಯಾಸವಿಲ್ಲದೆ ಬ್ರಹ್ಮದೊಡನೆ ಒಂದಾಗು ತ್ತಾನೆ. (ಭ ೬ ೨೭,೨೮). (ಆ) ಮೊದಮೊದಲು ಕಷ್ಟವಾಗಿ ಸುಖದಲ್ಲಿ ಕೊನೆಗಾಣುತ್ತ ಬುದ್ಧಿಯ ಪ್ರಸನ್ನತೆಯಿಂದ ಆಗುವ ಈ ಸುಖವು ಸಾತ್ತ್ವಿ ಕವಾದದ್ದು .(ಭ ೧೮-೩೭). (ಇ) ಯೋಗದ ವಿಷಯವನ್ನು ಚೆನ್ನಾಗಿ ತಿಳಿದವರು ಮನಸ್ಸು ಕೂಡ ಅಳಿದು ಅನುಭವಕ್ಕೆ ಬರುವ ಈ ಸಮಾಧಿ ಯನ್ನು ಧರ್ಮದ ಮೇಘವೆನ್ನುವರು. ಇದು ಧರ್ಮವೆಂಬ ಅಮೃತದ ಧಾರೆಗ

ಳನ್ನು ತುದಿಮೊದಲಿಲ್ಲದೆ ಮಳೆಗರೆಯುತ್ತಿರುವದು. ಈ ಸಮಾಧಿಯಿಂದ ಮನಸ್ಸಿನ ವಾಸನೆಗಳೆಲ್ಲ ಹುಟ್ಟಳಿದು ಹೋಗುವವು; ಪುಣ್ಯಪಾಪಗಳ ಬೇರುಗಳೆಲ್ಲ ಬುಡಮೇಲಾಗಿ ಒಣಗಿ ಹೋಗುವವು. ಮೊದಲು ತಮಗೆ ದೂರವಾಗಿ ಕಾಣುತ್ತಿದ್ದ ತತ್ತ್ವಮಸಿ ಮೊದಲಾದ ಮಹಾವಾಕ್ಯಗಳ ಜೀವಬ್ರಹ್ಮೈಕ್ಯಾರ್ಥವು ಈಗ ಅಂಗಯ್ಯೊಳಗಣ ನೆಲ್ಲಿಯ ಕಾಯಂತಾಗುವದು. (ಅಧ್ಯಾ ೩೮..೪೦). (ಈ) ಪ್ರಲಯಕಾಲದ ಗಾಳಿಗಳು ಬೀಸಿದರೂ ಸಮುದ್ರಗಳೆಲ್ಲ ಒಂದಾಗಿ ಕಲೆತರೂ ಹನ್ನೆರಡು ಜನ ಸೂರ್ಯರೂ ತಮ್ಮ ಬಿಸಿಯನ್ನು ತೋರಿದರೂ ಮನಸ್ಸು ಅಳಿದಿರುವವನ ಸ್ಥಿತಿಗೆ ಭಂಗವಿಲ್ಲ. (ಮ ೪-೯೭). (ಉ) ಮನಸ್ಸು ಅಳಿದಿರುವವನ ಮೈಯನ್ನು ಶಸ್ತ್ರವು ಕತ್ತರಿಸಿದರೂ ಕೂಡ ಅವನು ಕವಲುವದಿಲ್ಲ. (ಭ ೬-೨೨).

(ಅ) ಇಂಥ ಸಮಾಧಿಯಿಂದುಂಟಾದ ಒಂದು ಬಗೆಯ ಶಕ್ತಿಯಿಂದ ಕೂಡಿದವನು ಸಾಯುವಾಗ ಮನಸ್ಸನ್ನು ಹೃದಯದಲ್ಲಿ ನಿಲ್ಲಿಸಿಕೊಂಡು ಆಮೇಲೆ ಮೇಲುಗಡೆಗೆ ಹೋಗುವ ಸುಷುಮ್ನೆ ಎಂಬ ನಾಡಿಯ ಮೂಲಕ ಪ್ರಾಣವಾಯುವನ್ನು ಏರಿಸುತ್ತ ಅನೇಕ ಮೆಟ್ಟಿಲುಗಳನ್ನು ದಾಟಿ ಹುಬ್ಬಿನ ನಡುವೆ ನಿಲ್ಲಿಸಿ ಯಾವ ಗಾಬರಿಯೂ ಇಲ್ಲದೆ ಹೊರಬಿದ್ದು ಪರಮಾತ್ಮನನ್ನು ಪಡೆಯುತ್ತಾನೆ —(ಭ ೮-೧೦). (ಆ) ಬ್ರಹ್ಮನ ಹೆಸರಾದ ಓಂಕಾರವನ್ನು ಉಚ್ಚರಿಸುತ್ತ ಪರಮಾತ್ಮನನ್ನು ಧ್ಯಾನಿಸುತ್ತ ಹೀಗೆ ದೇಹವನ್ನು ಬಿಟ್ಟವನು ಉತ್ತಮಗತಿಯನ್ನು ಹೊಂದುತ್ತಾನೆ. ಬೇರೊಂದನ್ನು ಮನಸ್ಸಿಗೆ ತಂದುಕೊಳ್ಳದೆ ಸಾಯುವ ತನಕ ಯಾವಾಗಲೂ ಪರಬ್ರಹ್ಮವನ್ನು ನೆನೆಯುವವನಿಗೆ ಅದು ಬಹು ಸುಲಭವಾಗಿ ದೊರೆಯುವದು.

(ಭ ೮-೧೩,೧೪).

## ಯೋಗದಲ್ಲಿ ಕೊನೆಮುಟ್ಟದೆ ಹೋದವನ ಗತಿ

ಧ್ಯಾನದಿಂದ ಉತ್ತಮಗತಿಯನ್ನು ಸಾಧಿಸುವೆನೆಂದು ಕರ್ಮಗಳನ್ನೆಲ್ಲ ಕೈಬಿಟ್ಟಿರುವಾಗ ಆ ಧ್ಯಾನವೂ ಕೊನೆಮುಟ್ಟದೆ ಹೋದರೂ ಅವನು ಎರಡೂ ಕೆಟ್ಟ ಕುರುಡದಾಸನೇನೂ ಆಗುವದಿಲ್ಲ. ಅವನಿಗೆಂದಿಗೂ ದುರ್ಗತಿ ಇಲ್ಲ. ಒಳ್ಳೆಯದನ್ನು ಮಾಡಿದವರಿಗೆಂದಿಗೂ ಕೆಟ್ಟದ್ದಾಗುವದಿಲ್ಲ. ಧ್ಯಾನವು

ಕೊನೆಮುಟ್ಟದಿದ್ದರೂ ಅವರು ಅಶ್ವಮೇಧಯಾಗ ಮೊದಲಾದವುಗಳನ್ನು ಮಾಡಿದವರು ಪಡೆಯುವ ಲೋಕಕ್ಕೆ ಹೋಗಿ ಅಲ್ಲಿ ಬಹುಕಾಲ ಸುಖವಾಗಿದ್ದು ಆಮೇಲೆ ಒಳ್ಳೆ ಶುದ್ಧಮನಸ್ಸಿನವರಾದ ಹಣಗಾರರ ಮನೆಯಲ್ಲಾದರೂ ಹುಟ್ಟುತ್ತಾರೆ; ಅಥವಾ ಒಳ್ಳೆ ಬುದ್ಧಿವಂತರೂ ಬಡವರೂ ಆದ ಯೋಗಿಗಳ ಮನೆಯಲ್ಲಾದರೂ ಹುಟ್ಟುತ್ತಾರೆ. ಬಡವರಾದ ಯೋಗಿಗಳ ಮನೆಯಲ್ಲಿ ಹುಟ್ಟುವದು ಬಹು ಹೆಚ್ಚಿನ ಪುಣ್ಯದ ಫಲ. ಏಕೆಂದರೆ: ಹಣಗಾರರ ಮನೆಯಲ್ಲಿ ಹುಟ್ಟಿದರೆ ಆ ಹಣದ ಆಸೆಯ ಸೆಳೆತಕ್ಕೆ ಸಿಕ್ಕಿ ನರಳುವ ಸಂಭವ ಉಂಟು. ಬಡವರ ಮನೆಯಲ್ಲಿ ಹುಟ್ಟಿದರೆ ಆ ತೊಂದರೆ ಇಲ್ಲ. ಯೋಗಿಗಳ ಮನೆಯಲ್ಲಿ ಹುಟ್ಟುತ್ತಲೆ ಹಿಂದಿನ ಜನ್ಮದಲ್ಲಿ ತಾನು ಮಾಡಿದ ಯೋಗದ ವಾಸನೆ ಚೆನ್ನಾಗಿ ಕಾಣಿಸಿಕೊಳ್ಳುವದು. ಅಲ್ಲಿ ಅವನು ಅದನ್ನು ಮುಂದಕ್ಕೆ ಸಾಗಿಸುವ ಯತ್ನವನ್ನು ಬಹು ಸುಲಭವಾಗಿ ಮಾಡುವನು. ಅವನು ತನಗೆ ಅರಿವಿಲ್ಲದೆ ಹಿಂದಿನ ಜನ್ಮದ ಅಭ್ಯಾಸದ ಸೆಳೆತಕ್ಕೆ ಸಿಕ್ಕಿಕೊಚ್ಚಿಕೊಂಡು ಹೋಗುವನು. ಅವನ ಹಿಂದಿನ ಕರ್ಮಗಳಲ್ಲಿ ಇನ್ನೂ ಬಲವತ್ತರವಾದ ಪಾಪಕರ್ಮಗಳೇನಾದರೂ ಇದ್ದರೆ ಅವು ಯೋಗದ ವಾಸನೆಯನ್ನು ತುಳಿದು ತಾವು ಮೇಲೆ ಬಂದು ತಮ್ಮ ಆಟವನ್ನು ನಡೆಸುವವಾದರೂ ಅದು ಮುಗಿದೊಡನೆ ಈ ಯೋಗದ ವಾಸನೆಯು ಎದ್ದೇ ಏಳುವದು. ಎಷ್ಟು ಹೆಚ್ಚು ಕಾಲ ಕಳೆದರೂ ಅದು ಹಾಳಾಗುವದಿಲ್ಲ. ಯೋಗದ ಸ್ವರೂಪವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವನು ಕೂಡ ದೊಡ್ಡದೊಡ್ಡ ಕರ್ಮಗಳ ಫಲಗಳಿಗಿಂತ ಹೆಚ್ಚಿನ ಫಲವನ್ನು ಪಡೆಯುತ್ತಾನೆ. ಇನ್ನು ಅದನ್ನು ತಿಳಿದು ನಡೆಸಿದವನ ವಿಷಯವನ್ನು ಹೇಳತಕ್ಕದ್ದೇನು! ಯೋಗಿಯು ಉಪವಾಸ ಮೊದಲಾದ ತಪಸ್ಸನ್ನು ಮಾಡುವವರಿಗಿಂತಲೂ ಹೆಚ್ಚಿನವನು. ಅಷ್ಟೇ ಏಕೆ? ಬ್ರಹ್ಮವಿಷಯಕವಾದ ಮಾತಿನಲ್ಲಿ ನಿಪುಣರಾದವರಿಗಿಂತಲೂ ಶ್ರೇಷ್ಠನು. ಮತ್ತು ಅಗ್ನಿಹೋತ್ರ ಮೊದಲಾದ ಕರ್ಮಗಳನ್ನು ಮಾಡುವವರಿಗಿಂತಲೂ ಮೇಲುಗೈ ಆದವನು. ಆದ್ದರಿಂದ ಯೋಗಿಯಾಗಬೇಕು.

—(ಭ ೬-೪೦..೪೬)

# ೧೨—ವಿಚಾರವೆಂಬ ದಾರಿ

## ಅವಸ್ಥೆಗಳು

ವಿಚಾರವೆಂಬುವದು ಮನುಷ್ಯನನ್ನು ಬ್ರಹ್ಮನ ಬಳಿಗೆ ಮುಟ್ಟಿಸುವ ಕೊನೆಯ ದಾರಿ. ಇದರ ವಿಷಯವು ಕರ್ಮ, ಭಕ್ತಿ ಮತ್ತು ಯೋಗ-ಎಂಬ ದಾರಿಗಳ ವಿಷಯವಾದ ಮೇಲೆ ಬಂದಿರುವನ್ನು ನೋಡಿ ಅವುಗಳಾದ ಮೇಲೆ ಇದು ಮೊದಲಾಗುವದೆಂದು ಊಹಿಸಬಾರದು. ಇದು ಹಿಂದೆ ಹೇಳಿರುವ ಎಲ್ಲ ದಾರಿಗಳಿಗೂ ಮೊದಲಲ್ಲಿದ್ದುಕೊಂಡು ಎಲ್ಲ ದಾರಿಗಳೊಳಗೂ ಸೇರಿಕೊಂಡು ಸಾಗುತ್ತ ಬಂದಿರುವದು. ಬ್ರಹ್ಮವು ಜಗತ್ತಿನ ಬೇರೆಂದು ಒಂದು ಕಡೆ ತಿಳಿಸಿರುವದೂ ಆತ್ಮನನ್ನು ತೋರಿಸುವ ಕೈಮರಗಳೆಂದು ಇನ್ನೊಂದು ಕಡೆ ಹೇಳಿರುವದೂ ಎಲ್ಲವೂ ವಿಚಾರವೆಂಬ ಮಾತಿನೊಳಗೇ ಸೇರುವವು. ವಿಚಾರವನ್ನು ಮೊದಲುಮಾಡಿಕೊಂಡೇ ಕರ್ಮ ಮೊದಲಾದ ದಾರಿಗಳು ಹೊರಟಿರುವವು. ವಿಚಾರವಿಲ್ಲದೆ ಆ ದಾರಿಗಳಲ್ಲಿ ಸಾಗುವದು ಬರೀ ಹೊರವ್ಯಸಾಧನವಾಗುವದು. ಹೀಗೆ ವಿಚಾರವು ಹಿಂದಿನಿಂದ ಇದ್ದರೂ ಇಲ್ಲಿ ವಿಚಾರವೆಂಬ ದಾರಿಯೆಂದು ಹೇಳುವ ಮಾತುಗಳ ಜಾತಿ ಬೇರೆ. ಹಿಂದೆ ಹೇಳಿದ ವಿಚಾರಗಳು ದೂರದೂರದಲ್ಲಿ ನಿಂತು ನಿಲುಕಿಸಿಕೊಳ್ಳುವದಕ್ಕೆ ಹೋಗುವವುಗಳು. ಈ ಪ್ರಕರಣದಲ್ಲಿ ಹೇಳುವ ವಿಚಾರಗಳು ತನ್ನ ಅನುಭವವನ್ನು ಗಟ್ಟಿಯಾಗಿ ಹಿಡಿದುಕೊಂಡು ಅದರ ಬಲದಿಂದ ತನ್ನೊಳಗೆ ತಾನೆ ನಿಲುಕಿಸಿಕೊಳ್ಳುವದಕ್ಕೆ ಹೋಗುವವುಗಳು. ಮನುಷ್ಯನ ಅನುಭವಗಳು ಮೂರು ಬಗೆಯಾಗಿರುವವು. ಎಚ್ಚರ, ಕನಸು, ತನಿನಿದ್ರೆ-ಇವೇ ಆ ಮೂರು. ಇವುಗಳ ಮೂಲಕ ಆತ್ಮವು ತನ್ನ ಅನುಭವದಲ್ಲಿ ಎದ್ದು ಕಂಡೇ ಕಾಣುವದು.

ಇದೊಂದನ್ನೇ ಮೊದಲೇ ಹೇಳಿ ಗ್ರಂಥವನ್ನು ಮುಗಿಸದೆ ನಡುವೆ ಬೇರೆ ಬೇರೆ ದಾರಿಗಳ ಮಾತನ್ನು ತಂದು ತಲೆಗೇಕೆ ಭಾರವನ್ನು ಮಾಡಬೇಕಾಗಿತ್ತೆಂದು ತೋರಬಹುದು. ನಡುವೆ ಆ ದಾರಿಗಳನ್ನು ತರದೆ ಈ ವಿಚಾರದ ದಾರಿಯೊಂದನ್ನೇ ಹೇಳಿಬಿಟ್ಟಿದ್ದರೆ ಅದು ಆಗ ತಲೆಗೆ ಬರೀ ಭಾರವಾದದ್ದಾಗುತ್ತಿತ್ತು. ತನಗೆ ಬುದ್ಧಿ ಇರುವದೆಂದು ಒಣ ವಿಚಾರವನ್ನು

ಮಾಡಿದ ಮಾತ್ರಕ್ಕೇ ಅದರಿಂದ ಆತ್ಮವು ಮೇಲಕ್ಕೆದ್ದು ತನ್ನ ಆನಂದದ ಮಳೆಯನ್ನು ಸುರಿಸುವದಿಲ್ಲ. ಆ ವಿಚಾರದಿಂದ ಆತ್ಮವು ತನ್ನದೊಂದು ಹೊಳಪನ್ನು ತೋರಿಸಬಹುದು. ಆದರೆ ಅದು ಆ ಹೃದಯದಲ್ಲಿ ತನ್ನ ಆನಂದದ ಝುರಿಯನ್ನು ಉಕ್ಕಿಸುವದಿಲ್ಲ. ಸಂಸಾರದ ಒದ್ದಾಟಗಳಿಂದ ಬೆಂದು ಬೆಂಡಾಗಿರುವ ಮನಸ್ಸಿನಲ್ಲಿ ಶಾಂತಿ ತಲೆದೋರಬೇಕಾಗಿದ್ದರೆ ಆನಂದದ ಝುರಿ ಅದರ ಮೇಲೆ ಹರಿಯಬೇಕಾದದ್ದು ಅಗತ್ಯ. ಆತ್ಮನ ಆ ಒಲವು ತನಗಾಗಬೇಕಾದರೆ ತನ್ನ ಬುದ್ಧಿಯು ಕೆಲವು ಸಂಸ್ಕಾರಗಳನ್ನು ಹೊಂದಿರಬೇಕಾಗುವದು. ಕರ್ಮವೆಂಬ ದಾರಿಯಿಂದ ಮತ್ತು ಭಕ್ತಿಯೆಂಬ ದಾರಿಯಿಂದ ಬುದ್ಧಿಯು ತನ್ನ ಹೊಲಸುಗಳನ್ನು ಕಳೆದುಕೊಂಡು ಶುದ್ಧವಾಗುವದು. ಯೋಗವೆಂಬ ದಾರಿಯಿಂದ ಅದು ತನ್ನ ಹರಿದಾಟವನ್ನು ನಿಲ್ಲಿಸಿಕೊಂಡು ಒಂದು ಕಡೆ ನಿಲ್ಲುವ ಯೋಗ್ಯತೆಯನ್ನು ಪಡೆಯುವದು. ಇಷ್ಟು ಸಂಸ್ಕಾರಗಳಿಂದ ಕೂಡಿದ ಬುದ್ಧಿಯು ವಿಚಾರ ಮಾಡಿದಾಗ ಆತ್ಮವು ತನ್ನ ಪೂರ್ಣವಾದ ಒಲುಮೆಯನ್ನು ತೋರಿಸುವದು.

ಆತ್ಮನು ಹುಟ್ಟುಸಾವುಗಳಿಲ್ಲದವನೆಂದೂ ಏನನ್ನೂ ಮಾಡದವನೆಂದೂ ಅದೇ ತನ್ನ ಸ್ವರೂಪವೆಂದೂ ಮನಗಾಣುವದೇ ಆಗಲಾರದೆಂದು ಸಾಮಾನ್ಯವಾಗಿ ತೋರಬಹುದು. ಮನಗಾಣವವಕಾಶಗದ ಮಾತನ್ನು ಶಾಸ್ತ್ರವೇಕೆ ಹೇಳೀತು ! ಇದು ಧರ್ಮವೆಂದೂ ಇದು ಅಧರ್ಮವೆಂದೂ ಆತ್ಮನು ಇವುಗಳನ್ನು ಮಾಡಿ ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹಕ್ಕೆ ಹೋಗುತ್ತಿರುವನೆಂದೂ ಶಾಸ್ತ್ರವು ಹೇಳುವ ಉಪದೇಶವನ್ನು ನಾವು ತಿಳಿಯುವದಕ್ಕಾದಂತೆ ಆ ಆತ್ಮನು ನಿಜವಾಗಿ ಯಾವ ಬದಲಾವಣೆಯನ್ನೂ ಹೊಂದದವನೆಂದೂ ಏನನ್ನೂ ಮಾಡದವನೆಂದೂ ಎಲ್ಲೆಲ್ಲಿಯೂ ತಾನೇ ತಾನಾಗಿರುವನೆಂದೂ ಹೇಳುವ ಶಾಸ್ತ್ರದ ಅಭಿಪ್ರಾಯವನ್ನು ನಾವೇಕೆ ತಿಳಿಯಲಾಗುವದಿಲ್ಲ? ತಿಳಿಯುವದು ಮನಸ್ಸಷ್ಟೆ. ಆದರೂ ಎಲ್ಲ ಮನಸ್ಸೂ ಇದನ್ನು ತಿಳಿಯಲಾರದು. ಯಾವ ಮನಸ್ಸು ಶಾಸ್ತ್ರದ ಉಪದೇಶವನ್ನು ಒಳಗೊಂಡಿರುವದೊ ಮತ್ತು ಗುರುಗಳ ಅನುಗ್ರಹದಿಂದ ಮೈದುಂಬಿಕೊಂಡಿರುವದೊ ಅದರ ಜೊತೆಗೆ

ಇಂದ್ರಿಯಗಳೊಡನೆ ಒಂದು ಕಡೆ ನಿಲ್ಲುವ ಯೋಗ್ಯತೆಯನ್ನು ಪಡೆದುಕೊಂಡಿರುವದೊ ಆ ಮನಸ್ಸು ಮಾತ್ರ ಆತ್ಮನನ್ನು ನಿಲುಕಿಸಿಕೊಳ್ಳಬಲ್ಲದು.

—(ಭ ೨-೨೧)

ಆದ್ದರಿಂದ ಹೆಜ್ಜೆಹೆಜ್ಜೆಗೂ ಉಬ್ಬು ತಗ್ಗುಗಳಿರುವ ವಿಚಾರವೆಂಬ ದಾರಿಯಲ್ಲಿ ಜಗ್ಗಹಾಕಿಕೊಂಡು ನಡೆಯಬೇಕಾದರೆ ಹಿಂದಿನ ದಾರಿಗಳಲ್ಲಿ ನಡೆದು ನಡೆದು ನಡಿಗೆಯನ್ನು ಚೆನ್ನಾಗಿ ಅಳವಡಿಸಿಕೊಂಡಿರಬೇಕಾದದ್ದು ಅಗತ್ಯ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಕರ್ಮವೊದಲಾದ ದಾರಿಗಳನ್ನು ಮೊದಲು ಹೇಳಿ ಈ ವಿಚಾರವೆಂಬ ದಾರಿಯಲ್ಲಿ ಕಾಲಿಡಲಾಗುವದು. ಅವಸ್ಥೆಗಳು ಎಷ್ಟೋ ಸಂದರ್ಭಗಳಲ್ಲಿ ಒಂದಕ್ಕೊಂದು ಹೊಂದಿಕೆ ಇಲ್ಲದವುಗಳಾಗಿ ಕಾಣಬರುವದರಿಂದ ಒಂದೊಂದವಸ್ಥೆಯ ಆತ್ಮನೆ ಬೇರೆ ಒಬ್ಬೊಬ್ಬನೆಂದು ತಿಳಿಯಬಾರದು. ಕನಸು ಕಂಡ ನಾನೆ ಮತ್ತು ನಿದ್ರಿಸಿದ ನಾನೆ ಎಚ್ಚರವನ್ನು ಕಾಣುತ್ತಿರುವೆನೆಂದು ನಮ್ಮ ಅನುಭವವಿರುವದರಿಂದ ಆ ಮೂರವಸ್ಥೆಗಳೂ ತನ್ನೊಬ್ಬನವೇ ಎಂದು ತಿಳಿಯಬೇಕು. ಎಚ್ಚರವನ್ನು ಕಂಡ ನಾನೆ ಕನಸು ಕಾಣುತ್ತಿರುವೆನೆಂದು ಮುಂತಾಗಿ ಅನುಭವವಿಲ್ಲವೆಂಬುದೇನೋ ನಿಜ; ಆದರೆ ಆ ಕನಸು ಸುಳ್ಳಾದದ್ದೆಂದು ಎಚ್ಚರವು ಹೇಳುವದರಿಂದ ಆ ಕೊರತೆಗೆ ಬೆಲೆ ಇಲ್ಲ. ನಿದ್ರೆಯಲ್ಲಂತು ಯಾವ ನೆನಪಿಗೂ ದಾರಿ ಇಲ್ಲದ್ದರಿಂದ ಅಲ್ಲಿ ಎಚ್ಚರದ ನೆನಪು ತಲೆಹಾಕಲೇ ಆರದು. ನಮಗೆ ಎಚ್ಚರದ ಅನುಭವವೇ ಮುಖ್ಯವಾದದ್ದು. ನಾವು ಕಳೆದುಕೊಳ್ಳಬೇಕಾಗಿರುವದು ಎಚ್ಚರದ ದುಃಖಗಳನ್ನೇ ಹೊರತು ಕನಸಿನವುಗಳನ್ನಲ್ಲ. ಕನಸಿನವು ಎಚ್ಚರವಾಗುತ್ತಲೆ ತಮಗೆ ತಾವೇ ಹೋಗಿಬಿಡುವವು. ಆದ್ದರಿಂದ ಎಚ್ಚರದಲ್ಲಿ ನೋಡಿದರೆ ಮೂರು ಅವಸ್ಥೆಗಳನ್ನು ನೋಡುವವನು ತಾನೊಬ್ಬನೇ ಎಂದು ಗೊತ್ತೇ ಆಗುವದು.

ಮನುಷ್ಯನಿಗೆ ಮೂರೇ ಅವಸ್ಥೆಗಳಾದರೆ ಮೂರ್ಛೆಯನ್ನು ಯಾವದರಲ್ಲಿ ಸೇರಿಸಬೇಕೆಂದು ಯೋಚನೆಯುಂಟಾಗಬಹುದು. ಆಗ ಅವನಿಗೆ ಏನೂ ತಿಳಿಯದಿರುವದರಿಂದಲೂ ಶರೀರವು ನೆಲದ ಮೇಲೆ ಬಿದ್ದಿರುವದರಿಂದಲೂ ಅದು ಎಚ್ಚರವಲ್ಲ. ಜ್ಞಾನವಿಲ್ಲದ್ದರಿಂದ ಅದು ಕನಸಲ್ಲ. ಆಗ ಸುಖವಾಗಿತ್ತೆಂದು ಆಮೇಲೆ ತೋರುವದಿಲ್ಲವಾದ್ದರಿಂದಲೂ ಉಸಿರಾಡ

ದಿರುವದರಿಂದಲೂ ದೇಹವು ನಡುಗುವದರಿಂದಲೂ ಮುಖವು ಭಯಂಕರವಾಗಿರುವದರಿಂದಲೂ ಕಣ್ಣು ಅಗಲಿಕೊಂಡೇ ಇರುವದರಿಂದಲೂ ಹೊಡೆದರೂ ಎಚ್ಚರವಾಗುವದಿಲ್ಲವಾದ್ದರಿಂದಲೂ ಅದು ನಿದ್ರೆಯೂ ಅಲ್ಲ. ಪ್ರಾಣವೂ ಬಿಸಿಯೂ ಇರುವದರಿಂದಲೂ ಅವನು ಮತ್ತೆ ಏಳುವದರಿಂದಲೂ ಅದು ಸಾವೂ ಅಲ್ಲ. ಹೀಗೆ ಅದನ್ನು ಯಾವದರಲ್ಲಿ ಸೇರಿಸುವದಕ್ಕೂ ಬರುವದಿಲ್ಲ. ಅದು ಯಾರೋ ಒಬ್ಬೊಬ್ಬರಿಗೆ ಯಾವಾಗಲೋ ಒಮ್ಮೊಮ್ಮೆ ಕಾಣಬರುವದರಿಂದ ಅದನ್ನೊಂದು ಅವಸ್ಥೆಯೆಂದೇ ಎಣಿಸುವ ವಾಡಿಕೆ ಇಲ್ಲ.

—(ಸೂ ೩-೨-೪)

## ಅವಸ್ಥೆಗಳ ಭೇದಗಳು

ಸೂರ್ಯ ಮೊದಲಾದ ದೇವತೆಗಳ ಅನುಗ್ರಹದಿಂದ ಕೂಡಿದ ಕಣ್ಣು ಮೊದಲಾದ ಇಂದ್ರಿಯಗಳಿಂದಲೂ ಮನಸ್ಸಿನಿಂದಲೂ ಸದ್ದು ಮೊದಲಾದ ಹೊರಗಣ ಸ್ಥೂಲವಿಷಯಗಳನ್ನು ಕಾಣುವದು ಆತ್ಮನ ಎಚ್ಚರ. ಎಚ್ಚರದ ವಾಸನೆಯಿಂದ ಕೂಡಿದ ಮನಸ್ಸಿನಿಂದ ಹೊರಗೆ ಸದ್ದು ಮೊದಲಾದ ವಿಷಯಗಳಿರುವಂತೆ ಕಾಣುವದು ಆತ್ಮನ ಕನಸು. ಇಂದ್ರಿಯಗಳೂ ಮನಸ್ಸೂ ಎಲ್ಲವೂ ಅಡಗಿದ ಕಾರಣದಿಂದ ಏನನ್ನೂ ಅರಿಯದಿರುವದು ತನಿನಿದ್ರೆ.

—(ಸ. ಸಾ)

ಆತ್ಮನಿಗೆ ನಿಜವನ್ನರಿಯದಿರುವದು, ಒಂದನ್ನಿನ್ನೊಂದನ್ನಾಗಿ ತಿಳಿಯುವದು-ಎಂಬೆರಡು ಕಟ್ಟುಗಳು ಬಿದ್ದಿರುವವು. ಎಚ್ಚರದಲ್ಲಿಯೂ ಕನಸಿನಲ್ಲಿಯೂ ತಾನು ತನ್ನದೆಂದಭಿಮಾನಗೊಳ್ಳುವ ಆತ್ಮನಲ್ಲಿ ಈ ಎರಡು ಕಟ್ಟುಗಳೂ ಕಾಣುವವು. ಅವನಿಗೆ ತನ್ನ ನಿಜಸ್ವರೂಪವು ತಿಳಿದಿರುವದಿಲ್ಲ. ಆದ್ದರಿಂದಲೆ ಅವನು ಹಗ್ಗದಲ್ಲಿ ಹಾವನ್ನು ಹುಟ್ಟುಗಟ್ಟಿಕೊಂಡು ಹೆದರುವಂತೆ ತನ್ನಲ್ಲಿಯೇ ಒಂದು ಜಗತ್ತನ್ನು ಹುಟ್ಟುಗಟ್ಟಿಕೊಂಡು ಅದರಿಂದ ಗಳಿಗೆಗಳಿಗೆಗೂ ಬೆಚ್ಚಿಬೀಳುತ್ತ ಬಾಯಿಬಾಯಿ ಬಿಡುತ್ತಿರುವನು. ಈ ಸ್ಥಿತಿಯು ಎಚ್ಚರಕ್ಕೂ ಕನಸಿಗೂ ಸಮಾನವಾದ್ದರಿಂದ ಅವೆರಡನ್ನೂ ಬೇರೆಬೇರೆಯೆಂದು ಎಣಿಸುವದಕ್ಕಿಂತ ಒಂದೇ ಎಂದು ಎಣಿಸುವದೇ ಹೆಚ್ಚು ಒಪ್ಪುವದು. ತನ್ನ ನಿಜವನ್ನು ತಾನು ಅರಿಯದಿರುವದೆಂಬುದು ಬೀಜ. ತನ್ನಲ್ಲಿ ಜಗತ್ತನ್ನು

ಹುಟ್ಟುಗಟ್ಟುವದೆಂಬುದು ಫಲ. ಎಚ್ಚರವನ್ನೂ ಕನಸನ್ನೂ ನೋಡುವವನನ್ನು ಈ ಎರಡು ಹಗ್ಗಗಳೂ ಬಿಗಿದುಕೊಂಡಿರುವವಷ್ಟೆ. ಗಾಢನಿದ್ರೆಯು ಆತ್ಮನಲ್ಲಿ ತನ್ನ ನಿಜವನ್ನು ತಾನು ಅರಿಯದಿರುವದೆಂಬ ಬೀಜವು ಮಾತ್ರ ಇರುವದು. ಬೀಜವ ಮತ್ತು ಫಲದ ಸೋಂಕಿಲ್ಲದ ಆತ್ಮನನ್ನು ನಾಲ್ಕನೆಯವನೆನ್ನುವರು. ನಿಜವಾಗಿ ಆತ್ಮನೆಂಬ ವಸ್ತು ಒಂದೇ ಆದರೂ ಬೀಜದ ಮತ್ತು ಫಲದ ಸೋಂಕಿನಿಂದ ಮೂವರೆಂದು ಹೇಳಿದ ದಾರಿಯನ್ನು ಹಿಡಿದು ಹೇಳುವಾಗ ಮಾತ್ರ ಅವನು ನಾಲ್ಕನೆಯವನೆನಿಸುವನು. ಅವನು ಶುದ್ಧಾತ್ಮ. ಈ ನಾಲ್ಕನೆಯವನಲ್ಲಿ ತನ್ನ ನಿಜವನ್ನು ತಾನು ಅರಿಯದಿರುವದೆಂಬ ಬೀಜವೂ ಇಲ್ಲ; ತನ್ನಲ್ಲಿ ಜಗತ್ತನ್ನು ಹುಟ್ಟುಗಟ್ಟುವ ಫಲವೂ ಇಲ್ಲ. ಬೀಜವೇ ಇಲ್ಲದ ಮೇಲೆ ಫಲವಿನ್ನೆಲ್ಲಿ ಬಂದೀತು! ತನ್ನಲ್ಲಿ ಜಗತ್ತನ್ನು ಹುಟ್ಟುಗಟ್ಟುವ ಫಲವಿಲ್ಲದಿರುವಿಕೆಯು ಮೂರನೆಯವನೆನಿಸಿದ ಗಾಢನಿದ್ರೆಯವನಿಗೂ ನಾಲ್ಕನೆಯವನೆನಿಸಿದ ಶುದ್ಧಾತ್ಮನಿಗೂ ಸಮವಾದ್ದರಿಂದ ಅವರಿಬ್ಬರನ್ನೂ ಸರಿಜೋಡಿಯುವರೆನ್ನಲೂ ಬಾರದು. ಏಕೆಂದರೆ: ಗಾಢನಿದ್ರೆಯವನಿಗೆ ಆಗ ತನ್ನ ಅರಿವೂ ಇರುವದಿಲ್ಲ; ಇನ್ನೊಂದರ ಅರಿವೂ ಇರುವದಿಲ್ಲ. ನಾಲ್ಕನೆಯವನಿಗೆ ಹಾಗಲ್ಲ. ಅವನು ಅರಿವಿನ ಸ್ವರೂಪವೇ ಆಗಿ ಯಾವಾಗಲೂ ನೋಡುವವನಾಗಿಯೇ ಇರುವನು ಆದ್ದರಿಂದಲೆ ಅವನಲ್ಲಿ ತನ್ನನ್ನು ತಾನು ಅರಿಯದಿರುವದೆಂಬ ಬೀಜಭಾವವಿಲ್ಲ. ಸೂರ್ಯನು ಯಾವಾಗಲೂ ಬೆಳಗುತ್ತಿರುವಾಗ ಅದರ ಹಗೆಯಾದ ಕತ್ತಲೆಯಾಗಲಿ ಆದರಿಂದ ಕಾಣುವ ಸುಳ್ಳುದೆವ್ವವಾಗಲಿ ಹೇಗೆ ಎದ್ದುಕೊಂಡಾವು? ಎಚ್ಚರದಲ್ಲಿಯೂ ಕನಸಿನಲ್ಲಿಯೂ ಎಲ್ಲಕಡೆಯೂ ನೋಡುವವನಾಗಿರುವವನು ಆ ನಾಲ್ಕನೆಯವನೆ. ಆದ್ದರಿಂದ ಅವನ ನೋಡುವಿಕೆಯೆಂಬುದೆಂದಿಗೂ ಇಲ್ಲದೆ ಹೋಗುವದೇ ಇಲ್ಲ. ತನ್ನಲ್ಲಿ ಜಗತ್ತನ್ನು ಹುಟ್ಟುಗಟ್ಟುವ ಫಲಭಾವವೂ ತನ್ನನ್ನು ತಾನು ಅರಿಯದಿರುವದೆಂಬ ಬೀಜಭಾವವೂ ಇಲ್ಲದ ಹಾಗೆ ಆದೊಡನೆ ನಮಗೆ ನಾಲ್ಕನೆಯವನ ಸ್ವರೂಪವು ಗೊತ್ತಾಗುತ್ತದೆ.

—(ಮಾಂ ೧-೧೧..೧೫).

## ಕ ನ ಸಿ ನ ವಿ ವ ರ

ಎಚ್ಚರದಲ್ಲಿ ಹೊರಗೆ ನಿಜವಾಗಿರುವ ವಸ್ತುಗಳಿಂದ ನಾವು ಸುಖ ದುಃಖಗಳನ್ನು ಪಡೆಯುತ್ತಿರುವೆವೆನ್ನುವೆವಷ್ಟೆ. ಕನಸಿನಲ್ಲಿಯೂ ನಾವು ಎಚ್ಚರದಂತೆಯೆ ಸುಖದುಃಖಗಳನ್ನು ಅನುಭವಿಸುತ್ತಿರುವೆವು. ಆದರೆ ಕನಸಿನಲ್ಲ ನಮಗಿಂತ ಬೇರೆಯಾಗಿ ಕಾಣುವ ಎಲ್ಲ ಜೀವರಾಶಿಗಳೂ ಜಡಪದಾರ್ಥಗಳೂ ನಿದ್ರಾದೋಷದಿಂದ ಹುಟ್ಟುಗಟ್ಟಿದವುಗಳು. —(ಕೈ ೧-೧೨)

ಆತ್ಮನು ಕನಸನ್ನು ಕಾಣುವಾಗ ಕಣ್ಣು ಮೊದಲಾದ ಇಂದ್ರಿಯಗಳೆಲ್ಲ ತಮ್ಮ ಕೆಲಸಗಳನ್ನು ಬಿಟ್ಟು ತೆಪ್ಪಗಿರುವವು. ಪ್ರಾಣವಾಯು ದೇಹವನ್ನು ಕಾಪಾಡುವದಕ್ಕಾಗಿ ಮೂಗಿನಲ್ಲಿ ಓಡಾಡುತ್ತಿರುವದು. ಸೂರ್ಯನು ತನ್ನ ಕಿರಣಗಳನ್ನೆಲ್ಲ ತನ್ನೊಳಕ್ಕೆ ಸೆಳೆದುಕೊಳ್ಳುವಂತೆ ಆತ್ಮನ ಮನಸ್ಸು ಇಂದ್ರಿಯಗಳನ್ನೆಲ್ಲ ತನ್ನೊಳಕ್ಕೆ ಸೆಳೆದುಕೊಂಡು ತಾನೇ ನೋಡುವವನಾಗಿಯೂ ತಾನೇ ಕಾಣಬರುವವುಗಳಾಗಿಯೂ ಆಗಿ ತಾನೇ ಬಹು ಬಗೆಯಾದ ತನ್ನ ಮಹಿಮೆಯನ್ನು ಹೊರಗೆಡಹುವದು. ಆಗ ಆತ್ಮನು ತಾನೆ ಹಿಂದೆ ಕಂಡುಕಂಡು ಮನಸ್ಸಿಗೆ ಅಂಟಿಸಿಕೊಂಡಿದ್ದ ಮಕ್ಕಳು-ಮರಿ, ಮೊದಲಾದವರನ್ನೆ ಕಾಣುವನು. ಒಮ್ಮೊಮ್ಮೆ ಮಕ್ಕಳನ್ನು ಗೆಳೆಯರೆಂದು ಕಾಣುವದೂ ಉಂಟು. ಅದರಂತೆ ಹಿಂದೆ ಕೇಳಿಕೇಳಿ ಮನಸ್ಸಿಗೆ ಹತ್ತಿಸಿಕೊಂಡಿದ್ದ ಅಭಿಪ್ರಾಯಗಳನ್ನೆ ಕೇಳುವನು. ಹೀಗೆ ಈ ಜನ್ಮದಲ್ಲಿಯೋ ಅಥವಾ ಹಿಂದಿನ ಜನ್ಮದಲ್ಲಿಯೋ ಕಂಡು ಕೇಳಿ ಮನಸ್ಸಿಗೆ ತಗುಲಿಕೊಂಡಿದ್ದವುಗಳನ್ನೆ ಕಾಣುವನು ಮತ್ತು ಕೇಳುವನು. ಎಂದೂ ಕಾಣದ ಮತ್ತು ಎಂದೂ ಕೇಳದ ವಿಷಯಗಳು ಮನಸ್ಸಿನಲ್ಲಿ ಹುಟ್ಟುವದು ಹೇಗೆ? ಹೀಗೆ ಅವನು ಹಿಂದೆ ಕಂಡು ಕೇಳಿದ ನೀರು ಮೊದಲಾದ ನಿಜವಾದವುಗಳನ್ನೂ ಬಿಸಿಲಗುದುರೆ ಮೊದಲಾದ ಸುಳ್ಳಾದವುಗಳನ್ನೂ ಮನಸ್ಸಿನ ಮೂಲಕವಾಗಿ ನೋಡುವನು. —(ಪ್ರ ೪-೫)

ಜೀವನಲ್ಲಿ ಕೆಟ್ಟ ವಾಸನೆಗಳು ಹೆಚ್ಚಾಗಿದ್ದರೆ ಕನಸಿನಲ್ಲಿ ಹಗೆಗಳೋ ಕಳ್ಳರೋ ಬಂದು ತನ್ನನ್ನು ಕೈಕಾಲು ಕಟ್ಟಿ ಹೊಡೆದಂತೆಯೂ ಆನೆಯೊಂದು ಓಡಿಸಿಕೊಂಡು ಬಂದಂತೆಯೂ ತಾನೊಂದು ಹಾಳುಬಾವಿಗೆ

ಬಿದ್ದಂತೆಯೂ ಕಾಣುವನು; ಒಳ್ಳೆ ವಾಸನೆಗಳು ಹೆಚ್ಚಾಗಿದ್ದರೆ ಕನಸಿನಲ್ಲಿ ಅವನು ದೇವರಂತೆ ಪೂಜೆಗೊಳ್ಳುವನು. ತನ್ನ ಆತ್ಮನೆ ಎಲ್ಲರ ಆತ್ಮವೆಂಬ ಅಭಿಪ್ರಾಯವು ಮನಸ್ಸಿಗೆ ಅಳವಟ್ಟಿದ್ದರೆ ಕನಸಿನಲ್ಲಿ ಎಲ್ಲವೂ ತಾನೆಯೆಂಬ ಅಭಿಪ್ರಾಯವು ಮೇಲಕ್ಕೇಳುತ್ತದೆ. ಹೀಗೆ ಕನಸು ತನ್ನ ವಾಸನೆಗಳನ್ನು ತಿಳಿಸುವ ಒರೆಗಲ್ಲಾಗಿರುವದು. —(ಬೃ ೪-೩-೨೦)

ಆತ್ಮನು ವಿಷಯಗಳನ್ನು ಕಾಣುವ ಸ್ಥಾನಗಳು ಎರಡೇ ಎರಡು. ಒಂದು ಈಗ ಅನುಭವಿಸುತ್ತಿರುವ ಲೋಕ; ಮತ್ತೊಂದು ಸತ್ತ ಮೇಲೆ ಅನುಭವಿಸುವ ಪರಲೋಕ. ಆತ್ಮನು ಕನಸಿನಲ್ಲಿಯೂ ವಿಷಯಗಳನ್ನು ಕಾಣುವನಾದರೂ ಅದು ಈ ಲೋಕವೂ ಅಲ್ಲ; ಪರಲೋಕವೂ ಅಲ್ಲ. ಅದು ಅವೆರಡಕ್ಕೂ ನಡುವಣದು. ಎರಡೂರುಗಳ ನಡುವಣ ಸ್ಥಲವನ್ನು ಮೂರನೆಯ ಸ್ಥಲವೆನ್ನುವದುಂಟೆ? ಆದರಂತೆ ಕನಸೆಂಬುದು ಮೂರನೆಯ ಸ್ಥಾನವಲ್ಲ. ಅದನ್ನು ನಡುವಣದೆನ್ನುವದೇಕೆಂದರೆ: ಆಗ ಅವನು ಎರಡು ಲೋಕಗಳನ್ನೂ ನೋಡುವನು. ಅದು ಹೇಗೆಂದರೆ: ಈ ಲೋಕದ ವಾಸನೆಗಳ ಜೊತೆಗೆ ಅವನು ಸತ್ತ ಮೇಲೆ ಒಳ್ಳೆ ಲೋಕಗಳನ್ನು ಪಡೆಯುವ ಯತ್ನವನ್ನು ಮಾಡುತ್ತಿರುವನಷ್ಟೆ. ಅವನ ಆ ತಿಳಿವಳಿಕೆಯೂ ಕರ್ಮವೂ ಆಗ ಮೊಳಕೆಯಾದಂತೆ ಅವನಿಗೆ ಕಾಣಬರುವವು. ಹೀಗೆ ಅಲ್ಲಿ ಅವನಿಗೆ ಹಿಂದಿನ ಪಾಪದ ಫಲವಾದ ದುಃಖವೂ ಆಗುವದು; ಪುಣ್ಯದ ಫಲವಾದ ಸುಖವೂ ಆಗುವದು. ಈ ಕನಸಿಗೆ ಹೋಗುವಾಗ ಅವನು ಎಚ್ಚರದ ಎಲ್ಲವುಗಳ ವಾಸನೆಯನ್ನೂ ತೆಗೆದುಕೊಂಡು ಹೋಗಿರುವನು. ಆ ಸಮಯದಲ್ಲಿ ತಾನು ದೇಹವನ್ನು ನೆಲದ ಮೇಲೆ ಕೆಡವಿರುವದಲ್ಲದೆ ಕನಸುಗಾಣುವದಕ್ಕಾಗಿ ಒಂದು ಸುಳ್ಳು ದೇಹವನ್ನು ಹುಟ್ಟುಗಟ್ಟಿಕೊಂಡು ತನ್ನ ಬೆಳಕಿನಿಂದ ಹೊಳೆಯುವ ಅಂತಃಕರಣದ ವೃತ್ತಿಯಿಂದ ಎಲ್ಲವನ್ನೂ ಬೆಳಗುವನು. ಕನಸಿನಲ್ಲಿಯೂ ಕಣ್ಣು ಮೊದಲಾದವುಗಳೂ ಅವುಗಳಿಗೆ ಅನುಗ್ರಹವನ್ನು ಮಾಡುವ ಸೂರ್ಯನೆ ಮೊದಲಾದವರೂ ಇರುವಂತೆ ಕಾಣುವದರಿಂದ ಅಲ್ಲಿಯ ಬೆಳಕನ್ನು ಆತ್ಮನದೇ ಎಂದು ಹೇಳುವದಕ್ಕೆ ಮನಸ್ಸು ಹಿಂಜರಿಯಬಹುದು. ಆತ್ಮನ ಬೆಳಕೇ ಉಳಿದ ಬೆಳಕುಗಳಿಗೆಲ್ಲ ಬೇರು. ಎಚ್ಚರದ ಬೆಳಕೂ ಆತ್ಮನ ಬೆಳ

ಕಿನಿಂದಲೆ. ಆದರೆ ಆಗ ಅದರ ಜೊತೆಗೆ ಇಂದ್ರಿಯಗಳೂ ಸೂರ್ಯ ಮೊದಲಾದವರೂ ಇರುವರು. ಕನಸಿನಲ್ಲಿ ಇಂದ್ರಿಯಗಳೂ ಇಲ್ಲ; ಸೂರ್ಯ ಮೊದಲಾದವರೂ ಇಲ್ಲ. ಅಲ್ಲಿ ಆತ್ಮನ ಬೆಳಕೊಂದೆ. ಆದ್ದರಿಂದ ಆತ್ಮನು ತನ್ನ ಬೆಳಕಿನಿಂದ ಬೆಳಗುವವನೆಂಬುದನ್ನು ಕನಸು ಮನಗಾಣಿಸುವದು.

—(ಬೃ ೪-೩-೯)

ಕನಸಿನಲ್ಲಿ ಕಾಣುವದೆಲ್ಲ ಅವನು ಹುಟ್ಟಗಟ್ಟಿದ್ದೆ. ಕನಸು ಮುಗಿದ ಮೇಲೆ ಆತ್ಮನು ಇಂದ್ರಿಯಗಳನ್ನೆಲ್ಲ ತೆಗೆದುಕೊಂಡು ಎಚ್ಚರಕ್ಕೆ ಬರುತ್ತಾನೆ. ಆತ್ಮನು ತನ್ನ ವಾಸನೆಯ ಬಲದಿಂದ ಹರಡಿದ ಕನಸೆಂಬ ಆಟವನ್ನು ಎಲ್ಲರೂ ನೋಡುತ್ತಾರೆ. ಆ ಆತ್ಮನನ್ನು ಮಾತ್ರ ಯಾರೂ ಕಾಣರು. ಹೀಗೆ ಆತ್ಮನು ತನ್ನ ಮಹಿಮೆಯನ್ನು ಕಣ್ಣಿಗೆ ಕಟ್ಟಿದ ಹಾಗೆ ಮುಂದಿಟ್ಟರೂ ದುರ್ದೈವಿಗಳು ಅವನನ್ನು ನಿಲುಕಿಸಿಕೊಳ್ಳಲಾರರು.

—(ಬೃ ೪-೩-೧೦..೧೪).

## ತನಿನಿದ್ರೆಯ ವಿವರ

ತನಿನಿದ್ರೆಯಲ್ಲಿ ಜೀವನು ಹೃದಯದಲ್ಲಿ ನಾಡಿಯಲ್ಲಿ ಅಡಗುವನೆಂದು ಒಂದು ಕಡೆ ಹೇಳಿದೆ; ಬ್ರಹ್ಮದಲ್ಲಿ ಅಡಗುವನೆಂದು ಇನ್ನೊಂದು ಕಡೆ ಹೇಳಿದೆ. ಈ ಹೇಳಿಕೆಯನ್ನು ನೋಡಿ ಜೀವನು ಒಮ್ಮೆ ನಾಡಿಯಲ್ಲಿಯೂ ಒಮ್ಮೆ ಬ್ರಹ್ಮದಲ್ಲಿಯೂ ಅಡಗುವನೆಂದೂ ನಾಡಿಯೂ ಬ್ರಹ್ಮನೂ ಜೀವನು ನಿದ್ರಿಸುವ ಬೇರೆಬೇರೆ ಸ್ಥಲಗಳೆಂದೂ ತಿಳಿಯಬಾರದು. 'ಮಹಡಿಯಲ್ಲಿ ಮಂಚದ ಮೇಲೆ ಮಲಗಿದ್ದಾನೆ' ಎಂಬಂತೆ ಜೀವನು ನಾಡಿಯಲ್ಲಿ ಬ್ರಹ್ಮದಲ್ಲಿ ಅಡಗುವನೆಂದು ತಿಳಿಯಬೇಕು. ನಾಡಿಯು ದ್ವಾರ; ಬ್ರಹ್ಮವು ನಿದ್ರೆಯ ಸ್ಥಾನ. ಜೀವವು ಯಾವಾಗಲೂ ಬ್ರಹ್ಮವೇ ಆದರೂ ಎಚ್ಚರದಲ್ಲಿಯೂ ಕನಸಿನಲ್ಲಿಯೂ ಹೊರಗಣ ವಿಷಯಗಳಲ್ಲಿ ತಾನು ತನ್ನದೆಂಬ ಅಭಿಮಾನ ಉಳ್ಳವನಾಗಿ ಬೇರೆ ಸ್ವರೂಪವನ್ನು ಪಡೆದಂತಾಗಿರುವನು. ಆ ಎರಡವಸ್ಥೆಗಳ ಜೊತೆಗೆ ಹೋಲಿಸಿ ನೋಡಿದರೆ ತನಿನಿದ್ರೆಯಲ್ಲಿ ಅವನು ಬೇರೆ ಸ್ವರೂಪವನ್ನು ಪಡೆಯದಿರುವದರಿಂದ ತನ್ನ ನಿಜಸ್ವರೂಪವಾದ ಬ್ರಹ್ಮವಾಗಿ ಇರುವವನಾಗುವನು. —(ಸೂ ೩-೨-೭).

ಜೀವನು ತನಿನಿದ್ರೆಗಾಗಿ ನಾಡಿಯೊಳಕ್ಕೆ ಸುಗ್ಗುತ್ತಲೆ ಅಲ್ಲಿರುವ ಸೂರ್ಯನ ಸಂಬಂಧವಾದ ಪಿತ್ತವೆಂಬ ಬೆಳಕು ಬಂದು ಜೀವನ ವಾಸನೆಯ ಬಾಗಿಲುಗಳಿಗೆಲ್ಲ ಅಡ್ಡವಾಗಿ ಮುಚ್ಚಿಕೊಂಡುಬಿಡುತ್ತದೆ. ಆಗ ಇಂದ್ರಿಯಗಳಿಂದ ಕೂಡಿದ ಮನಸ್ಸಿನ ಕಿರಣಗಳೆಲ್ಲ ಹೃದಯದಲ್ಲಿಯೇ ತಡೆಗಟ್ಟಿಸಿಕೊಂಡವುಗಳಾಗುತ್ತವೆ. ಆಗ ಮನಸ್ಸು ಕಟ್ಟಿಗೆಯೊಳಗಣ ಬೆಂಕಿಯಂತೆ ಒಳಗೆ ಅಡಗಿದ್ದಾಗಿ ಹೆಚ್ಚುಗಟ್ಟಲೆಯ ರೂಪನ್ನು ಪಡೆಯುವದಕ್ಕಾಗದೆ ಶರೀರದೊಳಗೆಲ್ಲ ಹರಡಿಕೊಂಡು ತೆಪ್ಪಗಾಗುತ್ತದೆ. ಆದನ್ನು ತನಿನಿದ್ರೆಯೆಂದು ಕರೆಯುವರು. ವಾಸನೆಯ ಬಾಗಿಲುಗಳೆಲ್ಲ ಬೆಳಕಿನಿಂದ ಮುಚ್ಚಿಕೊಂಡಿರುವದರಿಂದ ಆಗ ಜೀವನು ಕನಸನ್ನು ಕಾಣುವದಿಲ್ಲ. ಆಗ ತನ್ನ ಸ್ವರೂಪವನ್ನು ತಾನು ಅರಿಯದ್ದರಿಂದ ಏನೇನನ್ನೊ ಬಯಸಿ ಏನೇನನ್ನೊ ಮಾಡಿದ್ದರಿಂದ ಅವನಿಗೆ ಗಂಟುಬಿದ್ದಿದ್ದ ದೇಹವೂ ಇಂದ್ರಿಯಗಳೂ ಸುಮ್ಮನಾಗುವವು. ಅವೆಲ್ಲ ಸುಮ್ಮನಾಗುತ್ತಲೆ ಅವುಗಳ ಸಂಬಂಧದಿಂದ ಬೇರೆಬೇರೆ ರೂಪವನ್ನು ಮೈಮೇಲೆ ಹಾಕಿಕೊಳ್ಳುತ್ತಿದ್ದ ಆತ್ಮವು ಆಗ ಎರಡನೆಯದೆಂಬುದಿಲ್ಲದ್ದಾಗಿ ಎಲ್ಲೆಲ್ಲಿಯೂ ತುಂಬಿಕೊಂಡದ್ದಾಗುವನು. ಇದರಿಂದ ಅವನಿಗೆ ಆಗ ಒಳ್ಳೆ ಸುಖವೆನಿಸುತ್ತದೆ. —(ಪ್ರ ೪-೬)

ಆಕಾಶದಲ್ಲಿ ಹಾರಾಡುವ ಗಿಡಗ ಅಥವಾ ಗರುಡನು ಹಾರಿ ಹಾರಿ ಬಳಲಿ ಬೇಸತ್ತು ತನ್ನ ಗೂಡಿನೊಳಕ್ಕೆ ಬರುವಂತೆ ಜೀವನು ನಿದ್ರೆಗೆ ಬರುವನು. ಅಲ್ಲಿ ಅವನಿಗೆ ಎಚ್ಚರದಂಥ ಅಥವಾ ಕನಸಿನಂಥ ಯಾವ ಬಯಕೆಯೂ ಇಲ್ಲ; ಯಾವ ಎರಡನೆಯದರ ಸೋಂಕೂ ಇಲ್ಲ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ವ್ಯವಹಾರ ಮಾಡಿ ಮಾಡಿ ದಣಿದ ಜೀವನಿಗೆ ಹಾಯಾಗುವದಕ್ಕೆ ಯಾವ ವ್ಯವಹಾರದ ಸೋಂಕೂ ಇಲ್ಲದ ಬ್ರಹ್ಮವೇ ಗೂಡು. ಆದ್ದರಿಂದ ಜೀವನು ನಿದ್ರೆಯಲ್ಲಿ ಬ್ರಹ್ಮದಲ್ಲಿ ಮುಳುಗುತ್ತಾನೆ.

—(ಬೃ ೪-೩-೧೯).

ಸ್ವಭಾವವಾಗಿ ದೇವತಾರೂಪನಾದ ಆತ್ಮನು ಮನಸ್ಸಿನೊಡನೆ ಸಂಬಂಧಗೊಂಡಾಗ ಜೀವನೆನಿಸಿ ಕೇಳುವದು, ನೋಡುವದು-ಮೊದಲಾದ ವ್ಯವಹಾರಗಳನ್ನು ಮಾಡುವನು. ಮನಸ್ಸು ತೆಪ್ಪಗಾದೊಡನೆ ಅವನು ಆ ಜೀವತ್ವ

ವನ್ನು ತೊರೆದು ತನ್ನ ದೇವತಾಸ್ವರೂಪದಲ್ಲಿ ತಾನಿರುವನು. ಆಗ ಜೀವನು ಬ್ರಹ್ಮದಲ್ಲಿ ಸೇರಿಕೊಳ್ಳುವನೆನ್ನುವದು ಕನ್ನಡಿಯಲ್ಲಿ ಅಥವಾ ನೀರಿನಲ್ಲಿ ಇದ್ದ ಸೂರ್ಯನ ಪ್ರತಿಬಿಂಬವು ಕನ್ನಡಿಯ ಅಥವಾ ನೀರಿನ ಸಂಬಂಧವು ತಪ್ಪಿದೊಡನೆ ಸೂರ್ಯನಲ್ಲಿ ಹೋಗಿ ಕೂಡಿಕೊಂಡಂತೆ ಇರುವದು. ಕನಸಿನಲ್ಲಿ ಈ ಆತ್ಮನು ತನ್ನನ್ನು ತಾನು ಅರಿಯದ್ದರಿಂದ ಏನೇನನ್ನೋ ಬಯಸಿ ಏನೇನನ್ನೋ ಮಾಡಿದ ಫಲವಾದ ಸುಖದುಃಖಗಳನ್ನು ಅನುಭವಿಸುತ್ತ ಮನಸ್ಸಿನ ಸಂಬಂಧವನ್ನಿಟ್ಟುಕೊಂಡಿರುವದರಿಂದ ಬ್ರಹ್ಮದೊಳಹೊಕ್ಕವನಾಗುವದಿಲ್ಲ. ಜೀವನು ಮೂರವಸ್ಥೆಗಳೊಳಗಿರುವಾಗ ಬ್ರಹ್ಮದಲ್ಲಿ ಸೇರುವದೆನ್ನುವದು ತನಿನಿದ್ರೆಯಲ್ಲಿ ಮಾತ್ರವೆ. ಆತ್ಮನು ನಿದ್ರಿಸುವನೆನ್ನುವದಕ್ಕೆ ಸಂಸ್ಕೃತದಲ್ಲಿ 'ಸ್ವಪಿತಿ' ಎನ್ನುತ್ತಾರೆ. ಆ ಮಾತಿಗೆ ಆಗ ಅವನು ತನ್ನೊಳಗೆ ತಾನು ಸೇರುತ್ತಾನೆಂದರ್ಥ, ಎಂದರೆ ಮನಸ್ಸು ಮೊದಲಾದವುಗಳ ಸಂಬಂಧದಿಂದ ಆಗಿದ್ದ ಜೀವರೂಪವನ್ನು ತೊರೆದು ತನ್ನ ನಿಜವಾದ ಬ್ರಹ್ಮಸ್ವರೂಪದಲ್ಲಿರುವನೆಂದರ್ಥ. ಬಳಲಿಕೆ ಹೋಗುವದಕ್ಕೆ ತನ್ನಲ್ಲಿ ತಾನು ತೆಪ್ಪಗಿರುವದೇ ಕಾರಣವೆಂದು ಲೋಕದಲ್ಲಿ ಎಲ್ಲರೂ ಬಲ್ಲರಷ್ಟೆ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ದಣಿದ ಜೀವನು ತನ್ನ ನಿಜಸ್ವರೂಪವಾದ ಬ್ರಹ್ಮವಾಗಿ ಆ ಬಳಲಿಕೆಯನ್ನು ಕಳೆದುಕೊಳ್ಳುವನೆನ್ನುವದು ಸ್ವಾಭಾವಿಕವಾಗಿರುವದು. —(ಛಾಂ ೬-೮-೧)

ಬೇಡರವನು ದಾರದಿಂದ ಕಟ್ಟಿ ಕೈಯಲ್ಲಿ ಹಿಡಿದುಕೊಂಡಿರುವ ಹಕ್ಕಿಯು ಆ ಕಟ್ಟನ್ನು ಕಳಚಿಕೊಳ್ಳಬೇಕೆಂದು ಹತ್ತು ದಿಕ್ಕಿಗೂ ಹಾರಿಹಾರಿ ಬೇಡನ ಕೈಯ ಹೊರತು ನಿಲ್ಲುವದಕ್ಕೆ ನೆಲೆಯನ್ನು ಕಾಣದೆ ಅಲ್ಲಿಗೇ ಬಂದು ಕುಳಿತುಕೊಳ್ಳುವಂತೆ ಮನಸ್ಸಿನಿಂದ ಕೂಡಿದ ಜೀವನು ಎಚ್ಚರದಲ್ಲಿಯೂ ಕನಸಿನಲ್ಲಿಯೂ ತಾನು ತನ್ನ ನೆಲೆಯನ್ನರಿಯದೆ ಏನೇನನ್ನೋ ಬಯಸಿ ಮಾಡಿದ ಕರ್ಮಗಳ ಫಲವಾದ ಸುಖದುಃಖಗಳ ಅನುಭವದಿಂದ ಬಳಲಿ ಬೇಸತ್ತು ದೇಹ, ಇಂದ್ರಿಯ-ಮೊದಲಾದ ಸಮಸ್ತ ಜಗತ್ತಿಗೂ ನೆಲೆಮನೆಯಾದ ಬ್ರಹ್ಮವನ್ನು ಸೇರಿ ಹಾಯಾಗಿರುವನು. —(ಛಾಂ ೬-೮-೨)

ಹೀಗೆ ಜೀವನು ನಿದ್ರೆಯಲ್ಲಿ ಬ್ರಹ್ಮವಾದರೂ ಅದು ಮೋಕ್ಷವೆನಿಸುವದಿಲ್ಲ. ಜೀವನಿಗೆ ತನ್ನ ನೆಲೆಯನ್ನು ತಾನು ಅರಿಯದಿರುವದೆಂಬುದೊಂದು, ತನ್ನಲ್ಲಿ ತಾನೆ ಏನೇನನ್ನೋ ಹುಟ್ಟುಗಟ್ಟಿಕೊಂಡು ಅವರಲ್ಲಿಯೇ ತಾನು ತನ್ನದೆಂದಭಿಮಾನಿಸುತ್ತ ಅದರಿಂದ ಸುಳ್ಳು ಸುಖದುಃಖಗಳನ್ನು ಅನುಭವಿಸುತ್ತ ಬಾಯಿ ಬಾಯಿ ಬಿಡುವ ಹಾನಿಯೊಂದು—ಹೀಗೆ ಎರಡು ಕಟ್ಟುಗಳು ಬಿಗಿದಿರುವವಷ್ಟೆ. ಇವುಗಳಲ್ಲಿ ಎರಡನೆಯದರಿಂದಲೆ ಹಾನಿ; ಮೊದಲನೆಯದು ಅದಕ್ಕೆ ಕಾರಣವಾದರೂ ಅದರಿಂದ ಎದ್ದು ಕಾಣುವ ಹಾನಿಯೇನೂ ಇಲ್ಲ. ಜೀವನು ತನಿನಿದ್ರೆಯಲ್ಲಿ ಬ್ರಹ್ಮವಾದಾಗ ತನ್ನಲ್ಲಿ ತಾನೆ ಏನೇನನ್ನೋ ಹುಟ್ಟುಗಟ್ಟಿಕೊಂಡು ಅದರಲ್ಲಿ ತಾನು ತನ್ನದೆಂದು ಅಭಿಮಾನಿಸುತ್ತ ಅದರಿಂದ ಜೆಪಡುವ ಯಾವ ಹಾನಿಯ ಸೆಲೆಯೂ ಅಲ್ಲಿಲ್ಲ; ಅದರೆ ಆಗ ತನ್ನನ್ನು ತಾನು ಅರಿಯದಿರುವದೆಂಬ ಕಟ್ಟಿನ ಬಿಗಿತವಿನ್ನೂ ಇದ್ದೇ ಇರುವದರಿಂದ ಅವನಿಗೆ ಅದು ಮೋಕ್ಷವಲ್ಲ. ನಿದ್ರೆಯಲ್ಲಿ ಎದ್ದು ಕಾಣುವ ಯಾವ ಹಾನಿಯೂ ಇಲ್ಲದೆ ಇರುವದನ್ನು ಮಾತ್ರ ನೋಡಿ ಅದನ್ನು ಬ್ರಾಹ್ಮೀಸ್ಥಿತಿಯೆನ್ನಲಾಗುವದು.

ತನಿನಿದ್ರೆಯಲ್ಲಿ ಜೀವನು ಬ್ರಹ್ಮದಲ್ಲಿ ಒಂದಾದ ಮೇಲೆ ಮತ್ತೆ ಎಚ್ಚರವಾಗುವಾಗ ಮೊದಲು ಮಲಗಿದವನೇ ಏಳುತ್ತಾನೊ ಬೇರೊಬ್ಬನು ಏಳುತ್ತಾನೊ ಎಂಬ ಸಂಶಯವು ಬರಬಹುದು. ಏಕೆಂದರೆ: ತನಿನಿದ್ರೆಯಲ್ಲಿ ಎಷ್ಟೋ ಜೀವರು ಬ್ರಹ್ಮದಲ್ಲಿ ಒಂದಾಗಿರುವರು. ಹೀಗಿರುವಾಗ ಆ ದೇಹದಲ್ಲಿ ಮೊದಲಿದ್ದ ಜೀವನೇ ಏಳುವನೆನ್ನುವ ವಿಷಯದಲ್ಲಿ ವಿಚಾರಮಾಡಬೇಕಾಗುತ್ತದೆ. ಎದ್ದ ಮೇಲಿನ ನಡೆವಳಿಕೆಯಿಂದ ನೋಡಿದರೆ ಮೊದಲು ಮಲಗಿದ ಜೀವನೆ ಏಳುವನೆಂದು ಗೊತ್ತಾಗುವದು. ಏಕೆಂದರೆ: ಅವನು ಹಿಂದೆ ಅರ್ಧ ಮಾಡಿ ಬಿಟ್ಟಿದ್ದನ್ನು ಮುಂದೆ ಸಾಗಿಸುತ್ತಾನೆ. ಮತ್ತೊಬ್ಬನು ಎದ್ದಿದ್ದರೆ ಅವನಿಗೆ ಹಿಂದೆ ನಡೆದಿರುವದರ ನೆನಪು ಬರುವದಕ್ಕೆ ಅವಕಾಶವಿಲ್ಲದ್ದರಿಂದ ಆ ಕೆಲಸವು ಅವನಿಂದ ಮುಂದುವರಿಯುವದಾಗುವದಿಲ್ಲ. ಒಂದೊಂದು ಸಲ ಎಚ್ಚರವಾಗುವಾಗ ಒಬ್ಬೊಬ್ಬನು ಎದ್ದರೆ ಶಾಸ್ತ್ರವು ಹೇಳುವ ಕರ್ಮವೂ ಉಪಾಸನೆಯೂ ಕೊನೆಮುಟ್ಟುವ ಸಂಭವವೇ ಉಳಿ

ಬುಡಕ್ಕೊಂದು ಕಚ್ಚು ಹಾಕಿದರೆ ಅದರಿಂದ ರಸವು ಒಸರುವದೇ ಹೊರತು ಮರವು ಸಾಯುವದಿಲ್ಲ. ಅದರಂತೆ ನಡುವೆ ಕಚ್ಚು ಹಾಕಿದರೂ ಅದು ಬದುಕಿದ್ದು ರಸವನ್ನು ಸುರಿಸುವದು. ತುದಿಯಲ್ಲಿ ಕಚ್ಚು ಹಾಕಿದರೂ ಹಾಗೆಯೇ ಆಗುವದು. ಮರದ ಜೀವವು ಮರದಲ್ಲೆಲ್ಲ ಹರಡಿಕೊಂಡಿರುವದರಿಂದ ಅದು ಬೇರಿನಿಂದ ಬೇಕಾದಷ್ಟು ನೀರನ್ನೂ ಭೂಮಿಯ ರಸವನ್ನೂ ಕುಡಿದು ನಲಿಯುತ್ತಿರುವದು. ಪೆಟ್ಟಿನಿಂದಲೊ ಅಥವಾ ರೋಗದಿಂದಲೊ ಜೀವನು ಸುಕ್ಕಿಕೊಂಡು ಒಂದು ಕೊಂಬೆಯನ್ನು ಬಿಟ್ಟರೆ ಆ ಕೊಂಬೆ ಒಣಗುತ್ತದೆ. ಆದರೂ ಮರವು ಉಂಡುತಿಂದು ಬೆಳೆಯುತ್ತಿರುವದರಿಂದ ಅದರಲ್ಲಿ ಜೀವವಿರುವದು ಸ್ಪಷ್ಟವಾಗುತ್ತದೆ. ಆ ಜೀವನಿಗೆ ಒಂದು ಅವಯವವು ಬಿದ್ದು ಹೋಗುವಂತೆ ಮಾಡುವ ಕರ್ಮವು ಫಲವನ್ನು ಕೊಡುವದಕ್ಕೆ ಬಂದಾಗ ಆ ಜೀವನು ಒಂದು ಕೊಂಬೆಯನ್ನು ಬಿಟ್ಟು ಹಿಮ್ಮೆಟ್ಟುವನು. ಜೀವನು ಹಿಮ್ಮೆಟ್ಟಿದ ಮೇಲೆ ಅದರಲ್ಲಿ ರಸವಿರುವದಿಲ್ಲ. ಜೀವನು ಆ ಮರವನ್ನು ಸಂಪೂರ್ಣವಾಗಿ ಬಿಟ್ಟಾಗ ಆ ಮರವೆಲ್ಲ ಒಣಗಿ ಹೋಗುವದು. ಇದರಂತೆ ಜೀವನು ತೊಲಗಿದ ಶರೀರವು ಸಾಯುವದೇ ಹೊರತು ಜೀವನು ಸಾಯುವದಿಲ್ಲ. ಹುಟ್ಟಿದೊಡನೆ ಪ್ರಾಣಿಗಳಿಗೆ ಮೊಲೆಯುಣ್ಣುವದು, ಹೆದರಿಕೆಯಾಗುವದು—ಮೊದಲಾದವುಗಳು ಕಾಣುವದರಿಂದ ಇವೆಲ್ಲ ಹಿಂದಿನ ಜನ್ಮದಲ್ಲಿ ಅನುಭವಿಸಿದ ವಾಸನೆಯೆಂದು ಸ್ಪಷ್ಟವಾಗುವದು. ಪ್ರಾಣಿಗಳು ತಾವು ಮಾಡಿದ ಕರ್ಮಗಳ ಫಲಗಳನ್ನು ತಾವು ಉಣ್ಣಬೇಕಾದದ್ದರಿಂದಲೂ ಜೀವರಿಗೆ ಸಾವಿಲ್ಲ. —(ಛಾಂ ೬-೧೧)

## ಆತ್ಮನಿಗೆ ಇನ್ನೊಂದರ ಸೋಂಕಿಲ್ಲ

ಕನಸಿನಿಂದಲೂ ನಿದ್ರೆಯಿಂದಲೂ ನಾವೇನು ಕಲಿಯಬೇಕೆಂಬುದನ್ನು ನೋಡೋಣ. ಜೀವನು ಕನಸಿನಲ್ಲಿ ಪಾಪಪುಣ್ಯಗಳೇನನ್ನೂ ಮಾಡದಿದ್ದರೂ ಎಚ್ಚರದಲ್ಲಿ ಮಾಡಿದವುಗಳ ಫಲಗಳನ್ನು ಅನುಭವಿಸುತ್ತ, ತಾನು ಅಲ್ಲಿ ಯಾವ ವ್ಯವಹಾರವನ್ನೂ ಮಾಡದಿದ್ದರೂ ನಂಟರಿಷ್ಟರೊಡನೆ ವ್ಯವಹಾರವನ್ನು ಮಾಡಿದಂತೆ ಕಂಡು ಅದರ ಶ್ರಮವನ್ನು ಮಾತ್ರ ಪಡೆಯುವನು. ಏನನ್ನಾದರೂ ಮಾಡಿದರೆ ಅದರ ಫಲವು ಬಂದು ಗಂಟು ಬಿದ್ದೀತು. ಜೀವನ್ನು

ಕನಸಿನಲ್ಲಿ ಏನನ್ನೂ ಮಾಡದೆ ಮಾಡಿದಂತೆ ನೋಡುವ ಮಾತ್ರದಿಂದ ಅವು ಇವನನ್ನು ಸುತ್ತಿ ಬಿಗಿಯಲಾರವು. ಏನನ್ನಾದರೂ ಮಾಡುವದೆಂಬುದೇ ನಮಗೆ ಮೃತ್ಯು. ಏಕೆಂದರೆ: ಅದೇ ನಮ್ಮ ಸೆರಗಿಗೆ ಹುಟ್ಟು ಸಾವುಗಳನ್ನು ಗಂಟುಹಾಕುವದು. ಆದ್ದರಿಂದ ಅವನು ಕನಸಿನಲ್ಲಿ ಸಾವಿನ ಕಡೆಗೆ ಸೆಳೆಯುವವುಗಳಾಗಿ ಸಾವಿನ ರೂಪಗಳೇ ಆಗಿರುವ ಹೊರಗಣ ವಿಷಯಗಳನ್ನು ಗೆದ್ದದ್ದು ಮಾತ್ರವೇ ಅಲ್ಲ; ಆವನು ಏನನ್ನೂ ಮಾಡದವನಾಗಿ ಸಾವಿನ ಕಾರಣಗಳಾದ ಪುಣ್ಯಪಾಪಗಳೆಂಬ ಸಾವನ್ನೇ ಗೆದ್ದವನಾಗುವನು. ಇದಲ್ಲದೆ ಇದರಿಂದ ಮಾಡುವದೆಂಬುದು ಆತ್ಮನ ಹುಟ್ಟುಗುಣವಲ್ಲವೆಂದು ಸಿದ್ಧವಾಗುತ್ತದೆ. ಅದು ಅವನ ಹುಟ್ಟುಗುಣವಾಗಿದ್ದರೆ ಕನಸಿನಲ್ಲಿಯೂ ಅವನು ಏನನ್ನಾದರೂ ಮಾಡದೆ ಇರುವದಕ್ಕಾಗುತ್ತಲೆ ಇರಲಿಲ್ಲ. ಇದಲ್ಲದೆ ಅವನಿಗೆ ಅದರ ಬಿಡುಗಡೆಗೂ ದಾರಿ ಇರುತ್ತಿರಲಿಲ್ಲ. ಏನನ್ನಾದರೂ ಮಾಡುವದು ಆತ್ಮನ ಹುಟ್ಟುಗುಣವೆಂದು ಎಚ್ಚರದಲ್ಲಿ ಕಾಣಬಹುದು. ಅದೆಲ್ಲ ಬುದ್ಧಿ ಮೊದಲಾದವುಗಳ ಸಂಬಂಧದ ಪ್ರಭಾವ. ಕನಸಿನಲ್ಲಿ ಜೀವನು ಏನೇನನ್ನೋ ಮಾಡಿದಂತೆ ಕಂಡರೂ ಎಚ್ಚತ್ತಮೇಲೆ ಅದು ಲೆಕ್ಕಕ್ಕೆ ಬರುವದಿಲ್ಲ. ಕನಸಿನಲ್ಲಿ ಏನಾದರೊಂದು ಪಾಪವನ್ನು ಮಾಡಿದಂತೆ ಕಂಡ ಮಾತ್ರಕ್ಕೆ ಎಚ್ಚತ್ತಮೇಲೆ ತಾನು ಪಾಪಿಯೆಂದು ಯಾರೂ ತಿಳಿಯುವದಿಲ್ಲ. ಕನಸಿನಲ್ಲಿ ಪಾಪವನ್ನು ಮಾಡಿದನೆಂದು ಕೇಳಿ ಲೋಕದಲ್ಲಿ ಯಾರೂ ದೂರುವದೂ ಇಲ್ಲ; ಅವನನ್ನು ಹೊರಗೆ ಹಾಕುವದೂ ಇಲ್ಲ. ಆದ್ದರಿಂದ ಕನಸಿನಲ್ಲಿ ಮಾಡಿದ ಯಾವದೂ ಎಚ್ಚರಕ್ಕೆ ಬರುವದಿಲ್ಲ. ಕನಸಿನಲ್ಲಿ ಏನನ್ನಾದರೂ ಮಾಡಿದಂತೆ ಕಾಣುವದೇ ಹೊರತು ನಿಜವಾಗಿ ಮಾಡಿರುವದಿಲ್ಲ. ಕನಸನ್ನು ಹೇಳುವವರು ಏನೇನನ್ನೋ ಕಂಡಂತಾಯಿತೆನ್ನುವರೆ ಹೊರತು ಮಾಡಿದೆನೆನ್ನುವದಿಲ್ಲ. ಆದ್ದರಿಂದ ಆತ್ಮನು ಏನನ್ನೂ ಮಾಡುವವನಲ್ಲ. ಆಕಾರವುಳ್ಳ ದೇಹೇಂದ್ರಿಯಗಳಿಗೂ ಆಕಾರವುಳ್ಳ ವಸ್ತುಗಳಿಗೂ ಸಂಬಂಧವಾದಾಗ ಏನಾದರೂ ಕೆಲಸವಾಗುವದಷ್ಟೆ. ಆತ್ಮನಿಗೆ ಆಕಾರವೆ ಇಲ್ಲ. ಆದ್ದರಿಂದ ಅವನಿಗೆ ಎರಡನೆಯದರ ಸೋಂಕಿಲ್ಲ. ಆದ್ದರಿಂದಲೆ ಅವನು ಕನಸಿನಲ್ಲಿ ಮಾಡಿದ್ದು ಅವನ ಬೆನ್ನು ಹತ್ತಿ ಬರುವದಿಲ್ಲ. ಹೀಗೆ ಅವನು ಇನ್ನೊಂದರ ಸೋಂಕಿಲ್ಲದವನಾದ್ದರಿಂದಲೆ ಸಾವಿಲ್ಲದವನು. —(ಬೃ ೪-೩-೧೫)

ಕನಸನ್ನನುಭವಿಸಿದ ಜೀವನು ಮತ್ತೆ ತನ್ನ ದೇಹದಲ್ಲಿ ತಾನು ಎಚ್ಚರಗೊಳ್ಳುವನು. ಮತ್ತು ಎಚ್ಚರದಲ್ಲಿ ವಿನೋದಗೊಂಡು ವ್ಯವಹರಿಸಿ ಸುಖ ದುಃಖಗಳನ್ನು ನೋಡಿ ಮತ್ತೆ ಕನಸಿಗೆ ಹೋಗುತ್ತಿರುವನು. ಎಚ್ಚರದಲ್ಲಿ ಅವನು ಕಂಡದ್ದು ಅವನ ಬೆನ್ನು ಹತ್ತಿ ಬರುವದಿಲ್ಲ. ಇದರಿಂದಲೂ ಆತ್ಮನು ಇನ್ನೊಂದರ ಸೋಂಕಿಲ್ಲದವನೆಂದು ಗೊತ್ತಾಗುತ್ತದೆ. ಎಚ್ಚರದಲ್ಲಿ ಅವನು ಪುಣ್ಯಪಾಪಗಳನ್ನು ಮಾಡುವನೆನ್ನಬೇಕೇ ಹೊರತು ಅದರ ಫಲವಾದ ಸುಖ ದುಃಖಗಳನ್ನು ನೋಡುವ ಮಾತ್ರವೆಂದು ಹೇಳುವದು ಹೇಗೆ ಒಪ್ಪೀತೆಂದು ತೋರಬಹುದು. ಎಚ್ಚರದಲ್ಲಿ ಕೆಲಸಗಳಾಗುವದೆಲ್ಲ ದೇಹದಿಂದ ಮತ್ತು ಇಂದ್ರಿಗಳಿಂದ. ಆತ್ಮನು ಇವುಗಳಿಗೆ ಬೆಳಕನ್ನು ಮಾತ್ರ ಕೊಡುವನು. ಇಷ್ಟರಿಂದ ಅವನು ಮಾಡಿದನೆನ್ನುವದು ಬರೀ ಉಪಚಾರದ ಮಾತು. ಅವನೇ ನಿಜವಾಗಿ ಮಾಡುವದಿಲ್ಲ. ಆದ್ದರಿಂದ ಎಚ್ಚರದಲ್ಲಿಯೂ ಅವನು ತಾನು ಮಾಡಿದಂತೆ ನೋಡುವನೇ ಹೊರತು ಮಾಡುವದಿಲ್ಲವೆಂಬುದೇ ಸರಿಯಾದ ಮಾತು. ಬುದ್ಧಿ ಮೊದಲಾದ ಇನ್ನೊಂದರ ಸಂಬಂಧದ ಸೆಲೆಯೋ ಇಲ್ಲದ ಅವನು ಏನನ್ನೂ ಮಾಡುವದೂ ಇಲ್ಲ. ಅದನ್ನು ಅಂಟಿಸಿಕೊಳ್ಳುವದೂ ಇಲ್ಲ. ಎಚ್ಚರದಿಂದ ಕನಸಿಗೆ ಹೋದಾಗ ಎಚ್ಚರದ ಯಾವ ಸೋಂಕೂ ಕನಸಿಗೆ ಅವನ ಬೆನ್ನು ಹತ್ತುವದಿಲ್ಲ. ನಿದ್ರೆಯಲ್ಲಂತು ಯಾವದರ ಸೋಂಕೂ ಇಲ್ಲದಿರುವದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಆತ್ಮನಿಗೆ ಎಚ್ಚರದ, ಕನಸಿನ ಮತ್ತು ತನಿನಿದ್ರೆಯ ಯಾವ ಸೋಂಕೂ ಇಲ್ಲವೆಂದಾಯಿತು.

—(ಬೃ ೪-೩-೧೭)

ಒಂದವಸ್ಥೆಯಿಂದ ಇನ್ನೊಂದಕ್ಕೆ ಹೋಗುತ್ತ ಬರುತ್ತ ಇರುವದರಿಂದ ಅವನು ಮೂರವಸ್ಥೆಗಳಿಗಿಂತ ಬೇರೆಯಾದವನೆಂದೂ ಆಯಿತು. ಲೋಕದಲ್ಲಿ ಮಹಾಪ್ರವಾಹದಲ್ಲಿ ಹೋಗುವ ದೊಡ್ಡ ಮೀನು ತನ್ನ ಮನಸ್ಸು ಬಂದಾಗ ಪ್ರವಾಹವನ್ನು ಕೂಡ ಅಡ್ಡಗಟ್ಟಿ ಒಂದು ಸಲ ಆ ಕಡೆಯ ದಡಕ್ಕೆ ಇನ್ನೊಂದು ಸಲ ಈ ಕಡೆಯ ದಡಕ್ಕೆ ಬರುತ್ತಿರುವದೇ ಹೊರತು ಆ ನೀರಿನ ಸೆಳೆತದಿಂದ ಕೊಚ್ಚಿಕೊಂಡು ಹೋಗುವದಿಲ್ಲ. ಅದರಂತೆ ಆತ್ಮನು

ಒಂದು ಸಲ ಎಚ್ಚರಕ್ಕೆ, ಒಂದು ಸಲ ಕನಸಿಗೆ-ಹೀಗೆ ಸುತ್ತುತ್ತಿರುವನು. ಆದರೂ ತಾನಲ್ಲದ ದೇಹವೂ ಇಂದ್ರಿಯಗಳೂ ಮಾಡುವ ಕರ್ಮಗಳ ಸೆಳೆತಕ್ಕೆ ಅವನು ಸಿಕ್ಕುವದಿಲ್ಲ. —(ಬೃ ೪-೩-೧೮)

ಪಾಪದ ಮತ್ತು ಭಯದ ಸೊಂಕಿಲ್ಲದ ತನಿನಿಪ್ರೆಯಲ್ಲಿ ಆತ್ಮನು ಎಚ್ಚರದ ಮತ್ತು ಕನಸಿನ ಎಲ್ಲ ಸಂಬಂಧಗಳನ್ನೂ ದಾಟಿದವನಾಗಿರುವನು. ಅಲ್ಲಿ ತಂದೆಗೆ ತಂದೆಯೆಂಬ ಸಂಬಂಧವೆಂಬುದಿಲ್ಲ; ಮಗನಿಗೆ ಮಗನೆಂಬ ಸಂಬಂಧವೆಂಬುದಿಲ್ಲ; ತಾಯಿಗೆ ತಾಯಿಯೆಂಬ ಸಂಬಂಧವೆಂಬುದಿಲ್ಲ; ಕರ್ಮದ ಸಂಬಂಧವೇ ಇಲ್ಲದ್ದರಿಂದ ಕರ್ಮದಿಂದ ಪಡೆಯತಕ್ಕ ಲೋಕಗಳು ಲೋಕಗಳೂ ಅಲ್ಲ; ಕರ್ಮಕ್ಕೆ ಅಂಗಭೂತರಾದ ದೇವತೆಗಳು ದೇವತೆಗಳೂ ಅಲ್ಲ; ವೇದಗಳು ವೇದಗಳೂ ಅಲ್ಲ; ಆಗ ಕಳ್ಳನಿಗೆ ಕಳ್ಳತನದ ಸಂಬಂಧವಿಲ್ಲ; ಕೊಲೆಪಾತಕನಿಗೆ ಕೊಲೆಪಾತಕತನದ ಸಂಬಂಧವಿಲ್ಲ; ಹುಟ್ಟಿನಿಂದ ಹೊಲೆಯನಾದವನಿಗೆ ಕೂಡ ಹೊಲೆಯ ಸಂಬಂಧವಿಲ್ಲ. ಆಗ ಯಾವ ಬಯಕೆಯೂ ಇಲ್ಲ; ಯಾವ ದುಃಖವೂ ಇಲ್ಲ. —(ಬೃ ೪-೩-೨೨)

ಆತ್ಮನು ತನ್ನ ಬೆಳಕಿನಿಂದ ತಾನು ಬೆಳಗುವವನೆಂದೂ ತನಿನಿಪ್ರೆಯಲ್ಲಿ ಬ್ರಹ್ಮದೊಡನೆ ಒಂದಾದ್ದರಿಂದ ಏನನ್ನೂ ತಿಳಿಯುವದಿಲ್ಲವೆಂದೂ ಹೇಳುವದು ಒಂದಕ್ಕೊಂದು ವಿರೋಧವಾಗಿ ಕಾಣಬಹುದು. ಅವನು ತನ್ನ ಹುಟ್ಟುಗುಣದಂತೆ ನೋಡುತ್ತಲೆ ಇರುತ್ತಾನೆ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ಇರುವಂತೆ ಇಂದ್ರಿಯಗಳೂ ಮನಸ್ಸೂ ಅಲ್ಲಿ ಇಲ್ಲದ್ದರಿಂದ ಆಗ ಅವನು ನೋಡುವದಿಲ್ಲವೆನ್ನಬಾರದು. ಆ ನೋಡುವವನ ನೋಟಕ್ಕೆಂದಿಗೂ ಕೊರತೆ ಇಲ್ಲ. ಅಗ್ನಿಯು ಅಗ್ನಿಯಾಗಿರುವ ತನಕ ಹೇಗೆ ಬಿಸಿಯಾಗಿಯೇ ಇರುವದೊ ಹಾಗೆ ನೋಡುವವನು ತಾನಿರುವಾಗಲೆಲ್ಲ ನೋಡುವವನೆ. ನೋಡುವದೆನ್ನುವದು ನೋಡುವವನು ಪ್ರಯತ್ನದಿಂದ ಮಾಡುವ ಕೆಲಸವಾಗಿರುವಾಗ ಆ ನೋಡುವಿಕೆಗೆ ಕೊರತೆಯುಂಟಾಗುವದಿಲ್ಲವೆಂಬ ಮಾತು ಹೇಗೆ ಒಪ್ಪುವದೆಂದರೆ ಇದಕ್ಕೆ ಸೂರ್ಯನ ಉದಾಹರಣೆಯು ಸಮಾಧಾನವನ್ನು ತೋರಿಸುತ್ತದೆ. ಯಾವಾಗಲೂ ಬೆಳಗುವ ಹುಟ್ಟುಗುಣವುಳ್ಳ ಸೂರ್ಯನು ಬೆಳಗುವಂತೆ ಆತ್ಮನ ನೋಡುವಿಕೆ. ಸೂರ್ಯನು ಏನನ್ನಾದರೂ ಬೆಳಗುವದಕ್ಕೆ

ಪ್ರಯತ್ನಿಸುವದಿಲ್ಲ. ಆತ್ಮನೂ ಹಾಗೆಯೆ. ಕುರುಡರೂ ಕೂಡ ಕನಸಿನಲ್ಲಿ ನೋಡುವದರಿಂದ ನೋಡುವವನ ನೋಟಕ್ಕೆ ಕೊರತೆಯಿಲ್ಲವೆಂದು ಗೊತ್ತಾಗುವದು. —(ಬೃ ೪-೩-೨೩.)

ತನಿನಿದ್ರೆಯಲ್ಲಿ ಆತ್ಮನು ನೋಡುತ್ತಿದ್ದರೂ ಎರಡನೆಯದೇಕೆ ಕಾಣುವದಿಲ್ಲವೆಂದರೆ ಅಲ್ಲಿ ಅವನಿಗಿಂತ ಬೇರೆಯಾದ ಏನೇನೂ ಇಲ್ಲ ಆತ್ಮನು ಏನೇನನ್ನೋ ಕಾಣುವಂತೆ ಮಾಡುತ್ತಿದ್ದ ಇಂದ್ರಿಯಗಳೂ ಮನಸ್ಸೂ ಹೊರಗಣ ವಸ್ತುಗಳೂ-ಈ ಅಂಗಡಿಗಳೆಲ್ಲ ತನ್ನನ್ನು ತಾನು ಅರಿಯದ್ದರಿಂದ ಎದ್ದುಕೊಂಡವುಗಳಾಗಿದ್ದವು. ಆತ್ಮನು ಬ್ರಹ್ಮದೊಡನೆ ಒಂದಾಗುತ್ತಲೆ ಅವೆಲ್ಲ ಬ್ರಹ್ಮದಲ್ಲಿ ಒಂದಾಗಿ ಹೋಗಿರುವವು. ನೋಡುವವನು ಒಂದು ಅಳತೆಗೆ ಸಿಕ್ಕುವವನಾಗಿದ್ದರೆ ಅವನಿಗೆ ಏನೇನೋ ಕಾಣಬರುವದಕ್ಕೆ ಸಾಧನವಾದ ಇಂದ್ರಿಯಗಳೂ ಮನಸ್ಸೂ ಬೇರೆಯಾಗಿ ನಿಲ್ಲುತ್ತವೆ. ಹೆಂಡತಿಯು ಗಂಡನನ್ನು ತಬ್ಬಿಕೊಂಡು ಒಂದಾದಂತೆ ಆತ್ಮನು ಬ್ರಹ್ಮದೊಡನೆ ಸಂಪೂರ್ಣವಾಗಿ ಒಂದಾಗಿರುವಾಗ ಇಂದ್ರಿಯಗಳಾಗಲಿ, ಮನಸ್ಸಾಗಲಿ, ಹೊರಗಣ ವಸ್ತುಗಳಾಗಲಿ-ಹೇಗೆ ಬೇರೆ ನಿಂತಾವು ? ಅವುಗಳಿಲ್ಲದ್ದರಿಂದ ಹೆಚ್ಚಿನದೇನೂ ಕಾಣುವದಿಲ್ಲ. ಹೆಚ್ಚಿಗೆ ಕಾಣುವದೆಂಬುದೆಲ್ಲ ಇಂದ್ರಿಯಗಳ ಮತ್ತು ಮನಸ್ಸಿನ ಕೆಲಸವೇ ಹೊರತು ಆತ್ಮನದಲ್ಲ; ಆದರೂ ಆತ್ಮನದೆಂಬಂತೆ ತೋರಿಕೊಳ್ಳುವದು. ಆದ್ದರಿಂದಲೆ ಆತ್ಮನ ನೋಟಕ್ಕೆ ಕೊರತೆಯುಂಟೆಂಬ ತಪ್ಪು ತಿಳಿವಳಿಕೆಯುಂಟಾಗುವದು. —(ಬೃ ೪-೩-೨೩)

ತನ್ನನ್ನು ತಾನು ಅರಿಯದಿರುವದೆಂಬುದು ಎಚ್ಚರದಲ್ಲಿಯೂ ಕನಸಿನಲ್ಲಿಯೂ ತನಗೆರಡನೆಯದಾದ ಏನೇನನ್ನೋ ಹುಟ್ಟುಗಟ್ಟುತ್ತಿತ್ತಷ್ಟೆ. ತನಿನಿದ್ರೆಯಲ್ಲಿ ಅದು ತನ್ನಷ್ಟಕ್ಕೆ ತಾನು ಸುಮ್ಮನಿರುವದರಿಂದ ಅಲ್ಲಿ ಎರಡನೆಯದರ ಸೆಲೆಯೇ ಇಲ್ಲ. ಆಗ ತಿಳಿನೀರು ತಿಳಿನೀರಿನಲ್ಲಿ ಸೇರಿದಂತೆ ಅವನು ಬ್ರಹ್ಮದೊಡನೆ ಒಂದಾಗಿಬಿಡುವನು. ತನ್ನನ್ನು ತಾನು ತಿಳಿಯದಿರುವದೆಂಬುದು ಹಾವಳಿಯನ್ನಾರಂಭಿಸಿದರೆ ಎರಡನೆಯದು ಎದ್ದುಕೊಂಡೀತು. ಅದು ತನಿನಿದ್ರೆಯಲ್ಲಿ ತೆಪ್ಪಗಿರುವದರಿಂದ ಆತ್ಮನು ಒಂದಾಗಿರುವನು. ಆಗ ಅವನು ಇಂದ್ರಿಯ, ಮನಸ್ಸು-ಮೊದಲಾದವುಗಳ ಸಂಬಂಧವನ್ನೆಲ್ಲ ತೊರೆದು ಬ್ರಹ್ಮ

ದಲ್ಲಿ ಸೇರಿರುವದರಿಂದ ಅವನು ಪರಮಾತ್ಮನೆ. ಇದೇ ಬಹು ಉತ್ತಮವಾದ ಗತಿ. ಇದನ್ನು ಬಿಟ್ಟು ಎಷ್ಟೇ ಉತ್ತಮಲೋಕಗಳನ್ನು ಪಡೆದರೂ ಅವೆಲ್ಲ ತನ್ನನ್ನು ತಾನು ಅರಿಯದ್ದರಿಂದ ಸುಳ್ಳಾಗಿ ಎದ್ದುಕೊಂಡವುಗಳು. ಇದು ನಿಜವಾಗಿರುವಂಥದ್ದು. —(ಬೃ ೪-೩-೩೨)

ತನಿನಿದ್ರೆಯಲ್ಲಿ ತಾನು ಬ್ರಹ್ಮನೆಂಬ ಅರಿವು ತನಗಿಲ್ಲವಾದ್ದರಿಂದ ಅದು ಮೋಕ್ಷವಲ್ಲ. ಹೀಗೆ ತನಗೆ ಅರಿವಿಲ್ಲದೆ ತಾನು ಬ್ರಹ್ಮನಾದ ಅನುಭವದ ನೆನಪನ್ನು ಬಲವಾಗಿ ಹಿಡಿದುಕೊಂಡು ಎಚ್ಚರದಲ್ಲಿಯೂ ತಾನು ಬ್ರಹ್ಮನೆಂಬ ಅರಿವನ್ನು ಸಂಪಾದಿಸುವ ಹಂಚಿಕೆಯನ್ನು ಮಾಡಬೇಕು. ಮೂರವಸ್ಥೆಗಳ ಒಟ್ಟು ವಿಚಾರದಿಂದ ಆತ್ಮನು ಇನ್ನೊಂದರ ಸೋಂಕಿಲ್ಲದವನೆಂಬರ್ಥವನ್ನು ಮನಸ್ಸಿಗೆ ತುಂಬಿಕೊಳ್ಳಬೇಕು. ಈ ಮೂರವಸ್ಥೆಗಳ ಸೋಂಕುಳ್ಳವನಂತೆ ತೋರುವ ಆತ್ಮನ ಸ್ಥಿತಿಯನ್ನು ಓಂಕಾರವು ನಿರೂಪಿಸುವದು. ಅದರ ಅಕಾರವೆಂಬ ಮಾತ್ರೆಯು ಎಚ್ಚರದ ಅಭಿಮಾನಿಯನ್ನೂ ಉಕಾರವೆಂಬ ಮಾತ್ರೆಯು ಕನಸಿನ ಅಭಿಮಾನಿಯನ್ನೂ ಮಕಾರವೆಂಬ ಮಾತ್ರೆಯು ಗಾಢನಿದ್ರೆಯ ಅಭಿಮಾನಿಯನ್ನೂ ಸೂಚಿಸುವದೆಂದು ಹಿಂದೆ ಹೇಳಿದ್ದಾಗಿರುವದು. ಈ ಎಲ್ಲ ಅವಸ್ಥೆಗಳ ಸೋಂಕಿನಿಂದ ಹೊರಗಾದ ಆತ್ಮನೆ ಶುದ್ಧಾತ್ಮ. ಈ ಮೂರವಸ್ಥೆಗಳ ವಿಚಾರದಿಂದ ನಾಲ್ಕನೆಯವನಾದ ಶುದ್ಧಾತ್ಮನನ್ನು ನಿಲುಕಿಸಿಕೊಳ್ಳಬೇಕು.

ತನಿನಿದ್ರೆಯಲ್ಲಿಯೂ ಒಂದು ಕಟ್ಟು ಉಳಿದಿರುವದಷ್ಟೆ. ಏನೇನನ್ನೂ ಕಾಣುವದಕ್ಕೆ ದಾರಿಯನ್ನು ಕೊಡುವದಾಗಿರುವ ಆ ತನ್ನನ್ನು ತಾನು ಅರಿಯದಿರುವಿಕೆಯೆಂಬ ಕಟ್ಟನ್ನು ಕಳಚಿಕೊಳ್ಳಬೇಕಾದರೆ ಮನುಷ್ಯನು ಜಗತ್ತಿನ ಮೇಲಿನ ಅಕ್ಕರೆಯನ್ನೆಲ್ಲ ಸಂಪೂರ್ಣವಾಗಿ ತೊರೆದವನಾಗಬೇಕು. ಹೀಗಾಗಿ ಅವನು ಈ ವಿಚಾರವನ್ನು ಮಾಡಿದರೆ ಆ ನಾಲ್ಕನೆಯ ಸ್ವರೂಪವು ಅವನಿಗೆ ಒಲಿಯುವದು. ಇದಕ್ಕೆ ಹೆಸರೂ ಆಕಾರವೂ ಉಳ್ಳ ಯಾವ ಶರೀರವೂ ಇಲ್ಲ; ಕೆಂಪು, ಕಪ್ಪು- ಮೊದಲಾದ ಗುಣಗಳೂ ಇಲ್ಲ. ಇದು ಶುದ್ಧವಾದದ್ದು, ನಿಜವಾಗಿರುವಂಥದ್ದು. ಯಾವನು ಇದನ್ನು ತಿಳಿಯುತ್ತಾನೊ ಅವನು

ಎಲ್ಲವನ್ನೂ ತಿಳಿದವನಾಗುತ್ತಾನೆ. ಅವನಿಗೆ ತಿಳಿಯದ್ದು ಏನೇನೂ ಇರುವದಿಲ್ಲ ಮೊದಲು ತನ್ನನ್ನು ತಾನು ಅರಿಯದ್ದರಿಂದ ಎಲ್ಲವನ್ನೂ ತಿಳಿದವನಾಗಿರಲಿಲ್ಲ; ಈಗ ತನ್ನನ್ನು ತಾನು ತಿಳಿಯುತ್ತಲೆ ತಾನು ಸರ್ವಸ್ವರೂಪನಾಗುತ್ತಾನೆ. —(ಪ್ರ ೪-೧೦)

# ೧೩—ಆತ್ಮನು ಏನನ್ನೂ ಮಾಡುವವನಲ್ಲ

## ಆತ್ಮನ ಮಾಡುವಿಕೆಯು ಮಾಯೆ

ಆತ್ಮನು ಇನ್ನೊಂದರ ಸೋಂಕಿಲ್ಲದವನಾದ್ದರಿಂದಲೆ ಅವನು ಏನನ್ನೂ ಮಾಡುವವನಲ್ಲವೆಂಬ ಮಾತು ಹಿಂದೆ ತೇಲಿಬಂದಿದೆಯಷ್ಟೆ. ಅದನ್ನು ಚೆನ್ನಾಗಿ ಮೈದುಂಬಿಸುವದಕ್ಕಾಗಿ ಈ ಪ್ರಕರಣವು ಹೊರಟಿರುವದು. ಏಕೆಂದರೆ: ಇದು ಬಹಳ ಅಗತ್ಯವಾದದ್ದು. ಮನುಷ್ಯನು ವೇದದಲ್ಲಿ ಹೇಳಿದ ಕರ್ಮಗಳನ್ನಾರಂಭಿಸುವಾಗಲೆ ಆತ್ಮನು ದೇಹ ಮೊದಲಾದವುಗಳಿಗಿಂತ ಬೇರೆಯೆಂದು ತಿಳಿದರೂ ಅವನು ಏನನ್ನಾದರೂ ಮಾಡುವ ಸ್ವಭಾವದವನೆಂಬ ಅಭಿಪ್ರಾಯ ಉಂಟಾಗಿರುವದು. ಈಗ ಆ ಧೂಳನ್ನು ಕೊಡಹಬೇಕಾಗಿದೆ. ಆತ್ಮನು ನಿಜವಾಗಿ ಏನನ್ನೂ ಮಾಡುವ ಸ್ವಭಾವದವನಲ್ಲ ವೇದವು ಆತ್ಮನನ್ನು ದೇಹ ಮೊದಲಾದವುಗಳಿಂದ ಬೇರೆಯೆಂದು ಮಾತ್ರ ಹೇಳದೆ ಅವನು ಪಾಪಪುಣ್ಯಗಳ ಸೋಂಕಿಲ್ಲದವನೆಂದು ಕೂಡ ಹೇಳಿ ಅವನನ್ನು ಎನನ್ನೂ ಮಾಡುವವನಲ್ಲವೆಂದೂ ತಿಳಿಸಿದೆ. ಅಂಥ ಆತ್ಮನು ಕರ್ಮಕ್ಕೆ ಸಾಧಕನಲ್ಲವಿಷ್ಟೇ ಅಲ್ಲ; ಬಾಧಕ. ಕರ್ಮಗಳ ವಿಷಯವಾದ ಮಾತು ಹೇಳುವಾಗ ಅವನನ್ನು ಮಾಡುವವನೆಂದು ಹೇಳಿರಬಹುದು. ಆ ಮಾತು ಅಲ್ಲಿಗೆ ಮಾತ್ರ ಸಂಬಂಧಪಟ್ಟದ್ದೆ ಹೊರತು ಅಲ್ಲಿಂದ ಮುಂದಕ್ಕೆ ಹೆಜ್ಜೆಯನ್ನಿಡಲಾರದು ಯಾಜ್ಞವಲ್ಕ್ಯರೇ ಮೊದಲಾದವರು ಕರ್ಮಗಳನ್ನೆಲ್ಲ ತೊರೆದಿದ್ದ ಉದಾಹರಣೆಗಳೂ ಇವೆ.

**(ಅ)** ಭಗವಂತನು ಕೂಡ ನಾಲ್ಕು ವರ್ಣ ಮೊದಲಾದವುಗಳನ್ನು ಹುಟ್ಟಿಸುವದರ ಮೂಲಕ ಕರ್ಮವನ್ನು ಮಾಡಿದವನಾಗಿ ಕಾಣಬಹುದು.

ಅವನ ಆ ಮಾಡುವಿಕೆಯು ಮಾಯೆಯಾದ್ದರಿಂದ ಅವನು ಏನನ್ನೂ ಮಾಡಿದವನಲ್ಲ. ಆದ್ದರಿಂದ ಅವನಿಗೆ ಅದರ ಸೋಂಕೂ ಇಲ್ಲ. ಆದರಿಂದ ಅವನು ಕಟ್ಟುಬೀಳುವದೂ ಇಲ್ಲ. ಅವನು ಕಟ್ಟುಬೀಳದಿರುವ ಮಾತಿರಲಿ. ಅವನು ಯಾವ ಕಟ್ಟಿಗೂ ಒಳಗಾಗದಿರುವವನೆಂದು ಯಾವನು ತಿಳಿಯುತ್ತಾನೊ ಅವನು ಕೂಡ ಕರ್ಮದ ಗೊಲೆಗೆ ಬೀಳುವದಿಲ್ಲ. —(ಭ ೪-೧೩,೧೪). (ಆ) ಅವನು ಜಗತ್ತನ್ನು ಹುಟ್ಟಿಸಿದವನಾದ್ದರಿಂದ ಕರ್ಮವನ್ನು ಮಾಡಿದವನಾಗುವನೆಂದರೂ ಇದೇ ಉತ್ತರ. ಆವನು ತಾನೊಬ್ಬ ಮಾಡುವವನೆಂದು ತಿಳಿದು ಮಾಡುವದಿಲ್ಲವಾದ್ದರಿಂದ ಮಾಡಿದವನಾಗುವದಿಲ್ಲ. —(ಭ ೯-೯).

ಭಗವಂತನೊಬ್ಬ ಮಾಡುವವನಲ್ಲವಾದರೂ ಜೀವನು ಮಾಡುವವನೆಂದು ಸಂಶಯವು ಬರಬಹುದು. ಕರ್ಮಗಳನ್ನು ಮಾಡೆಂದು ಶಾಸ್ತ್ರವು ಅವನಿಗೆ ಹೇಳಿರುವದರಿಂದ ಅವನನ್ನು ಮಾಡುವವನೆನ್ನಬೇಕಾಗುತ್ತದೆ. ಆದರೆ ಏನನ್ನಾದರೂ ಮಾಡುವದೇ ಅವನ ಹುಟ್ಟುಗುಣವಾದರೆ ಅವನಿಗೆ ಅದರಿಂದ ಬಿಡುಗಡೆಯಾಗುವ ಸಂಭವವೇ ಇಲ್ಲ. ದೇಹ ಮೊದಲಾದವುಗಳ ಸಂಬಂಧದಿಂದ ಮಾತ್ರ ಅವನು ಮಾಡುವವನು. ಬಡಗಿಯು ಬಾಚಿಯನ್ನು ಕೈಲಿ ಹಿಡಿದಾಗ ಏನನ್ನಾದರೂ ಮಾಡುವ ಬಡಗಿಯೇ ಹೊರತು ಬರೀ ತನ್ನ ಶರೀರಮಾತ್ರದಿಂದ ಬಡಗಿಯಲ್ಲ. ಅದರಂತೆ ಜೀವನು ತನ್ನ ಹುಟ್ಟುಗುಣದಿಂದ ಏನನ್ನೂ ಮಾಡುವವನಲ್ಲ. ಏನನ್ನಾದರೂ ಮಾಡುವ ಚಟದವರನ್ನು ನೋಡಿ ಅವರನ್ನು ತನ್ನ ದಾರಿಗೆ ತಿರುಗಿಸುವದಕ್ಕಾಗಿ ವೇದವು ಕರ್ಮಗಳನ್ನು ಹೇಳುವದೆ ಹೊರತು ಅದೇ ಅದರ ಕೊನೆಯ ಉಪದೇಶವಲ್ಲ.
—(ಸೂ ೨-೩-೧೪,೧೫)

ಜೀವನು ದೇಹ ಮೊದಲಾದವುಗಳ ಸಂಬಂಧಗೊಂಡಾಗ ಮಾತ್ರ ಮಾಡುವವನಾದರೂ ಈಶ್ವರನು ಅವನಿಂದ ಮಾಡಿಸುವವನಾದ್ದರಿಂದ ಒಬ್ಬರಿಂದ ಒಳ್ಳೆ ಕೆಲಸಗಳನ್ನೂ ಇನ್ನೊಬ್ಬರಿಂದ ಕೆಟ್ಟ ಕೆಲಸಗಳನ್ನೂ ಮಾಡಿಸುವವನೆಂದು ಈಶ್ವರನಲ್ಲಿ ಪಕ್ಷಪಾತವು ಕಾಣಬರುವದೆಂಬ ಒಂದು ಸಂಶಯವೇಳಬಹುದು. ಜೀವನ ಪ್ರಯತ್ನದಂತೆ ಈಶ್ವರನು ಮಾಡಿಸುವದರಿಂದ ಅವನಲ್ಲಿ ಆ ದೋಷಕ್ಕೆ ಕಾರಣವಿಲ್ಲ. ಈಶ್ವರನು ಮಳೆಯಂತೆ ಸಾಧಾರಣ

ಕಾರಣ. ಮಳೆಯು ಎಲ್ಲ ನೆಲದ ಮೇಲೆಯೂ ಒಂದೇ ಸಮನಾಗಿ ಬಿದ್ದರೂ ಬೇರೆ ಬೇರೆ ಬಗೆಯ ಬೆಳೆಗಳು ಆಯಾ ಬೀಜದ ಗುಣವನ್ನನುಸರಿಸಿ ಬೆಳೆಯುವಂತೆ ಜೀವನ ಪ್ರಯತ್ನದಂತೆ ಈಶ್ವರನು ಮಾಡಿಸುವನು. ಹಾಗಲ್ಲದೆ ಜೀವನ ಪ್ರಯತ್ನವಿಲ್ಲದೆ ಈಶ್ವರನೆ ಮಾಡಿಸುವವನಾದರೆ ಪುರುಷಪ್ರಯತ್ನ ಮೊದಲಾದವುಗಳೆಲ್ಲ ವ್ಯರ್ಥವೇ ಆದಾವು. ಅದು ಸಲ್ಲದು. ಈಶ್ವರನು, ಮಾಡುವವರನ್ನು ಮಾಡಿಸುವನೇ ಹೊರತು, ತಾನಾಗಿ ಮಾಡಿಸುವದಿಲ್ಲ. ಆ ಮಾಡಿಸುವಿಕೆಯು ಕೂಡ ಮಾಯೆಯಾದ್ದರಿಂದ ಅದರ ಸೋಂಕೂ ಅವನಿಗಿಲ್ಲ. —(ಸೂ ೨-೩-೧೬)

(ಅ) ಆತ್ಮನು ಇನ್ನೊಂದರಿಂದಾದವನಲ್ಲ. ಹಾಗಿದ್ದರೆ ಅವನು ಅವಯವಗಳುಳ್ಳವನಾಗಿ ನಾಶವಾಗಬೇಕಾಗುತ್ತಿತ್ತು. ಇದಲ್ಲದೆ ಅವನು ಗುಣಗಳುಳ್ಳವನಲ್ಲ. ಗುಣಗಳಿದ್ದ ಪಕ್ಷದಲ್ಲಿ ಅವು ಕರಗುತ್ತ ಬಂದ ಹಾಗೆಲ್ಲ ಅವನೂ ಕರಗಬೇಕಾಗಿತ್ತು. ಹಾಗೂ ಇಲ್ಲ. ಆದ್ದರಿಂದ ಅವನು ಶರೀರದಲ್ಲಿದ್ದರೂ ಏನನ್ನೂ ಮಾಡುವದೂ ಇಲ್ಲ; ಏನನ್ನೂ ಅಂಟಿಸಿಕೊಳ್ಳುವದೂ ಇಲ್ಲ. ಆತ್ಮನು ಶರೀರದಲ್ಲಿರುವವನೆನ್ನುವ ಮಾತು ಕೂಡ ಶರೀರದಲ್ಲಿ ಅವನು ಕಾಣಿಸಿಕೊಳ್ಳುವದನ್ನು ನೋಡಿ ಹೇಳುವ ಮಾತೇ ಹೊರತು ಅವನು ಅದರೊಳಗೆ ಸಿಕ್ಕುಬಿದ್ದಿರುವದಿಲ್ಲ. —(ಭ ೧೩-೩೧). (ಆ) ಜೀವರಿಗೆ ಮಾಡುವ ಗುಣವನ್ನಾಗಲಿ, ಮಾಡುವ ಕೆಲಸಗಳನ್ನಾಗಲಿ, ಅವುಗಳ ಫಲಗಳ ಸೋಂಕನ್ನಾಗಲಿ-ಭಗವಂತನೇನೂ ಹುಟ್ಟಿಸಿಲ್ಲ. ಅವರು ತಮ್ಮನ್ನು ತಾವು ಅರಿಯದಿರುವ ಮಾಯಾಶಕ್ತಿಯು ಅವರಿಂದ ಏನೇನನ್ನೋ ಮಾಡಿಸುವದು. —(ಭ ೫-೧೪).

## ಮಾಡುವಿಕೆಯು ದೇಹ ಮೊದಲಾದವುಗಳದು

ಕರ್ಮಗಳ ಮಾತೆಲ್ಲಮುಗಿದ ಮೇಲಿನ ವೇದಾಂತಶಾಸ್ತ್ರದಲ್ಲಿ ಕರ್ಮವನ್ನು ಮಾಡುವವು ಯಾವವೆಂದು ಹೇಳಿದೆ. ಸುಖ, ದುಃಖ-ಮೊದಲಾದವುಗಳ ಅನುಭವಕ್ಕೆಲ್ಲ ಆಶ್ರಯವಾದ ದೇಹ, ಅವುಗಳನ್ನು ಅನುಭವಿಸುವ

ಜೀವ, ಇಂದ್ರಿಯಗಳು, ವಾಯುಗಳು, ಇವುಗಳಿಗೆ ಬೆಂಬಲರಾಗಿರುವ ಇಂದ್ರ ಮೊದಲಾದ ದೇವತೆಗಳು- ಈ ಐದರಿಂದ ಕರ್ಮಗಳಾಗುವವು. ಒಳ್ಳೆ ಕೆಲಸವಾಗಲಿ, ಕೆಟ್ಟ ಕೆಲಸವಾಗಲಿ-ಎಲ್ಲ ಕೆಲಸಗಳಿಗೂ ಈ ಐದೇ ಕಾರಣ. ಹೀಗಿದ್ದರೂ ವೇದಾಂತಶಾಸ್ತ್ರದ ಅಭಿಪ್ರಾಯವನ್ನರಿತ ಮತ್ತು ಗುರುಗಳ ಉಪದೇಶವನ್ನು ಹೊಂದಿದ ಬುದ್ಧಿ ಇಲ್ಲದ ಕಾರಣದಿಂದ ತನ್ನ ಅರಿವು ತನಗಿಲ್ಲದೆ ತಾನೆಂದು ಅಭಿಮಾನಿಸಿರುವ ದೇಹ ಮೊದಲಾದವುಗಳಿಂದ ಆಗುವ ಕೆಲಸಗಳನ್ನು ಶುದ್ಧಾತ್ಮನದೆಂದು ಹೇಳುವದು ಬರೀ ಬುದ್ಧಿಗೇಡಿತನ. ಆ ಮಾತು ಓಡುವ ಮೋಡವನ್ನು ನೋಡಿ ಚಂದ್ರನು ಓಡುವನೆಂದು ಹೇಳುತ್ತ ಕುಣಿದಾಡುವ ಹುಡುಗನ ಮಾತಿನಂತೆ ಅಥವಾ ಕುದುರೆ ಓಡುತ್ತಿರುವಾಗ ತಾನೆ ಓಡುತ್ತಿರುವೆನೆಂಬ ತಿಳಿಗೇಡಿಯ ಮಾತಿನಂತೆ ಇರುವದು.

—(ಭ ೧೮-೧೩..೧೬)

ಈ ಐದನ್ನೆ ತಾನೆಂದು ತಪ್ಪು ತಿಳಿದವನು ಸತ್ತ್ವರಜಸ್ತಮೋಗುಣಗಳಿಂದ ರೂಪುಗೊಂಡಿರುವ ಈ ಐದರಿಂದಾಗುವ ಕೆಲಸವನ್ನು ತಾನು ಮಾಡಿದೆನೆನ್ನುವನು. ಗುಣಗಳ ಹಣೆಯ ಬರೆಹವನ್ನರಿತವನು ದೇಹೇಂದ್ರಿಯಗಳು ಹೊರಗಣ ವಿಷಯಗಳೊಡನೆ ವ್ಯವಹರಿಸುವವೆಂದು ಅವುಗಳ ಮೇಲೆ ಆಕ್ಕರೆಯನ್ನು ಮಾಡದಿರುವನು. — (ಭ೩-೨೭,೨೮)

(ಅ) ದೇಹೇಂದ್ರಿಯಗಳಿಂದಾದ ಕೆಲಸವನ್ನು ಆತ್ಮನಿಂದಾದದ್ದಲ್ಲವೆಂದು ತಿಳಿಯುವವನೆ ಮನುಷ್ಯರಲ್ಲೆಲ್ಲ ಜಾಣನು. ಈ ತಿಳಿವಳಿಕೆಯೊಂದಿದ್ದರೆ ಅವನಿಗೆ ಎಲ್ಲ ಕರ್ಮಗಳನ್ನೂ ಮಾಡಿದ ಫಲವು ಅದರಿಂದ ದೊರೆಯುವದು. —(ಭ ೪-೧೮). (ಆ) ತಾನು ಮಾಡುವವನಲ್ಲವೆಂಬ ತಿಳಿವಿನ ಬಲದಿಂದ ಕರ್ಮಗಳನ್ನೂ ಅದರ ಫಲಗಳನ್ನೂ ದೂರ ಮಾಡಿಕೊಂಡವನಾಗಿ ಮಾಡಬೇಕೆಂದು ಭಗವಂತನ ಅಭಿಪ್ರಾಯ (ಭ ೧೮-೬). (ಇ) ತಮ್ಮ ಬುದ್ಧಿಯನ್ನು ಶುದ್ಧಿಗೊಳಿಸಿಕೊಳ್ಳುವದಕ್ಕಾಗಿ ಈಶ್ವರನಿಗೆ ಪ್ರೀತಿಯಾಗಲೆಂದು ಕರ್ಮವನ್ನು ಮಾಡುವವರೆಲ್ಲ ತಾವು ಮಾಡುವವರೆನ್ನದೆ ದೇಹೇಂದ್ರಿಯಗಳು ಮಾಡುವವೆಂದು ತಿಳಿದೇ ಮಾಡುತ್ತಿರುವರು (ಭ ೫-೧೧). (ಈ) ಆಗುವ ಕೆಲಸಗಳೆಲ್ಲ ದೇಹೇಂದ್ರಿಯಗಳಿಂದಲೆ ಎಂದು ತಿಳಿದವನೆ ತಾನು

ಮಾಡುವವನಲ್ಲವೆಂದು ತಿಳಿಯುವನು. (ಭ ೧೩-೨೯). **(ಉ)** ತಾನು ಮಾಡುವವನಲ್ಲವೆಂದು ತಿಳಿದೊಡನೆ ಅವನು ಎಲ್ಲವನ್ನೂ ಮಾಡಿದರೂ ಎಲ್ಲ ಕರ್ಮಗಳನ್ನೂ ಬಿಟ್ಟಂತಾಯಿತು. ಇದೇ ನಿಜವಾದ ಸಂನ್ಯಾಸ. ಇದರಿಂದಲೇ ಮೋಕ್ಷ. ಬರೀ ಕರ್ಮವನ್ನು ಬಿಟ್ಟು ಕೈಮುರಿದುಕೊಳ್ಳುವ ಮಾತ್ರದ್ದು ಅರ್ಥವತ್ತಾದ ಸಂನ್ಯಾಸವಲ್ಲ. —(ಭ ೧೮-೪೯) **(ಊ)** ಕೆಲಸಗಳೆಲ್ಲ ಗುಣಗಳ ಹೊರತು ಇನ್ನೊಬ್ಬರಿಂದ ಆಗುವದಿಲ್ಲವೆಂದೂ ತಾನು ಗುಣಗಳಿಂದ ಬೇರೆಯೆಂದೂ ತಿಳಿದವನಿಗೆ ಮೋಕ್ಷ (ಭ ೧೪-೧೯). **(ಋ)** ತಾನು ಮಾಡುವವನಲ್ಲವೆಂಬ ತಿಳಿವಿನಿಂದ ಕೂಡಿ ಅವನು ಮೂರು ಲೋಕಗಳನ್ನು ಕೊಂದರೂ ಕೊಂದ ಹಾಗಲ್ಲ (ಭ೧೮-೪೭). **(ೠ)** ಆದ್ದರಿಂದ ತಾನು ಮಾಡುವವನಲ್ಲವೆಂಬ ಅಭಿಪ್ರಾಯವನ್ನು ಮನಸ್ಸಿಗೆ ಮೈಗೂಡಿಸಿಕೊಳ್ಳಬೇಕು. ಇದು ಬಹು ಹೆಚ್ಚಿನ ಅಮೃತ.— (ಮ ೪-೧೬.)

---

# ೧೫—ಜೀವವು ಬ್ರಹ್ಮವೆ

## ವೇದದ ಮಾತುಗಳ ಅಭಿಪ್ರಾಯ

ಹಿಂದೆ ಓಂಕಾರದ ವರ್ಣನೆಯನ್ನು ಮಾಡುವಾಗ ಚೈತನ್ಯವು ಎಲ್ಲೆಲ್ಲಿಯೂ ತುಂಬಿರುವಂಥದ್ದೆಂಬ ಅಭಿಪ್ರಾಯವು ಬಂದಿರುವದಲ್ಲದೆ ಜೀವವೂ ಬ್ರಹ್ಮವೂ ಒಂದೇ ಎಂದು ಅನೇಕ ಕಡೆಗಳಲ್ಲಿ ಹೇಳಿದ್ದಾಗಿದೆ. ಆ ತಿಳಿವಳಿಕೆಯು ನಮಗೆ ವೇದದಿಂದುಟಾಗಬೇಕೇ ಹೊರತು ಬರೀ ನಮ್ಮ ಬುದ್ಧಿಗೆ ನಿಲುಕುವದಿಲ್ಲ. ನಮ್ಮ ಬುದ್ಧಿಯು ಜೀವರನ್ನೂ ಬ್ರಹ್ಮವನ್ನೂ ಬೇರೆಬೇರೆಯೆಂದೇ ತಿಳಿಯುತ್ತಿರುವದು. ಈ ಅಭಿಪ್ರಾಯವು ಶ್ರುತಿಗೆ ಒಪ್ಪಾಗುವದಿಲ್ಲ. ಈ ಅಭಿಪ್ರಾಯವನ್ನು ಶ್ರುತಿಯು ಹೇಳಿದರೆ ಅದು ನಾಡಾಡಿಗಳ ಮಾತಿಗೆ ಹಿಮ್ಮೇಳದಂತಾಗುತ್ತಿತ್ತು. ಎಲ್ಲರಿಗೂ ತಿಳಿದ ಅಭಿಪ್ರಾಯವನ್ನೆ ಹೇಳಿದರೆ ಶ್ರುತಿಯದೇನು ಹೆಚ್ಚುಗಾರಿಕೆ? ಯಾರಿಗೂ ಎಂದೂ ಹೊಳೆಯದ ವಿಷಯವನ್ನು ಹೇಳಿದರಲ್ಲವೆ ಅದರ ಹಿರಿಯತನ? ದೀನರಾದ ಜೀವರ ಮೇಲೆ ಕನಿಕರ

ಉಳ್ಳ ಶ್ರುತಿಯು 'ನೀನು ಬ್ರಹ್ಮ' ವೆಂದು ಸಾರಿ ಹೇಳುತ್ತಿರುವದು. ಅದನ್ನು ಒಮ್ಮೆ ಹೇಳಿದರೆ ಸಾಕಾಗಿತ್ತೆನ್ನಬಾರದು. ಆ ಅಭಿಪ್ರಾಯವು ಮನಸ್ಸಿನಲ್ಲಿ ಮೂಡಬೇಕಾದರೆ ಎಷ್ಟು ಸಲ ಹೇಳಿದರೂ ಸಾಲದಾಗುವದು. ಇಲ್ಲಿ ಉದಾಹರಣೆಗಾಗಿ ಅದು ಅಲ್ಲಲ್ಲಿ ಹೇಳಿರುವ ಕೆಲವು ಮಾತುಗಳ ಅಭಿಪ್ರಾಯವನ್ನು ಕೊಡಲಾಗುವದು

(೧) 'ತಾನು ಯಾರೆಂಬದನ್ನು ತಿಳಿದವನು ಜಗತ್ತನ್ನೆಲ್ಲ ತನ್ನೊಳಗಣ ಆತ್ಮನಲ್ಲಿದ್ದಂತೆ ಮತ್ತು ಪರಮಾತ್ಮನಲ್ಲಿದ್ದಂತೆ ಕಾಣುವನು.' ಎಂಬ ಮಾತನ್ನು ನೋಡಿದರೆ ಪರಮಾತ್ಮನೂ ತಾನೂ ಒಂದೇ ಎಂದು ಹೇಳಲೇ ಬೇಕಾಗುವದು. —(ಭ ೬-೨೯)

(೨) ಎಲ್ಲ ಶರೀರಗಳಲ್ಲಿಯೂ ಬೆರಳ ತುದಿಯಿಂದ ನೆತ್ತಿಯ ತನಕ ತಾನೆಂದು ಅಥವಾ ತನ್ನದೆಂದು ನೋಡುವ ಜೀವನನ್ನು ಪರಮಾತ್ಮನೆಂದು ತಿಳಿ. —(ಭ ೧೩-೨)

(೩) ಈ ಶರೀರದಲ್ಲಿರುವ ಪುರುಷನು ಪರಮಾತ್ಮನು —(ಭ ೧೩-೨೨)

(೪) ನೀರಿನಲ್ಲಿ ಬಿದ್ದ ಸೂರ್ಯನ ಪ್ರತಿಬಿಂಬವು ಸೂರ್ಯನ ಅಂಶವಾಗಿದ್ದು ನೀರು ಹೋಗುತ್ತಲೆ ಸೂರ್ಯನೆ ಆಗುವ ಹಾಗೆ ಪರಮಾತ್ಮನ ಒಂದಂಶವೆ ಜೀವನೆನಿಸಿದೆ. ಪರಮಾತ್ಮನಿಗೆ ಅಂಶವೆಂಬುದಿಲ್ಲವಾದರ ತನ್ನ ನಿಜವನ್ನು ತಾನು ಅರಿಯದೆ ದೇಹವ ಮೊದಲಾದವುಗಳನ್ನು ತಾನೆಂದುಕೊಂಡ ಸಂಬಂಧದಿಂದ ಪರಮಾತ್ಮನ ಅಂಶವೆಂಬ ಮಾತು ಹುಟ್ಟುಗಟ್ಟಿದ್ದಾಗಿರುವದು. —(ಭ ೧೫-೭)

(೫) ತಾನು ಮಾಡಿದ ಕರ್ಮಗಳ ಫಲಗಳನ್ನುಣ್ಣುವದಕ್ಕಾಗಿ ಪ್ರಾಣವನ್ನು ಹಿಡಿದುಕೊಂಡು ಒಳಗಿರುವ ಜೀವನನ್ನು ಹಿಂದಿನ, ಈಗಿನ ಮತ್ತು ಮುಂದಿನ ಜಗತ್ತನ್ನೆಲ್ಲ ಆಳುವ ಪರಮಾತ್ಮನನ್ನಾಗಿ ತಿಳಿದ ಮೇಲೆ ಯಾವನೂ ತನ್ನನ್ನು ಕಾಪಾಡಿಕೊಳ್ಳಬೇಕೆಂದು ಬಯಸುವದಿಲ್ಲ. ಹೆದರಿಕೆ ಇರುವವರಿಗೂ ತನ್ನನ್ನು ಕಾಪಾಡಿಕೊಳ್ಳುವ ಯೋಚನೆ ಇರುವದು. ಯಾವ ಹೆದರಿಕೆಗೂ ಅವಕಾಶವಿಲ್ಲದಂತೆ ತಾನು ಎರಡನೆಯದಿಲ್ಲದ ಪರಮಾತ್ಮನೆಂದು ತಿಳಿದ ಮೇಲೆ ಇನ್ನೇಕೆ ಕಾಪಾಡಿಕೊಳ್ಳುವ ಬಯಕೆ? —(ಕ ೪-೫)

(೬) ಬಿದಿರ ಗೆಣ್ಣಿನೊಳಗಿರುವ ಬಯಲಿನಂತೆ ಶರೀರದ ನಡುವೆ ಹೆಬ್ಬೆಟ್ಟಿನಷ್ಟಿರುವ ಹೃದಯದಲ್ಲಿ ಮನಸ್ಸಿನ ಸಂಬಂಧಗೊಂಡಿರುವ ಜೀವನನ್ನು

ಹಿಂದಿನ, ಈಗಿನ ಮತ್ತು ಮುಂದಿನ ಜಗತ್ತನ್ನೆಲ್ಲ ಆಳುವ ಪರಮಾತ್ಮನನ್ನಾಗಿ ತಿಳಿದ ಮೇಲೆ ಯಾವನೂ ತನ್ನನ್ನು ತಾನು ಕಾಪಾಡಿಕೊಳ್ಳಲಿಚ್ಛಿಸುವದಿಲ್ಲ.
—(ಕ ೪-೧೨)

(೭) ಹೆಬ್ಬೆಟ್ಟಿನಷ್ಟಿರುವ ಆ ಪುರುಷನನ್ನು ಯೋಗಿಗಳು ಹೊಗೆ ಇಲ್ಲದ ಬೆಂಕಿಯಂತೆ ಕಾಣುವರು. ಅವನೇ ಮೂರು ಕಾಲದ ಜಗತ್ತಿಗೂ ಒಡೆಯನು. ಅವನು ಈಗಲೂ ಇರುವನು ; ಮುಂದೆಯೂ ಇರುವನು.
—(ಕ ೪-೧೩)

(೮) ಹನ್ನೊಂದು ಬಾಗಿಲುಳ್ಳ ಈ ಶರೀರವೆಂಬ ಪಟ್ಟಣವು ಹುಟ್ಟು ಮೊದಲಾದ ಬದಲಾವಣೆಗಳಿಲ್ಲದಂಥ ಪರಮಾತ್ಮನೆಂಬ ಅರಸನ ಊರು. ಅವನನ್ನು ತಿಳಿದು ಧ್ಯಾನ ಮಾಡಿದರೆ ದುಃಖವೆಂಬುದು ಉಳಿಯುವದಿಲ್ಲ.
—(ಕ ೫-೧)

(೯) ಎಲ್ಲೆಲ್ಲಿಯೂ ತುಂಬಿಕೊಂಡು ಜಗತ್ತನ್ನು ಹಿಡಿತದಲ್ಲಿಟ್ಟುಕೊಂಡು ಎಲ್ಲ ಪ್ರಾಣಿಗಳ ಒಳಗಣ ಆತ್ಮವಾಗಿಯೂ ಒಂದೇ ಬಗೆಯಾಗಿರುವ ತನ್ನನ್ನು ಅನೇಕ ಬಗೆಯಾಗಿ ಮಾಡುವವನಾಗಿಯೂ ಇರುವ ಪರಮಾತ್ಮನೆ ತನ್ನ ಶರೀರದಲ್ಲಿರುವ ಹೃದಯದ ಬಯಲಿನಲ್ಲಿ ಬುದ್ಧಿಯೊಡನೆ ಕೂಡಿದ ಚೈತನ್ಯ ರೂಪದಿಂದ ಕಾಣಿಸಿಕೊಳ್ಳುವನೆಂದು ತಿಳಿಯುವ ಜಾಣರಿಗೆ ಎಂದೆಂದಿಗೂ ಅಚ್ಚಳಿಯದ ಸುಖವಾಗುವದು. ಆದು ಉಳಿದವರಿಗಿಲ್ಲ. —(ಕ ೫-೧೨)

(೧೦) ಬೆಂಕಿಯಲ್ಲದ ನೀರು ಮೊದಲಾದವುಗಳಿಗೆ ಬೆಂಕಿಯಿಂದ ಬಿಸಿ ಯುಂಟಾಗುವಂತೆ ಪ್ರಾಣಿಗಳಿಗೆಲ್ಲ ಚೈತನ್ಯವನ್ನುಂಟುಮಾಡುತ್ತ ಅವರವರ ಕರ್ಮಗಳಿಗೆ ತಕ್ಕ ಫಲಗಳನ್ನು ಕೊಡುವ ಪರಮಾತ್ಮನನ್ನು ತನ್ನ ಶರೀರದಲ್ಲಿ ಕಾಣುವ ಜಾಣರಿಗೆ ಎಂದೆಂದಿಗೂ ಅಚ್ಚಳಿಯದ ಶಾಂತಿಯುಂಟಾಗುವದು. ಅದು ಉಳಿದವರಿಗಿಲ್ಲ. (ಕ ೫-೧೩)

(೧೧) **(ಅ)** ಇರುವಿಕೆಯ ರೂಪವಾದ ಬ್ರಹ್ಮವು ತಾನು ಹುಟ್ಟಿಸಿದ ಅಗ್ನಿಯಲ್ಲಿಯೂ ನೀರಿನಲ್ಲಿಯೂ ನೆಲದಲ್ಲಿಯೂ ಜೀವರೂಪದಿಂದ ಒಳಹೊಕ್ಕು ಆ ಮೂರು ಭೂತಗಳಿಂದ ಬೇರೆ ಬೇರೆ ಹೆಸರುಗಳೂ ಆಕಾರಗಳೂ ಉಳ್ಳ ಮುಕ್ಕೂಟದ ಜಗತ್ತನ್ನು ಮಾಡಬೇಕೆಂದು ಯೋಚಿಸಿ ಅದರಂತೆ ಮಾಡಿತು.

ಯಾವ ತೊಡಕೂ ಇಲ್ಲದ ಬ್ರಹ್ಮವು ತಿಳಿದೂ ತಿಳಿದೂ ತಾನಾಗಿ ದುಃಖಪಡುವ ಗೋಜಿಗೇಕೆ ಬಿತ್ತೆಂದು ಯೋಚಿಸಬಹುದು. ತನ್ನ ನಿಜಸ್ವರೂಪದಿಂದ ಹೊಕ್ಕಿದ್ದರೆ ಈ ಆಕ್ಷೇಪವು ಹೊಂದುತ್ತಿತ್ತು. ಅದು ಕನ್ನಡಿಯಲ್ಲಿ ಪ್ರತಿಬಿಂಬಿಸಿದ ಮುಖದಂತೆ ಬುದ್ಧಿಯಲ್ಲಿ ಬಿದ್ದ ತನ್ನ ಪ್ರತಿಬಿಂಬವಾದ ಜೀವ ರೂಪದಿಂದ ಪ್ರವೇಶಮಾಡಿತು. ಆದ್ದರಿಂದ ಅದಕ್ಕೆ ದುಃಖದ ಭಯವಿಲ್ಲ. ಜೀವನು ಪ್ರತಿಬಿಂಬದಂತಾದ ಮೇಲೆ ಸುಖ್ಯಾದವನಾದ್ದರಿಂದ ಅವನು ಪರ ಲೋಕಕ್ಕೆ ಹೋಗುವದೂ ಬರುವದೂ ಮೊದಲಾದದ್ದು ಹೇಗೆ ಹೊಂದುವ ದೆಂದರೆ ಅವನು ಇರುವಿಕೆಯ ರೂಪದಿಂದ ನಿಜವಾದವನಾಗಿರುವನು. (ಛಾಂ ೬-೩-೨೩). (ಆ) ಈ ಶರೀರದಲ್ಲಿ ಆಗುವ ಭೋಗವು ರಾಜ ನಾದ ನನ್ನ ಹೊರತು ಮತ್ತಾರಿಗೆಂದು ಯೋಚಿಸಿ ಆತ್ಮನು ತನ್ನ ಆಳಾದ ಪ್ರಾಣನು ಪ್ರವೇಶಮಾಡಿದ ಅಂಗಾಲನ್ನೂ ಸೂರ್ಯ ಮೊದಲಾದ ಇಂದ್ರಿಯಾ ಭಿಮಾನಿದೇವತೆಗಳು ಒಳಹೊಕ್ಕ ಕಣ್ಣು ಮೊದಲಾದ ಸ್ಥಲಗಳನ್ನೂ ಬಿಟ್ಟು ತಾನು ನೆತ್ತಿಯನ್ನು ಸೀಳಿಕೊಂಡು ಒಳಹೊಕ್ಕನು. ಈಗಲೂ ನೆತ್ತಿಯ ಮೇಲೆ ಎಣ್ಣೆಯನ್ನಿಟ್ಟಾಗ ಅದು ಎಣ್ಣೆಯ ತಂಪನ್ನು ತಿಳಿಸುವದು. ಪರಮ ದಯಾಳುವಾದ ಒಬ್ಬ ಗುರು ಶಿಷ್ಯನ ತಪ್ಪುತಿಳಿವನ್ನು ಕಳೆಯಬೇಕೆಂದು ವೇದಾಂತವೆಂಬ ದೊಡ್ಡನಗಾರಿಯನ್ನು ಅವನ ಕಿವಿಯ ಬಳಿಯಲ್ಲಿ ಹೊಡೆದಾಗ ಆ ಬ್ರಹ್ಮವು ಪ್ರತ್ಯಕ್ಷವಾಗಿ ಕಾಣಬರುವದು —(ಐ ೩-೧೧..೧೩) (ಇ) ಸೂರ್ಯನ ಮತ್ತು ಚಂದ್ರನ ಗ್ರಹಣವಿಲ್ಲದೆ ರಾಹು ಹೇಗೆ ಕಾಣಬರುವ ದಿಲ್ಲವೋ ಹಾಗೆ ಬ್ರಹ್ಮವು ಏನಾದರೊಂದು ವಿಶೇಷಸಂಬಂಧದ ಹೊರತು ಕಾಣಬರುವದಿಲ್ಲ. ಏಕೆಂದರೆ: ಅದರಲ್ಲಿ ತನ್ನ ಸ್ವಂತವಾದ ಯಾವ ವಿಶೇಷವೂ ಇಲ್ಲ. ಬ್ರಹ್ಮವು ಬುದ್ಧಿಯೆಂಬ ಗುಹೆಯ ಸಂಬಂಧಗೊಂಡಿರುವದೇ ಅದು ಕಾಣಬರುವದಕ್ಕೆ ದಾರಿಯಾಗಿರುವದು. ಹೀಗೆ ನೋಡುವವನು ಕೇಳುವವನು-ಮೊದಲಾದ ವಿಶೇಷರೂಪದಿಂದ ಅದು ಪ್ರತ್ಯಕ್ಷವಾಗಿರುವದು. —(ತೈ ೨-೬)

(೧೨) 'ಮೊದಲು ಅನ್ನಮಯನು, ಎಂದರೆ ಸ್ಥೂಲ ಶರೀರನು, ಅದ ರೊಳಗೆ ಪ್ರಾಣಮಯನು, ಆದರೊಳಗೆ ಮನೋಮಯನು, ಅದರೊಳಗೆ

ವಿಜ್ಞಾನಮಯನು, ಅದರೊಳಗೆ ಆನಂದಮಯನು, ಅದರ ಬುಡದಲ್ಲಿ ಬ್ರಹ್ಮ' ಎಂದು ಹೇಳಿರುವದರಿಂದ ಶರೀರದಲ್ಲಿರುವ ಜೀವನನ್ನೇ ಬ್ರಹ್ಮವೆಂದಂತಾಯಿತು. —(ತೈ ೨-೧..೫)

(೧೩) 'ಮನುಷ್ಯನು ಸತ್ತಮೇಲೆ ಅವನ ಆತ್ಮವು ಇರುವದೊ ಇಲ್ಲವೊ?' ಎಂದು ನಚಿಕೇತನು ಕೇಳಿದ್ದಕ್ಕೆ (ಕ ೧-೨೦) ಯಮನು 'ಉಂಟು ; ಎಲ್ಲ ವೇದಗಳೂ ಹೇಳುವದು ಅದನ್ನೆ; ಎಲ್ಲ ಸಾಧನಗಳೂ ಅದನ್ನು ತಿಳಿಯುವದಕ್ಕಾಗಿಯೇ; ಗುರುಕುಲವಾಸ ವೊದಲಾದ ಕಠಿನವ್ರತಗಳೆಲ್ಲ ಅದನ್ನು ಪಡೆಯುವದಕ್ಕಾಗಿಯೆ ; ಅದೆ ಓಂ ಎಂಬ ಮಾತಿನಿಂದ ಕರೆಸಿಕೊಳ್ಳುವ ಬ್ರಹ್ಮ' ಎಂದು ಹೇಳಿರುವನು. —(ಕ ೨-೧೫)

(೧೪) ತಾಯಿ ಗರ್ಭದಲ್ಲಿದ್ದಾಗಲೆ ತನ್ನ ಹಿಂದಿನ ಜನ್ಮಗಳ ದೊಡ್ಡ ದೊಡ್ಡ ಪುಣ್ಯಗಳೆಲ್ಲ ಹಣ್ಣಾದದ್ದರ ಫಲವಾಗಿ ವಾಮದೇವನು ಇಂದ್ರಿಯಾಭಿಮಾನಿದೇವತೆಗಳ ಹುಟ್ಟು ವೊದಲಾದವುಗಳನ್ನೆಲ್ಲ ತನ್ನಲ್ಲಿ ತಾನೆ ತಿಳಿದು ಗಿಡಗನು ಬಲೆಯನ್ನು ಹರಿದುಕೊಂಡು ಹೊರಬಿದ್ದಂತೆ ತಾನು ಶರೀರವೆಂಬ ಬಲೆಯಿಂದ ಹೊರಬಿದ್ದೆನೆಂದೂ ಮನು, ಸೂರ್ಯ-ವೊದಲಾದ ಸರ್ವರ ಆತ್ಮವಾದೆನೆಂದೂ ಹೇಳಿದ್ದಾನೆ. —(ಐ ೪-೫)

(೧೫) ಹಗ್ಗವೆಂಬ ನಿಜವನ್ನರಿಯದೆ ಮಬ್ಬುಗತ್ತಲೆಯಲ್ಲಿ ಹಾವೆಂದೋ ನೀರಿನ ಕೋಡಿಯೆಂದೋ ಕೋಲೆಂದೋ ಬಹು ಬಗೆಯಾಗಿ ಹುಟ್ಟುಗಟ್ಟುವಂತೆ ಎರಡನೆಯದೆಂಬುವದಿಲ್ಲದ ಶುದ್ಧಜ್ಞಾನಸ್ವರೂಪ ಒಂದೇ ನಿಜವಾಗಿರುವದೆಂಬುದನ್ನರಿಯದೆ ಅವನನ್ನು ಜೀವನೆಂದೂ ಪ್ರಾಣನೆಂದೂ ಏನೇನನ್ನೊ ಹುಟ್ಟುಗಟ್ಟುವರು. —(ಮಾಂ ೨-೧೭)

(೧೬) ಪರಮಾತ್ಮನು ದೊಡ್ಡ ಬಯಲಿನಂತೆ. ಜೀವನು ಗಡಿಗೆಯ ಬಯಲಿನಂತೆ. ಗಡಿಗೆಯೊಡೆದೊಡನೆ ಗಡಿಗೆಯ ಬಯಲು ದೊಡ್ಡ ಬಯಲಿನೊಳಗೆ ಕೂಡಿಕೊಳ್ಳುವಂತೆ ಜೀವರು ಶರೀರ ವೊದಲಾದವುಗಳ ಸಂಬಂಧವನ್ನು ತೂರೆದೊಡನೆ ಬ್ರಹ್ಮದೊಡನೆ ಕೂಡಿಕೊಳ್ಳುವರು. -(ಮಾಂ ೩-೩,೪)

(೧೭) ಪ್ರಜ್ಞಾನವು ಮನಸ್ಸಿನ ಸಂಬಂಧಗೊಂಡು ತನ್ನನ್ನು ತೋರಿಸಿಕೊಳ್ಳುವದಕ್ಕಾಗಿ ಚೇತನಭಾವ, ತಿಳುವಳಿಕೆ, ಇಂದ್ರಿಯಗಳ ಮೂಲಕ ವಿಷಯವನ್ನು ಗ್ರಹಿಸುವದು-ವೊದಲಾದ ಮನೋವೃತ್ತಿಗಳನ್ನುಂಟುಮಾಡುವದು. ಅದೇ ಇಂದ್ರ. ಆ ಪ್ರಜ್ಞಾನವೆ ಎಲ್ಲರ ಕಣ್ಣು. ಆ ಪ್ರಜ್ಞಾನವೆ ಎಲ್ಲಕ್ಕೂ ಆಧಾರ. ಅದೇ ಬ್ರಹ್ಮ. —(ಐ ೫-೨೩)

(೧೮) ಶ್ವೇತಕೇತುವೆಂಬ ಮಗನನ್ನು ಕುರಿತು ತಂದೆಯು 'ಒಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವ ವಸ್ತುವನ್ನು ತಿಳಿದೆಯಾ?' ಎಂದು ಕೇಳಿದಾಗ ಮಗನು ಅದನ್ನು ನೀನೇ ತಿಳಿಯ ಹೇಳೆಂದನು. ಆಗ ತಂದೆಯು ಅಂಥ ವಸ್ತು ಬ್ರಹ್ಮವೆಂದು ಹೇಳಿ ನೀನೆ ಆ ಬ್ರಹ್ಮವೆಂದು ತನ್ನ ಉಪದೇಶವನ್ನು ಮುಗಿಸಿರುವನು. —(ಛಾಂ ೬)

(೧೯) ಬುದ್ಧಿಯಲ್ಲಿ ಕಾಣಿಸಿಕೊಳ್ಳುವ ಈ ಸಂಸಾರಿಯಾದ ಆತ್ಮನು ಹಸಿವು ಬಾಯಾರಿಕೆಗಳ ಸೋಂಕಿಲ್ಲದ ಬ್ರಹ್ಮವೆ. —(ಬೃ ೪-೪-೫)

(೨೦) ವೊದಲು ಬ್ರಹ್ಮ ಒಂದೇ ಇದ್ದು ಜೀವನಾಗಿ ಆಮೇಲೆ 'ನಾನು ಬ್ರಹ್ಮನಾಗಿದ್ದೇನೆ' ಎಂದು ತಿಳಿಯಿತು. ಹೀಗೆ ತಿಳಿದದ್ದರಿಂದ ಅದು ತನ್ನಲ್ಲಿ ಹುಟ್ಟುಗಟ್ಟಿದ ಬಿಡಿಬಿಡಿಯಾದ ಅನೇಕ ವಿಷಯಗಳನ್ನೆಲ್ಲ ಹೊರಸರಿಸಿ ಎಲ್ಲವೂ ತಾನೆ ಆಯಿತು. ಆದ್ದರಿಂದ ದೇವತೆಗಳಲ್ಲಿ ಯಾರು ಯಾರು ಹೀಗೆ ತಿಳಿದರೊ ಅವರು ಅದೇ ಆದರು. ಋಷಿಗಳಲ್ಲಿಯೂ ಹಾಗೆಯೆ; ಮನುಷ್ಯರಲ್ಲಿಯೂ ಹಾಗೆಯೆ. ಇದನ್ನರಿತ ವಾಮದೇವನೆಂಬ ಋಷಿಯು ಮನುವೂ ಸೂರ್ಯನೂ ತಾನೇ ಎಂದು ತಿಳಿದನು. ನಾನು ಬ್ರಹ್ಮನಾಗಿದ್ದೇನೆಂದು ಯಾವನು ತಿಳಿಯುತ್ತಾನೊ ಇವೆಲ್ಲವೂ ಅವನೇ ಆಗುತ್ತಾನೆ. ತಾನು ಬ್ರಹ್ಮವೆಂದರಿಯದೆ ಯಾವನು ಯಾವದೋ ಒಂದು ದೇವತೆಯನ್ನು ತನಗಿಂತ ಬೇರೆಯೆಂದು ಶರಣುಹೋಗುವನೊ ಅವನು ನಿಜವನ್ನರಿತವನಲ್ಲ. ದನಗಳು ಮನುಷ್ಯರಿಗಾಗಿ ದುಡಿಯುವಂತೆ ಅವನು ದೇವತೆಗಳಿಗಾಗಿ ಯಜ್ಞಯಾಗಾದಿಗಳನ್ನು ಮಾಡುವದರಲ್ಲಿ ಹೆಣಗಾಡುತ್ತಿರತಕ್ಕವನಾಗುವನು. ಅವನ ಮೇಲೆ ದೇವತೆಗಳ ಆಳಿಕೆ ಇದ್ದೇ ಇರುವದು. ಅನೇಕ ದನಗಳುಳ್ಳವನ ಒಂದು ದನವನ್ನು ಹುಲಿ ವೊದಲಾದದ್ದು ತಿಂದು ಬಿಟ್ಟರೆ ಅವನಿಗೆ

ವಿಷಾದವಾಗುವಂತೆ ಯಾವನಾದರೊಬ್ಬನು ಕರ್ಮದ ಕಟ್ಟಿನಿಂದ ಕಳಚಿಕೊಂಡು ಬ್ರಹ್ಮನಾಗುವದೆಂದರೆ ದೇವತೆಗಳಿಗೆ ವಿಷಾದವಾಗುವದು. ಆದ್ದರಿಂದ ಅವರು ಅವನಿಗೆ ಅಶ್ರದ್ಧೆ ಮೊದಲಾದಗಳನ್ನು ಹುಟ್ಟಿಸಿ ಅನೇಕ ಅಡ್ಡಿಗಳನ್ನು ತಂದೊಡ್ಡುವರು. ಅವನಿಂದ ಚೆನ್ನಾಗಿ ತಿಂದು ತೇಗಿದ ದಾಕ್ಷಿಣ್ಯದಿಂದ ಅವನ ಮೇಲೆ ಕನಿಕರ ಉಂಟಾಗಿ ಒಮ್ಮೆ ಅವನಿಗೆ ಬಿಡುಗಡೆಯಾಗಲೆಂದು ಅವರ ಮನಸ್ಸಿನಲ್ಲಿ ಹುಟ್ಟಿದರೆ ಆಗ ಅವರು ಅವನಿಗೆ ಶ್ರದ್ಧೆ, ಭಕ್ತಿ-ಮೊದಲಾದವುಗಳನ್ನು ತಲೆ ಎತ್ತುವಂತೆ ಮಾಡುವರು. —(ಬೃ ೧-೪-೧೦)

(೨೧) ಬ್ರಹ್ಮವು ಜಗತ್ತಿಗೆಲ್ಲ ಆಧಾರವಾಗಿ ಬಹುಸೂಕ್ಷ್ಮವಾಗಿ ಎಲ್ಲರ ಆತ್ಮವಾಗಿರುವದು. ನೀನೆ ಅವನು ; ಅವನೆ ನೀನು. —(ಕೈ ೧೬)

(೨೨) ಜೀವನು ಶಿವನು ; ಶಿವನು ಜೀವನು ; ಆ ಜೀವನು ಶುದ್ಧ ಶಿವನೆ. ಹೊಟ್ಟಿನಿಂದ ಕೂಡಿದರೆ ನೆಲ್ಲು ; ಹೊಟ್ಟನ್ನು ಕಳೆದರೆ ಅಕ್ಕಿ. —(ಸ್ಕಂ ೬)

(೨೩) ವೇದದಲ್ಲಿ ಜೀವನು ಈಶ್ವರನಿಗಿಂತ ಬೇರೆಯೆಂದು ಹೇಳಿರುವದು ಜನರ ಅಭಿಪ್ರಾಯವನ್ನು ಎತ್ತಿ ಹೇಳುವ ಮಾತು ; ಜೀವನಿಗೂ ಈಶ್ವರನಿಗೂ ಭೇದವಿಲ್ಲವೆನ್ನುವದು ತಿಳಿವಳಿಕೆಯನ್ನು ತಿದ್ದುವದಕ್ಕಾಗಿ ಹೇಳಿದ ಮಾತು. —( ಸೂ ೨-೩-೧೭)

## ಬೇರೆ ಬೇರೆಯೆಂದರೆ ಹಾನಿ

(೧) ಸೃಷ್ಟಿಯನ್ನು ಹೇಳುವ ವಾಕ್ಯಗಳು ಜೀವನಿಗೂ ಪರಮಾತ್ಮನಿಗೂ ಭೇದವನ್ನು ಹೇಳಿರುವದು ಮುಂದೆ ಒಂದೆಂದು ಹೇಳಲಾಗುವವನ್ನು ಗುರಿಯಲ್ಲಿಟ್ಟುಕೊಂಡು ಆರಂಭದಲ್ಲಿ ಜನರ ಅಭಿಪ್ರಾಯವನ್ನು ಹಿಡಿದು ಆಡಿರುವ ಮಾತೇ ಹೊರತು ನಿಜವಾದದ್ದಲ್ಲ. —(ಮಾಂ ೩-೧೪)

(೨) ಮಣ್ಣಾಗಲಿ ಲೋಹವಾಗಲಿ ಬೇರೆ ಬೇರೆ ರೂಪುಗಳನ್ನು ತಾಳಿದಂತೆ ಮತ್ತು ಕೆಂಡದಿಂದ ಕಿಡಿಗಳು ಹೊರಟಂತೆ ಬ್ರಹ್ಮದಿಂದ ಜಗತ್ತೂ ಜೀವರೂ ಆದರೆಂದು ಹೇಳಿರುವದು ಮುಂದೆ ಜೀವನೂ ಬ್ರಹ್ಮನೂ ಒಂದೆಂಬವನ್ನು ತಿಳಿಸುವದಕ್ಕೆ ಆರಂಭದಲ್ಲಿ ಮನಸ್ಸಿಗೆ ಹಿಡಿಯಲೆಂದು ಹುಟ್ಟುಗಟ್ಟಿದ ಅಭಿಪ್ರಾಯ. ಅದು ನಿಜವಲ್ಲ. ಪ್ರಾಣದ ಹೆಚ್ಚುಗಾರಿಕೆಯನ್ನು ತೋರಿಸುವದಕ್ಕಾಗಿ ಕೆಲವು ಕಡೆ ಪ್ರಾಣಗಳಿಗೂ ಇಂದ್ರಿಯಗಳಿಗೂ ಮಾತು ನಡೆದು ಪ್ರಾಣವು

ಗೆದ್ದಿತೆಂದು ಕಥೆಗಳು ಬಂದಿವೆ. ಆ ಕಥೆಗಳು ಒಂದೊಂದು ಕಡೆ ಒಂದೊಂದು ರೀತಿ ಇವೆ. ಮಾತು ಒಂದೇ ರೀತಿಯಲ್ಲಿ ನಡೆದಿರುವದೇ ಹೊರತು ಅನೇಕ ರೀತಿಯಲ್ಲಲ್ಲ. ಆದ್ದರಿಂದ ಅವೆಲ್ಲ ಪ್ರಾಣನ ಹೆಚ್ಚುಗಾರಿಕೆಯನ್ನು ಮನಗಾಣಿಸುವ ಉಪಾಯವೆ ಹೊರತು ಹೇಗೆ ನಿಜವಲ್ಲವೊ ಹಾಗೆ ಸೃಷ್ಟಿಯನ್ನು ಹೇಳುವ ಶ್ರುತಿಗಳೂ ಎರಡನೆಯದಿಲ್ಲದ ಬ್ರಹ್ಮವನ್ನು ತಿಳಿಸುವದಕ್ಕಾಗಿ ಹುಟ್ಟುಗಟ್ಟಿದ ಕಥೆಗಳು. —(ಮಾಂ ೩-೧೫)

(೩) ಜೀವವೂ ಬ್ರಹ್ಮವೂ ಬೇರೆಬೇರೆಯೆಂದು ಹೇಳುವವರು ದೀನರು. ಅವರು ಯಾವಾಗಲೂ ತಮ್ಮ ಅರಿವು ತಮಗಿಲ್ಲದ್ದರಿಂದ ಹುಟ್ಟುಗಟ್ಟಿದವು. ಳಲ್ಲಿಯೇ ತೊಳಲುವರು. —(ಮಾಂ ೪-೯೪)

(೪) ದೇಹೇಂದ್ರಿಯಗಳೊಳಗಿದ್ದುಕೊಂಡು ಸಂಸಾರಿಯೆನಿಸಿಕೊಂಡಿರುವ ಜೀವವೆ ಸಂಸಾರಿಯಲ್ಲದ ಬ್ರಹ್ಮ. ಸಂಸಾರಿಯಲ್ಲದ ಬ್ರಹ್ಮವೆ ದೇಹ ಮೊದಲಾದವುಗಳ ಸಂಬಂಧಗೊಂಡು ಕಾಣಬರುವದು. ಜೀವಕ್ಕೂ ಬ್ರಹ್ಮಕ್ಕೂ ಕಾಣುವ ಭೇದಕ್ಕೆ ತನ್ನ ಅರಿವು ತನಗಿಲ್ಲದ್ದರಿಂದ ಹುಟ್ಟುಗಟ್ಟಿದ ದೇಹ ಮೊದಲಾದವುಗಳೆ ತಾನೆಂಬ ಸಂಬಂಧವೆ ಕಾರಣ. ಎರಡನೆಯದಿಲ್ಲದ ಬ್ರಹ್ಮದಲ್ಲಿ ಬ್ರಹ್ಮ, ಜೀವ-ಎಂಬ ಭೇದವನ್ನು ಮಾಡುವವರು ಸತ್ತು ಸತ್ತು ಹಣ್ಣಾಗುತ್ತಿರುತ್ತಾರೆ. —(ಮಾಂ ೪-೧೦)

(೫) ಬಹು ಕಡಿದಾದ ಬೆಟ್ಟದಮೇಲೆ ಬಿದ್ದ ಮಳೆಯ ನೀರು ತಗ್ಗಿಗೆ ಜಾರಿಬಿದ್ದು ಅತ್ತಿತ್ತ ಚೆಲ್ಲಿ ಹೋಗುವಂತೆ ಜೀವರುಗಳಲ್ಲಿ ಒಬ್ಬರಿಗೊಬ್ಬರು ಬೇರೆಯೆಂದು ಶರೀರಭೇದವನ್ನು ಹಿಡಿದು ನೋಡುವವರು ಈ ಶರೀರಭೇದದಂತೆ ತಾವೂ ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ, ಇನ್ನೊಂದರಿಂದ ಮತ್ತೊಂದಕ್ಕೆ-ಹೀಗೆ ಸಾಗುತ್ತ ಹಾಳಾಗುವರು. —(ಕ ೪-೧೪)

(೬) ಕಣ್ಣಿಗೆ ಕಾಣದಂಥ, ಬದಲಾವಣೆಯನ್ನು ಹೊಂದದಂಥ, ಶರೀರವಿಲ್ಲದಂಥ ಮತ್ತು ಹೀಗೆಂದು ಹೇಳುವದಕ್ಕೆ ಬರದಂಥ ಬ್ರಹ್ಮವನ್ನು ಆತ್ಮವೆಂದು ತಿಳಿದವನು ಎಲ್ಲ ಹೆದರಿಕೆಗಳನ್ನೂ ಕಳೆದುಕೊಳ್ಳುವನು. ಹಾಗಲ್ಲದೆ ತನ್ನ ಅರಿವು ತನಗಿಲ್ಲದೆ ಬ್ರಹ್ಮಕ್ಕಿಂತ ತಾನು ಬೇರೆಯೆಂದು ಎಳ್ಳಷ್ಟು ಭೇದವನ್ನು ಮಾಡಿದರೂ ಅವನು ಹೆದರಿಕೆಯನ್ನೆ ಮಡಿಲಿಗೆ ಹಾಕಿಕೊಳ್ಳುತ್ತಾನೆ. —(ತೈ ೨-೭)

# ೧೫—ಬಹು ದೊಡ್ಡ ಫಲ

## ಸ್ವ ರೂ ಪ

ತಾನು ಸುಖದುಃಖಗಳನ್ನು ಅನುಭವಿಸುವ ಜೀವನೆಂಬುದು ನಮಗೆ ಎಷ್ಟೋ ಜನ್ಮಗಳಿಂದ ಮೈಯುಂಡುಕೊಂಡು ಬಂದಿರುವದಷ್ಟೆ. ಆ ತಿಳಿವಳಿಕೆಯನ್ನು ಕಳೆದುಕೊಳ್ಳುವದಕ್ಕಾಗಿ ಹಿಂದೆ ಹೇಳಿದಂತೆ ನಾವು ನಮ್ಮ ಮನಸ್ಸಿನ ಓಟವನ್ನೆ ಬದಲಾಯಿಸಿಕೊಳ್ಳಬೇಕಾಗುತ್ತದೆ ಮತ್ತು ನಮ್ಮ ಮನಸ್ಸಿಗೆ ಸುಲಭವಾಗಿ ಒಗ್ಗದೆ ಇರುವ ಕರ್ಮ, ಭಕ್ತಿ, ಯೋಗ, ವಿಚಾರ-ಎಂಬ ದಾರಿಗಳ ಪಯಣವನ್ನು ಒಗ್ಗಿಸಿಕೊಂಡು ಮುಂದುವರಿಯಬೇಕಾಗುತ್ತದೆ. ಇದರಿಂದ ಜಿಟ್ಟವನ್ನು ಹಿಸುಕಿ ಪುಡಿಪುಡಿ ಮಾಡುವಷ್ಟು ಆಯಾಸವಾಗದೆ ಇರುವದಿಲ್ಲ. ಇಷ್ಟು ದೊಡ್ಡ ಆಯಾಸಕ್ಕೆ ಎಂಥ ಫಲವಿರಬಹುದೆಂದರೆ ಅದಕ್ಕೆ ತಕ್ಕದ್ದೇ ಇರುವದು. ಲೋಕದಲ್ಲಿ ಹಗುರವಾಗಿ ನಡೆಯುವ ಪ್ರಯತ್ನಕ್ಕೆ ದೊರೆಯುವ ಫಲವು ಹಗುರವಾದದ್ದೇ ಆಗಿರುವದು ; ಹೆಚ್ಚು ಆಯಾಸವಾಗುವ ಪ್ರಯತ್ನಕ್ಕೆ ದೊರೆಯುವ ಫಲವು ಹೆಚ್ಚು ಬೆಲೆಯುಳ್ಳದ್ದೇ ಆಗಿರುವದು. ತಾನು ಸುಖಸ್ವರೂಪವಾದ ಬ್ರಹ್ಮವೆಂಬ ಅರಿವನ್ನು ಪಡೆಯುವ ಪ್ರಯತ್ನದಲ್ಲಿ ಆಯಾಸವೂ ಬಹುದೊಡ್ಡದು ; ಫಲವೂ ಬಹುದೊಡ್ಡದಾಗಿ ಲೋಕದಲ್ಲಿ ಸಿಕ್ಕುವಂಥ ಎಲ್ಲ ಫಲಗಳನ್ನೂ ಅದರ ಮುಂದೆ ನಿವಾಳಿಸಿ ಒಗೆಯುವಂತಿರುವದು. ಅದು ಸಾಮಾನ್ಯವಾಗಿ ಮನುಷ್ಯನ ಊಹೆಗೆಕೂಡ ನಿಲುಕುವದಿಲ್ಲ. ಅದನ್ನು ವೇದವು ತಿಳಿಸಿಕೊಟ್ಟಿರುವದು. ಈ ಲೋಕದಲ್ಲಿ ಬಹು ಹೆಚ್ಚಿನ ಪುಣ್ಯಗಳನ್ನು ಮಾಡಿದ ಕೆಲವರು ಮಾತ್ರ ಅದನ್ನು ಅನುಭವಕ್ಕೆ ತಂದುಕೊಂಡಿರುವರು. ಅನೇಕರು ಈ ಪ್ರಯತ್ನದಿಂದ ಆಗುವ ಆಯಾಸವನ್ನು ಸಹಿಸಲಾರದೆ ಹೆದರಿಕೊಂಡು ಈ ಫಲಕ್ಕೆ ದೂರದಿಂದಲೆ ಕೈಮುಗಿದು ಹಗುರವಾದ ಪ್ರಯತ್ನಗಳನ್ನು ಮಾತ್ರ ಮಾಡಿ ಹಗುರವಾದ ಫಲಗಳನ್ನೆ ಪಡೆಯುತ್ತಿರುವರು. ಈ ಪ್ರಯತ್ನದ ಆಯಾಸವನ್ನು ಸಹಿಸುವ ಶಕ್ತಿಯನ್ನು ಪಡೆದಿರುವ ಮನುಷ್ಯನು ಅದನ್ನು ಉಪಯೋಗ ಮಾಡಿಕೊಳ್ಳದೆ ಹೋದರೆ ಅವನನ್ನು ದುರ್ದೈವಿಯೆಂದು ಅವನ ವಿಷಯದಲ್ಲಿ ಕನಿಕರ ಪಡಬೇಕಾಗಿರು

ವದು. ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆನ್ನುವವರು ಅಗತ್ಯವಾಗಿ ಈ ಆಯಾಸಕ್ಕೆ ತಲೆಗೊಡಬೇಕು. ಅವರ ಫಲದ ಒಳಮೈ ಸೊಗಸಿನ ಹೆಚ್ಚುಗಾರಿಕೆಯನ್ನು ತಿಳಿಸುವದಕ್ಕಂತು ಯಾವ ಭಾಷೆಯಲ್ಲಿಯೂ ಮಾತುಗಳೇ ಸಾಲವಾಗುವವು. ಅದು ಅಷ್ಟು ಹೆಚ್ಚಿನದು. ಅನು ಅನುಭವಿಸಿ ತಲೆದೂಗತಕ್ಕದ್ದೇ ಹೊರತು ಆಡಿತೋರಿಸುವದಕ್ಕೆ ಬರತಕ್ಕದ್ದಲ್ಲ. ಆ ಫಲದ ನೆರಳು ಮಾತ್ರ ಮನಸ್ಸಿಗೆ ಹೊಳೆಯುವಂತೆ ಅವರ ಹೊರಮೈಯ ರೂಪರೇಖೆಯನ್ನು ಗುರ್ತಿಸುವ ಕೆಲವು ಮಾತುಗಳು ಇಲ್ಲಿ ಹೇಳಲಾಗುವವು.

(ಅ) ಕೆಲವರು ಯಾವ ಆಕಾರವೂ ಇಲ್ಲದ್ದನ್ನು ಮನಸ್ಸಿನಿಂದ ಹಿಡಿಯಲಾರದೆ ಅದರ ಪ್ರತಿನಿಧಿಯಾಗಿ ಮನಸ್ಸನ್ನೋ ಸೂರ್ಯನನ್ನೋ ವಿಷ್ಣು ಮೊದಲಾದ ವಿಗ್ರಹವನ್ನೋ ಏನನ್ನಾದರೂ ಗುರಿಯಲ್ಲಿಟ್ಟುಕೊಂಡು ಅದನ್ನೆ ಬ್ರಹ್ಮವೆಂದು ಮನಸ್ಸಿನಲ್ಲಿ ಅಳಿದು ಹೊಯ್ಯುತ್ತಿರುವರು. ಮನಸ್ಸು ಮೊದಲಾದವುಗಳನ್ನು ಬ್ರಹ್ಮವೆಂದು ಉಪಾಸನೆ ಮಾಡಿದರೆ ಅತಿಥಿ ಮೊದಲಾದವರ ಉಪಾಸನೆ ಮಾಡಿದ್ದಕ್ಕೆ ಬ್ರಹ್ಮವು ಫಲವನ್ನು ಕೊಡುವಂತೆ ಮನಸ್ಸನ್ನು ಬ್ರಹ್ಮವೆಂಬ ಉಪಾಸನೆಗೂ ಬ್ರಹ್ಮವು ಫಲವನ್ನು ಕೊಡುವದು.—(ಸೂ ೪.೧-೪). (ಆ) ಹೀಗೆ ಪ್ರತಿನಿಧಿಯನ್ನು ಬ್ರಹ್ಮವೆಂದು ಉಪಾಸನೆ ಮಾಡುವಾಗ ಅವರ ಗುರಿಯು ಪ್ರತಿನಿಧಿಯ ಕಡೆ ಇರುವದರಿಂದ ಅವರು ಬ್ರಹ್ಮವನ್ನು ಉಪಾಸನೆ ಮಾಡಿದಂತೆ ಆಗುವದಿಲ್ಲ. ಆದ್ದರಿಂದಲೆ ಅವರಿಗೆ ಬ್ರಹ್ಮಲೋಕವು ದೊರೆಯುವದಿಲ್ಲ. ಆದರೂ ಅವರ ಉಪಾಸನೆಗೆ ತಕ್ಕ ಬೇರೆ ಯಾವ ಒಳ್ಳೆ ಗತಿ ದೊರೆಯುವದು. —(ಸೂ ೪-೩-೬) (ಇ) ಇದಲ್ಲದೆ ಬ್ರಹ್ಮದ ಉಪಾಸನೆಯಲ್ಲಿ ಇನ್ನೊಂದು ಬಗೆ ಇದೆ. ಬ್ರಹ್ಮವು ಸತ್ತ್ವ, ರಜ, ತಮ- ಎಂಬ ಯಾವದೊಂದು ಗುಣದ ಸೋಂಕೂ ಎಷ್ಟು ಮಾತ್ರವೂ ಇಲ್ಲದ್ದೆಂದು ಹಿಂದಿನ ಪ್ರಕರಣಗಳಿಂದ ಗೊತ್ತಾಗಿದೆಯಷ್ಟೆ. ಅದನ್ನು ನಿಲುಕಿಸಿಕೊಳ್ಳುವದಕ್ಕೆ ಏಳುವಷ್ಟು ಎದೆ ಗಟ್ಟಿಯಾಗಿಲ್ಲದ ಕೆಲವರು ಅದರಲ್ಲಿ ಒಂದೊಂದೋ ಕೆಲಕೆಲವೊ ಒಳ್ಳೊಳ್ಳೆ ಗುಣಗಳನ್ನು ಸೇರಿಸಿಕೊಂಡು ಆ ಸಗುಣಬ್ರಹ್ಮವನ್ನು ತಾವೆಂದು ಭಾವನೆಯನ್ನು ಮಾಡಿಕೊಳ್ಳುತ್ತಿರುವರು. ಅದಕ್ಕೂ ಉಪಾಸನೆಯೆಂದು ಹೆಸರು. ಅವರಿಗಿನ್ನೂ ತಾವು ಶುದ್ಧಬ್ರಹ್ಮ

ವೆಂಬ ಅರಿವು ಮೈಗೂಡಿರುವದಿಲ್ಲವಾದ್ದರಿಂದ ಅವರು ಬದುಕಿರುವಾಗಲೆ ಬ್ರಹ್ಮವಾಗಲರಿಯರು. ಸತ್ತ ಮೇಲೆ ಅವರು ಬ್ರಹ್ಮಲೋಕಕ್ಕೆ ಹೋಗುವರು. ಅದಕ್ಕಿಂತ ಉತ್ತಮವಾದ ಲೋಕವೇ ಇಲ್ಲ. ಅಲ್ಲಿಗೆ ಹೋದ ಮೇಲೆ ಅವರು ಅಲ್ಲಿಯೆ ಜ್ಞಾನವನ್ನು ಪಡೆದು ಬ್ರಹ್ಮವಾಗುವರು. ಬ್ರಹ್ಮಲೋಕದಲ್ಲಿರುವವನು ಸಗುಣಬ್ರಹ್ಮ. ಇವರಿಂದ ಉಪಾಸನೆಗೊಂಡವನು ಅವನೆ ಆದ್ದರಿಂದ ಅವನು ಇವರಿಗೆ ಹೆಚ್ಚಿನ ಗತಿ. ಸಗುಣಬ್ರಹ್ಮವನ್ನು ಉಪಾಸನೆ ಮಾಡಿದ್ದರಿಂದ ಅವರಿಗೆ ಸಗುಣಬ್ರಹ್ಮದ ಐಶ್ವರ್ಯವೆಲ್ಲ ಬರುವದು.—(ಸೂ ೪-೩-೬)

ಆ ಐಶ್ವರ್ಯವೇನೆಂದರೆ: ಅವರು ಮನಸ್ಸು ಮಾಡಿದರೂ ಸಾಕು; ಬೇರೆ ಯಾವ ಪ್ರಯತ್ನವೂ ಇಲ್ಲದೆ ಪಿತೃಗಳು ಅವರ ಬಳಿಗೆ ಬಂದು ನಿಲ್ಲುವರು. ಬ್ರಹ್ಮಲೋಕಕ್ಕೆ ಹೋದವನ ಮೇಲೆ ಬೇರೆ ಯಾರ ಒಡೆಯತನವೂ ನಡೆಯುವದಿಲ್ಲ. ಅವನು ಮನಸ್ಸು ಮಾಡಿದರೆ ಬೇಕುಬೇಕಾದ ಶರೀರಗಳನ್ನುಂಟುಮಾಡಿಕೊಂಡಾದರೂ ಭೋಗಿಸಬಹುದು; ಅಥವಾ ಶರೀರವೂ ಇಂದ್ರಿಯಗಳೂ ಇಲ್ಲದೆ ಕನಸಿನಲ್ಲಿ ಹೇಗೊ ಹಾಗೆ ಬರೀ ಮನಸ್ಸಿನಿಂದಲೆ ಭೋಗಿಸಲೂ ಬಹುದು. ಅವನು ಮನಸ್ಸು ಮಾಡಿದರೆ ಒಂದೇ ಕಾಲದಲ್ಲಿ ಅನೇಕ ಶರೀರಗಳನ್ನುಂಟುಮಾಡಿಕೊಂಡು, ಒಂದು ದೀಪವು ಅನೇಕ ಬತ್ತಿಗಳಲ್ಲಿ ಪ್ರವೇಶಿಸುವಂತೆ ಅವುಗಳೊಳಹೊಕ್ಕು ಸುಖಿಸಬಹುದು. ಉಪಾಸನೆಯನ್ನು ಮಾಡಿ ಬ್ರಹ್ಮಲೋಕಕ್ಕೆ ಹೋದವನಿಗೆ ಅಲ್ಲಿಯ ಸಗುಣಬ್ರಹ್ಮನಂತೆ ಜಗತ್ತನ್ನು ಹುಟ್ಟಿಸುವ, ಕಾಪಾಡುವ ಮತ್ತು ಕೊನೆಗಾಣಿಸುವ ವ್ಯವಹಾರದ ಹೊರತು ಅವನ ಉಳಿದ ಐಶ್ವರ್ಯಗಳೆಲ್ಲ ಸೂರೆ. ಜಗತ್ತನ್ನು ಹುಟ್ಟಿಸುವದು, ಕಾಪಾಡುವದು, ಕೊನೆಗಾಣಿಸುವದು-ಇವು ಮಾತ್ರ ಆ ಸಗುಣಬ್ರಹ್ಮ ಒಂದಕ್ಕೇ ಸರಿ. ಅದೂ ಈ ಉಪಾಸಕರಿಗೆ ಬಂದರೆ ಒಬ್ಬನು ಹುಟ್ಟಿಸಬೇಕೆನ್ನುವಾಗ ಇನ್ನೊಬ್ಬನು ಕೊನೆಗಾಣಿಸಬಹುದು. ಹೀಗೆ ಅವ್ಯವಸ್ಥೆಯಾಗುವದರಿಂದ ಆ ವ್ಯವಹಾರವು ಮಾತ್ರ ಸಗುಣಬ್ರಹ್ಮನಿಗೇ ಮೀಸಲು. ಆ ಲೋಕದ ಸುಖವನ್ನು ಅನುಭವಿಸುವ ವಿಷಯವು ಮಾತ್ರ ಸಗುಣಬ್ರಹ್ಮನಿಗೂ ಅವನ ಉಪಾಸಕರಿಗೂ ಸಮ. ಉಪಾಸಕರಿಗುಂಟಾಗುವ ಐಶ್ವರ್ಯದಲ್ಲಿ ಅವನವನ ಉಪಾಸನೆಯ ಬೆಲೆಗೆ ತಕ್ಕಂತೆ ಹೆಚ್ಚುಕಡಿಮೆಯೂ ಇರು

ವದು. ಆದರೂ ಅವರಿಗೆ ಅಲ್ಲಿಯ ಸಗುಣಬ್ರಹ್ಮನ ಅನುಗ್ರಹದಿಂದ ಜ್ಞಾನವಾಗಿ ಮೋಕ್ಷವಾಗುವದೇ ಹೊರತು ಮತ್ತೆ ಸಂಸಾರದಲ್ಲಿ ಹುಟ್ಟು ವಿಕೆಯೆಂಬುದಿಲ್ಲ.—(ಸೂ ೪-೪-೪..೨).

ಸಗುಣಬ್ರಹ್ಮವನ್ನು ಉಪಾಸನೆ ಮಾಡಿದವಂಗೆ ಸಿಕ್ಕುವ ಫಲವು ಕೂಡ ಇಷ್ಟು ದೊಡ್ಡದು. ಇನ್ನು ನಿರ್ಗುಣವೂ ನಿರಾಕಾರವೂ ಆದ ಬ್ರಹ್ಮವೆ ತಾನೆಂದು ಮನಗಂಡವರ ವಿಷಯವನ್ನು ಹೇಳುವದೇನು! ಅವರು ಈಗಲೆ, ಈ ದೇಹದಲ್ಲಿರುವಾಗಲೆ, ಬ್ರಹ್ಮ. ಅದಕ್ಕಿಂತ ಉತ್ತಮವೆಂಬುದಿನ್ನಿಲ್ಲವೇ ಇಲ್ಲ. ಅವರೂ ಮತ್ತೆ ಹುಟ್ಟುವರೆಂದರೆ ಅಡಿಗೆಗಾಗಿ ಮಾಡಬೇಕಾದದ್ದ ನ್ನೆಲ್ಲ ಮಾಡಿದರೂ ಅನ್ನವಾಗಲಿಲ್ಲವೆಂದಂತಾಗುತ್ತದೆ. ಉಂಡವನಿಗೆ ತೃಪ್ತಿ ಯಾಗುವ ವಿಷಯದಲ್ಲಿ ಹೇಗೆ ಸಂಶಯವಿಲ್ಲವೊ ಹಾಗೆ ಬ್ರಹ್ಮವನ್ನರಿತವನು ಮತ್ತೆ ಹುಟ್ಟಬಹುದೆಂಬ ಸಂಶಯವಿಲ್ಲ. ಆದರೂ ಈ ಸಂಶಯವನ್ನು ಹುಟ್ಟಿಸುವ ಕೆಲವು ಪ್ರಸಂಗಗಳಿವೆ. ಅಪಾಂತರತಮನೆಂಬ ವೇದಾಚಾ ರ್ಯನು ವಿಷ್ಣುವಿನ ಅಪ್ಪಣೆಯಂತೆ ಕೃಷ್ಣದ್ವೈಪಾಯನನಾಗಿ ಹುಟ್ಟಿದನೆಂದೂ ಬ್ರಹ್ಮನ ಮನಸ್ಸಿನಿಂದ ಹುಟ್ಟಿದ ವಸಿಷ್ಠನು ಒಬ್ಬರ ಶಾಪದಿಂದ ದೇಹ ವನ್ನು ಕಳೆದುಕೊಂಡು ಮತ್ತೆ ಬ್ರಹ್ಮನ ಅಪ್ಪಣೆಯಂತೆ ಮಿತ್ರಾವರುಣರ ಮಗನಾದನೆಂದೂ ಬ್ರಹ್ಮನ ಮನಸ್ಸಿನಿಂದಲೆ ಹುಟ್ಟಿದ ಭೃಗು ಮೊದ ಲಾದವರು ವರುಣನ ಯಜ್ಞದಲ್ಲಿ ಮತ್ತೆ ಕಾಣಿಸಿಕೊಂಡರೆಂದೂ ಬ್ರಹ್ಮನ ಮನಸ್ಸಿನಿಂದ ಹುಟ್ಟಿದ ಸನತ್ಕುಮಾರನು ಕೂಡ ಸ್ಕಂದನಾಗಿ ತೋರಿಕೊಂಡನೆಂದೂ ಹೀಗೆಯೇ ದಕ್ಷ, ನಾರದ-ಮೊದಲಾದವರೆಲ್ಲ ಎಷ್ಟೋ ದೇಹಗಳನ್ನು ತಳೆದರೆಂದೂ ಇತಿಹಾಸಪುರಾಣಗಳು ಹೇಳುತ್ತವೆ. ಕೆಲ ವರು ಒಂದು ದೇಹವು ಬಿದ್ದುಹೋದ ಮೇಲೆ ಇನ್ನೊಂದನ್ನು ಹೊಂದಿದ ರೆಂದೂ ಕೆಲವರು ಒಂದು ದೇಹವಿರುವಾಗಲೆ ಬೇರೆ ಅನೇಕ ದೇಹಗಳನ್ನು ಪಡೆದರೆಂದೂ ಶ್ರುತಿಯ ಮಂತ್ರಗಳಲ್ಲಿಯೂ ಕಾಣಬರುತ್ತದೆ. ಜ್ಞಾನಿಗ ಳಾದ ಇವರಿಗೆಲ್ಲ ಮತ್ತೆ ದೇಹವು ಗಂಟುಬಿದ್ದದ್ದೇಕೆಂದು ವಿಚಾರ ಉಂಟಾ ಗುತ್ತದೆ. ಅದಕ್ಕೆ ಸಮಾಧಾನವಿಲ್ಲದೆ ಇಲ್ಲ. ಇವರೆಲ್ಲರೂ ಜಗತ್ತಿನಲ್ಲಿ ಧರ್ಮವನ್ನು ಎತ್ತಿ ನಿಲ್ಲಿಸುವದಕ್ಕಾಗಿ ಈಶ್ವರನಿಗೆ ನೆರವಾಗುವ ಅಧಿಕಾರವನ್ನು

ಹೊಂದಿದವರು. ಅವರ ಯೋಗ್ಯತೆಯನ್ನು ನೋಡಿ ಈಶ್ವರನು ಅವರನ್ನು ತನ್ನ ಸಹಾಯಕ್ಕಿಟ್ಟುಕೊಂಡಿರುವನು. ಈಶ್ವರನು ಅಪ್ಪಣೆ ಮಾಡಿದಷ್ಟು ಕಾಲ ಅವರು ಹಾಗೆ ದೇಹವನ್ನು ಪಡೆಯುತ್ತಿದ್ದು ಆಮೇಲೆ ದೇಹದ ತೊಡಕನ್ನು ಕಳೆದುಕೊಳ್ಳುವರು. ಅವರು ಹೀಗೆ ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಪಡೆಯುತ್ತಿದ್ದರೂ ಅವರ ಆ ಹುಟ್ಟು ಮನೆಯಿಂದ ಮನೆಗೆ ನಾವು ನಮ್ಮ ಮನಬಂದಂತೆ ಹೋಗುವ ಹಾಗಿರುವದೇ ಹೊರತು ಅವರ ಸ್ಮರಣೆಗೇನೂ ಭಂಗವಿಲ್ಲ. ಹೀಗೆ ಅವರು ಈಶ್ವರನ ಅಪ್ಪಣೆಯನ್ನು ತಲೆಯಲ್ಲಿ ಹೊತ್ತು ಜಗತ್ತಿನ ಹಿತಕ್ಕಾಗಿ ದೇಹವನ್ನು ಧರಿಸುವರೆ ಹೊರತು ಕರ್ಮದ ಫಲವಾದ ಹುಟ್ಟುವಿಕೆ ಅವರಿಗಿಲ್ಲ. ಏಕೆಂದರೆ: ಜ್ಞಾನದಿಂದ ಅವರ ಕರ್ಮವೆಲ್ಲ ಸುಟ್ಟು ಬೂದಿಯಾಗಿರುತ್ತದೆ. —(ಸೂ ೩-೩-೩೨)

ಯಾರಿಗೆ ತಾನು ಬ್ರಹ್ಮವೆಂಬ ಅರಿವಾಗುವದೊ ಅವನು ಅದಕ್ಕೆ ಮೊದಲು ಜಗತ್ತಿಗೆಲ್ಲ ಮೇಲುಸಜ್ಜೆಯಾಗಿದ್ದ ಮಹಾಪಾತಕಿಯಾದರೂ ಅವನ ಪಾಪಗಳೆಲ್ಲ ಹೇಳುವದಕ್ಕೆ ಹೆಸರಿಲ್ಲದಂತಾಗುವವು. ಪಾಪವೆಂಬ ಸಮುದ್ರಕ್ಕೆ ಬ್ರಹ್ಮಜ್ಞಾನವೇ ಹಡಗು. ಪಾಪವನ್ನಡಗಿಸುವದಕ್ಕೆಂದು ಶಾಸ್ತ್ರವು ಎಷ್ಟೋ ಪ್ರಾಯಶ್ಚಿತ್ತಗಳನ್ನು ಹೇಳಿರುವದು. ಆ ಪ್ರಾಯಶ್ಚಿತ್ತಗಳೆಲ್ಲ ಆ ಪಾಪಗಳನ್ನು ತಳಕ್ಕೆ ತುಳಿಯಬಲ್ಲವೆ ಹೊರತು ತನ್ನ ಭಾಗಕ್ಕೆ ಎಂದೆಂದಿಗೂ ಇಲ್ಲದಂತೆ ಮಾಡಲಾರವು. ಬ್ರಹ್ಮಜ್ಞಾನವು ಹಾಗಲ್ಲ. ಯಾರಿಗೆ ಅದು ಹುಟ್ಟುವದೊ ಅವರಿಗೆ ಆ ಪಾಪಗಳ ಸಂಬಂಧವೆ ಕಡಿದು ಹೋಗುವದು. ಇನ್ನೆಂದೆಂದೂ ಅವು ಅವರ ಮುಂದೆ ತಲೆ ಎತ್ತುವ ಹಾಗಿಲ್ಲ. ಚೆನ್ನಾಗಿ ಉರಿಗೊಳಿಸಿದ ಬೆಂಕಿಯು ಕಟ್ಟಿಗೆಯನ್ನೆಲ್ಲ ಸುಟ್ಟು ಬೂದಿಮಾಡುವಂತೆ ಬ್ರಹ್ಮಜ್ಞಾನವೆಂಬ ಬೆಂಕಿಯು ಹಿಂದೆ ಮಾಡಿದ ಪಾಪಪುಣ್ಯಗಳನ್ನು ಮಾತ್ರವೆ ಅಲ್ಲದೆ ಮುಂದಿನವುಗಳನ್ನು ಕೂಡ ಏಳಗೊಡದಂತೆ ಮಾಡುವದು. ಜಗತ್ತಿನಲ್ಲಿ ಬ್ರಹ್ಮಜ್ಞಾನಕ್ಕೆ ಸಮಾನವಾದ ಪವಿತ್ರವಾದ ವಸ್ತು ಇನ್ನೊಂದಿಲ್ಲ. ಕರ್ಮ, ಭಕ್ತಿ, ಯೋಗ, ವಿಚಾರ-ಇವುಗಳನ್ನೆಲ್ಲ ಚೆನ್ನಾಗಿ ಮೈಗೂಡಿಸಿಕೊಂಡು ತಮ್ಮ ಯೋಗ್ಯತೆಯನ್ನು ಬೆಳೆಸಿಕೊಂಡವರು ಎಷ್ಟೋ ಕಾಲದ

ಮೇಲೆ ಅದನ್ನು ಪಡೆಯುವರು. ಈ ಜ್ಞಾನವನ್ನು ಪಡೆದಾಗ ಮೋಕ್ಷ ವೆಂಬುದು ತನ್ನ ಹಿಡಿಯಲ್ಲಿಯೇ ತೋರಿಕೊಳ್ಳುವದು.

—(ಭ ೪-೩೬..೩೯)

ಲೋಕದಲ್ಲಿ ಪ್ರಾಣಿಗಳೂ ವಸ್ತುಗಳೂ ಬಗೆಬಗೆಯಾಗಿ ಅನೇಕವಾಗಿ ತೋರುವವಷ್ಟೆ. ಇವೆಲ್ಲಕ್ಕೂ ಒಂದು ಆಧಾರವಿರಬೇಕು. ಎರಡೆಂಬುದು ಮೊದಲುಗೊಂಡು ಕೊನೆ ಇಲ್ಲದಷ್ಟು ಸಂಖ್ಯೆಗಳೆಲ್ಲ ಒಂದೆಂಬ ಸಂಖ್ಯೆಯ ತೊಡೆಯ ಮೇಲೆ ಆಡುತ್ತಿರುವವು. ಅದರಂತೆ ಪ್ರಪಂಚದಲ್ಲಿ ಕಾಣುವ ಅನೇಕ ವಸ್ತುಗಳಿಗೆಲ್ಲ ಒಂದೇ ಒಂದು ತೊಟ್ಟಿಲು ಬೇಕು. ಹಾಗೆ ಇದ್ದೂ ಇದೆ. ಅದೆ ಬ್ರಹ್ಮ. ಅವನ್ನು ಶಾಸ್ತ್ರದಿಂದಲೂ ಗುರುಗಳ ಉಪದೇಶದಿಂದಲೂ ಮನಗಾಣಬೇಕು. ಆಗ ಜಗತ್ತೆಲ್ಲವೂ ತನ್ನ ಆತ್ಮವೇ ಎಂದು ಕಣ್ಣಿಗೆ ಕಟ್ಟಿದಂತಾಗುವದು. ಹೀಗಾಗುವಾಗ ಅವನು ಬ್ರಹ್ಮವೇ ಆಗಿರುವನು.

—(ಭ ೧೩-೩೦)

ಒಳ್ಳೆಯದಕ್ಕೆ ಅನೇಕ ಅಡಚಣೆಗಳು ಬರುವವನ್ನು ನೋಡಿದರೆ ತನ್ನ ಆತ್ಮವೇ ಬ್ರಹ್ಮವೆಂದು ತಿಳಿದರೂ ದೇವತೆಗಳೇ ಮೊದಲಾದವರು ತಮ್ಮ ಪದವಿಗಿಂತ ಇವನು ಮೇಲಕ್ಕೇರುವನೆಂದು ಅವನ ಮೋಕ್ಷಕ್ಕೇನಾದರೂ ಅಡಚಣೆಯನ್ನು ತಂದೊಡ್ಡಬಹುದೆಂದು ಸಂಶಯ ಉಂಟಾಗಬಹುದು. ಅವನು ಆ ಜ್ಞಾನವನ್ನು ಪಡೆಯುವದಕ್ಕಾಗಿ ಧ್ಯಾನ ಮೊದಲಾದ ಸಾಧನಗಳನ್ನು ನಡೆಸಿದಾಗಲೆ ಅಂಥ ಅಡಚಣೆಗಳೆಲ್ಲ ದಿಕ್ಕುಗೆಟ್ಟು ಹೋಗಿರುವವು. ಅದ್ದರಿಂದ ತಾನು ಬ್ರಹ್ಮವೆಂಬ ಅರಿವು ಆಗುವದೊಂದೇ ತಡ ; ಅವನು ಬ್ರಹ್ಮವೆ ಆಗುತ್ತಾನೆ. ಅವನು ಬ್ರಹ್ಮವಾಗುವದಕ್ಕೆ ದೇವತೆಗಳೂ ತಡೆಯನ್ನುಂಟು ಮಾಡಲಾರರು. ಏಕೆಂದರೆ: ಅವನು ದೇವತೆಗಳಿಗೂ ಆತ್ಮವೇ ಆಗಿರುವನು. ಹೀಗೆ ಅವನೊಬ್ಬನು ಬ್ರಹ್ಮವಾಗುವದು ಮಾತ್ರವೇ ಅಲ್ಲದೆ ಅವನ ಮನೆತನದಲ್ಲಿ ಬ್ರಹ್ಮವನ್ನರಿಯದವರು ಹುಟ್ಟುವದೇ ಇಲ್ಲ. ಏನೇನನ್ನೊ ಬಯಸುವದರಿಂದ ಮನಸ್ಸಿಗಾಗುವ ಸಂತಾಪವನ್ನು ಅವನು ಬದುಕಿರುವಾಗಲೆ ದಾಟಿರುವನು. ಅವನು ಪಾಪಪುಣ್ಯಗಳ ಕಣ್ಣಿಯನ್ನು ಸಂಪೂರ್ಣವಾಗಿ ಕಳಚಿಕೊಂಡಿರುವನು.

—(ಮುಂ ೩-೨-೯)

ತನಗೆರಡನೆಯದೆಂಬ ಯಾವದೂ ಇಲ್ಲದೆ ತಾನು ಎಲ್ಲೆಲ್ಲಿಯೂ ತುಂಬಿಕೊಂಡಿರುವ ಸುಖಸ್ವರೂಪನೆಂದು ನೋಡುವವನು ತಿಳಿನೀರಿಗೆ ತಿಳಿನೀರು ಸೇರಿದರೆ ಹೇಗೊ ಹಾಗೆ ತಾನು ಬ್ರಹ್ಮದೊಡನೆ ಒಂದಾಗಿರುವನು. ಆದ್ದರಿಂದ ಎಲ್ಲವೂ ನಿಜವಾಗಿ ಬೇರೆಬೇರೆಯೆಂದು ಹುರುಳಿಲ್ಲದ ಒಣಮಾತುಗಳ ಅಂಗಡಿಯನ್ನು ಹೂಡುವವರನ್ನೂ ಜಗತ್ತಿಗೆ ಬ್ರಹ್ಮವೆಂಬೊಂದಾಧಾರವಿಲ್ಲದೆ ಅದು ತ್ರಿಶಂಕುಸ್ವರ್ಗದಂತೆ ಅಂತರಾಳದಲ್ಲಿ ನೇತಾಡುತ್ತಿರುವದೆನ್ನುವವರನ್ನೂ ದೂರದಲ್ಲಿಯೇ ಕೈಬಿಟ್ಟು ತಂದೆತಾಯಿಗಳಿಗಿಂತ ಸಾವಿರಪಾಲು ಹೆಚ್ಚಾಗಿ ನಮ್ಮ ಹಿತವನ್ನು ಬಯಸುವಂಥ ವೇದವು ತಿಳಿಸುವಂತೆ ತನ್ನ ಆತ್ಮವು ಬ್ರಹ್ಮವೆಂಬ ಅರ್ಥಕ್ಕೆ ಮನ್ನಣೆಯನ್ನು ಕೊಡಬೇಕು. —(ಕ ೪-೧೫)

ಆತ್ಮ ಒಂದೇ ನಿಜವೆಂಬ ಅರಿವಾಗುತ್ತಲೆ ಸುಳ್ಳಾದ ಹೊರಗಣದೇನನ್ನೂ ಮನಸ್ಸಿಗೆ ತೆಗೆದುಕೊಳ್ಳದೆ ಹೋಗುವದರಿಂದ ಕಟ್ಟಿಗೆ ಇಲ್ಲದ ಬೆಂಕಿಯು ಹಾಗೆಯೇ ತಣ್ಣಗಾಗುವಂತೆ ಮನಸ್ಸು ತನ್ನ ಅಲ್ಲಾಟವನ್ನು ಬಿಟ್ಟು ಸುಮ್ಮನಾಗುವದು. ಅಲ್ಲಾಡಿದರೆ ಮಾತ್ರ ಮನಸ್ಸು. ಅಲ್ಲಾಡದೆ ಹೋದರೆ ಅದು ಮನಸ್ಸೇ ಅಲ್ಲ. ಅದು ಬ್ರಹ್ಮವೆ. ಜಗತ್ತೆಲ್ಲ ಮನಸ್ಸಿನ ಅಲ್ಲಾಟದಿಂದ. ಅದು ತನ್ನ ಅಲ್ಲಾಟವನ್ನು ಬಿಟ್ಟರೆ ಜಗತ್ತಿಗೆ ಉಳಿವೇ ಇಲ್ಲ. ಹೀಗೆ ಎರಡನೆಯದನ್ನು ಮನಸ್ಸಿಗೆ ಬಿಟ್ಟುಕೊಳ್ಳದ ವಿವೇಕಿಯ ಸ್ಥಿತಿಯು ತನಿನಿದ್ರೆಯಂತಿರುವದು. ತನಿನಿದ್ರೆಯಲ್ಲಿಯೂ ಎರಡನೆಯದಿಲ್ಲ; ಇವನಿಗೂ ಎರಡನೆಯದಿಲ್ಲ. ಆದರೆ ತನಿನಿದ್ರೆಯಲ್ಲಿ ತನ್ನ ಅರಿವು ತನಗಿಲ್ಲದ್ದರಿಂದ ಅನೇಕ ಕೆಟ್ಟವಾಸನೆಗಳು ಮೈ ಉಡುಗಿಸಿಕೊಂಡು ಅವನ ಮನಸ್ಸಿನಲ್ಲಿ ಅಡಗಿರುವವು. ಆತ್ಮ ಒಂದೇ ನಿಜವೆಂದು ಅರಿತವನಲ್ಲಿ ಅವನ ಆ ಅರಿವೆಂಬ ಬೆಂಕಿಯಿಂದ ಆ ವಾಸನೆಗಳ ಬೀಜಗಳೆಲ್ಲ ಸುಟ್ಟುಹೋಗಿರುವವು. ಇದೇ ತನಿನಿದ್ರೆಯವನಿಗೂ ಬ್ರಹ್ಮಜ್ಞಾನಿಗೂ ಭೇದ. ತನ್ನನ್ನು ತಾನು ಅರಿಯದ್ದರಿಂದ ಏನೇನನ್ನೊ ಹುಟ್ಟುಗಟ್ಟುತ್ತಿದ್ದ ಹೊಲಸೆಲ್ಲ ತೊಳೆದು ಹೋಗುತ್ತಲೆ ಅವನು ಬ್ರಹ್ಮವೆ ಆಗುತ್ತಾನೆ. ಎರಡನೆಯದೆಂಬುದೇ ಹೆದರಿಕೆಯ ಬೀಜ. ಎರಡನೆಯದಿಲ್ಲವಾಗುತ್ತಲೆ ಹೆದರಿಕೆಯ ಬೀಜವು ಇಲ್ಲವಾಗುವದು.

—(ಮಾಂ ೩-೩೪,೩೫)

## ಅದ್ವೈತವೇ ಮಂಗಲ

ಆತ್ಮನು ತಾನೊಬ್ಬನು ನಿಜವಾಗಿದ್ದುಕೊಂಡು, ನಿಜವಾಗಿರುವ ಹಗ್ಗವು ಸುಳ್ಳು ಹಾವನ್ನೂ ಕೋಲನ್ನೂ ನೀರ ಕೋಡಿಯನ್ನೂ ಹೂವಿನ ಮಾಲೆಯನ್ನೂ ಹುಟ್ಟುಗಟ್ಟುವಂತೆ, ಪ್ರಾಣ ಮೊದಲಾದ ಸುಳ್ಳಾದವುಗಳನ್ನು ಹುಟ್ಟುಗಟ್ಟುವನಷ್ಟೆ. ಬುಡದಲ್ಲಿ ನಿಜವಾದ ಏನಾದರೊಂದಿಲ್ಲದೆ ಸುಳ್ಳಾದವುಗಳನ್ನು ಹುಟ್ಟುಗಟ್ಟುವದೇ ಆಗುವದಿಲ್ಲ. ಹೀಗೆ ಸುಳ್ಳಾದವುಗಳನ್ನು ಹುಟ್ಟುಗಟ್ಟಿದಾಗಲೂ ಬುಡದಲ್ಲಿರುವ ನಿಜವಾದವ್ವರಲ್ಲಿ ಏನೇನೂ ಬದಲಾವಣೆಯಾಗಿರುವದಿಲ್ಲ. ಆದ್ದರಿಂದ ಎರಡನೆಯದೆಂಬುದಿಲ್ಲದ ಸ್ಥಿತಿಯೇ ಮಂಗಲಕರವು. ಹುಟ್ಟುಗಟ್ಟಿದ್ದು ಮಾತ್ರ ಅಮಂಗಲ. ಏಕೆಂದರೆ: ಹುಟ್ಟುಗಟ್ಟಿದ ಹಾವು ಮೊದಲಾದವುಗಳು ಭಯವನ್ನುಂಟುಮಾಡುವವು. ಎರಡನೆಯದೆಂಬುದಿಲ್ಲದಿದ್ದರೆ ಹೆದರಿಕೆಯ ಸೆಲೆ ಇರುವದಿಲ್ಲ. ಆದ್ದರಿಂದ ಅದೇ ಮಂಗಲ. —(ಮಾಂ ೨-೩೩)

ಎರಡನೆಯದರ ಸಂಬಂಧವನ್ನೆ ತೀರ ತೊರೆದಂಥ ಈ ಸ್ಥಿತಿಯ ವಿಷಯವು ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿರುವದು. ವೇದಾಂತಶಾಸ್ತ್ರದ ತಿಳಿವಳಿಕೆ ಇಲ್ಲದವರಿಗೆ ಇದರ ಸವಿ ತೋರುವದು ಕಷ್ಟ. ತನ್ನ ಆತ್ಮ ಒಂದೇ ನಿಜವಾದದ್ದೆಂಬ ಅರಿವು ಉಳ್ಳವರಿಗೆ ಮಾತ್ರ ಇದು ಮೀಸಲು. ಇದರಲ್ಲಿ ಹೆದರಿಕೆಯ ಸೆಲೆ ಇಲ್ಲದಿದ್ದರೂ ಅವಿವೇಕಿಗಳು ಇಂಥ ಸ್ಥಿತಿಯನ್ನು ತಾವು ಪಡೆದರೆ ತಾವೆ ಎಲ್ಲಿ ನಾಶವಾಗುವೆವೂ ಎಂದು ಬೆಚ್ಚಿಬೀಳುವರು.

—(ಮಾಂ ೩-೩೯)

ಭಗವಂತನೆಂದರೆ ಯಾವದೋ ಒಂದಾನೊಂದು ವಿಗ್ರಹಮಾತ್ರವೆಂದೂ ಆ ಬೊಂಬೆಯನ್ನು ಬಿಟ್ಟು ಬೇರೊಬ್ಬ ಈಶ್ವರನಿಲ್ಲವೆಂದೂ ತಿಳಿದುಕೊಂಡು ಅದು ಯುಕ್ತಿಗೆ ಹೊಂದುವದೋ ಇಲ್ಲವೋ ಎಂಬದನ್ನು ನೋಡಿಕೊಳ್ಳದೆ ಕ್ಷುದ್ರವೂ ಸುಳ್ಳೂ ಆದದ್ದನ್ನು ತಿಳಿಯುವ ತಿಳಿವು ತಾಮಸ. ಆತ್ಮನು ಒಂದೊಂದು ದೇಹಕ್ಕೊಬ್ಬೊಬ್ಬನು ಬೇರೆಬೇರೆಯಾಗಿರುವನೆಂದು ತಿಳಿಯುವ ತಿಳಿವು ರಾಜಸ. ನಾಲ್ಕು ಮುಖದ ಬ್ರಹ್ಮನನ್ನು ಮೊದಲು ಮಾಡಿಕೊಂಡು ಒಂದು ಹುಲ್ಲು ಕಡ್ಡಿಯವರೆಗೂ ಎಲ್ಲೆಲ್ಲಿಯೂ ಬ್ರಹ್ಮವೆಂಬ

ಒಂದೇ ವಸ್ತು ಎಂದೆಂದಿಗೂ ಬದಲಾವಣೆಯನ್ನು ಹೊಂದದೆ ಇರುವದೆಂದೂ ದೇಹಗಳು ಬೇರೆಬೇರೆಯಾದರೂ ಅವುಗಳೊಳಗಿರುವ ಆತ್ಮವಸ್ತು ಆಕಾಶದಂತೆ ಒಂದೇ ಎಂದೂ ತಿಳಿಯುವ ತಿಳಿವು ಸಾತ್ತ್ವಿಕ—(ಭ ೧೮-೨೦..೨೨)

ಶುದ್ಧ ಸತ್ತ್ವಗುಣದವರಿಂದ ಮಾತ್ರ ತಿಳಿಯಲಾಗುವ ಈ ಅದ್ವೈತ ಸ್ಥಿತಿಗೆ, ಎಂದರೆ ಎರಡನೆಯದಿಲ್ಲದಿರುವಿಕೆಗೆ, ನಮ್ಮ ದೇಶವೇ ತೌರು ಮನೆ. ಇತರ ದೇಶದವರು ತಮ್ಮ ಬುದ್ಧಿಯನ್ನು ನಮಗಿಂತ ಹೆಚ್ಚು ಬೆಳೆಸಿಕೊಂಡಿದ್ದರೂ ನಮ್ಮ ಹಿರಿಯರು ತಮ್ಮ ಸಾತ್ತ್ವಿಕಪ್ರಭಾವದಿಂದ ತಾವು ಅನುಭವಿಸಿ ನಮ್ಮ ಮುಂದೆ ಹಿಡಿದಿರುವ ಇದನ್ನು ಇನ್ನೂ ಗ್ರಹಿಸುವದಕ್ಕೆ ಕೂಡ ಅಸಮರ್ಥರಾಗಿರುವರು. ಲೋಕದಲ್ಲಿ ದಿನದಿನಕ್ಕೆ ರಜಸ್ತಮೋಗುಣಗಳು ಹೆಚ್ಚುತ್ತಿರುವದರಿಂದ ದ್ವೈತಮತಗಳೇ, ಎಂದರೆ ಎರಡನೆಯವುಗಳ ಇರುವಿಕೆಯನ್ನೊಪ್ಪುವ ದಾರಿಯವರೆ, ಹೆಚ್ಚುತ್ತಿರುವರು. ಎರಡನೆಯವುಗಳ ಇರುವಿಕೆಗೆ ಶ್ರುತಿಯ ಬೆಂಬಲವಿಲ್ಲದ್ದರಿಂದ ಅದು ಬರೀ ಬುದ್ಧಿಯ ಬಲದ ಮೇಲೆ ನಿಲ್ಲಬೇಕಾಗಿರುವದು. ಆದ್ದರಿಂದಲೆ ಬೇರೆಬೇರೆ ಬುದ್ಧಿಶಾಲಿಗಳು ಅದಕ್ಕೆ ಬೇರೆಬೇರೆ ಸ್ವರೂಪವನ್ನು ಕೊಟ್ಟು ನಿಲ್ಲಿಸಿರುವರು. ಹಾಗಾಗಿರುವದೇ ಅದರಲ್ಲಿ ಹುರುಳಿಲ್ಲವೆಂದು ತೋರಿಸುವದು. ಅದಕ್ಕೆ ಒಂದು ಸ್ವರೂಪವಿದ್ದೀತೇ ಹೊರತು ಬೇರೆಬೇರೆಯವರು ಹೇಳುವ ಬಗೆಬಗೆಯ ಸ್ವರೂಪಗಳು ಇರುವದು ಶಕ್ಯವಿಲ್ಲ. ಆದ್ದರಿಂದ ಯಾರೇ ಆಗಲಿ ದ್ವೈತಕ್ಕೆ ಇಕ್ಕಟ್ಟಾಗಿಯೋ ಬಿಕ್ಕಟ್ಟಾಗಿಯೋ ಮುಕ್ಕಟ್ಟಾಗಿಯೋ ಅಥವಾ ಕಟ್ಟುಹರಿದ ಪಂಜಾಗಿಯೋ ಇರುವ ಯಾವ ಸ್ವರೂಪವನ್ನು ಪ್ರತಿಪಾದಿಸಿದರೂ ಅದು ಹತ್ತರ ಜೊತೆಯ ಹನ್ನೊಂದನೆಯದಾಗುವದೇ ಹೊರತು ಹೆಚ್ಚುಗಾರಿಕೆಯದಾಗುವದಿಲ್ಲ. ಹೆಚ್ಚುಗಾರಿಕೆಗಳೆಲ್ಲ ಅದ್ವೈತಕ್ಕೇ ಮೀಸಲು.

## ಹೆಚ್ಚುಗಾರಿಕೆಗಳು

ಯಾರ ಯಾರ ಮೇಲೆಯೂ ಇದಕ್ಕೆ ಹಗೆತನವಿಲ್ಲದಿರುವದೊಂದು ಹೆಚ್ಚುಗಾರಿಕೆ. ಎರಡನೆಯವರ ಸೋಂಕಿಲ್ಲದ ಸ್ಥಿತಿಯು ಅದ್ವೈತವೆಂದೂ ಎರಡನೆಯವೆಲ್ಲ ನಿಜವೆಂಬ ಸ್ಥಿತಿಯು ದ್ವೈತವೆಂದೂ ಲೋಕದಲ್ಲಿ ಹೆಸರುಗೊಂಡಿರುವದು. ಹಗೆತನವೆಂಬುದೆಲ್ಲ ದ್ವೈತಕ್ಕೆ ಧಾರೆಯೆರೆದ ಮಾತು.

ದ್ವೈತದಲ್ಲಿ ಒಕ್ಕಟ್ಟಿಲ್ಲ. ಆತ್ಮನ ನಿಜಸ್ಥಿತಿಯ ಬೋಧವನ್ನು ಚೆನ್ನಾಗಿ ಅಲ್ಲಾಡಿಸಿ ವಿಚಾರ ಮಾಡುವಷ್ಟು ತಾಳಿಮೆ ಇಲ್ಲದ ಈ ಕಾಲದಲ್ಲಂತು ದ್ವೈತಿಗಳ ಸಂಖ್ಯೆಯೇ ಹೆಚ್ಚು. ಆದರೆ ದ್ವೈತಸಿದಾಂತವೇನೆಂಬುದನ್ನು ನೋಡಹೋದರೆ ತಲೆಗೊಂದು ಮಾತಾಗುವದು. ಯಾರಯಾರಿಗೆ ಏನೇನು ಹೊಳೆಯುತ್ತಮೊ ಅವರವರಿಗೆ ಅವೇ ಸಿದ್ಧಾಂತ. ಹೀಗಾಗುತ್ತ ಬಂದು ದ್ವೈತಸಿದ್ಧಾಂತವು ನೆಲೆಗೆ ನಿಲ್ಲದೆ ಹೋಗಿರುವದು. ಜೀವನ ವಿಷಯವನ್ನು ತೆಗೆದುಕೊಂಡರೆ ದೇಹವೇ ಜೀವವೆಂದೊಬ್ಬರು; ಜೀವವು ಈಶ್ವರನ ದೇಹವೆಂದು ಇನ್ನೊಬ್ಬರು; ಜೀವರು ಈಶ್ವರನ ಆಡಿಯಾಳೆಂದು ಮತ್ತೊಬ್ಬರು; ಜೀವರು ಒಬ್ಬರಿಗೊಬ್ಬರು ಬೇರೆಯಾದರೂ ಈಶ್ವರನಿಗಿಂತ ಬೇರೆಯಲ್ಲವೆಂದು ಮಗದೊಬ್ಬರು. ಈಶ್ವರನ ವಿಷಯವನ್ನು ತೆಗೆದುಕೊಂಡರೆ ರಾಜನ ಹೊರತು ಈಶ್ವರನೆಂಬೊಬ್ಬ ಬೇರೆ ಇಲ್ಲವೆಂದೊಬ್ಬರು; ಅವನು ಸಗುಣನಾಗಿ ಬೇರೆ ಇದ್ದಾನೆಂದು ಇನ್ನೊಬ್ಬರು; ಅವನು ಬರೀ ತನ್ನ ಇಚ್ಛೆಯಿಂದ ಸೃಷ್ಟಿಸುವನೆಂದು ಮತ್ತೊಬ್ಬರು; ಜೀವರ ಕರ್ಮಕ್ಕನುಗುಣವಾಗಿ ಸೃಷ್ಟಿಸುವನೆಂದು ಮಗದೊಬ್ಬರು. ಜಗತ್ತಿನ ವಿಷಯುವನ್ನು ತೆಗೆದುಕೊಂಡರೆ ಕಾಣುವದೆಲ್ಲ ಕಾಣುವಂತೆ ನಿಜವೆಂದೊಬ್ಬರು; ಕಾಣುವ ಯಾವದೂ ಇಲ್ಲವೆಂದೂ ಇದ್ದರೂ ಕ್ಷಣಿಕವೆಂದೂ ಇನ್ನೊಬ್ಬರು; ಇದೆಯೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕೆ ಬರುವದಿಲ್ಲವೆಂದು ಮತ್ತೊಬ್ಬರು; ಜಗತ್ತೂ ಜೀವರೂ ಪರಮಾತ್ಮನ ಶರೀರವೆಂದು ಮಗದೊಬ್ಬರು; ಎಲ್ಲವೂ ಎಂದೆಂದಿಗೂ ಬೇರೆ ಬೇರೆಯೆಂದು ಬೇರೊಬ್ಬರು. ಮೋಕ್ಷದ ವಿಷಯವನ್ನು ತೆಗೆದುಕೊಂಡರೆ ಮರಣವೆ ಮೋಕ್ಷವೆಂದೊಬ್ಬರು; ಯಾವದೂ ಇಲ್ಲವೆಂಬ ವಾಸನೆಯೇ ಮೋಕ್ಷವೆಂದು ಇನ್ನೊಬ್ಬರು; ಯಾವಾಗಲೂ ಮೇಲಕ್ಕೆ ಹೋಗುತ್ತಿರುವದೇ ಮೋಕ್ಷವೆಂದು ಮತ್ತೊಬ್ಬರು; ಈಶ್ವರನನ್ನು ಸೇವಿಸುತ್ತಿರುವದೇ ಮೋಕ್ಷವೆಂದು ಮಗದೊಬ್ಬರು. ಹೀಗೆ ತಮತಮಗೆ ತೋರುವ ಸಿದ್ಧಾಂತವೆ ನೆಲೆಗೆ ನಿಂತದ್ದೆಂಬ ದುರಾಗ್ರಹಪಿಶಾಚಿಯು ಎಲ್ಲರ ಮೇಲೆಯೂ ತನ್ನ ಕುಣಿತವನ್ನು ತೋರುತ್ತಿರುವದು. ತಮ್ಮ ತಮ್ಮ ಬುದ್ಧಿಯೆಂಬ ಊರುಗೋಲಿನ ಬಲದ ಮೇಲೆ ನಿಂತುಕೊಂಡಿರುವ ದ್ವೈತಮತದವರೆಲ್ಲರೂ ವೇದವೆಂಬ ಊರುಗೋಲಿನ

ಬಲದ ಮೇಲೆ ನಿಂತುಕೊಂಡಿರುವ ಅದ್ವೈತದವರ ಮೇಲೆ ಭೋರ್ಗರೆಯು ವದು ನಿಜ. ಹೀಗೆ ದ್ವೈತದವರು ಹಗೆತನವನ್ನು ತೋರಿಸಿದರೂ ಅದ್ವೈತ ದವರಿಗೆ ಅವರ ಮೇಲೆ ಹಗೆತನವಿಲ್ಲ. ಏಕೆಂದರೆ: ದ್ವೈತವೆಂಬುದು ಅದ್ವೈತದ ಮೇಲೆಯೇ ಹುಟ್ಟುಗಟ್ಟಿದ್ದು. ಈಗ ಇರುವ ದ್ವೈತಗಳ ಜೊತೆಗೆ ಇನ್ನೂ ಲೆಕ್ಕವಿಲ್ಲದಷ್ಟು ಹೊಸ ಹೊಸ ದ್ವೈತಗಳು ಹೊರಟರೂ ಅವೆಲ್ಲ ಅದ್ವೈತದ ಒಂದು ಕೂದಲ ಗುಂಡಿಯಲ್ಲಿ ಎದ್ದು ಕಾಣುವವುಗಳೇ ಆಗಿರುವವು. ತನ್ನಲ್ಲಿ ಎದ್ದು ಕಾಣುವದರ ಮೇಲೆ ತಾನು ಹಗೆತನವನ್ನು ಮಾಡುವದುಂಟೆ? ಇದಲ್ಲದೆ ದ್ವೈತವು ಸುಳ್ಳಾದದ್ದು; ಅದ್ವೈತವು ನಿಜವಾದದ್ದು. ನಿಜವು ಸುಳ್ಳಿನ ಮೇಲೆ ಹಗೆತನವನ್ನು ತೋರುವದುಂಟೆ? ಯಾವದರಿಂದ ತನಗೆ ಬಾಧೆ ತೋರುತ್ತದೊ ಅದರ ಮೇಲೆ ಹಗೆತನ ಉಂಟಾಗುವದು ಸ್ವಭಾವವಾಗಿದೆ. ಅದ್ವೈತದಿಂದ ದ್ವೈತಕ್ಕೆ ಬಾಧೆಯುಂಟೇ ಉಂಟು. ಆದ್ದರಿಂದ ದ್ವೈತದವರು ಅದ್ವೈತದವರ ಮೇಲೆ ಕಣ್ಣುಕೆಂಪಗೆ ಮಾಡಿಕೊಳ್ಳುವದು ಒಪ್ಪಬಹುದು. ದ್ವೈತದಿಂದ ಅದ್ವೈತಕ್ಕೆ ಬಾಧೆ ಇಲ್ಲ. ಆದ್ದರಿಂದ ಅದ್ವೈತಕ್ಕೆ ದ್ವೈತವ ಮೇಲೆ ಹಗೆತನ ಉಂಟಾಗುವದಕ್ಕೆ ಕಾರಣವೇ ಇಲ್ಲ. ಅದ್ವೈತದಿಂದ ದ್ವೈತಕ್ಕಿರುವ ಬಾಧೆಯನ್ನು ತಪ್ಪಿಸಿಕೊಳ್ಳುವದೆಂಬುದು ಎಂದೆಂದಿಗೂ ಆಗದ ಮಾತು. ಆದ್ದರಿಂದ ದ್ವೈತಿಗಳು ಮಾಡುವ ಹಗೆತನವು ತಮ್ಮ ಮನಸ್ಸನ್ನೆ ತಳಮಳಗೊಳಿಸುವ ಹಗೆತನದಲ್ಲಿ ಮುಗಿಯುವದೇ ಹೊರತು ಅದ್ವೈತದ ಒಂದು ಕೂದಲನ್ನು ಕೊಂಕಿಸುವದೂ ಅದಕ್ಕೆ ಸಾಧ್ಯವಿಲ್ಲ. ಹೀಗೆ ಹಗೆತನವು ದ್ವೈತಿಗಳಲ್ಲಿಯೇ ಹೊರತು ಅದ್ವೈತಿಗಳಲ್ಲಿಲ್ಲ. ದ್ವೈತವು ಮೇಲೇರಿ ಬಂದಾಗ ಅದ್ವೈತವು ಅದರಲ್ಲಿ ಹುರುಳಿಲ್ಲವೆಂದು ತಿಳಿದು ಅದರ ಮೇಲೆ ಕೈ ಎತ್ತುವದು ತನ್ನ ಘನತೆಗೆ ಸಲ್ಲದೆಂದು ಉದಾಸೀನದಿಂದಿರುವದು. ನೆಲದಮೇಲೆ ಕುಕ್ಕರಿಸಿ ಕಸದ ಗುಂಡಿಯಲ್ಲಿರುವ ಒಬ್ಬ ಹುಚ್ಚನು ತನ್ನ ಮುಂದೆ ಮುಗಿಲು ಮುಟ್ಟುವಷ್ಟು ಎತ್ತರವಾದ ಮದ್ದಾನೆಯ ಮೇಲೇರಿ ಅಟ್ಟಹಾಸದಿಂದ ಬರುತ್ತಿರುವವನನ್ನು ನೋಡಿ 'ನಾನೂ ಆನೆಯನ್ನು ಹತ್ತಿದ್ದೇನೆ; ನನ್ನ ಮೇಲೆ ನಿನ್ನ ಆನೆಯನ್ನು ನಡೆಸು' ಎಂದು ಹೇಳಿದರೂ ಅವನು ಅದನ್ನು ಕಿವಿಗೆ ಹಾಕಿ

ಕೊಳ್ಳದಿರುವಂತೆ ಅದ್ವೈತವವರು ತಮ್ಮನ್ನು ಎದುರಿಸುವ ದ್ವೈತವನ್ನು ಕಡೆಗಾಣುವರು. —(ಮಾಂ ೩-೧೭,೧೮)

ಅದ್ವೈತವವರಲ್ಲಿ ಹಗೆತನವಿಲ್ಲದಿರುವದಿಷ್ಟೇ ಅಲ್ಲ; ಅವರಲ್ಲಿ ಪ್ರೇಮದ ಬುಗ್ಗೆಯು ಉಕ್ಕಿ ಹರಿಯುತ್ತಿರುವದು. ನಿಜವಾದ ಪ್ರೇಮವೆಂಬುದು ಅದ್ವೈತದವರಿಗೇ ಮೀಸಲು. ದ್ವೈತವವರು ಎಷ್ಟೇ ಪ್ರೇಮವನ್ನು ಮಾಡಿದರೂ ತನ್ನ ಮೇಲೆ ತನಗಿರುವಷ್ಟು ಪ್ರೇಮವನ್ನು ತನಗೆರಡನೆಯವರ ಮೇಲೆ ಮಾಡಲಾಗುವದಿಲ್ಲ. ದ್ವೈತಿಗೆ ಉಳಿದವರೆಲ್ಲ ತನಗೆರಡನೆಯವರೆ. ಅದ್ವೈತಿಗೆ ಎಲ್ಲರೂ ತಾನೆ. ಆದ್ದರಿಂದ ಅವನು ತನ್ನ ಮೇಲೆ ಮಾಡುವ ಪ್ರೇಮವನ್ನೇ ಅವರ ಮೇಲೆ ಮಾಡುವನು. ಅದ್ವೈತದ ಮೊಳಕೆಯಾದ ಇಂಥ ಉಚ್ಚ ತರಗತಿಯ ಪ್ರೇಮಕ್ಕೆ ನಮ್ಮ ದೇಶವೇ ತವರುಮನೆ. ಈ ಪ್ರೇಮದ ತಳಹದಿಯ ಮೇಲೆಯೆ ನಮ್ಮ ದೇಶದ ಸಂಸ್ಕೃತಿಯು ಏರ್ಪಟ್ಟಿರುವದು. ಅದ್ವೈತವು ಈಶ್ವರನಿಂದ ಹೊರಬಿದ್ದ ತಿಳಿವಳಿಕೆ. ಅದರ ಮೇಲೆ ಹುಟ್ಟುಗಟ್ಟಿರುವ ಬಗೆಬಗೆಯ ದ್ವೈತಗಳೆಲ್ಲ ಮನುಷ್ಯಬುದ್ಧಿಯಿಂದ ಹೊರಬಿದ್ದವು. ಆದ್ದರಿಂದಲೆ ಅವುಗಳ ಜಾಲವನ್ನು ಹಿಡಿದ ಪರದೇಶದ ಸಂಸ್ಕೃತಿಗಳು ಬಹು ದಿನ ಬಾಳುವದಿಲ್ಲ. ಅದ್ವೈತದ ಸಂಸ್ಕೃತಿಯು ಕಾಲವೂ ದೇಶವೂ ಹುಟ್ಟಿದಾಗಿನಿಂದ ನಡೆದು ಬಂದದ್ದಾಗಿರುವದು ; ಕಾಲವೂ ದೇಶವೂ ಇರುವವರೆಗೂ ಇರುವದು. ಇಷ್ಟೇ ಅಲ್ಲ. ಸೃಷ್ಟಿಯೇ ಹೋದರೂ ನಮ್ಮ ಸಂಸ್ಕೃತಿಗೆ ಅಳವಿಲ್ಲ. ಅದು ಬೀಜರೂಪದಲ್ಲಿದ್ದು ಮುಂದಿನ ಸೃಷ್ಟಿಯಲ್ಲಿ ಕಾಣಿಸಿಕೊಳ್ಳುವದು. ಅದ್ವೈತದ ಅರಿವಿನಿಂದಲೆ ನಮ್ಮ ಹಿಂದೂಸ್ಥಾನವು ಜಗತ್ತಿಗೇ ಗುರುವಾಗಿ ಶೋಭಿಸುವದು. ಇದನ್ನರಿತು ಅದ್ವೈತದ ತಳಹದಿಯನ್ನು ಹಿಡಿದು ತನ್ನ ಮೇಲೆ ತಾನು ಮಾಡುವ ಪ್ರೇಮವನ್ನು ಇತರರ ಮೇಲೆ ಮಾಡುವದನ್ನು ಕಲಿಯಬೇಕು.

ಎಲ್ಲ ವಸ್ತುಗಳಲ್ಲಿಯೂ ಬ್ರಹ್ಮವನ್ನೂ ಬ್ರಹ್ಮದಲ್ಲಿ ಎಲ್ಲ ವಸ್ತುಗಳನ್ನೂ ನೋಡುವವನಿಗೆ ಬ್ರಹ್ಮವು ಎಷ್ಟು ಮಾತ್ರವೂ ದೂರವಲ್ಲ. ಆ ಬ್ರಹ್ಮಕ್ಕೆ ಅವನೂ ದೂರವಲ್ಲ. ಅವರಿಬ್ಬರೂ ಒಂದೆ. —(ಭ ೬.೩೦

ತಾನು ಬ್ರಹ್ಮವಾಗುವದರಿಂದಾಗುವ ಆನಂದಕ್ಕೊಂದಳತೆಯೇ ಇಲ್ಲ. ಲೋಕದಲ್ಲಿ ಒಳ್ಳೆ ತರುಣನಾಗಿಯೂ ಶೀಲಸಂಪನ್ನನಾಗಿಯೂ ವೇದವನ್ನು ಓದಿದವನಾಗಿಯೂ ಎಲ್ಲರ ಮೇಲಿನ ಯಜಮಾನನಾಗಿಯೂ ಬಲವಾದ ಮೈ ಕಟ್ಟುಳ್ಳವನಾಗಿಯೂ ಶಕ್ತಿಯುಳ್ಳವನಾಗಿಯೂ ಇರುವವನಿಗೆ ಬೇಕುಬೇಕಾದ ಸುಖಸಾಧನಗಳಿಂದ ತುಂಬಿತುಳುಕುವ ಭೂಮಂಡಲದ ಅರಸುತನವು ದೊರೆ ತರೆ ಅವನಿಗೆ ಆಗುವ ಆನಂದವು ಒಂದು ಮಾನುಷಾನಂದವೆಂದೆನಿಸುವದು. ಅಂಥ ನೂರರಷ್ಟಾದರೆ ಅದು ಮನುಷ್ಯರಾಗಿದ್ದು ಒಳ್ಳೆ ಕರ್ಮಗಳನ್ನು ಮಾಡಿ ಗಂಧರ್ವರಾದವರಿಗೆ ದೊರೆಯುವ ಒಂದಾನಂದ. ಮನುಷ್ಯಗಂಧರ್ವರಿಗೆ ಅಂತ ರ್ಧಾನವಾಗುವ ಶಕ್ತಿ, ಸುಖದುಃಖಗಳನ್ನು ಎದುರಿಸುವ ಶಕ್ತಿ, ಬೇಕಾದಷ್ಟು ಸುಖಸಾಧನಗಳು - ಮೊದಲಾದವುಗಳಿರುವದರಿಂದ ಅವರಿಗೆ ಸುಖ ಹೆಚ್ಚು. ಆ ಮನುಷ್ಯಗಂಧರ್ವರ ನೂರರಷ್ಟಾನಂದವು ಹುಟ್ಟುವಾಗಲೆ ಗಂಧರ್ವರಾಗಿ ಹುಟ್ಟಿದ ದೇವಗಂಧರ್ವರ ಒಂದಾನಂದ. ಅದರ ನೂರರಷ್ಟು ಬಹುಕಾಲವಿ ರುವ ಲೋಕಗಳಲ್ಲಿ ಹುಟ್ಟಿದ ಪಿತೃಗಳ ಒಂದಾನಂದ. ಅದರ ನೂರರಷ್ಟು ಸ್ಮೃತಿಯಲ್ಲಿ ಹೇಳಿದ ಕರ್ಮಗಳನ್ನು ಮಾಡಿದ್ದರ ಫಲವಾಗಿ ದೇವತೆಗಳಾದವರ ಒಂದಾನಂದ. ಅದರ ನೂರರಷ್ಟು ಶ್ರುತಿಯಲ್ಲಿ ಹೇಳಿದ ಕರ್ಮಗಳನ್ನು ಮಾಡಿ ದ್ದರ ಫಲವಾಗಿ ದೇವತೆಗಳಾದವರ ಒಂದಾನಂದ. ಅದರ ನೂರರಷ್ಟು ದೇವ ತೆಗಳೆಲ್ಲರ ಒಡೆಯನಾದ ಇಂದ್ರನ ಒಂದಾನಂದ. ಅದರ ನೂರರಷ್ಟು ಇಂದ್ರನ ಗುರುಗಳಾದ ಬೃಹಸ್ಪತಿಗಳ ಒಂದಾನಂದ. ಅದರ ನೂರರಷ್ಟು ಮೂರು ಲೋಕವನ್ನೂ ಶರೀರವಾಗಿ ಉಳ್ಳ ವಿರಾಟ್ಪುರುಷನ ಒಂದಾನಂದ. ಅದರ ನೂರರಷ್ಟು ಹಿರಣ್ಯಗರ್ಭನೆಂಬ ಬ್ರಹ್ಮನ ಒಂದಾನಂದ. ಶ್ರುತಿಯನ್ನು ಬಲ್ಲ ವನಾಗಿಯೂ ಪಾಪವಿಲ್ಲದವನಾಗಿಯೂ ಬಯಕೆಗಳಿಂದ ಬಳಲದವನಾ ಗಿಯೂ ಇರುವವನ ಆನಂದವು ಆ ಬ್ರಹ್ಮನ ಆನಂದವನ್ನೂ ಮೀರಿಸಿರುವದು.

ಇಂಥ ಆನಂದವೆಂಬ ಅಮೃತವು ಮನುಷ್ಯನಿಗೆ ನಿಲುಕುವಂತಿರುವಾಗ ಅದಕ್ಕೆ ಕೈ ನೀಡುವದನ್ನು ಬಿಟ್ಟು ವಿಷಯಸುಖವೆಂಬ ಕಿಲುಬಿದ ಹುಳಿ ಮಜ್ಜಿಗೆಗೆ ಬೊಗಸೆಯನ್ನೊಡ್ಡುವದು ಎಂಥ ತಿಳಿಗೇಡಿತನ! —(ತೈ ೨-೧..೪)

# ೧೬—ಅನುಭವಿಗಳ ನಡೆವಳಿಕೆ

## ನಡೆನುಡಿಗಳು

ಬದುಕಿರುವಾಗಲೇ ತಾವು ಶುದ್ಧಬ್ರಹ್ಮವೆಂದೂ ಜಗತ್ತೆಲ್ಲ ತಮ್ಮ ಮನಸ್ಸಿನ ಆಲುಗಾಟದ ಮಾತ್ರವೆಂದೂ ಮನಗಂಡವರ ನಡೆವಳಿಕೆ ಹೇಗಿರುವದೆಂಬುವನ್ನು ತಿಳಿಯಬೇಕೆಂದು ಕುತೂಹಲ ಉಂಟಾಗಬಹುದು. ಲೋಕದಲ್ಲಿ ಎಲ್ಲರೂ ತಾವು ಕ್ಷುದ್ರರಾದ ಜೀವರೆಂದೂ ಜಗತ್ತು ಯಾವಾಗಲೂ ಇರುವಂಥದ್ದೆಂದೂ ತಿಳಿದು ನಡೆಯುತ್ತಿರುವರು. ತಾವು ಬ್ರಹ್ಮವೆಂದರಿತವರ ಬಗೆಯು ಲೋಕದವರ ನಡೆವಳಿಕೆಗಿಂತ ಬೇರೆಯಾಗಿರುವದು. ಆದ್ದರಿಂದಲೆ ಅದನ್ನು ತಿಳಿದುಕೊಳ್ಳಬೇಕೆಂಬ ಬಯಕೆಯುಂಟಾಗುವದು. ತಾವು ಬ್ರಹ್ಮವೆಂದರಿತವರು ಕಾಣಬರುವದೇ ಕಡಿಮೆಯಾಗಿರುವದರಿಂದ ಅವರ ನಡೆವಳಿಕೆಗಳನ್ನು ಪ್ರತ್ಯಕ್ಷವಾಗಿ ನೋಡುವದಕ್ಕೆ ದೊರೆಯುವ ಸಂಭವವು ಕಡಿಮೆ. ಆದ್ದರಿಂದ ಅವುಗಳನ್ನು ನಾವು ಗ್ರಂಥದಿಂದ ಗೊತ್ತು ಮಾಡಿಕೊಳ್ಳಬೇಕು. ಆದರೆ ಅಂಥ ಜ್ಞಾನಿಗಳು ಲೋಕದಲ್ಲಿ ಇಲ್ಲವೇ ಇಲ್ಲವೆಂದು ತಿಳಿಯಬಾರದು. ಅವರು ಅಲ್ಲಲ್ಲಿ ಇದ್ದೇ ಇರುತ್ತಾರೆ. ಅವರ ಗುರ್ತು ಹಿಡಿಯುವ ಯೋಗ್ಯತೆಯುಳ್ಳವರೇ ಕಡಿಮೆ. ಕಾಡುಗಲ್ಲುಗಳಂತೆ ಜೀವರತ್ನಗಳು ಕಂಡಕಂಡ ಕಡೆಯಲ್ಲೆಲ್ಲ ದಾರಿಯಲ್ಲಿ ಬಿದ್ದಿರುವವೇನು ? ಭೂಮಿಯಲ್ಲಿ ರತ್ನಗಳಿಲ್ಲವೆಂದಿಲ್ಲ. ಅವು ಎಲ್ಲಿಯೋ ಒಂದೊಂದು ಕಡೆ ಇರುತ್ತವೆ. ಲೋಕದಲ್ಲಿ ದೈವಯೋಗದಿಂದ ಏನಾದರೊಂದು ಹೆಚ್ಚಿನ ಯೋಗ್ಯತೆಯನ್ನು ಪಡೆದವರು ಅದನ್ನು ತಾವೇ ಎಲ್ಲರಿಗೂ ಸಾರಿಕೊಂಡು ತಿರುಗುವರಷ್ಟೆ. ಹಾಗೆ ತಾವು ಶುದ್ಧಬ್ರಹ್ಮವೆಂದರಿತವರು ತಾವು ಇಂಥವರೆಂದು ಡಂಗುರವನ್ನು ಹೊಡೆದುಕೊಂಡು ತಿರುಗುವದಿಲ್ಲ. ಅವರ ಬಗೆಯು ಲೋಕದವರ ಬಗೆಗಿಂತ ಬೇರೆಯಷ್ಟೆ. ಅವರು ಸುಮ್ಮಸುಮ್ಮನೆ ತಮ್ಮ ಬೆಳಕನ್ನು ಹೊರಗೆ ಬೀಳಿಸದೆ ತಮ್ಮಷ್ಟಕ್ಕೆ ತಾವು ಮರೆಯಾಗಿರುವರು. ತಮ್ಮಂಥ ಜ್ಞಾನವನ್ನು ಪಡೆಯುವದಕ್ಕೆ ತಕ್ಕ ಶಿಷ್ಯನು ಬಂದಾಗ ಅವರು ಒಳ್ಳೆ ಉತ್ಸಾಹದಿಂದ ತಮ್ಮ ಯೋಗ್ಯತೆಯ ಬೆಳಕನ್ನು ಬೀರಿ ಹತ್ತು ದಿಕ್ಕುಗಳನ್ನೂ ಪ್ರಭಾಮಯವಾಗಿ ಮಾಡುವರು. ಆ ಶಿಷ್ಯನು ಆಗ ಅವರ ನಡೆವಳಿಕೆಗಳ ಕಡೆಗೆ ಮನಸ್ಸು ಹಾಕಿದರೆ ಇಲ್ಲಿ

ಹೇಳುವ ಮಾತುಗಳೆಲ್ಲ ತನ್ನ ಕಣ್ಣೆದುರಿಗೆ ರೂಪುಗೊಂಡು ನಿಂತಂತಾಗುವದು. ಈ ಉಪಯೋಗವನ್ನು ಗುರಿಯಲ್ಲಿಟ್ಟುಕೊಂಡು ಇಲ್ಲಿ ಜೀವನ್ಮುಕ್ತರ ನಡೆವಳಿಕೆಗಳು ಸಂಗ್ರಹಿಸಲಾಗುವವು.

(ಅ) ಅವರ ಮನಸ್ಸಿನಲ್ಲಿ ಬಯಕೆಗಳೆಂಬುವೆಲ್ಲ ತೊಳೆದು ಹೋಗಿರುವವು. ಅವರು ಏನನ್ನಾದರೂ ಬಯಸಿ ಅದನ್ನು ಪಡೆದು ಅದರಿಂದ ತೃಪ್ತಿಯನ್ನು ಹೊಂದತಕ್ಕವರಾಗಿರದೆ ತಮ್ಮಲ್ಲಿ ತಾವೆ ಯಾವಾಗಲೂ ತೃಪ್ತರಾಗಿಯೇ ಇರತಕ್ಕವರಾಗಿರುವರು. —(ಭ ೨-೫೫). (ಆ) ಒಂದು ಪಕ್ಷ ಯಾವಾಗಲಾದರೂ ಬಯಕೆಯುಂಟಾದರೂ, ನದಿಗಳು ಸಮುದ್ರದಲ್ಲಿ ಹೊಕ್ಕು ತಮ್ಮ ಸ್ವರೂಪವನ್ನು ಕಳೆದುಕೊಳ್ಳುವಂತೆ, ಅದು ಹುಟ್ಟಿದಲ್ಲಿಯೇ ಇಂಗಿಹೋಗುವದು (ಭ ೨-೭೦). (ಇ) ಹೊರಗೆ ಎಷ್ಟೋ ವಿಷಯಗಳಿದ್ದರೂ ಕೂಡ ಅವರು ತಮ್ಮ ಇಂದ್ರಿಯಗಳನ್ನು ಅವುಗಳ ಮೇಲೆ ಹರಿಯಗೊಡದೆ ಅವುಗಳನ್ನು ಬಿಗಿಹಿಡಿದಿರುವರು. ಏಕೆಂದರೆ: ಅವರ ಮನಸ್ಸೆಲ್ಲ ಎಲ್ಲರ ಒಳಗೂ ಆತ್ಮನಾಗಿರುವ ಪರಮಾತ್ಮನೆ ತಾನೆಂಬ ಕಡೆ ಸೆಳೆಗೊಂಡಿರುವದರಿಂದ ಅದು ಇಂದ್ರಿಯಗಳಿಗೆ ಜೊಂಬಲವಾಗಿ ಹರಿಯುವದಿಲ್ಲ. —(ಭ ೨-೬೧). (ಈ) ಅಥವಾ ಅದು ಸ್ವಲ್ಪ ಮಟ್ಟಿಗೆ ಏನಾದರೂ ತಲೆ ಎತ್ತಿದರೆ ಅವನು ತನಗೆ ಎಂಥ ಲೋಕವಾಗಲಿ ಎಂಥ ಸುಖಸಾಧನಗಳಾಗಲಿ ಏನು ಬಯಸಿದರೂ ಒಡನೆ ಅವು ಅವನ ಪಾದಧೂಲಿಯಲ್ಲಿ ಉರುಳಾಡುವವು. ಇಷ್ಟೇ ಅಲ್ಲ. ಆ ಲೋಕಗಳಾಗಲಿ ಆ ಸುಖಸಾಧನಗಳಾಗಲಿ ಮತ್ತೊಬ್ಬರಿಗೆ ಆಗಲೆಂದು ಬಯಸಿದರೂ ಕೂಡ ಅದು ಹಾಗೆ ಆಗಿಯೇ ತೀರುವದು. ಆದ್ದರಿಂದ ಏಳಿಗೆಯನ್ನು ಬಯಸುವವರು ಅವರ ಕಾಲು ತೊಳೆದು ನಮಸ್ಕಾರ ಮೊದಲಾದವುಗಳಿಂದ ಅವರನ್ನು ಸೇವೆಮಾಡಬೇಕು. —(ಮುಂ ೩-೧-೧೦).

(ಅ) ಎಲ್ಲ ಜನರೂ ಪ್ರಾಪಂಚಿಕವಿಷಯಗಳಲ್ಲಿ ಬಹಳ ಜಾಗರೂಕರಾಗಿರುವರಷ್ಟೆ. ತಾವು ಬ್ರಹ್ಮವೆಂದರಿತ ಜೀವನ್ಮುಕ್ತರು ಅತ್ತ ಕಡೆಗೆ ಕಡೆಗಣ್ಣನ್ನು ಕೂಡ ಹಾಕುವದಿಲ್ಲ. ಎಲ್ಲರೂ ತಮ್ಮ ಆತ್ಮಸ್ವರೂಪದ ವಿಷಯದಲ್ಲಿ ಸಂಪೂರ್ಣವಾಗಿ ಉದಾಸೀನರಾಗಿರುವರಷ್ಟೆ. ಜೀವನ್ಮುಕ್ತರು ಅದರ ವಿಷಯದಲ್ಲಿಯೇ ತುಂಬ ಜಾಗರೂಕರಾಗಿರುವರು. —(ಭ ೨-೬೯), (ಆ)

ಆವನು ಹೊರಗಣ ವಿಷಯಗಳನ್ನು ಬಳಸಿದಾಗ ಇಂದ್ರಿಯಗಳು ಅವುಗಳೊಡನೆ ಕೂಡಿ ನಡೆದವೆಂದೂ ತಾನು ಏನನ್ನೂ ಮಾಡುವವನಲ್ಲವೆಂದೂ ತಿಳಿಯುವನು (ಭ ೫-೮,೯). (ಇ) ಅವನಿಗೆ ತನ್ನೊಳಗೇ ಸುಖ; ತನ್ನೊಳಗೇ ಆಟ; ತನ್ನೊಳಗಣವೇ ಬೆಳಕು. (ಭ ೫-೨೪).

ಅವರ ಸಮಬುದ್ಧಿಯು ಕೊಂಡಾಡತಕ್ಕದ್ದಾಗಿರುವದು. ಒಳ್ಳೆ ಸತ್ತ್ವಗುಣದಿಂದ ಕೂಡಿ ಚೆನ್ನಾಗಿ ಕಲಿತವನೂ ವಿನಯವಂತನೂ ಆದ ಬ್ರಾಹ್ಮಣನಲ್ಲಿಯೂ ನಡುತರವಾದ ರಜೋಗುಣದಿಂದ ಕೂಡಿ ಉತ್ತಮಸಂಸ್ಕಾರವಿಲ್ಲದಿರುವ ಆಕಳಿನಲ್ಲಿಯೂ ಕೀಳಾದ ಬರೀ ತಮೋಗುಣದಿಂದ ಕೂಡಿದ ಆನೆ, ನಾಯಿ, ಹೊಲೆಯ-ಮೊದಲಾದವರಲ್ಲಿಯೂ ಅವನು ಅವರ ಒಳಗಣ ಆತ್ಮವನ್ನು ಬ್ರಹ್ಮವೇ ಎಂದು ಕಾಣುವನು. —(ಭ ೫-೧೮)

ತನಗೆ ದುಃಖವನ್ನು ಕೊಟ್ಟವರ ಮೇಲೆ ಕೂಡ ಅವನಿಗೆ ಹಗೆತನವಿಲ್ಲ. ಅವನು ಎಲ್ಲರಿಗೂ ಗೆಳೆಯ. ನೊಂದವರನ್ನು ಕಂಡರೆ ಅವನಿಗೆ ಬಹುದಯೆ. ಅವನಿಗೆ ನಾನುನನ್ನದೆಂಬುದಿಲ್ಲ. ಅವನು ದುಃಖವನ್ನು ಹೋಗೆನ್ನುವದಿಲ್ಲ; ಸುಖವನ್ನು ಬಾರೆನ್ನುವದಿಲ್ಲ. ಯಾರಾದರೂ ತನ್ನನ್ನು ನೋಯಿಸಿದರೆ ತಾನು ನೊಂದುಕೊಳ್ಳುವದಿಲ್ಲ; ತಾನು ಯಾರನ್ನೂ ನೋಯಿಸುವದಿಲ್ಲ. ತನಗೆ ಬದುಕಿರುವಷ್ಟಾದರೂ ಸಿಕ್ಕಲಿ, ಬಿಡಲಿ-ಅವನಿಗೆ ಯಾವಾಗಲೂ ತೃಪ್ತಿ. ತನ್ನ ಆತ್ಮವು ಬ್ರಹ್ಮವೆಂಬ ವಿಷಯದಲ್ಲಿ ಅವನ ತಿಳಿವಳಿಕೆಯು ಚೇಗಾಗಿರುವದು. ಅವನ ಮನಸ್ಸೂ ಬುದ್ಧಿಯೂ ಯಾವಾಗಲೂ ಪರಮಾತ್ಮನಲ್ಲಿಯೇ ಇರುವದು. ಅವನು ಒಳಗೂ ಹೊರಗೂ ಕೂಡ ಯಾವಾಗಲೂ ಶುಚಿ. ಯಾವ ಕೆಲಸಕ್ಕೆ ಕೈ ಹಾಕಿದರೂ ಅದನ್ನು ಚೆನ್ನಾಗಿ ನೆರವೇರಿಸುವದರಲ್ಲಿ ಅವನು ಬಹುಗಟ್ಟಿಗ. ಅವನು ಯಾರ ಪಕ್ಷವನ್ನೂ ಹಿಡಿಯುವದಿಲ್ಲ. ಅವನ ಭಾಗಕ್ಕೆ ಹೆದರಿಕೆಯೆಂಬುದು ತಲೇ ಎತ್ತುವದೇ ಇಲ್ಲ. ಅವನು ಏನನ್ನಾದರೂ ಪಡೆಯಬೇಕೆಂದು ಯಾವ ಕೆಲಸವನ್ನೂ ಹಿಡಿಯುವದಿಲ್ಲ. ಅವನಿಗೆ ಒಂದು ಕಡೆ ನೆಲೆಯಾದ ವಾಸವಿಲ್ಲ. —(ಭ ೧೨-೧೩..೧೯)

ಅವನ ಮಾತುಗಳ ಬಗೆಯೇ ಬೇರೆ. ಅದು ಹೇಗಿರುವದೆಂದರೆ: ನಾನು ಎರಡನೆಯದಿಲ್ಲದ ಬ್ರಹ್ಮರೂಪದಿಂದ ಮೂರು ಲೋಕಗಳನ್ನೂ ಒಳಗೊಂಡಿ

ದ್ದೇನೆ. ಹಿರಣ್ಯಗರ್ಭನೆಂಬ ಬ್ರಹ್ಮನನ್ನು ಮೊದಲುಗೊಂಡು ಸಣ್ಣದಾದ ಹುಳ ದವರೆಗೂ ಎಲ್ಲವೂ ನನ್ನಲ್ಲಿ ಹುಟ್ಟಿದವುಗಳಾಗಿವೆ. ಹಣಗಾರನಿಗೆ ಬಡತನ ಹೇಗಿಲ್ಲವೊ ಹಾಗೆ ಆನಂದಸ್ವರೂಪನೇ ಆದ ನನ್ನ ಸುಖಕ್ಕೆ ಹೊರಗಣ ವಿಷಯಗಳು ಬೇಕಾಗಿಲ್ಲ. ಬ್ರಹ್ಮಾನಂದದಲ್ಲಿ ಮುಳುಗಿದವನಿಗೆ ವಿಷಯಗಳ ಮೇಲೆ ಬಯಕೆ ಹೇಗೆ ಹುಟ್ಟೀತು ! ವಿಷವೂ ಅಮೃತವೂ ಎರಡೂ ಕಾಣು ವಾಗ ಜಾಣನು ವಿಷವನ್ನು ಬಿಡುತ್ತಾನಷ್ಟೆ. ನಾನು ನನ್ನ ಆತ್ಮಸ್ವರೂಪ ವನ್ನು ನೋಡಿಕೊಂಡು ನಾನಲ್ಲದ ಹೊರಗಣವುಗಳನ್ನು ಬಿಟ್ಟುಬಿಡುತ್ತೇನೆ. ಗಡಿಗೆಯನ್ನು ಬೆಳಗುವ ಸೂರ್ಯನು ಗಡಿಗೆಯು ಒಡೆದರೆ ಹೋಗುವದಿಲ್ಲವಷ್ಟೆ. ದೇಹವನ್ನು ಬೆಳಗುವ ಸಾಕ್ಷಿಯಾದ ನಾನು ದೇಹವು ಸತ್ತ ಮಾತ್ರಕ್ಕೇ ಸಾಯುವದಿಲ್ಲ. ನನಗೆ ಯಾವ ಕಟ್ಟೂ ಬಿದ್ದಿಲ್ಲ. ನಾನು ಯಾವದರಿಂ ದಲೂ ಬಿಡಿಸಿಕೊಳ್ಳಬೇಕಾದದ್ದಿಲ್ಲ. ನನಗೆ ಶಾಸ್ತ್ರವೂ ಇಲ್ಲ; ಗುರುವೂ ಇಲ್ಲ. ಅವೆಲ್ಲ ಮಾಯೆಯಿಂದಾದವುಗಳು. ನಾನು ಮಾಯೆಯನ್ನು ದಾಟಿದವನು. ಪ್ರಾಣವಾಯುಗಳು ಓಡಾಡಿಕೊಳ್ಳಲಿ; ಮನಸ್ಸು ಬಯಸಿಕೊಂಡಿರಲಿ; ಆನಂ ದದಿಂದ ತುಂಬಿರುವ ನನಗೆ ದುಃಖವೆಂತಾದೀತು ! ನಾನು ನನ್ನ ಸ್ವರೂಪ ವನ್ನು ಚೆನ್ನಾಗಿ ತಿಳಿದುಕೊಂಡೆನು. ನನ್ನ ಅಜ್ಞಾನವು ಎಲ್ಲಿಯೋ ಕಾಲಿಗೆ ಬುದ್ಧಿಯನ್ನು ಹೇಳಿತು. ನಾನು ಮಾಡುವವನೆಂಬ ಭ್ರಾಂತಿಯು ಹೋಯಿತು. ನಾನು ಏನನ್ನಾದರೂ ಮಾಡಬೇಕಾದದ್ದೆಂಬುದು ಇಲ್ಲ. ಮೂರು ಕಾಲದ ಲ್ಲಿಯೂ ಹಗ್ಗದ ಹಾವು ಹೇಗಿಲ್ಲವೊ ಹಾಗೆ ನನ್ನಲ್ಲಿ ಜಗತ್ತಿಲ್ಲ. ನಾನು ಎರಡ ನೆಯದಿಲ್ಲದವನು. — ಈ ಬಗೆಯಲ್ಲಿರುವದು. —(ಆ. ಬೋ ೧೪-೨೨)

## ಪ್ರಾರಬ್ಧಕರ್ಮ

ತಾನು ಏನನ್ನೂ ಮಾಡದ ಬ್ರಹ್ಮವೆಂಬ ಅರಿವಾಗುತ್ತಲೆ ಗುಡ್ಡೆಗುಡ್ಡೆ ಯಾಗಿ ಹಿಂದೆ ಬಿದ್ದಿರುವ ಕರ್ಮಗಳೆಲ್ಲ ಸುಟ್ಟು ಬೂದಿಯಾಗುತ್ತವೆ; ಮುಂದೆ ಆಗುವ ಕರ್ಮಗಳ ಸೋಂಕು ತಗಲುವದಿಲ್ಲ. ಕರ್ಮಗಳು ನಾಶವಾಗುವಾಗ ದುಃಖವನ್ನು ಕೊಡುವ ಕೆಟ್ಟವೆನಿಸಿದ ಪಾಪಕರ್ಮಗಳು ಮಾತ್ರ ಹೋಗುವ ವೆಂದೂ ಒಳ್ಳೆಯವೆನಿಸಿದ ಪುಣ್ಯಕರ್ಮಗಳು ಮಾತ್ರ ಸುಖವನ್ನು ಕೊಡುವದಕ್ಕೆ ಉಳಿಯುವವೆಂದೂ ತಿಳಿಯಬಾರದು. ಪುಣ್ಯದ ಫಲವಾದ ಕ್ಷಣಿಕಸುಖವು

ಜ್ಞಾನದ ಫಲವಾದ ನಿತ್ಯಸುಖಕ್ಕಿಂತ ಎಷ್ಟೋ ಕೀಳು. ಇದಲ್ಲದೆ ಪುಣ್ಯವು ತನ್ನ ಫಲವಾದ ಸುಖವನ್ನು ಕೊಡುವದಕ್ಕಾಗಿ ಜನ್ಮವನ್ನು ಕೊಟ್ಟೇ ಕೊಡುವದು. ಜ್ಞಾನಿಗೆ ಮತ್ತೆ ಜನ್ಮವಿಲ್ಲವಾದ್ದರಿಂದ ಪುಣ್ಯಕರ್ಮವು ಉಳಿಯುವದೆನ್ನಬಾರದು. ಈಗ ಬಂದಿರುವ ಜನ್ಮವು ಕೊನೆಯಾಗುವವರೆಗಿನ ಪ್ರಾರಬ್ಧವು ಮಾತ್ರ ದೇಹವು ಸಾಯುವತನಕ ಇರುವದು. ಪ್ರಾರಬ್ಧಕರ್ಮವೂ ಹೋಗಿಬಿಟ್ಟರೆ ಶರೀರವೆ ಬಿದ್ದುಹೋಗಿಬಿಡಬೇಕಾಗುವದು. ಆಮೇಲೆ ಆ ಜ್ಞಾನವನ್ನು ಅನುಭವಿಸುವದಕ್ಕೆ ದಾರಿಯೂ ಇರುವದಿಲ್ಲ; ಇತರರಿಗೆ ಅವರ ಉಪದೇಶವು ದೊರೆಯುವ ಸಂಭವವೂ ಇರುವದಿಲ್ಲ. ದೇಹವೂ ಇದ್ದು ಜ್ಞಾನಿಗಳೂ ಆಗಿರುವವರನ್ನು ಇಲ್ಲವೆನ್ನಲಾಗುವದಿಲ್ಲ. ಆದ್ದರಿಂದ ಜ್ಞಾನವು ಬಂದಮೇಲೆಯೂ ದೇಹವಿರಬಹುದು. ಆ ದೇಹವಿರುವ ಪ್ರಾರಬ್ಧಕರ್ಮದಿಂದ ಜ್ಞಾನಿಗೆ ತನಗೆರಡನೆಯದಾದ ಜಗತ್ತು ತೋರಿದರೂ ಅದು ಸುಳ್ಳಾದುದೆಂಬುದು ಅವನಿಗೆ ಚೆನ್ನಾಗಿ ಗೊತ್ತಿರುವದು. ಜ್ಞಾನಿಗಳು ಜ್ಞಾನವಾಗುವದಕ್ಕೆ ಮೊದಲು ಒಳ್ಳೆಯ ಮತ್ತು ಕೆಟ್ಟ ಎಷ್ಟೋ ಕೆಲಸಗಳನ್ನು ಮಾಡಿರುವರಷ್ಟೆ. ಅವು ಸುಟ್ಟುಹೋಗುವವೆಂದರೇನು? ಕಟ್ಟಿಗೆಯು ಬೆಂಕಿಯಿಂದ ಸುಟ್ಟುಹೋಗುವಂತೆಯೆ? ಅಲ್ಲ. ಅವು ಅವರ ಭಾಗಕ್ಕೆ ಇಲ್ಲದಂತಾಗಿ ಅವುಗಳಲ್ಲಿ ಒಳ್ಳೆಯವು ಅವರನ್ನು ವಂದಿಸುವವರ ಭಾಗಕ್ಕೂ ಕೆಟ್ಟವು ಅವರನ್ನು ನಿಂದಿಸುವವರ ಭಾಗಕ್ಕೂ ಹಂಚಿಹೋಗುವವು. ಇದೇ ಅವುಗಳ ನಾಶ.

—(ಸೂ ೪-೧-೯ . . ೧೨)

ಬಿಲ್ಲಿನಿಂದ ಗುರಿಯ ಕಡೆಗೆ ಹೊರಟ ಬಾಣವು ತನ್ನ ಗುರಿಯನ್ನು ಮುಟ್ಟದೆ ಹೇಗೆ ಬಿದ್ದು ಹೋಗುವದಿಲ್ಲವೋ ಹಾಗೆ ಪ್ರಾರಬ್ಧಕರ್ಮವು ತನ್ನದೆಲ್ಲ ಮುಗಿಯುವವರೆಗೂ ಫಲವನ್ನು ಕೊಡದೆ ಬಿಡುವದಿಲ್ಲ. ಹುಲಿಯೆಂದು ತಿಳಿದು ಬಿಟ್ಟ ಬಾಣವು ಆಮೇಲೆ ಅದು ಆಕಳೆಂದು ತಿಳಿದ ಮಾತ್ರಕ್ಕೆ ಅದಕ್ಕೆ ತಾಕದೆ ಬಿಟ್ಟೀತೆ? ಅದರಂತೆ ಜ್ಞಾನಿಯ ಪ್ರಾರಬ್ಧವು ಉಳಿದಿದ್ದು ಅವನಿಗೆ ಫಲವನ್ನು ಕೊಡುತ್ತಿರುವದು. ನಿಜವಾಗಿ ನೋಡಿದರೆ ಜ್ಞಾನಿಗೆ ಪ್ರಾರಬ್ಧವೆಂಬುದು ಲೋಕದ ಜನರ ಮನಸ್ಸಿಗೆ ಹೊಂದಿಕೆಯಾಗುವದಕ್ಕೆ ಹೇಳುವ ಮಾತೇ ಹೊರತು ತಾನು ಹುಟ್ಟುಸಾವುಗಳಿಲ್ಲದವನೆಂದರಿತವನಿಗೆ

ಅವನ ದೃಷ್ಟಿಯಿಂದ ಪ್ರಾರಬ್ಧವೆಲ್ಲಿಯದು? ಅವನು ತನಗೆ ಪ್ರಾರಬ್ಧ ಉಂಟೆಂದು ತಿಳಿದರೆ ದೇಹವನ್ನೇ ತಾನೆಂದು ತಿಳಿದಿರುವನೆನ್ನಬೇಕಾಗುವದು. ಅವನು ಹಾಗೆಂದಿಗೂ ತಿಳಿಯನು. ಚೆನ್ನಾಗಿ ವಿಚಾರ ಮಾಡಿದರೆ ಪ್ರಾರಬ್ಧವು ದೇಹಕ್ಕೆನ್ನುವ ಮಾತು ಕೂಡ ನಿಲ್ಲುವದಿಲ್ಲ. ಏಕೆಂದರೆ: ದೇಹವು ನಿಜವಾದದ್ದಲ್ಲ; ಹುಟ್ಟುಗಟ್ಟಿದ್ದು. ಇಂಥ ಸುಳ್ಳಾದದ್ದಕ್ಕೆ ಪ್ರಾರಬ್ಧವೆಲ್ಲಿಯದು? 'ತಾನು ಏನನ್ನೂ ಮಾಡದ ಬ್ರಹ್ಮವೆಂದು ತಿಳಿಯುತ್ತಲೆ ಅವನ ಅಜ್ಞಾನವೂ ಆ ಅಜ್ಞಾನವು ಹುಟ್ಟುಗಟ್ಟಿದ ದೇಹ ಮೊದಲಾದವುಗಳೂ ಎಲ್ಲ ಹೋಗಬೇಕಾಗಿರುವಾಗ ದೇಹವು ಉಳಿದಿರುವಂತೆ ತೋರುವದೇಕೆ?' ಎಂಬ ದಡ್ಡರ ಮಾತಿಗೆ ಉತ್ತರವನ್ನು ಹೇಳುವದಕ್ಕೆ ಶ್ರುತಿಯು ಪ್ರಾರಬ್ಧವೆಂಬ ಮಾತನ್ನು ಹೇಳುವದು. — (ಅಧ್ಯಾ ೫೩..೫೯)

(ಅ) ಶರೀರವಿದ್ದ ಮಾತ್ರಕ್ಕೇ ಜ್ಞಾನಿಯು ಮನಸ್ಸುಬಂದಂತೆ ಹೊಲಸು ರೀತಿಯಿಂದ ಇರಬೇಕಾಗಿಲ್ಲ. ಎರಡನೆಯದೆಂಬುದಿಲ್ಲದ ಸ್ಥಿತಿಯು ಯಾವ ಅನರ್ಥಕ್ಕೂ ಅವಕಾಶವನ್ನು ಕೊಡದೆ ಮಂಗಲಕರವಾಗಿರುವದರಿಂದ ಆ ಸ್ಥಿತಿಯ ಹೆಚ್ಚುಗಾರಿಕೆಯನ್ನು ಮನಸ್ಸಿಗೆ ತಂದುಕೊಂಡು ಅವನು ತನ್ನ ಆತ್ಮವು ಬ್ರಹ್ಮವೆಂದು ತಿಳಿದು ತಾನು ಇಂಥವನೆಂಬುದನ್ನು ಲೋಕಕ್ಕೆ ತಾನಾಗಿ ತಿಳಿಯಗೊಡದೆ ಇರಬೇಕು. ಒಬ್ಬರನ್ನು ಹೊಗಳುವದು, ತಾನು ಹೊಗಳಿಸಿಕೊಳ್ಳುವದು, ಒಬ್ಬರಿಗೆರಗುವದು, ತಾನು ಎರಗಿಸಿಕೊಳ್ಳುವದು— ಮೊದಲಾದವುಗಳನ್ನೆಲ್ಲ ಬಿಟ್ಟು, ಯಾವಾಗಲಾದರೂ ಊಟಉಡಿಗೆಗಳ ಹೊತ್ತಿನಲ್ಲಿ ತಾನು ದೇಹದಲ್ಲಿರುವವನೆಂಬ ಕಲ್ಪನೆಬಂದರೂ ಉಳಿದ ಕಾಲದಲ್ಲಿ ತಾನು ಬ್ರಹ್ಮವೆಂದು ತಾನಾಗಿ ದೊರೆತ ಕೌಪೀನ, ಊಟ-ಇವುಗಳಿಂದ ಬದುಕಿರುವ ಮಾತ್ರಕ್ಕೆ ನೆರವನ್ನುಂಟುಮಾಡಿಕೊಂಡಿರಬೇಕು. - (ಮಾಂ ೨-೩೬,೩೭).

**(ಆ)** ಇದರ ಮೇಲೆ ಅವನು ಹೇಗಿದ್ದರೂ ಬ್ರಹ್ಮವೆ. ಅವನ ಮೋಕ್ಷಕ್ಕೇನೂ ಅಡ್ಡಿ ಇಲ್ಲ. —(ಭ ೬—೩೧).

# ವಿದೇಹಮುಕ್ತಿ

(ಅ) ಪ್ರಾರಬ್ಧಕರ್ಮವು ಮುಗಿದು ದೇಹವು ಸತ್ತುಹೋಗುತ್ತಲೆ, ಹರಿಯುವ ನದಿಗಳು ಸಮುದ್ರಕ್ಕೆ ಸೇರಿ ತಮ್ಮ ಹೆಸರನ್ನೂ ರೂಪನ್ನೂ ಕಳೆದುಕೊಳ್ಳುವಂತೆ, ಅವನು ತನ್ನ ಹೆಸರನ್ನೂ ರೂಪನ್ನೂ ಕಳೆದುಕೊಂಡು ಪರಮಾತ್ಮನಲ್ಲಿ ಒಂದಾಗಿ ಹೋಗುವನು - (ಮುಂ ೩-೨-೮). (ಇ) ಅವನು ಇನ್ನೊಂದು ಕಡೆಗೆ ಹೋಗಬೇಕಾದದಿಲ್ಲವಾದ್ದರಿಂದ ಅವನ ವಾಕ್ಕು ಮೊದಲಾದವುಗಳು ಶರೀರವನ್ನು ಬಿಟ್ಟು ಪ್ರಯಾಣ ಮಾಡುವದಿಲ್ಲ; ಇದ್ದಲ್ಲಿಯೇ ಇಲ್ಲವಾಗುವವು. ಅವನು ಇತರರಿಗೆ ದೇಹದೊಡನೆ ಕೂಡಿದವನಾಗಿ ಕಂಡರೂ ಅವನು ಬದುಕಿರುವಾಗಲೂ ಬ್ರಹ್ಮವೆ ಆಗಿದ್ದು ಬ್ರಹ್ಮದೊಡನೆ ಕೂಡಿಕೊಳ್ಳುವನು. ಹಾವು ಬಿಟ್ಟ ಪರೆಯು ಹುತ್ತದಲ್ಲಿ ಸತ್ತುಬಿದ್ದಿರುವಂತೆ ಜ್ಞಾನಿಯು ಅಗಲಿದ ದೇಹವು ಇದ್ದಲ್ಲಿಯೇ ಸತ್ತುಬಿದ್ದಿರುವದು. — (ಬೃ ೪-೪-೬,೭). (ಆ) ದೇಹವು ಸತ್ತ ಮೇಲೆ ಜೀವನ್ಮುಕ್ತನು ವಿದೇಹಮುಕ್ತನೆನಿಸಿ ಅಲ್ಲಾಡದ ಗಾಳಿಯಂತಾಗಿ ನಿತ್ಯಸುಖಸ್ವರೂಪನಾಗಿರುವನು.

(ಮುಕ್ತಿ ೭೬).

ಓಂ ತತ್ಸತ್

ಬೆಂಗಳೂರು ಸಿಟಿ ಹಲಸೂರುಪೇಟೆಯಲ್ಲಿರುವ
ಶ್ರೀ ವಿಜಯಲಕ್ಷ್ಮೀವಿಲಾಸ ಪ್ರೆಸ್ಸಿನಲ್ಲಿ
ಮುದ್ರಿಸಿ ಪ್ರಕಟಿಸಲ್ಪಟ್ಟಿತು.

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ! **ಲೇಖಕ-ಹೊಸಕೆರೆ ಚಿದಂಬರಯ್ಯ** ಸುಲಭ ಶೈಲಿ!!

## ವೇದಾಂತಗ್ರಂಥಗಳು

**ಆರ್ಯಧರ್ಮ ಪ್ರದೀಪ:-** ಹುಡುಗರ ಮನಸ್ಸಿನಲ್ಲಿ ಕೂಡ ಬಿಂಬಿಸುವಂತೆ ಹಿಂದೂ ಮತದ ಧರ್ಮಸೂಕ್ಷ್ಮಗಳನ್ನು ಚೆನ್ನಾಗಿ ವಿವರಿಸಿ ಅದಕ್ಕೆ ಅನೇಕ ಶಾಸ್ತ್ರ ವಚನಗಳನ್ನೂ ಧಾರ್ಮಿಕ ಮಹಾಪುರುಷರ ಉಕ್ತಿಗಳನ್ನೂ ಪ್ರಮಾಣವಾಗಿ ಕೊಟ್ಟು ಯುಕ್ತಿಗಳಿಂದಲೂ ಪುಷ್ಟಿಗೊಳಿಸಿ ಪುರಾಣಪುರುಷರ ದೃಷ್ಟಾಂತಗಳ ಮುಂದುಮಾಡಿರುವ ಗ್ರಂಥ. ಇದೊಂದು ಹಿಂದೂಧರ್ಮದ ಕೈಗನ್ನಡಿ. **ಬೆಲೆ ೧-೦-೦**

**ಗೀತಾರ್ಥಚಂದ್ರಿಕೆ:-** ಇದರಲ್ಲಿ ಅನ್ವಯಕ್ರಮವಾಗಿ ಪ್ರತಿಪದದ ಅರ್ಥದೊಡನೆ ಹಿತವೂ ಮಿತವೂ ಆದ ವಿವರಣೆಯು ರತ್ನಕ್ಕೆ ಕುಂದಣವನ್ನು ಕೆತ್ತಿದಂತೆ ಹೊಂದಿಕೊಂಡಿರುವದು. ತೂಕದ ವಿಚಾರಗಳು ಮನಸ್ಸಿನಲ್ಲಿ ಒಡೆದು ಮೂಡುವಂತೆ ಯುಕ್ತಿಗಳೂ ಅನುಭವದ ಮಾತುಗಳೂ ಬೇಕಾದಷ್ಟಿರುವವು. ಅರ್ಥವಿಶೇಷಗಳೂ ಪಾಠಾಂತರಗಳೂ ಆಧಾರವಾಕ್ಯಗಳೂ ಕೂಡ ಸಮೃದ್ಧಿಯಾಗಿದ್ದು ಇದು ಕಣ್ಣಿಗೂ ಮನಸ್ಸಿಗೂ ಕೂಡ ಆನಂದವನ್ನು ಸೂರೆಮಾಡುವದು. **ಬೆಲೆ ೨-೮-೦**

**ಪಂಚದಶೀತತ್ತ್ವಾರ್ಥ:-** ವೇದಾಂತವೆಂಬ ಸಮುದ್ರದ ತಲದಲ್ಲಿರುವ ದೊಡ್ಡ ದೊಡ್ಡ ಮುತ್ತುರತ್ನಗಳನ್ನೆಲ್ಲ ಇದು ಅಂಗಯ್ಯೊಳಕ್ಕೆ ಬರಿಸುವದು. ಮನಸ್ಸಿಗೆ ಸುರಿಯುದಂಥ ಗಡುಸಾದ ವಿಚಾರಗಳೆಂಬ ಉಕ್ಕಿನ ಕಡಲೆಗಳನ್ನೆಲ್ಲ ಇದು ಯುಕ್ತಿಗಳ, ಉದಾಹರಣೆಗಳ ಮತ್ತು ಅನುಭವದ ಮಾತುಗಳ ಹೆಣಿಗೆಯೊಳಗೆ ಒತ್ತಿ ಹಾಕಿ ರಸವನ್ನು ಚಿಮ್ಮುವ ದ್ರಾಕ್ಷೆಯ ಹಣ್ಣುಗಳನ್ನಾಗಿ ಮಾರ್ಪಡಿಸಿರುವ ಸರಳವಾದ ವಚನರೂಪ. **ಬೆಲೆ ೨-೦-೦**

**ಎಸ್. ಎಸ್. ಎನ್. ಬುಕ್ ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ.**

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ ! **ಲೇಖಕ-ಹೊಸಕೆರೆ ಚಿದಂಬರಯ್ಯ** ಸುಲಭ ಶೈಲಿ !!

**ಭಗವದ್ಗೀತಾಸಾರವಿಚಾರ:-** ಭಗವದ್ಗೀತೆಯ ಗೂಢಾರ್ಥಗಳ ಸರ್ವಸಾರವೂ ಇದರಲ್ಲಿ ತಿಳಿಗನ್ನಡದ ಉಪನ್ಯಾಸದರೂಪದಲ್ಲಿ ಸೂರೆಯಾಗಿರುವದು. ಶ್ರುತಿಸ್ಮೃತಿಪುರಾಣೇತಿಹಾಸಗಳ ಸದುಪದೇಶಗಳ ಅರ್ಥಗಳೆಲ್ಲ ಇದರ ಹಾಸುಹೊಕ್ಕಾಗಿರುವವು. ಲೌಕಿಕವಾದ ಉದಾಹರಣೆಗಳೂ ಅನುಭವದ ಮಾತುಗಳೂ ಸಾಧಕರಿಗೆ ಅಗತ್ಯವಾದ ಅನೇಕ ವಿಚಾರಗಳೂ ಇದರಲ್ಲಿ ತುಂಬಿತುಳುಕುತ್ತ ತಿಳಿವನ್ನು ಹೆಚ್ಚಿಸುವವು. ಬೆಲೆ ೧-೮-೦

**ವೇದಾಂತದ ಜೀವಾಳ:-** ಇನ್ನೊಬ್ಬರ ಅಭಿಪ್ರಾಯದ ಬೆರಕೆ ಇಲ್ಲದೆ ಶ್ರೀಶಾಂಕರಭಾಷ್ಯವನ್ನು ಮಾತ್ರ ಹಿಡಿದು ನೇರವಾಗಿ ಶ್ರುತಿಸ್ಮೃತಿಸೂತ್ರ (ಪ್ರಸ್ಥಾನತ್ರಯ) ಗಳಿಂದಲೆ ಆರಿಸಿದ ಸಂಗತಿಗಳ ಹೊಂದಿಕೆಯಿಂದ ವೇದಾಂತದ ಮೂಲಸ್ವರೂಪದ ಮುದ್ದನ್ನು ಕನ್ನಡಿಗರ ಮುಖದ ಮುಂದಿಡುವದಕ್ಕೆ ಇದೇ ಮೊದಲು. ಬಹು ಬೆಲೆಯುಳ್ಳ ವಿಚಾರಗಳ ಎಲ್ಲ ಸೊಗಸೂ ಇದರಲ್ಲಿ ಸರಳವಾದ ರೀತಿಯಲ್ಲಿ ಮನಸ್ಸಿನಲ್ಲಿಒಡೆದು ಮೂಡುವಂತೆ ಬಳಕೆಯಾದ ಮಾತುಗಳಲ್ಲಿ ರೂಪುಗೊಂಡಿದೆ. ಸ್ವಲ್ಪದರಲ್ಲಿ ವೇದಾಂತದ ಎಲ್ಲ ಮುಖ್ಯತತ್ತ್ವಗಳ ಸಂಪೂರ್ಣಸ್ವರೂಪವನ್ನು ಕಣ್ಣಿಗೆ ಕಟ್ಟಿದ ಹಾಗೆ ಮಾಡುವ ಇದರಲ್ಲಿ ಯುಕ್ತಿಗಳ ಸೂರೆ ! ಅನುಭವದ ಮಾತುಗಳ ಸುಗ್ಗಿ. ಬೆಲೆ ೧-೮-೦

**ಅನುಭವಾಮೃತ:-** ಕಠಿನಶಬ್ದಗಳ ಅರ್ಥವನ್ನೂ ಕೊಟ್ಟು ವಿಚಾರದ ಸ್ವಾರಸ್ಯಗಳನ್ನೆಲ್ಲ ಚೆನ್ನಾಗಿ ವಿವರಿಸಿ ಬೇರೆಬೇರೆ ಗ್ರಂಥಗಳ ಆಧಾರವಾಕ್ಯಗಳನ್ನೂ ಜೋಡಿಸಿರುವ ಶುದ್ಧಪ್ರತಿ. ಬೆಲೆ ೧-೮-೦

**ಮಾಂಡೂಕ್ಯಸಂವಾದ:-** ಇದು ವೇದಾಂತವೆಂಬ ಅರಮನೆಯ ಶಿಖರದ ಮೇಲಿನ ಕಲಶದಂತಿರುವ ಮಾಂಡೂಕ್ಯೋಪನಿಷತ್ತಿನ ಶಾಂಕರಭಾಷ್ಯದ ಸರಳಾನುವಾದ. ಗುರುಶಿಷ್ಯರ ಮಾತುಗಾರಿಕೆಯ ರೂಪದಲ್ಲಿದೆ. ವೇದಾಂತದ ವಿಚಾರದಲ್ಲಿ ಸಾವಿರಾರು ಗ್ರಂಥಗಳನ್ನು ಓದಿದರೂ ಇದರ ವಿಚಾರಸರಣಿಗೆ ಶರಣು ಬಂದ ಹೊರತು ಗತ್ಯಂತರವಿಲ್ಲ. ಬೆಲೆ ೦-೮-೦

**ಎಸ್. ಎಸ್. ಎನ್. ಬುಕ್ ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ.**

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ! **ಲೇಖಕ-ಹೊಸಕೆರೆ ಚಿದಂಬರಯ್ಯ** ಸುಲಭ ಶೈಲಿ!!

---

**ಗೀತೆಯ ತಿರುಳು:-** ಗೀತೆಯೊಳಗೆ ಆಳದಲ್ಲಿರುವ ಅರ್ಥವಿಶೇಷಗಳನ್ನೆಲ್ಲ ಮೇಲಕ್ಕೆ ತಂದು ಹಿಗ್ಗಿಸಿರುವ ಒಳ್ಳೆ ಸವಿಕಟ್ಟಾದ ಮಾತುಗಾರಿಕೆ. ಸ್ವಲ್ಪದರಲ್ಲಿ ಬಹಳವನ್ನು ತಿಳಿಸುವದು. ಬೆಲೆ ೦-೪-೦

**ಗೀತೆಯ ಕೈಗನ್ನಡಿ:-** ಪ್ರತಿಯೊಂದು ಶ್ಲೋಕ, ಅದರ ಕೆಳಗೆ ಅದರ ಸೊಗಸನ್ನೆಲ್ಲ ಛಟ್ಟೆ ಇಳಿಸಿದ **ಕನ್ನಡ** ತಾತ್ಪರ್ಯ - ಹೀಗೆ ಮುದ್ದಾಗಿ ಮುದ್ರಿಸಿರುವದು. ಬಹು ಅಗ್ಗವಾದ ಪ್ರತಿ. ಬೆಲೆ ೦-೪-೦

**ಮಕ್ಕಳ ಕೈಗೀತೆ:-** ಮೂಲದ ಅರ್ಥವನ್ನೆಲ್ಲ ಮಕ್ಕಳಿಗೆ ಕೂಡ ತಿಳಿಯುವ ಮಾತಿನ ರೂಪಕ್ಕೆ ಇಳಿಸಿರುವದು. ಕಥೆಯ ಸಾರಾಂಶವೂ ಅಡಕವಾಗಿದೆ. ಕೆಲವು ಚಿತ್ರಗಳೂ ಇವೆ. ಬೆಲೆ ೦-೪-೦

## ಧರ್ಮನೀತಿಗ್ರಂಥಗಳು

**ನೀತಿಗಳ ನೆಲಗಟ್ಟು:-** ಬೇರೆಬೇರೆ ನೀತಿಗಳ ಸ್ವರೂಪವನ್ನು ವಿವರಿಸಿ ಪುರಾಣೇತಿಹಾಸಗಳ ಬೇರೆಬೇರೆ ಉದಾಹರಣೆಗಳನ್ನೂ ಒಂದೇ ಕಡೆಗೆ ತಂದು ಅವುಗಳನ್ನು ಬೇರೆಬೇರೆ ಮೆಟ್ಟಿಲುಗಳಾಗಿ ಮಾಡಿ ನೀತಿವಿಚಾರಕ್ಕೆ ಹೊಳಪು ಕೊಟ್ಟಿರುವದು. ಬೆಲೆ ೧-೮-೦

**ಭರತಖಂಡದ ಜೀವಜ್ಯೋತಿಗಳು:-** ದಿಗಂತಗಳನ್ನೆಲ್ಲ ತಮ್ಮ ಪ್ರತಿಭೆಯಿಂದ ಪ್ರಕಾಶಗೊಳಿಸಿ ಪ್ರಸಿದ್ಧರಾಗಿರುವ ಧರ್ಮಾಭಿಮಾನಿಗಳೂ ದೇಶಾಭಿಮಾನಿಗಳೂ ಆದ ಅನೇಕ ಐತಿಹಾಸಿಕಮಹನೀಯರ ಚರಿತ್ರೆಗಳ ತಿರುಳನ್ನು ರಸಭರಿತವಾಗಿ ವಿವರಿಸಿರುವ ಸಚಿತ್ರ ಗ್ರಂಥ. ಅನೇಕ ಭಾವಚಿತ್ರಗಳೂ ಇವೆ. ಬೆಲೆ ೧-೪-೦

**ಆತ್ಮಶಕ್ತಿಯ ತೇಜಸ್ಸು:-** ಮನುಷ್ಯನಲ್ಲಿ ಅಪ್ರತಿಮಸಾಮರ್ಥ್ಯವು ಆವಿರ್ಭವಿಸುವಂತೆ ಮಾಡಿ ಕೀರ್ತಿಶರೀರರೂಪವಾದ ಚಿರಜೀವಿತ್ವವನ್ನು ತಂದುಕೊಡುವಂಥ ಆತ್ಮಶಕ್ತಿಯ ವಿವಿಧವಿಚಾರವಿಶೇಷಗಳನ್ನು ವಿವರಿಸಿ ಅವುಗಳನ್ನು ಸಾಧಿಸಿದ ಮಹಾವಿಭೂತಿಗಳನ್ನು ಉದಾಹರಿಸಿ ಹೊಸ ಚೈತನ್ಯವನ್ನು ತುಂಬುವದು. ಬೆಲೆ ೧-೨-೦

**ಶ್ರೀ ವಿದ್ಯಾರಣ್ಯಕಾವ್ಯ:-** ಹೊಸ ಬಗೆಯ ಕಲ್ಪನೆಗಳೂ ಹೊಸ ಬಗೆಯ ವರ್ಣನೆಗಳೂ ಇದ್ದು ಶಬ್ದಾರ್ಥಗಳ ಚಮತ್ಕಾರಗಳಿಂದ ಕೂಡಿ ವಿವಿಧವೃತ್ತರೂಪದಲ್ಲಿ ಧರ್ಮಾಭಿಮಾನವನ್ನೂ ದೇಶಾಭಿಮಾನವನ್ನೂ ಹುರಿದುಂಬಿಸುವ ಲಲಿತವಾದ ಚಂಪೂಕಾವ್ಯ. ೧-೦-೦

---

**ಎಸ್. ಎಸ್. ಎನ್. ಬುಕ್ ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ.**

# ನೋಡಿದರೆ ಬಿಡದೆ ಇರುವ ಪುಸ್ತಕಗಳು

ತಿಳಿಗನ್ನಡ! **ಲೇಖಕ-ಹೊಸಕೆರೆ ಚಿದಂಬರಯ್ಯ** ಸುಲಭ ಶೈಲಿ!!

**ಕೀರ್ತನಕಂಠಾಭರಣ:-** ಕರ್ಣಾಟಕಭಾಷಾಪ್ರಪಂಚಕ್ಕೇ ಹೊಸಬಗೆಯ ಸಾಹಿತ್ಯವಾಗಿ ಕೀರ್ತನಕಾರರನ್ನು ಸಜೀವಗ್ರಂಥಭಂಡಾರವೆನಿಸುವ ಕೀರ್ತನ-ಹರಿಕಥೆ-ಗಳು. ಆಯಾ ಕಥೆಗಳಿಗೆ ತಕ್ಕ ಧರ್ಮನೀತಿಗಳ ಪ್ರತಿಪಾದನೆಯು ಬೇರೆಬೇರೆ ಪೀಠಿಕೆಗಳೊಡನೆ (೧) ಸಂಪೂರ್ಣ ರಾಮಾಯಣ (೧೨ ಕಥೆಗಳು) ೧-೮-೦; (೨) ಭಾರತದ (೧೦) ಕಥೆಗಳು ೧-೦-೦; (೩) ಭಾಗವತದ (೧೦) ಕಥೆಗಳು ೧-೦-೦; (೪) ಉಪಾಖ್ಯಾನಗಳು (೯) ೧-೦-೦; (೫) ಸತ್ಪುರುಷರು (೯) ೧-೦-೦; ಎಲ್ಲ ಸೇರಿದರೆ ೫-೦-೦

**ಭರತನ ಬಂಧುಪ್ರೇಮ:-** ಪ್ರಾಚೀನಸಂಪ್ರದಾಯಗಳನ್ನು ಆಧುನಿಕ ದೃಷ್ಟಿಯಿಂದ ಸಕಾರಣವಾಗಿ ವಿವರಿಸಿರುವ ತುಲಸೀರಾಮಾಯಣದ ಕಥೆ. ಬಹು ಮನೋಹರವಾದದ್ದು. ಬೆಲೆ ೦-೧೦-೦

**ತಾರಾನಾಥ ತರ್ಕವಾಚಸ್ಪತಿ:-** ಅಪ್ರತಿಮಪಂಡಿತನಾಗಿ ಉದ್ಯೋಗಬಲದಿಂದ ತನ್ನ ಜೀವಿಕೆಯನ್ನು ಉನ್ನತ ಸ್ಥಿತಿಯಲ್ಲಿಟ್ಟುಕೊಂಡು ಧರ್ಮಾರ್ಥವಾಗಿ ವಿದ್ಯೆಯನ್ನು ಪ್ರಚಾರ ಮಾಡಿ ಪರೋಪಕಾರದಿಂದ ಸಮಸ್ತರಾಜರನ್ನೂ ಬೆರಗು ಮಾಡಿದ ಚರಿತ್ರೆ. ೦-೧೦-೦

**ಗುಣನಿರೂಪಣೆ:-** ಇತಿಹಾಸದಿಂದ ಉದಾಹರಿಸಿ ಗುಣಗಳನ್ನೆಲ್ಲ ವೀರ್ಯವತ್ತರವಾಗಿ ಬಣ್ಣಿಸಿ ಅದರ ಏಳಿಗೆಯನ್ನು ತೋರಿಸುವದು. ಬೆಲೆ೦-೮-೦

**ವಾಲ್ಮೀಕಿಯ ಜಯ:-** ಜ್ಞಾನಬಲಕ್ಕಿಂತ ಮತ್ತು ಬಾಹುಬಲಕ್ಕಿಂತ ಪ್ರೇಮಬಲವೇ ಜಗತ್ತಿನ ನೆಮ್ಮದಿಗೆ ಕಾರಣವೆಂದು ತೋರಿಸುವ ಬಹು ಆಶ್ಚರ್ಯಕರವಾದ ಬಂಗಾಲೀ ಕಾದಂಬರಿಯ ಅನುವಾದ. ೦-೮-೦

**ಶ್ರೀ ಶಂಕರಾಚಾರ್ಯರ ಆಖ್ಯಾನ**-ಹರಿಕಥೆಯ ರೂಪ. ೦-೮-೦

ಚೂಡಾಲೆ, ಉಪದೇಶಪಂಚಕ, ಷಟ್ಪದೀಝೇಂಕಾರ, ಮನಸ್ಸಿಗುಪದೇಶ, ಶ್ರೀರಾಮಮಹಿಮೆ- ಮೊದಲಾದವುಗಳು.

**ಭಾರತದ ಸವಿಕಟ್ಟು:-** ಭಾರತ ಚಂಪುವಿನ ಬಹು ಸರಸವಾದ ಅನುವಾದ. ಹೊಸಕೆರೆ ಶ್ರೀನಿವಾಸಮೂರ್ತಿಕೃತ. ೦-೧೨-೦

**ಎಸ್. ಎಸ್. ಎನ್. ಬುಕ್‌ಡಿಪೋ, ಬಸವನಗುಡಿ, ಬೆಂಗಳೂರು ಸಿಟಿ.**